ಕರ್ನಾಟಕ ಸರ್ಕಾರ

# ಸಮಾಜಶಾಸ್ತ್ರ ಪರಿಚಯ

## ಪ್ರಥಮ ಪಿ.ಯು.ಸಿ. ಪಠ್ಯ ಪುಸ್ತಕ

**2017 - 2018**


ಪದವಿ ಪೂರ್ವ ಶಿಕ್ಷಣ ಇಲಾಖೆ

ಮಲ್ಲೇಶ್ವರಂ, ಬೆಂಗಳೂರು – 12

www.pue.kar.nic.in

***First Edition***
*March - 2013*

***© Directorate of Pre-University Education 2014.***

***Second Edition***
*March - 2014*

*Printed on 80 GSM paper*

**All Rights Are Reserved**

No part of this publication may be reproduced, stored in a retrieval system or transmitted, in any form or by any means, electronic, mechanical, photo copying, recording or otherwise without the prior permission of the publisher.

This book is sold subject to the condition that it shall not, by way of trade, be lent, resold, hired out or otherwise disposed of without the publisher's consent, in any form of binding or cover other than that in which it is published.

The correct price of this publication is the price printed on this page/cover page. Any revised price indicated by a rubber stamp or by a sticker or by any other means is incorrect and should be unacceptable.

The Karnataka Text Book Society ®
100 feet Ring Road,
Banashankari III Stage, BANGALORE - 560 085.

Publishers :

**Abhimaani Publications Ltd.,**
# 2/4, Dr.Rajkumar Road, Rajajinagar
Bangalore- 560010
Ph : 080-23123141
Fax : 91-080-23124073
e-mail : abhimaanigroup@gmail.com

# ಮುನ್ನುಡಿ

ಸಮಾಜಧ ಅಧ್ಯಯನ ಇಂದು ಜಾಗತಿಕ ಮಹತ್ವವನ್ನು ಪಡೆದಿದೆ ಮತ್ತು ಆಧುನಿಕ ಸಂಕೀರ್ಣ ಸಮಾಜವನ್ನು ನಾವು ವೈಜ್ಞಾನಿಕವಾಗಿ ಅಭ್ಯಸಿಸಬೇಕಿದೆ. ಸಮಾಜಶಾಸ್ತ್ರವು ಮಾನವ ಸಮಾಜವನ್ನು ವೈಜ್ಞಾನಿಕವಾಗಿ ಅಭ್ಯಸಿಸುವ ಇತ್ತೀಚಿನ ಶಾಸ್ತ್ರವಾಗಿದೆ. ವಿವಿಧ ವಿಜ್ಞಾನಗಳ ಅಂತರ ಅಧ್ಯಯನವು ಸಮಾಜಶಾಸ್ತ್ರದ ಮಹತ್ವವನ್ನು ಹೆಚ್ಚಿಸಿದೆ. ಸಮಾಜಶಾಸ್ತ್ರದ ಹೊಸ ಹೊಸ ಶಾಖೆಗಳು ಸಮಾಜ ವಿಜ್ಞಾನಿಗಳ ಉತ್ಸಾಹವನ್ನು ಇಮ್ಮಡಿಗೊಳಿಸಿದೆ. ಅದರಲ್ಲೂ ವೈದ್ಯಕೀಯ ಸಮಾಜಶಾಸ್ತ್ರ, ರಾಜಕೀಯ ಸಮಾಜಶಾಸ್ತ್ರ, ಕೃಷಿ ಸಮಾಜಶಾಸ್ತ್ರ, ಸಮಾಜಶಾಸ್ತ್ರ ಮತ್ತು ಶಾಸನಗಳು, ಕೈಗಾರಿಗಕಾ, ನಗರ, ಗ್ರಾಮೀಣ, ಮಹಿಳಾ, ಶಕ್ಷಣಿಕ ಹಾಗೂ ಕಾನೂನು ಸಮಾಜಶಾಸ್ತ್ರ, ಇನ್ನೂ ಮುಂತಾದವುಗಳು ಸಮಾಜಶಾಸ್ತ್ರದ ಹೊಸ ಅಧ್ಯಯನ ಕ್ಷೇತ್ರಗಳಾಗಿವೆ. ಸಮಾಜಶಾಸ್ತ್ರದಲ್ಲೂ ಪ್ರಾಯೋಗಿಕ ಚಿಂತನೆಗಳನ್ನು ಗುರುತಿಸಲಾಗುತ್ತಿದ್ದು, ಸಮಾಜ ಕಲ್ಯಾಣ ಮತ್ತು ಸಾಮಾಜಿಕ ಕಾರ್ಯಕ್ಷೇತ್ರಗಳಲ್ಲಿ ಸಮಾಜಶಾಸ್ತ್ರದ ಅಧ್ಯಯನದ ಅವಶ್ಯಕತೆ ಇದೆ.

ಮೇಲಿನ ಎಲ್ಲಾ ಅಂಶಗಳನ್ನು ಪರಿಗಣಿಸಿ, ಸಮಾಜಶಾಸ್ತ್ರ ಪಠ್ಯ ಪರಿಷ್ಕರಣಾ ಸಮಿತಿಯು ಪದವಿ ಪೂರ್ವ ಶಿಕ್ಷಣಕ್ಕಾಗಿ 2013ರಲ್ಲಿ ಪ್ರಥಮ ಪದವಿ ಪೂರ್ವ ವಿದ್ಯಾರ್ಥಿಗಳಿಗೆ ಭದ್ರ ಅಡಿಪಾಯವನ್ನು ಹಾಕಿಕೊಟ್ಟಿದೆ.

ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು (ಎನ್.ಸಿ.ಎಫ್.) 2005 ಮಾರ್ಗಸೂಚಿಗಳನ್ನು ಗಮನದಲ್ಲಿಟ್ಟುಕೊಂಡು. ಈ ಅಂಶಗಳ ಆಧಾರದ ಮೇಲೆ ಪಠ್ಯ ಪರಿಷ್ಕರಣಾ ಸಮಿತಿಯು ಪಠ್ಯಕ್ರಮವನ್ನು ಸಿದ್ಧಪಡಿಸಿದೆ. ಪಠ್ಯ ಪರಿಷ್ಕರಣಾ ಸಮಿತಿಯು ಎನ್.ಸಿ.ಇ.ಆರ್.ಟಿ. ವಿವಿಧ ರಾಜ್ಯಗಳ ಪಠ್ಯಕ್ರಮಗಳನ್ನು ಕೂಲಂಕುಷವಾಗಿ ಪರಿಶೀಲಿಸಿ, ಹೊಸ ಪಠ್ಯಕ್ರಮದ ರೂಪರೇಷಗಳನ್ನು ಸಿದ್ಧಪಡಿಸಿದೆ. ಈ ಪಠ್ಯವು ವಿದ್ಯಾರ್ಥಿಗಳಲ್ಲಿ ಜ್ಞಾನ, ಅರಿವು, ಕೌಶಲ್ಯ ಮತ್ತು ಅನ್ವಯಿಕತೆಯನ್ನು ಬೆಳೆಸುತ್ತದೆ. ಇದರಿಂದಾಗಿ ಪದವಿ ಪೂರ್ವ ವಿದ್ಯಾರ್ಥಿಗಳಿಗೆ ಸಮಾಜಶಾಸ್ತ್ರ ವಿಷಯದ ಭದ್ರ ಬುನಾದಿ ನೀಡಿದಂತಾಗುತ್ತದೆ.

ಪ್ರಥಮ ಪಿ.ಯು.ಸಿ ವಿದ್ಯಾರ್ಥಿಗಳಿಗೆ ಸಮಾಜಶಾಸ್ತ್ರ ಬೋಧನೆ ಕುರಿತು ಪಠ್ಯಕ್ರಮ ಸಮಿತಿ ಈ ಅಂಶಗಳನ್ನು ಪರಿಶೀಲಿಸಿ, 2013-14ನೇ ಸಾಲಿನಿಂದ ಜಾರಿಗೆ ಬರುವಂತೆ ಪಠ್ಯಪುಸ್ತಕವನ್ನು ಸಿದ್ಧಪಡಿಸಲಾಗಿದೆ.

### ಉದ್ದೇಶಗಳು

- ಸಮಾಜಶಾಸ್ತ್ರವನ್ನು ಒಂದು ಅಧ್ಯಯನದ ವಿಷಯವಾಗಿ ಪರಿಚಯಿಸುವುದು.
- ಸಮಾಜಶಾಸ್ತ್ರ ಮೂಲಭೂತ ಪರಿಕಲ್ಪನೆಗಳ ಕಲಿಸುವುದು.
- ಸಮಾಜದ ಅಭಿವೃದ್ಧಿ ಮತ್ತು ಪ್ರಗತಿಗೆ ಸಮಾಜಶಾಸ್ತ್ರದ ಪಾತ್ರವನ್ನು ವಿವರಿಸುವುದು.
- ಜೀವನೋಪಾಯಕ್ಕಾಗಿ ಸಮಾಜಶಾಸ್ತ್ರದ ತಿಳುವಳಿಕೆ.
- ಪರಿಸರ ಮತ್ತು ಸಂಶೋಧನಾ ಪದ್ಧತಿಗಳ ತಿಳುವಳಿಕೆ.

- ಮುಂದಿನ ಅಧ್ಯಯನದಲ್ಲಿ ಬೇಕಾಗುವ ಅಂಶಗಳ ಅಳವಡಿಕೆ.
- ಪ್ರಸ್ತುತ ಪಠ್ಯ ವ್ಯವಸ್ಥೆಗೆ ಪಠ್ಯಕ್ರಮ ತಯಾರಿಸುವುದು.

ಮುಂದಿನ ಪುಟಗಳಲ್ಲಿ ಅಧ್ಯಾಯಗಳ ವಿವರ, ಅವಧಿ, ಅಂಕಗಳನ್ನು ವಿವರಗಳನ್ನು ನೀಡಲಾಗಿದೆ.

ಈ ಪಠ್ಯಕ್ರಮ ಮತ್ತು ಪಠ್ಯ ಪುಸ್ತಕದ ಸಿದ್ಧತೆಯಲ್ಲಿ ಅನೇಕರು ತಮ್ಮ ಸಲಹೆ, ಸೂಚನೆ, ಶ್ರಮವನ್ನು ನೀಡಿದ್ದಾರೆ. ಪದವಿ ಪೂರ್ವ ಶಿಕ್ಷಣ ಇಲಾಖೆಯ ಎಲ್ಲ ಅಧಿಕಾರಿ ವರ್ಗಕ್ಕೆ, ಪರಾಮರ್ಶನ ಗ್ರಂಥ ಕರ್ತೃಗಳಿಗೆ, ಪರಿಣಿತ ಸಮಿತಿಯ ಸದಸ್ಯರುಗಳಿಗೆ, ಜೊತೆ ಜೊತೆಗೆ ತಮ್ಮ ಜ್ಞಾನ, ಕೌಶಲ್ಯ, ಸಾಮರ್ಥ್ಯವನ್ನು ಧಾರೆ ಎರೆದ ಎಲ್ಲ ಪಠ್ಯ ಪರಿಷ್ಕರಣಾ ಸಮಿತಿಯ ಸದಸ್ಯರುಗಳಿಗೆ ಹಾಗೂ ಪಠ್ಯ ಪರಿಶೀಲನೆ ಮಾಡಿ ಸೂಕ್ತ ಸಲಹೆ, ಮಾರ್ಗದರ್ಶನ ನೀಡಿರುವ **ಪ್ರೋ. ಎಚ್.ಕೆ. ಮೌಳೇಶ್,** ಸಮಾಜಶಾಸ್ತ್ರ ವಿಭಾಗ ಮತ್ತು ಸ್ನಾತಕೊತ್ತರ ಕೇಂದ್ರ ನ್ಯಾಷನಲ್ ಕಾಲೇಜ್ (ಸ್ವಾಯತ್ತ) ಬಸವನಗುಡಿ, ಬೆಂಗಳೂರು – 4 ಇವರಿಗೆ ವಿಶೇಷ ಕೃತಜ್ಞತೆಗಳು.

ಕಂಪ್ಯೂಟರ್‌ನಲ್ಲಿ ಅಚ್ಚುಕಟ್ಟಾಗಿ ಪುಟಗಳನ್ನು ವಿನ್ಯಾಸಮಾಡಿದ ಶ್ರೀ ನಾಗರಾಜ್, ನಂ. 31, ಪೊಲೀಸ್ ಸ್ಟೇಷನ್ ರಸ್ತೆ, ಬಸವನಗುಡಿ, ಬೆಂಗಳೂರು ಮೊ: 9964241844 ರವರಿಗೆ ಮತ್ತು ಅಂದವಾಗಿ ಮುದ್ರಿಸಿಕೊಟ್ಟ ಮುದ್ರಕರಿಗೆ, ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಸಹಕರಿಸಿದ ಎಲ್ಲಾ ಸಹೃದಯಿಗಳಿಗೆ ಹಾಗೂ ಅಧ್ಯಾಪಕರುಗಳಿಗೆ ನನ್ನ ಮನಃಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ವಂದನೆಗಳೊಂದಿಗೆ

| | |
|---|---|
| ಸಂಚಾಲಕರು | **ಎಂ.ಯು.ಕುಮಂದಾನ** |
| ಕಂಬಣ್ಣ.ಎಂ.ಎಲ್ | ಅಧ್ಯಕ್ಷರು |

## 2013–14 ರ ಪ್ರಥಮ ಪಿ.ಯು.ಸಿ.

# ಸಮಾಜಶಾಸ್ತ್ರ ಪಠ್ಯ ಪರಿಷ್ಕರಣಾ ಸಮಿತಿ

**ಶ್ರೀ.ಎಂ.ಯು.ಕುಮಂದಾನ, ಅಧ್ಯಕ್ಷರು,**
ಸಮಾಜಶಾಸ್ತ್ರ ಉಪನ್ಯಾಸಕರು
ಪ್ರೊಗ್ರಸ್ಸೀವ್ ಪದವಿ ಪೂರ್ವ ಕಾಲೇಜು,
ಸಿರ್ಸಿ, ಉತ್ತರ ಕನ್ನಡ ಜಿಲ್ಲೆ.

**ಶ್ರೀ.ವಾಸುದೇವ ಕಾಮತ್**, ಸಂಚಾಲಕರು,
ಪ್ರಾಂಶುಪಾಲರು
ಸರ್ಕಾರಿ ಪದವಿ ಪೂರ್ವ ಕಾಲೇಜು,
ಬಲ್ಮಠ, ಮಂಗಳೂರು, ದ.ಕ.ಜಿಲ್ಲೆ.

**ಶ್ರೀ.ಎಂ.ಎಲ್.ಕಂಬಣ್ಣ, ಸಂಚಾಲಕರು,**
ಸಮಾಜಶಾಸ್ತ್ರ ಉಪನ್ಯಾಸಕರು
ಸರ್ಕಾರಿ ಪದವಿ ಪೂರ್ವ ಕಾಲೇಜು,
ಕನಸವಾಡಿ, ದೊಡ್ಡಬಳ್ಳಾಪುರ ತಾಲ್ಲೂಕ್,
ಬೆಂಗಳೂರು ಗ್ರಾಮಾಂತರ ಜಿಲ್ಲೆ.

# ಸದಸ್ಯರು

**ಶ್ರೀಮತಿ.ಎಂ.ಎಸ್.ಮಂಜುಳ,**
ಸಮಾಜಶಾಸ್ತ್ರ ಉಪನ್ಯಾಸಕರು
ಸರ್ಕಾರಿ ಪದವಿ ಪೂರ್ವ ಕಾಲೇಜು,
ಜೆ.ಪಿ.ರಸ್ತೆ, ದಾವಣಗೆರೆ

**ಶ್ರೀ.ಎಸ್.ಎಂ.ಕಮತರ,**
ಸಮಾಜಶಾಸ್ತ್ರ ಉಪನ್ಯಾಸಕರು
ಸರ್ಕಾರಿ ಪದವಿ ಪೂರ್ವ ಕಾಲೇಜು, ನಲವಡಿ,
ನವಲಗುಂದ ತಾಲ್ಲೂಕ್, ದಾರವಾಡ ಜಿಲ್ಲೆ.

**ಶ್ರೀಮತಿ.ಆಲಿಯಾ ಖಾನಂ,**
ಸಮಾಜಶಾಸ್ತ್ರ ಉಪನ್ಯಾಸಕರು
ಪ್ರಿನ್ಸೆಸ್ ಫಾತಿಮಾ ಇಸಿನ್ ಪದವಿ ಪೂರ್ವ ಕಾಲೇಜು,
ಟಿಪ್ಪು ಸುಲ್ತಾನ್ ರೋಡ್, ರಾಯಚೂರು.

**ಶ್ರೀ.ಶಿವಮಲ್ಲು,**
ಸಮಾಜಶಾಸ್ತ್ರ ಉಪನ್ಯಾಸಕರು
ಸರ್ಕಾರಿ ಪದವಿ ಪೂರ್ವ ಕಾಲೇಜು,
ದೊಡ್ಡ ಕೌಲಂದೆ, ನಂಜನಗೂಡು ತಾಲ್ಲೂಕ್,
ಮೈಸೂರು ಜಿಲ್ಲೆ.

**ಶ್ರೀಮತಿ.ಲೋಲಾಕ್ಷಿ,**
ಸಮಾಜಶಾಸ್ತ್ರ ಉಪನ್ಯಾಸಕರು
ಸರ್ಕಾರಿ ಪದವಿ ಪೂರ್ವ ಕಾಲೇಜು,
ಬೇಲೂರು ರಸ್ತೆ, ಚಿಕ್ಕಮಗಳೂರು

**ಶ್ರೀ.ನೋರ್ಬರ್ಟ್ ಮಾರ್ಟಿಸ್,**
ಸಮಾಜಶಾಸ್ತ್ರ ಉಪನ್ಯಾಸಕರು
ಸರ್ಕಾರಿ ಪದವಿ ಪೂರ್ವ ಕಾಲೇಜು,
ಕಾರ್ಕಳ, ಉಡುಪಿ ಜಿಲ್ಲೆ.

**ಶ್ರೀ.ಪುರುಷೋತ್ತಮ.ಜಿ.ಎಸ್,**
ಸಮಾಜಶಾಸ್ತ್ರ ಉಪನ್ಯಾಸಕರು
ಸರ್ಕಾರಿ ಪದವಿ ಪೂರ್ವ ಕಾಲೇಜು, ದೊಮ್ಮಸಂದ್ರ,
ಆನೇಕಲ್ ತಾಲ್ಲೂಕ್, ಬೆಂಗಳೂರು ಗ್ರಾಮಾಂತರ ಜಿಲ್ಲೆ.

**ಶ್ರೀ.ಕೆ.ವೈ.ಕೋರಿ,**
ಸಮಾಜಶಾಸ್ತ್ರ ಉಪನ್ಯಾಸಕರು
S.V.S. P.U. ಕಾಲೇಜ್,
ಬೆಳವಣಕಿ, ರೋಣ ತಾಲ್ಲೂಕ್, ಗದಗ ಜಿಲ್ಲೆ.

**ಶ್ರೀ.ಹಿರೇಮಠ್ ಎಸ್. ಎಸ್.,**
ಸಮಾಜಶಾಸ್ತ್ರ ಉಪನ್ಯಾಸಕರು
ಸಂಗಮೇಶ ಪದವಿ ಪೂರ್ವ ಕಾಲೇಜು,
ಅಮೀನಗಡ, ಹುನಗುಂದ ತಾಲ್ಲೂಕ್
ಬಾಗಲಕೋಟ ಜಿಲ್ಲೆ.

**ಡಾ. ಟಿ.ಸಿ.ಮಲ್ಲಾಪುರ ಮಠ,**
ಸಮಾಜಶಾಸ್ತ್ರ ಉಪನ್ಯಾಸಕರು
ಸರ್ಕಾರಿ ಪದವಿ ಪೂರ್ವ ಕಾಲೇಜು,
ಮುರ್ಕವಾಡ, ಹಳಿಯಾಳ ತಾ॥ ಉ.ಕ.,

**ಶ್ರೀ.ಸಿ.ಪಿ.ಯೋಗರಾಜ್,**
ಸಮಾಜಶಾಸ್ತ್ರ ಉಪನ್ಯಾಸಕರು
ಸರ್ಕಾರಿ ಪದವಿ ಪೂರ್ವ ಕಾಲೇಜು,
ಕುಶಾಲನಗರ, ಕೊಡಗು ಜಿಲ್ಲೆ

**ಶ್ರೀ.ಟಿ.ರವಿ,**
ಸಮಾಜಶಾಸ್ತ್ರ ಉಪನ್ಯಾಸಕರು
ಸರ್ಕಾರಿ ಪದವಿ ಪೂರ್ವ ಕಾಲೇಜು,
ಯಲಹಂಕ, ಬೆಂಗಳೂರು.

## ಪರಿಶೀಲನಾ ಸಮಿತಿ

**ಡಾ. ಈರಣ್ಣ.ಚ.ಮುಳಗುಂದ**
ಸಮಾಜಶಾಸ್ತ್ರ ಪ್ರಾಧ್ಯಾಪಕರು ಮತ್ತು ವಿಭಾಗದ ಮುಖ್ಯಸ್ಥರು
ಕರ್ನಾಟಕ ಕಲಾ ಕಾಲೇಜು, ಧಾರವಾಡ.

**ಡಾ.ಸಿ.ಜಿ.ಲಕ್ಷ್ಮೀಪತಿ**
ಸಮಾಜಶಾಸ್ತ್ರ ಪ್ರಾಧ್ಯಾಪಕರು ಮತ್ತು ವಿಭಾಗದ ಮುಖ್ಯಸ್ಥರು
ವಿ.ಹೆಚ್.ಡಿ. ಸರ್ಕಾರಿ ಗೃಹ ವಿಜ್ಞಾನ ಕಾಲೇಜು,
ಶೇಷಾದ್ರಿ ರಸ್ತೆ, ಬೆಂಗಳೂರು.

**ಶ್ರೀಮತಿ ಲಕ್ಷ್ಮೀಬಾಯಿ**
ನಿವೃತ್ತ ಪ್ರಾಂಶುಪಾಲರು,
ಎಸ್.ವಿ.ಎಸ್. ಪದವಿಪೂರ್ವ ಕಾಲೇಜ್,
ಕಟ್ಟಪಾಡಿ, ಉಡುಪಿ.

# ಸಮಾಜಶಾಸ್ತ್ರ ಪರಿಚಯ

## ಪಠ್ಯಕ್ರಮ

**ಅಧ್ಯಾಯ – 1 ಸಮಾಜಶಾಸ್ತ್ರದ ಸ್ವರೂಪ ಅವಧಿ 16 ಅಂಕಗಳು 21**

1.1. ಸಮಾಜಶಾಸ್ತ್ರದ ಪೀಠಿಕೆ, ಅರ್ಥ ಮತ್ತು ವ್ಯಾಖ್ಯೆ.

1.2. ಸಮಾಜಶಾಸ್ತ್ರದ ಉಗಮ ಮತ್ತು ಬೆಳವಣಿಗೆ

1.2.1 ವಿಜ್ಞಾನದ ಅರ್ಥ ಮತ್ತು ಗುಣ ಲಕ್ಷಣ, ವರ್ಗೀಕರಣ ಮತ್ತು ವ್ಯತ್ಯಾಸ

1.2.2 ಒಂದು ವಿಜ್ಞಾನವಾಗಿ ಸಮಾಜಶಾಸ್ತ್ರ, ಸಮಾಜಶಾಸ್ತ್ರ ಮತ್ತು ಸಾಮಾನ್ಯ ಜ್ಞಾನ

1.3. ಸಮಾಜಶಾಸ್ತ್ರದ ಲಕ್ಷಣಗಳು

1.4. ಸಮಾಜಶಾಸ್ತ್ರದ ಅಧ್ಯಯನ ವಿಷಯಗಳು

1.5. ಸಮಾಜಶಾಸ್ತ್ರದ ಅಧ್ಯಯನದ ಉಪಯೋಗಗಳು

1.6. ಸಮಾಜಶಾಸ್ತ್ರದ ಬೆಳವಣಿಗೆಗೆ ಪಾಶ್ಚಾತ್ಯ ಮತ್ತು ಭಾರತೀಯ ಸಮಾಜಶಾಸ್ತ್ರಜ್ಞರ ಕೊಡುಗೆಗಳು

1.7. ಸಮಾಜಶಾಸ್ತ್ರದ ಆಧುನಿಕ ತಿರುವುಗಳು

1.8. ಆಧುನಿಕ ಚಿಂತಕರು ಏನು ಹೇಳುತ್ತಾರೆ?

1.9. ಶುದ್ಧ ಮತ್ತು ಅನ್ವಯಿಕ ಸಮಾಜಶಾಸ್ತ್ರ

(a) ಅಗಸ್ಟ್ ಕಾಮ್ಟ್

(b) ಹರ್ಬರ್ಟ್ ಸ್ಪೆನ್ಸರ್

(c) ಎಮಿಲಿ ಡರ್ಖಿಂ

(d) ಕಾರ್ಲ್‌ಮಾರ್ಕ್ಸ್

(e) ಮ್ಯಾಕ್ಸ್ ವೇಬರ್

(f) ಡಾ.ಜಿ.ಎಸ್.ಘುರ್ಯೆ

(g) ಡಾ.ಎಂ.ಎನ್.ಶ್ರೀನಿವಾಸ್

(h) ಡಾ.ಶ್ರೀಮತಿ ಇರಾವತಿ ಕರ್ವೆ

(i) ಡಾ.ಎ.ಆರ್.ದೇಸಾಯಿ

**ಅಧ್ಯಾಯ – 2 ಮೂಲಭೂತ ಪರಿಕಲ್ಪನೆಗಳು ಅವಧಿ 22 ಅಂಕಗಳು 28**

| | | | |
|---|---|---|---|
| 2.1 | ಮೂಲಭೂತ ಪರಿಕಲ್ಪನೆಗಳು | : | ಪರಿಕಲ್ಪನೆಯ ಅರ್ಥ |
| 2.2 | ಸಮಾಜ | : | ಅರ್ಥ, ವ್ಯಾಖ್ಯೆ, ಲಕ್ಷಣಗಳು ಮತ್ತು ವಿಧಗಳು. |
| 2.3 | ಸಮುದಾಯ | : | ಅರ್ಥ, ವ್ಯಾಖ್ಯೆ, ಮೂಲಾಂಶಗಳು ಮತ್ತು ವಿಧಗಳು. |
| 2.4 | ಸಂಘ | : | ಅರ್ಥ, ವ್ಯಾಖ್ಯೆ, ಲಕ್ಷಣಗಳು |

| | | | |
|---|---|---|---|
| 2.5 | ಸಂಸ್ಥೆ | : | ಅರ್ಥ, ವ್ಯಾಖ್ಯೆ, ಲಕ್ಷಣಗಳು ಮತ್ತು ವಿಧಗಳು. |
| 2.6 | ಸಾಮಾಜಿಕ ಸಮೂಹಗಳು | : | ಅರ್ಥ, ವ್ಯಾಖ್ಯೆ, ಲಕ್ಷಣಗಳು, ಮತ್ತು ವರ್ಗೀಕರಣ (ಪ್ರಾಥಮಿಕ-ಮಾಧ್ಯಮಿಕ, ಅಸಂಘಟಿತ, ಸಂಘಟಿತ ಸಮೂಹಗಳು). |
| 2.7 | ಸಾಮಾಜಿಕ ನಿಯಂತ್ರಣ | : | ಅರ್ಥ್ಯ ವ್ಯಾಖೆ, ಲಕ್ಷಣಗಳು, ಉದ್ದೇಶಗಳು ಮತ್ತು ವಿಧಗಳು (ಲೋಕಾರೂಢಿ, ನೈತಿಕ ನಿಯಮಗಳು ಮತ್ತು ಕಾನೂನು). |

**ಅಧ್ಯಾಯ – 3 ಸಾಮಾಜಿಕ ಪ್ರಕ್ರಿಯೆಗಳು ಅವಧಿ 16 ಅಂಕಗಳು 21**

| | | | |
|---|---|---|---|
| 3.1 | ಸಾಮಾಜಿಕ ಪ್ರಕ್ರಿಯೆ | : | ಅರ್ಥ, ವ್ಯಾಖ್ಯೆ ಮತ್ತು ಪ್ರಕಾರಗಳು. |
| 3.2 | ಸಹಕಾರ | : | ಅರ್ಥ, ವ್ಯಾಖ್ಯೆ, ಲಕ್ಷಣಗಳು ವಿಧಗಳು ಮತ್ತು ಮಹತ್ವ. |
| 3.3 | ಸ್ಪರ್ಧೆ | : | ಅರ್ಥ, ವ್ಯಾಖ್ಯೆ, ಲಕ್ಷಣಗಳು ವಿಧಗಳು ಮತ್ತು ಮಹತ್ವ |
| 3.4 | ಸಂಘರ್ಷ | : | ಅರ್ಥ, ವ್ಯಾಖ್ಯೆ, ಲಕ್ಷಣಗಳು ಮತ್ತು ವಿಧಗಳು. ಅನುಕೂಲ–ಅನಾನುಕೂಲಗಳು |
| 3.5 | ಹೊಂದಾಣಿಕೆ | : | ಅರ್ಥ್ಯ, ವ್ಯಾಖ್ಯೆ, ಲಕ್ಷಣಗಳು, ವಿಧಗಳು ಮತ್ತು ಮಹತ್ವ. |
| 3.6 | ಸ್ವಾಂಗೀಕರಣ | : | ಅರ್ಥ, ವ್ಯಾಖ್ಯೆ, ಲಕ್ಷಣಗಳು ಪೂರಕ ಅಂಶಗಳು ಮತ್ತು ಹಂತಗಳು. |

**ಅಧ್ಯಾಯ – 4 ಸಂಸ್ಕೃತಿ ಮತ್ತು ಸಾಮಾಜೀಕರಣ ಅವಧಿ 14 ಅಂಕಗಳು 18**

| | | | |
|---|---|---|---|
| 4.1 | ಸಂಸ್ಕೃತಿ | : | ಅರ್ಥ, ವ್ಯಾಖ್ಯೆ ಮತ್ತು ಲಕ್ಷಣಗಳು. |
| 4.2 | ವಿಧಗಳು | : | ಭೌತ ಮತ್ತು ಅಭೌತ ಸಂಸ್ಕೃತಿಯ ವ್ಯತ್ಯಾಸಗಳು ಮತ್ತು ಸಾಂಸ್ಕೃತಿಕ ಹಿಂಬೀಳಿಕೆ. |
| 4.3 | ಸಾಮಾಜೀಕರಣ | : | ಅರ್ಥ, ವ್ಯಾಖ್ಯೆ. |
| 4.4 | ಸಾಮಾಜೀಕರಣದ ಹಂತಗಳು | : | ವಾಚಕ, ಶೌಚ ಶಿಕ್ಷಣ, ಈಡಿಪಲ್(ಬಾಲ್ಯ), ಪ್ರೌಢ ಮತ್ತು ವಯಸ್ಕ ಹಂತಗಳು |
| 4.5 | ಸಾಮಾಜೀಕರಣದ ನಿಯೋಗಿಗಳು | : | ಕುಟುಂಬ, ಸಮವಯಸ್ಕರ ಸಮೂಹ, ಶಾಲೆ, ಸಮೂಹ ಮಾಧ್ಯಮ ಮತ್ತು ರಾಜ್ಯ. |
| 4.6 | ಸಾಮಾಜೀಕರಣದಲ್ಲಿ ಸಂಸ್ಕೃತಿಯ ಪಾತ್ರ | | |

**ಅಧ್ಯಾಯ – 5 ಸಾಮಾಜಿಕ ಸಂಸ್ಥೆಗಳು: ಅವಧಿ 14 ಅಂಕಗಳು 18**

| | | | |
|---|---|---|---|
| 5.1 | **ವಿವಾಹ** | : | ಅರ್ಥ, ವ್ಯಾಖ್ಯೆ, ಲಕ್ಷಣಗಳು, ಮಹತ್ವ ಮತ್ತು ವಿಧಗಳು<br>ಏಕಪತ್ನಿತ್ವ, ಬಹುಪತ್ನಿತ್ವ ಮತ್ತು ಬಹುಪತಿತ್ವ. (ಉದಾಹರಣೆಗಳೊಂದಿಗೆ) |

| | | |
|---|---|---|
| 5.2 | **ಕುಟುಂಬ** | : ಅರ್ಥ, ವ್ಯಾಖ್ಯೆ, ಲಕ್ಷಣಗಳು ಪ್ರಾಥಮಿಕ ಮತ್ತು ಮಾಧ್ಯಮಿಕ ಕಾರ್ಯಗಳು, ಕುಟುಂಬದ ವಿಧಗಳು (ಅಣು ಕುಟುಂಬ ಮತ್ತು ಅವಿಭಕ್ತ ಕುಟುಂಬ) |
| 5.3 | **ಧರ್ಮ** | : ಅರ್ಥ, ವ್ಯಾಖ್ಯೆ, ಲಕ್ಷಣಗಳು, ಮತ್ತು ಮಹತ್ವ. |
| 5.4 | **ಶಿಕ್ಷಣ** | : ಅರ್ಥ, ವ್ಯಾಖ್ಯೆ, ಲಕ್ಷಣಗಳು, ಕಾರ್ಯಗಳು ಮತ್ತು ವಿಧಗಳು. |

**ಅಧ್ಯಾಯ – 6 ಸಾಮಾಜಿಕ ಪರಿವರ್ತನೆ ಅವಧಿ 12 ಅಂಕಗಳು 15**

| | | |
|---|---|---|
| 6.1 | ಸಾಮಾಜಿಕ ಪರಿವರ್ತನೆ | : ಅರ್ಥ ವ್ಯಾಖ್ಯೆ ಮತ್ತು ಲಕ್ಷಣಗಳು. |
| 6.2 | ಸಾಮಾಜಿಕ ಪರಿವರ್ತನೆಯ ವಿಧಗಳು | : ಎ) ವಿಕಾಸ<br>ಬಿ) ಪ್ರಗತಿ<br>ಸಿ) ಅಭಿವೃದ್ಧಿ |
| 6.3 | ಸಾಮಾಜಿಕ ಪರಿವರ್ತನೆಯ ಅಂಶಗಳು | : ಎ) ನೈಸರ್ಗಿಕ ಅಂಶಗಳು<br>ಬಿ) ಜೈವಿಕ ಅಂಶಗಳು<br>ಸಿ) ಸಾಂಸ್ಕೃತಿಕ ಅಂಶಗಳು<br>ಡಿ) ವಿಜ್ಞಾನ ಮತ್ತು ತಂತ್ರಜ್ಞಾನದ ಅಂಶಗಳು |
| 6.4 | ಸಾಮಾಜಿಕ ಪರಿವರ್ತನೆಗೆ ಪ್ರತಿರೋಧಕ ಅಂಶಗಳು | |
| 6.5 | ಸಾಮಾಜಿಕ ಪರಿವರ್ತನೆಯ ಪರಿಣಾಮಗಳು | |

**ಅಧ್ಯಾಯ – 7 ಸಾಮಾಜಿಕ ಸಂಶೋಧನೆ ಅವಧಿ 14 ಅಂಕಗಳು 18**

| | | |
|---|---|---|
| 7.1 | ಸಾಮಾಜಿಕ ಸಂಶೋಧನೆ | : ಅರ್ಥ ಮತ್ತು ವ್ಯಾಖ್ಯೆಗಳು |
| 7.2 | ಮಾಹಿತಿ ಸಂಗ್ರಹಣೆ | : ಅರ್ಥ, ವಿಧಗಳು ಮತ್ತು ತಂತ್ರಗಳು. |
| 7.3 | ಮಾಹಿತ ಸಂಗ್ರಹಣೆ ತಂತ್ರಗಳು ಮತ್ತು ಸಾಧನಗಳು | |
| 7.3.1 | ಅವಲೋಕನ | : ಅರ್ಥ ಮತ್ತು ವಿಧಗಳು. |
| 7.3.2 | ಸಂದರ್ಶನ | : ಅರ್ಥ ಮತ್ತು ವಿಧಗಳು. |
| 7.3.3 | ಪ್ರಶ್ನಾವಳಿ | : ಅರ್ಥ ಮತ್ತು ವಿಧಗಳು. |
| 7.4 | ಸಂಶೋಧನಾ ವರದಿ ತಯಾರಿಕೆ. | |
| 7.5 | ಸಾಮಾಜಿಕ ಸಂಶೋಧನೆ ಮಹತ್ವ | : |

**ಅಧ್ಯಾಯ – 8 ಪರಿಸರ ಮತ್ತು ಸಮಾಜ ಅವಧಿ 12 ಅಂಕಗಳು 15**

| | | |
|---|---|---|
| 8.1 | ಪರಿಸರ ಮತ್ತು ಸಮಾಜ | : ಅರ್ಥ ಮತ್ತು ವ್ಯಾಖ್ಯೆ. |
| 8.2 | ಪರಿಸರಮಾಲಿನ್ಯ | : ಅರ್ಥ, ವಿಧಗಳು ಮತ್ತು ಕಾರಣಗಳು |
| 8.2.1 | ಜಲಮಾಲಿನ್ಯ | : ಅರ್ಥ ಮತ್ತು ಕಾರಣಗಳು |

| | | |
|---|---|---|
| 8.2.2 ವಾಯುಮಾಲಿನ್ಯ | : | ಅರ್ಥ ಮತ್ತು ಕಾರಣಗಳು. |
| 8.2.3 ಶಬ್ಧಮಾಲಿನ್ಯ | : | ಅರ್ಥ ಮತ್ತು ಕಾರಣಗಳು. |
| 8.2.4 ಮಣ್ಣು ಮಾಲಿನ್ಯ | : | ಅರ್ಥ ಮತ್ತು ಕಾರಣಗಳು. |
| 8.3 ಮಾಲಿನ್ಯದ ಮೂಲಗಳು | : | a. ಅಣುವಿಕಿರಣ ಮಾಲಿನ್ಯ, b. ಕ್ರಿಮಿನಾಶಕ ಮಾಲಿನ್ಯ, c. ಘನತ್ಯಾಜ್ಯ ವಸ್ತುಗಳ ಮಾಲಿನ್ಯ, d. ಸಾಗರ ಮಾಲಿನ್ಯ. |
| 8.4 ಪರಿಸಿಂದ ವಿದ್ಯಮಾನಗಳು | | |
| 8.2.5 ಜಾಗತಿಕ ತಾಪಮಾನ, ಓಝೋನ್ ಪದರದ ನಾಶ, ಆಮ್ಲಮಳೆ ಮತ್ತು ಜೀವವೈವಿಧ್ಯ | : | ಅರ್ಥ ಮತ್ತು ಪರಿಣಾಮಗಳು. |
| 8.3 ಪರಿಸರ ರಕ್ಷಣೆಯಲ್ಲಿ ಸಮಾಜ ಮತ್ತು ಸರ್ಕಾರಗಳ ಜವಾಬ್ದಾರಿಗಳು | | |
| **ಒಟ್ಟು ಬೋಧನಾ ಅವಧಿ** | **ಅವಧಿ 120** | **ಅಂಕಗಳು 100 / 154** |

# ಪರಿವಿಡಿ


| ಅಧ್ಯಾಯ | ಪಠ್ಯ ವಿಷಯ | ಬೋಧನಾ ಅವಧಿ | ಪುಟಸಂಖ್ಯೆ |
|---|---|---|---|
| ಅಧ್ಯಾಯ - 1 | ಸಮಾಜಶಾಸ್ತ್ರದ ಸ್ವರೂಪ | 16 | 1–34 |
| ಅಧ್ಯಾಯ - 2 | ಮೂಲಭೂತ ಪರಿಕಲ್ಪನೆಗಳು | 22 | 35–68 |
| ಅಧ್ಯಾಯ - 3 | ಸಾಮಾಜಿಕ ಪ್ರಕ್ರಿಯೆಗಳು | 16 | 69–93 |
| ಅಧ್ಯಾಯ - 4 | ಸಂಸ್ಕೃತಿ ಮತ್ತು ಸಾಮಾಜೀಕರಣ | 14 | 94–105 |
| ಅಧ್ಯಾಯ - 5 | ಸಾಮಾಜಿಕ ಸಂಸ್ಥೆಗಳು | 14 | 106–125 |
| ಅಧ್ಯಾಯ - 6 | ಸಾಮಾಜಿಕ ಪರಿವರ್ತನೆ | 12 | 126–142 |
| ಅಧ್ಯಾಯ - 7 | ಸಾಮಾಜಿಕ ಸಂಶೋಧನೆ | 14 | 143–154 |
| ಅಧ್ಯಾಯ - 8 | ಪರಿಸರ ಮತ್ತು ಸಮಾಜ | 12 | 155–178 |
| | ಒಟ್ಟು | 120 | |
| | ಅಧ್ಯಾಯಾನುಸಾರ ಪ್ರಶ್ನೆಗಳು | | 179–208 |
| | ನೀಲ ನಕ್ಷೆ | | 209 |
| | ಮಾದರಿ ಪ್ರಶ್ನೆಪತ್ರಿಕೆಗಳು | | 210–214 |
| | ಮೌಲ್ಯಮಾಪನ | | 215–219 |
| | ಗ್ರಂಥಋಣ | | 220–222 |

# ಅಧ್ಯಾಯ – 1

# ಸಮಾಜಶಾಸ್ತ್ರದ ಸ್ವರೂಪ

# NATURE OF SOCIOLOGY

**ಪೀಠಿಕೆ:** ಮಾನವನ ಜ್ಞಾನತೃಷೆ ಇಂದು–ನಿನ್ನೆಯದಲ್ಲ, ಬಹಳ ಹಿಂದಿನಿಂದಲೂ ಆತ ತಾನು ವಾಸಿಸುವ ಪರಿಸರವನ್ನು, ತನ್ನನ್ನು ಆವರಿಸಿದ ನಿಸರ್ಗವನ್ನು ಮತ್ತು ತಾನೇ ಸೃಷ್ಟಿಸಿರುವ ಸಾಮಾಜಿಕ ಜಗತ್ತನ್ನು ಹೆಚ್ಚು ಆಳವಾಗಿ ಮತ್ತು ನಿಖರವಾಗಿ ಅರ್ಥೈಸಿಕೊಳ್ಳುವ ಪ್ರಯತ್ನವನ್ನು ಮಾಡುತ್ತಾ ಬರುತ್ತಿದ್ದಾನೆ. ತನ್ನ ಈ ಪರಿಶ್ರಮದಲ್ಲಿ ಆತ ಹಲವಾರು ಬಗೆಯ ವಿಜ್ಞಾನಗಳ ಹಾಗೂ ಅಧ್ಯಯನಶಾಸ್ತ್ರಗಳ ಉಗಮಕ್ಕೆ ಕಾರಣನಾಗಿದ್ದಾನೆ. ನೈಸರ್ಗಿಕ ವಸ್ತು–ವಿಷಯ ಹಾಗೂ ಜೀವಿಗಳ ಕುರಿತಾದ ವಿಜ್ಞಾನಗಳನ್ನು **"ನೈಸರ್ಗಿಕ ವಿಜ್ಞಾನ"**ಗಳೆಂದು ಮತ್ತು ಮಾನವ ಸೃಷ್ಟಿಯ ಸಾಮಾಜಿಕ ಜಗತ್ತನ್ನು ಅಧ್ಯಯನ ಮಾಡುವ ವಿಜ್ಞಾನಗಳನ್ನು **"ಸಮಾಜ ವಿಜ್ಞಾನ"**ಗಳೆಂದು ಕರೆಯುವುದು ವಾಡಿಕೆಯಾಗಿದೆ.

ಸಮಾಜ ವಿಜ್ಞಾನಗಳ ಪರಂಪರೆ ಆರಂಭವಾದದ್ದು ಕ್ರಿ.ಶ.18–19ನೇ ಶತಮಾನಗಳಲ್ಲಿ, ಸಮಾಜ ವಿಜ್ಞಾನಗಳ ಸಮೂಹಕ್ಕೆ ಇತ್ತೀಚೆಗೆ ಸೇರಿಕೊಂಡ ಸಮಾಜಶಾಸ್ತ್ರವು ಮಾನವ ಸಮಾಜದ ಸಮಗ್ರ ಅಧ್ಯಯನವನ್ನು ತನ್ನ ಉದ್ದೇಶವನ್ನಾಗಿಸಿಕೊಂಡಿದೆ. ಅದನ್ನು **"ಸಮಾಜದ ವಿಜ್ಞಾನ" (Science of Society)** ಎಂದು ಕರೆಯುತ್ತೇವೆ.

ಸಮಾಜಶಾಸ್ತ್ರದ ಪಿತಾಮಹ **ಆಗಸ್ಟ್ ಕಾಮ್ಟ್** ಸಮಾಜಶಾಸ್ತ್ರವನ್ನು **"ವಿಜ್ಞಾನ"**ವೊಂದರ ಸ್ಥಾನಮಾನ ಸಿಗುವಂತೆ ಮಾಡಿದ್ದಾರೆ. ಅವರ ಈ ಪ್ರಯತ್ನವನ್ನು ಬಲವಾಗಿ ಸಮರ್ಥನೆ ಮಾಡಿದವರಲ್ಲಿ ಹರ್ಬಟ್ ಸ್ಪೆನ್ಸರ್, ಇಮೈಲ್ ಡರ್ಖೀಮ್, ಮ್ಯಾಕ್ಸ್ ವೇಬರ್ ಬಹಳ ಪ್ರಮುಖರು. ಪರೋಕ್ಷವಾಗಿ ಕಾರ್ಲ್ ಮಾರ್ಕ್ಸ್ ಕೂಡಾ ಈ ಕೆಲಸ ಮಾಡಿದ್ದಾರೆ. ಅನಂತರ ಬಂದ ಸಾವಿರಾರು ಮಂದಿ ಸಮಾಜ ಚಿಂತಕರ, ಬರಹಗಾರರ ಹಾಗೂ ಸಮಾಜಶಾಸ್ತ್ರಜ್ಞರ ಪರಿಶ್ರಮದ ಫಲವಾಗಿ **"ಸಮಾಜಶಾಸ್ತ್ರ"** ಒಂದು ವಿಶಿಷ್ಟ ವಿಜ್ಞಾನವೆನ್ನಿಸಿಕೊಂಡಿದೆ.

## 1.1 ಸಮಾಜಶಾಸ್ತ್ರ: ಅರ್ಥ (Meaning)

ಸಮಾಜಶಾಸ್ತ್ರವು ಸಮಾಜ ವಿಜ್ಞಾನಗಳಲ್ಲಿ ಅತ್ಯಂತ ಕಿರಿಯ ವಿಜ್ಞಾನವೆನಿಸಿಕೊಂಡಿದೆ. ಇತ್ತೀಚೆಗೆ, ಕ್ರಿ.ಶ. 19ನೇ ಶತಮಾನದ ಫ್ರಾನ್ಸಿನ ತತ್ವಜ್ಞಾನಿ **"ಆಗಸ್ಟ್ ಕಾಮ್ಟ್" (August Comte)** **"ಸಮಾಜಶಾಸ್ತ್ರ"**ವೆಂಬ ಹೊಸ ಸಮಾಜ ವಿಜ್ಞಾನದ ಸ್ಥಾಪನೆಗೆ ಕಾರಣರಾದರು. ಆದ್ದರಿಂದ ಆಗಸ್ಟ್ ಕಾಮ್ಟ್‌ರವರನ್ನು **"ಸಮಾಜಶಾಸ್ತ್ರ"**ದ **'ಪಿತಾಮಹ'**ರೆಂದು ಪರಿಗಣಿಸಲಾಗಿದೆ.

ಕ್ರಿ.ಶ.1839 ರಲ್ಲಿ **"ಪೊಸಿಟಿವ್ ಫೀಲೊಸಫಿ" (Positive Philosophy)** ಎಂಬ ವಿಷಯದ ಕುರಿತಾಗಿ ತನ್ನ ಸಾರ್ವಜನಿಕ ಉಪನ್ಯಾಸವನ್ನು ನೀಡುವ ಸಂದರ್ಭದಲ್ಲಿ ಆಗಸ್ಟ್ ಕಾಮ್ಟ್ ಮೊದಲ ಬಾರಿಗೆ **"ಸಮಾಜಶಾಸ್ತ್ರ"** ಎಂಬ ಪದವನ್ನು ಬಳಸಿದರು. ಮಾನವ ಸಮಾಜವನ್ನು ವೈಜ್ಞಾನಿಕವಾಗಿ ಹಾಗೂ ಸಮಗ್ರ ರೀತಿಯಲ್ಲಿ ಅಧ್ಯಯನ

ಮಾಡಲು ಹೊಸ ವಿಜ್ಞಾನವೊಂದರ ಅವಶ್ಯಕತೆಯಿದೆ ಎಂದು ವಾದಿಸಿ ಅದನ್ನು **"ಸಮಾಜಶಾಸ್ತ್ರ"** ವೆಂದು ಹೆಸರಿಸಿದರು.

### ಸೋಸಿಯಾಲಜಿ ಎಂಬ ಪದದ ಉಗಮ: (Emergence of the Word "Sociology"):

**"ಸೋಸಿಯಾಲಜಿ"** ಎಂಬುದು **"ಸಮಾಜಶಾಸ್ತ್ರ"** ಎಂಬ ಕನ್ನಡ ಪದಕ್ಕೆ ತತ್ಸಮಾನ ಅರ್ಥವುಳ್ಳ ಇಂಗ್ಲೀಷ್ ಪದವಾಗಿದೆ. "ಸೋಸಿಯಾಲಜಿ" ಎಂಬ ಪದವು ಲ್ಯಾಟಿನ್ ಭಾಷೆಯ **"ಸೋಶಿಯಸ್" (Socius)** ಮತ್ತು ಗ್ರೀಕ್ ಭಾಷೆಯ **"ಲಾಗೋಸ್" (Logos)** ಎಂಬ ಶಬ್ದಗಳಿಂದ ವ್ಯುತ್ಪತ್ತಿ ಹೊಂದಿದೆ. **"ಸೋಶಿಯಸ್"** ಎಂದರೆ ಜೊತೆಗಾರ, ಸಹಚರ ಅಥವಾ ಸಮಾಜ ಎಂದರ್ಥ. ಹಾಗೆಯೇ ಲಾಗೋಸ್ ಎಂದರೆ **'ಶಾಸ್ತ್ರ'** ಅಥವಾ **'ವಿಜ್ಞಾನ'**ವೆಂಬ ಅರ್ಥವಿದೆ. ಹೀಗೆ 'ಸೋಸಿಯಾಲಜಿ' ಅಥವಾ **'ಸಮಾಜಶಾಸ್ತ್ರ'** ವೆಂಬುದು ಸಮಾಜದ ಅಧ್ಯಯನ ಶಾಸ್ತ್ರವಾಗಿದೆ.

### 1.2 ಸಮಾಜಶಾಸ್ತ್ರದ ವ್ಯಾಖ್ಯೆ: (Defination of Sociology)

1. **ಆಗಸ್ಟ್ ಕಾಮ್ಟ್:** "ಸಮಾಜಶಾಸ್ತ್ರವು ನಿಸರ್ಗ ಸಹಜವಾದ ಹಾಗೂ ಸ್ಥಿರ ರೂಪದ ನಿಯಮಗಳಿಗೆ ಒಳಪಟ್ಟ ಸಾಮಾಜಿಕ ವಿದ್ಯಮಾನಗಳ ವಿಜ್ಞಾನವಾಗಿದ್ದು, ಅಂತಹ ನಿಯಮಗಳನ್ನು ಕಂಡುಕೊಳ್ಳುವುದೇ ಅದರ ಶೋಧನೆಯ ಉದ್ದೇಶವಾಗಿರುತ್ತದೆ".

2. **ಹೆಚ್.ಎಂ.ಜಾನ್ಸನ್:** "ಸಾಮಾಜಿಕ ಸಮೂಹಗಳ ಕುರಿತಾದ ವೈಜ್ಞಾನಿಕ ಅಧ್ಯಯನವೇ ಸಮಾಜಶಾಸ್ತ್ರ".

3. **ಇಮೈಲ್ ಡರ್ಖೀಮ್:** "ಸಮಾಜಶಾಸ್ತ್ರವು ಸಾಮಾಜಿಕ ಸಂಸ್ಥೆಗಳ ವಿಜ್ಞಾನವಾಗಿದೆ".

4. **ಮ್ಯಾಕ್ಸ್ ವೇಬರ್:** "ಸಾಮಾಜಿಕ ವರ್ತನೆಯನ್ನು ಅರ್ಥೈಸುವ ಅಧ್ಯಯನವನ್ನು 'ಸಮಾಜಶಾಸ್ತ್ರ' ಎಂದು ಕರೆದಿದ್ದಾನೆ. ಆತನ ಪ್ರಕಾರ ಈ ವಿಜ್ಞಾನದ ಮುಖ್ಯ ಉದ್ದೇಶ, ಮಾನವನ ಸಾಮಾಜಿಕ ವರ್ತನೆಯ ಕಾರಣ ಮತ್ತು ಪರಿಣಾಮಗಳನ್ನು ವಿಶ್ಲೇಷಿಸುವುದೇ ಆಗಿದೆ"

5. **ಮೆಕೈವರ್ ಮತ್ತು ಪೇಜ್:** "ಸಮಾಜಶಾಸ್ತ್ರವು ಸಾಮಾಜಿಕ ಸಂಬಂಧಗಳ ಕುರಿತಾದುದು" ವಿಜ್ಞಾನವಾಗಿದೆ.

6. **ಮೋರಿಸ್ ಗಿನ್ಸ್‌ಬರ್ಗ್:** ಸ್ಥೂಲವಾಗಿ ಹೇಳುವುದಾದರೆ "ಮಾನವನ ಅನ್ಯೋನ್ಯ ಕ್ರಿಯೆ ಹಾಗೂ ಪರಸ್ಪರ ಸಂಬಂಧಗಳ ಜೊತೆಗೆ ಅವುಗಳ ಕಾರಣ ಮತ್ತು ಪರಿಣಾಮಗಳು ಇವುಗಳ ಅಧ್ಯಯನವೇ ಸಮಾಜಶಾಸ್ತ್ರವಾಗಿದೆ".

ಈ ಮೇಲಿನ ವ್ಯಾಖ್ಯೆಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿದಾಗ ಅವು ಸಮಾಜಶಾಸ್ತ್ರದ ಮುಖ್ಯ ಉದ್ದೇಶವು ಮಾನವನ ಸಮಾಜ ಮತ್ತು ಆತನ ಸಾಮಾಜಿಕ ಸಂಬಂಧಗಳನ್ನು ವೈಜ್ಞಾನಿಕವಾಗಿ ಅಧ್ಯಯನ ಮಾಡುತ್ತದೆ

### 1.2 ಸಮಾಜಶಾಸ್ತ್ರದ ಉಗಮ ಮತ್ತು ಬೆಳವಣಿಗೆ (Origin and Development of Sociology)

ಸಮಾಜಶಾಸ್ತ್ರವು ಒಂದು ಸ್ವತಂತ್ರ ಹಾಗೂ ಪ್ರತ್ಯೇಕ ಅಧ್ಯಯನ ಶಾಸ್ತ್ರವಾಗಿ ರೂಪುಗೊಳ್ಳತೊಡಗಿದ್ದು, 19ನೇ ಶತಮಾನದ ಮಧ್ಯಭಾಗದಲ್ಲಿ ಎನ್ನಬಹುದು. ಆನಂತರದ 50 ವರ್ಷಗಳಲ್ಲಿ ಅದು ವೈಜ್ಞಾನಿಕ ಸ್ವರೂಪವನ್ನು ಪಡೆಯಿತು.

ಆಗಸ್ಟ್ ಕಾಮ್ಟ್‌ರವರಿಗಿಂತ ಮೊದಲು **"ಸಾಮಾಜಿಕ ಚಿಂತನೆ"** ಎಂಬುದಿತ್ತು. ಸಹಸ್ರಾರು ವರ್ಷಗಳಿಂದಲೂ ಚಿಂತಕರು, ತತ್ವಜ್ಞಾನಿಗಳು, ಕಾನೂನು ಪಂಡಿತರು, ಸಮಾಜ ಸುಧಾರಕರು ತಾವು ವಾಸವಾಗಿದ್ದ ಸಮಾಜಗಳ ಸ್ಥಿತಿ–ಗತಿ ಹಾಗೂ ಅಲ್ಲಿನ ಸಮಸ್ಯೆಗಳು ಮತ್ತು ಅವುಗಳ ಪರಿಹಾರದ ಕುರಿತಾಗಿ ತಮ್ಮದೇ ಆದ ವಿಚಾರಗಳನ್ನು ಹೊಂದಿದ್ದರು. ಅವರ ಬರವಣಿಗೆಗಳ ಮೂಲಕ ಅವರ ಸಾಮಾಜಿಕ ವಿಚಾರ ಚಿಂತನೆಗಳು ವ್ಯಕವಾದವು. ವೇದಗಳು, ಉಪನಿಷತ್ತುಗಳು, ಮಹಾಕಾವ್ತಯಗಳಾದ ರಾಮಯಣ ಮತ್ತು ಮಹಾಭಾರತ; ಕೌಟಿಲ್ಯನ **"ಅರ್ಥಶಾಸ್ತ್ರ"** ಹಾಗೂ ಮನುವಿನ **"ಧರ್ಮಶಾಸ್ತ್ರ"** ಅಥವಾ ಸ್ಮೃತಿ, ಗ್ರೀಕ್ ದಾರ್ಶನಿಕ ಪ್ಲೇಟೋ ಬರೆದ **"ರಿಪಬ್ಲಿಕ್"** ಹಾಗೂ ಅರಿಸ್ಟಾಟಲ್‌ನ **"ಪಾಲಿಟಿಕ್ಸ್ ಮತ್ತು ಎಥಿಕ್ಸ್",** ರೋಮ್ ದೇಶದ ಸಿಸಿರೋ ರಚಿಸಿದ **"ಆನ್ ಜಸ್ಟೀಸ್"** ಚೀನಾ ದೇಶದ ಕನ್ಫ್ಯೂಷಿಯಸ್‌ನ ಕೃತಿ **"ಅನಲೆಕ್ಸ್"** ಅರಬ್ ಚಿಂತಕ ಇಬನ್‌ಖಲ್ದನ್ ರವರ ಮಕದ್ದಿಮ್ ಮುಂತಾದವರ ಪ್ರಾಚೀನ ಸಾಮಾಜಿಕ ಚಿಂತನೆಯ ಕೆಲವು ಮೂಲಗಳೆನಿಸಿಕೊಂಡಿವೆ.

ಪಾಶ್ಚಾತ್ಯ ಸಮಾಜಶಾಸ್ತ್ರೀಯ ದೃಷ್ಟಿಕೋನದಂತೆ ಈ ಮೇಲೆ ಉಲ್ಲೇಖಿಸಿದ ಚಿಂತಕರುಗಳನ್ನು **"ದಾರ್ಶನಿಕರು", "ಇತಿಹಾಸಕಾರರು", "ಕಾನೂನು ತಜ್ಞರು", "ಸುಧಾರಣಾವಾದಿಗಳು"**–ಎಂದು ಮುಂತಾಗಿ ಕರೆಯಬಹುದೇ ವಿನಃ **"ಸಮಾಜಶಾಸ್ತ್ರಜ್ಞ"** ರಲ್ಲ, ಅವರ ಆಲೋಚನೆ ಮತ್ತು ಅಧ್ಯಯನಗಳಿಗೆ ವೈಜ್ಞಾನಿಕ ನೆಲೆಯಿರಲಿಲ್ಲ. ಆದಾಗ್ಯೂ ಸಮಾಜದ ಸ್ಥಿತಿ–ಗತಿಗಳ ಬಗ್ಗೆ ಚರ್ಚಿಸಲು ಇವರು ಒಂದು ನೈತಿಕ ನೆಲೆಗಟ್ಟನ್ನು ನೀಡಿದರು.

ಪ್ರಾಚೀನ ಕಾಲದಲ್ಲಿಯೇ ಆರಂಭಗೊಂಡ ಸಾಮಾಜಿಕ ಚಿಂತನೆಯ ಪರಂಪರೆಯು ಮಧ್ಯಕಾಲೀನ ಯುಗದಿಂದ ಆಧುನಿಕ ಕಾಲದ ಆರಂಭದವರೆಗೂ ಮುಂದುವರೆದುಕೊಂಡು ಬಂದಿತು. ಆದರೆ 19ನೇ ಶತಮಾನದ ನಂತರದಲ್ಲಿ ಮಾತ್ರ ಆಗಸ್ಟ್ ಕೋಮ್ಟ್, ಹರ್ಬಟ್ ಸ್ಪೆನ್ಸರ್, ಇಮೈಲ್ ಡರ್ಖೀಮ್, ಮ್ಯಾಕ್ಸ್ ವೇಬರ್, ಮುಂತಾದ ವಿದ್ವಾಂಸರ ಚಿಂತನೆಯ ಫಲವಾಗಿ ಮಾನವ ಸಮಾಜವನ್ನು ವೈಜ್ಞಾನಿಕವಾಗಿ ಅಧ್ಯಯನ ಮಾಡುವ ಪ್ರಯತ್ನಗಳಾದವು. ಈ ಅಧ್ಯಯನಗಳ ಹಿನ್ನೆಲೆಯಲ್ಲಿಯೇ ಸಮಾಜಶಾಸ್ತ್ರವು ಒಂದು ಸ್ವತಂತ್ರ ಸಮಾಜ ವಿಜ್ಞಾನವಾಗಿ ಮೂಡಿ ಬಂದಿತು.

## ಸಮಾಜಶಾಸ್ತ್ರದ ಉಗಮಕ್ಕೆ ಕಾರಣವಾದ ಅಂಶಗಳು (Factors that Contributed Emergence of Sociology)

ಸಮಾಜ ವಿಜ್ಞಾನಗಳ ಪರಂಪರೆಯ ಆರಂಭವು 19ನೇ ಶತಮಾನದ ಮಹತ್ವದ ಬೌದ್ಧಿಕ ಬೆಳವಣಿಗೆ ಎಂದೆನ್ನಬಹುದು. ಸಮಾಜ ವಿಜ್ಞಾನಗಳಾದ ಇತಿಹಾಸ, ರಾಜ್ಯಶಾಸ್ತ್ರ, ಅರ್ಥಶಾಸ್ತ್ರ, ಮನಃಶಾಸ್ತ್ರ ಇತ್ಯಾದಿಗಳು ತಮ್ಮದೇ ಆದ ಧೀರ್ಘ ಹಿನ್ನೆಲೆಯನ್ನು ಹೊಂದಿರಬಹುದಾದರೂ "ಸಮಾಜ ವಿಜ್ಞಾನಗಳು" ಎಂಬ ಮಾನ್ಯತೆ ಅವುಗಳಿಗೆ ಲಭ್ಯವಾದುದು 18–19 ನೇ ಶತಮಾನಗಳಲ್ಲಿ. ಕ್ರಿ.ಶ. 16 ರಿಂದ 18ನೇ ಶತಮಾನಗಳಲ್ಲಿ ಸಂಭವಿಸಿದ "ಪುನರುಜ್ಜೀವನ", ಧಾರ್ಮಿಕ ಸುಧಾರಣೆ ಮುಂತಾದ ಬೌದ್ಧಿಕ ಪ್ರಕ್ರಿಯೆಗಳು ಆಗ ತಾನೇ ಸ್ಥಾಪನೆಗೊಳ್ಳ ತೊಡಗಿದ್ದ ವೈಜ್ಞಾನಿಕ ಚಿಂತನೆಯ ಪರಂಪರೆಗೆ ಬಲವಾದ ಪ್ರೇರಣೆ ನೀಡಿದವು. ಈ ಪ್ರೇರಣೆ ಸಮಾಜಶಾಸ್ತ್ರದ ಉಗಮಕ್ಕೂ ಸಹಕಾರಿಯಾಗಿತ್ತು.

ಸಮಾಜಶಾಸ್ತ್ರದ ಉಗಮಕ್ಕೆ ಸಹಾಯಕವಾದ ಅಂಶಗಳಲ್ಲಿ ಈ ಮುಂದಿನವು ಬಹಳ ಮಹತ್ವವಾದವುಗಳಾಗಿವೆ. ಅವುಗಳೆಂದರೆ

1. ಅವಳಿ ಕ್ರಾಂತಿಗಳ ಪರಿಣಾಮ, (ಫ್ರಾನ್ಸಿನ ಮಹಾಕ್ರಾಂತಿ ಮತ್ತು ಕೈಗಾರಿಕಾ ಕ್ರಾಂತಿ).

2. ಭೌತ ವಿಜ್ಞಾನಗಳು ಮತ್ತು ಇತರ ಸಮಾಜದ ವಿಜ್ಞಾನಗಳ ಬೆಳವಣಿಗೆಯಿಂದ ಪಡೆದ ಸ್ಫೂರ್ತಿ.

3. ವಿಭಿನ್ನ ಸಮಾಜಗಳು ಮತ್ತು ಸಂಸ್ಕೃತಿಗಳ ಅಧ್ಯಯನಗಳು ನೀಡಿದ ಸ್ಫೂರ್ತಿ.

**ಅವಳಿ ಕ್ರಾಂತಿಗಳ ಪರಿಣಾಮ:** ಫ್ರಾನ್ಸಿನ ಮಹಾಕ್ರಾಂತಿ ಹಾಗೂ ಇಂಗ್ಲೆಂಡಿನ ಕೈಗಾರಿಕಾ ಕ್ರಾಂತಿಯ ಸಂದರ್ಭಗಳಲ್ಲಿ ಸಂಭವಿಸಿದ ಭಾರೀ ಪರಿವರ್ತನೆಗಳು ಸಮಾಜಶಾಸ್ತ್ರದ ಉಗಮಕ್ಕೆ ಕಾರಣವಾಗಿವೆ.

**a)** **ಫ್ರಾನ್ಸಿನ ಮಹಾಕ್ರಾಂತಿ(1789)ಯಲ್ಲಿ** ಉಂಟುಮಾಡಿದ ರಾಜಕೀಯ ಅಸ್ಥಿರತೆ, ಸಾಮಾಜಿಕ ಗೊಂದಲ, ಆರ್ಥಿಕ ಬಿಕ್ಕಟ್ಟು ಇತ್ಯಾದಿಗಳು ಚಿಂತಕರ ಮನಸ್ಸನ್ನು ಕದಡಿದವು. ಸಮಾಜದಲ್ಲಿ ಸುವ್ಯವಸ್ಥೆಯನ್ನು ಪುನರ್ ಸ್ಥಾಪಿಸಬೇಕು, ರಾಜಕೀಯ ಕ್ರಾಂತಿ ಬುಡಮೇಲು ಮಾಡಿದ ಹಳೆಯ ವ್ಯವಸ್ಥೆಗೆ ಪರ್ಯಾಯವಾಗಿ ಹೊಸ ವ್ಯವಸ್ಥೆಯೊಂದನ್ನು ರೂಪಿಸಬೇಕು. ಸಮಾನತೆ, ಸ್ವಾತಂತ್ರ್ಯ, ಭ್ರಾತೃತ್ವ, ವ್ಯಕ್ತಿವಾದ, ವೈಜ್ಞಾನಿಕ ಮನೋಭಾವ, ಮುಂತಾದ ವಿಚಾರಗಳು ಅವರ ಮನಸ್ಸಿನಲ್ಲಿ ಸೇರಿಕೊಂಡವು. ಸಾಮಾಜಿಕ ವ್ಯವಸ್ಥೆಯ ಕುರಿತಾದ ಈ ಚಿಂತನೆ ಇಂದಿಗೂ ಅಸ್ಥಿತ್ವದಲ್ಲಿದ್ದು ಇದು ಸಮಾಜಶಾಸ್ತ್ರಜ್ಞರ ಅಧ್ಯಯನದ ಮುಖ್ಯ ಕ್ಷೇತ್ರಗಳಲ್ಲೊಂದು ಎನ್ನಬಹುದು.

18ನೇ ಶತಮಾನದಲ್ಲಿ ಸಂಭವಿಸಿದ **ಇಂಗ್ಲೇಂಡಿನ ಕೈಗಾರಿಕಾ ಕ್ರಾಂತಿಯು** ಇಡೀ ಜಗತ್ತನ್ನೇ ತಲ್ಲಣಗೊಳಿಸಿತು ಮತ್ತು ಇತಿಹಾಸದ ದಿಕ್ಕನ್ನು ಕೂಡ ಬದಲಿಸಿತು. ಕೈಗಾರಿಕಾ ಕ್ರಾಂತಿಯ ಸಾಮಾಜಿಕ ಆರ್ಥಿಕ ವ್ಯವಸ್ಥೆ ಹಾಗೂ ಉತ್ಪಾದನಾ ಪ್ರಕ್ರಿಯೆಯಲ್ಲಿ ಬದಲಾವಣೆಯಾಯಿತು. ಭೂಮಿಯ ಒಡೆತನಕ್ಕಿಂತಲೂ ಕೈಗಾರಿಕೋದ್ಯಮದ ಮೇಲಿನ ಒಡೆತನ ಆಕರ್ಷಣೀಯವಾಯಿತು. ವಸ್ತುಗಳ ಉತ್ಪಾದನೆಗಾಗಿ ಬೃಹತ್ ಗಾತ್ರದ ಕಾರ್ಖಾನೆಗಳು ಸ್ಥಾಪನೆಯಾದವು. ಜನಸಂಖ್ಯೆಯ ಹೆಚ್ಚಳ, ನಿರುದ್ಯೋಗ ಉದ್ಯೋಗ ಹುಡುಕಿಕೊಂಡು ನಗರಗಳಿಗೆ ವಲಸೆ ಹೋಗುತ್ತಿದ್ದರು.

ಕೈಗಾರೀಕರಣದ ಪರಿಣಾಮದಿಂದ ನಗರೀಕರಣ ಪ್ರಕ್ರಿಯೆ ಆರಂಭವಾಯಿತು. ನಗರಗಳು ಭರದಿಂದ ಬೆಳೆಯತೊಡಗಿದವು. ಶತಮಾನಗಳವರೆಗೆ ಕಾಯ್ದುಕೊಂಡು ಬರಲಾಗಿದ್ದ ಸ್ಥಿರತೆ ಹಾಗೂ ಭದ್ರತೆಗಳು ಈಗ ಕುಸಿದು ಬೀಳುವ ಪರಿಸ್ಥಿತಿ ಕಾಣಿಸತೊಡಗಿತು. ಸಾಮಾಜಿಕ ಸಮಸ್ಯೆಗಳು ಹೆಚ್ಚತೊಡಗಿದವು. ರಾಜಕೀಯ ಸ್ಥಿರತೆಯೂ ಇಲ್ಲವಾಗಿ ರಾಜಪ್ರಭುತ್ವಗಳು ಪತನಗೊಳ್ಳತೊಡಗಿದವು. ಮಹಿಳೆಯರು, ಮಕ್ಕಳು ಮತ್ತು ಕಾರ್ಮಿಕರ ಶೋಷಣೆಯು ಹೆಚ್ಚಾಗಿತ್ತು.

**b)** **ಕೈಗಾರಿಕಾ ಕ್ರಾಂತಿಯು ಮಾನವ ಚಿಂತನೆಯನ್ನು ಗಂಭೀರವಾಗಿ ಪ್ರಭಾವಿಗೊಳಿಸಿತು:** ಆಗಸ್ಟ್ ಕಾಮ್ಟ್, ಹರ್ಬಟ್ ಸ್ಪೆನ್ಸರ್, ಎಮಿಲಿ ಡರ್ಖೀಮ್, ಮ್ಯಾಕ್ಸ್ ವೇಬರ್, ಕಾರ್ಲ್ಸ್‌ಮಾರ್ಕ್ಸ್ ಮುಂತಾದವರು ಕೈಗಾರಿಕಾ ಕ್ರಾಂತಿಯು ತಂದಂತಹ ಹಲವಾರು ಸಮಸ್ಯೆಗಳನ್ನು ಆಳವಾಗಿ ಹಾಗೂ ವೈಜ್ಞಾನಿಕವಾಗಿ ಅಧ್ಯಯನ ಮಾಡಬೇಕಾದ ಅವಶ್ಯಕತೆಯಿದೆ ಎಂದು ಅಭಿಪ್ರಾಯಪಟ್ಟರು. ಸಾಮಾಜಿಕ ವಿದ್ಯಮಾನಗಳ ವೈಜ್ಞಾನಿಕ ಅಧ್ಯಯನಕ್ಕಾಗಿ ಒಂದು ಸ್ವತಂತ್ರ ಹಾಗೂ ಪ್ರತ್ಯೇಕ ಸಮಾಜ ವಿಜ್ಞಾನದ ಸ್ಥಾಪನೆಯ ಅವಶ್ಯಕತೆಯಿದೆ ಎಂದೂ ಅವರು ವಾದಿಸಿದರು. ಆಗಸ್ಟ್ ಕಾಮ್ಟ್‌ರವರು ತಾನೇ ಸ್ವತಃ ಅಂತಹ ವಿಜ್ಞಾನವೊಂದನ್ನು ಹುಟ್ಟುಹಾಕಿ ಅದನ್ನು **“ಸೋಸಿಯಾಲಜಿ”** ಎಂದು ಹೆಸರಿಸಿದರು.

**ಭೌತವಿಜ್ಞಾನಿಗಳು ಮತ್ತು ಇತರೆ ಸಮಾಜ ವಿಜ್ಞಾನಿಗಳ ಬೆಳವಣಿಗೆಯಿಂದ ದೊರೆತ ಸ್ಫೂರ್ತಿ:**

ಜ್ಞಾನೋದಯದ ಯುಗವು ಸಮಾಜದಲ್ಲಿ ವಿಜ್ಞಾನ, ತಂತ್ರಜ್ಞಾನಗಳ ಬಗ್ಗೆ ಭಾರೀ ಗೌರವವನ್ನು ಮೂಡಿಸಿತು. ಪಾಶ್ಚಿಮಾತ್ಯ ಸಮಾಜದಲ್ಲಿ ಹಲವಾರು ವಿಶ್ವವಿದ್ಯಾಲಯ ಹಾಗೂ ಕಾಲೇಜುಗಳಲ್ಲಿ ವಿಜ್ಞಾನ ವಿಷಯಗಳು ಬೋಧಿಸಲ್ಪಡತೊಡಗಿದವು. ತಾಂತ್ರಿಕ ವಸ್ತುಗಳಾದ ಯಂತ್ರ–ತಂತ್ರಗಳು, ಮೋಟಾರು–ಕಾರುಗಳು, ಹಬೆಯ ಯಂತ್ರಗಳು, ಕೋವಿ–ಫಿರಂಗಿಗಳು, ಪೆನ್, ಪೇಪರ್, ಮುದ್ರಣ ಯಂತ್ರಗಳು ಇತ್ಯಾದಿಗಳು ಎಲ್ಲೆಡೆ ಬಳಕಗೆ ಬಂದವು. ಇವೆಲ್ಲದರ ಒಟ್ಟು ಪರಿಣಾಮವೆಂಬಂತೆ ವಿಜ್ಞಾನಕ್ಕೆ ಮನ್ನಣೆ ಲಭಿಸತೊಡಗಿತು.

ನೈಸರ್ಗಿಕ ಅಥವಾ ಭೌತವಿಜ್ಞಾನಗಳ ಕ್ಷೇತ್ರದಲ್ಲಿ ಸಾಧ್ಯವಾದ ಯಶಸ್ಸು ಸಾಮಾಜಿಕ ವಿಜ್ಞಾನಗಳು ಸಾಧ್ಯವಾಗಲಾರದೇಕೆ? ಎಂಬ ಸಹಜವಾದ ಪ್ರಶ್ನೆಯೊಂದು ಈಗ ಮೂಡಿತು. ಈ ಪ್ರಶ್ನೆಗೆ ಉತ್ತರವಾಗಿ ಆಗಸ್ಟ್ ಕಾಮ್ಟ್, ಎಮಿಲಿ ಡರ್ಖೀಮ್, ಮ್ಯಾಕ್ಸ್ ವೇಬರ್ ಮುಂತಾದ ಚಿಂತಕರು ಸಮಾಜಶಾಸ್ತ್ರದಲ್ಲಿಯೂ ಕೂಡ ವೈಜ್ಞಾನಿಕ ವಿಧಾನಗಳು ಬಳಕೆ ಮಾಡುವುದು ಸಾಧ್ಯವಿದೆ ಎಂದು ಸಾಧಿಸಿ ತೋರಿಸಿದರು.

### ವಿಭಿನ್ನ ಸಮಾಜಗಳು ಮತ್ತು ಸಂಸ್ಕೃತಿಗಳ ಅಧ್ಯಯನದ ಸ್ಫೂರ್ತಿ:

ಯುರೋಪಿನ ಸಾಮ್ರಾಜ್ಯ ಶಾಹಿ ಜಗತ್ತಿನ ಮೂಲೆ–ಮೂಲೆಗಳಲ್ಲಿ ತಮ್ಮ ವಸಾಹತುಗಳನ್ನು ಸ್ಥಾಪಿಸುವ ಪ್ರಯತ್ನದಲ್ಲಿ ನಾನಾ ತೆರನಾದ ಸಮಾಜಗಳ ಹಾಗೂ ವೈವಿಧ್ಯಮಯವಾದ ಸಂಸ್ಕೃತಿಗಳ ಪರಿಚಯವಾಯಿತು. ಯೂರೋಪಿನ ಜನ ಜೀವನದ ರೀತಿ–ನೀತಿಗಳಿಗಿಂತಲೂ ತೀರಾ ಭಿನ್ನವಾಗಿದ್ದ ಈ ಸಂಸ್ಕೃತಿಗಳನ್ನು ಅಧ್ಯಯನ ಮಾಡುವುದು ಸಮಾಜ ಚಿಂತಕರುಗಳಿಗೆ ಒಂದು ಬೌದ್ಧಿಕ ಸವಾಲಾಗಿತ್ತು. ಸಮಾಜ–ಸಮಾಜಗಳ ನಡುವೆ ಇಷ್ಟೊಂದು ವೈಪರಿತ್ಯಗಳು ಹಾಗೂ ವೈರುಧ್ಯಗಳಿರಲು ಕಾರಣವೇನು? ಸಮಾಜಗಳ ಪ್ರಗತಿ ಒಂದೇ ತೆರನಾಗಿಲ್ಲವೇಕೆ? ಸಮಾಜಗಳ ನಡುವಿನ ಈ ರೀತಿಯ ಹೋಲಿಕೆಯಿಂದ ಯುರೋಪಿಯನ್ನರು ಕಲಿಯಬಹುದಾದ ಪಾಠಗಳೇನು? ಈ ಪ್ರಶ್ನೆಗಳಿಗೆ ನಿಖರವಾದ ಸಮಾಧಾನಕರವಾದ ಉತ್ತರವನ್ನು ಕಂಡುಕೊಳ್ಳುವ ಪ್ರಯತ್ನವಾಗಿ ಹೀಗೆ ಸಮಾಜಶಾಸ್ತ್ರವು ಒಂದು ಸ್ವತಂತ್ರವಾದ ಹಾಗೂ ವಿಶಿಷ್ಟವಾದ ಅಧ್ಯಯನಶಾಸ್ತ್ರವಾಗಿ ಮೂಡಿ ಬಂದಿತು.

## 1.3 ಸಮಾಜಶಾಸ್ತ್ರದ ಸ್ವರೂಪ – ಲಕ್ಷಣಗಳು: (Nature of Sociology)

ಸಮಾಜ ವಿಜ್ಞಾನಗಳ ಸಮೂಹದಲ್ಲಿ ಸಮಾಜಶಾಸ್ತ್ರಕ್ಕೆ ತನ್ನದೇ ಆದ ವಿಶಿಷ್ಟ ಸ್ಥಾನವಿದೆ. ತನ್ನ ಕೆಲವು ಗುಣಗಳಿಂದಾಗಿ ಅದು ಇತರ ಸಮಾಜ ವಿಜ್ಞಾನಗಳಿಂದ ಭಿನ್ನವಾಗಿದೆ. ಸಮಾಜಶಾಸ್ತ್ರದ ಕೆಲವು ಮುಖ್ಯ ಸ್ವರೂಪ ಲಕ್ಷಣಗಳ ಬಗ್ಗೆ ರಾಬರ್ಟ್ ಬೈರ್‌ಸ್ಟೆಡ್ ಪ್ರಸ್ತಾಪಿಸಿದ್ದು ಅವು ಹೀಗಿವೆ.

1. **ಸಮಾಜಶಾಸ್ತ್ರವು ಒಂದು ಪ್ರತ್ಯೇಕವಾದ ಹಾಗೂ ಸ್ವತಂತ್ರವಾದ ಅಧ್ಯಯನ ಶಾಸ್ತ್ರವಾಗಿದೆ:**
   ಸಮಾಜಶಾಸ್ತ್ರವು ಒಂದು ಪ್ರತ್ಯೇಕವಾದ ಮತ್ತು ಸ್ವತಂತ್ರವಾದ ಅಧ್ಯಯನ ಶಾಸ್ತ್ರವೆಂದು ಪರಿಗಣಿಸಲ್ಪಟ್ಟಿದೆ. ಅದನ್ನು ಇತಿಹಾಸ, ಸಾಮಾಜಿಕ ತತ್ವಜ್ಞಾನ ಅಥವಾ ರಾಜಕೀಯ ತತ್ವಜ್ಞಾನ ಇಂತಹ ಯಾವುದೇ ಅಧ್ಯಯನ ಶಾಸ್ತ್ರಗಳ ಶಾಖೆ ಎಂಬುದಾಗಿ ಪರಿಗಣಿಸುತ್ತಿಲ್ಲ.

2. **ಸಮಾಜಶಾಸ್ತ್ರವು ಒಂದು ಸಮಾಜ ವಿಜ್ಞಾನವಾಗಿದೆಯೇ ಹೊರತು ಭೌತವಿಜ್ಞಾನವಾಗಿಲ್ಲ:**
   ಸಮಾಜಶಾಸ್ತ್ರವು ಸಮಾಜ ವಿಜ್ಞಾನಗಳ ಸಮೂಹಕ್ಕೆ ಸೇರಿದುದಾಗಿದೆಯೇ ಹೊರತು ಭೌತ ವಿಜ್ಞಾನಗಳ ಸಮೂಹಕ್ಕೆ ಸೇರಿಲ್ಲ. ಸಮಾಜ ವಿಜ್ಞಾನಗಳಲ್ಲಿ ಒಂದಾದ ಸಮಾಜ ಶಾಸ್ತ್ರವು ಮಾನವ, ಅವನ ಸಮಾಜ, ಸಾಮಾಜಿಕ ಚಟುವಟಿಕೆಗಳು ಮತ್ತು ಸಾಮಾಜಿಕ ಜೀವನವನ್ನು ಅಧ್ಯಯನ ಮಾಡುತ್ತದೆ. ಹಾಗೆಯೇ ಸಮಾಜಶಾಸ್ತ್ರವು ಇತಿಹಾಸ, ರಾಜ್ಯಶಾಸ್ತ್ರ, ಅರ್ಥಶಾಸ್ತ್ರ, ಮನಃಶಾಸ್ತ್ರ, ಮಾನವ ಶಾಸ್ತ್ರಗಳೊಂದಿಗೆ ನಿಕಟ

ಸಂಪರ್ಕ ಹೊಂದಿದೆ.

**3. ಸಮಾಜಶಾಸ್ತ್ರವು ಒಂದು ನಿಶ್ಚಯಾತ್ಮಕ ಶಾಸ್ತ್ರವಾಗಿದೆಯೇ ವಿನಃ ಗುಣ ನಿರ್ದೇಶಕ ಶಾಸ್ತ್ರವಲ್ಲ:**

ಸಮಾಜಶಾಸ್ತ್ರವು ತನ್ನ ಅಧ್ಯಯನದಲ್ಲಿ ವಸ್ತುವು **"ಹೇಗಿದೆಯೋ ಹಾಗೆ"** (as it is) ಎಂದು ಅಧ್ಯಯನ ಮಾಡುವುದೇ ಹೊರತು ವಸ್ತುವು **"ಹೇಗಿರಬೇಕು"** (as it ought to be) ಎನ್ನುವ ದೃಷ್ಠಿಯಿಂದ ಅಧ್ಯಯನ ಮಾಡುವುದಿಲ್ಲ. ಅದು ಮೌಲ್ಯಗಳ ಬಗ್ಗೆ ತಟಸ್ಥ ವಹಿಸುವುದು. ಅದರ ದೃಷ್ಟಿಕೋನ ನೈತಿಕವೂ ಅಲ್ಲ ಅನೈತಿಕವೂ ಅಲ್ಲ. ಆದರೆ ನೀತಿ ನಿರಪೇಕ್ಷವಾದುದು (not moral or immoral but amoral) ಅಂದರೆ ನೈತಿಕ ವಿಷಯಗಳಲ್ಲಿ ಸಮಾಜಶಾಸ್ತ್ರವು ತಟಸ್ಥ ಧೋರಣೆಯನ್ನು ವಹಿಸುವುದು.

**4. ಸಮಾಜಶಾಸ್ತ್ರವು ಒಂದು 'ಶುದ್ಧ' ಶಾಸ್ತ್ರವೇ ಹೊರತು ಪ್ರಾಯೋಗಿಕ ವಿಜ್ಞಾನವಲ್ಲ:**

ಒಂದು "ಶುದ್ಧಶಾಸ್ತ್ರ"ವಾಗಿರುವ ಸಮಾಜಶಾಸ್ತ್ರದ ಉದ್ದೇಶವು ಜ್ಞಾನ ಸಂಪಾದನೆಯೇ ಹೊರತು "ಪ್ರಾಯೋಗಿಕ ಶಾಸ್ತ್ರ"ಗಳಂತೆ ಸಂಪಾದಿತ ಜ್ಞಾನವನ್ನು ಮಾನವನ ಅನುಕೂಲತೆಗಾಗಿ ಉಪಯೋಗಿಸುವುದಲ್ಲ ಆದಾಗ್ಯೂ ಸಮಾಜಶಾಸ್ತ್ರ ಒದಗಿಸುವ ಜ್ಞಾನವು ಆಡಳಿತಗಾರರು, ಶಾಸಕರು, ರಾಜನೀತಿ ನಿಪುಣರು, ಅಧ್ಯಪಕರು ಕಾರ್ಖಾನೆಗಳ ಕಾರ್ಮಿಕ ಕಲ್ಯಾಧಿಕಾರಿಗಳು, ಮೇಲ್ವಿಚಾರಕರು, ಸಾಮಾಜಿಕ ಕಾರ್ಯಕರ್ತರು ಹಾಗೂ ಸಾಮಾನ್ಯ ಪ್ರಜೆಗಳು ಎಲ್ಲರಿಗೂ ಒಂದಲ್ಲ ಒಂದು ರೀತಿಯಲ್ಲಿ ಪ್ರಯೋಜನಕಾರಿಯಾಗಿದೆ.

**5. ಸಮಾಜಶಾಸ್ತ್ರವು ಅಮೂರ್ತ ಸ್ವರೂಪದ ವಿಜ್ಞಾನವಾಗಿದೆಯೇ ಹೊರತು ಮೂರ್ತ ಸ್ವರೂಪದಲ್ಲ:**

ಸಮಾಜಶಾಸ್ತ್ರವು ಕೆಲವು ನಿರ್ದಿಷ್ಠ ಮಾನವ ಘಟನೆಗಳ ಮೂರ್ತ ರೂಪದ ಪ್ರಕಟಣೆಯಲ್ಲಿ ಆಸಕ್ತವಾಗಿಲ್ಲ. ಆದರೆ ಸಾಮಾನ್ಯ ಸ್ವರೂಪದ ಮಾನವ ಘಟನೆಗಳ **"ರೂಪ"**(Form) ಹಾಗೂ **"ನಮೂನೆ"**(Patterns)ಗಳಲ್ಲಿ ಮಾತ್ರ ಆಸಕ್ತವಾಗಿದೆ. ಉದಾ: ಸಮಾಜಶಾಸ್ತ್ರವು ಇತಿಹಾಸದಂತೆ ಯಾವುದೇ ನಿಶ್ಚಿತವಾದ ಯುದ್ಧ ಅಥವಾ ಕ್ರಾಂತಿಯಲ್ಲಿ ಆಸಕ್ತವಾಗಿಲ್ಲ. ಆದರೆ ಅದು ಯುದ್ಧ ಹಾಗೂ ಕ್ರಾಂತಿಗಳನ್ನು ಸಾಮಾಜಿಕ ವಿದ್ಯಮಾನಗಳೆಂದು ಅರ್ಥಾತ್ ವಿಭಿನ್ನ ರೀತಿಯ ಸಾಮಾಜಿಕ ಸಂಘರ್ಷಗಳೆಂದು ಪರಿಭಾವಿಸಿ ಅವುಗಳ ಸಾಮಾನ್ಯ ಸ್ವರೂಪ ಹಾಗೂ ಲಕ್ಷಣಗಳನ್ನು ಅಧ್ಯಯನ ಮಾಡುತ್ತದೆ.

**6. ಸಮಾಜಶಾಸ್ತ್ರವು ಸಾಮಾನ್ಯೀಕರಣ ಮಾಡುವ ವಿಜ್ಞಾನವಾಗಿದೆಯೇ ಹೊರತು ವೈಯಕ್ತೀಕರಣ ಮಾಡುವ ವಿಜ್ಞಾನವಲ್ಲ:**

ಸಮಾಜಶಾಸ್ತ್ರವು ಸಮಾಜದಲ್ಲಿ ಸಂಭವಿಸುವ ಪ್ರತಿಯೊಂದು ಘಟನೆಯನ್ನೂ ಅಧ್ಯಯನ ಮಾಡುವುದಿಲ್ಲ. ಅದು ಸಾಧ್ಯವಾಗದ ಮಾತು. ಬದಲಾಗಿ ಅದು ಕೆಲವು ಆಯ್ದ ಘಟನೆಗಳ ಆಧಾರದ ಮೇಲೆ ಕೆಲವು ಸಾಮಾನ್ಯ ನಿಯಮಗಳನ್ನು ಹಾಗೂ ನಿರ್ಣಯಗಳನ್ನು ಕೈಗೊಳ್ಳಲು ಪ್ರಯತ್ನಿಸುವುದು.ಉದಾ:

**ಅ)** ಅವಿಭಕ್ತ ಕುಟುಂಬಗಳು ಕೇಂದ್ರ ಕುಟುಂಬಗಳಿಗಿಂತಲೂ ಹೆಚ್ಚು ಸುಭದ್ರವಾದವು ಹಾಗೂ ಪ್ರತಿಗಾಮಿ ಸ್ವರೂಪದವು ಆಗಿವೆ.

**ಆ)** ಸಾಮಾಜಿಕ ಪರಿವರ್ತನೆಗಳು ಗ್ರಾಮೀಣ ಹಾಗೂ ಆದಿವಾಸಿ ಸಮುದಾಯಗಳಿಗಿಂತಲೂ ನಗರ ಸಮುದಾಯಗಳಲ್ಲಿ ಹೆಚ್ಚು ತ್ವರಿತವಾಗಿ ಸಂಭವಿಸುತ್ತವೆ ಇತ್ಯಾದಿ.

**7. ಸಮಾಜಶಾಸ್ತ್ರವು ಒಂದು ಸಾಮಾನ್ಯ ಸಮಾಜ ವಿಜ್ಞಾನವಾಗಿದೆಯೇ ಹೊರತು ವಿಶೇಷ ವಿಜ್ಞಾನವಾಗಿಲ್ಲ:**

ಸಮಾಜ ವಿಜ್ಞಾನಗಳಲ್ಲಿ ಸಮಾಜಶಾಸ್ತ್ರವು ಮಾತ್ರ ಮಾನವನ ಅಂತಃ ಕ್ರಿಯೆಗಳು ಒಳಗೊಳ್ಳುವ ಆರ್ಥಿಕ, ರಾಜಕೀಯ, ಧಾರ್ಮಿಕ, ನೈತಿಕ, ಬೌದ್ಧಿಕ, ಮುಂತಾದ ಹಲವು ಅಂಶಗಳ ಸಾಮಾನ್ಯ ಸ್ವರೂಪವನ್ನು ಅಧ್ಯಯನ ಮಾಡುತ್ತದೆ. ಅದರ ಅಧ್ಯಯನದ ವ್ಯಾಪ್ತಿ ವಿಶಾಲವಾದುದೇ ಹೊರತು ಉಳಿದ ಸಮಾಜ ವಿಜ್ಞಾನಗಳಂತೆ ಸೀಮಿತವಾದುದಲ್ಲ.

**ಉದಾ:** ಅರ್ಥಶಾಸ್ತ್ರವು ಮಾನವನ ಆರ್ಥಿಕ ಚಟುವಟಿಕೆಗಳಿಗೆ ಮಾತ್ರ ತನ್ನ ಅಧ್ಯಯನವನ್ನು ಸೀಮಿತಗೊಳಿಸಿಕೊಳ್ಳುತ್ತದೆ. ರಾಜ್ಯಶಾಸ್ತ್ರವು ಮಾನವನ ರಾಜಕೀಯ ಚಟುವಟಿಕೆಗಳ ಅಧ್ಯಯನಕ್ಕೇ ಮಾತ್ರ ತನ್ನ ಆಸಕ್ತಿಯನ್ನು ಕೇಂದ್ರೀಕರಿಸಿಕೊಳ್ಳುವುದು.

### 8. ಸಮಾಜಶಾಸ್ತ್ರವು ಪ್ರಯೋಗ ಸಿದ್ಧವೆನ್ನಬಹುದಾದ (ಅನುಭವವೇಧ್ಯವಾದ) ಹಾಗೂ ವಿಚಾರ ಪ್ರಧಾನವಾದ ವಿಜ್ಞಾನ:

ವೈಜ್ಞಾನಿಕವಾಗಿ ಜ್ಞಾನ ಸಂಪಾದಿಸಲು ಎರಡು ಮಾರ್ಗಗಳಿವೆ.

ಅ) **ಪ್ರಯೋಗವಾದ ಅಥವಾ ಅನುಭವವೇಧ್ಯವಾದ (Empiricism) ಇಲ್ಲಿ ಅನುಭವಕ್ಕೆ ಅಥವಾ ಪ್ರಯೋಗಕ್ಕೆ ಪ್ರಾಧಾನ್ಯತೆ ಇದೆ.** ಅವಲೋಕನ ಹಾಗೂ ಪ್ರಯೋಗಗಳು ಅನುಭವವನ್ನು ದೃಢೀಕರಿಸಲು ಇರುವ ಸಾಧನಗಳು.

ಆ) **ವಿಚಾರವಾದ ಅಥವಾ ವೈಚಾರಿಕವಾದ: (Rationalism)** ಇಲ್ಲಿ ಚಿಂತನೆ ಮತ್ತು ವಿವೇಚನೆಗೆ ಅವಕಾಶವಿದೆ, ಪ್ರಾಧಾನ್ಯತೆಯಿದೆ. ಇಲ್ಲಿ ತರ್ಕಬದ್ಧವಾದ ತೀರ್ಪುಗಳಿಗೆ ಅಥವಾ ನಿರ್ಣಯಗಳಿಗೆ ಆದ್ಯತೆಯಿದೆ. ಪ್ರಯೋಗಗಳಿಂದ ವಿಜ್ಞಾನಿಯು ಸತ್ಯ ಸಂಗತಿಯನ್ನು ಸಂಗ್ರಹಿಸುತ್ತಾನೆ. ಹಾಗೂ ತಾರ್ಕಿಕವಾಗಿ ಅವುಗಳನ್ನು ಕ್ರಮಬದ್ಧಗೊಳಿಸುತ್ತಾನೆ. ಸತ್ಯವಾದ ಮಾಹಿತಿ ಹಾಗೂ ತಾತ್ವಿಕತೆ ಇವೆರಡೂ ಜ್ಞಾನದ ಸಂಘಟನೆಗೆ ಅಗತ್ಯ. ಸಾಮಾಜಿಕ ಸಂಶೋಧನೆಗಳಲ್ಲಿಯೂ ಇವು ಅತ್ಯವಶ್ಯಕ. ಸಮಾಜಶಾಸ್ತ್ರವು ಈ ಎರಡೂ ಮಾರ್ಗಗಳನ್ನು ಬಳಸುತ್ತದೆ.

## 1.2.1 ವಿಜ್ಞಾನದ ಅರ್ಥ– ಗುಣಲಕ್ಷಣಗಳು
## (Meaning –Nature and Characteristics of Science):-

### ವಿಜ್ಞಾನದ ಅರ್ಥ: (Meaning of Science):-

'ವಿಜ್ಞಾನ' ಜ್ಞಾನವನ್ನು ಕುರಿತಾದುದು. **"ವಿಜ್ಞಾನ"** ಎಂಬ ಕನ್ನಡ ಪದಕ್ಕೆ ತತ್ಸಮಾನವಾದ ಇಂಗ್ಲೀಷ್ ಪದ **"ಸೈನ್ಸ್"** ("Science"). **"ಸೈನ್ಸ್"** ಎಂಬ ಪದವು ಲ್ಯಾಟಿನ್ ಭಾಷೆಯ **"ಸೈನ್‌ಶಿಯಾ"**(Scientia) ಎಂಬ ಪದದಿಂದ ವ್ಯುತ್ಪತ್ತಿ ಹೊಂದಿದೆ. ಸೈನ್‌ಶಿಯವೆಂದರೆ ಜ್ಞಾನ. ಆದರೆ ಎಲ್ಲಾ ಬಗೆಯ ಜ್ಞಾನವನ್ನು **"ವಿಜ್ಞಾನ"** ಎನ್ನಲಾಗುವುದಿಲ್ಲ. ವೈಜ್ಞಾನಿಕ ವಿಧಾನಗಳ ಬಳಕೆಯ ಮುಖಾಂತರ ಪ್ರಾಪ್ತವಾಗುವ ಜ್ಞಾನವನ್ನು ಮಾತ್ರ **"ವಿಜ್ಞಾನ"** ಎನ್ನುವುದು ಹೆಚ್ಚು ಸೂಕ್ತ. ಹಾಗಿದ್ದರೆ, **"ವಿಜ್ಞಾನ"** ಎಂದರೇನು?

### ವಿಜ್ಞಾನದ ವ್ಯಾಖ್ಯೆ: (Definition of Science):-

1. ವಿಶಾಲವಾದ ಅರ್ಥದಲ್ಲಿ ಹೇಳುವುದಾದರೆ, **"ಭೌತಿಕ ಅಥವಾ ಸಾಮಾಜಿಕ ವಿದ್ಯಮಾನಗಳಿಗೆ ಸಂಬಂಧಿಸಿದ ಯಾವುದೇ ಕ್ರಮಬದ್ಧವಾದ ಅಧ್ಯಯವನ್ನು ವಿಜ್ಞಾನ ಎನ್ನಬಹುದು"**.

2. ಆರ್.ಟಿ. ಶಾಫರ್; **"**ಕ್ರಮಬದ್ಧವಾದ ಅವಲೋಕನ ವಿಧಾನಗಳ ಮೂಲಕ ಪ್ರಾಪ್ತವಾದ ಜ್ಞಾನದ ಸಮಷ್ಠಿಯನ್ನು ವಿಜ್ಞಾನ ಎಂದೆನ್ನಬಹುದು**"**.

3. ಅತ್ಯಂತ ಸರಳ ಪದಗಳಲ್ಲಿ ಹೇಳುವುದಾದರೆ, **"**ವಿಜ್ಞಾನವೆಂಬುದು ಕ್ರಮಬದ್ಧವಾದ ಅಥವಾ ಸಂಘಟಿತವಾದ ಜ್ಞಾನವಾಗಿದೆ**"**. ("Science is a systematic body of knowledge")

**ವಿಜ್ಞಾನ ಗುಣ ಲಕ್ಷಣಗಳು (Characteristics of Science):-**

ಈ ಮೇಲಿನ ವ್ಯಾಖ್ಯೆಗಳು ಸ್ಪಷ್ಟಗೊಳಿಸುವಂತೆ ವಿಜ್ಞಾನದ ಮುಖ್ಯ ಉದ್ದೇಶ ಜ್ಞಾನ ಸಂಪಾದನೆಯೇ ಆಗಿದೆ. ಜ್ಞಾನವು ಸಾಗರದಷ್ಟು ವಿಶಾಲವಾದುದು. ಅದರ ಆಳವನ್ನು ಶೋಧಿಸುವುದು ಆಗದ ಕೆಲಸ. ವಿಜ್ಞಾನಿಯಾದವನು ಎಷ್ಟು ಹೆಚ್ಚು ಶ್ರಮ ಹಾಕಿ ಜ್ಞಾನವನ್ನು ಸಂಗ್ರಹಿಸುವ ಯತ್ನ ನಡೆಸುತ್ತಾನೆಯೋ ಆಗ ತನಗೆ ತಿಳಿಯದೇ ಇರುವ ಇನ್ನು ಎಷ್ಟೋ ವಸ್ತು, ವಿಷಯ, ವಿಚಾರಗಳಿವೆ ಎಂಬುದು ತಿಳಿದುಬರುವುದು. ಜ್ಞಾನವನ್ನು ಸಂಪಾದಿಸುವ ಉದ್ದೇಶ ಹೊಂದಿದ ವಿಜ್ಞಾನಿಯಾದವನು ಹಾಗೂ ವಿಜ್ಞಾನದ ಪ್ರಾಥಮಿಕ ಪರಿಚಯ ಮಾಡಿಕೊಳ್ಳ ಹೊರಟವರು ವಿಜ್ಞಾನದ ಸ್ವರೂಪ ಲಕ್ಷಣಗಳ ಪರಿಚಯ ಹೊಂದಿರುವುದು ಅವಶ್ಯ. ಅಂತಹ ಲಕ್ಷಣಗಳ ಸಂಕ್ಷಿಪ್ತ ಮಾಹಿತಿ ಈ ಕೆಳಗಿನಂತಿದೆ.

1. **ವಾಸ್ತವತೆ ಅಥವಾ ಸತ್ಯಸಂಗತಿ (Factuality):–** ವಿಜ್ಞಾನವು ಮಾನಸಿಕ ಕಲ್ಪನೆಗಳನ್ನು ಆಧಾರಿಸಿರುವುದಲ್ಲ, ಆದರೆ ಸತ್ಯಸಂಗತಿಗಳನ್ನು ಅವಲಂಬಿಸಿರುತ್ತದೆ. **"ಅವಲೋಕಿತ ವಿದ್ಯಮಾನವನ್ನೇ ಇಲ್ಲಿ ವಾಸ್ತವಾಂಶ ಅಥವಾ ಸತ್ಯಸಂಗತಿ ಎನ್ನಲಾಗುವುದು"**. ಯಾವ ಹೇಳಿಕೆ ಸತ್ಯಪೂರ್ಣವಾಗಿದೆಯೋ ಅದನ್ನೆ ವಾಸ್ತವಾಂಶ ಎನ್ನಬಹುದು. ಉದಾಹರಣೆ:1 ಕಲ್ಲು ಒಂದು ಘನ ವಸ್ತುವಾಗಿದೆ. 2. ಭಾರತದಲ್ಲಿ ಸರ್ವಧರ್ಮೀಯರು ನೆಲೆಸಿದ್ದಾರೆ. ಇತ್ಯಾದಿ.

2. **ಕಾರಣೀಯತೆ : (Causality)** :– ವಿಜ್ಞಾನವು ವಸ್ತುಗಳ ಅಥವಾ ಘಟನೆಗಳ ನಡುವಿನ ಕಾರಣೀಯ ಸಂಬಂಧವನ್ನು ಕಂಡುಕೊಳ್ಳಲು ಪ್ರಯತ್ನಿಸುವುದು. ಅಂದರೆ, ಅದು ಕಾರಣಿಯತೆಯನ್ನು ಅರ್ಥ ಮಾಡಿಕೊಳ್ಳಲು ಯತ್ನಿಸುವುದು. ಕಾರಣಿಯತೆಯು **"**ಘಟನೆಗಳ ಜರುಗುವಿಕೆ ಎಂಬುದು ಕಾರಣ ಮತ್ತು ಪರಿಣಾಮ ಸಂಬಂಧಗಳಿಂದ ನಿರ್ಧರಿತವಾಗುತ್ತದೆ**"** ಎಂಬಂಶವನ್ನು ಸ್ಪಷ್ಟಪಡಿಸುತ್ತದೆ.

   ಉದಾಹರಣೆ:1. ಹಾನಿಕಾರಕ ಬ್ಯಾಕ್ಟೀರಿಯಗಳು ರೋಗಗಳನ್ನು ತರುತ್ತವೆ. 2. ಬಡತನವೆಂಬುದು ಆರ್ಥಿಕ ಹಿಂದುಳಿದಿರುವಿಕೆಯ ಕಾರಣಗಳಲ್ಲೊಂದು. ಈ ಕಾರಣೀಯ ಸಂಬಂಧಗಳ ಮರ್ಮವನ್ನು ಅರಿತುಕೊಳ್ಳವುದೇ ವಿಜ್ಞಾನದ ಕಾರ್ಯ.

3. **ಸಾರ್ವತ್ರಿಕತೆ (Universality):–** ವೈಜ್ಞಾನಿಕ ಶೋಧನೆಗಳು ಸಾರ್ವತ್ರಿಕ ಸ್ವರೂಪದವುಗಳಾಗಿರುತ್ತದೆ. ಯಾವುದೇ ಜನಾಂಗ, ರಾಷ್ಟ್ರೀಯತೆ, ಭಾಷೆ, ಧರ್ಮ / ಪ್ರದೇಶ, ಸಾಮಾಜಿಕ ವರ್ಗ ಅಥವಾ ರಾಜಕೀಯ ತತ್ವಾದರ್ಶಕ್ಕೆ ಮಾತ್ರ ವೈಜ್ಞಾನಿಕ ಸತ್ಯತೆಯು ಸೀಮಿತವಾಗಿರಲು ಸಾಧ್ಯವಿಲ್ಲ. ವೈಜ್ಞಾನಿಕ ಶೋಧನೆಗಳನ್ನು ಅವುಗಳ ವೈಜ್ಞಾನಿಕತೆಯ ನೆಲೆಯಲ್ಲಿ ಮಾತ್ರ ಮೌಲ್ಯಮಾಪನ ಮಾಡುವಂತಿರಬೇಕು.ಉದಾಹರಣೆಗಳು: ಬೆಂಕಿ ಸುಡುವುದು, ನೀರು ಹರಿಯುತ್ತದೆ. ಗಾಳಿ ಬೀಸುತ್ತದೆ ಇತ್ಯಾದಿ.

4 **ಭವಿಷ್ಯ ಸೂಚಕತೆ (Predictability):–** **"**ಮುಂದಾಗುವ ಘಟನೆಯನ್ನು ಅಥವಾ ಘಟನೆಗಳ ಸರಣಿಯನ್ನು

ಮೊದಲೇ ಸೂಚಿಸುವುದಕ್ಕೆ ಭವಿಷ್ಯ ಸೂಚಕತೆ ಎನ್ನಬಹುದು". ಅದು ಭವಿಷ್ಯದಲ್ಲಿ ಏನಾಗುವುದೆಂಬುದರ ಕುರಿತಾಗಿ ನೀಡುವ ಹೇಳಿಕೆಯಾಗಿರುತ್ತದೆ. ಅದು ಆ ಕುರಿತಾದ ನಮ್ಮ ಲೆಕ್ಕಚಾರವೂ ಆಗಿರಬಹುದು. ಖಚಿತವಾಗಿ ಭವಿಷ್ಯ ಸೂಚಿಸುವುದು ವಿಜ್ಞಾನದ ಕಾರ್ಯಗಳಲ್ಲೊಂದು. ಉದಾಹರಣೆಗಳು:– 1. ಭೂಕಂಪಗಳು, ಗ್ರಹಣಗಳು, ಚಂಡಮಾರುತಗಳು, ಮಳೆ ಬೀಳುವಿಕೆ–ಮುಂತಾದ ಭೌತಿಕ ವಿದ್ಯಮಾನಗಳ ಕುರಿತು ವಿಜ್ಞಾನಿಗಳು ಭವಿಷ್ಯ ಸೂಚಕ ಮಾಹಿತಿ ನೀಡಬಲ್ಲರಾಗಿದ್ದಾರೆ. 2. ಸಮಾಜ ವಿಜ್ಞಾನಗಳ ಕ್ಷೇತ್ರದಲ್ಲಿ ಭವಿಷ್ಯ ಸೂಚಿಸುವುದು ಸ್ವಲ್ಪ ಕಷ್ಟಕರವಾದರೂ ಅದು ಅಸಾಧ್ಯವಲ್ಲ. ಅಂತೆಯೇ, ಜನಸಂಖ್ಯಾ ಏರಿಳಿತಗಳ ಆರ್ಥಿಕ ಬೆಳವಣಿಗೆ, ಸಾಕ್ಷರತೆ, ಕುಟುಂಬದ ವಿಘಟನೆಯ ಅಥವಾ ವಿವಾಹ ವಿಚ್ಛೇದನಗಳ ಗತಿಯ ಬಗ್ಗೆ ಸಮಾಜ ವಿಜ್ಞಾನಿಗಳು ನಂಬಲರ್ಹ ಭವಿಷ್ಯ ಸೂಚಿಸುವ ಯತ್ನ ನಡೆಸಿದ್ದಾರೆ.

5. **ದೃಢೀಕರಣಿಯತೆ ಅಥವಾ ಪ್ರಮಾಣೀಕರಣೀಯತೆ (Verifiability)**:– ವಿಜ್ಞಾನವು ದೃಢೀಕರಣ ತತ್ವವನ್ನು ಆಧರಿಸಿ ನಿಂತಿದೆ. ಈ ತತ್ವದಂತೆ ಒಂದು ಹೇಳಿಕೆ, ಅಥವಾ ಪ್ರಾಕ್‌ಕಲ್ಪನೆ (hypothesis) ಯನ್ನು ಅದು ದೃಢೀಕರಣ ಯೋಗ್ಯವಾಗಿದ್ದರೆ ಮಾತ್ರ **"ವೈಜ್ಞಾನಿಕ"**ವಾದುದೆಂದು ಒಪ್ಪಿಕೊಳ್ಳಬಹುದು. **"ಒಂದು ಹೇಳಿಕೆ ಅಥವಾ ಪ್ರಾಕ್ ಕಲ್ಪನೆಯ ಸತ್ಯತೆಯನ್ನು ಸ್ಥಾಪಿಸಲು ಅನುಸರಿಸುವ ಯಾವುದೇ ವಿಧಾನವನ್ನು ದೃಢೀಕರಣ ಅಥವಾ ಪ್ರಮಾಣೀಕರಣ"** ಎನ್ನಬಹುದು. ಹೇಳಿಕೆಯೊಂದನ್ನು ದೃಢೀಕರಿಸುವುದೆಂದರೆ, ಅನುಭವವೈದ್ಯವಾದ ಸಾಕ್ಷ್ಯಾಧಾರಗಳನ್ನು ನೀಡಿ ಅದನ್ನು ನಂಬಲಾರ್ಹವನ್ನಾಗಿಸುವುದು ಎಂಧರ್ಥ. ಉದಾಹರಣೆಗಳು:(1). ಭೂಮಿಯು ಸೂರ್ಯನ ಸುತ್ತ ತಿರುಗುವುದು, ಸೂರ್ಯ ಭೂಮಿಗಿಂತಲೂ ಗಾತ್ರದಲ್ಲಿ ದೊಡ್ಡದಾದ ಗ್ರಹ. (2). ಮಾನವರೆಲ್ಲರೂ ಮರ್ತ್ಯರು (ಸಾವಿಗೆ ಈಡಾಗುವವರು). (3). ಮಾನವರೆಲ್ಲರೂ ಸರಿಸಮಾನರಾಗಿರಲು ಸಾಧ್ಯವಿಲ್ಲ, ಇತ್ಯಾದಿ.

6. **ವಸ್ತು ನಿಷ್ಟತೆ ಮತ್ತು ಮೌಲ್ಯ ನಿರಪೇಕ್ಷತೆ (Objectivity and Value Nutrality)**:- ವಿಜ್ಞಾನಿಗಳು ವಸ್ತುನಿಷ್ಟರಾಗಿರಬೇಕೆಂಬುದು ವಿಜ್ಞಾನದ ಆಪೇಕ್ಷೆ. "ವಸ್ತುನಿಷ್ಟತೆ ಎಂದರೆ ಅವಲೋಕನಗಳನ್ನು ಮಾಡುವಾಗ ಹಾಗೂ ವ್ಯಾಖ್ಯಾನಿಸುವಾಗ ಯಾವುದೇ ಬಗೆಯ ಪೂರ್ವಗ್ರಹಗಳಿಂದ ಮುಕ್ತವಾಗಹಿರುವುದು ಎಂಧರ್ಥ". ನಾವು ಸತ್ಯಸಂಗತಿಗಳನ್ನು ಅಥವಾ ವಾಸ್ತವಾಂಶಗಳನ್ನು ವ್ಯಾಖ್ಯಾನಿಸುವಾಗ, ನಮ್ಮ ವೈಯಕ್ತಿಕ ತೀರ್ಮಾನಗಳು ಅಥವಾ ಅನಿಸಿಕೆಗಳು ವ್ಯಕ್ತಪಡಿಸದಂತೆ ಎಚ್ಚರ ವಹಿಸಬೇಕು.

**ಮೌಲ್ಯ ನಿರಪೇಕ್ಷತೆಯು (Value Neutrality) :-** ಈ ಪರಿಕಲ್ಪನೆಯನ್ನು ಮೊದಲು ಪ್ರಸ್ತಾಪಿಸಿದವರು **ಮ್ಯಾಕ್ಸ್ ವೇಬರ್**. ಇವರ ಪ್ರಕಾರ ಯಾವುದೇ ಸಂಶೋಧಕನಾಗಲೀ ಅಥವಾ ವಿಜ್ಞಾನಿಯಾಗಲೀ ತನ್ನ ವ್ಯಕ್ತಿಗತ ಮೌಲ್ಯಗಳು ಅಥವಾ ತಾತ್ವಿಕ ನಿಲುವುಗಳಿಗೆ ಪೂರಕವಾದ ವಿಧಾನಗಳನ್ನು ಆಯ್ಕೆ ಮಾಡಿಕೊಂಡು ವಾಸ್ತವಾಂಶಗಳನ್ನು ವ್ಯಾಖ್ಯಾನಿಸುವ ಯತ್ನ ಮಾಡಬಾರದು. ಮೌಲ್ಯ ನಿರಪೇಕ್ಷತೆಯ ತತ್ವದಂತೆ ಯಾವುದೇ ಕಾರಣಕ್ಕೂ ತನ್ನ ವ್ಯಕ್ತಗತ ಮೌಲ್ಯಗಳು, ನಂಬಿಕೆಗಳು ಹಾಗೂ ವಿಚಾರಗಳು ತನ್ನ ಸಂಶೋಧನಾ ಅಧ್ಯಯನದ ಮೇಲೆ ಪ್ರಭಾವ ಬೀರದಂತೆ ನೋಡಿಕೊಳ್ಳುವ ಹೊಣೆ ಸಂಶೋಧಕನದು.

7. **ವೈಜ್ಞಾನಿಕ ವಿಧಾನಗಳು ಹಾಗೂ ತಂತ್ರಗಳ ಮೇಲೆ ವಿಶೇಷವಾದ ಗಮನ** (Special Insistence on Scientific Method and Techniques):- ಜ್ಞಾನದ ಯಾವುದೇ ಶಾಖೆಯು ತನ್ನನ್ನು **"ವಿಜ್ಞಾನ"**ವೆಂದು ಕರೆಸಿಕೊಳ್ಳಬೇಕಾದರೆ ಅದು ವೈಜ್ಞಾನಿಕ ವಿಧಾನವನ್ನು ಅವಲಂಬಿಸುವುದು ಅನಿವಾರ್ಯ. ವೈಜ್ಞಾನಿಕ ವಿಧಾನಕ್ಕೆ ತಳಹದಿ

ಹಾಕಿದ ಫ್ರಾನ್ಸಿಸ್ ಬೇಕನ್ ವಿಜ್ಞಾನವೆಂಬುದು ತನ್ನ ಅಧ್ಯಯನ ಹಾಗೂ ಸಂಶೋಧನೆಗಳಲ್ಲಿ ವೈಜ್ಞಾನಿಕ ವಿಧಾನವನ್ನೇ ಅಳವಡಿಸಬೇಕೆಂದು ತಿಳಿಸಿದ್ದಾರೆ. "ವಿಜ್ಞಾನದ ಏಕತೆಯನ್ನು ಅದರ ವಿಧಾನದಲ್ಲಿ ಕಾಣಬಹುದೇ ವಿನಃ ಅದರ ವಸ್ತು ವಿಷಯಗಳಲ್ಲಲ್ಲ." ಎಂದು ಕಾರ್ಲ್ ಪಿಯರ್‌ಸನ್ (Karl Pearson) ಹೇಳಿದ ಮಾತು ಉಲ್ಲೇಖನೀಯ.

## ವಿಜ್ಞಾನಗಳ ವರ್ಗೀಕರಣ (Classification of Science):–

ಜ್ಞಾನದ ಕ್ಷೇತ್ರವು ಬಹಳ ವಿಶಾಲವಾದುದು. ಅದಕ್ಕೆ ಇತಿಮಿತಿಗಳಿಲ್ಲ. ಆದ್ದರಿಂದಲೇ ಜ್ಞಾನವನ್ನು ಸಾಗರಕ್ಕೆ ಹೋಲಿಸುವುದುಂಟು. **"ಜ್ಞಾನ ಸಾಗರ"** (Ocean of knowledge) ಎಂಬ ಪದವೂ ಬಳಕೆಯಲ್ಲಿದೆ. ಜ್ಞಾನದ ಸಮಗ್ರ ದರ್ಶನ ಪಡೆಯುವುದು ಯಾವುದೇ ವ್ಯಕ್ತಿಯ ಸಾಮರ್ಥ್ಯವನ್ನು ಮೀರಿದ ಮಾತು. ಜ್ಞಾನದ ಒಂದೊಂದು ಕ್ಷೇತ್ರವನ್ನು ಅಧ್ಯಯನ ಮಾಡಲು ಒಂದೊಂದು ವಿಜ್ಞಾನವೇ ಹುಟ್ಟಿಕೊಂಡಿದೆ. ಈ ವಿಜ್ಞಾನಗಳನ್ನು ಸಾಂಪ್ರಾದಾಯಿಕವಾಗಿ ಎರಡು ಪ್ರಕಾರಗಳಾಗಿ ವರ್ಗೀಕರಿಸಲಾಗಿದೆ. ಅವುಗಳೆಂದರೆ

(i) ನೈಸರ್ಗಿಕ ವಿಜ್ಞಾನಗಳು (ಅಥವಾ ಭೌತ ವಿಜ್ಞಾನಗಳು)

(ii) ಸಮಾಜ ವಿಜ್ಞಾನಗಳು.

ನೈಸರ್ಗಿಕ ವಿಜ್ಞಾನಗಳು ನಿಸರ್ಗದ ಸೃಷ್ಟಿಯನ್ನು ಅಧ್ಯಯನ ಮಾಡುತ್ತವೆ. ಸಮಾಜ ವಿಜ್ಞಾನಗಳು ಮಾನವ ಕೇಂದ್ರೀತವಾದ ಸಾಮಾಜಿಕ ಜಗತ್ತನ್ನು ಅಧ್ಯಯನ ಮಾಡುತ್ತವೆ. ಇವೆರಡೂ ಪರಸ್ಪರ ಸಂಬಂಧಪಟ್ಟಿವೆ.

## ನೈಸರ್ಗಿಕ ವಿಜ್ಞಾನಗಳು ಅಥವಾ ಭೌತ ವಿಜ್ಞಾನಿಗಳು (Natural Sciences or Physical Sciences):-

ನೈಸರ್ಗಿಕ ವಿಜ್ಞಾನಗಳು ಭೌತಿಕ ಜಗತ್ತನ್ನು ವೈಜ್ಞಾನಿಕವಾಗಿ ಅಧ್ಯಯನ ಮಾಡುತ್ತವೆ. ಅವು ನೈಸರ್ಗಿಕ ವಸ್ತುಗಳ ಭೌತಿಕ ಲಕ್ಷಣಗಳನ್ನು ಅಧ್ಯಯನ ಮಾಡುವುದು. ರಿಚಾರ್ಡ್.ಟಿ ಶಾಫರ್ ರವರು ಹೇಳುವಂತೆ– "ನೈಸರ್ಗಿಕ ವಿಜ್ಞಾನವೆಂಬುದು ನಿಸರ್ಗದ ಭೌತಿಕ ಲಕ್ಷಣಗಳು ಮತ್ತು ಅವುಗಳ ಅಂತಃಕ್ರಿಯೆ ಹಾಗೂ ಪರಿವರ್ತನೆಗಳ ಅಧ್ಯಯನವಾಗಿದೆ".

ನೈಸರ್ಗಿಕ ಅಥವಾ ಭೌತ ವಿಜ್ಞಾನಗಳೂ ಕೂಡ ಬಹಳ ವಿಸ್ತಾರವಾದ ಅಧ್ಯಯನ ವ್ಯಾಪ್ತಿಯನ್ನು ಹೊಂದಿವೆ. ಇಲ್ಲಿಯೂ ಕೂಡ ನಿಸರ್ಗ ಸೃಷ್ಟಿಯ ಒಂದೊಂದು ಕ್ಷೇತ್ರದಲ್ಲಿಯೂ ಒಂದೊಂದು ವಿಶಿಷ್ಟ ವಿಜ್ಞಾನ ಶಾಖೆಯ ಉದಯವಾಗಿದೆ. ಉದಾ: ಭೂಗರ್ಭಶಾಸ್ತ್ರ, ಭೌತಶಾಸ್ತ್ರ, ರಸಾಯನಶಾಸ್ತ್ರ, ಖಗೋಳಶಾಸ್ತ್ರ, ಸಸ್ಯಶಾಸ್ತ್ರ, ಪ್ರಾಣಿಶಾಸ್ತ್ರ, ಇತ್ಯಾದಿ.

## ಸಮಾಜ ವಿಜ್ಞಾನಗಳು: (Social Science):-

ಸಮಾಜ ವಿಜ್ಞಾನಗಳು ಮಾನವನ ಸಾಮಾಜಿಕ ಜಗತ್ತನ್ನು ಕುರಿತು ಅಧ್ಯಯನ ಮಾಡುತ್ತವೆ. ಮಾನವನು ತನ್ನ ಸಾಮಾಜಿಕ ಅಸ್ತಿತ್ವಕ್ಕಾಗಿ ತಾನೇ ಸೃಷ್ಟಿಸಿಕೊಂಡ ಸಾಮಾಜಿಕ ಜಗತ್ತಿನಲ್ಲಿ ತನ್ನ ವ್ಯವಹಾರಕ್ಕೆ ಸಂಬಂಧಿಸಿದ ಆರ್ಥಿಕ, ಧಾರ್ಮಿಕ, ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ ಚಟುವಟಿಕೆಗಳು–ಮುಂತಾದವುಗಳನ್ನು ವೈಜ್ಞಾನಿಕವಾಗಿ ಅಭ್ಯಾಸಮಾಡುವ ಯತ್ನ ನಡೆಸಿದ್ದಾನೆ. **"ಸಮಾಜ ವಿಜ್ಞಾನ"** ಎಂಬ ಪರಿಕಲ್ಪನೆಯನ್ನು ಕೆಲವೊಮ್ಮೆ ಮಾನವ ಮತ್ತು ಆತನ ಸಮಾಜ ಇವುಗಳಿಗೆ ಸಂಬಂಧಿಸಿದ ಯಾವುದೇ ಅಧ್ಯಯನಶಾಸ್ತ್ರವನ್ನು ಸೂಚಿಸಲು ಬಳಸುವುದುಂಟು.

### ಸಮಾಜ ವಿಜ್ಞಾನದ ವ್ಯಾಖ್ಯೆ:-

1. **ಐಯಾನ್ ರಾಬರ್ಟ್‌ಸನ್:** "ಮಾನವ ವರ್ತನೆಯ ವಿಭಿನ್ನ ಅಂಶಗಳನ್ನು ಅಧ್ಯಯನ ಮಾಡುವಂತಹ ಪರಸ್ಪರ ಸಂಬಂಧಿತವಾದ ಅಧ್ಯಯನಶಾಸ್ತ್ರಗಳ ಸಮುಚ್ಚಯವನ್ನು ಸಮಾಜ ವಿಜ್ಞಾನಗಳೆನ್ನಬಹುದು."

2. ಸರಳ ಪದಗಳಲ್ಲಿ ಹೇಳುವುದಾದರೆ, ಸಂಕೀರ್ಣ ಸ್ವರೂಪದ ಮಾನವ ಸಂಬಂಧಗಳನ್ನು ಅರ್ಥವಿಸಿಕೊಳ್ಳಲು ವೈಜ್ಞಾನಿಕ ವಿಧಾನಗಳನ್ನು ಬಳಸುವ ಅಧ್ಯಯನಶಾಸ್ತ್ರವನ್ನು ಸಮಾಜ ವಿಜ್ಞಾನಗಳು ಎಂದೆನ್ನಬಹುದು.

**ಸಮಾಜ ವಿಜ್ಞಾನಗಳಿಗೆ ಉದಾಹರಣೆಗಳು:-** ಇತಿಹಾಸ, ತತ್ವಶಾಸ್ತ್ರ, ರಾಜ್ಯಶಾಸ್ತ್ರ, ಅರ್ಥಶಾಸ್ತ್ರ, ಮಾನವಶಾಸ್ತ್ರ, ಸಮಾಜಶಾಸ್ತ್ರ ಇತ್ಯಾದಿ ಇವು ಸಮಾಜ ವಿಜ್ಞಾನಗಳ ವರ್ಗಕ್ಕೆ ಸೇರಿವೆ.

### ಭೌತ ಹಾಗೂ ಸಮಾಜ ವಿಜ್ಞಾನಗಳ ನಡುವಿನ ವ್ಯತ್ಯಾಸಗಳು (Differences between Physical and Social Sciences)

ಭೌತ ಹಾಗೂ ಸಮಾಜ ವಿಜ್ಞಾನಗಳು ಅನುಕ್ರಮವಾಗಿ ಭೌತ ಹಾಗೂ ಸಾಮಾಜಿಕ ಪ್ರಪಂಚಗಳ ಕುರಿತಾದ ಅಧ್ಯಯನ ಮಾಡುವ ಜ್ಞಾನ ಶಾಖೆಗಳು. ಅವುಗಳ ನಡುವೆ ಮೂಲಭೂತ ವ್ಯತ್ಯಾಸವಿದೆ. ಅವುಗಳ ಅಧ್ಯಯನ ವಸ್ತು ಹಾಗೂ ಅಧ್ಯಯನ ವಿಧಾನಗಳು ಬೇರೆ ಬೇರೆಯಾಗಿವೆ. ಇವುಗಳ ನಡುವಿನ ಇಂತಹ ಮುಖ್ಯ ವ್ಯತ್ಯಾಸಗಳನ್ನು ಈ ಕೆಳಕಂಡಂತೆ ಪಟ್ಟಿ ಮಾಡಿ ಹೇಳಬಹುದಾಗಿದೆ.

| ಭೌತ ವಿಜ್ಞಾನಗಳು | ಸಮಾಜ ವಿಜ್ಞಾನಗಳು |
|---|---|
| | |
| 1. ಭೌತ ವಿಜ್ಞಾನಗಳು ತಮ್ಮ ಅಧ್ಯಯನಗಳಲ್ಲಿ ವೈಜ್ಞಾನಿಕ ವಿಧಾನಗಳನ್ನು ಬಳಸಬಹುದು. ಇದರಿಂದ ನಂಬಲರ್ಹವಾದಂತಹ ಫಲಿತಾಂಶಗಳನ್ನು ಪಡೆಯುತ್ತಿವೆ. | 1. ಸಮಾಜ ವಿಜ್ಞಾನಗಳಲ್ಲಿಯೂ ವೈಜ್ಞಾನಿಕ ವಿಧಾನಗಳ ಬಳಕೆಯಲ್ಲಿ ಹಲವಾರು ತೊಂದರೆಗಳಿವೆ. ಆದ್ದರಿಂದ ಅವುಗಳು ಅಷ್ಟೊಂದು ಪರಿಣಾಮಕಾರಿಯಾಗಿಲ್ಲ. ಈ ವಿಧಾನಗಳ ಬಳಕೆ ಕೂಡ ಇತ್ತೀಚೆಗೆ ಆರಂಭವಾದವು. |
| 2. ವೈಜ್ಞಾನಿಕ ಸಂಶೋಧನೆಗಳನ್ನು ಕೈಗೊಳ್ಳಲು ಪ್ರಯೋಗಾಲಯಗಳ ಬಳಕೆ ಇಲ್ಲಿ ಸಾಧ್ಯ. ಅಂತಹ ಪ್ರಯೋಗಾಲಯಗಳ ಮೇಲೆ ಸಂಶೋಧಕನ ನಿಯಂತ್ರಣವೂ ಬಲವಾಗಿರುತ್ತದೆ. | 2. ಇಲ್ಲಿ ಪ್ರಯೋಗಾಲಯಗಳೇ ಇಲ್ಲ. ಇಡಿ ಸಮಾಜವೇ ಒಂದು ಪ್ರಯೋಗಾಲಯುವಾಗಿದ್ದು ಕೇವಲ ಪ್ರಯೋಗಕ್ಕಾಗಿ ಸನ್ನಿವೇಶಗಳನ್ನು ನಿರ್ಮಿಸುವುದು ಕಷ್ಟ. |
| 3. ಇಲ್ಲಿನ ಅಧ್ಯಯನ ವಸ್ತುಗಳು ಭೌತಿಕ ಸ್ವರೂಪದಲ್ಲಿದ್ದು ವಿಜ್ಞಾನಿಯ ಪ್ರಯೋಗಗಳಿಗೆ ಒಳಪಡುತ್ತವೆ. ಅವುಗಳು ಸಂಶೋಧನೆಗೆ ಅಡ್ಡ ಬರುವುದಿಲ್ಲ ಅಥವಾ ಪ್ರತಿರೋಧ ಸೂಚಿಸುವುದಿಲ್ಲ. | 3. ಸಜೀವಿಗಳಾದ ಮಾನವರೇ ಇಲ್ಲಿನ "ಪ್ರಯೋಗದ ವಸ್ತುಗಳು" ಆದ್ದರಿಂದ, ಸಂಶೋಧಕನ ಪ್ರಯೋಗಗಳಿಗೆ ಅದು ಸಹಕರಿಸದಿರಬಹುದು ಅವುಗಳನ್ನು ವಿರೋಧಿಸಬಹುದು ಅಥವಾ ತಮ್ಮನ್ನು ಅವಲೋಕಿಸಲಾಗುತ್ತಿದೆ. ಎಂದು ತಿಳಿದಾಗ ಅವರು ಬೇರೆ ರೀತಿಯಲ್ಲಿಯೇ ವರ್ತಿಸಬಹುದು. |

| | |
|---|---|
| 4. ಭವಿಷ್ಯ ಸೂಚಕತೆ ಮತ್ತು ನಿಯಂತ್ರಣ ಇಲ್ಲಿ ಸಾಧ್ಯ. ತಮ್ಮ ಅಧ್ಯಯನ ವಸ್ತುಗಳ ಬಗ್ಗೆ ಹೆಚ್ಚಿನ ನಿಯಂತ್ರಣ ಹೊಂದಿರುವ ವಿಜ್ಞಾನಿಗಳು ಎಷ್ಟೋ ವಿಷಯಗಳ ಬಗ್ಗೆ (ಉದಾ:ಗ್ರಹಣ, ಭೂಕಂಪ, ಹವಾಮಾನ, ಇತ್ಯಾದಿ) ನಂಬಲರ್ಹ ಭವಿಷ್ಯಗಳನ್ನು ಹೇಳಬಲ್ಲರು. | 4. ಭವಿಷ್ಯ ಸೂಚಕತೆ ಹಾಗೂ ನಿಯಂತ್ರಣ ಇಲ್ಲಿ ಕಷ್ಟಸಾಧ್ಯ. ಸಮಾಜ ವಿಜ್ಞಾನಿಗಳಿಗೆ ತಮ್ಮ ಪ್ರಯೋಗ ವಸ್ತುಗಳಾದ ವ್ಯಕ್ತಿಗಳ ಮೇಲೆ ಯಾವುದೇ ನಿಯಂತ್ರಣ ಇರುವುದಿಲ್ಲ. ಮಾನವ ಸ್ವಭಾವವನ್ನು ಊಹಿಸುವುದು ಕಷ್ಟಸಾಧ್ಯ |
| 5. ಕಾರಣೀಯತೆಯು ಇಲ್ಲಿ ಹೆಚ್ಚು ಸ್ಪಷ್ಟವಾಗಿರುತ್ತದೆ. ಕಾರಣ – ಪರಿಣಾಮಗಳ ನಡುವಿನ ಸಂಬಂಧದ ಬಗ್ಗೆ ವಿಶೇಷ ಗೊಂದಲ ಇರುವುದಿಲ್ಲ. ಉದಾ: ರೋಗಗಳ ಕಾರಣಗಳು, ಜೀವಿಗಳ ಜನನ–ಮರಣಗಳ ಕಾರಣಗಳು, ಗ್ರಹಣಗಳು, ಕ್ಷಾಮ, ಪ್ರವಾಹ, ಇತ್ಯಾದಿಗಳಿಗೆ ಕಾರಣಗಳು ಮತ್ತು ಪರಿಣಾಮಗಳು ಸ್ಪಷ್ಟವಾಗಿರುತ್ತದೆ. | 5. ಕಾರಣೀಯತೆಯು ಇಲ್ಲಿ ಹೆಚ್ಚು ಅಸ್ಪಷ್ಟವಾಗಿರುತ್ತದೆ. ಕಾರಣ ಪರಿಣಾಮಗಳ ನಡುವಿನ ಪರಸ್ಪರಾವಲಂಬನೆಯು ಕೆಲವು ಸಲ ಗೊಂದಲಗಳಿಗೆ ಕಾರಣವಾಗುತ್ತದೆ.<br>ಉದಾ:– ಅನಕ್ಷರತೆಯಿಂದಾಗಿ ಬಡತನವೇ? ಅಥವಾ ಬಡತನದಿಂದಾಗಿ ಅನಕ್ಷರತೆಯೇ? ಇದನ್ನು ನಿರ್ಧರಿಸುವುದು ಹೇಗೆ? |
| 6. ಭೌತ ವಿಜ್ಞಾನದ ಅಧ್ಯಯನಗಳು ಯಾವುದೇ ನಿರ್ದಿಷ್ಟ ಕಾಲ, ದೇಶ, ಪ್ರದೇಶ, ಸಂಸ್ಕೃತಿ, ಸಮುದಾಯಗಳಿಗೆ ಮಾತ್ರ ಸೀಮಿತ ವಾದವುಗಳಲ್ಲ. ಸಾಮಾನ್ಯವಾಗಿ ಅವು ಸಾರ್ವತ್ರಿಕ ಸ್ವರೂಪದಲ್ಲಿರುತ್ತವೆ. | 6. ಸಮಾಜ ವಿಜ್ಞಾನಗಳಲ್ಲಿ ಹೆಚ್ಚಿನ ಸಂಶೋಧನೆಗಳು ನಿಗದಿತ ಕಾಲ, ಪ್ರದೇಶ, ದೇಶ, ಸಂಸ್ಕೃತಿ ಹಾಗೂ ಜನಸಮುದಾಯಗಳಿಗೆ ಸೀಮಿತವಾಗಿರುತ್ತವೆ. ಸಾಮಾನ್ಯೀಕರಣಗಳನ್ನು ಮಾಡುವ ಪ್ರಯತ್ನವನ್ನು ಇಲ್ಲಿ ನಡೆಸಬಹುದಾದರೂ ಅವು ಭೌತ ವಿಜ್ಞಾನಗಳಷ್ಟು ಸಾರ್ವತ್ರಿಕವಾಗಿರಲಾರವು. |

## 1.2.2. ಒಂದು ವಿಜ್ಞಾನವಾಗಿ ಸಮಾಜಶಾಸ್ತ್ರ, ಸಮಾಜಶಾಸ್ತ್ರ ಮತ್ತು ಸಾಮಾನ್ಯಜ್ಞಾನ (Sociology as A Science, Sociology and Commensense)

ಸಮಾಜಶಾಸ್ತ್ರದ ವೈಜ್ಞಾನಿಕ ಸ್ವರೂಪದ ಬಗೆಗಿನ ಚರ್ಚೆ ಇಂದಿಗೂ ನಡೆಯುತ್ತಲೇ ಇದೆ. ಸಮಾಜಶಾಸ್ತ್ರವು ಒಂದು ವಿಜ್ಞಾನವಾಗಿದೆಯೇ ಅಥವಾ ಇಲ್ಲವೇ ಎಂಬುದರ ಕುರಿತಾಗಿ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯಗಳಿವೆ. ಸಮಾಜಶಾಸ್ತ್ರದ ಪಿತಾಮಹ ಆಗಸ್ಟ್ ಕಾಮ್ಟ್ ಸಮಾಜಶಾಸ್ತ್ರವನ್ನು ಭೌತ ವಿಜ್ಞಾನಗಳ ನೆಲೆಯಲ್ಲಿಯೇ ಒಂದು ವಿಜ್ಞಾನವಾಗಿಸಲು ಪ್ರಯತ್ನಿಸಿದರು ಸಮಾಜಶಾಸ್ತ್ರವನ್ನು "ವಿಜ್ಞಾನಗಳ ರಾಣಿ" ("Queen of science") ಎಂದು ಪರಿಗಣಿಸಿದರು. ಸಮಾಜಶಾಸ್ತ್ರವನ್ನು ಒಂದು ಪೂರ್ಣ ಪ್ರಮಾಣದ ವಿಜ್ಞಾನವನ್ನಾಗಿ ಚಿತ್ರಿಸುವ ಕಾರ್ಯವನ್ನು ಆಗಸ್ಟ್ ಕಾಮ್‌ಟರ ನಂತರ ಬಂದ ಸ್ಪೆನ್ಸರ್, ಡರ್ಖೀಮ್, ವೇಬರ್, ಸೊರೊಕಿನ್, ಪಾರ್ಸನ್ಸ್, ಮರ್ಟನ್, ಸಿಮ್ಮೆಲ್, ಡೇವಿಸ್, ಮುಂತಾದ ಹಲವಾರು ಸಮಾಜಶಾಸ್ತ್ರಜ್ಞರು ಪ್ರಯತ್ನಿಸಿದ್ದರು. ಇಂದಿನ ಬಹುತೇಕ ಸಮಾಜಶಾಸ್ತ್ರಜ್ಞರೂ ಕೂಡ ಸಮಾಜಶಾಸ್ತ್ರವನ್ನು ಒಂದು "ವಿಜ್ಞಾನ"ವೆಂದೇ ಪರಿಗಣಿಸುತ್ತಾರೆ.

### ವಿಜ್ಞಾನದ ಮೂರು ಮುಖ್ಯ ಆಧಾರಾಂಶಗಳು: (Three Major Criteria of Science ):-

ಆಗ್‌ಬರ್ನ್ ಎಂಬ ಅಮೇರಿಕದ ಸಮಾಜಶಾಸ್ತ್ರಜ್ಞರ ಅಭಿಪ್ರಾಯದಲ್ಲಿ ಸಮಾಜಶಾಸ್ತ್ರವು ನಿಶ್ಚಿತವಾಗಿಯೂ

ಒಂದು ವಿಜ್ಞಾನವಾಗಿದೆ. ಸಮಾಜಶಾಸ್ತ್ರವನ್ನು ಒಳಗೊಂಡಂತೆ ಯಾವುದೇ ಶಾಸ್ತ್ರವನ್ನು "ವಿಜ್ಞಾನ"ವೆಂದು ಪರಿಗಣಿಸಬೇಕಾದರೆ ಅದನ್ನು ಈ ಕೆಳಗಿನಮುಖ್ಯ ಮಾನದಂಡಗಳಿಂದ ಅಳೆಯಬೇಕಾಗುವುದು.

1. ನಂಬಲರ್ಹವಾದ ಜ್ಞಾನ (Reliability of Knowledge)
2. ಜ್ಞಾನದ ಸಂಘಟನೆ (Organisation of Knowledge)
3. ವೈಜ್ಞಾನಿಕ ವಿಧಾನ (Scientific Method)

### ನಂಬಲರ್ಹವಾದ ಜ್ಞಾನ (Reliability of Knowledge):-

ಯಾವುದೇ ವಿಜ್ಞಾನವಾದರೂ ಜ್ಞಾನವನ್ನು ಅವಲಂಬಿಸಿರುತ್ತದೆ. ಈ ನಿಟ್ಟಿನಲ್ಲಿ ಸಮಾಜಶಾಸ್ತ್ರವು ಜನಸಂಖ್ಯೆ, ಸಾಮಾಜಿಕ ಸಮೂಹಗಳು, ಸಮೂಹದ ನಡವಳಿಕೆ, ಸಾಮಾಜಿಕ ಸಂಸ್ಥೆಗಳ ವಿಕಾಸ, ಕುಟುಂಬ, ಸಾಮಾಜಿಕ ಪರಿವರ್ತನೆ, ಸಾಮಾಜಿಕ ಸ್ತರ ವಿನ್ಯಾಸ ಮುಂತಾದ ಹಲವಾರು ವಿಷಯಗಳಿಗೆ ಸಂಬಂಧಿಸಿದಂತೆ ಮಾಡಿರುವ ಅಧ್ಯಯನಗಳು ನಿಜಕ್ಕೂ ಹೆಚ್ಚು ನಂಬಲರ್ಹವಾಗಿದೆ.

### ಜ್ಞಾನದ ಸಂಘಟನೆ (Organisation of Knowledge):-

ಪರಸ್ಪರ ಸಂಬಂಧ ಹಾಗೂ ಜೋಡಣೆಯಿಲ್ಲದ ಸತ್ಯಸಂಗತಿಗಳ ಸಂಗ್ರಹವು ವಿಜ್ಞಾನ ಎನಿಸಿಕೊಳ್ಳಲಾರದು. ಯಾವುದೇ ವಿಜ್ಞಾನಕ್ಕೆ ಸಂಬಂಧಿಸಿದ ಸಂಗ್ರಹಿತ ಜ್ಞಾನವು ಸಂಘಟಿತವಾಗಿರಬೇಕು. ವ್ಯವಸ್ಥಿತವಾಗಿರಬೇಕು. ಸಂಗ್ರಹಿತ ಜ್ಞಾನದ ವಿವಿಧಾಂಶಗಳ ನಡುವಣ ಪರಸ್ಪರ ಕ್ರಮಬದ್ಧವಾದ ಸಂಬಂಧವನ್ನೇ ನಾವು ಇಲ್ಲಿ "ಸಂಘಟಿತ ಜ್ಞಾನ" ಅಥವಾ "ವ್ಯವಸ್ಥಿತ ಜ್ಞಾನ" ಎಂದು ಕರೆದಿರುವುದು.

ಸಂಗ್ರಹಿತ ಜ್ಞಾನದ ಸಂಘಟಿತತೆಯ ದೃಷ್ಟಿಯಿಂದಲೂ ಸಮಾಜಶಾಸ್ತ್ರವನ್ನು ಒಂದು ವಿಜ್ಞಾನವೆನ್ನಬಹುದು. ಸಾಮಾಜಿಕ ಕ್ಷೇತ್ರದಲ್ಲಿನ ಅನೇಕ ವಿದ್ಯಮಾನಗಳಿಗೆ ಸಂಬಂಧಿಸಿದಂತೆ ***(ಉದಾ.***ಕುಟುಂಬ, ಬಂಧುತ್ವ, ವಿವಾಹ ವಿಚ್ಛೇಧ, ಜನಾಂಗವಾದ, ಮುಂತಾದ ಸಂಗತಿಗಳ ಮೇಲೆ ಸಂಗ್ರಹಿಸಿದ ಜ್ಞಾನವು ವ್ಯವಸ್ಥಿತವಾಗಿದೆ.

### ವೈಜ್ಞಾನಿಕ ವಿಧಾನ: (Scientific Method):-

**(a) ಪ್ರಯೋಗಾಲಯದಲ್ಲಿ ನಡೆಸುವಂತಹ ಪ್ರಯೋಗಗಳು ಇಲ್ಲಿ ಅಸಾಧ್ಯ (Laboratory Experiments are Not Possible here):-**

ಜ್ಞಾನದ ಶಾಖೆಯೊಂದು ವಿಜ್ಞಾನವೆನಿಸಿಕೊಳ್ಳಬೇಕಾದರೆ ಅದು ವೈಜ್ಞಾನಿಕ ವಿಧಾನವನ್ನು ತನ್ನ ಅಧ್ಯಯನ ಹಾಗೂ ಸಂಶೋಧನೆಗಳಲ್ಲಿ ಅನುಸರಿಸಬೇಕಾಗುತ್ತದೆ. ವೈಜ್ಞಾನಿಕ ವಿಧಾನವು ಕೆಲವು ನಿಶ್ಚಿತ ಹಂತಗಳನ್ನು ಒಳಗೊಂಡಿದೆ. ವೈಜ್ಞಾನಿಕ ವಿಧಾನವು ಅವಲೋಕನೆಯ ಆಧಾರದಿಂದ ಸ್ಥಾಪಿಸಲ್ಪಟ್ಟ ಪೂರ್ವ ಸಿದ್ಧಾಂತದಿಂದ ಆರಂಭಗೊಳ್ಳುವುದು. ಈ ಪೂರ್ವ ಸಿದ್ಧಾಂತ ಅಥವಾ ಪ್ರಾಕ್ ಕಲ್ಪನೆಯನ್ನು (hypothesis) ಪ್ರಯೋಗಗಳ ಮುಖಾಂತರ ಪ್ರಮಾಣೀಕರಿಸಲಾಗುತ್ತದೆ.

ಸಮಾಜಶಾಸ್ತ್ರವು ತನ್ನ ಅಧ್ಯಯನ ಹಾಗೂ ಸಂಶೋಧನೆಗಳಲ್ಲಿ ವೈಜ್ಞಾನಿಕ ವಿಧಾನದ ಜೊತೆಗೆ ಇತರ ವಿಧಾನಗಳನ್ನೂ (ಉದಾ: ಸಂಖ್ಯಾಶಾಸ್ತ್ರ ವಿಧಾನ, ಐತಿಹಾಸಿಕ ವಿಧಾನ, ತುಲಾನಾತ್ಮಕ ವಿಧಾನ, ಕ್ರಿಯಾತ್ಮಕ

ವಿಧಾನ, ಏಕವಿಷಯಕ ಅಧ್ಯಯನ ವಿಧಾನ) ಅನುಸರಿಸುವುದು. ಈ ವಿಧಾನಗಳ ಬಳಕೆಯಿಂದಾಗಿ ಅದು ಇಂದು ಹೆಚ್ಚು ಹೆಚ್ಚು ಕ್ರಮಬದ್ದವಾಗಿ ಬೆಳೆಯುತ್ತಿದೆ.

ಅಂತಿಮವಾಗಿ ಹೇಳುವುದಿದ್ದರೆ, ಸಮಾಜಶಾಸ್ತ್ರವು ಒಂದು ವಿಜ್ಞಾನವೇ ಆಗಿದೆ. ವಿಜ್ಞಾನವೆನ್ನುವುದು ಸತ್ಯಶೋಧದ ಮಾರ್ಗವೆನ್ನುವುದಾದರೆ, ಅದಕ್ಕೆ ಪ್ರಯೋಗಾಲಯ ಪರೀಕ್ಷಾ ವಿಧಾನವನ್ನು ಮಾತ್ರ ಬಳಸಬೇಕೆಂಬ ನಿಯಮವಿಲ್ಲ. ಬೇರೆ ಬೇರೆ ವಿಧಾನಗಳಿಂದಲೂ ಸತ್ಯಶೋಧನೆ ಸಾಧ್ಯ. ಸಮಾಜಶಾಸ್ತ್ರವು ತನ್ನದೇ ಆದ ವಿಶ್ವಾಸಯೋಗ್ಯವಾದ ಅನೇಕ ವಿಧಾನಗಳನ್ನು ಹೊಂದಿದೆ. ಈ ವಿಧಾನಗಳನ್ನು ಬಳಸಿಕೊಂಡು ಸಂಶೋಧನೆ ಮಾಡಿದರೆ ಸಮಾಜಶಾಸ್ತ್ರವೂ ವಿಜ್ಞಾನವೆನ್ನಿಸುವುದು.

## ಸಮಾಜಶಾಸ್ತ್ರ ಮತ್ತು ಸಾಮಾನ್ಯಜ್ಞಾನ (Sociology and Commonsense) :

ಹಲವಾರು ಸಾಮಾಜಿಕ ಸಂದರ್ಭಗಳಲ್ಲಿ ಸಮಾಜಶಾಸ್ತ್ರ ನಮ್ಮೆಗೆಲ್ಲ ಚಿರಪರಿಚಿವಾದ ವಿವಿಧ ಸಾಮಾಜಿಕ ಘಟನೆಗಳ ಬಗ್ಗೆ ಅಧ್ಯಯನ ಮಾಡುತ್ತದೆ ಎಂದು ಪರಿಗಣಿಸಲಾಗಿತ್ತು. ನಾವೆಲ್ಲ ದೈನಂದಿನ ಜೀವನದಲ್ಲಿ ಅನುಭವಿಸುವ ಸಾಮಾಜಿಕ ಸಂಗತಿಗಳನ್ನು ವಿಶ್ಲೇಷಿಸುತ್ತದೆ ಹಾಗೆಯೇ ಇವೆಲ್ಲಾ ಸಾಮಾಜಿಕ ಸಂಗತಿಗಳು ನಮ್ಮದೇ ಚಿರಪರಿಚಿತವಾದ ಜೀವನ ಜ್ಞಾನಭಂಡಾರವಾಗಿದೆ.ಉದಾ;– ಕೌಟುಂಬಿಕ ಒಡನಾಟ, ವೈವಾಹಿಕ ಕ್ರಿಯಾವಿಧಿಗಳು ಮತ್ತು ಸಂಬಂಧಗಳು ಧಾರ್ಮಿಕ ಆಚರಣೆಗಳು, ದೈನಂದಿನ ಸಾಮಾಜಿಕ ಸಮಸ್ಯೆಗಳು,ದುಡಿಮೆಯ ಕ್ಷೇತ್ರಗಳಲ್ಲಿ ವಿವಿಧ ಪಾತ್ರ ನಿರ್ವಹಣೆ– ಹೀಗೆ ನಾನಾ ಸಾಮಾಜಿಕ ಸಂಗತಿಗಳು ಬಗ್ಗೆ ಬೆಳಕು ಚೆಲ್ಲುತ್ತದೆ. ಇವೆಲ್ಲಾ ಸಾಮಾಜಿಕ ಸಂಗತಿಗಳು ಕೆಲವೊಮ್ಮೆ ನಿಖರತೆ ಮತ್ತು ಸಮರೂಪತೆ ಆಧಾರವಾಗಿಯಿರುತ್ತದೆ. ಆದರೆ ಕೆಲವೊಮ್ಮೆ ಅದೇ ನಿಖರತೆ ಮತ್ತು ಸಮರೂಪತೆಯನ್ನು ಹೊಂದಿರದ ವಿಸ್ಮಯ ಮತ್ತು ಅಚ್ಚರಿಯನ್ನು ಮೂಡಿಸುತ್ತದೆ. ವಿವಿಧ ಸಾಮಾಜಿಕ ಸಂಗತಿಗಳ ಹೀಗೆ ಎಂಬುದು ಸಮಾಜದ ಸದಸ್ಯರ ಸಾಮಾನ್ಯವಾದ ನಂಬಿಕೆಯಾಗಿರುತ್ತದೆ ಎಂಬ ಭಾವನೆಯನ್ನು ಹಂಚಿಕೊಂಡಿರುತ್ತರೆ. ಜಗತ್ತಿನ ಭೌಗೋಳಿಕ, ಸಾಂಸ್ಕೃತಿಕ, ಧಾರ್ಮಿಕ, ಕೌಟುಂಬಿಕ, ವೈವಾಹಿಕ–ಹೀಗೆ ಹಲವಾರು ಅಂಶಗಳು ಹೀಗಿರುತ್ತದೆ. ಮತ್ತು ಹೀಗೆಯಿರಬೇಕೆಂಬ ನಂಬಿಕೆಯನ್ನು ಜನರು ಹಂಚಿಕೊಂಡಿಯಿರುವುದೇ ಸಾಮಾನ್ಯ ಜ್ಞಾನವಾಗಿದೆ. ಇವೆಲ್ಲಾ ಸಮಾಜದ ಸದಸ್ಯರು ಸರ್ವೇ ಸಾಮಾನ್ಯವಾಗಿ ಹಂಚಿಕೊಂಡಿಯಿರುವ ಸಮಗ್ರ ಮನೋಭಾವನೆಯಾಗಿದೆ. ಇಂತಹ ಸಾಮಾನ್ಯಜ್ಞಾನದಿಂದ ತಮ್ಮ ಸುತ್ತಮುತ್ತಲಿನ ನೈಸರ್ಗಿಕ ಮತ್ತು ಸಾಮಾಜಿಕ ಸಂಗತಿಗಳನ್ನು ವಿಶ್ಲೇಷಿಸಿ ಅರ್ಥೈಸಿ ಕೊಂಡಿರುತ್ತಾರೆ.

ಉದಾ;– ಪ್ರಾಚೀನ ಕಾಲದಲ್ಲಿ "ವಿಶ್ವ" ವೂ ಚಪ್ಪಟೆಯಾಗಿದೆ ಎಂಬ ಮನೋಭಾವನೆಯನ್ನು ಹಂಚಿಕೊಂಡಿದರು, ಇಂದಿಗೂ ಕೆಲವು ಮಂದಿ ಈ ದೃಷ್ಟಿಕೋನವನ್ನು ಸಮರ್ಥಿಸಿಕೊಂಡಿದ್ದಾರೆ. ಇಂತಹ ದೃಷ್ಟಿಕೋನವನ್ನು ಪೈತಗೋರಸ್ ಮತ್ತು ಅರಿಸ್ಟಾಟಲ್‌ರವರು ದಿಕ್ಕರಿಸುತ್ತಾ ವಿಶ್ವವು ದುಂಡಾಗಿದೆ ಎಂಬುದನ್ನು ಸ್ಪಷ್ಟಪಡಿಸಿದ್ದಾರೆ. ಸಾವಿರಾರು ವರ್ಷಗಳಿಂದ ಜನರ ಸಾಮಾನ್ಯಜ್ಞಾನ ಸಂಗ್ರಹಗೊಂಡಿದೆ. ಅವುಗಳಲ್ಲಿ ನೈಸರ್ಗಿಕ ಮತ್ತು ಸಾಮಾಜಿಕ ಸಂಗತಿಗಳ ಅಂಶವಾಗಿದೆ. ಉದಾ;– ದೊಡ್ಡ ವಸ್ತುಗಳು ಚಿಕ್ಕ ವಸ್ತುಗಳಿಕ್ಕಿಂತ ಹೆಚ್ಚು ರಭಸವಾಗಿ ಕೆಳಗೆ ಬೀಳುತ್ತದೆ, ದೈಹಿಕ ಚಳಿಯು ಶೀತಲ ವಾತಾವರಣದಿಂದ ಸಂಭವಿಸುತ್ತದೆ, ಸ್ತ್ರೀಯರಿಗೆ ಸಂತಾನ ಅಭಿಲಾಷೆ ಅಂತರಿಕ ಬಯಕೆಯಾಗಿದೆ, ಆಧುನಕ ಶಿಕ್ಷಣ ವ್ಯಾಪಕವಾಗಿ ಹರಡಿದಂತೆ ವರದಕ್ಷಿಣೆ ಮತ್ತು ಜಾತಿ, ಅಸಮಾನತೆ ಕ್ಷೀಣಿಸುತ್ತದೆ ಆದರೆ ಇಂದಿನ ಸಾಮಾಜಿಕ ಸನ್ನಿವೇಶಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ಇಂತಹ ಮನೋಭಾವನೆಗಳು ಅಸತ್ಯವಾಗಿವೆ ಎಂಬುದು ಭಸವಾಗಿದೆ. ಒಟ್ಟಾರೆ ಸಾಮಾನ್ಯಜ್ಞಾನವು ಕಾಲಕ್ರಮೇಣ ಯಾವಾಗಲೂ "ಸತ್ಯ" ಮತ್ತು "ಪ್ರಸಕ್ತ" ಎನ್ನಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ ಎಂಬುದು ಸೂಕ್ಷ್ಮ ಅವಲೋಕನಗಳು ಸ್ಪಷ್ಟ ಪಡಿಸಿದೆ. ಸಾಮಾನ್ಯಜ್ಞಾನ ಕೆಲವೊಮ್ಮೆ ಸುಳ್ಳು ಮತ್ತು ಅಪ್ರಸಕ್ತವೆಂಬ ಫಲಿತಾಂಶಗಳನ್ನು ನೀಡುತ್ತದೆ. ಬಹುತೇಕ ಸಾಮಾನ್ಯಜ್ಞಾನಗಳ ಧೃಡೀಕರಣಗಳು,

ಊಹೆಗಳು, ಅಜ್ಞಾನ, ಪೂರ್ವಗ್ರಹ ಪೀಡಿತ, ತಪ್ಪು ವಿಶ್ಲೇಷಣೆ, ವಿಚಿತ್ರ ಆಕಸ್ಮಿಕ ಸಂಗತಿ, ಕಾಕತಾಳೀಯ ಮುಂತಾದಗಳ ಅಧಾರವಾಗಿದೆ.

ಜಗತ್ತಿನ ವಿವಿಧ ಸಮಾಜಗಳನ್ನು ಅಧ್ಯಯನ ನೆಡೆಸುವಾಗ ಸಾಮಾನ್ಯಜ್ಞಾನವನ್ನು ಸಾರ್ವತ್ರೀಕರಣೇಸಲು ಸಾಧ್ಯವಿಲ್ಲ, ಅಂತಹ ಸಂದರ್ಭಗಳಲ್ಲಿ ಹಾದಿ ತಪ್ಪಿಸುವ ಪ್ರಯತ್ನವು ನಡೆಯುತ್ತದೆ. ಏಕೆಂದರೆ ಯಾವುದೇ ವ್ಯಕ್ತಿಗಳು ತಮ್ಮ ಸಾಮಾಜಿಕ ವ್ಯವಸ್ಥೆಯ ಹಿನ್ನಲೆಯಲ್ಲಿ ಇನ್ನಿತರ ಸಮಾಜವನ್ನು ಅರ್ಥೈಸಿಕೊಳ್ಳಲು ಪ್ರಯತ್ನಿಸುತ್ತಾರೆ. ಉದಾ;– ಗೂಬೆಯನ್ನು ಶುಭಶಕುನವೆಂದು ಪರಿಗಣಿಸುವ ಸಮೂಹಗಳು, ಇಲಿಗಳನ್ನು ಆರಾಧಿಸುವ ಜನಸಮೂಹ ಹಾಗೂ ಅದಕ್ಕಾಗಿಯೇ ದೇವಾಲಯವನ್ನು ನಿರ್ವಹಿಸಿರುವ ಭಕ್ತರ ವೃಂದ, ಲೈಂಗಿಕ ಕ್ರಿಯೆಗಳಿಗೆ ಮುಕ್ತವಾಗಿರುವ ವೈವಾಹಿಕ ಪದ್ಧತಿಗಳು – ಹೀಗೆ ಹಲವಾರು ವಿಸ್ಮಯ ಸಂಗತಿಗಳು– ನಮ್ಮದೇ ಸಾಮಾನ್ಯ ಜ್ಞಾನಕ್ಕಿಂತ ವಿಭಿನ್ನವಾಗಿದ್ದು ಅಚ್ಚರಿ ಮೂಡಿಸುತ್ತದೆ. ಸಮಾಜಶಾಸ್ತ್ರಜ್ಞರು ಇನ್ನಿತರ ವಿಜ್ಞಾನಗಳಂತೆ ಯಾವುದೇ ಸಾಮಾಜಿಕ ಸಂಗತಿಯನ್ನು ಸತ್ಯಾಂಶವೆಂದು ಸುಲಭವಾಗಿ ಪರಿಗಣಿಸುವುದಿಲ್ಲ ಏಕೆಂದರೆ ಪ್ರತಿಯೊಬ್ಬರಿಗೂ ಸಾಮಾಜಿಕ ಸಂಗತಿಗಳ ವಾಸ್ತವಿಕತೆ ಬಗ್ಗೆ ಸಂಪೂರ್ಣ ಅರಿವು ಹೊಂದಿರುತ್ತಾರೆ ಆದರೆ ಪ್ರತಿಯೊಂದು ಸಾಮಾಜಿಕ ಸಂಗತಿಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದ ನಂತರ ಧೃಡೀಕರಣೆದೊಂದಿಗೆ ದಾಖಲಿಸುವ ಅನಿವಾರ್ಯಯತೆ ಇದೆ. ಸಮಾಜಶಾಸ್ತ್ರವೂ ಸಾಮಾಜಿಕದಲ್ಲಿ ಒಳಗೊಂಡಿಯಿರುವ ವಿವಿಧ ಸಾಮಾನ್ಯಜ್ಞಾನದ ಮೂಲ ಪ್ರಭವ ಮತ್ತು ಸತ್ಯಾಂಶಗಳನ್ನು ಅರ್ಥೈಸಿಕೊಂಡು ವಿಶ್ಲೇಷಿಸುವ ಹೊಣೆಗಾರಿಕೆಯನ್ನು ಹೊಂದಿದೆ.

## 1.4 ಸಮಾಜಶಾಸ್ತ್ರದ ಅಧ್ಯಯನ ವಿಷಯ (Subject Matter of Sociology)

ಸಮಾಜಶಾಸ್ತ್ರವು ಬಹಳ ಕಿರಿಯ ಸಮಾಜ ವಿಜ್ಞಾನವೆನಿಸಿಕೊಂಡಿದ್ದರೂ ಅದು ತನ್ನದೇ ಆದ ಅಧ್ಯಯನ ವಿಷಯ ಹಾಗೂ ಅಧ್ಯಯನ ಕ್ಷೇತ್ರವನ್ನು ಹೊಂದಿದೆ. "ಸಮಾಜಶಾಸ್ತ್ರ" ಎಂಬ ಪದವೇ ಸೂಚಿಸುವಂತೆ ಸಮಾಜವನ್ನು ಅಧ್ಯಯನ ಮಾಡುವುದೇ ಅದರ ಕಾರ್ಯ. ಮತ್ತು ಮಾನವನ ಸಾಮಾಜಿಕ ಜೀವನದ ಅಧ್ಯಯನವೇ ಅದರ ಗುರಿ. ಮಾನವನ ಸಾಮಾಜಿಕ ಜೀವನವು ಸಂಕೀರ್ಣವಾದುದು ಬೇರೆ–ಬೇರೆ ಸಮಾಜ ವಿಜ್ಞಾನಗಳು ಈ ಸಾಮಾಜಿಕ ಜೀವನದ ಬೇರೆ–ಬೇರೆ ಅಂಶಗಳನ್ನು ಕುರಿತು ಆಳವಾಗಿ ಅಧ್ಯಯನವನ್ನು ಮಾಡುತ್ತವೆ. ಉದಾಹರಣೆಗೆ: ರಾಜ್ಯಶಾಸ್ತ್ರವು ಮಾನವನ ರಾಜಕೀಯ ಚಟುವಟಿಕೆಗಳನ್ನು ಅಧ್ಯಯನ ಮಾಡುವುದಾದರೆ ಅರ್ಥಶಾಸ್ತ್ರವು ಆತನ ಆರ್ಥಿಕ ಚಟುವಟಿಕೆಯನ್ನು ಅಭ್ಯಾಸ ಮಾಡುತ್ತದೆ. ಆದರೆ ಸಮಾಜಶಾಸ್ತವು ಮಾತ್ರ ಮಾನವನ ಸಾಮಾಜಿಕ ಜೀವನದ ಸಮಗ್ರ ಅಧ್ಯಯನವನ್ನು ಮಾಡುವುದರಿಂದ ಸಮಾಜಶಾಸ್ತ್ರದ ಅಧ್ಯಯನ ಕ್ಷೇತ್ರವು ಬಹಳ ವಿಸ್ತಾರವಾದುದು.

ಸಮಾಜಶಾಸ್ತ್ರದ ಅಧ್ಯಯನವು ಸರ್ವವ್ಯಾಪಕವಾಗಿ ಬೆಳೆಯುತ್ತಿದೆ. ಮತ್ತು ಅದರ ಅಧ್ಯಯನದ ಕ್ಷೇತ್ರ ಕೂಡ ವಿಸ್ತಾರಗೊಳ್ಳುತ್ತಿದೆ. ಸಮಾಜಶಾಸ್ತ್ರದ ಅಧ್ಯಯನ ವಿಷಯಗಳ ಬಗ್ಗೆ ಅಲೆಕ್ಸ್ ಇಂಕಲ್ಸ್‌ರವರು **"ವಾಟ್ ಈಸ್ ಸೋಸಿಯಾಲಜಿ?"** ಎಂಬ ಕೃತಿಯಲ್ಲಿ ಅವರು ನೀಡಿರುವ ವಿವರಣೆಯ ಆಧಾರದ ಮೇಲೆ ಸಮಾಜಶಾಸ್ತ್ರದ ಮುಖ್ಯವಾದ ಅಧ್ಯಯನ ವಿಷಯಗಳನ್ನು ಈ ಕೆಳಕಂಡಂತೆ ಪಟ್ಟಿ ಮಾಡಬಹುದು.

### 1. ಮಾನವ ಸಮಾಜ ಮತ್ತು ಸಂಸ್ಕೃತಿಯ ಸಮಾಜಶಾಸ್ತ್ರೀಯ ವಿಶ್ಲೇಷಣೆ:

ಸಮಾಜಶಾಸ್ತ್ರದ ಮುಖ್ಯ ಉದ್ದೇಶವು ಸಮಾಜ ಮತ್ತು ಸಂಸ್ಕೃತಿಗಳ ಬಗ್ಗೆ "ಸಮಾಜಶಾಸ್ತ್ರೀಯ ದೃಷ್ಟಿಕೋನ" ಯಿಂದ ಕೂಡಿದ ವಿಶ್ಲೇಷಣೆಯೊಂದನ್ನು ನೀಡುವುದಾಗಿರುತ್ತದೆ. ಸಮಾಜ ಮತ್ತು ಸಂಸ್ಕೃತಿಗಳ ವಿಕಾಸಾತ್ಮಕ

ಬೆಳವಣಿಗೆ ಮತ್ತು ಈ ಬೆಳವಣಿಗೆಯ ಪ್ರಕ್ರಿಯೆಯಲ್ಲಿನ ಪ್ರಮುಖವಾದ ಹಂತಗಳ ಕುರಿತಾಗಿಯೂ ಅದು ಅಧ್ಯಯನ ಮಾಡುವುದು. ಸಮಾಜದ ಐತಿಹಾಸಿಕವಾಗಿ ರೂಪಾಂತರಗೊಳ್ಳುತ್ತಾ ಬಂದಿರುವುದಕ್ಕೆ ಕಾರಣವಾದ ಶಕ್ತಿಗಳ ಬಗ್ಗೆಯೂ ಅದು ವಿಶ್ಲೇಷಿಸುವುದು. ಸಮಾಜಶಾಸ್ತ್ರವು ಇಂತಹ ವಿಶ್ಲೇಷಣಾತ್ಮಕ ಅಧ್ಯಯನದಲ್ಲಿ ವೈಜ್ಞಾನಿಕ ವಿಧಾನವನ್ನು ಬಳಸುವುದರ ಅಗತ್ಯದ ಬಗ್ಗೆ ವಿಶೇಷ ಒತ್ತು ನೀಡುವುದು.

### 2. ಸಾಮಾಜಿಕ ಜೀವನದ ಮೂಲಭೂತ ಘಟಕಗಳ ಅಧ್ಯಯನ:

ನಮ್ಮ ಸಾಮಾಜಿಕ ಜೀವನದ ಬಹು ಮುಖ್ಯವಾದ ಘಟಕಗಳೆಲ್ಲವೂ ಇಲ್ಲಿ ಅಧ್ಯಯನದ ವಿಷಯಗಳಾಗುತ್ತವೆ. ಉದಾ: ಸಾಮಾಜಿಕ ಕ್ರಿಯೆಗಳು, ಸಾಮಾಜಿಕ ಸಂಬಂಧಗಳು, ವ್ಯಕ್ತಿಯ ವ್ಯಕ್ತಿತ್ವ, ಎಲ್ಲಾ ಬಗೆಯ ಸಮೂಹಗಳು ಗ್ರಾಮ, ನಗರ, ಹಾಗೂ ಆದಿವಾಸಿ ಸಮುದಾಯಗಳು, ಸಂಘಗಳು, ಸಂಘಟನೆಗಳು, ಮತ್ತು ಜನಸಂಖ್ಯೆ ಎಲ್ಲವೂ ಸಮಾಜಶಾಸ್ತ್ರದ ವ್ಯಾಪ್ತಿಗೆ ಬರುತ್ತದೆ.

### 3. ಮೂಲಭೂತ ಸಾಮಾಜಿಕ ಸಂಸ್ಥೆಗಳ ಅಧ್ಯಯನ:

ಮಾನವನ ಸಾಮಾಜಿಕ ಜೀವನಕ್ಕೆ ಆಧಾರಪ್ರಾಯವಾಗಿರುವ ಪ್ರಾಥಮಿಕ ಸಂಸ್ಥೆಗಳು, ಅವುಗಳ ಬೆಳವಣಿಗೆ, ರಚನೆ, ಮತ್ತು ಕಾರ್ಯ ಇವು ಇಲ್ಲಿನ ಅಧ್ಯಯನದ ಕೇಂದ್ರ ವಿಷಯಗಳಾಗಿರುತ್ತವೆ. ಉದಾ: ಕುಟುಂಬ ಬಂಧುತ್ವ, ಧರ್ಮ, ಆಸ್ತಿ, ಆರ್ಥಿಕ, ರಾಜಕೀಯ, ಶೈಕ್ಷಣಿಕ, ವೈಜ್ಞಾನಿಕ, ಮನೋರಂಜನಾತ್ಮಕ, ಕಾನೂನಾತ್ಮಕ ಹಾಗೂ ಸಾಮಾಜಿಕ ಕಲ್ಯಾಣಾತ್ಮಕ ರೂಪದ ಸಂಸ್ಥೆಗಳು ಈ ವಲಯದಲ್ಲಿ ಬರುತ್ತವೆ.

### 4. ಮೂಲಭೂತ ಸಾಮಾಜಿಕ ಪ್ರಕ್ರಿಯೆಗಳ ಅಧ್ಯಯನ:

ನಮ್ಮ ಸಾಮಾಜಿಕ ಜೀವನವನ್ನು ನಾನಾ ರೂಪದ ಸಾಮಾಜಿಕ ಪ್ರಕ್ರಿಯೆಗಳು ನಿರ್ವಹಿಸುವ ಮಹತ್ತರವಾದ ಪಾತ್ರವನ್ನು ಅವಗಣಿಸುವಂತಿಲ್ಲ. ಉದಾ: ಸಹಕಾರ, ಸ್ಪರ್ಧೆ, ಸಂಘರ್ಷ, ಹೊಂದಾಣಿಕೆ, ಸ್ವಾಂಗೀಕರಣ ಇವುಗಳ ಜೊತೆಗೆ ಸಂವಹನ, ಸಾಮಾಜಿಕ ಪರಿವರ್ತನೆ, ಸಾಮಾಜಿಕ ಪ್ರಭೇದ, ಮತ್ತು ಸಾಮಾಜಿಕ ಸ್ತರವಿನ್ಯಾಸ, ಸಾಮಾಜೀಕರಣ, ತತ್ವಬೋಧನೆ, ಸಾಮಾಜಿಕ ನಿಯಂತ್ರಣ, ಸಾಮಾಜಿಕ ಅಪವರ್ತನೆ, ಸಾಮಾಜಿಕ ಸಮಗ್ರತೆ ಮುಂತಾದ ಪ್ರಕ್ರಿಯೆಗಳೂ ಸಮಾಜಶಾಸ್ತ್ರೀಯ ಅಧ್ಯಯನದ ಪ್ರಮುಖ ವಿಷಯಗಳಾಗಿವೆ.

ಅಲೆಕ್ಸ್ ಇಂಕೆಲಸ್ ಉಲ್ಲೇಖಿಸಿದಂತಹ ಈ ಮೇಲಿನ ನಾಲ್ಕು ಅಂಶಗಳ ಜೊತೆಗೆ ಇನ್ನೂ ಮೂರು ವಿಷಯಗಳ ಬಗ್ಗೆಯೂ ಇತ್ತೀಚೆಗೆ ಸಮಾಜಶಾಸ್ತ್ರೀಯ ಅಧ್ಯಯನಗಳಲ್ಲಿ ವಿಶೇಷ ಒತ್ತು ನೀಡಲಾಗುತ್ತದೆ. ಅವು ಈ ಕೆಳಗಿನಂತಿವೆ.

### 5. ವಿಶೇಷಾಧ್ಯಯನ ಕ್ಷೇತ್ರಗಳ ಶೋಧನೆ:

ಸಮಾಜಶಾಸ್ತ್ರವು ವ್ಯಾಪಕವಾಗಿ ಬೆಳೆಯುತ್ತಿರುವ ವಿಜ್ಞಾನವಾಗಿದ್ದು, ಮಾನವನ ಸಾಮಾಜಿಕ ಜೀವನದ ಬೇರೆ–ಬೇರೆ ಕ್ಷೇತ್ರಗಳನ್ನು ತನ್ನ ಅಧ್ಯಯನದ ಬೇರೆ–ಬೇರೆ ಘಟಕಗಳನ್ನಾಗಿ ಮಾಡಿಕೊಳ್ಳುತ್ತಿದೆ. ಈ ಹಿನ್ನೆಲೆಯಲ್ಲಿ ಅದು ವಿಶೇಷಾಧ್ಯಯನ ಕ್ಷೇತ್ರಗಳ ಸ್ಥಾಪನೆಗೆ ಹಾಗೂ ಬೆಳವಣಿಗೆಗೆ ಅವಕಾಶ ಕಲ್ಪಿಸಿಕೊಂಡಿದೆ. ಈಗಾಗಲೇ ಅಂತಹ ಹಲವು ಕ್ಷೇತ್ರಗಳು ಸಮಾಜಶಾಸ್ತ್ರದ ಅಧಿಕೃತ ಶಾಖೆಗಳಾಗಿ ಬೆಳವಣಿಗೆ ಹೊಂದಿದ್ದು ಸಾಕಷ್ಟು ಪ್ರಾಯೋಗಿಕ ಪ್ರಾಮುಖ್ಯತೆ ಗಳಿಸಿವೆ.

ಉದಾ: ಕುಟುಂಬ ಸಮಾಜಶಾಸ್ತ್ರ, ರಾಜಕೀಯ ಸಮಾಜಶಾಸ್ತ್ರ, ಧಾರ್ಮಿಕ ಸಮಾಜಶಾಸ್ತ್ರ, ಆರ್ಥಿಕ ಸಮಾಜಶಾಸ್ತ್ರ, ಶೈಕ್ಷಣಿಕ ಸಮಾಜಶಾಸ್ತ್ರ, ಕೈಗಾರಿಕಾ ಸಮಾಜಶಾಸ್ತ್ರ ಇವುಗಳು ಇಲ್ಲಿ ಉದಾಹರಣೆಗಳು

ಮಾತ್ರ. ಈಗಾಗಲೇ ಸುಮಾರು 50ಕ್ಕೂ ಅಧಿಕ ಶಾಖೆಗಳು ಸ್ಥಾಪನೆಗೊಂಡಿವೆ. ಇಂತಹ ಇನ್ನೂ ಅದೆಷ್ಟೋ ಕ್ಷೇತ್ರಗಳನ್ನು ಸಮಾಜಶಾಸ್ತ್ರದ ಅಧ್ಯಯನ ವ್ಯಾಪ್ತಿಗೆ ತರುವ ಸಾಧ್ಯತೆಯೂ ಸಫಲವಾಗಿದೆ.

## 21ನೇ ಶತಮಾನದಲ್ಲಿ ಸಮಾಜಶಸ್ತ್ರದ ಪ್ರಮುಖವಾದ ಅಧ್ಯಯನ ಕ್ಷೇತ್ರಗಳು (Fields of Sociology in the 21st century)

ಸಮಕಾಲೀನ ಸಮಾಜಶಸ್ತ್ರದ ವಿಸ್ತಾರವಾದ ವಿಶಿಷ್ಟತೆ ಅಧ್ಯಯನ ಕ್ಷೇತ್ರವಾಗಿದೆ. ಇದರಲ್ಲಿ ಅಸಂಖ್ಯಾತ ಶಾಖೆಗಳನ್ನು 1950ರಲ್ಲಿ ಗುರುತಿಸಲಾಗಿದೆ ಆದರೆ ಇತ್ತೀಚಿನ ಸಂಶೋಧನೆ ಮತ್ತು ಸೈದ್ಯಾಂತಿಕ ಚಿಂತನೆಗಳ ಪ್ರಭಾವದಿಂದ ಹಲವಾರು ಪ್ರಮುಖವಾದ ಅಧ್ಯಯನ ಕ್ಷೇತ್ರಗಳನ್ನು ಗುರುತಿಸಲಾಗಿದೆ.

(1) ಅಂತರ್ ವೈಯುಕ್ತಿಕ ಸಂಬಂಧಗಳು **(Interpersonal Relation)**

(2) ಗ್ರಾಮೀಣ ಮತ್ತು ನಗರ ಜೀವನ **(Rural & Urban life)**

(3) ವಿವಾಹ ಮತ್ತು ಕುಟುಂಬ

(4) ಸಾಮಾಜಿಕ ಪ್ರಭೇದ, ಸ್ತರ ವಿನ್ಯಾಸ ಮತ್ತು ಸಾಮಾಜಿಕ ಅಸಮಾನತೆ

(5) ಜಾತಿ ವ್ಯವಸ್ಥೆ( ಭಾರತಕ್ಕೆ ಸಂಬಂಧಿಸಿದ್ದಂತೆ)

(6) ಲಿಂಗಾಧಾರಿತ ವ್ಯತ್ಯಾಸಗಳು

(7) ಜನಸಂಖ್ಯಾಶಾಸ್ತ್ರ

(8) ಅಲಕ್ಷಿತ ಸಮೂಹಗಳು ಉದಾ: ದಲಿತರು **(Subaltern people)**

(9) ಆರ್ಥಿಕ ಸಮಾಜಶಾಸ್ತ್ರ

(10) ರಾಜಕೀಯ ಸಮಾಜಶಾಸ್ತ್ರ

(11) ಶೈಕ್ಷಣಿಕ ಸಮಾಜಶಾಸ್ತ್ರ

(12) ಔಪಚಾರಿಕ ಸಮಾಜಶಾಸ್ತ್ರ

(13) ಜನಾಂಗದ ಮತ್ತು ವಂಶಶಾಸ್ತ್ರ **(Ethnicity)**

(14) ಔಪಚಾರಿಕ ಸಂಘಟನೆಗಳು

(15) ಭಾಷಾವಿಜ್ಞಾನ

(16) ಅಪರಾಧಶಾಸ್ತ್ರ

(17) ವೃದ್ಧರ ಅಧ್ಯಯನ **(Gernotology)**

(18) ಸಾಮಾಜಿಕ ಪರಿವರ್ತನೆ, ಆಧುನಿಕತೆ ಮತ್ತು ಆಧುನಿಕೋತ್ತರ ಸಮಾಜ

(19) ಜಾಗತೀಕರಣ ಮತ್ತು ಅಂತರಾಷ್ಟೀಯತೆ ವ್ಯವಸ್ಥೆ

ಹೆರಲಂಬೋಸ್ ಮತ್ತು ಹೊಲಬರ್ನ್**(Haralambos, Holborn)** ತಮ್ಮ ಇತ್ತೀಚಿನ ಗ್ರಂಥ **Sociology**ಯಲ್ಲಿ ಸಮಾಜಶಾಸ್ತ್ರದ ಪ್ರಮುಖವಾದ ಅಧ್ಯಯನ ಕ್ಷೇತ್ರಗಳನ್ನು ಪಟ್ಟಿಮಾಡಿದ್ದಾರೆ.

1. ಸಂಸ್ಕೃತಿ ಮತ್ತು ಸಮಾಜ
2. ಸಾಮಾಜಿಕರಣ
3. ಸಾಮಾಜಿಕಿ ಮೌಲ್ಯಗಳು ಮತ್ತು ಸಾಮಾಜಿಕ ನಿಯಮಗಳು
4. ಸ್ತ್ರೀವಾದ
5. ಸಾಮಾಜಿಕ ಅಂತಃಕ್ರಿಯೆ ವ್ಯವಸ್ಥೆ (ಸ್ವಪ್ರಜ್ಞೆ ಮತ್ತು ಸ್ವಪ್ರಜ್ಞೆ ನಿರೂಪಣೆ ಅರ್ಥ)
6. ಆಧುನಿಕೋತ್ತರ ಸಮಾಜ.
7. ಧನಾತ್ಮಕ ಸಮಾಜಶಾಸ್ತ್ರ
8. ಸಾಮಾಜಿಕ ಕ್ರಿಯೆಯ ದೃಷ್ಟಿಕೋನ
9. ಇಂದ್ರಿಯ ಗೋಚರ ಅಧ್ಯಯನ ಶಾಸ್ತ್ರ **(Phenomenology)**

## 1.5 ಸಮಾಜಶಾಸ್ತ್ರದ ಉಪಯೋಗಗಳು (Uses of Sociology)

ಸಾಮಾಜಿಕ ವಿಜ್ಞಾನಗಳಲ್ಲಿ ಸಮಾಜಶಾಸ್ತ್ರ ಕಿರಿಯ ವಿಜ್ಞಾನವಾಗಿದ್ದರೂ ಅದರ ಉಪಯೋಗಗಳನ್ನು ಸಾರ್ವತ್ರಿಕವಾಗಿ ಗುರುತಿಸಲಾಗಿದೆ. ಪ್ರೊ॥ ಗಿಡ್ಡಿಂಗ್ಸ್ ಹೇಳುವಂತೆ, "ಸಮಾಜದಲ್ಲಿ ನಾವು ಏನಾಗಬೇಕೆಂದಿದ್ದೇವೋ ಹಾಗಾಗುವುದು ಹೇಗೆ" (Sociology tells us how to become, what we want to become) ಎಂಬುದನ್ನು ಸಮಾಜಶಾಸ್ತ್ರ ತಿಳಿಸುತ್ತದೆ. ಇಂದಿನ ಆಧುನಿಕ ಸಂಕೀರ್ಣ ಸಮಾಜಕ್ಕೆ ಸಮಾಜಶಾಸ್ತ್ರದ ಅಧ್ಯಯನವು ಹೆಚ್ಚಿನ ಪ್ರಾಯೋಗಿಕ ಮಹತ್ವವನ್ನೊಳಗೊಂಡಿದೆ. ಸಮಾಜಶಾಸ್ತ್ರ ವ್ಯಕ್ತಿ ಹಾಗೂ ಸಮಾಜಕ್ಕೆರಡಕ್ಕೂ ಉಪಯೋಗಕಾರಿಯಾಗಿದ್ದು ಅದರ ಉಪಯೋಗಗಳು ಈ ಕೆಳಗಿನಂತಿವೆ.

1. **ವ್ಯಕ್ತಿತ್ವ ಬೆಳವಣಿಗೆ (Personality development):** ಮಾನವ ಮೂಲಭೂತವಾಗಿ ಸಾಮಾಜಿಕ ಜೀವಿಯಾಗಿದ್ದಾನೆ. ಸಮಾಜದ ಬದಲಾಗುವ ಸನ್ನಿವೇಶಗಳಿಗೆ ಅವನು ಹೊಂದಿಕೊಳ್ಳಬೇಕಾಗುತ್ತದೆ. ಹೊಂದಾಣಿಕೆ ಮಾಡಿಕೊಳ್ಳುವಲ್ಲಿ ಸಮಾಜದ ಬಗೆಗಿನ ಜ್ಞಾನ ಅವನಿಗೆ ಅವಶ್ಯಕವಾಗಿದೆ. ಸಮಾಜಶಾಸ್ತ್ರವು ಸಮಾಜದ ವೈಜ್ಞಾನಿಕವಾದ ಹಾಗೂ ಸಮಗ್ರವಾದ ಜ್ಞಾನವನ್ನು ನೀಡುತ್ತದೆ. ಸಮಾಜದ ರಚನೆ, ಬೆಳವಣಿಗೆ, ಬದಲಾವಣೆ, ಸಮಸ್ಯೆಗಳು, ವ್ಯಕ್ತಿಯ ಹಕ್ಕು ಬಾಧ್ಯತೆಗಳು ಇತ್ಯಾದಿ ಅಂಶಗಳ ವೈಜ್ಞಾನಿಕ ತಿಳುವಳಿಕೆ ಮಾನವನನ್ನು ಸತ್ವಯುತವಾದ ಸದಸ್ಯನನ್ನಾಗಿ ಮಾಡುವುದರ ಜೊತೆಗೆ ಸಮರ್ಪಕ ರೀತಿಯಲ್ಲಿ ಅವನ ವ್ಯಕ್ತಿತ್ವ ಬೆಳವಣಿಗೆಗೆ ಎಡೆ ಮಾಡಿಕೊಡುತ್ತದೆ.

2. **ಮನೋಭಾವನೆಗಳ ಬದಲಾವಣೆ (Changes in attitudes) :** ನಮ್ಮ ಸಮಾಜ, ನಮ್ಮ ಧರ್ಮ, ಸಂಪ್ರದಾಯಗಳು, ನೀತಿ–ನಿಯಮಗಳು, ಸಂಸ್ಥೆಗಳು, ಮೌಲ್ಯಗಳು, ಆದರ್ಶಗಳು ಇತ್ಯಾದಿಗಳ ಬಗೆಗಿನ ವೈಚಾರಿಕ ದೃಷ್ಟಿಕೋನಗಳನ್ನು ಬೆಳೆಸಿಕೊಳ್ಳುವಲ್ಲಿ ಸಮಾಜಶಾಸ್ತ್ರ ಉಪಯುಕ್ತವಾಗಿದೆ. ಇತರ ಮಾನವ ಜೀವಿಗಳು, ಇತರ ಸಮಾಜಗಳು, ಸಮೂಹಗಳ ಬಗೆಗಿನ ನಮ್ಮ ಮನೋಭಾವನೆಗಳನ್ನು ಬದಲಾಯಿಸಿಕೊಳ್ಳುವಲ್ಲಿ ಸಮಾಜಶಾಸ್ತ್ರ ಪ್ರಮುಖ ಪಾತ್ರ ವಹಿಸುತ್ತದೆ. ಇತರರಿಗೆ ಸಂಬಂಧಿಸಿದ ಪೂರ್ವಾಗ್ರಹಪೀಡಿತ ಕಲ್ಪನೆ, ವರ್ಗ, ಜಾತಿ, ಮತ ದ್ವೇಷ, ತಪ್ಪು ಕಲ್ಪನೆಗಳು, ಅಹಂಭಾವ ಪ್ರಜ್ಞೆ ಇವುಗಳನ್ನು ನಿವಾರಿಸಿಕೊಳ್ಳುವಲ್ಲಿ ಸಮಾಜಶಾಸ್ತ್ರದ ಅಧ್ಯಯನವು ಸಹಾಯಕಾರಿಯಾಗಿದೆ.

ಒಟ್ಟಾರೆಯಾಗಿ ಸಮಾಜಶಾಸ್ತ್ರದ ಅಧ್ಯಯನವು ವಿಮರ್ಶಾತ್ಮಕವಾದ ದೃಷ್ಟಿಯನ್ನು ಬೆಳೆಸುವಲ್ಲಿ ಸಹಾಯಕಾರಿಯಾಗಿದೆ. ಇದರಿಂದ ಕೇವಲ ನಮ್ಮ ಸಮಾಜದ ಜನರೊಂದಿಗೆ ಮಾತ್ರವಲ್ಲದೇ, ಇನ್ನಿತರ ಸಮಾಜದ ಜನರೊಂದಿಗೂ ಒಳ್ಳೆಯ ಸಂಬಂಧಗಳನ್ನು ಹೊಂದಬಹುದಾಗಿದೆ.

3. **ಸಾಮಾಜಿಕ ಸಮಸ್ಯೆಗಳಿಗೆ ಪರಿಹಾರ (Solutions to social problems)**: ಪ್ರತಿಯೊಂದು ಸಮಾಜವು ತನ್ನದೇ ಆದ ಸಮಸ್ಯೆಗಳನ್ನು ಎದುರಿಸುತ್ತದೆ. ಉದಾಹರಣೆಗೆ, ಭಾರತವು ಬಡತನ, ನಿರುದ್ಯೋಗ, ಭಯೋತ್ಪಾದನೆ, ಅಪರಾಧ, ಬಾಲಾಪರಾಧ, ಕೋಮುಗಲಭೆ, ಮದ್ಯಪಾನ, ಭ್ರಷ್ಟಾಚಾರ, ಅಸ್ಪೃಶ್ಯತೆ, ಜಾತೀಯತೆ, ಜೂಜಾಟ, ಯುವ ಜನಾಂಗದ ಅಶಾಂತಿ. ವೇಶ್ಯಾವಾಟಿಕೆ, ಭಿಕ್ಷಾಟನೆ, ಮಿತಿಮೀರಿದ ಜನಸಂಖ್ಯೆ ಇನ್ನೂ ಮುಂತಾದ ಸಾಮಾಜಿಕ ಸಮಸ್ಯೆಗಳನ್ನು ಎದುರಿಸುತ್ತಿದೆ. ಸಮಾಜಶಾಸ್ತ್ರವು ಸಾಮಾಜಿಕ ಸಮಸ್ಯೆಗಳ ಕುರಿತಾದ ವಸ್ತುನಿಷ್ಠ ಅಧ್ಯಯನಕ್ಕೆ ಸಹಾಯಕವಾಗಿದ್ದು, ಈ ಸಮಸ್ಯೆಗಳ ನಿವಾರಣೆಗೆ ಸಂಬಂಧಿಸಿದಂತೆ ಉಪಯುಕ್ತ ಸಲಹೆಗಳನ್ನು ನೀಡುತ್ತದೆ.

4. **ಸಾಮಾಜಿಕ ಯೋಜನೆ ಮತ್ತು ಸಾಮಾಜಿಕ ನೀತಿ ನಿರೂಪಣೆ (Sociological knowledge in social planning and social policy)**: ಸಾಮಾಜಿಕ ಯೋಜನೆ ಹಾಗೂ ಸಾಮಾಜಿಕ ನೀತಿಯನ್ನು ರೂಪಿಸುವಲ್ಲಿ ಸಮಾಜಶಾಸ್ತ್ರ ಪ್ರಮುಖ ಪಾತ್ರವಹಿಸುತ್ತದೆ. ಸಮಾಜದ ಪುನರ್ ರಚನೆಯಲ್ಲಿ, ಸಾಮಾಜಿಕ ಕ್ರಮವನ್ನು ಉಳಿಸಿಕೊಳ್ಳುವಲ್ಲಿ, ವಿವಿಧ ಕಾರ್ಯಕ್ರಮಗಳನ್ನು, ಯೋಜನೆಗಳನ್ನು ರೂಪಿಸುವಲ್ಲಿ ಸಮಾಜಶಾಸ್ತ್ರಜ್ಞರ ಸಲಹೆಗಳನ್ನು ಅಭಿಪ್ರಾಯಗಳನ್ನು ಅವಶ್ಯಕವಾಗಿ ಪರಿಗಣಿಸಲಾಗುತ್ತದೆ. ಸಾಮಾಜಿಕ ನೀತಿಗಳನ್ನು ನಿರೂಪಿಸುವಲ್ಲಿ ಸಮಾಜಶಾಸ್ತ್ರೀಯ ತಿಳುವಳಿಕೆಯು ಹೆಚ್ಚು ಉಪಯುಕ್ತವಾಗಿದ್ದು, ಪರಿಣಿತ ಸಮಾಜಶಾಸ್ತ್ರಜ್ಞರ ಸೇವೆ ಹಾಗೂ ಸಲಹೆಗಳನ್ನು ಪಡೆದುಕೊಳ್ಳಲಾಗುತ್ತದೆ. ಕುಟುಂಬ, ಜನಸಂಖ್ಯೆ ನಿಯಂತ್ರಣ, ಪರಿಸರ ಮಾಲಿನ್ಯ, ಭಿಕ್ಷಾಟನೆ ನಿರ್ಮೂಲನೆ, ದುರ್ಬಲ ವರ್ಗಗಳ ಮೀಸಲಾತಿ, ಸ್ತ್ರೀಯರ ಅಂತಸ್ತಿನ ಸುಧಾರಣೆ ಇತ್ಯಾದಿ ವಿಷಯಗಳಿಗೆ ಸಂಬಂಧಿಸಿದ ಸರಕಾರಿ ನೀತಿ ರೂಪಿಸಲು, ಸಾಮಾಜಿಕ ಶಾಸನಗಳನ್ನು ರಚಿಸಲು ಸಮಾಜಶಾಸ್ತ್ರಜ್ಞರ ಸೇವೆಯನ್ನು ಬಳಸಲಾಗುತ್ತದೆ.

5. **ಹಿಂದುಳಿದ ಹಾಗೂ ದುರ್ಬಲ ವರ್ಗಗಳ ಏಳಿಗೆ (To promote social welfare of Backward and weaker section of society)**: ಭಾರತ ಬಹು ಸಮೂಹಗಳ ನಾಡಾಗಿದೆ. ಆರ್ಥಿಕ, ಸಾಮಾಜಿಕ, ರಾಜಕೀಯ ಶೈಕ್ಷಣಿಕ ಕ್ಷೇತ್ರಗಳಲ್ಲಿ ಹಿಂದುಳಿದಿರುವ ಅನೇಕ ವರ್ಗಗಳಿವೆ. ಉದಾಹರಣೆಗೆ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ, ಮಹಿಳಾ ಹಾಗೂ ದುರ್ಬಲ ವರ್ಗಗಳು ಶತಮಾನಗಳಿಂದ ಹಲವು ರೀತಿಯ ಶೋಷಣೆಗೆ ಒಳಗಾಗಿವೆ. ಇನ್ನಿತರರೊಂದಿಗೆ ಅವರನ್ನು ಸಮನಾಗಿಸಲು ಹಾಗೂ ಅವರ ಕಲ್ಯಾಣವನ್ನು ಸಾಧಿಸಲು ಅವರಿಗೆ ಸರಕಾರದ ಸಹಾಯದ ಅವಶ್ಯವಿದೆ. ಈ ಜನರ ನಿಜವಾದ ಏಳಿಗೆಯನ್ನು ಸಾಧಿಸಲು ಸರಕಾರ ಎಂತಹ ಯೋಜನೆಗಳನ್ನು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕೆಂಬುದಕ್ಕೆ ಸಂಬಂಧಿಸಿದಂತೆ ಸಲಹೆಗಳನ್ನು ಪಡೆದುಕೊಳ್ಳಲು ಸಮಾಜಶಾಸ್ತ್ರಜ್ಞರು ಬೇಕಾಗುತ್ತಾರೆ.

6. **ಬೋಧನೆ ವಿಷಯವಾಗಿ ಸಮಾಜಶಾಸ್ತ್ರ (Sociology as a useful subject)**: ಸಮಾಜಶಾಸ್ತ್ರ ಒಂದು ಬೋಧನೆ ವಿಷಯವಾಗಿ ಪ್ರಖ್ಯಾತಿಯನ್ನು ಹೆಚ್ಚಿಸಿಕೊಳ್ಳುತ್ತದೆ. ಬೋಧನೆಯ ಹೊರತಾಗಿ ವೃತ್ತಿಗಳಿಕೆಯ ಸಾಧ್ಯತೆಯೂ ಸಮಾಜಶಾಸ್ತ್ರದಿಂದ ಉಂಟಾಗಿದೆ. ಅನೇಕ ಕಾಲೇಜು ಹಾಗೂ ವಿಶ್ವವಿದ್ಯಾನಿಲಯಗಳಲ್ಲಿ

ಸಮಾಜಶಾಸ್ತ್ರವನ್ನು ಅಧ್ಯಯನ ವಿಷಯವಾಗಿ ಪರಿಚಯಿಸಲಾಗಿದೆ. ಭಾರತೀಯ ಆಡಳಿತ ಸೇವೆ (IAS), ಭಾರತೀಯ ವಿದೇಶಾಂಗ ಸೇವೆ (IFS), ಕರ್ನಾಟಕ ಆಡಳಿತ ಸೇವೆ (KAS), ಭಾರತೀಯ ಪೋಲೀಸ್ ಸೇವೆ (IPS) ಇನ್ನೂ ಮುಂತಾದ ಸ್ಪರ್ಧಾತ್ಮಕ ಪರೀಕ್ಷಾರ್ಥಿಗಳ ಅಧ್ಯಯನ ವಿಷಯಗಳಲ್ಲಿ ಸಮಾಜಶಾಸ್ತ್ರವನ್ನು ಸೇರ್ಪಡೆ ಮಾಡಲಾಗಿದೆ. ಸಮಾಜಶಾಸ್ತ್ರದಲ್ಲಿ ವಿಶೇಷ ಶಿಕ್ಷಣ ಪಡೆದವರಿಗೆ ಶಿಕ್ಷಣ, ಸಮಾಜ ಕಲ್ಯಾಣ, ಕುಟುಂಬ ಕಲ್ಯಾಣ, ಸಾರ್ವಜನಿಕ ಆಡಳಿತ ಇಲಾಖೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಇನ್ನೂ ಮುಂತಾದ ಕ್ಷೇತ್ರಗಳಲ್ಲಿ ಹಲವಾರು ಬಗೆಯ ಉದ್ಯೋಗಾವಕಾಶಗಳು ಲಭ್ಯವಿದೆ.

7. **ದೇಶದ ಆರ್ಥಿಕ ಅಭಿವೃದ್ಧಿಯಲ್ಲಿ ಸಮಾಜಶಾಸ್ತ್ರದ ಪಾತ್ರ (Role of Sociological knowledge is necessary in developing countries)**: ಯಾವುದೇ ದೇಶದ ಅದರಲ್ಲಿಯೂ ಅನಭಿವೃದ್ಧಿ ಹೊಂದಿದ ದೇಶಗಳ ಆರ್ಥಿಕ ಹಿಂದುಳಿವಿಕೆಗೆ ಸಾಮಾಜಿಕ ಸಂಗತಿಗಳೂ ಕಾರಣವಾಗಿರುತ್ತವೆ. ಅನಭಿವೃದ್ಧಿ ದೇಶಗಳ ಆರ್ಥಿಕ ಜೀವನವನ್ನು ವಿಶ್ಲೇಷಿಸುವಲ್ಲಿ ಸಮಾಜಶಾಸ್ತ್ರೀಯ ಮಾಹಿತಿಗಳ ಮಹತ್ವವನ್ನು ಈಗ ಅರ್ಥಶಾಸ್ತ್ರಜ್ಞರು ಮನಗಂಡಿದ್ದಾರೆ. ಅಂತೆಯೇ ಒಬ್ಬ ಅರ್ಥಶಾಸ್ತ್ರಜ್ಞನು, ಸಮಾಜಶಾಸ್ತ್ರಜ್ಞನೂ ಆಗಿರಬೇಕು ಎಂದು ಹೇಳಲಾಗಿದೆ.

8. **ಆಧುನಿಕ ಸನ್ನಿವೇಶಗಳು ಹಾಗೂ ಬೆಳವಣಿಗೆಯ ಬಗ್ಗೆ ಜ್ಞಾನ (Sociology gives knowledge about modern situations and development changes)**: ನಮ್ಮ ಸುತ್ತಮುತ್ತ ಸಂಭವಿಸುವ ಇತ್ತೀಚಿನ ಬದಲಾವಣೆಗಳು ಹಾಗೂ ಬೆಳವಣಿಗೆಗೆ ಸಂಬಂಧಿಸಿದ ಮಾಹಿತಿಯನ್ನು ಸಮಾಜಶಾಸ್ತ್ರ ನೀಡುತ್ತದೆ. ಇದರಿಂದ ಬದಲಾವಣೆಗಳಿಗೆ ಅನುಗುಣವಾಗಿ ನಾವು ವರ್ತಿಸಬಹುದಾಗಿದೆ. ಇಂತಹ ಹಲವು ವಿಷಯಗಳ ಜ್ಞಾನ ಸಮಾಜದ ಕಡೆಯ ನಮ್ಮ ಜವಾಬ್ದಾರಿ ಪ್ರಜ್ಞೆಯನ್ನುಂಟು ಮಾಡುತ್ತದೆ.

## 1.6 ಸಮಾಜಶಾಸ್ತ್ರದ ಬೆಳವಣಿಗೆಗೆ ಪಾಶ್ಚಾತ್ಯ ಮತ್ತು ಭಾರತೀಯ ಸಮಾಜಶಾಸ್ತ್ರಜ್ಞರ ಕೊಡುಗೆಗಳು Contributions of western and Indian socilogists to the development of sociology

ಸಮಾಜಶಾಸ್ತ್ರವನ್ನು ಕೈಗಾರಿಕಾ ಕ್ರಾಂತಿಯ ಶಿಶು ಎಂದು ಪರಿಗಣಿಸಲಾಗಿದೆ. ಸಮಾಜಶಾಸ್ತ್ರವನ್ನು ಒಂದು ಸ್ವತಂತ್ರ ಹಾಗೂ ಪ್ರತ್ಯೇಕ ವಿಜ್ಞಾನವಾಗಿ ಅಸ್ಥಿತ್ವಕ್ಕೆ ತರುವಲ್ಲಿ ಅನೇಕ ಪಾಶ್ಚಾತ್ಯ ಸಮಾಜಶಾಸ್ತ್ರಜ್ಞರು ಮುಖ್ಯ ಪಾತ್ರ ವಹಿಸಿದ್ದಾರೆ. ಅವರಲ್ಲಿ ಆಗಸ್ಟ್ ಕಾಮ್ಟ್, ಹರ್ಬರ್ಟ್ ಸ್ಪೆನ್ಸರ್, ಇಮೈಲ್ ಡರ್ಖೀಂ, ಕಾರ್ಲ್‌ಮ್ಯಾರ್ಕ್ಸ್, ಹಾಗೂ ಮ್ಯಾಕ್ಸ್ ವೇಬರ್‌ರವರು ಪ್ರಮುಖ ಚಿಂತಕರಾಗಿದ್ದಾರೆ. ಅಂತೆಯೇ ಇವರನ್ನು **"ಸಮಾಜಶಾಸ್ತ್ರದ ಸ್ಥಾಪಕ ಪಿತಾಮಹರು" (Founding fathers of sociology)**ಗಳೆಂದು ಪರಿಗಣಿಸಲಾಗಿದೆ. ಪಠ್ಯಕ್ರಮದ ಅಧ್ಯಯನ ದೃಷ್ಟಿಯಿಂದ ಇಲ್ಲಿ ಆಗಸ್ಟ್ ಕಾಮ್ಟ್, ಹರ್ಬರ್ಟ್ ಸ್ಪೆನ್ಸರ್, ಎಮಿಲಿ ಡರ್ಖೀಂ ಹಾಗೂ ಕಾರ್ಲ್‌ಮಾರ್ಕ್ ಮ್ಯಾಕ್ಸ್ ವೇಬರ್ ರವರನ್ನು ಸಂಕ್ಷಿಪ್ತವಾಗಿ ಪರಿಚಯಿಸಲಾಗಿದೆ.

### ಎ. ಆಗಸ್ಟ್ ಕಾಮ್ಟ್ (1798–1857) August Comte:

ಫ್ರೆಂಚ್ ತತ್ವಜ್ಞಾನಿಯಾಗಿದ್ದ ಆಗಸ್ಟ್ ಕಾಮ್ಟ್‌ರವರು ಜನವರಿ 19, 1798 ರಲ್ಲಿ ಫ್ರಾನ್ಸ್‌ನಲ್ಲಿ ಜನ್ಮತಾಳಿದರು. ತಮ್ಮ ಸಂಪೂರ್ಣ ಶೈಕ್ಷಣಿಕ ಅಭ್ಯಾಸದಲ್ಲಿ ಹಲವಾರು ತೊಡಕುಗಳನ್ನು ಎದುರಿಸಿದ್ದರಾದರೂ ಫ್ರಾನ್ಸ್ ವಿಶ್ವವಿದ್ಯಾನಿಲಯದ ಪರೀಕ್ಷಾ ವಿಭಾಗದ ನಿಯಂತ್ರಕರಾಗಿ ಅರ್ಹತೆಯನ್ನು ಗಳಿಸಿ ತಮ್ಮ ವೃತ್ತಿ ಜೀವನವನ್ನು ಆರಂಭಿಸಿದರು. ಸಮಾಜಶಾಸ್ತ್ರದ ಸ್ಥಾಪಕ ತಜ್ಞರಲ್ಲಿ ಒಬ್ಬರಾದ ಆಗಸ್ಟ್ ಕಾಮ್ಟ್ ರವರು **"ಸೋಶಿಯಾಲಜಿ" (Sociology)** ಎಂಬ ಪದವನ್ನು ಪರಿಚಯಿಸಿದ ಮೊದಲಿಗರಾಗಿದ್ದಾರೆ. ಅಂತೆಯೇ **"ಸಮಾಜಶಾಸ್ತ್ರದ**



**ಪಿತಾಮಹ** "ನೆಂದು ಕರೆಸಿಕೊಂಡ ಕೀರ್ತಿ ಆಗಸ್ಟ್ ಕಾಮ್ಟ್ ರವರಿಗೆ ಸಲ್ಲುತ್ತದೆ. **"ಸೋಸಿಯಾಲಜಿ"** ಎಂಬ ಹೊಸ ವಿಜ್ಞಾನವನ್ನು ಪರಿಚಯಿಸಿದ ಮೊದಲಿಗನಾಗಿ ಆಗಸ್ಟ್ ಕಾಮ್ಟ್ ಕಂಡು ಬಂದಿದ್ದು. ಅವರ ಕೊಡುಗೆಗಳ ಬಗೆಗಿನ ಸಂಕ್ಷಿಪ್ತ ಮಾಹಿತಿ ಸಮಾಜ ಶಾಸ್ತ್ರದ ಅಧ್ಯಯನಕ್ಕೆ ದೊರಕಿದ ಹೊಸ ತಿರುವನ್ನು ಖಚಿತಪಡಿಸುತ್ತದೆ.

1. ಆಗಸ್ಟ್ ಕಾಮ್ಟ್ ತಮ್ಮ **'ಪೊಸಿಟಿವ್ ಫಿಲಾಸಫಿ"** ಎಂಬ ಕೃತಿಯ ಮೂಲಕ **"ಸೋಸಿಯಾಲಜಿ"** ಎಂಬ ಪದವನ್ನು 1839ರಲ್ಲಿ ಮೊದಲು ಬಳಸಿ **'ಸಮಾಜದ ವೈಜ್ಞಾನಿಕ ಅಧ್ಯಯನವನ್ನೆ'** ಸಮಾಜಶಾಸ್ತ್ರವೆಂದು ಕರೆದರು. ಪ್ರಾಕೃತಿಕ ವಿಜ್ಞಾನಗಳು ಭೌತಿಕ ಜಗತ್ತಿನ ಸೂತ್ರ ವಿವರಿಸುವಂತೆ ಸಮಾಜ ವಿಜ್ಞಾನವು ಸಾಮಾಜಿಕ ಜಗತ್ತಿನ ಸೂತ್ರಗಳನ್ನು ವಿವರಿಸಬೇಕೆಂದು ಅವನ ಇಚ್ಛೆಯಾಗಿತ್ತು.

2. ಸಮಾಜದ ಅಧ್ಯಯನದಲ್ಲಿ ವಸ್ತುನಿಷ್ಠವಾದ ವೈಜ್ಞಾನಿಕ ವಿಧಾನದ ಅವಶ್ಯಕತೆಗೆ ಕಾಮ್ಟ್‌ರವರು ಒತ್ತನ್ನು ನೀಡಿದ್ದರು. ಸಮಾಜವನ್ನು ಉತ್ತಮಪಡಿಸುವುದಕ್ಕೆ ಸಮಾಜದ ತತ್ವಧಾರಿತ ವಿಜ್ಞಾನ ಹಾಗೂ ನಡಾವಳಿಯ ಕ್ರಮಬದ್ಧವಾದ ಸಂಶೋಧನೆಯ ಅವಶ್ಯಕತೆಯಿದೆಯೆಂಬುದು ಅವನ ನಂಬಿಕೆಯಾಗಿತ್ತು.

3. ಆಗಸ್ಟ್ ಕಾಮ್ಟ್ ಸಮಾಜಶಾಸ್ತ್ರವನ್ನು ಎರಡು ಭಾಗಗಳಾಗಿ ವಿಂಗಡಿಸಿದ್ದು, ಅವುಗಳು ಯಾವುವೆಂದರೆ, (ಅ) ಸಾಮಾಜಿಕ ಸ್ಥಿತಿಶಾಸ್ತ್ರ (ಆ) ಸಾಮಾಜಿಕ ಚಲನಶಾಸ್ತ್ರ. ಕುಟುಂಬ, ಅರ್ಥವ್ಯವಸ್ಥೆ, ಧರ್ಮ ಇನ್ನು ಮುಂತಾದ ಪ್ರಮುಖ ಸಂಸ್ಥೆಗಳ ಅಧ್ಯಯನಕ್ಕೆ ಸಾಮಾಜಿಕ ಸ್ಥಿತಿ ಶಾಸ್ತ್ರ ಸಂಬಂಧಿಸಿದ್ದರೆ, ಸಾಮಾಜಿಕ ಬದಲಾವಣೆ ಹಾಗೂ ಸಾಮಾಜಿಕ ಪ್ರಗತಿಗೆ "ಸಾಮಾಜಿಕ ಚಲನಶಾಸ್ತ್ರ" ಸಂಬಂಧಿಸಿದೆ. ಈ ಪರಿಕಲ್ಪನೆ ಈಗ ಸಾಮಾಜಿಕ ರಚನೆ ಹಾಗೂ ಸಾಮಾಜಿಕ ಪರಿವರ್ತನೆ ಎಂಬ ಹೆಸರಿನಲ್ಲಿ ಉಳಿಸಿಕೊಳ್ಳಲಾಗಿದೆ.

4. ಆಗಸ್ಟ್ ಕಾಮ್ಟ್‌ರವರ ಪ್ರಕಾರ ಬೌದ್ಧಿಕ ವಿಕಾಸ ಹಾಗೂ ಸಾಮಾಜಿಕ ಪ್ರಗತಿಗೆ ನೇರವಾದ ಸಂಬಂಧವಿದ್ದು, ಇದಕ್ಕೆ ಅನ್ವಯಿಸುವಂತೆ ಮೂರು ಹಂತಗಳ ಸೂತ್ರವನ್ನು ವಿವರಿಸಿದ್ದಾರೆ. ಅವುಗಳು (ಅ) ಧರ್ಮಶಾಸ್ತ್ರೀಯ ಹಂತ, (ಆ) ಅಮೂರ್ತ ಹಂತ ಮತ್ತು (ಇ) ವೈಜ್ಞಾನಿಕ ಹಂತ.

   **ಅ) ಧರ್ಮಶಾಸ್ತ್ರೀಯ ಹಂತ (Theological stage):–** ಈ ಹಂತದಲ್ಲಿ ಮಾನವರ ಎಲ್ಲಾ ಚಿಂತನೆಗಳು ಅತಿಲೌಖಿಕ ಶಕ್ತಿಗಳ ಬಗೆಗಿನ ಶ್ರದ್ಧೆ ಹಾಗೂ ಧಾರ್ಮಿಕ ವಿಚಾರಗಳಿಂದ ಮಾರ್ಗದರ್ಶಕವಾಗಿತ್ತು. ಇದು ನಿರ್ಧಿಷ್ಟ ದೇವರ ಬಗೆಗಿನ ನಂಬಿಕೆಯನ್ನು ಪ್ರತಿಪಾದಿಸಿತ್ತು.

   **ಆ) ಅಮೂರ್ತ (Meta physical stage):–** ಈ ಹಂತದಲ್ಲಿ ಮಾನವನ ಎಲ್ಲಾ ಚಿಂತನೆಗಳು ಪ್ರಕೃತಿಯ ಅಗೋಚರ ಶಕ್ತಿಗಳಿಂದ ನಿರ್ದೇಶಿಸಲ್ಪಟ್ಟಿತ್ತು. ಇದು ಬಹುತೇಕವಾಗಿ ಪ್ರಕೃತಿಯ ಬಗೆಗಿನ ತಾತ್ವಿಕ ಶೋಧನೆಯಾಗಿತ್ತು.

   **ಇ) ವೈಜ್ಞಾನಿಕ ಹಂತ (Positive stage or scientific stage):–** ಈ ಹಂತವೆಂಬುದು ಜಗತ್ತಿನ ಬಗ್ಗೆ ನಮ್ಮ ಎಲ್ಲಾ ಭೌದ್ಧಿಕ ಚಿಂತನೆ ಹಾಗೂ ಅವಲೋಕನವನ್ನು ಅವಲಂಬಿಸಿದೆ. ಈ ಸೂತ್ರದ ಪ್ರಕಾರ ಮಾನವ ಹೆಚ್ಚು ಹೆಚ್ಚು ವೈಜ್ಞಾನಿಕ ದೃಷ್ಟಿಕೋನವನ್ನು ಬೆಳೆಸಿಕೊಳ್ಳುತ್ತಿದ್ದಾನೆ ಎಂಬ ಸಂಗತಿಯನ್ನು ಕಾಮ್ಟ್ ಮುಂದಿಟ್ಟಿದ್ದಾನೆ.

5. ಕಾಮ್ಟ್‌ರವರು "ವಿಜ್ಞಾನಗಳ ವರ್ಗೀಕರಣ ಸಿದ್ಧಾಂತವನ್ನು" ನೀಡಿದ್ದಾರೆ. ಅವುಗಳೆಂದರೆ ಗಣಿತಶಾಸ್ತ್ರ,

ಖಗೋಳಶಾಸ್ತ್ರ, ಭೌತಶಾಸ್ತ್ರ, ರಸಾಯನಶಾಸ್ತ್ರ, ಜೀವಶಾಸ್ತ್ರ ಮತ್ತು ಸಮಾಜಶಾಸ್ತ್ರ. ಈ ಸಿದ್ಧಾಂತದ ಮೂಲಕ ಸಾಮಾಜಿಕ ವಿಜ್ಞಾನಗಳ ನಡುವಿನ ಪರಸ್ಪರ ಸಂಬಂಧ ಹಾಗೂ ಪರಸ್ಪಾರಾವಲಂಬನೆಯನ್ನು ಪ್ರತಿಪಾದಿಸಿದ್ದಾರೆ.

6. ಸಮಾಜದಲ್ಲಿ ನೈತಿಕತೆಯ ಬೆಂಬಲಿಗನಾಗಿ ಕಾಮ್ಟ್ ಸಮಾಜಶಾಸ್ತ್ರಜ್ಞರು "ಮಾನವತೆಯ ಪೌರೋಹಿತ್ಯ" ವಹಿಸಿಕೊಂಡು ಸಮಾಜದ ಸಮಸ್ಯೆಗಳನ್ನು ನಿವಾರಿಸಬೇಕೆಂದು ಹೇಳುತ್ತಾರೆ.
7. ಸಮಾಜಶಾಸ್ತ್ರೀಯ ಸಾಹಿತ್ಯಕ್ಕೆ ಕಾಮ್ಟ್‌ರವರ ಕೊಡುಗೆಗಳು, (ಅ) "ಪೊಸಿಟಿವ್ ಫಿಲೋಸಫಿ" (ಆ) "ಪೊಸಿಟಿವ್ ಪೊಲಿಟಿಕ್ಸ್".

**ಹ್ಯಾರಿಯಟ್ ಮಾರ್ಟಿನೋ**ರವರು ಆಗಸ್ಟ್ ಕಾಮ್ಟ್‌ರ "Positive Philosophy" ಕೃತಿಯನ್ನು ಇಂಗ್ಲಿಷಿಗೆ ಅನುವಾದಿಸಿ ಇಂಗ್ಲೇಂಡಿನಲ್ಲಿ ಈ ಕೃತಿಯು ಪರಿಚಯವಾಗಲು ಕಾರಣರಾದರು. ಇವರನ್ನು 'ಪ್ರಥಮ ಮಹಿಳಾ ಸಮಾಜಶಾಸ್ತ್ರಜ್ಞೆ' ಎಂದೂ ಕೂಡ ಕರೆಯುತ್ತಾರೆ. ಹ್ಯಾರಿಯಟ್ ಮಾರ್ಟಿನೋರವರ ಸಾಮಾಜಿಕ ಗ್ರಹಿಕೆ, ಮಹಿಳೆಯರನ್ನು ಅರ್ಥೈಸುವಿಕೆ ಮತ್ತು ಸಮಾಜಶಾಸ್ತ್ರದಲ್ಲಿ ಇದುವರೆಗೂ ಕಡೆಗಣಿಸಲಾಗಿದ್ದ ವಿಷಯಗಳ ಮೇಲೆ ಬೆಳಕು ಚೆಲ್ಲಿದ್ದಾರೆ, ಮಹಿಳಾ ಹಕ್ಕುಗಳ ಪರವಾದ ಹೋರಾಟ ಮತ್ತು ಗುಲಾಮಗಿರಿಯ ವಿರುದ್ಧದ ತಮ್ಮ ನಿಲುವಿನಿಂದ ಹ್ಯಾರಿಯಟ್ ಮಾರ್ಟಿನ್‌ರವರು ಪ್ರಾಮುಖ್ಯತೆ ಗಳಿಸಿದ್ದಾರೆ.

## ಬಿ. ಹರ್ಬರ್ಟ್ ಸ್ಪೆನ್ಸರ್ (1820–1903) Herbert Spencer:

ಹರ್ಬರ್ಟ್ ಸ್ಪೆನ್ಸರ್ ಬ್ರಿಟೀಷ್ ಸಾಮಾಜಿಕ ಚಿಂತಕನಾಗಿದ್ದು, ಏಪ್ರಿಲ್ 27, 1820ರಂದು ಇಂಗ್ಲೇಂಡಿನ ಡರ್ಬಿ ಎಂಬ ಹಳ್ಳಿಯಲ್ಲಿ ಜನಿಸಿದರು. ಸ್ಪೆನ್ಸರ್ ಸಮಾಜಶಾಸ್ತ್ರದ ಸ್ಥಾಪಕ ತಜ್ಞರಲ್ಲಿ ಒಬ್ಬನಾಗಿದ್ದು, "ಎರಡನೇ ಪಿತಾಮಹ" ಎಂದು ಕರೆಯಲಾಗಿದೆ.



ಹರ್ಬಟ್ ಸ್ಪೆನ್ಸರ್ ಖ್ಯಾತ ವಿಕಾಸವಾದಿಯಾಗಿದ್ದ. ಚಾರ್ಲ್ಸ್ ಡಾರ್ವಿನ್‌ನ "ಜೀವ ಸಂಕುಲಗಳ ಉಗಮ" (The Origin of the Species) ಎಂಬ ಕೃತಿಯಿಂದ ಪ್ರಭಾವಿತನಾಗಿದ್ದರು. ಜೈವಿಕ ವಿಕಾಸವಾದ ಸಿದ್ಧಾಂತವನ್ನು ಸಮಾಜಶಾಸ್ತ್ರಕ್ಕೆ ಅನ್ವಯಿಸಲು ಪ್ರಯತ್ನಿಸಿದ ಸಮಾಜದ ವಿಕಾಸದ ಸ್ವರೂಪವನ್ನು ತಿಳಿಸುವುದಕ್ಕೆ ಡಾರ್ವಿನ್ ವಿಕಾಸದ ಕಲ್ಪನೆಯನ್ನು ಬಳಸಿ, ಸಮಾಜವನ್ನು ಒಂದು ಜೀವಿಗೆ ಹೋಲಿಸಿ "ಜೈವಿಕ ಸಾದೃಶ್ಯದ ಸಿದ್ಧಾಂತವನ್ನು" ಮಂಡಿಸಿದ್ದಾರೆ. ಈ ಸಿದ್ಧಾಂತವು ಈಗ ತಿರಸ್ಕೃತವಾಗಿದ್ದರೂ, ಆಗ ಅದು ಸಾಕಷ್ಟು ಖ್ಯಾತಿಯನ್ನು ಗಳಿಸಿತ್ತು. ಮಾನವನ ಮನಸ್ಸು ಸರಳವಾದ ಸ್ವಯಂ ಚಾಲಿತ ಪ್ರಕ್ರಿಯೆಗಳಿಂದ ತಾರ್ಕಿಕ ರೂಪವನ್ನು ಪಡೆದುಕೊಂಡಿದೆ ಎಂಬುದು ಸ್ಪೆನ್ಸರವರ ವಾದವಾಗಿತ್ತು. ಸಮಾಜವನ್ನು ಸೈನಿಕ ಸಮಾಜ ಮತ್ತು ಔದ್ಯೋಗಿಕ ಸಮಾಜ ಎಂದು ವರ್ಗೀಕರಿಸಿದ್ದಾರೆ.

ಇಡೀ ಸಮಾಜವನ್ನು ಅಧ್ಯಯನ ಘಟಕವಾಗಿ ಪರಿಗಣಿಸಬೇಕೆಂಬುದರ ಬಗ್ಗೆ ಸ್ಪೆನ್ಸರ್ ಒತ್ತನ್ನು ನೀಡಿದ್ದ. ಅವರ ಪ್ರಕಾರ ಸಮಾಜದ ವಿವಿಧ ಭಾಗಗಳು ಪರಸ್ಪರ ಸಂಬಂಧ, ಪರಸ್ಪಾರಾವಲಂಬನೆಯನ್ನು ಹೊಂದಿದ್ದು, ಕೇವಲ ಭಾಗಗಳು ಮಾತ್ರವೇ ಇಡೀ ವ್ಯವಸ್ಥೆಯ ಮೇಲೆ ಪ್ರಭಾವ ಬೀರದೆ, ಇಡೀ ವ್ಯವಸ್ಥೆಯ ಭಾಗಗಳ ಮೇಲೆ ಪ್ರಭಾವ ಬೀರುತ್ತದೆ. ಸಮಾಜದ ವಿವಿಧ ಹಂತಗಳ ಬೆಳವಣಿಗೆಯನ್ನು ವಿವರಿಸುವಲ್ಲಿ ಸ್ಪೆನ್ಸರ್‌ರವರ "ಹೋಲಿಕೆ ವಿಧಾನ" ವಿಶೇಷ ಗಮನವನ್ನು ಸೆಳೆಯುತ್ತದೆ. ಒಬ್ಬ ಸಾಮಾಜಿಕ ದಾರ್ಶನಿಕನಾಗಿ ಕಾಮ್ಟ್ ಏನನ್ನು ಯೋಚಿಸಿದ್ದನೋ, ಅದನ್ನು ಸ್ಪೆನ್ಸರ್ ಮಾಡಿ ತೋರಿಸಿಕೊಟ್ಟರೆಂದು ಹೇಳಲಾಗಿದೆ.

ಹರ್ಬರ್ಟ್ ಸ್ಪೆನ್ಸರ್‌ರವರ ಪ್ರಮುಖ ಕೃತಿಗಳು, 1. **"**ಸೋಸಿಯಲ್ ಸ್ಟಾಟಿಕ್ಸ್, 2. **"**ಫಸ್ಟ್ ಪ್ರಿನ್ಸಿಪಲ್ಸ್**"**, 3. **"**ಪ್ರಿನ್ಸಿಪಲ್ಸ್ ಆಫ್ ಎಥಿಕ್ಸ್**"**, 4. **"**ಪ್ರಿನ್ಸಿಪಲ್ಸ್ ಆಫ್ ಸೋಸಿಯಾಲಜಿ**"**, 5. **"**ದಿ ಮ್ಯಾನ್ ವರ್ಸಸ್ ಸ್ಟೇಟ್.**"** 6. **"**ದಿ ಸ್ಟಡಿ ಆಫ್ ಸೋಸಿಯಾಲಜಿ.**"**

### ಸಿ. ಎಮಿಲಿ ಡರ್ಖೀಂ (1858–1917) Emile Durkhiem:



ಎಮಿಲಿ ಡರ್ಖೀಂ ಎಂಬುವವನು ಫ್ರೆಂಚ್ ತತ್ವಜ್ಞಾನಿ. ಸ್ಪೆನ್ಸರ್ ರವರಂತೆ ತನ್ನ ಸಮಾಜಶಾಸ್ತ್ರೀಯ ಅಧ್ಯಯನಕ್ಕೆ ಸಮಾಜವನ್ನು ಮುಖ್ಯ ಘಟಕವಾಗಿ ಪರಿಗಣಿಸಿದ್ದರು. ಅವರ **'ತುಲನಾತ್ಮಕ ವಿಧಾನ'**ವು ಅಧ್ಯಯನ ವಿಭಿನ್ನ ಸಮಾಜಗಳ ತುಲನಾತ್ಮಕ ಅಧ್ಯಯನಕ್ಕೆ ಮಹತ್ವ ನೀಡಿತು. ವಿಜ್ಞಾನಿಗಳು ಭೌತ ವಸ್ತುನಿಷ್ಟವಾದ ಅಧಯಯನ ನಡೆಸಿದ ರೀತಿಯಲ್ಲಿಯೇ ಸಾಮಾಜಿಕ ಜೀವನದ ಅಧ್ಯಯನ ನಡೆಯಬೇಕೆಂಬುದು ಡರ್ಖೀಂರವರ ನಂಬಿಕೆಯಾಗಿತ್ತು. ಸಮಾಜದ ವಾಸ್ತವತೆಯನ್ನು ಪ್ರತಿಪಾದಿಸಿದ ಮೊದಲ ಸಮಾಜಶಾಸ್ತ್ರಜ್ಞ ಡರ್ಖೀಂ ಆಗಿದ್ದಾರೆ. ಸಮಾಜದ ವೈಜ್ಞಾನಿಕ ಅಧ್ಯಯನಕ್ಕೆ ಡರ್ಖೀಂ **"ಸಮಾಜಶಾಸ್ತ್ರೀಯ ಪದ್ಧತಿಯ ನಿಯಮ"** (The rules of Sociological Methods)ಗಳನ್ನು ರೂಪಿಸಿದರು.

ಡರ್ಖೀಂ ಅಭಿಪ್ರಾಯದಂತೆ ಮಾನವನ ಸಾಮಾಜಿಕ ವರ್ತನೆಯನ್ನು, ಸಾಮಾಜಿಕ ಹಿನ್ನಲೆಯಲ್ಲಿ ಅರ್ಥೈಸಿಕೊಳ್ಳಬೇಕೇ ವಿನಃ, ಆತನ ವ್ಯಕ್ತಿಗತ ದೃಷ್ಠಿಯಿಂದಲ್ಲ. ಮಾನವೀಯ ಘಟನೆ **"ಸಾಮಾಜಿಕ"** ವಾಗಿದೆಯೆಂದು ಹೇಳುತ್ತ, ಸಮಾಜದ ಹಿತಾಸಕ್ತಿಗಾಗಿ ನಾವೆಲ್ಲರೂ ಪ್ರತಿಯೊಂದು ಕ್ರಿಯೆಗಳನ್ನು ನಿರ್ವಹಿಸುತ್ತೇವೆ ಎಂದು ಡರ್ಖೀಂ ಅಭಿಪ್ರಾಯಪಟ್ಟಿದ್ದಾರೆ, ನಮ್ಮ ಪದ್ದತಿಗಳು ಹಾಗೂ ಕರ್ತವ್ಯಗಳೆಲ್ಲವೂ ಸಮಾಜದ ನಿಯಮ ಹಾಗೂ ಸಂಪ್ರದಾಯಗಳಿಂದ ರೂಪಿಸಲ್ಪಟ್ಟಿದೆ. ಕರ್ತವ್ಯಗಳನ್ನು ನಾವು ರಚಿಸದೆ, ಶಿಕ್ಷಣದ ಮೂಲಕ (ಔಪಚಾರಿಕ ಹಾಗೂ ಅನೌಪಚಾರಿಕ) ಪಡೆದುಕೊಂಡಿದ್ದೇವೆ. ಇಂತಹ ವರ್ತನೆಯ ವಿಧಗಳನ್ನು **"**ಸಾಮಾಜಿಕ ಸಂಗತಿ**"** (Social facts) ಗಳೆಂದು ಡರ್ಖೀಂ ಕರೆಯುತ್ತಾರೆ. ವ್ಯಕ್ತಿಯ ಮೇಲೆ ಬಾಹ್ಯ ನಿಯಂತ್ರಣವನ್ನು ಪ್ರಯೋಗಿಸಲು ಅರ್ಹವಾಗಿರುವ, ಸ್ಥಿರಪಡಿಸಿದ ಅಥವಾ ಸ್ಥಿರಪಡಿಸದ ವರ್ತನೆಯ ಪ್ರತಿಯೊಂದು ವಿಧಾನವೇ **"**ಸಾಮಾಜಿಕ ಸಂಗತಿಯಾಗಿದೆ.

ಡರ್ಖೀಂ ತನ್ನ **"ಡಿವಿಜನ್ ಆಫ್ ಲೇಬರ್ ಇನ್ ಸೊಸೈಟಿ"** ಎಂಬ ಗ್ರಂಥದ ಮೂಲಕ **"**ಅನೋಮಿ**"** (ನಿಯಮ ರಹಿತ ಸ್ಥಿತಿ) ಸೂತ್ರವನ್ನು ಬಳಸಿದ್ದಾನೆ. ಅವನ ಪ್ರಕಾರ ಆತ್ಮಹತ್ಯೆ ಬಾಹ್ಯಶಕ್ತಿಗಳಿಂದ ಸಂಭವಿಸುವ ಸಾಮಾಜಿಕ ಸಂಗತಿಯಾಗಿದೆ. ಆತ್ಮಹತ್ಯೆಯಲ್ಲಿ ನಾಲ್ಕು ಪ್ರಕಾರವಿದ್ದು ಅವುಗಳೆಂದರೇ, ಅ) ಆತ್ಮಕೇಂದ್ರಿಕ ಆತ್ಮಹತ್ಯೆ ಆ) ನಿರಾಶಾತ್ಮಕ ಆತ್ಮಹತ್ಯೆ ಇ) ಪರಹಿತ ಆತ್ಮಹತ್ಯೆ ಮತ್ತು ಈ) ಮರಣಾಂತಿಕ ಆತ್ಮಹತ್ಯೆ (fatalistic Suicide)

ಮಾನವ ಸಮಾಜದಲ್ಲಿ ಧರ್ಮ ಸಾರ್ವತ್ರಿಕವಾಗಿದೆಯೆಂಬ ಅಂಶದಿಂದ ಡರ್ಖೀಂ ಪ್ರಭಾವಿತರಾಗಿದ್ದರು. ಸಮಾಜವನ್ನು ಪೂರ್ಣವಾಗಿ ಹಿಡಿದಿಡುವಲ್ಲಿ ಧರ್ಮ ಅವಶ್ಯಕವಾದ ಪಾತ್ರವನ್ನು ವಹಿಸುತ್ತದೆ ಧಾರ್ಮಿಕ ನಂಬಿಕೆಗಳು ಸಮಾಜದಿಂದ ಉಗಮಗೊಂಡು ಸಮಾಜವನ್ನು ಒಟ್ಟಾಗಿ ಹಿಡಿದಿಡುವುದಕ್ಕೆ ಸಹಾಯಕವಾಗಿದೆಯೆಂಬುದನ್ನು ಪ್ರತಿಪಾದಿಸಿದರು.

ಡರ್ಖೀಂ ಸಾಮಾನ್ಯ ಸಮಾಜಶಾಸ್ತ್ರ, ಧಾರ್ಮಿಕ ಸಮಾಜಶಾಸ್ತ್ರ, ಶೈಕ್ಷಣಿಕ ಸಮಾಜಶಾಸ್ತ್ರ, ನೈತಿಕ ನಿಯಮಗಳ

ಸಮಾಜಶಾಸ್ತ್ರ, ಕಾನೂನು ಸಮಾಜಶಾಸ್ತ್ರ, ಆರ್ಥಿಕ ಸಮಾಜಶಾಸ್ತ್ರ, ಜನಸಂಖ್ಯಾಶಾಸ್ತ್ರ, ಅಪರಾಧ ಸಮಾಜಶಾಸ್ತ್ರ, ಸೌಂದರ್ಯಶಾಸ್ತ್ರ ಹಾಗೂ ಇನ್ನಿತರ ವಿಶಿಷ್ಟ ಅಧ್ಯಯನ ಕ್ಷೇತ್ರಗಳ ಉಗಮಕ್ಕೆ ಕಾರಣರಾಗಿದ್ದಾರೆ.

ಡರ್ಖೀಂರವರ ಪ್ರಮುಖ ಕೃತಿಗಳು, 1. "ದಿ ಡಿವಿಜನ್ ಆಫ್ ಲೇಬರ್ ಇನ್ ಸೊಸೈಟಿ", 2. "ದಿ ರೂಲ್ಸ್ ಆಫ್ ಸೋಸಿಯಾಲಜಿಕಲ್ ಮೆಥಡ್", 3. "ಸ್ಯೂಯಿಸೈಡ್ ಎ ಸೋಸಿಯಾಲಜಿಕಲ್ ಅನಾಲಿಸಸ್", 4. "ದಿ ಎಲಿಮೆಂಟರಿ ಫಾರ್ಮ್ಸ್ ಆಫ್ ರಿಲಿಜಿಯಸ್ ಲೈಫ್". ಸಮಾಜಶಾಸ್ತ್ರದ ಬರಹಗಳ ಪ್ರಕಟಣೆಗಾಗಿ ಅನ್ನೆ ಸೋಷಿಯಾಲಜಿಕ್ಯೂ (Anne Sociologique) ಎಂಬ ನಿಯತಕಾಲಿಕೆಯನ್ನು ಪ್ರಾರಂಭಿಸಿದರು.

### ಡಿ. ಕಾರ್ಲ್ ಮಾರ್ಕ್ಸ್: Karl Marx (1818-1883)

ಕಾರ್ಲ್ ಮಾರ್ಕ್ಸ್ 19ನೇ ಶತಮಾನದ ಮಹಾನ್ ಚಿಂತಕರುಗಳಲ್ಲಿ ಒಬ್ಬನಾಗಿದ್ದಾರೆ. ಮಾರ್ಕ್ಸ್ ಕ್ರಿ.ಶ. 1818ನೇ ಮೇ 5ರಂದು ಜರ್ಮನಿಯ ಟ್ರಿಯರ್ ಎಂಬಲ್ಲಿ ಜನಿಸಿದರು. ಪ್ರತಿಷ್ಠಿತ ವಕೀಲನ ಮಗನಾಗಿದ್ದ ಕಾರ್ಲ್



ಮಾರ್ಕ್ಸ್ ಜೇನಾ ವಿಶ್ವವಿದ್ಯಾನಿಲಯದಲ್ಲಿ ತತ್ವಶಾಸ್ತ್ರದಲ್ಲಿ ಡಾಕ್ಟರೇಟ್ ಪದವಿಯನ್ನು ಪಡೆದ. ಅವರ ಲೇಖನಗಳು ಫ್ರಾನ್ಸ್ ಸರಕಾರದ ಮೇಲೆ ಪರಿಣಾಮ ಬೀರಿದ್ದರಿಂದ ಅವರನ್ನು ಗಡಿಪಾರು ಮಾಡಲಾಗಿ ಅವರು ಇಂಗ್ಲೆಂಡ್‌ನಲ್ಲಿ ನೆಲೆಸಿದರು. ಮಾರ್ಕ್ಸ್ ತತ್ವಜ್ಞಾನದಲ್ಲಿ ಅಧ್ಯಯನ ಮಾಡಿದ್ದರೂ, ತತ್ವಜ್ಞಾನಿಗಿಂತ ಹೆಚ್ಚಾಗಿ ಸಾಮಾಜಿಕ ಚಿಂತಕನಾಗಿದ್ದು ಶೋಷಣೆ ಹಾಗೂ ದಬ್ಬಾಳಿಕೆ ಕೊನೆಯಾಗಬೇಕೆಂಬುದೇ ಇವರ ಆಶಯವಾಗಿತ್ತು.

ಕಾರ್ಲ್ ಮಾರ್ಕ್ಸ್ ಸಾಮಾಜಿಕ ಬದಲಾವಣೆಯ ಸಿದ್ಧಾಂತ ಹಾಗೂ ಸಾಮಾಜಿಕ ಸಂಘರ್ಷಣೆ ಕ್ರಾಂತಿಯ ವಿಶ್ಲೇಷಣೆಯಿಂದ ಅವರನ್ನು ಆಧುನಿಕ ಸಮಾಜಶಾಸ್ತ್ರದ ಸ್ಥಾಪಕ ತಜ್ಞರಲ್ಲಿ ಒಬ್ಬರೆಂದು ಪರಿಗಣಿಸಲಾಗಿದೆ. ಮಾನವ ಸಮಾಜವು ವಿವಿಧ ಹಂತಗಳ ಮೂಲಕ ಪ್ರಗತಿಯನ್ನು ಹೊಂದುತ್ತಿದ್ದು, ಬಂಡವಾಳವಾದವೆಂಬುದು ಮಾನವ ಸುಧಾರಣೆಯ ಇತ್ತೀಚಿನ ಹಂತವಾಗಿದೆ. ಇದು ಮುಂದಿನ ದಿನಗಳಲ್ಲಿ ಸಮಾಜವಾದಕ್ಕೆ ದಾರಿಮಾಡಿಕೊಡುತ್ತದೆ ಎಂಬುದು ಅವನ ನಂಬುಗೆಯಾಗಿತ್ತು. ಬಂಡವಾಳಶಾಹಿ ವ್ಯವಸ್ಥೆಯ ಕಾರ್ಯಾಚರಣೆಯನ್ನು ಅರ್ಥಮಾಡಿಕೊಳ್ಳಲು ಮಾರ್ಕ್ಸ್ ಅದರ ರಾಜಕೀಯ, ಸಾಮಾಜಿಕ, ವಿಶೇಷವಾಗಿ ಆರ್ಥಿಕ ದೃಷ್ಟಿಗಳ ಬಗ್ಗೆ ಸವಿಸ್ತಾರವಾದ ಅಧ್ಯಯನ ಕೈಗೊಂಡಿದ್ದರು.

ಕಾರ್ಲ್ ಮಾರ್ಕ್ಸ್ ತನ್ನನ್ನು ಸಮಾಜಶಾಸ್ತ್ರಜ್ಞನೆಂದು ಎಂದಿಗೂ ಕರೆಸಿಕೊಳ್ಳದಿದ್ದರೂ ಅವರ ಕೃತಿಗಳಲ್ಲಿ ಸಮಾಜಶಾಸ್ತ್ರೀಯ ವಿಚಾರಗಳು ಶ್ರೀಮಂತವಾಗಿದೆ. ಅವನ ಪ್ರಕಾರ ಸಮಾಜ ವಿಜ್ಞಾನಿಯ ಕೆಲಸವು ಕೇವಲ ಪ್ರಪಂಚ ಹೇಗಿದೆ ಎಂದು ವಿವರಿಸುತ್ತಾ ಕೂಡದೆ ಅದನ್ನು ಅಗತ್ಯಕ್ಕೆ ತಕ್ಕಂತೆ ಬದಲಾಯಿಸುವುದೇ ಆಗಿರಬೇಕು. ಬಂಡವಾಳಶಾಹಿ ಸಮಾಜದ ಬಲಿಪಶುಗಳಾದ ಶ್ರಮಿಕ ವರ್ಗದಿಂದ ಸಮಾಜ ಪರಿವರ್ತಿತವಾಗುತ್ತದೆ ಎಂಬುದು ಅವರ ನಂಬುಗೆಯಾಗಿತ್ತು. ಕಾರ್ಲ್ ಮಾರ್ಕ್ಸ್ ಸಾಮಾಜಿಕ ಕ್ರಾಂತಿಯ ಅನಿವಾರ್ಯತೆಯನ್ನು ಕಂಡಿದ್ದ. ಅವರ ಪ್ರಕಾರ "ವರ್ಗ ಸಂಘರ್ಷಣೆಯೇ ಇತಿಹಾಸದ ಕೀಲಿಕೈ" ಇದ್ದಂತೆ. "ಇದುವರೆಗಿನ ಸಮಾಜದ ಇತಿಹಾಸ ಬಂಡವಾಳಗಾರರು ಹಾಗೂ ಕಾರ್ಮಿಕರ ನಡುವಿನ ಸಂಘರ್ಷಣೆಯೇ ವಿನಃ ಮತ್ತ್ಯಾವುದೂ ಅಲ್ಲ". ಇಂತಹ ಐತಿಹಾಸಿಕ ಹೋರಾಟವು ಶೋಷಕರನ್ನು ಹೊರಗೆ ಹಾಕಿ ವರ್ಗರಹಿತ ಹಾಗೂ ಸಾಮರಸ್ಯತೆಯಿಂದ ಕೂಡಿದ ಸಮಾಜವನ್ನು ಸ್ಥಾಪಿಸಿದಾಗ ಮಾತ್ರವೇ ಕೊನೆಗೊಳ್ಳುತ್ತದೆ ಎಂಬುದು ಅವನ ವಿಚಾರವಾಗಿತ್ತು.

ತನ್ನ ಬರಹಗಳಲ್ಲಿ ಆರ್ಥಿಕ ರಚನೆ ಹಾಗೂ ಪ್ರಕ್ರಿಯೆಗಳಿಗೆ ಹೆಚ್ಚಿನ ಪ್ರಾಧಾನ್ಯತೆಯನ್ನು ನೀಡಿದ ಕಾರ್ಲ್ ಮಾರ್ಕ್ಸ್ ಮಾನವನ ಇತಿಹಾಸದುದ್ದಕ್ಕೂ ಇವು ಸಾಮಾಜಿಕ ವ್ಯವಸ್ಥೆಯ ತಳಹದಿಯನ್ನು ರೂಪಿಸುತ್ತದೆ ಎಂದು

ನಂಬಿದ್ದರು. ಜನರ ವಿಚಾರಗಳು, ನಂಬಿಕೆಗಳು ಆರ್ಥಿಕ ವ್ಯವಸ್ಥೆಯಿಂದಲೆ ರೂಪಗೊಂಡಿದೆ ಎಂಬುದು ಅವರ ವಾದವಾಗಿತ್ತು. ಲೌಕಿಕ ಜೀವನದಿಂದಲೇ ಜನರ ಮನೋಭಾವನೆಗಳು, ಜೀವನದ ರೀತಿ ನೀತಿಗಳು ರೂಪುಗೊಳ್ಳುತ್ತದೆಯೇ ವಿನಃ ಮನೋಭಾವನೆಗಳು ಲೌಕಿಕ ಜೀವನವನ್ನು ರೂಪಿಸುವುದಿಲ್ಲ ಎಂದು ಹೇಳಿದ ಮಾರ್ಕ್ಸ್ ಅರ್ಥ ವ್ಯವಸ್ಥೆ ಹೇಗೆ ಕಾರ್ಯಗೊಳ್ಳುತ್ತಿದೆ, ಭೂತಕಾಲದಿಂದ ಹೇಗೆ ಬದಲಾಗುತ್ತಿದೆ ಎಂಬುದನ್ನು ಅರ್ಥಮಾಡಿಕೊಂಡರೆ, ಸಮಾಜವನ್ನು ಭವಿಷ್ಯತ್ತಿನಲ್ಲಿ ಹೇಗೆ ಬದಲಾಯಿಸಬಹುದೆಂಬುದನ್ನು ಕಲಿಯಬಹುದಾಗಿದೆ ಎಂದು ವಾದಿಸಿದ್ದ. ಇಂತಹ ಬದಲಾವಣೆಯನ್ನು ಹೇಗೆ ತರುವುದು? ಎಂಬ ಪ್ರಶ್ನೆಗೆ "ವರ್ಗ ಸಂಘರ್ಷಣೆಯಿಂದಲೇ" ಎಂಬುದು ಅವರ ಉತ್ತರವಾಗಿತ್ತು.

ಆಧುನಿಕ ಸಮಾಜಶಾಸ್ತ್ರಜ್ಞರು ಕಾರ್ಲ್ ಮಾರ್ಕ್ಸ್‌ನ ಕೆಲವು ವಿಚಾರಗಳನ್ನು ತಿರಸ್ಕರಿಸಿದ್ದರೂ ಸಾಮಾಜಿಕ ಕ್ಷೇತ್ರಗಳ ಮೇಲೆ ಆರ್ಥಿಕ ವ್ಯವಸ್ಥೆಯ ಮೂಲ ಪ್ರಭಾವ ಇದೆ ಎಂಬ ಅಂಶವನ್ನು ಎಲ್ಲರೂ ಗುರುತಿಸಿದ್ದಾರೆ. ಅವರ "ಸಂಘರ್ಷಣೆಯ ಪರಿವೃಷ್ಟಿ" ಸಾಮಾಜಿಕ ವಿಷಯಗಳನ್ನು ಅರ್ಥಮಾಡಿಕೊಳ್ಳುವಲ್ಲಿ ಸಹಾಯಕವಾಗುತ್ತದೆ.

ಕಾರ್ಲ್‌ಮಾರ್ಕ್ಸ್‌ರ ಪ್ರಮುಖ ಕೃತಿಗಳು, (1) "ದಿ ಜರ್ಮನ್ ಐಡಿಯಾಲಜಿ", (2) "ದಿ ಪಾವರ್ಟಿ ಆಫ್ ಫಿಲೋಸಫಿ", (3) "ದಿ ಹೋಲಿ ಫ್ಯಾಮಿಲಿ", (4) "ದಿ ಮ್ಯಾನಿಫೆಸ್ಟೊ ಆಫ್ ದಿ ಕಮ್ಯೂನಿಸ್ಟ್ ಪಾರ್ಟಿ", (5) "ದಾಸ್ ಕ್ಯಾಪಿಟಲ್".

### ಇ. ಮ್ಯಾಕ್ಸ್ ವೇಬರ್: (Max Weber)

ಮ್ಯಾಕ್ಸ್ ವೇಬರನು ಜರ್ಮನ್ ದೇಶದ ಮತ್ತೊಬ್ಬ ಸಮಾಜಶಾಸ್ತ್ರಜ್ಞ ಹಾಗೂ ಆರಂಭಿಕ ಚಿಂತಕ. ಸಾಮಾಜಿಕ ವರ್ತನೆಯ ವೈಜ್ಞಾನಿಕ ಅಧ್ಯಯನ ಮತ್ತು ವರ್ತನೆಯ ಕಾರಣ ಮತ್ತು ಪರಿಣಾಮಗಳನ್ನು ವಿಶ್ಲೇಷಿಸುವುದು ಸಮಾಜಶಾಸ್ತ್ರದ ಮುಖ್ಯ ಉದ್ದೇಶ. ಇವರು ನೌಕರಶಾಹಿ (Bureaucracy) ಯ ಮೂಲ ಲಕ್ಷಣಗಳನ್ನು ವೈಜ್ಞಾನಿಕ ಹಿನ್ನೆಲೆಯಲ್ಲಿ ವಿವರಿಸಿದ್ದಾರೆ. ಪಾಶ್ಚಿಮಾತ್ಯರ ಬಂಡವಾಳಶಾಹಿಯ ಬೆಳವಣಿಗೆಯು ಧರ್ಮದ ತಾರ್ಕಿಕ ನೆಲೆಯ ಬೆಳವಣಿಗೆಯಾಗಿದೆ. ಸಾಮಾಜಿಕ ಕ್ರಿಯೆಯನ್ನು ಸಾಂಪ್ರದಾಯಿಕ, ಭಾವನಾತ್ಮಕ, ಕಾರ್ಯಾರ್ತ್ಮಕ ಮತ್ತು ಮೌಲ್ಯಯುಕ್ತ ಎಂದು ನಾಲ್ಕು ರೀತಿ ವರ್ಗೀಕರಿಸಿದ್ದಾರೆ. ಅಧಿಕಾರವನ್ನು (Authority) ಸಾಂಪ್ರದಾಯಿಕ, ತಾರ್ಕಿಕ, ಕಾನೂನಾತ್ಮಕ ಮತ್ತು ಆಕರ್ಷಕ ಎಂದು ವಿವರಿಸಿದ್ದಾರೆ. ದಿ ಎಕಾನಮಿ ಅಂಡ್ ಸೊಸೈಟಿ, ದಿ ಪ್ರಾಟೋಸ್ಟೆಂಟ್ ಎಥಿಕ್ಸ್ ಅಂಡ್ ದ ಸ್ಪಿರಿಟ್ ಆಫ್ ಡೆಮಾಕ್ರಸಿ, ಸಿಟಿ, ಬ್ಯೂರೋಕ್ರಸಿ ಮತ್ತು ದಿ ಪ್ರಿನ್ಸಿಪಲ್ಸ್ ಆಫ್ ಸೋಷಿಯಲ್ ಅಂಡ್ ಎಕನಾಮಿಕ್ ಆರ್ಗನೈಜೇಷನ್ – ಇವು ಮ್ಯಾಕ್ಸ್ ವೆಬರ್‌ರವರ ಪ್ರಮುಖ ಕೃತಿಗಳಾಗಿವೆ.

### ಇತರ ಪಾಶ್ಚಾತ್ಯ ಚಿಂತಕರು

ಡಬ್ಲ್ಯೂ.ಜಿ.ಸಮ್ನರ್, ಹೆಚ್,ಎಂ.ಜಾನ್ಸನ್, ಮ್ಯಾಕ್ಸ್ ವೆಬರ್, ಸಿ.ಹೆಚ್.ಕೂಲೆ, ಗಿನ್ಸ್ ಬರ್ಗ್, ಡಬ್ಲ್ಯೂ.ಎಫ್.ಆಗ್‌ಬರ್ನ್, ಇ.ಎ.ರಾಸ್, ಪಿ .ಎ.ಸರೋಕಿನ್, ಎಲ್.ಟಿ.ಹಬ್‌ಹೌಸ್, ಲೀಪ್‌ಲೇ, ಲೆವಿಸ್ಟ್ರಾಸ್, ಜಾರ್ಜ್ ಸಿಮಿಲ್, ಟಾಲಕಾಟ್ ಪಾರ್ಸನ್, ಆರ್.ಕೆ.ಮರ್ಟನ್, ಕಿಂಗ್ಸ್‌ಲೇ ಡೇವಿಸ್, ಆರ್.ಎಂ.ಮೆಕ್‌ಐವರ್ ಇನ್ನೂ ಮುಂತಾದವರು ಸಮಾಜ ಶಾಸ್ತ್ರವನ್ನು ಜನಪ್ರಿಯ ಅಧ್ಯಯನವನ್ನಾಗಿಸಲು ಶ್ರಮಿಸಿದ್ದಾರೆ.

### ಭಾರತೀಯ ಸಮಾಜಶಾಸ್ತ್ರಜ್ಞರು:

ಭಾರತದಲ್ಲಿ ಸಮಾಜಶಾಸ್ತ್ರದ ಅಧ್ಯಯನದ ವಿಷಯವಾಗಿ ಯೂರೋಪಿಯನ್ನರ ಆಗಮನದ ನಂತರ

ಆರಂಭವಾಯಿತು. ಆದರೆ ಭಾರತದಲ್ಲಿ ಸಮಾಜಶಾಸ್ತ್ರೀಯ ಚಿಂತನೆಗಳು ವೇದಗಳು, ಉಪನಿಷತ್ತು, ಮಹಾಕಾವ್ಯಗಳು, ಮನುಸ್ಮೃತಿ, ಕೌಟಿಲ್ಯನ ಅರ್ಥಶಾಸ್ತ್ರ ಮುಂತಾದ ಪ್ರಾಚೀನ ಬರಹಗಳಲ್ಲಿ ದೊರಕುತ್ತದೆ.

1914ರಿಂದ ಬಾಂಬೆ ವಿಶ್ವವಿದ್ಯಾಲಯದ ಅರ್ಥಶಾಸ್ತ್ರ ವಿಭಾಗದಲ್ಲಿ ಸಮಾಜಶಾಸ್ತ್ರದ ಬೋಧನೆಗೆ ಅವಕಾಶವಾಯಿತು. 1919ರಲ್ಲಿ ಪ್ಯಾಟ್ರಿಕ್ ಗೆಡ್ಡೆಸ್ ಎಂಬ ಬ್ರಿಟಿಷ್ ಸಾಮಾಜಿಕ ಭೂಗೋಳಶಾಸ್ತ್ರಜ್ಞ ಹಾಗೂ ನಗರ ನಿಯೋಜಕನ ನೇತೃತ್ವದಲ್ಲಿ ಸ್ವತಂತ್ರ ವಿಭಾಗವಾಗಿ ಮುಂಬೈ ವಿಶ್ವವಿದ್ಯಾನಿಲಯದಲ್ಲಿ ಸಮಾಜಶಾಸ್ತ್ರ ಅಸ್ಥಿತ್ವಕ್ಕೆ ಬಂದಿತು. ಆನಂತರ ದೇಶದ ವಿವಿಧ ವಿಶ್ವವಿದ್ಯಾನಿಲಯಗಳಲ್ಲಿ ಮತ್ತು ಕಾಲೇಜುಗಳಲ್ಲಿ ಸಮಾಜಶಾಸ್ತ್ರವನ್ನು ಬೋಧಿಸಲು ಆರಂಭಿಸಲಾಯಿತು. ಭಾರತದಲ್ಲಿ ಸಮಾಜಶಾಸ್ತ್ರದ ಪ್ರಾರಂಭಿಕ ಬೆಳವಣಿಗೆಯ ಹಂತದಲ್ಲಿ ರಾಧಾಕಮಲ್ ಮುಖರ್ಜಿ, ಬಿ ಕೆ ಸರ್ಕಾರ್, ಡಿ ಪಿ ಮುಖರ್ಜಿ, ಡಿ ಎನ್ ಮಜುಂದಾರ್, ಜಿ ಎಸ್ ಘುರ್ಯೆ, ಇರಾವತಿ ಕರ್ವೆ, ಕೆ ಎಂ ಕಪಾಡಿಯ ಇವರುಗಳನ್ನು ಹೆಸರಿಸಬಹುದು. ಆನಂತರದ ಸಮಾಜಶಾಸ್ತ್ರದ ಬೆಳವಣಿಗೆಗೆ ಅಪಾರ ಕೊಡುಗೆಗಳನ್ನು ನೀಡಿದವರ ಸಾಲಿನಲ್ಲಿ ಎಂ ಎನ್ ಶ್ರೀನಿವಾಸ್, ಎ ಆರ್ ದೇಸಾಯಿ, ಜಿ ಆರ್ ಮದನ್, ಎಂ ಎಸ್ ರಾವ್, ಎಂ ಎಸ್ ಗೋರೆ, ಎಸ್ ಸಿ ದುಬೆ ಇನ್ನು ಮುಂತಾದವರಿದ್ದಾರೆ. ಈ ಪಠ್ಯಕ್ರಮ ಅಧ್ಯಯನ ದೃಷ್ಟಿಯಿಂದ ಡಾ॥ ಜಿ ಎಸ್ ಘುರ್ಯೆ, ಡಾ॥ ಎಂ ಎನ್ ಶ್ರೀನಿವಾಸ್, ಡಾ॥ ಇರಾವತಿ ಕರ್ವೆ, ಎ.ಆರ್.ದೇಸಾಯಿರವರನ್ನು ಇಲ್ಲಿ ಸಂಕ್ಷಿಪ್ತವಾಗಿ ಪರಿಚಯಿಸಲಾಗಿದೆ.

### ಇ. ಡಾ॥ ಜಿ ಎಸ್ ಘುರ್ಯೆ (1893–1984) Dr. G S Ghurye:

ಮಹಾರಾಷ್ಟ್ರದ ಮಾಲ್ವಾನ್ ರತ್ನಗಿರಿ ಎಂಬಲ್ಲಿ ಡಿಸೆಂಬರ್ 12, 1893 ರಂದು ಡಾ॥ ಗೋವಿಂದ್ ಸದಾಶಿವ ಘುರ್ಯೆರವರು ಜನ್ಮತಾಳಿದರು. ಮುಂಬೈ ವಿಶ್ವವಿದ್ಯಾನಿಲಯದಲ್ಲಿ ಆಂಗ್ಲ ಮಾಧ್ಯಮದಲ್ಲಿ ತಮ್ಮ ಕಾಲೇಜು ಶಿಕ್ಷಣವನ್ನು ಪೂರ್ಣಗೊಳಿಸಿದರು. ಪ್ರತಿಭಾಶಾಲಿ ವಿಧ್ಯಾರ್ಥಿಯಾಗಿದ್ದ ಅವರು ಸ್ವರ್ಣ ಪದಕ ವಿಜೇತರಾಗಿ,



ಸಮಾಜಶಾಸ್ತ್ರದ ಅಧ್ಯಯನಕ್ಕೆ ಇಂಗ್ಲೇಂಡ್‌ಗೆ ಪ್ರಯಾಣಿಸಿದ್ದು, ಅಲ್ಲಿ ಪ್ರೊಫೆಸರ್ ಎಲ್.ಟಿ.ಹಬ್‌ಹೌಸ್ ಅವರೊಂದಿಗೆ ಒಡನಾಟವಿತ್ತು. ಮತ್ತು ಡಬ್ಲೂ.ಹೆಚ್.ಆರ್.ರಿವರ್ಸ್ ಅವರ ಮಾರ್ಗದರ್ಶನದಲ್ಲಿ ಅಧ್ಯಯನವನ್ನು ಮಾಡುತ್ತಿದ್ದರು. ಆದರೆ ಅವರ ನಿಧನದ ನಂತರ ಎ.ಸಿ.ಹಡ್ಡೆನ್ ಅವರ ಮಾರ್ಗದರ್ಶನದಲ್ಲಿ ಅಧ್ಯಯನವನ್ನು ಪೂರ್ಣಗೊಳಿಸಿದರು.

ಭಾರತದಲ್ಲಿ ಸಮಾಜಶಾಸ್ತ್ರವನ್ನು ಜನಪ್ರಿಯಗೊಳಿಸುವಲ್ಲಿ ಘುರ್ಯೆರವರು ಪ್ರಮುಖ ಪಾತ್ರ ವಹಿಸಿದ್ದರಿಂದ ಅವರನ್ನು **"ಭಾರತೀಯ ಸಮಾಜಶಾಸ್ತ್ರದ ಪಿತಾಮಹ"** ಎಂದು ಕರೆಯಲಾಗಿದೆ. ಸಮಾಜಶಾಸ್ತ್ರದ ವಿಭಾಗದ ಮೊದಲ ಮುಖ್ಯಸ್ಥರಾಗಿ ಕಾರ್ಯನಿರ್ವಹಿಸಿದ ಖ್ಯಾತಿ ಘುರ್ಯೆರವರಿಗೆ ಸಲ್ಲುತ್ತದೆ. ಭಾರತೀಯ ಸಮಾಜಶಾಸ್ತ್ರದ ಕ್ಷೇತ್ರದಲ್ಲಿ ಇವರನ್ನು ಆರಂಭಿಕ ಸಮಾಜಶಾಸ್ತ್ರಜ್ಞರೆಂದು ಗುರುತಿಸಲಾಗಿದೆ.

ಡಾ॥ ಘುರ್ಯೆರವರು ಭಾರತದ ಜಾತಿ ಮತ್ತು ಜನಾಂಗಗಳ ಮೇಲೆ ಆಳವಾದ ಅಧ್ಯಯನ ನಡೆಸಿದ್ದಾರೆ. ಜಾತಿಯ ಉಗಮ, ಪ್ರಾದೇಶಿಕವಾಗಿ ಜಾತಿಯ ಅಸ್ಥಿತ್ವ, ಅದರ ಲಕ್ಷಣಗಳು, ಜಾತಿಯ ಮೇಲೆ ಬ್ರಿಟಿಷ್ ಆಳ್ವಿಕೆಯ ಪ್ರಭಾವ, ರಾಜಕೀಯದಲ್ಲಿ ಜಾತಿಯ ಪಾತ್ರ ಇತ್ಯಾದಿಗಳ ಬಗ್ಗೆ ಸವಿಸ್ತಾರವಾಗಿ ಬರೆದಿದ್ದಾರೆ. ಭಾರತದ ಜಾತಿ ವ್ಯವಸ್ಥೆಯನ್ನು ಕುರಿತಂತೆ ಈ ಗ್ರಂಥ ಇಂದಿಗೂ ಪ್ರಮುಖ ವಿಷಯ ಸಂಪತ್ತಾಗಿದೆ.

ಹಿಂದೂ ಯುರೋಪಿಯನ್ ಸಂಸ್ಕೃತಿಯ ಬಂಧುತ್ವವನ್ನು ಕುರಿತು ಡಾ॥ ಘುರ್ಯೆರವರು ತುಲನಾತ್ಮಕ ಅಧ್ಯಯನ ನಡೆಸಿದ್ದಾರೆ. **"ಫ್ಯಾಮಿಲಿ ಅಂಡ್ ಕಿನ್ ಇನ್ ಇಂಡೋ ಯುರೋಪಿಯನ್ ಕಲ್ಚರ್"** ಎಂಬ ಅವರ ಅಧ್ಯಯನವು ಭಾರತೀಯ ಸಮಾಜ ಹಾಗೂ ಸಂಸ್ಕೃತಿಯ ಹಿಂದಿನ ವಿಕಾಸವನ್ನು ತಿಳಿವುದರ ಜೊತೆಗೆ ವರ್ತಮಾನದ ಭಾರತೀಯ ಸಾಮಾಜಿಕ ಸಮಸ್ಯೆಗಳು ಹಾಗೂ ತುಡಿತಗಳನ್ನು ವಿಶ್ಲೇಷಿಸಿದೆ.

ಗ್ರಾಮೀಣ ಸಂಸ್ಕೃತಿಯ ಬಗೆಗಿನ ಘುರ್ಯೆರವರ ಅಧ್ಯಯನವು ಸಮಾಜಶಾಸ್ತ್ರ ಕ್ಷೇತ್ರದಲ್ಲಿ ಮಹತ್ವವನ್ನು ಗಳಿಸಿದೆ. ಪ್ರಧಾನ ದೇವದೇವತೆಗಳು, ಪ್ರಾಚೀನ ನಾಗರೀಕತೆಗಳು, ಸಾಧು–ಸಂತರ ಪಾತ್ರಗಳ ಅಧ್ಯಯನವು ಅವರ ಈ ಸಂಸ್ಕೃತಿಯ ವಿಶ್ಲೇಷಣೆಯಲ್ಲಿ ಸೇರಿಕೊಂಡಿದೆ. ಭರತನಾಟ್ಯ ಹಾಗೂ ಅದರ ವೇಷಭೂಷಣಗಳ ಬಗೆಗೂ ಘುರ್ಯೆರವರು ಬರೆದಿದ್ದಾರೆ. ರಜಪೂತ ಸಂಸ್ಕೃತಿ, ಷೆಕ್ಸಪಿಯರ್, ಕಾಮ್ಟ್, ಭಾರತದ ಪ್ರಚಲಿತ ಸಮಸ್ಯೆಗಳ ಅಧ್ಯಯನದ ಬಗೆಗೂ ಘುರ್ಯೆರವರು ಗಮನಹರಿಸಿದ್ದಾರೆ. ಒಟ್ಟಾರೆ ಅವರ ಕಾರ್ಯಕ್ಷೇತ್ರ, ಭೂತ, ವರ್ತಮಾನ ಹಾಗೂ ತಡೆಯಿಲ್ಲದ ಭವಿಷ್ಯತ್ತಿನ ತಾರ್ಕಿಕ ಮುಂದುವರಿಕೆಯ ಅಧ್ಯಯನವನ್ನು ಮುಂದಿಡುತ್ತದೆ.

ಆದಿವಾಸಿಗಳ ಏಳಿಗೆಗೆ ಸಂಬಂಧಿಸಿದಂತೆ ವೀರೀರ್ ಎಲ್ವಿನ್ ಮಂಡಿಸಿದ್ದ ಪ್ರತ್ಯೇಕತಾ ನೀತಿಯನ್ನು ಡಾ॥ ಘುರ್ಯೆರವರು ಬಲವಾಗಿ ವಿರೋಧಿಸಿದ್ದರು. ಆದಿವಾಸಿಗಳ ಸಾಮಾಜಿಕ ಹಾಗೂ ಸಾಂಸ್ಕೃತಿಕ ಪ್ರತ್ಯೇಕತೆ ಅಪಾಯಕಾರಿ ತೊಡಕುಗಳನ್ನುಂಟು ಮಾಡುತ್ತದೆಯೆಂದು ಹೇಳಿದ ಅವರು "ಸ್ವಾಂಗೀಕರಣ ನೀತಿ" ಯನ್ನು ಪ್ರಸ್ತುತಪಡಿಸಿದ್ದರಾದರೂ ಮುಂದೆ "ಜವಹರ್ ಲಾಲ್ ನೆಹರೂ"ರವರಿಂದ ಅದು ತಿರಸ್ಕೃತವಾಗಿತ್ತು.

ಡಾ॥ ಜಿ.ಎಸ್.ಘುರ್ಯೆರವರು 1. "ಕ್ಯಾಸ್ಟ್ ಅಂಡ್ ರೇಸ್ ಇನ್ ಇಂಡಿಯಾ", 2. "ಷೆಡ್ಯೂಲ್ ಟ್ರೈಬ್ಸ್", 3. "ಸೋಷಿಯಲ್ ಟೆನ್ಷನ್ ಇನ್ ಇಂಡಿಯಾ, 4. "ವೇದಿಕ್ ಇಂಡಿಯಾ 5. ಭಾರತೀಯ ಸಾದುಗಳು, 6) ಭಾರತೀಯ ಪೋಷಾಕುಗಳು (Indian costumes) ಇನ್ನು ಮುಂತಾದ 30ಕ್ಕೂ ಅಧಿಕ ಕೃತಿಗಳನ್ನು ರಚಿಸಿದ್ದಾರೆ.

**"ಇಂಡಿಯನ್ ಸೋಷಿಯಲಾಜಿಕಲ್ ಸೊಸೈಟಿ"** (ISS) ಎಂಬ ಸಂಘಟನೆಯನ್ನು ಸ್ಥಾಪಿಸಿ, "ಸೋಷಿಯಲಾಜಿಕಲ್ ಬುಲೆಟಿನ್" ಎಂಬ ಪ್ರಕಟಣೆಯನ್ನು ಆರಂಭಿಸಿದ ಸಾಧನೆ ಡಾ॥ ಘುರ್ಯೆರವರದ್ದು, ಇವು ಈಗಲೂ ಸಮಾಜಶಾಸ್ತ್ರದ ಸೇವೆಗೆ ತಮ್ಮನ್ನು ತೊಡಗಿಸಿಕೊಂಡಿವೆ.

### ಈ. ಡಾ॥ ಎಂ ಎನ್ ಶ್ರೀನಿವಾಸ್ (1916–1999) Dr. M N Srinivas:



ಡಾ॥ ಮೈಸೂರು ನರಸಿಂಹಾಚಾರ್ ಶ್ರೀನಿವಾಸ್‌ರವರು ಭಾರತದ ಆರಂಭಿಕ ಸಮಾಜಶಾಸ್ತ್ರಜ್ಞ ಹಾಗೂ ಸಾಮಾಜಿಕ ಮಾನವ ಶಾಸ್ತ್ರಜ್ಞರಾಗಿದ್ದಾರೆ. ಆಕ್ಸ್‌ಫರ್ಡ್ ವಿಶ್ವ ವಿದ್ಯಾನಿಲಯದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದು ಡಾಕ್ಟರೇಟ್ ಆಫ್ ಫಿಲಾಸಫಿಯನ್ನು ಪೂರ್ಣಗೊಳಿಸಿದರು. ಡಾ॥ಎಂ.ಎನ್.ಶ್ರೀನಿವಾಸ್ ಪ್ರಸಿದ್ಧ ಸಮಾಜಶಾಸ್ತ್ರಜ್ಞರಾಗಿದ್ದರು, ಸಮಾಜಶಾಸ್ತ್ರದ ಅಧ್ಯಯನದಲ್ಲಿ ಗ್ರಾಂಥಿಕ ದೃಷ್ಟಿಕೋನಕ್ಕೆ (Book view) ಬದಲಾಗಿ ಕ್ಷೇತ್ರಾಧ್ಯಯನ (Field work) ದಿಂದ ಹೆಚ್ಚು ಜನಪ್ರಿಯರಾಗಿದ್ದಾರೆ.

**"ರಿಲಿಜನ್ ಅಂಡ್ ಸೊಸೈಟಿ ಅಮಾಂಗ್ ದಿ ಕೂರ್ಗ್ಸ್ ಆಫ್ ಸೌತ್ ಇಂಡಿಯ"** **(ದಕ್ಷಿಣ ಭಾರತದ ಕೊಡವರ ಧರ್ಮ ಮತ್ತು ಸಮಾಜ)** ಎಂಬುದು ಅವರ ಪ್ರಸಿದ್ಧ ಕೃತಿಯಾಗಿದ್ದು, ಇದು ಕೊಡವರ ಧಾರ್ಮಿಕ ನಂಬಿಕೆಗಳು ಹಾಗೂ ಸಾಂಸ್ಕೃತಿಕ ಪದ್ಧತಿಗಳ ಅಧ್ಯಯನವನ್ನು ಕುರಿತಾದ ವೈಜ್ಞಾನಿಕ

ಶೋಧನೆಯಾಗಿದೆ. ಶ್ರೀನಿವಾಸ್ ರವರ ಈ ಅಧ್ಯಯನ ಜಗತ್ತಿನಾದ್ಯಂತ ಸಮಾಜಶಾಸ್ತ್ರದ ಪಟ್ಟಿಯಲ್ಲಿ ಒಬ್ಬರನ್ನಾಗಿ ಅವರನ್ನು ನೆಲೆಗೊಳಿಸಿತು.

ಭಾರತೀಯ ಸಮಾಜದ ಸಾಮಾಜಿಕ ಪರಿವರ್ತನೆಯ ವಿಶ್ಲೇಷಣೆಯಲ್ಲಿ ಎಂ.ಎನ್.ಶ್ರೀನಿವಾಸ್ ರವರು "ಸಂಸ್ಕೃತಾನುಕರಣ", "ಪಾಶ್ಚಾತ್ಯೀಕರಣ", "ಪ್ರಬಲ ಜಾತಿಗಳು" ಎಂಬ ಪರಿಕಲ್ಪನೆಗಳನ್ನು ಪರಿಚಯಿಸಿದರು. "ಪಾಶ್ಚಾತ್ಯೀಕರಣ" ಪ್ರಕ್ರಿಯೆ ಎಂಬುದು ಭಾರತೀಯ ಸಮಾಜದಲ್ಲಿ "ಹೊಸ ಗಣ್ಯರೆಂಬ" (The New Elite) ವಿಭಾಗವನ್ನು ಹುಟ್ಟುಹಾಕಿತೆಂಬ ಅಂಶವನ್ನು ಮುಂದಿಟ್ಟ ಶ್ರೀನಿವಾಸ್ ರವರು ಸ್ವಾತಂತ್ರ್ಯ ಚಳುವಳಿಯಲ್ಲಿ ಈ ಬುದ್ಧಿವಂತ ಸಮೂಹವು ಗಣನೀಯವಾದ ಪಾತ್ರವನ್ನು ವಹಿಸಿದೆಯೆಂದು ತಿಳಿಸಿದ್ದಾರೆ.

ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಮನ್ನಣೆಯನ್ನು ಗಳಿಸಿದ್ದ ಎಂ.ಎನ್.ಶ್ರೀನಿವಾಸ್ ರವರು ಹಲವಾರು ಪ್ರಶಸ್ತಿಗಳನ್ನು ಸಂಪಾದಿಸಿದ್ದಾರೆ, ತಮ್ಮ ಸೇವಾವಧಿಯ ಕೊನೆಯಲ್ಲಿ ಬೆಂಗಳೂರಿನ ಭಾರತೀಯ ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆ (Institute for Social and Economic Change) ಎಂಬ ಸಂಸ್ಥೆಗೆ ನಿರ್ದೇಶಕರಾಗಿ ಸೇವೆ ಸಲ್ಲಿಸಿದ್ದಾರೆ.

ಅವರ ಪ್ರಮುಖ ಕೃತಿಗಳು 1. "ಇಂಡಿಯನ್ ವಿಲೇಜಸ್", 2. "ಕಾಸ್ಟ್ ಇನ್ ಮಾಡ್ರರ್ನ್ ಇಂಡಿಯಾ ಅಂಡ್ ಅದರ್ ಎಸ್ಸೇಸ್", 3. "ಸೋಷಿಯಲ್ ಛೇಂಜ್ ಇನ್ ಮಾಡ್ರರ್ನ್ ಇಂಡಿಯಾ", 4. "ರಿಮೆಂಬರ್ಡ್ ವಿಲೇಜ್" (5) 21ನೇ ಶತಮಾನದಲ್ಲಿ ಜಾತಿ ಮತ್ತು ಅದರ ಹೊಸ ರೂಪ ಇತ್ಯಾದಿ ಗ್ರಂಥಗಳನ್ನು ರಚಿಸಿದ್ದಾರೆ.

### ಉ. ಡಾ॥ ಇರಾವತಿ ಕರ್ವೆ Dr. Iravati Karve:

ಡಾ॥ ಇರಾವತಿ ಕರ್ವೆರವರನ್ನು ಪ್ರತಿಭಾವಂತ ಹಾಗೂ ಒಬ್ಬ ಉತ್ತಮ ಸಮಾಜಶಾಸ್ತ್ರಜ್ಞೆಯೆಂದು



ಗುರುತಿಸಲಾಗಿದೆ. ಡಾ॥ ಜಿ.ಎಸ್.ಘುರ್ಯೆರವರ ವಿದ್ಯಾರ್ಥಿನಿಯಾಗಿದ್ದ ಡಾ॥ ಇರಾವತಿ ಕರ್ವೆಯವರು "ಭಾರತದ ಪ್ರಪ್ರಥಮ ಮಹಿಳಾ ಸಮಾಜಶಾಸ್ತ್ರಜ್ಞೆ" ಎಂಬ ಖ್ಯಾತಿ ಗಳಿಸಿದ್ದಾರೆ. ಮುಂಬಯಿ ವಿಶ್ವವಿದ್ಯಾನಿಲಯದ ಸಮಾಜಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿಯನ್ನು ಗಳಿಸಿಕೊಂಡು ಪೂನಾದ ಡೆಕ್ಕನ್ ಕಾಲೇಜಿನ ಸಮಾಜಶಾಸ್ತ್ರದ ಸಂಶೋಧನಾ ಕೇಂದ್ರದಲ್ಲಿ ಪ್ರಾಧ್ಯಾಪಕಿಯಾಗಿ ಸೇವೆ ಸಲ್ಲಿಸಿದ್ದಾರೆ. ಕರ್ವೆರವರ ಅಧ್ಯಯನ ಆಸಕ್ತಿಯ ಕ್ಷೇತ್ರ ವಿಸ್ತಾರವಾದುದು. ಭಾರತೀಯ ಸಮಾಜ, ಸಾಮಾಜಿಕ ಸಂಸ್ಥೆಗಳು, ಮತ್ತು ಬಂಧುತ್ವ ಇವರ ವಿಶೇಷ ಆಸಕ್ತಿಯ ಅಧ್ಯಯನ ಕ್ಷೇತ್ರಗಳಾಗಿದ್ದವು. ಭಾರತೀಯ ಸಮಾಜವನ್ನು ಮತ್ತು ಇಲ್ಲಿನ ಸಂಸ್ಥೆಗಳನ್ನು ಬಂಧುತ್ವ ವ್ಯವಸ್ಥೆಯ ಮೂಲಕ ಅರ್ಥೈಸಿಕೊಳ್ಳುವುದು ಅವರ ಮುಖ್ಯ ಪ್ರಯತ್ನವಾಗಿತ್ತು. "ಕಿನ್‌ಷಿಪ್ ಆರ್ಗನೈಸೇಷನ್ ಇನ್ ಇಂಡಿಯಾ" ಎಂಬುದು ಅವರ ಪ್ರಸಿದ್ಧ ಕೃತಿ. "ಹಿಂದೂ ಸೊಸೈಟಿ ಆ್ಯನ್ ಇಂಟರ್‌ಪ್ರಿಟೇಷನ್", "ಫ್ಯಾಮಿಲಿ ಇನ್ ಇಂಡಿಯಾ" ಮತ್ತು "ಲ್ಯಾಂಡ್ ಅಂಡ್ ಪೀಪಲ್ ಆಫ್ ಮಹಾರಾಷ್ಟ್ರ" ಹಾಗೂ ಇನ್ನಿತರ ಏಳಕ್ಕೂ ಹೆಚ್ಚು ಕೃತಿಗಳನ್ನು ಬರೆದಿದ್ದಾರೆ. ಕರ್ವೆಯವರು ಮರಾಠಿ ಭಾಷೆಯಲ್ಲಿ ಹೆಚ್ಚಿನ ಪಾಂಡಿತ್ಯ ಹೊಂದಿದ್ದರು. "ಯುಗಾಂತ", ಎಂಬ ಅವರ ಕೃತಿಗೆ ಮಹಾರಾಷ್ಟ್ರ ಪ್ರಾದೇಶಿಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯನ್ನು ನೀಡಲಾಗಿದೆ. "ಅಮ್‌ಚಿ ಸಂಸ್ಕೃತಿ", "ಮರಾಠಿ ಲೋಕಾಂಚಿ ಸಂಸ್ಕೃತಿ", "ಹಿಂದೂ ಸಾಮಾಜಿಕ ಸಮಾಜ ರಚನಾ" ಇವು ಅವರ ಇತರ ಮರಾಠಿ ಕೃತಿಗಳು.

### ಊ. ಎ ಆರ್ ದೇಸಾಯಿ: A R Desai (1915-1994)

ಅಕ್ಷಯ್ ರಮಣಲಾಲ್ ದೇಸಾಯಿ ಕ್ರಿ.ಶ. 1915ರಲ್ಲಿ ಜನಿಸಿದ್ದರು. ಬೊಂಬಾಯಿ ವಿಶ್ವವಿದ್ಯಾನಿಲಯದಲ್ಲಿ ಜಿ ಎಸ್ ಘುರ್ಯೆರವರ ವಿದ್ಯಾರ್ಥಿಯಾಗಿದ್ದ ಅವರು ತದನಂತರ ಅದೇ ವಿಶ್ವವಿದ್ಯಾನಿಲಯದಲ್ಲಿ ಪ್ರಾಧ್ಯಾಪಕರಾಗಿ, ಇಲಾಖೆ ಮುಖ್ಯಸ್ಥರಾಗಿದ್ದರು. ಅವರು ವಿವಿಧ ರೀತಿಯಲ್ಲಿ ಮಾರ್ಕ್ಸ್‌ವಾದಿ ರಾಜಕೀಯ ಸಮೂಹಗಳೊಂದಿಗೆ ಒಡನಾಟವನ್ನು ಹೊಂದಿದ್ದರು. ಸಮಾಜಶಾಸ್ತ್ರೀಯ ಅಧ್ಯಯನದಲ್ಲಿ ಮಾರ್ಕ್ಸ್‌ವಾದಿ ದೃಷ್ಟಿಕೋನವನ್ನು ಅನುಸರಿಸುತ್ತಿದ್ದ ಅವರನ್ನು ಮಾರ್ಕ್ಸ್‌ವಾದಿ ಸಮಾಜಶಾಸ್ತ್ರಜ್ಞನೆಂದು ಕರೆಯಲಾಯಿತು.



**"ದಿ ಸೋಷಿಯಾಲ್ ಬ್ಯಾಕ್‌ಗ್ರೌಂಡ್ ಆಫ್ ಇಂಡಿಯನ್ ನ್ಯಾಷನಲಿಸಂ"** ಅವರ ಅತ್ಯುತ್ತಮ ಕೃತಿಯಾಗಿದೆ. ಈ ಗ್ರಂಥದಲ್ಲಿ ದೇಸಾಯಿರವರು ಆರ್ಥಿಕ ಪ್ರಕ್ರಿಯೆಗಳಿಗೆ, ಪ್ರಾಮುಖ್ಯತೆಯನ್ನು ನೀಡುವ ಮಾರ್ಕ್ಸ್‌ನ ವಿಶ್ಲೇಷಣೆಯನ್ನು ಭಾರತೀಯ ರಾಷ್ಟ್ರೀಯತೆಯ ವಿವರಣೆಯಲ್ಲಿ ಬಳಸಿದ್ದಾರೆ. ರೈತ ಚಳುವಳಿ, ಗ್ರಾಮೀಣ ಸಮಾಜಶಾಸ್ತ್ರ, ಆಧುನೀಕರಣ, ನಗರದ ಅಂಶಗಳು, ರಾಜಕೀಯ ಸಮಾಜಶಾಸ್ತ್ರ, ರಾಜ್ಯದ ರೂಪಗಳು ಮತ್ತು ಮಾನವಹಕ್ಕುಗಳು, ಇವುಗಳ ಬಗ್ಗೆಯೂ ಅಧ್ಯಯನ ಮಾಡಿದ್ದಾರೆ.

ಎ ಆರ್ ದೇಸಾಯಿರವರು **"ಕಲ್ಯಾಣರಾಜ್ಯ"**ದ ಬಗ್ಗೆಯೂ ಬರೆದಿದ್ದು ಅವರ ಪ್ರಕಾರ ಸಮಾಜದ ಒಳಿತಿಗಾಗಿ ಸಾಮಾಜಿಕ ನೀತಿಗಳನ್ನು ರಚಿಸಲು ಹಾಗೂ ಅನುಷ್ಠಾನಕ್ಕೆ ತರಲು ತನ್ನ ಮುಖ್ಯವಾದ ಅಧಿಕಾರವನ್ನು ಸಕ್ರೀಯವಾಗಿ ಬಳಸುವ ಭರವಸೆಯ ರಾಜ್ಯವೇ ಕಲ್ಯಾಣರಾಜ್ಯವಾಗಿದೆ. ದೇಸಾಯಿ ಹೇಳುವಂತೆ ಕಲ್ಯಾಣರಾಜ್ಯವೆಂಬುದು ಪ್ರಜಾಸತ್ತಾತ್ಮಕ ರಾಜ್ಯವಾಗಿದ್ದು ಮಿಶ್ರ ಅರ್ಥವ್ಯವಸ್ಥೆಯನ್ನು ಒಳಗೊಂಡಿರುತ್ತದೆ. ಈ ರಾಜ್ಯದಲ್ಲಿ ಖಾಸಗಿ ಬಂಡವಾಳಶಾಹಿ ಉದ್ಯಮಗಳು ಮತ್ತು ರಾಜ್ಯದ ಇಲ್ಲವೇ ಸಾರ್ವಜನಿಕ ಒಡೆತನದ ಉದ್ಯಮಗಳೆರಡು ಜೊತೆಯಾಗಿ ಅಸ್ತಿತ್ವವನ್ನು ಹೊಂದಿರುತ್ತವೆ. ಕಾರ್ಲ್ ಮಾರ್ಕ್ಸ್‌ನ ರಾಜ್ಯದ ಸೂತ್ರಗಳ ಬಗ್ಗೆ ಬರೆಯುತ್ತಾ ದೇಸಾಯಿರವರು ರಾಜಕೀಯ ಸ್ವಾತಂತ್ರ್ಯ ಹಾಗೂ ಕಾನೂನಿನ ಆಳ್ವಿಕೆಯನ್ನು ಕಲ್ಯಾಣ ರಾಜ್ಯಗಳು ಎತ್ತಿ ಹಿಡಿಯಬೇಕೆಂದು ವಾದಿಸುತ್ತಾರೆ.

ದೇಸಾಯಿರವರ **"ರೂರಲ್ ಸೋಷಿಯಾಲಜಿ ಇನ್ ಇಂಡಿಯಾ"** (ಭಾರತದಲ್ಲಿ ಗ್ರಾಮೀಣ ಸಮಾಜಶಾಸ್ತ್ರ) ಎಂಬ ಗ್ರಂಥವು ಭಾರತದಲ್ಲಿನ ಗ್ರಾಮೀಣ ಸಮಾಜಶಾಸ್ತ್ರೀಯ ಅಧ್ಯಯನಕ್ಕೆ ನಿಶ್ಚಿತ ತಿರುವು ಹಾಗೂ ಪ್ರವೃತ್ತಿಯನ್ನು ನೆಲೆಗೊಳಿಸಿತು. ಅನೇಕ ಗೌರವಗಳಿಗೆ ಪಾತ್ರರಾಗಿದ್ದ ದೇಸಾಯಿರವರನ್ನು "ಇಂಡಿಯನ್ ಸೋಸಿಯಾಲಜಿಕಲ್ ಸೊಸೈಟಿ"ಯ ಚುನಾಯಿತ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಗಿತ್ತು. ಭಾರತೀಯ ಸಮಾಜಶಾಸ್ತ್ರಕ್ಕೆ ಅವರು ಪ್ರಮುಖರಾಗಿ ಉಳಿದಿದ್ದಾರೆ.

### ಇತರೆ ಭಾರತೀಯ ಚಿಂತಕರು:

ಕೆ.ಎಂ.ಕಪಾಡಿಯಾ, ಎಮ್.ಎಸ್.ಎ.ರಾವ್, ಐ.ಪಿ.ದೇಸಾಯಿ, ಪ್ರೊ. ಯೋಗೇಂದ್ರ ಸಿಂಗ್, ಟಿ.ಕೆ.ಓಮನ್, ಡಿ.ಪಿ.ಮುಖರ್ಜಿ, ಟಿ.ಎನ್.ಮದನ್, ಪ್ರೊ. ಸಿ.ಪಾರ್ವತಮ್ಮ, ಡಾ.ಎನ್.ಜಯರಾಮ್, ಡಾ.ಎಸ್.ಸಿ.ದುಬೆ, ಪ್ರೊ. ಲೀಲಾ ದುಬೆ, ಆರ್.ಕೆ.ಮುಖರ್ಜಿ, ಹೀರೆಮಗಳೂರು ಈಶ್ವರನ್ ಇನ್ನೂ ಮುಂತಾದವರು, ಭಾರತೀಯ ಸಮಾಜಶಾಸ್ತ್ರದ ಬೆಳವಣಿಗೆಗೆ ತಮ್ಮ ಕೊಡುಗೆಗಳನ್ನು ನೀಡಿದ್ದಾರೆ.

## 1.7 ಸಮಾಜಶಾಸ್ತ್ರದ ಆಧುನಿಕ ತಿರುವುಗಳು (Mordern Trends in Sociology)

ನಮ್ಮಗೆಲ್ಲ ತಿಳಿದಿರುವಂತೆ ಸಮಾಜಶಾಸ್ತ್ರ ಪ್ರಸಕ್ತ ಕಾಲದಲ್ಲಿ ಪ್ರತ್ಯೇಕ ವಿಜ್ಞಾನವಾಗಿ ಬೆಳೆಯಲು ಎಮಿಲಿ ಡರ್ಖೀಮ್, ಮಾರ್ಕ್ಸವೇಬರ್ ಮತ್ತು ಕಾರ್ಲ್ ಮಾರ್ಕ್ಸ್‌ರವರ ಕೊಡುಗೆಗಳು ಅಪಾರವಾಗಿದೆ. ಕೆಲವು ಸಮಾಜಶಾಸ್ತ್ರಜ್ಞರ ಪ್ರಕಾರ ಆಧುನಿಕ ಸಮಾಜಶಾಸ್ತ್ರವು ವ್ಯವಸ್ಥಿತವಾಗಿ ರೂಪುಗೊಳ್ಳಲು ಈ ಮೂರು ವಿದ್ವಾಂಸರ ಪಾತ್ರ ಶ್ಲಾಘನೀಯವಾಗಿದೆ. ಅದಾಗ್ಯೂ, ಈ ಶಾಸ್ತ್ರವೂ ಜಡ ಸ್ವರೂಪವಾಗಿರದೆ ಹೊಸ ಆಯಾಮಗಳ ಅಧ್ಯಯನದಿಂದ ಮತ್ತಷ್ಟು ಬೆಳೆಯುತ್ತಿದೆ. ದುಡಿಯುವ ಕ್ಷೇತ್ರಗಳು, ಬದಲಾಗುತ್ತಿರುವ ಕೌಟುಂಬಿಕ, ಧಾರ್ಮಿಕ, ಶಿಕ್ಷಣ, ಮನೋರಂಜನೆ, ಆರ್ಥಿಕ, ರಾಜಕೀಯ ವ್ಯವಸ್ಥೆಗಳ ಬಗ್ಗೆ ಹೊಸ ದೃಷ್ಟಿಕೋನಗಳಿಂದ ಸಮರ್ಪಕವಾಗಿ ವಿಶ್ಲೇಷಿಸುವಲ್ಲಿ ಸಹಾಯಕವಾಗಿದೆ.

ಸಮಕಾಲೀನ ಸಮಾಜಶಾಸ್ತ್ರದಲ್ಲಿ ಹೊಸ ತಿರುವು ಪಡೆಯಲು ಆಧುನಿಕ ಸಮಾಜಶಾಸ್ತ್ರಜ್ಞರ ಅಮೋಘವಾಗಿ ಶ್ರಮಿಸಿದ್ದಾರೆ. ಅದರಲ್ಲಿ ಪ್ರಮುಖರು–ಜಿ. ಹೆಚ್. ಮೀಡ್ (1863–1931) ಸಿ.ಹೆಚ್ ಕೂಲೀ (1864–1929) ಟಾಲ್ಕಾಟ್ ಪಾರ್ಸನ್ಸ್–(1902–1974) ರಾಬರ್ಟ್ ಮರ್ಟನ್ (1920–2003) ಮತ್ತು ಇನ್ನಿತರ ಪ್ರಸಕ್ತ ಸಾಮಾಜಿಕ ಸನ್ನಿವೇಶಗಳ ಬಗ್ಗೆ ವೈಜ್ಞಾನಿಕ ಅಧ್ಯಯನ ನಡೆಸುತ್ತಾ ಹೊಸ ವಿಚಾರಧಾರೆಗಳನ್ನು ಮಂಡಿಸಿದ್ದಾರೆ.

ಸಮಾಜಶಾಸ್ತ್ರಜ್ಞರೆಲ್ಲರೂ ಭಾವಿಸಿದ್ದಂತೆ 21ನೇ ಶತಮಾನದಲ್ಲಿ ಬಹುಶಃ ಸಮಾಜದಲ್ಲಿ ವಿನೂತನ ಸಾಮಾಜಿಕ ಸನ್ನಿವೇಶಗಳು ಸಂಭವಿಸುತ್ತಾ, ಅಂತರಿಕ ಸಂಬಂಧಗಳು ಮತ್ತು ಸಮಸ್ಯೆಗಳು ಉದ್ಭವಿಸುತ್ತವೆ.ಅಂತಹ ಸಂದಿಗ್ಧ ಪರಿಸ್ಥಿತಿಗಳನ್ನು ಸಮಾಜಶಾಸ್ತ್ರದ ಮೂಲಕ ವಿಶ್ಲೇಷಿಸಿ ಪರಿಹಾರ ಮಾರ್ಗವನ್ನು ಶೋಧಿಸಬೇಕಾಗುತ್ತದೆ.

ಸಮಾಜಶಾಸ್ತ್ರದ ಸ್ವರೂಪ, ದೃಷ್ಟಿಕೋನಗಳು ಮತ್ತು ಅಧ್ಯಯನದ ವಸ್ತುಗಳ ಸುಧೀರ್ಘವಾದ ವಿಶ್ಲೇಷಣೆ ಮತ್ತು ವಿವರಣೆಗಳಲ್ಲಿ ಆಧುನಿಕ ಸಮಾಜಗಳು ಹೊಸತನಕ್ಕೆ ಪ್ರಾಮುಖ್ಯತೆಯನ್ನು ನೀಡಬೇಕಾಗಿದೆ. ಇಲ್ಲವಾದರೆ ಸಮಾಜಶಾಸ್ತ್ರದ ಅಧ್ಯಯನ ಅಪೂರ್ಣ ಮತ್ತು ಅರ್ಥಹೀನ ಎನ್ನಿಸಿಕೊಳ್ಳುತ್ತದೆ.

ಇತ್ತೀಚಿನ ದಿನಗಳಲ್ಲಿ ಅಂದರೆ 1950ರ ದಶಕ ನಂತರ, ಸಮಾಜಶಾಸ್ತ್ರದಲ್ಲಿ ಕಂಡುಬಂದ ಪ್ರಮುಖರೆಂದರೆ:

ಮೈಕಾಲ್ ಫೋಕೊಟ್ (1926–1984) (Michel Foucault)
ಜರ್ಗಿನ್ ಹೆಬರ್‌ಮಾಸ್ (1929– ) (Jurgen Habermas)
ಪಿರ್ರೆ ಬೋರ್‌ಡಿಯು (1930–2002) (Pierre Bourdien)
ಜಾಕ್ಯೂಸ್ ಡೇರಿಡ (1930– ) (Jacques Derrida)
ಅಂತೋನಿ ಗಿಡ್ಡನ್ಸ್ (1938– ) (Anthony Giddens)

ಇವರೆಲ್ಲರೂ ಒಂದಲ್ಲ ಒಂದು ರೀತಿಯಲ್ಲಿ ಸಮಾಜಶಾಸ್ತ್ರದ ಅಧ್ಯಯನದಲ್ಲಿ ಹೊಸ ತಿರುವುಗಳನ್ನು ನೀಡಿದ್ದಾರೆ. ವಿಶೇಷವಾಗಿ ತನಿಖಾ ವಿಧಾನಕ್ಕೆ ಹೆಚ್ಚು ಮಾನ್ಯತೆ ಕಲ್ಪಿಸಿದ್ದಾರೆ (Methods of investigations) ಈ ಹೊಸ ಪೀಳಿಗೆಯ ಸಮಾಜಸಾಸ್ತ್ರಜ್ಞರು ಹೊಸಪರಿಕಲ್ಪನೆಗಳನ್ನು ಬಳಸುತ್ತಾ ಪ್ರಸಕ್ತ ಸಮಾಜವನ್ನು ವಿಶ್ಲೇಷಿಸಲು ಪ್ರಯತ್ನಿಸಿದ್ದಾರೆ.

ಉದಾ;– ಬೋರ್‌ಡಿಯೋರವರ ಸಾಮಾಜಿಕ ಅವರಣ Bordieu (Habitus)
ಡೇರಿಡ–ನಿ ರಚನೆ (Deconstruction )

ಗಿಡ್ಡಿನ್ಸ್– ರಚನೀಕರಣ (Structuration (Giddens)

ಇವರೆಲ್ಲರೂ ಪ್ರಸಕ್ತ ಸಮಾಜದ ಆಳವಾಗಿ ಅಧ್ಯಯನ ನಡೆಸುತ್ತಾ– 1. ನವ ಕಾರ್ಯಾತ್ಮಕವಾದ (Neo Functionalism), 2. ರಚನಾತ್ಮಕೋತ್ತರ ವಾದ (Post Structuralism), 3. ನವ ಮಾರ್ಕ್ಸ್‌ವಾದ (Neo Marxisism), 4. ಆಧುನೀಕೋತ್ತರ ವಾದ (Post Modernism) ಮುಂತಾದ ಪರಿಕಲ್ಪನೆಯನ್ನು ಜನಪ್ರಿಯಗೊಳಿಸಲ್ಲದೇ, ಇಂತಹ ಪರಿಕಲ್ಪನೆಯಿಂದಲೇ ಸಾಮಾಜಿಕ ಅಧ್ಯಯನ ಮತ್ತು ವಿಶ್ಲೇಷಣೆ ಮಾಡಿದ್ದಾರೆ.

ಅಂದಿನ ಸಮಾಜಶಾಸ್ತ್ರಜ್ಞರಾದ ಕೋಮ್ಟ್, ಡರ್ಖೀಮ್, ಸ್ಪೆನ್ಸರ್ ಮತ್ತು ವೇಬರ್ ಮುಂತಾದವರು ಸಾಮಾಜಿಕ ಪ್ರಶ್ನೆಗಳನ್ನು ತಮ್ಮದೇ ದೃಷ್ಟಿಕೋನಗಳಿಂದ ಉತ್ತರಿಸಲು ಶ್ರಮಿಸಿದ್ದಾರೆ.ಅಂತಹ ಪ್ರಮುಖ ಪ್ರಶ್ನೆಗಳೆಂದರೆ: ಮಾನವನ ವರ್ತನೆ ಎಂದರೇನು? ಮಾನವನ ಸಮಾಜದೊಂದಿಗೆ ನಿಕಟ ಸಂಬಂಧಗಳನ್ನು ಏರ್ಪಾಡಿಸಿಕೊಳ್ಳಲು ಕಾರಣಗಳೇನು? ಸಮಾಜದ ಪರಿವರ್ತನೆಗಳು ಹೀಗೆ ಮತ್ತು ಏಕೆ ಸಂಭವಿಸುತ್ತದೆ? ಸಮಾಜವು ಮುಂದಿನ ಭವಿಷ್ಯದಲ್ಲಿ ಯಾವ ದಿಕ್ಕಿಗೆ ಸಾಗುತ್ತದೆ? –ಹೀಗೆ ಹಲವಾರು ಪ್ರಶ್ನೆಗಳಿಗೆ ಉತ್ತರ ಕಂಡು ಕೊಳ್ಳಲು ಪ್ರಯತ್ನಿಸಿದ್ದಾರೆ,

ಪ್ರಸಕ್ತ ಕಾಲದಲ್ಲಿ ಈ ಮೇಲ್ಕಂಡ ಪ್ರಶ್ನೆಗಳಿಗೆ ಉತ್ತರ ಪಡೆದುಕೊಳ್ಳಲು ಪ್ರಯತ್ನಿಸಲಾಗಿದೆ. ಆದರೆ ಉತ್ತರ ಮತ್ತು ಅನುಸರಿಸುವ ವಿಧಾನಗಳು ಬೇರೆಯಾಗಿವೆ. ಸಮಕಾಲೀನ ಸಮಾಜವೂ ಸಂಪ್ರದಾಯಕ ಹಾಗೂ ಕೈಗಾರಿಕ ಮೊದಲನೇ ಹಂತದ ಸಮಾಜಕ್ಕಿಂತಲೂ ವಿಭಿನ್ನತೆ ಸ್ವರೂಪವನ್ನು ಹೊಂದಿದೆ.ಇಂದಿನ ಪ್ರಸಕ್ತ ಸಮಾಜಶಾಸ್ತ್ರಜ್ಞರು ಬದಲಾಗುತ್ತಿರುವ ಸಾಮಾಜಿಕ ಉತ್ತರವನ್ನು ಪಡೆಯಬೇಕಾಗಿದೆ.

## 1.8 ಆಧುನಿಕ ಚಿಂತಕರು ಏನು ಹೇಳುತ್ತಾರೆ? What the mordern thinkers say?

**ಪಿರ್ರೆ ಬೋರ್‌ಡಿಯೋ (Pierre Bourdieu - 1930)** ಇವರ ಪ್ರಕಾರ ಸಮಾಜಶಾಸ್ತ್ರವೂ ಸಂಸ್ಕೃತಿಯಲ್ಲಿ ಅಡಕವಾಗಿರುವ ಅಂತರಿಕ ಅಂಶಗಳನ್ನು ತಿಳಿಸುವ ಪ್ರಯತ್ನವಾಗಿದೆ. ಇಂತಹ ಉದ್ದೇಶಗಳನ್ನು ಸಾಧಿಸಲು ಸಮಾಜಶಾಸ್ತ್ರಜ್ಞರು ಜನಸಾಮಾನ್ಯರ ಸಾಂಸ್ಕೃತಿಕ ಆಚರಣೆಗಳು–ಕ್ರಿಯಾವಿಧಾನಗಳನ್ನು ವಿಶ್ಲೇಷಿಸಬೇಕಾಗಿದೆ ವಿನಃ ರಾಜಕೀಯ ಮತ್ತು ಆರ್ಥಿಕ ಪ್ರಾಬಲ್ಯದ ದೃಷ್ಟಿಕೋನದಿಂದಲ್ಲ.

ಸಮಕಾಲೀನ ಸಮಾಜಶಾಸ್ತ್ರವೂ ಸಂಸ್ಕೃತಿಯ ಅಧ್ಯಯನದಲ್ಲಿ ಈ ಕಳೆಕಂಡ ಅಂಶಗಳಿಗೆ ಪ್ರಾಮುಖ್ಯತೆ ನೀಡಬೇಕಾಗಿದೆ. ಅವುಗಳಲ್ಲಿ– ರಾಜಕೀಯ ಬಳಕೆಯಾದ ವಿಜ್ಞಾನ ಮತ್ತು ತಂತ್ರಜ್ಞಾನ ಸಾಧನೆಗಳು ರಾಜಕೀಯ ಪ್ರಭಾವದ ಕಪಿಮುಷ್ಠಿಯಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಆರ್ಥಿಕ ಹಿನ್ನಲೆಯಲ್ಲಿ ವಿಜ್ಞಾನದ ವಿಶ್ಲೇಷಣೆ, ಆಧುನಿಕ ಯುಗದಲ್ಲಿ ಜನಾಂಗೀಯ ವಾದದ ಮುಂದುವರಿಕೆಯ ಪ್ರಯತ್ನ ಮಾಡುವುದು.

ಬೊರ್‌ಡಿಯೋ ನವಮಾರ್ಕ್ಸ್‌ವಾದ ಪ್ರತಿಪಾದಕರಾಗಿದ್ದ ಕಾರಣದಿಂದ–ಶ್ರಮಿಕ ವರ್ಗದ ಸಂಸ್ಕೃತಿಗಳ ಬಗ್ಗೆ ಅತಿ ಆಸಕ್ತಿಯನ್ನು ಹೊಂದಿದ್ದರು. ಶ್ರಮಿಕವರ್ಗಗಳ ಸಂಸ್ಕೃತಿಯನ್ನು **"ಪ್ರತಿರೋಧಕ ಸಂಸ್ಕೃತಿ"** (**Couter culture**) ಎಂದು ಕರೆಯಲಾಗಿದೆ. ಏಕೆಂದರೆ ಇಂತಹ ಸಂಸ್ಕೃತಿಗಳು ಪರಂಪರೆಯಿಂದ ಸ್ಥಾಪನೆಗೊಂಡಿರುವ ಸಂಸ್ಕೃತಿಯನ್ನು ವಿರೋಧಿಸುತ್ತವೆ.

ಸಮಾಜಶಾಸ್ತ್ರ ಯಾವ ರೀತಿ ಸಂರಚನೆ ಹೊಂದಿರಬೇಕು? ಇಂತಹ ಪ್ರಶ್ನೆಗೆ ಬೋರ್‌ಡಿಯೋ ತಮ್ಮ ಗ್ರಂಥವಾದ **ದ ಲಾಜಿಕ್ ಆಫ್ ಪ್ರಾಕ್ಟಿಸ್ "The logic of practice"** (1990) ಹಾಗೂ **"ಕ್ರಾಫ್ಟ್ ಆಫ್**

**ಸೋಷಿಯಾಲಜಿ" Craft of Sociology** (1991) ಎಂಬ ಗ್ರಂಥದಲ್ಲಿ ವ್ಯಕ್ತಿ ನಿಷ್ಠತೆ ಮತ್ತು ವಸ್ತುನಿಷ್ಠತೆ ಇವೆರಡು ಬೇರ್ಪಡಿಸಲಾಗದ ಪರಸ್ಪರ ಪೂರಕವಾಗಿರುವ ಅಂಶವೆಂದು ವಾದಿಸಿದರೆ ಮತ್ತು ಸೂಕ್ಷ್ಮ ಮತ್ತು ಸಮಗ್ರತೆ, ಸಂರಚನೆ, ನಿರ್ಯೋಗಿ ಎಂಬ ವಿರೋಧಾತ್ಮಕ ಅಂಶಗಳ ಅಧ್ಯಯನವಾಗಿದೆ. ಇದರ ಬದಲಾಗಿ ಸಮಾಜಶಾಸ್ತ್ರ ಅಧ್ಯಯನ ರಚನಾತ್ಮಕ ವಿಧಾನವನ್ನು ಅಳವಡಿಸಿಕೊಳ್ಳಬೇಕೆಂದು ವಾದಿಸಿದ್ದಾರೆ. ದೈನಂದಿನ ಜೀವನದ ಪ್ರತಿಯೊಂದು ಅನಿವಾರ್ಯತೆ ಮತ್ತು ಎಲ್ಲಾ ಕ್ರಿಯಾ ಚಟುವಟಿಕೆಗಳನ್ನು ಸಹಜವಾಗಿ ವಿಶ್ಲೇಷಿಸಬೇಕೆಂದು ತಿಳಿಸಿದ್ದಾರೆ.

### *ಜರ್ಗಿನ್ ಹೆಬರ್‌ಮಾಸ್* Jurgern Habermas

ಜರ್ಗಿನ್ ಹೆಬರ್‌ಮಾಸ್ (1929);– ಅತ್ಯಂತ ಪ್ರಭಾವಶಾಲಿ ಸಾಮಾಜಿಕ ಚಿಂತಕ ಹಾಗೂ ಮಾರ್ಕ್ಸ್ ವಿಚಾರಧಾರೆಯೊಂದಿಗೆ, ಫ್ರ್ಯಾಂಕ್‌ಫರ್ಟ್‌ನ ವಿಮರ್ಶಾತ್ಮಕ ಸಿದ್ಧಾಂತದ ವಕ್ತಾರ ಎಂಬ ಹೆಗ್ಗಳಿಕೆಯನ್ನು ಹೊಂದಿದ್ದಾರೆ. ಹೆಬರ್‌ಮಾಸ್ ಧನಾತ್ಮಕ (**positivism**) ಚಿಂತನೆಯ ಪ್ರಭಾವದಿಂದ ನೈಸರ್ಗಿಕ ಮತ್ತು ಸಾಮಾಜಿಕ ಪ್ರಪಂಚವನ್ನು ಸ್ಪಷ್ಟವಾಗಿ ಅರ್ಥೈಸಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಈ ಸಿದ್ಧಾಂತವು ಜನರ ಮನೋಭಾವನೆ ಮತ್ತು ದೃಷ್ಟಿಕೋನವನ್ನು ಸೀಮಿತಗೊಳಿಸಿದೆ ಎಂದು ಟೀಕಿಸಿದ್ದಾರೆ.

ಬಂಡವಾಳಶಾಹಿ ಸಮಾಜವನ್ನು ಟೀಕಿಸಿದ ಇವರು ಪರಿವರ್ತನೆಯು ಸಹಜ ಮತ್ತು ನಿರಂತರವಾದ ಪ್ರಕ್ರಿಯೆಯಾಗಿದೆ. ಈ ವ್ಯವಸ್ಥೆಯು ತನ್ನ ಅಸ್ತಿತ್ವಕ್ಕಾಗಿ ನಿರ್ಮಿಸಿಕೊಂಡಿರುವ ನೈತಿಕ ಮೌಲ್ಯಗಳ ವಿನಾಶದಿಂದ ಬಂಡವಾಳ ಶಾಹಿ ವ್ಯವಸ್ಥೆಯು ಕುಸಿಯುತ್ತದೆ. ಪ್ರಸಕ್ತ ಜಗತ್ತಿನಲ್ಲಿ ನಾವೆಲ್ಲರೂ ಆರ್ಥಿಕ ಪ್ರಗತಿಯನ್ನು ಅವಲಂಬಿಸಿ ದ್ದೇವೆ, ಈ ಆರ್ಥಿಕ ಪ್ರಗತಿ ಸಾಮಾಜಿಕ ಜೀವನದ ಎಲ್ಲಾ ಕ್ಷೇತ್ರಗಳನ್ನು ಅವರಿಸಿಕೊಂಡಿದೆ. ದೈನಂದಿನ ಜೀವನದಲ್ಲಿ ಎಲ್ಲಾ ಸಾಮಾಜಿಕ ಸಂಗತಿಗಳಿಗೆ ಅರ್ಥವನ್ನು ಕಲ್ಪಿಸುವ ಸಾಮರ್ಥ್ಯ ಹೊಂದಿದೆ.

### ಜಾಕ್ಯೂಸ್ ಡೆರೀಡ Jacques Derrida (1930 - ):

ಫ್ರೆಂಚ್ ತತ್ವಜ್ಞಾನಿ ಮತ್ತು ಆಧುನಿಕೋತ್ತರ ಚಿಂತಕ, ಸಮಾಜಶಾಸ್ತ್ರ ಎಂದು ಗುರುತಿಸಿಕೊಳ್ಳಲು ನಿರಾಕರಿಸಿದ್ದಾರೆ, ಆದರೆ ಆಧುನಿಕ ಸಮಾಜಶಾಸ್ತ್ರದ ಚಿಂತನೆಗಳಿಗೆ ತಮ್ಮದೇ ಆದ ಕೊಡುಗೆಯನ್ನು ನೀಡಿದ್ದಾರೆ. ಅವರ ಚಿಂತನೆಗಳು ಪ್ರಾಥಮಿಕವಾಗಿ ಭಾಷಾಶಾಸ್ತ್ರದಿಂದ ವಿಕಾಸಗೊಂಡಿದೆ. ನಿರಚನೆ (**Deconstrction**) ಎಂಬ ಜನಪ್ರಿಯವಾದ ಆಧುನಿಕ ಪರಿಕಲ್ಪನೆಯನ್ನು ಪರಿಚಯಿಸಿದ್ದಾರೆ ಇದುವರೆಗೂ ಸಮಾಜಶಾಸ್ತ್ರೀಯ ಸಾಹಿತ್ಯ ಮತ್ತು ಚಿಂತನೆಯನ್ನು ನಿರ್ಣಯ ಮಾಡಬೇಕೆಂದು ಒತ್ತಾಯಿಸಿದ್ದಾರೆ. ಈ ನಿಟ್ಟಿನಲ್ಲಿ ಆಗಸ್ಟ್ ಕೋಮ್ಟ್, ಡರ್ಖೀಮ್, ವೇಬರ್, ಕಾರ್ಲ್‌ಮಾರ್ಕ್ಸ್ ಹಾಗೂ ಆಧುನಿಕ ಸಮಾಜಶಾಸ್ತ್ರಜ್ಞರಾದ ಪಾರ್ಸನ್ಸ್, ಮಾರ್ಟಿನ್ ಇನ್ನಿತರರ ಚಿಂತನೆಗಳನ್ನು ಸಂಪೂರ್ಣವಾಗಿ ತ್ಯಜಿಸಿ, ಅಂತಹ ಸ್ಥಾಪಿತ ಚಿಂತನೆಗಳು ಅಥವಾ ವಿಚಾರಧಾರೆಗಳಿಂದ ಹೊರಬರಬೇಕೆಂದು ತಿಳಿಸಿದ್ದಾರೆ. ಡೆರೀಡ್ ಪ್ರಕಾರ ಇಂತಹ ವಿದ್ವಾಂಸರ ಗ್ರಂಥಗಳು ಸಾಮಾಜಿಕ ವಾಸ್ತವಿಕತೆಯನ್ನೂ ಕಾಲ್ಪವಿಕ ವ್ಯವಸ್ಥೆಗೆ ನೂಕಿದೆ. ಇವೆಲ್ಲಾ ಸಮಾಜದ ನೈಜ ಸ್ಥಿತಿಗತಿ ಮತ್ತು ಸತ್ಯಾಂಶಗಳ ಮೇಲೆ ಪರದೆ ಹಾಕಿದೆ. ಡೆರೀಡರ ಪ್ರಕಾರ ಗ್ರಂಥಗಳ ಮೂಲಕ ವಿಶ್ಲೇಷಿಸುವ ಕ್ರಮಗಳು ಯಾವಾಗಲೂ ಸತ್ಯವಾಗಿರುವುದಿಲ್ಲ. ಅವುಗಳು ವಿಷಯಗಳ ಸುಳಿಯಲ್ಲಿ ಸಿಲುಕಿದೆ ಹಾಗೂ ಸತ್ಯಸಂಗತಿಗಳನ್ನು ಮರೆಮಾಚುತ್ತದೆ.

**ಮೈಕಾಲ್ ಫೋಕೋ (Michel Foucauct):** ಮೈಕಾಲ್ ಫೋಕೋರವರು ಆಧುನಿಕೋತ್ತರ ಚಿಂತನೆಯ ಪ್ರಮುಖರು. ಇವರ ಕೃತಿಗಳು ಆಧುನಿಕೋತ್ತರ ಚಿಂತನೆಯಿಂದ ಹೊಸ ಸ್ವರೂಪ ಪಡೆದಿರುವುದು ತಿಳಿಯುತ್ತದೆ. ಅಪರಾಧ, ದೇಹ, ಹುಚ್ಚುತನ, ಲೈಂಗಿಕತೆ ಮುಂತಾದ ವಿಷಯಗಳ ವಿಶ್ಲೇಷಣೆಯಲ್ಲಿ ಜೈಲು, ಆಸ್ಪತ್ರೆ ಮತ್ತು ಶಾಲೆಗಳೆಂಬ

ಆಧುನಿಕ ಸಂಸ್ಥೆಗಳು ಜನರ ನಿಯಂತ್ರಣ ಮತ್ತು ಮೇಲ್ವಿಚಾರಣೆ ಮಾಡುತ್ತವೆ ಎಂದಿದ್ದಾರೆ. ಅಪರಾಧ ಮತ್ತು ಹುಚ್ಚುತನವನ್ನು ವ್ಯಾಖ್ಯಾನಿಸಲು ಜ್ಞಾನದ ಅಧಿಕಾರ ಇತರೆ ಜ್ಞಾನವನ್ನು ಪ್ರಭಾವಿಸುತ್ತದೆ. ಹೀಗೆ ಜ್ಞಾನದ ವಿಶೇಷ ಪರಿಸ್ಥಿತಿಯು ಇತರೆ ಜ್ಞಾನವನ್ನು ಮರೆಸುತ್ತದೆ. ಮೈಕಾಲ್ ಫೊಕೋರವರ ವಿಚಾರಧಾರೆಯಲ್ಲಿ ಅಧಿಕಾರ ಮತ್ತು ಜ್ಞಾನವು ತಂತ್ರಜ್ಞಾನದ ಮೂಲಕ ಕಣ್ಗಾವಲಿಟ್ಟ (Surveillance) ಒತ್ತಾಯದ ಮೂಲಕ ಶಿಸ್ತನ್ನು ಜಾರಿಗೊಳಿಸುತ್ತದೆ. (Enforcement and discipline)

**ಆಂತೋನಿ ಗಿಡ್ಡೆನ್ಸ್ (Anthony Giddens):** ಆಂತೋನಿ ಗಿಡ್ಡೆನ್ಸ್‌ರವರು ರಚನೀಕರಣ ಸಿದ್ಧಾಂತದ ಪ್ರತಿಪಾದಕ. ಸಮಾಜಶಾಸ್ತ್ರವು ಸಾಂಪ್ರದಾಯಿಕ ಮತ್ತು ಆಧುನಿಕ ಚಿಂತನೆಗಳ ಒಟ್ಟು ಸಂವಿಳನದಿಂದ ಹೊಸ ರೂಪ ಪಡೆದಿದೆ. ಆಧುನಿಕ ಸಮಾಜವು ಪರಿವರ್ತನೆಯಾಗುವಾಗ ಹೊಸ ಸ್ವರೂಪವನ್ನು ಪಡೆಯುತ್ತದೆ. ಪರಿವರ್ತನೆಯು ನಿರಂತರವಾಗಿ ಸಣ್ಣಪುಟ್ಟ ಹೊಂದಾಣಿಕೆಯೊಂದಿಗೆ ಆಧುನಿಕತೆ ಮತ್ತು ಸಂಪ್ರದಾಯಗಳೊಡನೆ ಸೇರಿಕೊಂಡಿರುತ್ತವೆ. ಜನರ ಖಾಸಗಿ ಬದುಕಿನಲ್ಲಿ ಹೆಚ್ಚಿನ ಪರಿವರ್ತನೆಗಳು ಮಾತ್ರ ಸಂಭವಿಸುತ್ತವೆ. ಉದಾಹರಣೆಗೆ– ವಿವಾಹ, ಲೈಂಗಿಕತೆ, ಕುಟುಂಬ ಇತ್ಯಾದಿ ವಿಷಯಗಳಲ್ಲಿ ಹೆಚ್ಚಿನ ಪರಿವರ್ತನೆಗಳಾಗಿವೆ ಎಂದು ಗಿಡ್ಡೆನ್ಸ್‌ರವರು ವಾದಿಸಿದ್ದಾರೆ. ಇತರೆ ಸಮಾಜಶಾಸ್ತ್ರಜ್ಞರು ಪರಿಗಣಿಸಿದ ಹಾಗೆ ಸಮಾಜವು ವ್ಯಕ್ತಿಗಳಿಂದ ನಿರ್ಮಾಣವಾಗಿಲ್ಲ. ಮಾನವನ ಕ್ರಿಯೆ ಮತ್ತು ಪ್ರತಿಕ್ರಿಯೆಗಳು ಮಾತ್ರ ಸಮಾಜದ ನಿಜಸ್ಥಿತಿಯೆಂದು ಗಿಡ್ಡೆನ್ಸ್ ಪ್ರತಿಪಾದಿಸಿದ್ದಾರೆ.

## 1.9 ಶುದ್ಧ ಮತ್ತು ಅನ್ವಯಿಕ ಸಮಾಜಶಾಸ್ತ್ರ Pure & Applied Sociolog y

ಎಲ್ಲಾ ವಿಜ್ಞಾನಗಳು ಜ್ಞಾನ ಸಂಗ್ರಹಣೆಯ ಅಧಾರವಾಗಿವೆ. ಮಾನವಸಮಾಜದ ವಿವಿಧ ಸಮಸ್ಯೆಗಳ ಪರಿಹಾರಕ್ಕಾಗಿ ಶ್ರಮಿಸುತ್ತವೆ. ಈ ನಿಟ್ಟಿನಲ್ಲಿ ಎಲ್ಲಾ ವಿಜ್ಞಾನಗಳಿಗೆ ಎರಡು ದೃಷ್ಟಕೋನಗಳನ್ನು ಹೊಂದಿವೆ. ಅವುಗಳೆಂದರೆ–

1. ಶುದ್ಧ ವಿಜ್ಞಾನ
2. ಅನ್ವಯಿಕ ವಿಜ್ಞಾನ

### ಶುದ್ಧ ವಿಜ್ಞಾನ (Pure Science)

ಶುದ್ಧ ವಿಜ್ಞಾನದ ಪ್ರಾಥಮಿಕ ಉದ್ದೇಶ ಜ್ಞಾನ ಸಂಗ್ರಹಣೆ. ಪ್ರಾಯೋಗಿಕ ಬಳಕೆಯ ಬದಲಾಗಿ ಜ್ಞಾನ ಸಂಪಾದನೆಗೆ ಹೆಚ್ಚು ಪ್ರಾಮುಖ್ಯತೆ ಕಲ್ಪಿಸಿದೆ. ಈ ನಿಟ್ಟಿನಲ್ಲಿ "ಜ್ಞಾನಕ್ಕಾಗಿ ಜ್ಞಾನ" ಎಂಬ ನಾಣ್ಣುಡಿ ಸೂಕ್ತವಾಗಿದೆ ಅನ್ವಯಿಸುತ್ತದೆ. ತಂದೆ–ತಾಯಿಗಳು ತಮ್ಮ ಮಕ್ಕಳ ಲಾಲನೆ–ಪಾಲನೆ ಮತ್ತು ಆರೈಕೆಯಿಂದ ತಮ್ಮ ಕರ್ತವ್ಯ ನಿರ್ವಹಿಸುತ್ತಾರೆಯೇ ಹೊರತು ಆದ್ದರಿಂದ ಪ್ರತಿಫಲಗಳನ್ನು ಬಯಸುವುದಿಲ್ಲ. ಹೀಗೆ ಸಮಾಜಶಾಸ್ತ್ರ, ರಾಜ್ಯಶಾಸ್ತ್ರ, ಮಾನವಶಾಸ್ತ್ರ, ಅರ್ಥಶಾಸ್ತ್ರ ಮುಂತಾದವುಗಳು ಜ್ಞಾನ ಸಂಗ್ರಹಣೆಯ ಬಗ್ಗೆ ಕಾಳಜಿ ವಹಿಸಿವೆ.

ಸಮಾಜಶಾಸ್ತ್ರ ಶುದ್ಧ ವಿಜ್ಞಾನವಾಗಿದೆ ವಿನಃ ಅನ್ವಯಿಕ ವಿಜ್ಞಾನವಲ್ಲ ಸಮಾಜಶಾಸ್ತ್ರದಿಂದ ಲಭ್ಯವಾದ ಮಾಹಿತಿಗಳಿಂದ ಮಾನವ ಸಮಾಜಗಳ ಬಗ್ಗೆ ಅಪಾರವಾದ ವಿಷಯಗಳನ್ನು ಸಂಗ್ರಹಿಸಕೊಳ್ಳಲಾಗಿದೆ. ಅಂತಹ ಮಾಹಿತಿಗಳಿಂದ ಯಾವುದೇ ಉಪಯುಕ್ತತೆಯನ್ನು ನಿರೀಕ್ಷಿಸುವುದು ತಪ್ಪು. ಲೆಸ್ಟರ್ ಎಫ್ ವಾರ್ಡ್ (1841–1913) ಅಮೆರಿಕಾದ ಸಮಾಜಶಾಸ್ತ್ರಜ್ಞರ ಪ್ರಕಾರ "ಶುದ್ಧವಿಜ್ಞಾನ"ವಾದ ಸಮಾಜಶಾಸ್ತದ ಪ್ರಮುಖವಾದ ಉದ್ದೇಶವೆಂದರೆ ಸಾಮಾಜಿಕ ಸಂರಚನೆ ಮತ್ತು ಸಾಮಾಜಿಕ ಪರಿವರ್ತನೆಗಳ ಮೂಲಭೂತ ನಿಯಮಗಳು ಮತ್ತು ಪ್ರಕ್ರಿಯೆಗಳನ್ನು ಶೋಧಿಸುವುವಾಗಿದೆ.

ರಾಬರ್ಟ್ ಬೈರ್‌ಸ್ಟಡ್ (1963)ರಲ್ಲಿ ಉಲ್ಲೇಖಿಸಿರುವಂತೆ "ಸಮಾಜಶಾಸ್ತ್ರಜ್ಞರು ಯಾವುದೇ ಸಾರ್ವತ್ರಿಕ ನಿಯಮಗಳನ್ನು ಪ್ರಶ್ನಿಸುವುದಿಲ್ಲ ಹಾಗೆಯೇ ಶಾಸಕರು ಯಾವ ಕಾಯ್ದೆಗಳನ್ನು ಜಾರಿಗೊಳಿಸಬೇಕು ಮತ್ತು ರದ್ದುಗೊಳಿಸಬೇಕೆಂದು ಚಿಂತಿಸುವ ಬದಲು ಅದರ ಪ್ರಭಾವವನ್ನು ವಿಶ್ಲೇಷಿಸುತ್ತಾರೆ.

## ಅನ್ವಯಿಕ ವಿಜ್ಞಾನ (Applied science)

ಅನ್ವಯಿಕ ವಿಜ್ಞಾನ ಸಾಮಾನ್ಯವಾಗಿ ಪ್ರಾಯೋಗಿಕ ಅಂಶಕ್ಕೆ ಪ್ರಾಮುಖ್ಯತೆ ಕಲ್ಪಿಸಿದೆ. ಈ ವಿಜ್ಞಾನದಿಂದ ಲಭ್ಯವಾದ ಮಾಹಿತಿಗಳು ಸಮಸ್ಯೆ ಪರಿಹಾರಕ್ಕೆ ಕೇಂದ್ರೀಕರಿಸಿದೆ. ಉದಾ;– ವೈದ್ಯಕೀಯಶಾಸ್ತ್ರ, ಭೌತಶಾಸ್ತ್ರ, ರಸಾಯನಶಾಸ್ತ್ರ, ಸಸ್ಯಶಾಸ್ತ್ರ ಮುಂತಾದವುಗಳು. ಈ ವಿಜ್ಞಾನಗಳು ಮಾನವನ ಸಮಸ್ಯೆಗಳಿಗೆ ಸೂಕ್ತವಾದ ಪರಿಹಾರ ನೀಡುವುದರ ಬಗ್ಗೆ ಹೆಚ್ಚು ಕೇಂದ್ರೀಕರಿಸಿವೆ. ಉದಾ;– ವೈದ್ಯರು ರೋಗದ ಸ್ವರೂಪ ಗುಣಲಕ್ಷಣಗಳು ಮತ್ತು ಪರಿಣಾಮಗಳ ಬಗ್ಗೆ ಮಾತ್ರ ಗಮನಹರಿಸುವುದಿಲ್ಲ, ಆದರೆ ರೋಗಗಳ ನಿವಾರಣೆ ಬಗ್ಗೆ ಹೆಚ್ಚು ಕಾಳಜಿ ವಹಿಸುತ್ತಾರೆ.

ಸಮಾಜಶಾಸ್ತ್ರ ಇನ್ನಿತರ ಎಲ್ಲಾ ವಿಜ್ಞಾನಗಳಂತೆ ದ್ವಿಮುಖ ಪಾತ್ರವನ್ನು ನಿರ್ವಹಿಸುವ ಸಾಮರ್ಥ್ಯತೆ ಹೊಂದಿದೆ. ಶುದ್ಧ ವಿಜ್ಞಾನವಾಗಿ ಕೇವಲ ಮಾನವನ ವರ್ತನೆಗಳಿಗೆ ಮೂಲ ಕಾರಣ ಮತ್ತು ಪರಿಣಾಮದ ಬಗ್ಗೆ ಕೇಂದ್ರೀಕರಿಸುತ್ತಾ ಹಾಗೆಯೇ ಮಾನವ ಮತ್ತು ಸಮಾಜದ ನಡುವೆಯಿರುವ ಸಂಬಂಧದ ಬಗ್ಗೆ ಮಾಹಿತಿ ನೀಡುತ್ತದೆ. ಆದರೂ ಸಮಾಜಶಾಸ್ತ್ರ ಅನ್ವಯಿಕ ಶಾಸ್ತ್ರವಾಗಿ ಹಲವಾರು ರೀತಿಯಲ್ಲಿ ಸಮಾಜಕ್ಕೆ ಸಹಾಯಕವಾಗಿದೆ. ಸಮಾಜವು ಹಲವಾರು ಸಮಸ್ಯೆಗಳನ್ನು ಒಳಗೊಂಡಿದೆ. ಅಂತಹ ಸಾಮಾಜಿಕ ಸಮಸ್ಯೆಗಳ ಉಗಮ, ಬೆಳವಣಿಗೆ, ಪರಿಣಾಮ ಮತ್ತು ವ್ಯಾಪಕತೆ ಆಳವಾಗಿ ಅಧ್ಯಯನ ನಡೆಸುತ್ತದೆ. ಹಾಗೆಯೇ ಇವೆಲ್ಲಾ ಸಮಸ್ಯೆಗಳಿಗೆ ಪರಿಹಾರ ನೀಡುವ ಜವಾಬ್ದಾರಿಯನ್ನು ಹೊಂದಿದೆ. ಸಮಾಜಶಾಸ್ತ್ರವು ಮಾನವ ಕೇಂದ್ರೀಕೃತ ವಿಜ್ಞಾನವಾಗಿದ್ದು ಆತನು ಸಮಸ್ಯೆಯಿಂದ ಮುಕ್ತರಾಗಲು ಪರಿಹಾರ ನೀಡುತ್ತದೆ. ಉದಾ;– ಭಿಕ್ಷಾಟನೆ, ಬಡತನ, ನಿರುದ್ಯೋಗ. ಮದ್ಯಪಾನ, ವೇಶ್ಯಾವೃತ್ತಿ, ಜೂಜುಗಾರಿಕೆ, ಭ್ರಷ್ಟಚಾರ ಹೀಗೆ ಹಲವಾರು ಸಾಮಾಜಿಕ ಪಿಡುಗುಗಳ ಬಗ್ಗೆ ಕಾಳಜಿ ವಹಿಸುತ್ತದೆ. ಸಮಾಜಶಾಸ್ತ್ರ ಅನ್ವಯಿಕ ಶಾಸ್ತ್ರವಾಗಿದ್ದು ಹಲವಾರು ಸಾಮಾಜಿಕ ಧೋರಣೆಗಳು ಮತ್ತು ನಿಯಮಗಳನ್ನು ಜಾರಿಗೊಳಿಸಬೇಕಾದರೆ ಸೂಕ್ತ ಸಲಹೆ ನೀಡುತ್ತದೆ. ಪ್ರಸಕ್ತ ಕಾಲದಲ್ಲಿ ಆಡಳಿತಜ್ಞರು, ರಾಜಕಾರಣಿಗಳು, ಸಮಾಜ ಸೇವಕರು ಮುಂತಾದವರು ಸಾಮಾಜಿಕ ಅಭಿವೃದ್ಧಿಗೆ ಬೇಕಾದ ಮಾಹಿತಿ ಮತ್ತು ವಿಷಯಗಳನ್ನು ಸಮಾಜಶಾಸ್ತ್ರದಿಂದ ಪಡೆಯುತ್ತಿದ್ದಾರೆ. ಉದಾ;– ನಗರ ಯೋಜನೆ, ಕೊಳಚೆ ಪ್ರದೇಶಗಳ ನಿರ್ಮೂಲನೆ, ಮದ್ಯವ್ಯಸನ, ಕೋಮು ಗಲಭೆ ಮುಂತಾದ ಸಮಸ್ಯೆಗಳ ಬಗ್ಗೆ ಅಗತ್ಯವಾದ ಮಾಹಿತಿಗಳನ್ನು ಸಮಾಜಶಾಸ್ತ್ರ ಒದಗಿಸುತ್ತದೆ. ಸಮಾಜಶಾಸ್ತ್ರ ಜಗತ್ತಿನ ಎಲ್ಲಾ ಮಾನವ ಸಮಾಜಗಳ ಬಗ್ಗೆ ಅಧ್ಯಯನ ನಡೆಸುತ್ತದೆ. ಈ ನಿಟ್ಟಿನಲ್ಲಿ ಪ್ರತಿಯೊಂದು ಸಮಾಜವು ತನ್ನದೇ ಆದ ವಿಶಿಷ್ಟ ಸಂಸ್ಕೃತಿಯನ್ನು ಹೊಂದಿದೆ ಎಂಬ ಸತ್ಯಾಂಶಗಳನ್ನು ಧೃಡಪಡಿಸುತ್ತದೆ. ಹೀಗೆ ಮಾನವ ಸಮಾಜಗಳ ಬಗ್ಗೆಯಿರುವ ತಪ್ಪು ಗ್ರಹಿಕೆ ಮತ್ತು ಪೂರ್ವಗ್ರಹ ಪೀಡಿತ ಮನೋಭಾವನೆಗಳನ್ನು ದೂರ ಮಾಡುವುದರಲ್ಲಿ ಸಮಾಜಶಾಸ್ತ್ರ ಯಶ್ವಸಿಯಾಗಿದೆ.

**ಅನ್ವಯಿಕ ಸಮಾಜಶಾಸ್ತ್ರದ ವಿಧಗಳು**

ಚಿಕಿತ್ಸಕ ಸಮಾಜ ಶಾಸ್ತ್ರ. (Clinical Sociology)

ಸಾಮಾಜಿಕ ಇಂಜಿನಿಯರಿಂಗ್ (Social engineering)

ಸಮಾಜ ಕಾರ್ಯ (social work)

ಅನ್ವಯಿಕ ಸಾಮಾಜಿಕ ಸಂಶೋಧನೆ (Applied social research.)

ಕ್ರಿಯಾತ್ಮಕ ಸಮಾಜ ಶಾಸ್ತ್ರ. (Action sociology.)

ಎ. **ಚಿಕಿತ್ಸಕ ಸಮಾಜಶಾಸ್ತ್ರ. (Clinical Sociology):** ಚಿಕಿತ್ಸಕ ಸಮಾಜಶಾಸ್ತ್ರವು ಸಮಾಜಶಾಸ್ತ್ರೀಯ ಜ್ಞಾನವನ್ನು ವ್ಯಕ್ತಿ ಮತ್ತು ಸಮಾಜದ ಸುಧಾರಣೆಗೆ ಬಳಕೆ ಮಾಡುತ್ತದೆ. ಚಿಕಿತ್ಸೆಯಲ್ಲಿ ಸಮಾಜ ಕಾರ್ಯಕರ್ತರು, ಮಾನಸಿಕ ತಜ್ಞರು ಮತ್ತು ನರರೋಗ ತಜ್ಞರು ರೋಗಿಯ ಉಪಚಾರದಲ್ಲಿ ಸಮಾಜಿಕ ಸಂಗತಿಗಳನ್ನು ಪರಿಗಣಿಸಿ ರೋಗಿಯ ಉಪಚಾರ, ಕಾಯಿಲೆಯ ಮೂಲ ಕುರಿತು ಸಂಶೋಧನೆ ಮಾಡುತ್ತಾರೆ.

ಬಿ. **ಸಾಮಾಜಿಕ ಇಂಜಿನಿಯರಿಂಗ್ (Social engineering):** ಸಾಮಾಜಿಕ ಧೋರಣೆಗಳ ಸಿದ್ಧಪಡಿಸುವಿಕೆ, ಸಾಮಾಜಿಕ ಯೋಜನೆ, ಯೋಜಿತ ಪರಿವರ್ತನೆ ಮತ್ತು ಸಾಮಾಜಿಕ ಅಭಿವೃದ್ಧಿಯಲ್ಲಿ ಸಮಾಜಶಾಸ್ತ್ರೀಯ ಜ್ಞಾನದ ಬಳಕೆಯನ್ನು ಸಾಮಾಜಿಕ ಇಂಜಿನಿಯರಿಂಗ್ ಎಂದು ಕರೆಯುತ್ತಾರೆ.

ಸಿ. **ಸಮಾಜ ಕಾರ್ಯ (social work):** ಸಮಾಜ ಕಾರ್ಯವು ಒಂದು ಪ್ರತ್ಯೇಕ ವಿಜ್ಞಾನವಾಗಿದ್ದರೂ ಸಮಾಜಶಾಸ್ತ್ರದ ಅನ್ವಯಿಕ ಶಾಖೆಯೆಂದು ಪರಿಗಣಿಸಲ್ಪಟ್ಟಿದೆ. ಸಮಾಜ ಕಾರ್ಯವು ತನ್ನ ವಸ್ತು ವಿಷಯದಲ್ಲಿ ಸಮಾಜಶಾಸ್ತ್ರೀಯ ತಂತ್ರಗಳನ್ನು ಅಳವಡಿಸಿ, ಸಾಮಾಜಿಕ ಸಮಸ್ಯೆಗೆ ಪರಿಹಾರ ಕಂಡುಹಿಡಿಯುತ್ತವೆ.

ಡಿ. **ಅನ್ವಯಿಕ ಸಾಮಾಜಿಕ ಸಂಶೋಧನೆ (Applied social research.):** ಸಾಮಾಜಿಕ ಯೋಜನೆ, ವ್ಯಾಪಾರ ಮತ್ತು ವ್ಯವಹಾರದಲ್ಲಿ ಹೊಸ ನಿರ್ವಹಣ ತಂತ್ರಗಳ ಮೂಲಕ ವ್ಯವಸ್ಥಿತ ಪರಿವರ್ತನೆ ತರಲು ಅನ್ವಯಿಕ ಸಾಮಾಜಿಕ ಸಂಶೋಧನೆಯು ವಿವರಣಾತ್ಮಕ ಸಂಶೋಧನೆ, ಸರ್ವೇಕ್ಷಣೆ, ವಿಶ್ಲೇಷಣಾ ತಂತ್ರಗಾರಿಕೆಯ ಮೂಲಕ ಸಂಶೋಧನೆ ನಡೆಸುತ್ತದೆ. ಈ ಮೂಲಕ ನಿರ್ದಿಷ್ಟ ಕಾರ್ಯಕ್ರಮದ ಸಾಧಕ–ಬಾಧಕಗಳನ್ನು ಈ ಶಾಖೆಯ ಮೂಲಕ ತಿಳಿಯಬಹುದು.

ಇ. **ಕ್ರಿಯಾತ್ಮಕ ಸಮಾಜ ಶಾಸ್ತ್ರ. (Action sociology.):** ಕ್ರಿಯಾತ್ಮಕ ಸಮಾಜಶಾಸ್ತ್ರವು ಅನ್ವಯಿಕ ಸಮಾಜಶಾಸ್ತ್ರದ ಒಂದು ಶಾಖೆ. ಯಾವುದೇ ಸಾಮಾಜಿಕ ಸಮಸ್ಯೆಗಳ ಪರಿಹಾರ ಮತ್ತು ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಸಮಾಜಶಾಸ್ತ್ರಜ್ಞರು ನೇರವಾಗಿ ಭಾಗವಹಿಸುವುದು ಈ ವಿಭಾಗದ ಮೂಲ ಉದ್ದೇಶ. ಡಾ. ಬಿಂದೇಶ್ವರ ಪಾಠಕ್‌ರವರು ಪ್ರಾರಂಭಿಸಿದ ಸುಲಭ ಶೌಚಾಲಯ ಸಂಘಟನೆಯು ಕ್ರಿಯಾತ್ಮಕ ಸಮಾಜಶಾಸ್ತ್ರಕ್ಕೆ ಒಂದು ಉತ್ತಮ ಉದಾಹರಣೆಯಾಗಿದೆ.

❑❑❑

# ಅಧ್ಯಾಯ – 2
# ಮೂಲಭೂತ ಪರಿಕಲ್ಪನೆಗಳು
# (BASIC CONCEPTS)

## 2.1 ಮೂಲಭೂತ ಪರಿಕಲ್ಪನೆಯ ಅರ್ಥ (A General Intruduction to Concepts) :–

ಪ್ರತಿಯೊಂದು ವಿಜ್ಞಾನವು ತನ್ನದೇ ಆದ ಮೂಲಭೂತ ಪರಿಕಲ್ಪನೆಗಳನ್ನು ಹೊಂದಿರುತ್ತದೆ. ಅವು ವಿಶೇಷವಾದ ಮತ್ತು ಮೌಲ್ಯಯುತವಾದ ಅರ್ಥವನ್ನು ಹೊಂದಿರುತ್ತವೆ. ಆ ಪರಿಕಲ್ಪನೆಗಳ ಸಹಾಯದಿಂದ ತಾವು ತಿಳಿಯಬೇಕೆಂದಿರುವ ವಿಷಯವನ್ನು ಸ್ಪಷ್ಟವಾಗಿ ತಿಳಿಯಲು ಸಾಧ್ಯ.

**ಮೂಲಭೂತ ಪರಿಕಲ್ಪನೆ :–** "ಯಾವುದಾದರೂ ಒಂದು ವಸ್ತುವಿನ ಸ್ವರೂಪದ ಅಥವಾ ವಸ್ತುಗಳ ನಡುವಿನ ಸಂಬಂಧಗಳ ಕುರಿತಾಗಿರುವ ಸಾಮಾನ್ಯ ಅಭಿಪ್ರಾಯವನ್ನು ವ್ಯಕ್ತಪಡಿಸುವ ಪದ ಅಥವಾ ಪದ ಸಮುಚ್ಚಯಕ್ಕೆ ಪರಿಕಲ್ಪನೆ ಎನ್ನುತ್ತೇವೆ. **ಕೆರ್ಲಿಂಗರ** ರ ಪ್ರಕಾರ ಪರಿಕಲ್ಪನೆ ಎಂದರೆ "ಯಾವುದಾದರೊಂದು ವಿಷಯವನ್ನು ಸಾಮಾನ್ಯೀಕರಣ ಮಾಡಿದ ನಂತರ ಬಳಸುವ, ಅದನ್ನು ವ್ಯಕ್ತಿಪಡಿಸುವ ಪದಗಳಾಗಿವೆ". ಮೂಲ ಪರಿಕಲ್ಪನೆಗಳ ಪರಿಜ್ಞಾನವಿಲ್ಲದೆ ಯಾವುದೇ ಶಾಸ್ತ್ರಗಳ ಅಧ್ಯಯನ ಅರ್ಥೈಯಿಸಿಕೊಳ್ಳುವುದು ಕಷ್ಟಸಾಧ್ಯ. ಮೂಲ ಪರಿಕಲ್ಪನೆಗಳ ಆಧಾರದ ಮೇಲೆಯೇ ಸಂಬಂಧಿತ ವಿಜ್ಞಾನಗಳು ಬೆಳೆದು ಬಂದಿರುತ್ತವೆ. ಪ್ರತಿಯೊಂದು ವಿಜ್ಞಾನದಲ್ಲಿ ಮೂಲ ಪರಿಕಲ್ಪನೆಗಳು ಕಂಡು ಬರುತ್ತವೆ. **ಉದಾ:** ಭೌತಶಾಸ್ತ್ರದಲ್ಲಿ – ವಸ್ತು, ಶಕ್ತಿ, ದ್ರವ್ಯರಾಶಿ, ಸಾಂದ್ರತೆ ಕಂಡುಬರುವವು, ಹಾಗೆಯೇ ರಸಾಯನಶಾಸ್ತ್ರದಲ್ಲಿ – ಮೂಲವಸ್ತು, ಸಂಯುಕ್ತವಸ್ತು ಮತ್ತು ಮಿಶ್ರಣಗಳು ಇದ್ದರೆ, ಅರ್ಥಶಾಸ್ತ್ರದಲ್ಲಿ ಬೇಡಿಕೆ, ಪೂರೈಕೆ, ವಿತರಣೆ, ಅನುಭೋಗ ಮತ್ತು ವಿನಿಮಯ ಮುಂತಾದ ಪರಿಕಲ್ಪನೆಗಳನ್ನು ಉಪಯೋಗಿಸಲಾಗುತ್ತಿದೆ. ಅದೇ ರೀತಿ ಸಮಾಜಶಾಸ್ತ್ರದಲ್ಲಿ – ಸಮಾಜ, ಸಮುದಾಯ, ಸಂಘ–ಸಂಸ್ಥೆ, ಸಾಮಾಜಿಕ ಸಮೂಹಗಳು, ಸಾಮಾಜಿಕ ನಿಯಂತ್ರಣ, ಸಂಸ್ಕೃತಿ, ಸಾಮಾಜೀಕರಣ, ಮೊದಲಾದವುಗಳನ್ನು ಬಳಸಲಾಗುತ್ತಿದೆ. ಈ ಕೆಳಗಿನ ಭಾಗದಲ್ಲಿ ಸಮಾಜಶಾಸ್ತ್ರವನ್ನು ತಿಳಿದುಕೊಳ್ಳಲು ಈ ಪರಿಕಲ್ಪನೆಗಳ ಅಧ್ಯಯನವು ಅವಶ್ಯಕವಾಗಿದೆ.

## 2.2 ಸಮಾಜ (Society):

ಸಮಾಜಶಾಸ್ತ್ರದ ಅಧ್ಯಯನದಲ್ಲಿ ಸಮಾಜವು ಪ್ರಧಾನ ಅಧ್ಯಯನ ವಸ್ತುವಾಗಿದೆ. ಮಾನವ ಸಮಾಜವನ್ನು ವೈಜ್ಞಾನಿಕವಾಗಿ ಅಧ್ಯಯನ ಮಾಡಲು ರೂಪಿಸಲ್ಪಟ್ಟ ಶಾಸ್ತ್ರವೇ ಸಮಾಜಶಾಸ್ತ್ರವಾಗಿದೆ. ವ್ಯಕ್ತಿ ಮತ್ತು ಸಮಾಜ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಮಾನವ ಒಂಟಿಯಾಗಿ ಜೀವಿಸಲಾರ. ಅವನು ಯಾವಾಗಲೂ ಸಾಂಘಿಕವಾಗಿ ಸಮಾಜದಲ್ಲಿ ಜೀವಿಸುವನು. ಸಮಾಜದಲ್ಲಿ ಮಾತ್ರ ಮಾನವನ ಜೀವನ ಬೆಳೆಯುವುದು, ಮುಂದುವರೆಯುವುದು ಹಾಗೂ ಸರ್ವತೋಮುಖ ವ್ಯಕ್ತಿತ್ವ ರೂಪುಗೊಳ್ಳುವುದು. ಅದಕ್ಕಾಗಿ **ಅರಿಸ್ಟಾಟಲ್‌ರವರು** "ಮಾನವ ಸಮಾಜ ಜೀವಿ" (Man is a Social being) ಎಂದಿರುವರು.

### ಅರ್ಥ ಮತ್ತು ವ್ಯಾಖ್ಯೆಗಳು (Meaning and Definitions) :–

ಸಮಾಜ ಎಂಬ ಪದವನ್ನು ಜನಸಾಮಾನ್ಯರು ತಮ್ಮ ದಿನನಿತ್ಯದ ಜೀವನದಲ್ಲಿ ಸಂಕುಚಿತ ಅರ್ಥದಲ್ಲಿ ಕೃಷಿಕ ಸಮಾಜ, ನೇಕಾರ ಸಮಾಜ, ಗ್ರಾಮೀಣ ಸಮಾಜ, ಮಹಿಳಾ ಸಮಾಜ ಮುಂತಾದ ರೀತಿ ಬಳಸುವರು.

ಆದರೆ ಸಮಾಜಶಾಸ್ತ್ರದಲ್ಲಿ ವಿಶಾಲ, ನಿರ್ಧಿಷ್ಟ ಅರ್ಥವಿದೆ. 'ಸಮಾಜ' ಎಂಬ ಕನ್ನಡ ಪದವು ಇಂಗ್ಲೀಷ ಭಾಷೆಯ **'ಸೊಸೈಟಿ' (Society)** ಎಂಬ ಪದದ ಅನುವಾದವಾಗಿದೆ. 'ಸೊಸೈಟಿ' ಎಂಬ ಪದವು ಲ್ಯಾಟಿನ್ ಭಾಷೆಯ **'ಸೋಷಿಯಸ್' (Socius)** ಎಂಬ ಪದದಿಂದ ಉತ್ಪತ್ತಿಯಾಗಿದೆ. ಲ್ಯಾಟಿನ್ ಭಾಷೆಯ **'ಸೋಷಿಯಸ್'** ಎಂದರೆ ಒಡನಾಡಿತನ, ಗೆಳೆತನ **(Frindship or Companionship)** ಎಂದರ್ಥ, ಒಟ್ಟಿನಲ್ಲಿ **"ಒಡನಾಡಿಗಳ ಒಡನಾಟದಿಂದ ಒಟ್ಟುಗೂಡಿರುವ ವ್ಯವಸ್ಥೆಯೇ ಸಮಾಜ"** ಎನ್ನಬಹುದು

I) **ಮೆಕೈವರ ಮತ್ತು ಪೇಜ್‌ರವರು :–** "ಸಾಮಾಜಿಕ ಸಂಬಂಧಗಳ ಬಲೆಯೇ ಸಮಾಜ".

II) **ಜಿ.ಡಿ.ಎಂ. ಕೋಲ್ :–** "ಒಂದು ಸಮುದಾಯದೊಳಗಿನ ಸುಸಂಘಟಿತ ಸಂಸ್ಥೆಗಳ, ಸಂಘಗಳ ಸಂಕೀರ್ಣವಾದ ವ್ಯವಸ್ಥೆಯೇ ಸಮಾಜ"

III) **ಪ್ರೊ. ಎಫ್.ಎಚ್. ಗಿಡ್ಡಿಂಗ್ಸ್ :–** "ಜೊತೆಗೂಡಿ ಇರಬಹುದಾದ ವ್ಯಕ್ತಿಗಳನ್ನು ಒಟ್ಟುಗೂಡಿಸಿದ ಒಂದು ಒಕ್ಕೂಟ, ಸಂಘಟನೆ, ಔಪಚಾರಿಕ ಬಾಂಧವ್ಯಗಳ ಮೊತ್ತವೇ ಸಮಾಜ" ಎಂದಿರುವರು.

## ಸಮಾಜದ ಲಕ್ಷಣಗಳು (Characteristics of Society)

### a. ಸಮಾಜವು ಸಮೂಹಗಳ ಸಮೂಹ : (Society – The Group of Groups)

ಹಲವು ಜನರು ಒಟ್ಟುಗೂಡಿ ಸಮೂಹವಾಗುವುದು. ಅಂತಹ ಹಲವಾರು ಸಮೂಹಗಳು ಒಟ್ಟುಗೂಡಿ ಸಮಾಜವಾಗುವುದು. ಪ್ರತಿಯೊಂದು ಸಮಾಜವು ಕುಟುಂಬ, ನೆರೆಹೊರೆ, ಗ್ರಾಮ, ನಗರ, ಕಾರ್ಮಿಕ ಸಂಘ, ಧಾರ್ಮಿಕ ಸಮೂಹ, ರಾಜಕೀಯ ಪಕ್ಷಗಳು ಮುಂತಾದ ಸಮೂಹಗಳನ್ನು ಹೊಂದಿರುವದು. ಅದಕ್ಕಾಗಿ **ಹೆಚ್. ಎಂ. ಜಾನ್ಸನ್** ರವರು "ಸಮೂಹಗಳ ಸಮೂಹವೇ ಸಮಾಜ" ಎಂದಿದ್ದಾರೆ. ಜನರ ವಿವಿಧ ಆಶೋತ್ತರಗಳನ್ನು ಪೂರೈಸುವ ವ್ಯವಸ್ಥಿತ ಸಮೂಹವೇ ಸಮಾಜವಾಗುವುದು.

### b. ಸಮಾಜವು ಸಾಮಾಜಿಕ ಸಂಬಂಧಗಳ ಬಲೆ : (Society is a web of Social Relations)

ಸಮಾಜವೆಂದರೆ ಅದು ಕೇವಲ ಜನರ ಸಂಗ್ರಹವಲ್ಲ, ಅದು ಒಂದು ನಿರಂತರ ಅಂತಃಕ್ರಿಯೆಯಲ್ಲಿ ತೊಡಗಿರುವ ಜನರ ಸಮೂಹವಾಗಿದೆ. **ಸಾಮಾಜಿಕ ಸಂಬಂಧವೆಂದರೆ** – "ಇಬ್ಬರು ಅಥವಾ ಅದಕ್ಕಿಂತಲೂ ಹೆಚ್ಚಿನ ಜನರ ನಡುವಿನ ಕೊಡುವ ಮತ್ತು ತೆಗೆದುಕೊಳ್ಳುವ ಸಂಬಂಧ ಎನ್ನುತ್ತೇವೆ", ಸಾಮಾಜಿಕ ಸಂಬಂಧಗಳ ವ್ಯಾಪ್ತಿ ವಿಶಾಲವಾಗಿದೆ. **ಉದಾ:–** ಗುರು–ಶಿಷ್ಯರು, ಪಾಲಕರು–ಮಕ್ಕಳು, ರೋಗಿಗಳು–ವೈದ್ಯರು, ಗಂಡ–ಹೆಂಡತಿ ಮುಂತಾದವುಗಳಲ್ಲಿ ಇಂತಹ ಸಂಬಂಧ ಕಾಣುವೆವು. ಒಬ್ಬ ವ್ಯಕ್ತಿ ಏಕಕಾಲದಲ್ಲಿ ಹಲವಾರು ಸಾಮಾಜಿಕ ಸಂಬಂಧಗಳನ್ನು ಹೊಂದಿರುವನು. ಅದಕ್ಕಾಗಿ **ಮೆಕೈವರ ಮತ್ತು ಪೇಜ್**ರವರು "ಸಾಮಾಜಿಕ ಜೀವಿಗಳೆನಿಸಿಕೊಂಡವರು ಪರಸ್ಪರ ಗುರುತಿಸಿಕೊಂಡು ವರ್ತಿಸುವಂತಹ ಪರಿಸ್ಥಿತಿ ಎಲ್ಲಿರುತ್ತದೆಯೋ ಅಲ್ಲಿ ಮಾತ್ರ ಸಮಾಜ ಇರುತ್ತದೆ" ಎಂದಿರುವರು. ಒಟ್ಟಿನಲ್ಲಿ "ಸಾಮಾಜಿಕ ಸಂಬಂಧಗಳ ಬಲೆಯೇ ಸಮಾಜ".

### c. ಹೋಲಿಕೆ ಅಥವಾ ಸಾಮ್ಯತೆ (Primary Likeness) :–

ಸಮಾಜದ ರಚನೆಯಲ್ಲಿ ಹೋಲಿಕೆ ಪ್ರಮುಖ ಪಾತ್ರವಹಿಸುತ್ತದೆ. ವ್ಯಕ್ತಿಗಳಲ್ಲಿರುವ ದೈಹಿಕ, ಮಾನಸಿಕ ಹೋಲಿಕೆಯ ಅಂಶಗಳೇ ಸಮಾಜಕ್ಕೆ ಆಧಾರವಾಗಿರುತ್ತವೆ. ಜನರ ಆಸೆ ಆಕಾಂಕ್ಷೆಗಳು, ಕೆಲಸಗಳು, ಗುರಿಗಳು,

ಆದರ್ಶಗಳು, ಮೌಲ್ಯಗಳಲ್ಲಿ ಹೋಲಿಕೆಗಳನ್ನು ಹೊಂದಿರುವರು. ಇಂತಹ ಹೋಲಿಕೆಗಳು ಅವರು ಪರಸ್ಪರ ಅಂತಃಕ್ರಿಯೆಸುವಂತೆ ಹಾಗೂ ಕೂಡಿ ಬಾಳುವಂತೆ ಪ್ರೇರೇಪಿಸುತ್ತವೆ. ಇದರಿಂದ ಜನರಲ್ಲಿ ಪರಸ್ಪರ ಒಡನಾಡಿತನ, ಸಹಕಾರ, ಪ್ರೀತಿ-ವಿಶ್ವಾಸ, ಅನುಕಂಪ, ತ್ಯಾಗ, ನಾವೆಲ್ಲರೂ ಒಂದು ಎಂಬ ಭಾವನೆ ವ್ಯಾಪಕವಾಗಿ ಬೆಳೆದು ಬರುತ್ತದೆ. "ಒಂದೇ ಗರಿಗಳುಳ್ಳ ಪಕ್ಷಿಗಳು ಒಂದುಗೂಡುತ್ತವೆ" ಹಾಗೆಯೇ ಒಂದೇ ಗುಣ ಸ್ವಭಾವ ಹೊಂದಿದ ಮಾನವರು ಒಟ್ಟುಗೂಡಿ ವಾಸಿಸುವರು.

**d. ಹೋಲಿಕೆ ಮತ್ತು ವ್ಯತ್ಯಾಸಗಳು: (Secondary Difference) :–**

"ಹೋಲಿಕೆ ಮತ್ತು ವ್ಯತ್ಯಾಸಗಳು ಇವು ಸಮಾಜದ ದೃಷ್ಠಿಯಿಂದ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ", ಸಮಾಜದ ಜನರ ರೂಪ, ಆಸಕ್ತಿ, ಬುದ್ಧಿಶಕ್ತಿ, ಭಾವನೆಗಳು, ಮಾನಸಿಕ ಶಕ್ತಿ, ಸಾಮರ್ಥ್ಯ ಮುಂತಾದವುಗಳಲ್ಲಿ ಭಿನ್ನತೆಗಳಿರುತ್ತವೆ. ಈ ಕಾರಣದಿಂದಲೇ ಸಮಾಜದಲ್ಲಿ ಕೃಷಿಕರು, ಕಾರ್ಮಿಕರು, ಸೈನಿಕರು, ಶಿಕ್ಷಕರು, ವ್ಯಾಪಾರಿಗಳು, ವಕೀಲರು, ವೈದ್ಯರು, ಇಂಜಿನಿಯರರು, ಮುಂತಾದ ವೈವಿಧ್ಯಮಯ ವೃತ್ತಿ ಸಮೂಹಗಳು ಸಮಾಜದಲ್ಲಿ ಕಂಡುಬರುವವು. ಮೆಕೈವರ ಮತ್ತು ಪೇಜ್‌ರವರು ಹೇಳುವಂತೆ – ಸಮಾಜದ ಅಸ್ತಿತ್ವಕ್ಕೆ ಹೋಲಿಕೆಯು ಪ್ರಥಮ ಸ್ಥಾನದಲ್ಲಿಯೂ, ವ್ಯತ್ಯಾಸವು ನಂತರದ ಸ್ಥಾನದಲ್ಲಿ ಇರುತ್ತದೆ ಎಂದಿದ್ದಾರೆ.

**e. ಸಹಕಾರ ಮತ್ತು ಶ್ರಮವಿಭಜನೆ (Co-Operation and Division of Labour) :–**

ಮಾನವ ಸಮಾಜವು ಬಹುಮಟ್ಟಿಗೆ ಸಹಕಾರ ಮತ್ತು ಶ್ರಮ ವಿಭಜನೆಗಳ ಮೇಲೆ ನಿಂತಿರುವದು. ಸಹಕಾರವೆಂದರೆ – "ಜನರು ಸಮಾನ ಉದ್ದೇಶಗಳ ಈಡೇರಿಕೆಗೆ ಕೂಡಿ ದುಡಿಯುವುದಾಗಿದೆ." ಸಹಕಾರ ಮನೋಭಾವ ಇರುವುದರಿಂದಲೇ ಸಮಾಜದಲ್ಲಿ ಒಬ್ಬರಿಗೊಬ್ಬರು ಸುಖ-ದುಃಖಗಳಲ್ಲಿ ಬಾಗಿಯಾಗಿರುವರು. ಮಾನವ ಸಂತತಿ ಮುಂದುವರೆಯಲು ಗಂಡು-ಹೆಣ್ಣುಗಳ ಪರಸ್ಪರ ಸಹಕಾರ ಅಗತ್ಯ ಹಾಗೂ ಮಾನವ ಸಂಸ್ಕೃತಿ, ನಾಗರಿಕತೆಯ ಬೆಳವಣಿಗೆಗೆ ಸಹಕಾರ ಅವಶ್ಯ.

ಶ್ರಮವಿಭಜನೆ ಎಂದರೆ – "ಸಾಮಾನ್ಯ ಕಾರ್ಯವೊಂದನ್ನು ತಮ್ಮೊಳಗೆ ಹಂಚಿಕೊಂಡು ದುಡಿಯುವುದಾಗಿದೆ" ಶ್ರಮ ವಿಭಜನೆಯು ಜನರ ಆಸಕ್ತಿ, ಅಭಿರುಚಿ, ಸಾಮರ್ಥ್ಯ, ಲಿಂಗ ಮತ್ತು ವಯಸ್ಸು ಮುಂತಾದವುಗಳಿಗನುಸಾರವಾಗಿ ಕೆಲಸ ಹಂಚಿಕೆಯಾಗಿರುವುದು. ಪ್ರತಿಯೊಂದು ಕ್ಷೇತ್ರದಲ್ಲಿಯೂ ಶ್ರಮ ವಿಭಜನೆ ಇರುವುದರಿಂದ ಎಲ್ಲ ಕೆಲಸ ಕಾರ್ಯ ಸುಗಮವಾಗಿ ಸಾಗುವವು. ಇಂದಿನ ಆಧುನಿಕ ಸಮಾಜದಲ್ಲಿ ವಿಶೇಷ ಪರಿಣಿತಿ ಹಾಗೂ ಕೌಶಲ್ಯ ಪಡೆದ ವ್ಯಕ್ತಿಗಳಿಗೆ ಹೆಚ್ಚು ಪ್ರಾಮುಖ್ಯತೆಯಿದೆ. ಆದುದರಿಂದ ಸಹಕಾರ ಮತ್ತು ಶ್ರಮವಿಭಜನೆ ಎರಡು ಪರಸ್ಪರ ಪೂರಕವಾಗಿವೆ.

**f. ಪರಸ್ಪರ ಅವಲಂಬನೆ (Interdependence) :–**

ಪರಸ್ಪರ ಅವಲಂಬನೆಯು ಸಮಾಜದ ಪ್ರಮುಖ ಲಕ್ಷಣವಾಗಿದೆ. ಯಾವುದೇ ವ್ಯಕ್ತಿ ಸಮಾಜದಲ್ಲಿ ಸ್ವಯಂಪರಿಪೂರ್ಣವಾಗಿರುವುದಿಲ್ಲ. ಜನರು ತಮ್ಮ ಅಸಂಖ್ಯಾತ ಬೇಡಿಕೆಗಳ ಈಡೇರಿಕೆಗಾಗಿ ಇತರರನ್ನು ಅವಲಂಬಿಸಬೇಕಾಗುವುದು. ಕುಟುಂಬದಂತಹ ಮೂಲಭೂತ ಸಂಸ್ಥೆ ಸ್ತ್ರೀ-ಪುರುಷರ ಪರಸ್ಪರಾವಲಂಬನೆಯನ್ನು ಆಧರಿಸಿ ನಿಂತಿದೆ. ನಾಗರಿಕತೆ ಮತ್ತು ಔದ್ಯೋಗಿಕತೆ ಬೆಳೆಯುತ್ತಾ ಹೋದಂತೆ, ಜೀವನದ ವೈವಿದ್ಯತೆ ಹೆಚ್ಚಿದಂತೆ ಪರಸ್ಪರ ಅವಲಂಬನೆಯ ತೀವ್ರತೆ ಹೆಚ್ಚುತ್ತಾ ಹೋಗುವುದು. ಇಂದು ಕೇವಲ ವ್ಯಕ್ತಿಗಳಲ್ಲಿ ಮಾತ್ರ ಅವಲಂಬನೆ ಕಂಡು ಬರದೇ ಸಮುದಾಯಗಳು ಸಾಮಾಜಿಕ ಸಮೂಹಗಳು, ರಾಷ್ಟ್ರಗಳು ಕೂಡಾ ಪರಸ್ಪರಾವಲಂಬನೆಯ ಮೇಲೆ ಕಾರ್ಯ ನಿರ್ವಹಿಸುತ್ತವೆ.

### g. ಸಾಮಾಜಿಕ ನಿಯಂತ್ರಣ (Social Control) :–

ಪ್ರತಿಯೊಂದು ಸಮಾಜವು ತನ್ನದೇ ಆದ ರೀತಿ ನೀತಿಗಳನ್ನು, ಬೆಳೆಸಿಕೊಂಡಿದ್ದು, ಅವುಗಳ ಮೂಲಕ ಜನರ ವರ್ತನೆಯನ್ನು ನಿಯಂತ್ರಿಸುವುದು. ಸಮಾಜವು ವಿವಿಧ ಔಪಚಾರಿಕ ಮತ್ತು ಅನೌಪಚಾರಿಕ ನಿಯಂತ್ರಣ ಸಾಧನಗಳನ್ನು ಹೊಂದಿರುವದು. ಸರಳ ಸಮಾಜವು ಸಂಪ್ರದಾಯ, ಲೋಕಾಚಾರ, ನೈತಿಕನಿಯಮ, ಪರಂಪರೆ, ಮೊದಲಾದ ಅನೌಪಚಾರಿಕ ನಿಯಂತ್ರಣ ಸಾಧನಗಳನ್ನು ಹೊಂದಿದ್ದರೆ, ಇಂದಿನ ಆಧುನಿಕ ಸಂಕೀರ್ಣ ಸಮಾಜವು ಕಾನೂನು, ಶಾಸನ, ಸಂವಿಧಾನ, ಪೊಲೀಸ್, ನ್ಯಾಯಾಲಯ, ಸೈನ್ಯ ಮೊದಲಾದ ಔಪಚಾರಿಕ ನಿಯಂತ್ರಣ ಸಾಧನಗಳನ್ನು ಹೊಂದಿ, ಜನರ ವರ್ತನೆಗಳನ್ನು ನಿಯಂತ್ರಿಸುವುದು. ಸಾಮಾಜಿಕ ನಿಯಂತ್ರಣ ಇಲ್ಲದಿದ್ದರೆ ಸಮಾಜ ಅವ್ಯವಸ್ಥೆಗೊಂಡು, ಅರಾಜಕತೆ ಉಂಟಾಗುವುದು. ಆದ್ದರಿಂದ ಸಮಾಜದ ಸ್ಥಿರತೆಗೆ, ಐಕ್ಯತೆಗೆ ಸಾಮಾಜಿಕ ನಿಯಂತ್ರಣ ಅವಶ್ಯಕವಾಗಿದೆ.

### h. ಸಮಾಜವು ಗತಿಶೀಲವಾದುದು (Society is Dynamic) :–

ಸಮಾಜವು ಯಾವಾಗಲೂ ಪರಿವರ್ತನಶೀಲವಾದುದು. ಪರಿವರ್ತನೆಯಿಲ್ಲದೆ ಯಾವುದೇ ಸಮಾಜವು ದೀರ್ಘಕಾಲ ಸ್ಥಿರವಾಗಿ ಉಳಿಯಲಾರದು. ಹಳೆಯ ಸಂಘ ಸಂಸ್ಥೆಗಳು ಮರೆಯಾಗಿ, ಹೊಸ ಸಂಘ ಸಂಸ್ಥೆಗಳು ಹುಟ್ಟುವವು. ಬದಲಾವಣೆಯು ನಿಧಾನವಾಗಿ ಅಥವಾ ವೇಗವಾಗಿ ಸಾಗುವ ಪ್ರಕ್ರಿಯೆಯಾಗಿರುವುದು. **ಉದಾ:** ಗ್ರಾಮೀಣ ಸಮಾಜ ನಿಧಾನವಾಗಿ ಬದಲಾದರೆ, ನಗರ ಸಮಾಜ ತ್ವರಿತ ಗತಿಯಲ್ಲಿ ಬದಲಾವಣೆ ಹೊಂದುವದು.

## ಸಮಾಜದ ವಿಧಗಳು

**ಸಮಾಜವನ್ನು ಆಧುನಿಕ ಪೂರ್ವ (ಪ್ರಾಚೀನ) ಸಮಾಜ** ಮತ್ತು **ಆಧುನಿಕ ಸಮಾಜ** ಎಂದು ಎರಡು ರೀತಿ ವರ್ಗೀಕರಿಸಬಹುದು. ಆಧುನಿಕ ಪೂರ್ವ ಸಮಾಜವನ್ನು ಈ ಕೆಳಕಂಡಂತೆ ನಾಲ್ಕು ರೀತಿ ವರ್ಗೀಕರಿಸಲಾಗಿದೆ.

(1) ಬೇಟೆಗಾರಿಕೆ ಮತ್ತು ಆಹಾರ ಸಂಗ್ರಹಣೆಯ ಸಮಾಜ.

(2) ಕೃಷಿ ಸಮಾಜ,

(3) ತೋಟಗಾರಿಕೆ ಮತ್ತು ಪಶುಪಾಲನೆಯ ಸಮಾಜ.

(4) ಸಾಂಪ್ರದಾಯಿಕ ಸಮಾಜ ಅಥವಾ ನಾಗರೀಕತೆ.

ಬೇಟೆಗಾರಿಕೆ ಮತ್ತು ಆಹಾರ ಸಂಗ್ರಹಣೆಯ ಸಮಾಜವು ಸಣ್ಣ ಸಮುದಾಯವಾಗಿದ್ದು, ಬೇಟೆ, ಮೀನುಗಾರಿಕೆ, ಜೇನು ಮತ್ತು ಗೆಡ್ಡೆ –ಗೆಣಸುಗಳನ್ನು ಸಂಗ್ರಹಿಸಿವುದು ಪ್ರಮುಖ ಕಾರ್ಯವಾಗಿದ್ದುಮ, ವಯಸ್ಸು ಮತ್ತು ಲಿಂಗದ ಆಧಾರದ ಮೇಲೆ ಸ್ಥಾನ–ಮಾನ ನಿಗಧಿಯಾಗಿರುತ್ತದೆ. **ಕೃಷಿಕ ಸಮಾಜವು** ಕೃಷಿಯನ್ನು ಅವಲಂಭಿಸಿದ ಗ್ರಾಮ ವಾಸಿಗಳ ವ್ಯವಸ್ಥೆ. ಇಲ್ಲಿ ನಗರ ಮತ್ತು ಪಟ್ಟಣಗಳು ನಗಣ್ಯ. ಆಹಾರ ಸಂಗ್ರಹಣೆಯು ಕೃಷಿ ಸಮಾಜದ ಮತ್ತೊಂದು ಲಕ್ಷಣ. ಕೃಷಿ ಸಮಾಜವು ಒಬ್ಬ ಮುಖ್ಯಸ್ಥನ ನಿಯಂತ್ರಣಕ್ಕೆ ಒಳಪಟ್ಟಿದ್ದು. ಪರಸ್ಪರ ಸಾಮಾಜಿಕ ಅಸಮಾನತೆಗಳು ಗೋಚರಿಸುತ್ತವೆ. **ತೋಟಗಾರಿಕೆ ಮತ್ತು ಪಶುಪಾಲನೆಯ ಸಮಾಜದಲ್ಲಿ** ಸುಮಾರು ನೂರರಿಂದ ಸಾವಿರದಷ್ಟು ಜನರಿರುತ್ತಾರೆ. ಪಶುಪಾಲನೆಯು ಈ ಸಮಾಜದ ಪ್ರಮುಖ ಕೆಲಸವಾಗಿರುತ್ತದೆ. ಈ ಸಮಾಜವು

ಕೂಡ ಒಬ್ಬ ನಾಯಕನ ನಿಯಂತ್ರಣಕ್ಕೆ ಒಳಪಟ್ಟಿರುತ್ತದೆ. ಅಸಮಾನತೆಗಳು ಗೋಚರಿಸುತ್ತವೆ. **ಸಾಂಪ್ರದಾಯಿಕ ಸಮಾಜ ಅಥವಾ ನಾಗರೀಕತೆ**ಯು ಕ್ರಿ.ಪೂ. 6000 ರಿಂದ ಹತ್ತೊಂಭತ್ತನೇಯ ಶತಮಾನದವರೆಗೂ ಅಸ್ತಿತ್ವದಲ್ಲಿದ್ದ ಸಮಾಜ. ಕೈಗಾರಿಕ ಸಮಾಜಕ್ಕಿಂತ ಗಾತ್ರದಲ್ಲಿ ಸಣ್ಣದ್ದಾಗಿದ್ದರೂ, ಸುಮಾರು 1000 ಸಂಖ್ಯೆಯಿಂದ ಲಕ್ಷಾಂತರ ಜನರ ಜೀವನ ಕ್ರಮ. ಕೆಲವು ನಗರಗಳು ವ್ಯಾಪಾರ ಮತ್ತು ಉತ್ಪಾದನಾ ಕೇಂದ್ರಗಳಾಗಿದ್ದವು. ಈ ಸಮಾಜವು ವ್ಯವಸಾಯ ಆಧಾರಿತ ಸಮಾಜವಾಗಿತ್ತು. ಇಲ್ಲಿ ವಿವಿಧ ವರ್ಗಗಳ ನಡುವೆ ಅಸಮಾನತೆಯಿತ್ತು. ಸಾಂಪ್ರದಾಯಿಕ ಸಮಾಜವು ಒಬ್ಬ ರಾಜ ಅಥವಾ ಚಕ್ರವರ್ತಿಯ ಆಳ್ವಿಕೆಗೆ ಒಳಪಟ್ಟಿತ್ತು.

**ಆಧುನಿಕ ಸಮಾಜ**ವನ್ನು 1. ಪ್ರಥಮ ಜಗತ್ತಿನ ಸಮಾಜ, 2. ದ್ವಿತೀಯ ಜಗತ್ತಿನ ಸಮಾಜ, 3. ಅಭಿವೃದ್ಧಿಶೀಲ ಸಮಾಜ, ಮತ್ತು 4. ನೂತನ ಕೈಗಾರಿಕಾ ಸಮಾಜ ಎಂದು ನಾಲ್ಕು ರೀತಿ ವರ್ಗೀಕರಿಸಲಾಗಿದೆ.

**ಪ್ರಥಮ ಜಗತ್ತಿನ ಸಮಾಜಗಳು:** 18ನೇ ಶತಮಾನದಿಂದ ಪ್ರಸ್ತುತ ಕಾಲದವರೆಗೆ ಕಂಡುಬರುತ್ತವೆ. ಈ ಸಮಾಜವು ಕೈಗಾರಿಕ ವ್ಯವಸ್ಥೆಯಾಗಿ ಬಂಡವಾಳಶಾಹಿ ಮತ್ತು ಮುಕ್ತ ಆರ್ಥಿಕತೆಯನ್ನು ಪಾಲಿಸುತ್ತದೆ. ಬಹುತೇಕ ಜನರು ಪಟ್ಟಣ ಮತ್ತು ನಗರ ವಾಸಿಗಳಾಗಿ ಕೈಗಾರಿಕೆ ಮತ್ತು ಅದರ ಉಪ ವಲಯಗಳಲ್ಲಿ ದುಡಿಯುತ್ತಾರೆ. ಕೆಲವೇ ಜನ ಮಾತ್ರ ಕೃಷಿಯನ್ನು ಅವಲಂಬಿಸಿ, ಗ್ರಾಮಗಳಲ್ಲಿ ವಾಸಿಸುತ್ತಾರೆ. ಒಂದು ಸುವ್ಯವಸ್ಥಿತ ಸರ್ಕಾರವು ಸಮಾಜವನ್ನು ನಿಯಂತ್ರಿಸುತ್ತದೆ. ಪಾಶ್ಚಾತ್ಯ ರಾಷ್ಟ್ರಗಳು ಮತ್ತು ಜಪಾನ್, ಆಸ್ಟ್ರೇಲಿಯಾ ಮತ್ತು ನ್ಯೂಜಿಲ್ಯಾಂಡ್ ದೇಶಗಳಲ್ಲೂ ಈ ರೀತಿಯ ಸಮಾಜವನ್ನು ಕಾಣುತ್ತೇವೆ.

**ದ್ವಿತೀಯ ಜಗತ್ತಿನ ಸಮಾಜಗಳು:** ರಷ್ಯಾ ದೇಶದ ಕಮ್ಯೂನಿಸ್ಟ್ ಕ್ರಾಂತಿಯ ನಂತರ ಅಸ್ತಿತ್ವಕ್ಕೆ ಬಂದ ರಾಷ್ಟ್ರಗಳಾಗಿವೆ, ಇವುಗಳೂ ಕೂಡ ಕೈಗಾರಿಕಾ ರಾಷ್ಟ್ರಗಳೇ ಆಗಿದ್ದರೂ ಕೇಂದ್ರೀಕೃತ ಅರ್ಥ ವ್ಯವಸ್ಥೆಯನ್ನು ಹೊಂದಿದೆ. ಸೀಮಿತ ಸಂಖ್ಯೆಯ ಜನರು ಕೃಷಿಯನ್ನು ಅವಲಂಭಿಸಿದ್ದರೆ ಬಹುತೇಕರು ನಗರ ಮತ್ತು ಪಟ್ಟಣಗಳಲ್ಲಿ ಕೈಗಾರಿಕೆಗಳಲ್ಲಿ ದುಡಿಯುತ್ತಿದ್ದರು. 1990ರ ನಂತರ ಸೋವಿಯತ್ ರಷ್ಯಾದಲ್ಲಿ ನಡೆದ ರಾಜಕೀಯ ಪರಿವರ್ತನೆಯಿಂದ ಮುಕ್ತ ಆರ್ಥಿಕತೆ ಜಾರಿಗೆ ಬಂದಿತು. ದ್ವಿತೀಯ ಜಗತ್ತಿನ ಸಮಾಜಗಳು ಬಹುತೇಕ ಪ್ರಥಮ ಜಗತ್ತಿನ ಸಮಾಜಗಳ ರೀತಿ ಹೊಂದಾಣಿಕೆ ಮಾಡಿಕೊಂಡಿವೆ.

**ಪ್ರಗತಿಶೀಲ ರಾಷ್ಟ್ರಗಳು:** ಬ್ರಿಟಿಷ್ ಆಳ್ವಿಕೆಯಿಂದ ಸ್ವತಂತ್ರಗೊಂಡ ರಾಷ್ಟ್ರಗಳಾಗಿವೆ. ಬಹುತೇಕ ಈ ರಾಷ್ಟ್ರಗಳು ಕೃಷಿ ಪ್ರಧಾನವಾಗಿದ್ದು ಕೃಷಿ ಉತ್ಪನ್ನದಲ್ಲಿ ಜಾಗತಿಕ ಮಾರುಕಟ್ಟೆಯನ್ನು ಪ್ರವೇಶಿಸಿವೆ. ಇಲ್ಲಿಯೂ ಕೂಡ ಕೇಂದ್ರೀಕೃತ ಸರ್ಕಾರ ಸಮಾಜವನ್ನು ನಿಯಂತ್ರಿಸುತ್ತದೆ. ಭಾರತ, ಚೀನ, ದಕ್ಷಿಣ ಅಮೇರಿಕಾ ರಾಷ್ಟ್ರಗಳು, ಆಫ್ರಿಕಾ ಖಂಡದ ಬಹುತೇಕ ರಾಷ್ಟ್ರಗಳು ಈ ಗುಂಪಿಗೆ ಸೇರಿವೆ.

**ನೂತನ ಕೈಗಾರಿಕಾ ಸಮಾಜಗಳು:** 1970ರ ನಂತರ ಅಸ್ತಿತ್ವಕ್ಕೆ ಬಂದ ಈ ರಾಷ್ಟ್ರಗಳೂ ಕೂಡ ಬಂಡವಾಳಶಾಹಿ ಮತ್ತು ಮುಕ್ತ ಆರ್ಥಿಕ ವ್ಯವಸ್ಥೆಯ ರಾಷ್ಟ್ರಗಳಾಗಿವೆ. ಈ ದೇಶದ ಸರಾಸರಿ ತಲಾದಾಯ ಪ್ರಥಮ ಜಗತ್ತಿನ ಸಮಾಜಗಳಿಗಿಂತ ಕಡಿಮೆ ಇದೆ. ಹಾಂಗ್‌ಕಾಂಗ್, ದಕ್ಷಿಣ ಕೋರಿಯಾ, ಸಿಂಗಪೂರ್, ಬ್ರೆಜಿಲ್ ಮತ್ತು ಮೆಕ್ಸಿಕೋ ದೇಶಗಳು ಈ ಪಟ್ಟಿಗೆ ಸೇರುತ್ತವೆ.

## 2.3 ಸಮುದಾಯ (Community)

ಸಮಾಜಶಾಸ್ತ್ರದ ಪ್ರಮುಖ ಮೂಲಕಲ್ಪನೆಗಳಲ್ಲಿ ಸಮುದಾಯವು ಒಂದಾಗಿದೆ. ಜನರ ಸಾಮಾನ್ಯ ಆಸಕ್ತಿ ಮತ್ತು ಕಾರ್ಯಚಟುವಟಿಕೆಗಳನ್ನು ಹೊಂದಿರುವ ಭೌಗೋಳಿಕ ಪ್ರದೇಶವೇ ಸಮುದಾಯ. ಅಲ್ಲದೆ ಸಾಮಾಜಿಕ

ಸಾಮರಸ್ಯ ಹೊಂದಿರುವ ಒಂದು ಸಾಮಾಜಿಕ ನೆಲೆಗೆ ಸಮುದಾಯ ಎನ್ನಬಹುದು. ಪ್ರತಿಯೊಂದು ಸಮುದಾಯವು ಹಲವಾರು ಸಂಘ ಮತ್ತು ಸಂಸ್ಥೆಗಳನ್ನು ತನ್ನ ಪರಿಧಿಯಲ್ಲಿ ಹೊಂದಿದ್ದು, ಜನರ ಆರ್ಥಿಕ, ಧಾರ್ಮಿಕ, ರಾಜಕೀಯ, ಶೈಕ್ಷಣಿಕ ಮತ್ತು ಇತರ ಎಲ್ಲ ಚಟುವಟಿಕೆಗಳನ್ನು ಪೂರೈಸುವ ವ್ಯವಸ್ಥೆಯಾಗಿದೆ.

## ಅರ್ಥ ಮತ್ತು ವ್ಯಾಖ್ಯೆಗಳು (Meaning and Definitions) :

ಸಾಮಾನ್ಯವಾಗಿ ಸಮುದಾಯ ಎಂಬ ಪದವನ್ನು ಜಾತಿ ಸಮುದಾಯ, ಜನಾಂಗೀಯ ಸಮುದಾಯ, ಧಾರ್ಮಿಕ ಸಮುದಾಯ, ಭಾಷಾ ಸಮುದಾಯಗಳೆಂದು ಸಂಕುಚಿತ ಅರ್ಥದಲ್ಲಿ ಬಳಸುವರು. ಆದರೆ ಸಮಾಜಶಾಸ್ತ್ರದಲ್ಲಿ ಈ ಪದಕ್ಕೆ ವಿಶಾಲವಾದ ಅರ್ಥವಿದೆ. ಈ ಕೆಳಗಿನ ವ್ಯಾಖ್ಯೆಗಳಿಂದ ಸಮುದಾಯದ ಅರ್ಥ ಸರಳವಾಗಿ ತಿಳಿಯಲು ಸಹಾಯಕವಾಗಿದೆ.

I. **ಇ.ಎಸ್. ಬೊಗಾರ್ಡಸ್** –"ನಾವು ನಮ್ಮವರು ಎಂಬ ಭಾವನೆಯೊಂದಿಗೆ ಒಂದು ನಿಶ್ಚಿತ ಭೂಪ್ರದೇಶದಲ್ಲಿ ವಾಸಿಸುವ ಜನಸಮೂಹವನ್ನು ಸಮುದಾಯ" ಎಂದಿದ್ದಾರೆ.

II. **ಕಿಂಗ್ಸಲೇ ಡೇವಿಸ್** – "ಸಾಮೂಹಿಕ ಜೀವನದ ಎಲ್ಲಾ ಅಂಶಗಳನ್ನು ಒಳಗೊಂಡಿರುವ ಒಂದು ಅತಿ ಚಿಕ್ಕ ಸ್ಥಾನೀಯ ಜನ ಸಮೂಹವನ್ನು ಸಮುದಾಯ" ಎಂದು ಕರೆದಿದ್ದಾರೆ.

III. **ಲಂಡ್ ಬರ್ಗ್** – ಒಂದು ನಿರ್ಧಿಷ್ಟ ಭೌಗೋಳಿಕ ಪ್ರದೇಶದಲ್ಲಿ ಮಾನವ ಜನಾಂಗ ವಾಸಿಸುತ್ತಿದ್ದು, ಪರಸ್ಪರ ಅವಲಂಬನೆಯ ಜೀವನ ನಡೆಸುವುದಕ್ಕೆ ಸಮುದಾಯ ಎಂದು ಅರ್ಥೈಸಿದ್ದಾರೆ.

**ಉದಾಹರಣೆಗಳು :–** ಆದಿವಾಸಿ, ಗ್ರಾಮ, ನಗರ ಸಮುದಾಯಗಳು.

## ಸಮುದಾಯದ ಮೂಲಾಂಶಗಳು (Elements of community):

ಸಮುದಾಯದ ಅಸ್ತಿತ್ವಕ್ಕೆ ಅವಶ್ಯವಾಗಿ ನಿರ್ಧಿಷ್ಟ ಭೂಪ್ರದೇಶ ಮತ್ತು ಸಾಮುದಾಯಿಕ ಭಾವನೆ ಎಂಬ ಈ ಎರಡು ಅಂಶಗಳು ಬೇಕು. ಅವುಗಳಿಗೆ ಸಮುದಾಯದ ಮೂಲಾಂಶಗಳು ಎನ್ನುವರು.

### a. ನಿರ್ದಿಷ್ಟ ಭೂಪ್ರದೇಶ ಅಥವಾ ಸ್ಥಾನೀಯತೆ (Locality or Geographical area) :–

ಸಮುದಾಯವು ಒಂದು ಪ್ರಾದೇಶಿಕ ಸಮೂಹವಾಗಿದ್ದು ಅದು ಯಾವಾಗಲೂ ನಿರ್ಧಿಷ್ಟ ಭೌಗೋಳಿಕ ಪ್ರದೇಶ ಆವರಿಸಿರುವುದು. ಹೀಗಾಗಿ ಸ್ಥಾನೀಯತೆಯು ಸಮುದಾಯದ ಭೌತಿಕ ಆಧಾರವಾಗಿದೆ. **ಸ್ಥಾನೀಯತೆ ಎಂದರೆ –** " ನಿರ್ಧಿಷ್ಟ ಭೌತಿಕ ಸ್ಥಳವೊಂದರಲ್ಲಿ ಅದರ ಸದಸ್ಯರುಗಳು ಶಾಶ್ವತವಾಗಿ ನೆಲೆಸಿರುವುದನ್ನು ಸೂಚಿಸಿರುವುದು, ಸಮುದಾಯದ ಗಾತ್ರ ಚಿಕ್ಕದಾಗಿರಬಹುದು ಇಲ್ಲವೇ ದೊಡ್ಡದಾಗಿರಬಹುದು. ಜನರು ಒಂದೆಡೆ ನೆಲೆಸಿರುವ ಕಾರಣ ಅವರೊಳಗೆ ನಿರಂತರವಾದ ಸಂಪರ್ಕ, ಸಂಬಂಧಗಳು ಬೆಳೆದು ಬರಲು ಸಾಧ್ಯವಾಗುವುದು. ಈ ಶಾಶ್ವತ ನೆಲೆಯು ಅವರಿಗೆ ರಕ್ಷಣೆ ಮತ್ತು ಭದ್ರತೆಯನ್ನು ಒದಗಿಸುವುದು. ಅಲ್ಲದೆ ತಮ್ಮ ಸಾಮಾನ್ಯ ಬೇಡಿಕೆಗಳನ್ನು ಈಡೇರಿಸಿಕೊಳ್ಳಲು ಸಹಾಯಕವಾಗುವುದು.

ಸಮುದಾಯದ ಭೌತಿಕ ನೆಲೆಯು ಜನರ ಸಾಮಾಜಿಕ ಜೀವನದ ಮೇಲೆ, ಅವರ ಕುಟುಂಬ, ಮತಧರ್ಮ, ನಂಬಿಕೆ ಆಚಾರ–ವಿಚಾರ, ಉದ್ಯೋಗಗಳ ಮೇಲೆ ಬಹಳ ಗಣನೀಯವಾದ ಪ್ರಭಾವವನ್ನು ಬೀರುವುದು.

ಸಮುದಾಯದ ಭೌತಿಕ ನೆಲೆಗೆ ಸಂಬಂಧಿಸಿದ ಫಲವತ್ತಾದ ಭೂಮಿ, ಖನಿಜಗಳು, ಅರಣ್ಯ, ಜಲ, ಸಸ್ಯ, ಹವಾಮಾನ ಮುಂತಾದ ಅನೇಕ ಭೌತಿಕಾಂಶಗಳು, ಸಮುದಾಯದ ಸಾಂಘಿಕ ಜೀವನವನ್ನು ಪ್ರಭಾವಿಗೊಳಿಸುತ್ತವೆ. ಇವುಗಳಿಗೂ ಸಮುದಾಯದ ಆರ್ಥಿಕ ಚಟುವಟಿಕೆಗೂ ನೇರ ಸಂಬಂಧವಿದೆ.

**b. ಸಾಮುದಾಯಿಕ ಭಾವನೆ (Community Sentiment) :–**

ಸ್ಥಾನೀಯತೆಯು ಒಂದು ಅವಶ್ಯವಾದ ಮೂಲಾಂಶವಾಗಿದ್ದರೂ ಅದೊಂದೇ ಸಮುದಾಯ ನಿರ್ಮಿಸಲಾರದು, ಸಾಮುದಾಯಿಕ ಭಾವನೆಯೂ ಕೂಡಾ ಇನ್ನೊಂದು ಪ್ರಮುಖ ಮೂಲಾಂಶವಾಗಿದೆ. ಸಾಮುದಾಯಿಕ ಭಾವನೆ ಎಂದರೆ – ಸಮುದಾಯದ ಬಗೆಗಿನ "ನಾವು–ನಮ್ಮವರು ಎಂಬ ಭಾವನೆ ಅಥವಾ "ಒಂದು ಸ್ಥಳೀಯ ಸಮೂಹದೊಂದಿಗೆ ಪೂರ್ಣ ಅರಿವಿನೊಂದಿಗೆ ಅಲ್ಲಿನ ಜನರು ತಮ್ಮನ್ನು ತಾವು ಗುರುತಿಸಿಕೊಳ್ಳುವುದು ಎಂದರ್ಥ".

ಸಾಮುದಾಯಿಕ ಭಾವನೆಯಿಂದ ಜನರು ತಮ್ಮ ಸುಖ ದುಃಖಗಳನ್ನು ಪರಸ್ಪರ ಹಂಚಿಕೊಳ್ಳುವರು ಮತ್ತು ಅವರಲ್ಲಿ ಸಾಮೂಹಿಕ ಐಕ್ಯತೆಯ ಭಾವನೆ ಮೂಡುವುದು, ಸಾಮುದಾಯಿಕ ಭಾವನೆ ಸದಾ ಜಾಗೃತವಾಗಿರಬೇಕಾದರೆ ಜನರಲ್ಲಿ ಸಮಾನ ಆಸಕ್ತಿಗಳು, ಸಮಾನ ಜೀವನ ವಿಧಾನಗಳು ಇರಬೇಕಾಗುವುದು.

**ಸಾಮುದಾಯಿಕ ಭಾವನೆಯ ಮೂಲಾಂಶಗಳು (Elements of Community Sentiment) :**

**ಮೆಕೈವರ ಮತ್ತು ಪೇಜ್ :** ಇವರುಗಳ ಪ್ರಕಾರ ಸಾಮುದಾಯಿಕ ಭಾವನೆಯು ಮೂರು ಮುಖ್ಯಾಂಶಗಳನ್ನು ಒಳಗೊಂಡಿದೆ: 1) ನಾವು–ನಮ್ಮವರೆಂಬ ಭಾವನೆ 2) ಪಾತ್ರ–ಭಾವನೆ 3) ಅವಲಂಬನೆಯ ಭಾವನೆ :

**a. ನಾವು – ನಮ್ಮವರೆಂಬ ಭಾವನೆ (We Feeling) :–** ಇದು ಸಮೂಹ ಅಥವಾ ಸಮುದಾಯದೊಂದಿಗಿನ ಬಲವಾದ ಅನನ್ಯತೆಯನ್ನು ಸೂಚಿಸುವುದು. ತಮ್ಮ ಸಮೂಹದ ಇತರರೊಂದಿಗೆ ತಮ್ಮನ್ನು ಗುರುತಿಸಿಕೊಳ್ಳುವ ಮಂದಿಗೆ ಮಾತ್ರ ಇಂತಹ ನಾವು–ನಮ್ಮವರೆಂಬ ಭಾವನೆಗಳನ್ನು ಬೆಳೆಸಿಕೊಳ್ಳಲು ಸಾಧ್ಯ.

**b. ಪಾತ್ರ–ಭಾವನೆ (Role Feeling) :–** ಸಮುದಾಯದ ಪ್ರತಿಯೊಬ್ಬ ಸದಸ್ಯನು ಸಮುದಾಯದ ಕಾರ್ಯಚಟುವಟಿಕೆಗಳಲ್ಲಿ ತನ್ನದೊಂದು ಪಾತ್ರವಿದೆ ಅಥವಾ ಕಾರ್ಯಭಾಗವಿದೆ ಎಂದು ಭಾವಿಸುತ್ತಾನೆ. ಅವನು ಕೇವಲ ತನಗಾಗಿ ಮಾತ್ರವಲ್ಲದೆ ಸಮುದಾಯದ ಇತರರಿಗಾಗಿಯೂ ತನ್ನ ಪಾತ್ರದಲ್ಲಿ ತೊಡಗಿರುತ್ತಾನೆ.

**c. ಅವಲಂಬನೆಯ ಭಾವನೆ (Defendency Feeling) :–** ಸಮುದಾಯದ ಪ್ರತಿಯೊಬ್ಬ ಸದಸ್ಯನು ತಾನು ತನ್ನ ಸಮೂಹವನ್ನು ಅವಲಂಬಿಸಿದ್ದೇನೆ ಎಂಬ ಭಾವನೆ ಹೊಂದಿರುತ್ತಾನೆ. ಈ ಅವಲಂಬನೆಯು ಭೌತಿಕ ಅವಲಂಬನೆ ಹಾಗೂ ಮಾನಸಿಕ ಅವಲಂಬನೆ ಈ ಎರಡು ರೂಪಗಳಲ್ಲಿರುತ್ತದೆ. ಹೀಗೆ ಸಾಮುದಾಯಿಕ ಭಾವನೆಗೆ ಈ ಮೂರು ಅಂಶಗಳು ಬೇಕೆ ಬೇಕು. ಸಾಮುದಾಯಿಕ ಭಾವನೆಯು ಸಮುದಾಯದ ಗಾತ್ರಕ್ಕೆ ಅನುಗುಣವಾಗಿ ಭಿನ್ನವಾಗಿರುತ್ತದೆ. ಸಮುದಾಯದ ಗಾತ್ರಚಿಕ್ಕದಾಗಿದ್ದರೆ, ಅಲ್ಲಿ ಸಾಮುದಾಯಿಕ ಭಾವನೆ ಪ್ರಬಲವಾಗಿರುತ್ತದೆ. ಆದರೆ ಸಮುದಾಯದ ಗಾತ್ರ ದೊಡ್ಡದಾದಂತೆ ಈ ಭಾವನೆ ಕಡಿಮೆಯಾಗುತ್ತಾ ಹೋಗುತ್ತದೆ.

## ಸಮುದಾಯದ ಇತರ ಲಕ್ಷಣಗಳು (Characteristics of community) :

ಸಮುದಾಯದ ಎರಡು ಮುಖ್ಯ ಮೂಲಾಂಶಗಳಲ್ಲದೆ ಸಮುದಾಯದ ವಿಶ್ಲೇಷಣೆಯಲ್ಲಿ ಗುರುತಿಸಬಹುದಾದ ಇತರ ಕೆಲವು ಲಕ್ಷಣಗಳನ್ನು ಇಲ್ಲಿ ಉಲ್ಲೇಖಿಸಲಾಗಿದೆ.

### a. ಸ್ಥಿರತೆ ಅಥವಾ ಸಾಪೇಕ್ಷ ಶಾಶ್ವತತೆ (Stability Or Relative Permanence) :–

ಸಮುದಾಯವು ಒಂದು ನಿರ್ದಿಷ್ಟ ಭೂಪ್ರದೇಶದಲ್ಲಿ ಶಾಶ್ವತವಾಗಿ ಜೀವನ ನಡೆಸುವ ಸಮೂಹವಾಗಿದೆ. ಯಾವಾಗ ಮಾನವನು ಈ ಭೂಮಿಯ ಮೇಲೆ ಒಂದು ಕಡೆ ಶಾಶ್ವತವಾಗಿ ನೆಲೆ ನಿಂತು ಜೀವನ ನಡೆಸಲು ಪ್ರಾರಂಭಿಸಿದನೋ ಅಂದಿನಿಂದ ಸಮುದಾಯಗಳು ಕಂಡು ಬರುತ್ತಿವೆ. ಹೀಗಾಗಿ ಸಮುದಾಯಗಳು ಸ್ಥಿರವಾದವುಗಳು, ಆದರೆ ನೈಸರ್ಗಿಕ ವಿಪತ್ತುಗಳಾದ ಭೂಕಂಪ, ಪ್ರವಾಹ ಮತ್ತು ಬರಗಾಲ ಇತರ ಯಾವುದೇ ಕಾರಣಗಳಿಂದ ಸಮುದಾಯಗಳು ನಶಿಸಬಹುದೇ ಹೊರತು. ಇಲ್ಲದಿದ್ದರೆ ಅವು ಶಾಶ್ವತವಾದವುಗಳು

### b. ಸ್ವಾಭಾವಿಕತೆ (Naturalness) :–

ಸಮುದಾಯಗಳು ಸಾಮಾನ್ಯವಾಗಿ, ನೈಸರ್ಗಿಕವಾಗಿ ಬೆಳೆದು ಬಂದಿವೆ. ಅವು ಯಾವುದೇ ಉದ್ದೇಶ ಪೂರ್ವಕವಾಗಿ ಅಥವಾ ಯಾವುದೇ ಯೋಜನೆಯಿಂದ ಸೃಷ್ಠಿಯಾಗಿರುವುದಿಲ್ಲ. ವ್ಯಕ್ತಿಗಳು ಸಮುದಾಯದ ಸದಸ್ಯರಾಗುವುದು ತಮ್ಮ ಹುಟ್ಟಿನಿಂದ, ಹೀಗಾಗಿ ಜನರು ಯಾವಾಗ ಒಂದು ಕಡೆ ದೀರ್ಘಕಾಲ ಸ್ಥಿರವಾಗಿ ನೆಲೆಸಲು ಪ್ರಾರಂಭಿಸಿದ ನಂತರ ಸಾಮುದಾಯಿಕ ಭಾವನೆ ಬೆಳೆದು ಸಮುದಾಯಗಳು ರಚನೆಯಾದವು. ಆದುದರಿಂದ ಸಮುದಾಯಗಳು ಸ್ವಯಂ ಪ್ರೇರಿತವಾಗಿ, ಕ್ರಮೇಣವಾಗಿ, ವಿಕಾಸವಾಗುತ್ತದೆ.

### c. ಸಮುದಾಯದ ಗಾತ್ರ (Size of the Community) :–

ಸಮುದಾಯವು ನಿರ್ದಿಷ್ಟ ಗಾತ್ರ ಹೊಂದಿರುವುದಿಲ್ಲ. ಅದು ಚಿಕ್ಕದಾಗಿರಬಹುದು. ಅಥವಾ ದೊಡ್ಡದಾಗಿರಬಹುದು. ಗ್ರಾಮವು ಚಿಕ್ಕ ಸಮುದಾಯವಾಗಿರುವಂತೆ, ನಗರವು ಬೃಹತ ಸಮುದಾಯವಾಗಿದೆ. ಗ್ರಾಮ ಮತ್ತು ನಗರಗಳನ್ನು ಒಳಗೊಂಡು ವಿಶಾಲ ಸಮುದಾಯ ಜಿಲ್ಲೆಯಾಗಿರುವುದು. ಆದುದರಿಂದ ಸಮುದಾಯದೊಳಗೆ ಸಮುದಾಯಗಳನ್ನು ಕಾಣುವುದು ಸಾಧ್ಯ, ಅಂದರೆ ರಾಷ್ಟ್ರದಂತಹ ಬೃಹತ್ ಗಾತ್ರದ ಸಮುದಾಯವು ಹಳ್ಳಿ, ಪಟ್ಟಣ, ನಗರ, ಆದಿವಾಸಿಗಳಂತಹ ಹಲವಾರು ಸಮುದಾಯಗಳನ್ನು ಒಳಗೊಂಡಿರುವುದು.

### d. ಸಾಮಾಜಿಕ ನಿಯಂತ್ರಣ (Social Control) :–

ಪ್ರತಿಯೊಂದು ಸಮುದಾಯವು ತನ್ನದೇ ಆದ ಹಲವಾರು ಸಾಮಾಜಿಕ ನಿಯಮಗಳನ್ನು ಬೆಳೆಸಿಕೊಂಡು ತನ್ನ ಸದಸ್ಯರುಗಳ ವರ್ತನೆಯನ್ನು ನಿಯಂತ್ರಿಸುವುದು. ಸಮುದಾಯದ ಗಾತ್ರ ಮತ್ತು ಸ್ವರೂಪಕ್ಕನುಸರಿಸಿ ಅದರ ನಿಯಮಗಳಿರುತ್ತವೆ **ಉದಾಹರಣೆ –** ಗ್ರಾಮೀಣ ಹಾಗೂ ಆದಿವಾಸಿ ಸಮುದಾಯಗಳಲ್ಲಿ ಅನೌಪಚಾರಿಕ ನಿಯಂತ್ರಣ ಸಾಧನಗಳಾದ – ಸಂಪ್ರದಾಯಗಳು, ಲೋಕಾಚಾರಗಳು, ನೈತಿಕ ನಿಯಮಗಳು, ಕ್ರಿಯಾವಿಧಿಗಳು ಮತ್ತು ಧಾರ್ಮಿಕ ನಂಬುಗೆ ಮುಂತಾದವು ಜನರ ವರ್ತನೆಗಳನ್ನು ನಿಯಂತ್ರಿಸುವಲ್ಲಿ ಪ್ರಭಾವಿಯಾಗಿರುತ್ತವೆ. ಆದರೆ ನಗರ ಸಮುದಾಯಗಳಲ್ಲಿ ಔಪಚಾರಿಕ ನಿಯಂತ್ರಣದ ಸಾಧನಗಳಾದ ಕಾನೂನು, ಶಾಸನ, ಪೊಲೀಸ್, ನ್ಯಾಯಾಲಯ ಮುಂತಾದವುಗಳು ಜನರ ವರ್ತನೆಗಳನ್ನು ನಿಯಂತ್ರಿಸುತ್ತವೆ.

**e. ವಿಶಿಷ್ಟ ಹೆಸರು (Specific Name) :–**

ಪ್ರತಿಯೊಂದು ಸಮುದಾಯವು ತನ್ನದೇ ಆದ ಹೆಸರು ಹೊಂದಿರುವುದು. ಅದು ಗ್ರಾಮ, ನಗರ, ಆದಿವಾಸಿ ಸಮುದಾಯವಾಗಿರಲಿ. ತನ್ನದೇ ಆದ ವಿಶೇಷ ಹೆಸರು ಹೊಂದಿರುವುದು ಮತ್ತು ಅದರ ಮೂಲಕವೇ ಗುರುತಿಸಲ್ಪಡುತ್ತದೆ. ತನ್ನ ಹೆಸರಿನ ಆಧಾರದ ಮೂಲಕ ಇತರ ಸಮುದಾಯದಿಂದ ಪ್ರತ್ಯೇಕವಾಗಿ ಕಾಣುವುದು.

## ಸಮುದಾಯದ ಪ್ರಕಾರಗಳು (Types of Community)

ಸಮುದಾಯಗಳನ್ನು ಹಲವು ರೀತಿಗಳಲ್ಲಿ ವರ್ಗೀಕರಿಸಲಾಗಿದೆ. ಹೆಚ್ಚಿನ ಸಮಾಜಶಾಸ್ತ್ರಜ್ಞರು ಜನಸಂಖ್ಯೆಯ ಗಾತ್ರ ಮತ್ತು ಜನಸಾಂದ್ರತೆ, ಸಾಮಾಜಿಕ ಅಂತಕ್ರಿಯೆಯ ಸ್ವರೂಪ, ಸಾಮಾಜಿಕ ಸ್ತರ ವ್ಯವಸ್ಥೆಯ ರೂಪ, ಸಾಮಾಜಿಕ ಚಲನೆಯ ಗತಿ, ಮುಂತಾದ ಹಲವಾರು ಅಂಶಗಳನ್ನು ಆಧಾರವಾಗಿಟ್ಟುಕೊಂಡು ಸಮುದಾಯಗಳನ್ನು ಮೂರು ಪ್ರಕಾರಗಳಾಗಿ ವಿಂಗಡಿಸಿದ್ದಾರೆ. ಅವು ಈ ಮುಂದಿನಂತಿವೆ :

I. **ಆದಿವಾಸಿ ಸಮುದಾಯ (Tribal Community)** :– ಒಂದು ನಿರ್ದಿಷ್ಟ ಸಮೂಹವು ಅಕ್ಷರ ಪೂರ್ವ ಸ್ಥಿತಿಯಲ್ಲಿರುವ ಚಿಕ್ಕ ಸಮುದಾಯವಿದು. ಒಂದು ವಿಶಿಷ್ಟ ಆಡು–ಭಾಷೆಯೊಂದಿಗೆ, ಒಂದು ಜೀವನ ಕ್ರಮವನ್ನು ಹಂಚಿಕೊಂಡು, ಒಂದು ನಿಗದಿತ ಭೂಪ್ರದೇಶದಲ್ಲಿ ವಾಸಿಸುವವರಿಗೆ ಆದಿವಾಸಿ ಸಮುದಾಯ ಎನ್ನುತ್ತೇವೆ. ಉದಾ:– ಭಾರತದ ಅಕ್ಕಿ ಪಕ್ಕಿ, ಕಾಡುಕುರುಬ, ಸಿದ್ದಿ, ನಾಗಾ, ಗ್ಯಾರೋ, ಖಾಸೀ, ಗೊಂಡ, ಸಂತಾಲ, ಮುಂಡ ಸೋಲಿಗರು ಮತ್ತಿತರ ಸಮುದಾಯಗಳು.

II. **ಗ್ರಾಮೀಣ ಸಮುದಾಯ (Rural Community)** : ಹಳ್ಳಿಗಳಲ್ಲಿ ವಾಸಿಸುತ್ತ, ಕೃಷಿ ಮತ್ತು ಅದಕ್ಕೆ ಸಂಬಂಧಿತ ವೃತ್ತಿಗಳನ್ನು ಅವಲಂಬಿಸಿ ಜೀವನ ನಡೆಸುವ ಸಮುದಾಯವಿದು. ಪ್ರಾಥಮಿಕ ಸಂಬಂಧಗಳ ಪ್ರಾಧಾನ್ಯವಿರುವ ಈ ಸಮುದಾಯವು ಹೆಚ್ಚು ಸಮೈಕ್ಯ ಸ್ವರೂಪದ್ದಾಗಿದೆ.

III. **ನಗರ ಸಮುದಾಯ (Urban Community)** :– ಪಟ್ಟಣ ಮತ್ತು ನಗರವಾಸಿಗಳ ಸಮುದಾಯವು ಗಾತ್ರದಲ್ಲಿ ದೊಡ್ಡದಿದ್ದು, ಕೃಷಿಯೇತರ ವೃತ್ತಿಗಳನ್ನು ಅವಲಂಬಿಸಿರುವುವರನ್ನು ಒಳಗೊಂಡಿದೆ. ಮಾಧ್ಯಮಿಕ ಸಂಬಂಧ ಪ್ರಾಧಾನ್ಯವಿರುವ ಇದು ಬಹಳ ವೈವಿಧ್ಯಮಯವಾದುದು.

## 2.4 ಸಂಘ (Association)

ಮಾನವ ಸಂಘ ಜೀವಿ, ಅವನು ಒಂಟಿಯಾಗಿ ಬಾಳಲಾರ, ಮಾನವನು ಹುಟ್ಟಿನಿಂದ ಸಾಯುವವರೆಗೆ ಹಲವಾರು ಆಸಕ್ತಿ ಬಯಕೆಗಳನ್ನು ಹೊಂದಿದ್ದಾನೆ. ವೈಯಕ್ತಿಕವಾಗಿ ಅವುಗಳನ್ನು ಈಡೇರಿಸಿಕೊಳ್ಳಲಾರನು. ಆದ್ದರಿಂದ ಸಮಾನ ಆಸಕ್ತಿ ಹೊಂದಿರುವ ಹಲವು ಜನರು ಒಂದುಗೂಡಿ ಸಂಘಗಳನ್ನು ರಚಿಸಿಕೊಳ್ಳುವುದರ ಮೂಲಕ ತಮ್ಮ ಆಸಕ್ತಿಗಳನ್ನು ಪೂರೈಸಿಕೊಳ್ಳುತ್ತಾರೆ. ಯಾವಾಗ ಒಂದು ಅಥವಾ ಕೆಲವು ಆಸಕ್ತಿಗಳ ಈಡೇರಿಕೆಗಾಗಿ ಒಂದು ಜನಸಮೂಹ ಒಟ್ಟಿಗೆ ಸಹಕಾರದಿಂದ ದುಡಿಯಲು ಸಿದ್ಧವಾದಾಗಲೇ ಸಂಘ ಅಸ್ತಿತ್ವಕ್ಕೆ ಬರುವುದು.

ಇಂದು ನಾವು ವಾಸಿಸುತ್ತಿರುವುದು ಸಂಘಗಳ ಮತ್ತು ಸಂಘಟನೆಗಳ ಯುಗದಲ್ಲಿ. ಆಧುನಿಕ ಮಾನವ ಹಲವಾರು ಗುರಿ, ಆಸಕ್ತಿಗಳನ್ನು ಹೊಂದಿರುವನು, ಈ ಆಸಕ್ತಿಗಳು ದಿನದಿಂದ ದಿನಕ್ಕೆ ಹೆಚ್ಚುತ್ತಲಿವೆ.

ಅವುಗಳ ಪೂರೈಕೆಗೆ ಸಂಘಗಳ ಮೊರೆ ಹೋಗಬೇಕಾಗಿದೆ. ಮಾನವನ ಹುಟ್ಟು, ಬೆಳವಣಿಗೆ ಹಾಗೂ ಸಕಲಕಾರ್ಯ ಚಟುವಟಿಕೆಗಳು ಸಂಘದಲ್ಲಿಯೇ ಜರುಗುತ್ತವೆ. ಇಂದು ಸಮಾಜದಲ್ಲಿ ವಿವಿಧ ರೂಪದ, ವಿವಿಧ ಹೆಸರುಗಳುಳ್ಳ ಸಂಘಗಳು ಹುಟ್ಟಿಕೊಂಡಿವೆ. ಒಬ್ಬ ವ್ಯಕ್ತಿ ಏಕ ಕಾಲದಲ್ಲಿ ಹಲವಾರು ಸಂಘಗಳ ಸದಸ್ಯನಾಗಬಹುದು.

### 2.3.1 ಅರ್ಥ ಮತ್ತು ವ್ಯಾಖ್ಯೆಗಳು (Meaning and Definitions):

ದಿನನಿತ್ಯದ ಜೀವನದಲ್ಲಿ ಸಂಘ ಮತ್ತು ಸಂಸ್ಥೆ ಎಂಬ ಅವಳಿ ಪದಗಳನ್ನು ಒಂದರ ಬದಲಿಗೆ ಇನ್ನೊಂದನ್ನು ಉಪಯೋಗಿಸಲಾಗುತ್ತದೆ. ಕೆಲವರು ಇವೆರೆಡನ್ನು ಸಮಾನ ಅರ್ಥದಲ್ಲಿ ಉಪಯೋಗಿಸುತ್ತಾರೆ. ಆದರೆ ಸಮಾಜಶಾಸ್ತ್ರದಲ್ಲಿ ಇವೆರೆಡಕ್ಕೂ ಬೇರೆ ಬೇರೆ ಅರ್ಥದಲ್ಲಿ ನಿರ್ಧಿಷ್ಟವಾಗಿ ಉಪಯೋಗಿಸಲಾಗುತ್ತಿದೆ.

1 **ಮೆಕೈವರ್ ಮತ್ತು ಪೇಜ್:** "ಯಾವುದೊಂದು ಸಾಮಾನ್ಯ ಬೇಡಿಕೆಯನ್ನು ಇಲ್ಲವೇ ಅಂತಹ ಸರಣಿ ಬೇಡಿಕೆಗಳನ್ನು ಈಡೇರಿಸಿಕೊಳ್ಳುವುದರ ಸಲುವಾಗಿ ಸಂಘಟಿತವಾದ ಜನ ಸಮೂಹವೇ ಸಂಘ" ಎಂದಿದ್ದಾರೆ.

2 **ಇ.ಎಸ್. ಬೋಗಾರ್ಡಸ್:** "ನಿರ್ಧಿಷ್ಟ ಉದ್ದೇಶಗಳನ್ನು ಈಡೇರಿಸಿಕೊಳ್ಳಲು ಜನರೆಲ್ಲ ಒಟ್ಟುಗೂಡಿ ಕೆಲಸ ಮಾಡುವುದೇ ಸಂಘ" ಎಂದಿದ್ದಾರೆ.

3 **ವಿಲಿಯಂ ಪಿ. ಸ್ಕಾಟ್** : " ಸಂಘವೆಂಬುದು ಒಂದು ವಿಶಿಷ್ಟವಾದ ಹಾಗೂ ನಿರ್ಧಿಷ್ಟವಾಗಿ ಪ್ರಕಟಿತವಾದ ಉದ್ದೇಶ ಸಾಧನೆಗಾಗಿ ಸಂಘಟಿತವಾದ ಔಪಚಾರಿಕ" ಸಮೂಹವಾಗಿದೆ.

**ಉದಾಹರಣೆಗಳು :–** ಕುಟುಂಬ ಶಾಲೆ, ಕಾಲೇಜು, ರಾಜಕೀಯ ಪಕ್ಷಗಳು, ಕಾರ್ಮಿಕ ಸಂಘಗಳು, ವಿದ್ಯಾರ್ಥಿ ಸಂಘಗಳು, ರೋಟರಿ ಕ್ಲಬ್, ಲಯನ್ಸ್ ಕ್ಲಬ್, ಧಾರ್ಮಿಕ ಸಂಘಗಳು ಮುಂತಾದವು.

### ಲಕ್ಷಣಗಳು (Characteristics):

**a. ಸಂಘ ಒಂದು ಮಾನವ ಸಮೂಹ (Assocation - A Human Group) :–**

ಸಂಘವು ಜನರಿಂದ ನಿರ್ಮಾಣವಾಗಿದೆ. ಅದು ಮೂಲಭೂತವಾಗಿ ಒಂದು ಮಾನವ ಸಮೂಹ. ಜನರ ಹೊರತಾಗಿ ಸಂಘವಿರಲು ಸಾಧ್ಯವಿಲ್ಲ. ಸಂಘವು ಒಂದು ಸುಸಂಘಟಿತವಾದ ಸಮೂಹ ಆದ್ದರಿಂದ ಒಂದು ಜನಜಂಗುಳಿ, ಶ್ರೋತೃ ಸಮೂಹ ಮುಂತಾದ ಅಸಂಘಟಿತ ಸಮೂಹಗಳು ಸಂಘವಾಗಲು ಸಾಧ್ಯವಿಲ್ಲ.

**b. ನಿರ್ಧಿಷ್ಟ ಆಸಕ್ತಿ ಇಲ್ಲವೇ ಆಸಕ್ತಿಗಳು (Specific Interest or Interests) :**

ಸಂಘವು ಕೇವಲ ಜನಸಮುಚ್ಚಯ ಮಾತ್ರವಲ್ಲ, ಆದರೆ ಅದು ಹೆಚ್ಚು ಕಡಿಮೆ ಸಮಾನ ಆಸಕ್ತಿಗಳ ಈಡೇರಿಕೆಗಾಗಿ ಸುಸಂಘಟಿತವಾದ ಸಮೂಹ. ಉದಾ:– ರಾಜಕೀಯ ಆಸಕ್ತಿ ಹೊಂದಿರುವವರು, ರಾಜಕೀಯ ಪಕ್ಷಗಳಿಗೆ ಸೇರಿಕೊಂಡರೆ, ಸಾಂಸ್ಕೃತಿಕ ಆಸಕ್ತಿ ಹೊಂದಿರುವವರು ಸಾಂಸ್ಕೃತಿಕ ಸಂಘಗಳಿಗೆ ಸೇರಿಕೊಳ್ಳುವರು. ಕ್ರೀಡೆಯಲ್ಲಿ ಆಸಕ್ತಿ ಹೊಂದಿರುವವರು ಕ್ರೀಡಾ ಸಂಘಗಳಿಗೆ ಸೇರಿಕೊಳ್ಳುತ್ತಾರೆ. ಇತ್ಯಾದಿ.

### c. ಸಹಕಾರದ ಮನೋಭಾವ (Co-Operative Spirit) :–

ಸಂಘವು ಸಹಕಾರದ ತತ್ವದ ಮೇಲೆ ನಿಂತಿದೆ. ಜನರು ತಮ್ಮ ಬೇಡಿಕೆಗಳು ಅಥವಾ ಉದ್ದೇಶಗಳ ಈಡೇರಿಕೆಗಾಗಿ ಪರಸ್ಪರ ಸಹಕಾರ ಸಹಾಯಗಳಲ್ಲಿ ತೊಡಗುವುದು ಅನಿವಾರ್ಯವಾಗಿದೆ. ಜನರು ವೈಯಕ್ತಿಕವಾಗಿ ತಮ್ಮ ಬೇಡಿಕೆ ಈಡೇರಿಸಿಕೊಳ್ಳಲಾಗದು ಎಂಬ ತಿಳುವಳಿಕೆಯಿಂದ ಸಹಕಾರದಿಂದ ಸಂಘದ ಮೂಲಕ ಪೂರೈಸಿಕೊಳ್ಳುವರು. **ಉದಾ:–** ಕಾರ್ಮಿಕರು ಸಹಕಾರದಿಂದ ಕೆಲಸ ಮಾಡುವುದರಿಂದ ತಮ್ಮ ಉದ್ದೇಶಗಳು ಈಡೇರಿಕೆಯಾಗಿ ಉತ್ತಮ ಸ್ಥಾನಮಾನ ಪಡೆಯಬಹುದು.

### d. ಸಂಘಟಿತ ಸಮೂಹ. (Organised Group) :–

ಸಂಘವು ಕೇವಲ ಜನರಿಂದ ಕೂಡಿದ ವ್ಯವಸ್ಥೆಯಲ್ಲ. ಅದು ಒಂದು ವಿಶೇಷ ಗುರಿಗಳನ್ನು ಈಡೇರಿಸಲು ಸಂಘಟನೆಗೊಂಡ ಸಮೂಹವಾಗಿದೆ. ಸಂಘಟನೆಯು ಸಂಘಕ್ಕೊಂದು ರೂಪವನ್ನು, ವ್ಯವಸ್ಥೆಯನ್ನು, ಭದ್ರತೆಯನ್ನು ನೀಡುತ್ತದೆ. ಸಂಘಟನೆಯು ಸಂಘವೊಂದರಲ್ಲಿ ವಿವಿಧ ಅಂತಸ್ತುಗಳು ಮತ್ತು ಪಾತ್ರಗಳು ವಿವಿಧ ಸದಸ್ಯರಲ್ಲಿ ಹೇಗೆ ಹಂಚಲ್ಪಟ್ಟಿವೆ ಎಂಬ ಅಂಶವನ್ನು ಸ್ಪಷ್ಟಪಡಿಸುವುದು. ಈ ಎಲ್ಲ ಸದಸ್ಯರುಗಳು ತಮ್ಮ ತಮ್ಮ ಅಂತಸ್ತುಗಳಿಗೆ ಸಂಬಂಧಿಸಿದ ಪಾತ್ರಗಳಲ್ಲಿ ಕಾರ್ಯನಿರ್ವಹಿಸುವರು.

### e. ಸಾಮಾಜಿಕ ನಿಯಂತ್ರಣ (Social control) :–

ಪ್ರತಿಯೊಂದು ಸಂಘವು ತನ್ನ ಸದಸ್ಯರ ವರ್ತನೆಯನ್ನು ನಿಯಂತ್ರಿಸಲು ತನ್ನದೇ ಆದ ನಿಯಮಗಳನ್ನು ಹೊಂದಿರುವುದು. ಈ ಮೂಲಭೂತ ನಿಯಮಗಳ ಮೇಲೆ ಅವಲಂಬನೆ ಹೊಂದಿದೆ. ಸಂಘವು ತನ್ನ ಸದಸ್ಯರ ವರ್ತನೆಯನ್ನು ನಿಯಂತ್ರಿಸಲು ನಿಯಮಗಳನ್ನು ಲಿಖಿತ ಅಥವಾ ಅಲಿಖಿತ ರೂಪದಲ್ಲಿ ಹೊಂದಿರಬಹುದು **ಉದಾಹರಣೆಗೆ :** ಕುಟುಂಬವೆಂಬ ಸಂಘವು 'ವಿವಾಹ'ವೆಂಬ ಸಂಸ್ಥೆಯ ಮೂಲಕ ಸದಸ್ಯರ ಲೈಂಗಿಕ ವರ್ತನೆಯ ಮೇಲೆ ನಿಯಂತ್ರಣ ಸಾಧಿಸುವುದು. ಹಾಗೆಯೇ ವೃತ್ತಿ ಸಂಘಟನೆಗಳು ತಮ್ಮದೇ ಆದ ಔಪಚಾರಿಕ ನಿಯಮಗಳನ್ನು ಹೊಂದಿ ತಮ್ಮ ಸದಸ್ಯರನ್ನು ನಿಯಂತ್ರಿಸುತ್ತವೆ.

### f ಸ್ಥಿರತೆ (Stability) :–

ಸಂಘವು ಶಾಶ್ವತ ಸ್ವರೂಪದ ಅಥವಾ ತಾತ್ಕಾಲಿಕ ಸ್ವರೂಪದ್ದಾಗಿರಬಹುದು. ಕೆಲವು ರಾಜಕೀಯ ಪಕ್ಷಗಳು, ಕಾರ್ಮಿಕ ಸಂಘಗಳು ಹಲವಾರು ದಶಕಗಳ ಇತಿಹಾಸವನ್ನು ಹೊಂದಿವೆ. ಆದರೆ ಕೆಲವು ಸಂಘಗಳು ಬಹಳ ತಾತ್ಕಾಲಿಕವಾದುದವು. **ಉದಾ:** ಬರಹಗಾರರನ್ನು ಇಲ್ಲವೇ ವಿಜ್ಞಾನಿಗಳನ್ನು ಸನ್ಮಾನಿಸಲು ಸ್ಥಾಪಿಸಬಹುದಾದ ಸಂಘಗಳು ಸನ್ಮಾನ ಸಮಾರಂಭದೊಂದಿಗೆ ವಿಸರ್ಜನೆ ಹೊಂದಬಹುದು.

## 2.5 ಸಂಸ್ಥೆ (Institution):

'ಸಂಸ್ಥೆ' ಎಂಬ ಪರಿಕಲ್ಪನೆಯು ಸಮಾಜಶಾಸ್ತ್ರದ ಸಾಹಿತ್ಯದಲ್ಲಿ ಅತ್ಯಂತ ಮಹತ್ವವುಳ್ಳದು, ಇದು ಸಮಾಜವನ್ನು ಅರ್ಥೈಸಿಕೊಳ್ಳಲು ಆಧಾರವಾಗಿದೆ. ಆದುದರಿಂದ ಫ್ರೆಂಚ್ ಸಮಾಜಶಾಸ್ತ್ರಜ್ಞ ಎಮಿಲಿ ಡರ್ಖಿಮ್‌ರವರು ಸಮಾಜಶಾಸ್ತ್ರವನ್ನು "ಸಾಮಾಜಿಕ ಸಂಸ್ಥೆಗಳ ಅಧ್ಯಯನಶಾಸ್ತ್ರ ಎಂದು ಕರೆದಿದ್ದಾರೆ. ಪ್ರೊ. ಎಫ್.ಎಚ್. ಗಿಡ್ಡಿಂಗ್ಸ್‌ರವರು "ಮಾನವ ಜನಾಂಗದ ಗತಕಾಲದ ಜೀವನದಲ್ಲಿ ಉತ್ತಮವಾದುದೆಲ್ಲವನ್ನು ಸಂಗ್ರಹಿಸಿ ಸಂರಕ್ಷಣೆ ಮಾಡುವ ಸಾಧನಗಳೆಂದರೆ ಸಂಸ್ಥೆಗಳು" ಎಂದಿದ್ದಾರೆ.

ಸಮಾಜವು ಹಲವಾರು ವೈವಿಧ್ಯಮಯವಾದ ಸಂಸ್ಥೆಗಳನ್ನು ಹೊಂದಿರುವುದು. ಆ ಎಲ್ಲ ಸಂಸ್ಥೆಗಳು ಒಂದಕ್ಕೊಂದು ಪರಸ್ಪರ ಸಂಬಂಧ ಮತ್ತು ಅಂತರ ಅವಲಂಬನೆ ಹೊಂದಿವೆ. ಯಾವುದೇ ಸಮಾಜವಾದರೂ ಬದುಕುಳಿಯಬೇಕಾದರೆ ಹಾಗೂ ತನ್ನ ಸದಸ್ಯರುಗಳಿಗೆ ತೃಪ್ತಿದಾಯಕ ಜೀವನವನ್ನು ನೀಡಬೇಕಾದರೆ ಅದು ತನ್ನ ಮೂಲಭೂತ ಅಗತ್ಯತೆಗಳನ್ನು ಪೂರೈಸಿಕೊಡುವುದು ಅನಿವಾರ್ಯ. ಇಂತಹ ಮೂಲಭೂತ ಅಗತ್ಯತೆಗಳನ್ನು ಈಡೇರಿಸಲು ಪ್ರತಿಯೊಂದು ಸಮಾಜವು ಸೃಷ್ಟಿಸಿಕೊಳ್ಳುವ "ಒಂದು ವಿಶಿಷ್ಟ ಕಾರ್ಯವಿಧಾನದ ವ್ಯವಸ್ಥೆಯೇ ಸಂಸ್ಥೆ".

## ಅರ್ಥ ಮತ್ತು ವ್ಯಾಖ್ಯೆಗಳು (Meaning and Definitions)

ಸಾಮಾನ್ಯವಾಗಿ ಜನರು ಸಂಘ ಮತ್ತು ಸಂಸ್ಥೆ ಎಂಬ ಪದಗಳನ್ನು ಒಂದೇ ಅರ್ಥದಲ್ಲಿ ಬಳಸುವರು. ಆದರೆ ಸಮಾಜಶಾಸ್ತ್ರದಲ್ಲಿ ಈ ಎರಡು ಪದಗಳ ನಡುವೆ ನಿರ್ದಿಷ್ಟವಾದ ವ್ಯತ್ಯಾಸವಿದೆ. ಸಾಮಾನ್ಯವಾಗಿ ಸಂಘವು ಸದಸ್ಯರುಗಳನ್ನು ಸೂಚಿಸಿದರೆ ಸಂಸ್ಥೆಯು ಅದರ ಕಾರ್ಯಾಚರಣೆ ಮತ್ತು ಕಾರ್ಯವಿಧಾನಗಳನ್ನು ಸೂಚಿಸುತ್ತದೆ.

1. **ಕಿಂಗ್ಸ್‌ಲೇ ಡೇವಿಸ್:** "ಕಾರ್ಯವೊಂದರ ಸುತ್ತ ರಚಿಸಲ್ಪಟ್ಟ ಹಾಗೂ ಪರಸ್ಪರ ಪೂರಕವಾದ ಲೋಕಾಚಾರ, ನೈತಿಕ ನಿಯಮ ಮತ್ತು ಕಾನೂನುಗಳ ಒಟ್ಟು ಸಮುಚ್ಚಯವೇ ಸಂಸ್ಥೆ. " ಎಂದಿದ್ದಾರೆ.

2. **ಮೆಕೈವರ ಮತ್ತು ಪೇಜ್:–** ಸಂಸ್ಥೆಗಳೆಂದರೆ, "ಸಾಮೂಹಿಕ ಚಟುವಟಿಕೆಗೆ ವಿಶಿಷ್ಟವಾದ ಸ್ಥಾಪಿತ ಕಾರ್ಯವಿಧಾನದ ರೂಪಗಳು ಅಥವಾ ನಿಯಮಗಳು" ಎಂದಿದ್ದಾರೆ.

3. **ಪಿ.ಬಿ.ಹಾರ್ಟನ್ ಮತ್ತು ಸಿ.ಎಲ್.ಹಂಟ್ :–** ಸಾಮಾಜಿಕ ಸಂಸ್ಥೆ ಎಂಬುದು "ಲೋಕಾಚಾರಗಳು ಮತ್ತು ನೈತಿಕ ನಿಯಮಗಳ ಸಂಘಟಿತ ಸಮಷ್ಠಿಯಾಗಿದ್ದು, ಬಹುಮುಖ್ಯವಾದ ಮಾನವ ಚಟುವಟಿಕೆಯೊಂದರ ಸುತ್ತ ಕೇಂದ್ರಿಕೃತವಾಗಿರುತ್ತದೆ. " ಎಂದು ಅರ್ಥೈಸಿದ್ದಾರೆ.

   **ಉದಾಹರಣೆಗಳು:** ವಿವಾಹ, ಶಿಕ್ಷಣ, ಧರ್ಮ, ರಕ್ತ ಸಂಬಂಧ, ಕಾರ್ಖಾನೆ, ಶಾಲೆ, ಕಾಲೇಜು, ಕುಟುಂಬ ಇತ್ಯಾದಿ.

## ಲಕ್ಷಣಗಳು (Characteristics) :–

### a. ಸಾರ್ವತ್ರಿಕವಾದವು (Universal) :–

ಸಾಮಾಜಿಕ ಸಂಸ್ಥೆಗಳು ಸಾರ್ವತ್ರಿಕ ಸ್ವರೂಪದವು. ಅವುಗಳನ್ನು ಜಗತ್ತಿನ ಎಲ್ಲ ಸಮಾಜಗಳಲ್ಲಿಯೂ ಮತ್ತು ಸಮಾಜದ ಐತಿಹಾಸಿಕ ಬೆಳವಣಿಗೆಯ ಎಲ್ಲ ಹಂತಗಳಲ್ಲೂ ಕಾಣಬಹುದಾಗಿದೆ. ಸಂಸ್ಥೆಗಳು ಇಲ್ಲದ ಸಮಾಜವನ್ನು ಎಲ್ಲೂ ಕಾಣಲು ಸಾಧ್ಯವಿಲ್ಲ, ಪ್ರಾಥಮಿಕ ಸ್ವರೂಪದ ಸಂಸ್ಥೆಗಳಾದ ವಿವಾಹ, ಕುಟುಂಬ, ಆಸ್ತಿ, ಚರ್ಚ್ ಹಾಗೂ ರಾಜಕೀಯ ವ್ಯವಸ್ಥೆ ಇವು ತೀರಾ ಆದಿವಾಸಿ ಹಂತದಲ್ಲಿರುವ ಸಮುದಾಯಗಳಲ್ಲಿಯೂ ಕಾಣಬರುತ್ತವೆ.

### b. ಪ್ರಮಾಣೀಕೃತ ನಿಯಮಗಳು (Standardised Norms) :

ಸಾಮಾಜಿಕ ಸಂಸ್ಥೆಗಳು ಎಲ್ಲರೂ ತಿಳಿಯಲ್ಪಟ್ಟ, ಗುರುತಿಸಲ್ಪಟ್ಟ ಹಾಗೂ ಸಮಾಜದ ಪ್ರಮಾಣೀಕೃತ

ನಿಯಮಗಳಾಗಿವೆ. ಅವು ಜನರ ಕಾರ್ಯ ವಿಧಾನದ ಬಗೆಯನ್ನು ತಿಳಿಸುತ್ತವೆ. ಜೊತೆಗೆ ಜನರು ಅನುಸರಿಸಬೇಕಾದ ನೀತಿ ನಿಯಮಗಳನ್ನು ಸೂಚಿಸುತ್ತವೆ. **ಉದಾಹರಣೆ:** ವಿವಾಹ ಸಂಸ್ಥೆಯು ಪತಿ–ಪತ್ನಿಯರ ನಡುವಿನ ಸಂಬಧವನ್ನು ನಿಯಂತ್ರಿಸುತ್ತದೆ. ಅದೇ ರೀತಿ ಶಾಲೆ ಮತ್ತು ಕಾಲೇಜಿನಂತಹ ಸಂಸ್ಥೆಯು ಕೂಡ ಜನಮಾನ್ಯತೆ ಪಡೆದ ಅಥವಾ ಪ್ರಮಾಣೀಕೃತ ನಿಯಮ ಮತ್ತು ವಿಧಾನಗಳನ್ನು ಹೊಂದಿರುತ್ತದೆ.

### c. ನಿಯಂತ್ರಣದ ಸಾಧನವಾಗಿ ಸಂಸ್ಥೆಗಳು (Institutions are Controlling Mechanisms) :–

ಧರ್ಮ, ಶಿಕ್ಷಣ, ನೈತಿಕತೆ, ಸರ್ಕಾರ, ಶಾಸನ ಮುಂತಾದ ಸಂಸ್ಥೆಗಳು ಜನರ ವರ್ತನೆಯನ್ನು ಹಲವು ರೀತಿಯಲ್ಲಿ ನಿಯಂತ್ರಿಸುತ್ತವೆ. ಸಂಸ್ಥೆಗಳು ಸಮಾಜಕ್ಕೆ ಭದ್ರತೆಯನ್ನು ನೀಡುತ್ತವೆ. ಸಮಾಜವು ಸುಗಮ, ಸಾಮಾಜಿಕ ಜೀವನದ ನಿರ್ವಹಣೆಗಾಗಿ ಸಂಸ್ಥೆಗಳ ವ್ಯೂಹವನ್ನು ನಿರ್ಮಿಸಿಕೊಂಡಿರುತ್ತದೆ.

### d. ಹೆಚ್ಚು ಶಾಶ್ವತವಾದುವು. (Institutions are relatively permanent) :

ಸಂಸ್ಥೆಗಳು ಸಾಮಾನ್ಯವಾಗಿ ತ್ವರತವಾಗಿ ಬದಲಾವಣೆ ಹೊಂದುವುದಿಲ್ಲ, ಅವು ಬಹಳ ಮಂದಗತಿಯಿಂದ ಬದಲಾವಣೆ ಹೊಂದುವವು. ಕೆಲವು ಸಾಮಾಜಿಕ ಸಂಸ್ಥೆಗಳು ಅತಿ ನಿಷ್ಠೆಯ ಮತ್ತು ಬಾಳಿಕೆ ಬರುವಂತಹ ಸ್ವರೂಪವನ್ನು ಹೊಂದಿವೆ. ಕಾಲಾನುಕ್ರಮದಲ್ಲಿ ಅವು ಸಮಾಜದ ಪ್ರತಿಗಾಮಿ ಶಕ್ತಿಯಾಗಿಯೂ ರೂಪ ತಳೆಯಬಹುದು, **ಉದಾಹರಣೆಗೆ :** ಜಾತಿ ಮತ್ತು ಧರ್ಮ ಇವುಗಳನ್ನು ಅಂತಹ ಪ್ರತಿಗಾಮಿ ಶಕ್ತಿಗಳೆಂದು ಆಗಾಗ್ಗೆ ಟೀಕಿಸುವುದಿದೆ. ಆದಾಗ್ಯೂ ಪರಿಸ್ಥಿತಿಯ ಒತ್ತಡಕ್ಕನುಗುಣವಾಗಿ ಅವು ಪರಿವರ್ತನೆಯನ್ನು ಹೊಂದುತ್ತಿವೆ.

### e. ಅಮೂರ್ತ ಸ್ವರೂಪವುಳ್ಳವು (Abstract in Nature) :–

ಸಂಸ್ಥೆಗಳು ಸ್ಪರ್ಶಸಾಧ್ಯವಾದ ಅಥವಾ ದೃಷ್ಟಿ ಗೋಚರವಾಗುವ ವಸ್ತುಗಳಲ್ಲ, ಕಾರಣವೇನೆಂದರೆ ಅವು ಅಮೂರ್ತ ಸ್ವರೂಪದವು. ಅದಕ್ಕಾಗಿಯೇ ವಿವಾಹವನ್ನು ವಸ್ತು ಸಂಗ್ರಹಾಲಯದಲ್ಲಿಡಲಾಗದು. ಮತಧರ್ಮವನ್ನು ಅಳೆಯಲಾಗದು. ಪ್ರಮಾಣೀಕರಿಸಲಾಗದು, ಯುದ್ಧವನ್ನು ತೂಕ ಹಾಕಲಾಗದು, ಕಾನೂನು ಅಥವಾ ಶಾಸನಗಳನ್ನು ಪ್ರಯೋಗಾಲಯದಲ್ಲಿ ಪರೀಕ್ಷೆಗಳಿಗೆ ಒಳಪಡಿಸಲಾಗದು. ಆದರೆ ಅವುಗಳನ್ನು ನಮ್ಮ ಮೌಲ್ಯಗಳು ಹಾಗೂ ತತ್ವಾದರ್ಶಗಳ ಹಿನ್ನಲೆಯಲ್ಲಿ ತುಲನೆ ಮಾಡಿ ನೋಡಬಹುದು.

### f. ಅಲಿಖಿತ ಮತ್ತು ಲಿಖಿತ ರೂಪದ ಸಂಪ್ರದಾಯಗಳು (Oral and Written Traditions) :–

ಸಂಸ್ಥೆಗಳು ಅಲಿಖಿತ ಅಥವಾ ಲಿಖಿತ ಸಂಪ್ರದಾಯದ ರೂಪದಲ್ಲಿ ಅಸ್ತಿತ್ವದಲ್ಲಿರಬಹುದು. ಸರಳ ಮತ್ತು ಅಕ್ಷರ ಪೂರ್ವ ಸಮಾಜಗಳಲ್ಲಿ ಸಂಸ್ಥೆಗಳು ಬಹಳ ಮಟ್ಟಿಗೆ ಅಲಿಖಿತ ರೂಪದ ಸಂಪ್ರದಾಯ, ನೈತಿಕ ನಿಯಮ ಮುಂತಾದವುಗಳನ್ನು ಕಾಣುತ್ತೇವೆ. ಆದರೆ ಆಧುನಿಕ ನಾಗರಿಕ ಸಮಾಜಗಳಲ್ಲಿ ಅಲಿಖಿತ ಮತ್ತು ಲಿಖಿತ ರೂಪದ ಸಂಸ್ಥೆಗಳಾದ ಕಾನೂನು, ಸಂವಿಧಾನ, ಧಾರ್ಮಿಕ ಗ್ರಂಥಗಳು, ಸರ್ಕಾರಿ ಆಜ್ಞೆಗಳು, ವ್ಯಾಪಾರಿ ಒಪ್ಪಂದ ರಾಜಕೀಯ, ಶೈಕ್ಷಣಿಕ, ಮತ್ತು ಆರ್ಥಿಕ ಮುಂತಾದ ಸಂಸ್ಥೆಗಳನ್ನು ಕಾಣುತ್ತೇವೆ.

### g. ಸಾಂಕೇತಿಕ ಲಕ್ಷಣಗಳು (Symbolic Traits) :

ಪ್ರತಿಯೊಂದು ಸಾಮಾಜಿಕ ಸಂಸ್ಥೆಗಳು ತಮ್ಮದೇ ಆದ ಭೌತಿಕ ಹಾಗೂ ಅಭೌತಿಕ ಸ್ವರೂಪದ ನಿರ್ಧಿಷ್ಟ ಸಾಂಕೇತಿಕ ಲಕ್ಷಣಗಳನ್ನು ಹೊಂದಿರುತ್ತವೆ. ಉದಾ: ರಾಷ್ಟ್ರಧ್ವಜ, ರಾಷ್ಟ್ರಮುದ್ರೆ, ರಾಷ್ಟ್ರಗೀತೆ, ಮುಂತಾದವು

ರಾಷ್ಟ್ರದ ಸಂಕೇತಗಳಾಗಿವೆ. ಹಾಗೆಯೇ ಮೂರ್ತಿ, ಸ್ವಸ್ತಿಕ್, ಶಿಲುಬೆ, ಅರ್ಧ ಚಂದ್ರಾಕೃತಿ ಮುಂತಾದವು ಧಾರ್ಮಿಕ ಸಂಸ್ಥೆಯ ಲಕ್ಷಣಗಳಾದರೆ ವಿವಾಹ ಸಂಸ್ಥೆಯು, ಮಂಗಳಸೂತ್ರ, ಉಂಗುರ ಸಂಕೇತಗಳನ್ನು ಹೊಂದಿದೆ. ಇಂತಹ ಸಾಂಕೇತಿಕ ಅಂಶಗಳನ್ನು ಇಂದಿನ ಆಧುನಿಕ ಸಮಾಜದಲ್ಲಿ ಹೆಚ್ಚಿನ ಎಲ್ಲಾ ಸ್ಥಾಪಿತ ಸ್ವರೂಪದ ಸಂಸ್ಥೆಗಳಲ್ಲೂ ಕಾಣಬಹುದು.

**h. ಪರಸ್ಪರ ಸಂಬಂಧಿಸಿದವುಗಳಾಗಿವೆ. (Interrelated) :–**

ಸಂಸ್ಥೆಗಳು ಹಲವು ಪ್ರಕಾರಗಳಲ್ಲಿರಬಹುದಾದರೂ ಅವು ಪರಸ್ಪರ ಸಂಬಂಧವನ್ನು ಹೊಂದಿರುತ್ತವೆ. **ಉದಾ:–** ಧರ್ಮ, ರಾಜಕೀಯ, ಕಾನೂನು ಆರ್ಥಿಕ ಶಿಕ್ಷಣ ಮುಂತಾದವುಗಳು ಪರಸ್ಪರ ಸಂಬಂಧ ಹೊಂದಿವೆ, ಈ ಸಂಸ್ಥೆಗಳು ಪರಸ್ಪರಾವಲಂಬನದಿಂದಾಗಿ ಒಂದು ಸಂಸ್ಥೆಯಲ್ಲಾಗುವ ಪರಿವರ್ತನೆಗಳು ಇನ್ನಿತರ ಸಂಸ್ಥೆಗಳ ಮೇಲೂ ತಮ್ಮ ಪರಿಣಾಮಗಳನ್ನು ಬೀರುತ್ತವೆ.

## ಸಂಸ್ಥೆಯ ವಿಧಗಳು (Types of Institutions) :–

### A. ಪ್ರಾಥಮಿಕ ಮತ್ತು ಮಾಧ್ಯಮಿಕ ಸಂಸ್ಥೆಗಳು (Primary and Secondary Institutions):

ಸಂಸ್ಥೆಗಳನ್ನು ಅವು ಹುಟ್ಟಿಕೊಂಡ ರೀತಿ ಹಾಗೂ ಅವುಗಳ ಕಾರ್ಯನಿರ್ವಹಣೆಯ ಆಧಾರದ ಮೇಲೆ ಪ್ರಾಥಮಿಕ ಮತ್ತು ಮಾಧ್ಯಮಿಕ ಸಂಸ್ಥೆಗಳು ಎಂದು ಎರಡು ಪ್ರಕಾರಗಳಾಗಿ ವಿಂಗಡಿಸಲಾಗಿದೆ.

**ಪ್ರಾಥಮಿಕ ಸಂಸ್ಥೆಗಳು (Primary Institutions) :**

ಕೆಲವು ಸಂಸ್ಥೆಗಳು ಮಾನವನ ಸಾಮೂಹಿಕ ಜೀವನಕ್ಕೆ ಹಾಗೂ ಆತನ ಪ್ರಾಥಮಿಕ ಅಗತ್ಯಗಳ ಈಡೇರಿಕೆಗೆ ತೀರಾ ಅತ್ಯಗತ್ಯವಾಗಿದ್ದು, ಸಾರ್ವತ್ರಿಕವಾಗಿ ಕಾಣಬರುತ್ತವೆ. ಇವುಗಳನ್ನು "ಪ್ರಾಥಮಿಕ ಸಂಸ್ಥೆಗಳು" ಎಂದು ಕರೆಯಬಹುದು. ಆದಿವಾಸಿ ಸಮುದಾಯಗಳಲ್ಲಿಯೂ ಕೂಡ ಇವು ಕಂಡು ಬರುತ್ತವೆ. **ಉದಾಹರಣೆ:** ಧರ್ಮ, ನೀತಿಪದ್ಧತಿ, ವಿವಾಹ, ಕುಟುಂಬ, ಆಸ್ತಿ, ಇತ್ಯಾದಿ.

**ಮಾಧ್ಯಮಿಕ ಸಂಸ್ಥೆಗಳು (Secondary Institutions) :**

ಮಾನವನ ಮಾಧ್ಯಮಿಕ ಅಗತ್ಯಗಳ ಪೂರೈಕೆಗಾಗಿ ಸ್ಥಾಪಿತವಾದ ವೈವಿಧ್ಯಮಯ ಸಂಸ್ಥೆಗಳನ್ನು "ಮಾಧ್ಯಮಿಕ ಸಂಸ್ಥೆಗಳು" ಎನ್ನುತ್ತೇವೆ. ಸಮಾಜವು ವಿಕಾಸಹೊಂದುತ್ತಾ ಹೋದಂತೆ ಹೆಚ್ಚು ವೈವಿದ್ಯತೆ, ಸಂಕೀರ್ಣತೆ ಹೊಂದುತ್ತಾ ಹೋದಂತೆ ಅದಕ್ಕನುಗುಣವಾಗಿ ಜನರ ಬೇಡಿಕೆಗಳನ್ನು ಈಡೇರಿಸಲು ಈ ಮಾಧ್ಯಮಿಕ ಸಂಸ್ಥೆಗಳು ಅಸ್ತಿತ್ವಕ್ಕೆ ಬರುತ್ತವೆ. **ಉದಾಹರಣೆ :–** ಶಿಕ್ಷಣ, ಕಾನೂನು, ಶಾಸನಗಳು, ಸಂವಿಧಾನ, ಸಂಸತ್ತಿನ ನಿಯಮಗಳು, ವ್ಯವಹಾರಗಳು ಮುಂತಾದವು.

### B. ವಿಕಸಿತ ಮತ್ತು ಸ್ಥಾಪಿತ ಸಂಸ್ಥೆಗಳು (Crescive and Enacted Institutions)

ಅಮೇರಿಕದ ಸಮಾಜಶಾಸ್ತ್ರಜ್ಞ ಡಬ್ಲ್ಯೂ. ಜಿ. ಸಮ್ನರ ರವರು ವಿಕಸಿತ ಸಂಸ್ಥೆಗಳು ಮತ್ತು ಸ್ಥಾಪಿತ ಸಂಸ್ಥೆಗಳು ಎಂದು ಎರಡು ಪ್ರಕಾರವಾಗಿ ವಿಂಗಡಿಸಿದ್ದಾರೆ.

**ವಿಕಸಿತ ಸಂಸ್ಥೆಗಳು (Crescive Institutions) :**

ಕಾಲಾನುಕ್ರಮದಲ್ಲಿ ಸಹಜ ರೂಪದಲ್ಲಿ, ಯಾವುದೇ ಪೂರ್ವ ಯೋಜನೆಯಿಲ್ಲದೆ, ತಮ್ಮಿಂದ ತಾವಾಗಿಯೇ ವಿಕಸಿತಗೊಂಡು ಬರುವಂತಹ ಸಂಸ್ಥೆಗಳನ್ನು ವಿಕಸಿತ ಸಂಸ್ಥೆಗಳು ಎನ್ನುವರು.

**ಉದಾಹರಣೆ :–** ಕುಟುಂಬ ಮತ್ತು ಗ್ರಾಮ ಇತ್ಯಾದಿಗಳು.

**ಸ್ಥಾಪಿತ ಸಂಸ್ಥೆಗಳು (Enacted Institutions) :**

ವ್ಯವಸ್ಥಿತವಾಗಿ, ಕ್ರಮಬದ್ಧವಾಗಿ ಮತ್ತು ಉದ್ದೇಶಪೂರ್ವಕವಾಗಿ ಸ್ಥಾಪಿಸಲ್ಪಟ್ಟಿರುವ ಸಂಸ್ಥೆಗಳನ್ನು ಸ್ಥಾಪಿತ ಸಂಸ್ಥೆಗಳು ಎನ್ನುವರು.

**ಉದಾಹರಣೆ :** ಕಾರ್ಮಿಕರ ಸಂಘಟನೆ, ರಾಜಕೀಯ ಪಕ್ಷಗಳು ಇತ್ಯಾದಿಗಳು.

**C) ಇ. ಡಬ್ಲ್ಯೂ ಬರ್ಗೆಸ್‌ರವರು ನಾಲ್ಕು ಪ್ರಕಾರಗಳ ಸಾಮಾಜಿಕ ಸಂಸ್ಥೆಗಳನ್ನು ಗುರುತಿಸಿದ್ದಾರೆ:**

1. **ಸಾಂಸ್ಕೃತಿಕ ಸಂಸ್ಥೆಗಳ –** ಆಚಾರ–ವಿಚಾರ, ಸಂಪ್ರದಾಯಗಳು, ಕ್ರಿಯಾವಿಧಿಗಳು ಮುಂತಾದವುಗಳನ್ನು ಹೊಸ ಪೀಳಿಗೆಗಳಿಗೆ ವರ್ಗಾಯಿಸುವ ಕಾರ್ಯವನ್ನು ನಿರ್ವಹಿಸುತ್ತವೆ. ಸಾಂಸ್ಕೃತಿಕ ಪರಂಪರೆಗೆ ಹೆಚ್ಚು ಮಾನ್ಯತೆ ನೀಡುತ್ತದೆ. ಉದಾ; – ಕುಟುಂಬ, ಧರ್ಮ, ಶಿಕ್ಷಣ ಮುಂತಾದವುಗಳು,

2. **ಆರ್ಥಿಕ ಸಂಸ್ಥೆಗಳು; –** ಮಾನವನ ಮೂಲಭೂತ ಅಗತ್ಯಗಳನ್ನು ಸಮರ್ಪಕವಾಗಿ ಪೂರೈಸಲು ಪ್ರಯತ್ನಿಸುವ ಸಂಸ್ಥೆಯಾಗಿದೆ. ಇಂತಹ ಸಂಸ್ಥೆಗಳಿಂದಲೇ ಆಹಾರ, ವಸತಿ ಮತ್ತು ಇನ್ನಿತರ ಬೇಡಿಕೆಗಳನ್ನು ಈಡೇರಿಸಲು ಸಹಾಯಕವಾಗಿದೆ. ಸರಕು ಮತ್ತು ಸೇವೆಗಳ ಉತ್ಪಾದನೆಯ ಬಗ್ಗೆ ಕಾಳಜಿ ವಹಿಸುತ್ತದೆ ಉದಾ;– ಕಾರ್ಖಾನೆ, ಕೃಷಿರಂಗ, ಬ್ಯಾಂಕ್, ವಾಣಿಜ್ಯ ಕೇಂದ್ರಗಳು, ಸಾರಿಗೆ ಸಂಸ್ಥೆಗಳು ಇತ್ಯಾದಿ.

3. **ಮನೋರಂಜನಾ ಸಂಸ್ಥೆಗಳು;–** ಮಾನವನ ಮಾನಸಿಕ ಉಲ್ಲಾಸ ಮತ್ತು ವಿರಾಮಗಳನ್ನು ಸೂಕ್ತವಾಗಿ ಬಳಸಿಕೊಳ್ಳಲು ಸ್ಥಾಪನೆಯಾಗಿರುವ ಸಂಸ್ಥೆಯಾಗಿದೆ. ಇಲ್ಲಿ ಮಾನಸಿಕ ಉಲ್ಲಾಸ ಮತ್ತು ಕಲೆಯ ಉದ್ದೇಶವಾಗಿರುತ್ತದೆ, ಉದಾ;– ನಾಟಕ, ಸಂಗೀತ, ಸಾಹಿತ್ಯ, ಚಲನಚಿತ್ರ, ಸಾಮೂಹಿಕ ಮಾಧ್ಯಮಗಳಾದ ಟಿ.ವಿ, ರೇಡಿಯೋ ಮುಂತಾದವುಗಳು.

4. **ಸಾಮಾಜಿಕ ನಿಯಂತ್ರಣ ಸಂಸ್ಥೆಗಳು;–** ಸಮಾಜದಲ್ಲಿ ಶಾಂತಿ ಮತ್ತು ಸುವ್ಯವಸ್ಥೆಯನ್ನು ರಕ್ಷಿಸುವ ಉದ್ದೇಶವನ್ನು ಹೊಂದಿದೆ. ಸಮಾಜದ ಎಲ್ಲಾ ವರ್ಗಗಳ ಜನಸಮೂಹ ಮತ್ತು ಸಹಬಾಳ್ವೆ ನಡೆಸಲು ಒತ್ತಡ ಬೀರುತ್ತದೆ. ಉದಾ;– ಕಾನೂನು, ಪೊಲೀಸ್, ನ್ಯಾಯಾಲಯ ಸೈನ್ಯ, ಸಂವಿಧಾನಗಳು ಮುಂತಾದವುಗಳು.

## 2.6 ಸಾಮಾಜಿಕ ಸಮೂಹಗಳು (SOCIAL GROUPS)

"ಸಮೂಹ"ವೆಂಬುದು – ಸಮಾಜಶಾಸ್ತ್ರ ಅಧ್ಯಯನದ ಕೇಂದ್ರ ಬಿಂದುವಾಗಿದೆ. **('Group' is the Focus of Sociological Study)** ಮಾನವನು ಸಂಘ ಜೀವಿಯಾಗಿರುವುದರಿಂದ ಸಮಾಜದ ವಿವಿಧ ಸಮೂಹಗಳಲ್ಲಿ ಬೆರೆತು ತನ್ನ ಜೀವನವನ್ನು ನಡೆಸುತ್ತಾನೆ. ತನ್ನ ದಿನ ನಿತ್ಯದ ಜೀವನದಲ್ಲಿಯೂ ಮಾನವನು ಕುಟುಂಬ, ನೆರೆಹೊರೆ, ಕಾರ್ಖಾನೆ, ಕಾರ್ಯಾಲಯ, ಮಿತ್ರರ ಬಳಗ, ಮುಂತಾದ ಹತ್ತಾರು ಸಮೂಹಗಳಲ್ಲಿ ನಿಕಟ ಸಂಬಂಧಗಳನ್ನು ಹೊಂದಿರುತ್ತಾನೆ. ಆದ್ದರಿಂದ, ಸಮಾಜದ ಅಧ್ಯಯನವೆಂದರೆ ಮಾನವನ ಸಮೂಹ ಜೀವನದ ಅರ್ಥಾತ್ ಸಾಮಾಜಿಕ ಸಮೂಹಗಳ ಅಧ್ಯಯನವೇ ಆಗಿದೆ. ಸಮೂಹಗಳ ಅಧ್ಯಯನವು ಸಮಾಜಶಾಸ್ತ್ರ ಅಧ್ಯಯನದ ಹೃದಯವಿದ್ದಂತೆ. ಈ ಅಂಶವನ್ನು ಗುರುತಿಸಿರುವ ಸಮಾಜಶಾಸ್ತ್ರಜ್ಞ ಹ್ಯಾರಿ ಎಮ್. ಜಾನ್ಸನ್ (Harry M. Johnson) ಸಮಾಜಶಾಸ್ತ್ರವನ್ನು "ಸಾಮಾಜಿಕ ಸಮೂಹಗಳ ವೈಜ್ಞಾನಿಕ ಅಧ್ಯಯನ" ಎಂಬುದಾಗಿ ವ್ಯಾಖ್ಯಾನಿಸಿದ್ದಾರೆ.

### ಸಮೂಹದ ವ್ಯಾಖ್ಯೆ (Definition of Groups)

1. **ಮಾರ್ಷಲ್ ಜೋನ್ಸ್:** "ವ್ಯವಸ್ಥಿತವಾದ ಸಾಮಾಜಿಕ ಅಂತಃಕ್ರಿಯೆಯನ್ನು ಹೊಂದಿರುವ ಇಬ್ಬರು ಅಥವಾ ಅದಕ್ಕೂ ಹೆಚ್ಚು ಜನರನ್ನು ಸಾಮಾಜಿಕ ಸಮೂಹ" ಎಂದು ಕರೆದಿದ್ದಾರೆ.
2. **ಮೆಕೈವರ್ ಮತ್ತು ಪೇಜ್:** "ಮಾನವ ಸಂಬಂಧಗಳಿಂದ ಒಟ್ಟುಗೂಡಿರುವ ಯಾವುದೇ ಜನ ಸಂಗ್ರಹವನ್ನು ಸಾಮಾಜಿಕ ಸಮೂಹ ಎಂಬುದಾಗಿ ಕರೆದಿದ್ದಾರೆ".
3. **ಅಗ್‌ಬರ್ನ್ ಮತ್ತು ನಿಮ್‌ಕಾಫ್:** "ಇಬ್ಬರು ಅಥವಾ ಅದಕ್ಕೂ ಹೆಚ್ಚಿನ ಸಂಖ್ಯೆಯ ವ್ಯಕ್ತಿಗಳು ಒಂದುಗೂಡಿದಾಗ ಮತ್ತು ಪರಸ್ಪರ ಪ್ರಭಾವ ಬೀರುವಂತಾದಾಗ ಅವರೊಂದು ಸಾಮಾಜಿಕ ಸಮೂಹವೆನಿಸಿಕೊಳ್ಳುವರು".
4. **ಆರ್.ಕೆ. ಮರ್ಟನ್:** "ಒಂದು ನಿರ್ದಿಷ್ಟವಾದ ರೀತಿಯಲ್ಲಿ ಅಂತಕ್ರಿಯೆಯಲ್ಲಿ ತೊಡಗಿರುವ, ಮತ್ತು ತಾವು ಸಮೂಹವೊಂದಕ್ಕೆ ಸೇರಿದವರೆಂದು ಭಾವಿಸಿರುವ, ಹಾಗೂ ಇತರ ವ್ಯಕ್ತಿಗಳಿಂದಲೂ ಅಂತಹುದೇ ಪರಿಗಣನೆಗೆ ಒಳಗಾಗಿರುವ ಜನರನ್ನು ಸಮೂಹ ಎನ್ನಬಹುದು".

### ಸಮೂಹ ಗುಣಲಕ್ಷಣಗಳು (Characteristics of Social Groups)

**a) ಅಂತಕ್ರಿಯೆಯಲ್ಲಿ ನಿರತವಾದ ವ್ಯಕ್ತಿಗಳ ಸಂಕಲನ (Collection of Interacting Individuals):**

ಸಮೂಹವು ವ್ಯಕ್ತಿಗಳನ್ನು ಒಳಗೊಂಡಿದೆ. ವ್ಯಕ್ತಿಗಳು ಅಥವಾ ಜನರಿಲ್ಲದೆ ಸಮೂಹವಿರಲು ಸಾಧ್ಯವಿಲ್ಲ. ಸಾಮಾಜಿಕ ಅಂತಃಕ್ರಿಯೆಯು ಸಮೂಹಗಳ ಸ್ಥಾಪನೆಗೆ ಮೂಲಾಧಾರವಿದ್ದಂತೆ. ಪರಸ್ಪರ ಅಂತಃ ಕ್ರಿಯೆಗಳನ್ನು ಹೊಂದಿರದ ಜನರೆಂದಿಗೂ 'ಸಮೂಹ'ವೆಂದು ಕರೆಸಿಕೊಳ್ಳಲಾರರು. ಉದಾ: ಬಸ್ ನಿಲ್ದಾಣದಲ್ಲಿ ಬಸ್ಸಿಗಾಗಿ ತಮ್ಮಷ್ಟಕ್ಕೆ ಕಾಯುತ್ತಾ ನಿಂತಿರುವ ನಾಲ್ಕಾರು ಮಂದಿ ಜನರನ್ನು ಒಂದು "ಸಮೂಹ" ಎನ್ನಲಾಗದು. ಆದರೆ ಅವರು ಮಾತುಕತೆ, ತಿಕ್ಕಾಟ, ಮುಂತಾದ ಅಂತಃಕ್ರಿಯೆಯಲ್ಲಿ ತೊಡಗಿದಾಗ ಮಾತ್ರ ಒಂದು "ಸಮೂಹ" ಎನ್ನಿಸಿಕೊಳ್ಳುವರು. ಅಂತಃಕ್ರಿಯೆಯು ಸಹಕಾರ ಸ್ಪರ್ಧೆ, ಘರ್ಷಣೆ, ಹೊಂದಾಣಿಕೆ ಮುಂತಾದ ಯಾವುದೇ ರೂಪದಲ್ಲಿರಬಹುದಾದರೂ ಸಮೂಹದ ರಚನೆಗೆ ಅದು ತೀರಾ ಅಗತ್ಯವಾದುದು.

**b) ಸಮೂಹದ ಏಕತೆ ಮತ್ತು ಐಕ್ಯಮತ್ಯ : (Group Unity and Solidarity):**

ಸಮೂಹದ ಸದಸ್ಯರಲ್ಲಿ ಏಕತೆಯ ಮನೋಭಾವವನ್ನು ಗುರುತಿಸುವುದು ಸಾಧ್ಯ. ಸಮೂಹದ ಏಕತೆ ಹಾಗೂ ಐಕ್ಯಮತ್ಯದ ಸ್ವರೂಪವು ಸಾಮಾಜಿಕ ಅಂತಃಕ್ರಿಯೆಯ ಸ್ವರೂಪ, ಗುಣ ಹಾಗೂ ಪ್ರಕಾರಗಳನ್ನು ಅವಲಂಬಿಸಿದೆ. ಕುಟುಂಬ, ಮಿತ್ರರ ಬಳಗ, ಮತಧಾರ್ಮಿಕ ಸಮೂಹ, ಇವೇ ಮುಂತಾದ ಸಮೂಹಗಳಲ್ಲಿ ಜನರು ಹೆಚ್ಚು ಐಕ್ಯಮತ್ಯದಿಂದ ಹಾಗೂ ಏಕತೆಯಿಂದ ಇರುವರು. ಸದಸ್ಯರಲ್ಲಿ ಕಾಣಬರಬಹುದಾದ ನಿರಂತರ ಸಂಪರ್ಕ ಉದ್ದೇಶಗಳ ಬಗೆಗಿನ ಸಹಮತ ಹಾಗೂ ಏಕತೆಯ ಬಗೆಗಿನ ತುಡಿತ ಇಂತಹ ಗುಣಗಳು ಸಮೂಹದ ಐಕ್ಯಮತ್ಯವನ್ನು ಹೆಚ್ಚಿಸುತ್ತವೆ. ಏಕತೆಯ ಮನೋಭಾವವಿಲ್ಲದೇ ಇರುವ ಸಮೂಹವು ಬಹಳ ಕಾಲ ಬಾಳಲಾರದು. "ನಾವು–ನಮ್ಮವರು" ("we-felling") ಎಂಬ ಮನೋಭಾವನ್ನು ಬೆಳೆಸಿಕೊಳ್ಳುವ ಸಮೂಹದ ಸದಸ್ಯರು ತಮ್ಮನ್ನು ತಮ್ಮ ಸಮೂಹದ ಮೂಲಕ ಗುರುತಿಸಿಕೊಳ್ಳುತ್ತಾರೆ. ಈ ಮನೋಭಾವನೆಯು ಸಮೂಹದ ಐಕ್ಯವನ್ನು ಹೆಚ್ಚಿಸುವುದು.

**c) ಸಮೂಹದ ಉದ್ದೇಶಗಳು ಮತ್ತು ಆಸಕ್ತಿಗಳು (Group Goals and Interests) :**

ಸಮೂಹದ ಸದಸ್ಯರ ದೃಷ್ಟಿಯು ಸಮೂಹದ ಉದ್ದೇಶ ಹಾಗೂ ಆಸಕ್ತಿಗಳ ಮೇಲೆ ಕೇಂದ್ರೀಕೃತವಾಗಿರುವುದು. ಜನರ ಉದ್ದೇಶಗಳು ಬೇರೆ ಬೇರೆಯಾಗಿರುವುದರಿಂದ ಬೇರೆ ಬೇರೆ ಸಮೂಹಗಳು ಅಸ್ತಿತ್ವಕ್ಕೆ ಬಂದಿರುವುದನ್ನು ಕಾಣಬಹುದು. ರಾಜಕೀಯ ಸಮೂಹಗಳು, ಆರ್ಥಿಕ ಸಮೂಹಗಳು, ಕಾರ್ಮಿಕ ಸಂಘಗಳು, ಶೈಕ್ಷಣಿಕ ಸಮೂಹಗಳು, ಸಾಂಸ್ಕೃತಿಕ ಸಂಘಗಳು – ಮುಂತಾದವು ಜನರ ವಿಭಿನ್ನ ಉದ್ದೇಶ ಹಾಗೂ ಆಸಕ್ತಿಗಳನ್ನು ಪ್ರತಿಬಿಂಬಿಸುತ್ತವೆ. ಆದರೆ, ಒಮ್ಮೊಮ್ಮೆ ಯಾವುದೇ ನಿಶ್ಚಿತ ಉದ್ದೇಶಗಳಿಲ್ಲದೇ ಅಸ್ತಿತ್ವಕ್ಕೆ ಬರುವ ಜನಮಂದೆಯಂತಹ ಸಮೂಹಗಳೂ ಕಾಣಿಸಿಕೊಳ್ಳುವುದುಂಟು.

**d) ಸಮೂಹಗಳು ತಮ್ಮ ವೈಯಕ್ತಿಕ ಸದಸ್ಯರಿಗಿಂತಲೂ ಹೆಚ್ಚು ಬಲಯುತವಾಗಿರುತ್ತವೆ. (Groups are Stronger Than Their Individual Members):**

ಸಮೂಹವೆಂಬುದು ತನ್ನ ಭಾಗಗಳ ಸಂಕಲನಕ್ಕಿಂತಲೂ ಹೆಚ್ಚು ಶಕ್ತಿಶಾಲಿಯಾಗಿರುತ್ತದೆ. ಡರ್ಖೀಮ್ ಹೇಳಿರುವಂತೆ ಸಮೂಹವೆಂಬುದು ತನ್ನದೇ ಆದ ವಾಸ್ತವತೆಯೊಂದನ್ನು ಹೊಂದಿರುತ್ತದೆ (suigeneris) ಉದಾ: ಸಮೂಹವೊಂದರ ವಯಸ್ಸು ಮತ್ತು ಗಾತ್ರವನ್ನು ಅದರ ಸದಸ್ಯರ ವಯಸ್ಸು ಹಾಗೂ ಗಾತ್ರಗಳ ಆಧಾರದಲ್ಲಿ ನಿರ್ಧರಿಸಲಾಗದು.

**e) ಸಮೂಹ ನಿಯಮಗಳು (Group Norms):**

ಪ್ರತಿಯೊಂದು ಸಮೂಹವು ತನ್ನದೇ ಆದ ನೀತಿ ನಿಯಮಾವಳಿಗಳನ್ನು ಹೊಂದಿರುತ್ತದೆ. ಸಮೂಹದ ಸದಸ್ಯರು ಅವುಗಳಿಗೆ ಬದ್ಧರಾಗಿ ನಡೆಯಬೇಕಾಗುವುದು. ಈ ನಿಯಮಗಳು ರೂಢಿ ಸಂಪ್ರದಾಯಗಳು, ಲೋಕಾಚಾರ, ಲೋಕನೀತಿ, ಕಾನೂನು, ಶಾಸನ, ಸಂವಿಧಾನ– ಮುಂತಾದ ಯಾವುದೇ ರೂಪದಲ್ಲಿರಬಹುದು. ಅವು ಲಿಖಿತ ಅಥವಾ ಅಲಿಖಿತ ರೂಪದಲ್ಲಿಯೂ ಇರಬಹುದು. ಆದರೆ ಜನಮಂದೆಯಂತಹ ಅಸಂಘಟಿತ ಸಮೂಹಗಳಲ್ಲಿ ಈ ನಿಯಮಗಳು ತುಂಬಾ ಶಿಥಿಲವಾಗಿರುತ್ತವೆ. ತನ್ನ ಸ್ವರೂಪಕ್ಕನುಗುಣವಾಗಿ ಸಮೂಹವು ಅನೌಪಚಾರಿಕ ಇಲ್ಲವೇ ಔಪಚಾರಿಕ ನಿಯಂತ್ರಣ ಸಾಧನಗಳನ್ನು ಬಳಸುವುದರ ಮೂಲಕ ತನ್ನ ಸದಸ್ಯರ ವರ್ತನೆಯ ಮೇಲೆ ತನ್ನ ಹಿಡಿತವನ್ನು ಕಾಯ್ದುಕೊಳ್ಳಲು ಯತ್ನಿಸುವುದು.

**f) ಸಮೂಹದ ಗಾತ್ರ: (Size of the Group)**

ಪ್ರತಿಯೊಂದು ಸಮೂಹವು ತನ್ನದೇ ಆದ ಗಾತ್ರವನ್ನು ಹೊಂದಿರುತ್ತದೆ. ಸಮೂಹಗಳ ಗಾತ್ರವು ಒಂದೇ ಬಗೆಯದಾಗಿರುವುದಿಲ್ಲ. ಕುಟುಂಬದಂತಹ ಪ್ರಾಥಮಿಕ ಸಮೂಹಗಳ ಗಾತ್ರವು ಬಹಳ ಚಿಕ್ಕದಾಗಿರುತ್ತದೆ. ಹಾಗೆಯೇ, ರಾಜಕೀಯ ಪಕ್ಷಗಳು ಮತ್ತು ಕಾರ್ಮಿಕ ಸಂಘಗಳಂತಹ ಮಾಧ್ಯಮಿಕ ಸಮೂಹಗಳ ಗಾತ್ರವು ಬಹಳ ದೊಡ್ಡದಿರುತ್ತದೆ. ರಾಜ್ಯವಂತೂ ಬೃಹತ್ ಜನಸಮೂಹವೇ ಆಗಿದೆ.

**g) ಸಮೂಹಗಳು ಗತಿಶೀಲವಾದವು (Groups are Dynamic):**

ಸಮೂಹಗಳು ಜಡ ಸ್ವರೂಪದವುಗಳಲ್ಲ; ಆದರೆ ಗತಿಶೀಲ ಸ್ವಭಾವವುಳ್ಳವು. ಮಂದಗತಿಯಿಂದ ಅಥವಾ ಶೀಘ್ರ ಗತಿಯಲ್ಲಿ ಅವು ಬದಲಾವಣೆ ಹೊಂದುತ್ತಿರುತ್ತವೆ. ಹಳೆಯ ಸದಸ್ಯರು ಸಾವನ್ನಪ್ಪಬಹುದು, ಇಲ್ಲವೇ ಬಿಟ್ಟಿರಬಹುದು, ಹೊಸ ಸದಸ್ಯರು ಹುಟ್ಟಬಹುದು, ಅಥವಾ ಸೇರಿಕೊಳ್ಳಬಹುದು. ಆಂತರಿಕ

ಒತ್ತಡದಿಂದ ಅಥವಾ ಬಾಹ್ಯ ಶಕ್ತಿಗಳ ಪ್ರಭಾವದಿಂದ ಸಮೂಹಗಳು ಬದಲಾಗುತ್ತಲೇ ಇರುತ್ತವೆ. ಗತಿಶೀಲತೆ ಸಮೂಹದ ಆಂತರಿಕ ಸ್ವಭಾವವೇ ಆಗಿದೆ.

**h) ಸಾಪೇಕ್ಷ ಭದ್ರತೆ – ಶಾಶ್ವತತೆ (Relative Stability - Permanence):**

ಸಮೂಹಗಳು ಶಾಶ್ವತ ಅಥವಾ ಅಶಾಶ್ವತ ಸ್ವರೂಪದವುಗಳಾಗಿರಬಹುದು. ಹಾಗೆಯೇ ಸಾಕಷ್ಟು ಭದ್ರತೆ ಹೊಂದಿರಬಹುದು ಇಲ್ಲವೇ ಅಭದ್ರವಾಗಿಯೂ ಇರಬಹುದು. ಶ್ರೋತೃವರ್ಗ, ಜನಮುಂದೆ (crowd) ಉದ್ರಿಕ್ತ ಜನಮುಂದೆ (mob) ಮುಂತಾದ ಸಮೂಹಗಳು ಅಭದ್ರವಾಗಿಯೂ, ಅಶಾಶ್ವತವಾಗಿಯೂ ಇದ್ದರೆ, ಧಾರ್ಮಿಕ ಸಂಘಗಳು, ರಾಜಕೀಯ ಪಕ್ಷಗಳು, ಕಾರ್ಮಿಕ ಸಂಘಗಳು ಹೆಚ್ಚು ಭದ್ರವಾಗಿಯೂ, ಶಾಶ್ವತವಾಗಿಯೂ ಇವೆ.

## ಸಮೂಹಗಳ ಪ್ರಕಾರಗಳು: (Types of Groups)

ಸಮಾಜಶಾಸ್ತ್ರಜ್ಞರು ತಮ್ಮ ಅಧ್ಯಯನಗಳಲ್ಲಿ ಸಮೂಹಗಳ ಹಲವು ಪ್ರಕಾರಗಳ ಬಗ್ಗೆ ಉಲ್ಲೇಖಿಸಿದ್ದು, ಅವುಗಳಲ್ಲಿ ಕೆಲವು ಪ್ರಮುಖವಾದ ಸಮೂಹಗಳನ್ನು ಇಲ್ಲಿ ಚರ್ಚಿಸಲಾಗಿದೆ.

### ಒಳ–ಸಮೂಹಗಳು ಮತ್ತು ಹೊರ–ಸಮೂಹಗಳು ("In –Groups and Out-Groups"):

ಅಮೆರಿಕದ ಸಮಾಜಶಾಸ್ತ್ರಜ್ಞ ವಿಲಿಯಂ ಗ್ರಹಾಮ್ ಸಮ್ನರ್‌ರವರು 1906 ರಲ್ಲಿ ಪ್ರಕಟವಾದ ತನ್ನ "ಫೋಕ್‌ವೇಸ್" ಎಂಬ ಗ್ರಂಥದಲ್ಲಿ ವ್ಯಕ್ತಿಗತ ದೃಷ್ಟಿಕೋನವನ್ನು ಆಧಾರವಾಗಿಟ್ಟುಕೊಂಡು ಸಮೂಹಗಳನ್ನು "ಒಳ ಸಮೂಹಗಳು" ಮತ್ತು "ಹೊರ–ಸಮೂಹಗಳು" ಎಂದು ಎರಡು ವಿಧಗಳನ್ನಾಗಿ ವಿಂಗಡಿಸಿರುವನು. ಈ ವರ್ಗೀಕರಣವು ಹೆಚ್ಚು ವ್ಯಕ್ತಿಗತವಾದುದಾಗಿದ್ದು. ವ್ಯಕ್ತಿಯೋರ್ವನು ಯಾವ ಸಂದರ್ಭದಲ್ಲಿ ಯಾವ ಕಾರಣಕ್ಕಾಗಿ ಯಾವುದನ್ನು ಮನಸ್ಸಿನಲ್ಲಿಟ್ಟುಕೊಂಡು ತನ್ನನ್ನು ವಿಭಿನ್ನ ಸಮೂಹಗಳೊಂದಿಗೆ ಗುರುತಿಸಿಕೊಳ್ಳುತ್ತಾನೆಯೋ ಆ ಸಮೂಹವು ಆ ಸಂದರ್ಭದಲ್ಲಿ ಆತನ 'ಒಳ–ಸಮೂಹ'ವಾಗುತ್ತದೆ, ಉಳಿದವು 'ಹೊರ–ಸಮೂಹ'ವಾಗುತ್ತವೆ.

> "ಯಾವ ಸಮೂಹಕ್ಕೆ ವ್ಯಕ್ತಿಯು ಸೇರಿದ್ದಾನೆಯೋ ಅಥವಾ ಹಾಗೆಂದು ಭಾವಿಸಿದ್ದಾನೆಯೋ ಅದು ಆತನ ಒಳ–ಸಮೂಹವೆನಿಸಿಕೊಳ್ಳುವುದು ಮತ್ತು ಉಳಿದ ಸಮೂಹಗಳು ಹೊರ–ಸಮೂಹಗಳೆನಿಸಿಕೊಳ್ಳುತ್ತವೆ."

### ಒಳ ಹಾಗೂ ಹೊರ ಸಮೂಹಗಳಿಗೆ ಉದಾಹರಣೆಗಳು:

ವ್ಯಕ್ತಿಯ ಕುಟುಂಬ, ಸಮವಯಸ್ಕರ ಸಮೂಹ, ನೆರೆಹೊರೆ, ಜಾತಿ, ಧಾರ್ಮಿಕ ಸಮೂಹ– ಇತ್ಯಾದಿ, ಒಳ–ಸಮೂಹಗಳೆನಿಸಿಕೊಳ್ಳುತ್ತವೆ. ಉಳಿದವು ಹೊರ–ಸಮೂಹಗಳೆನಿಸಿಕೊಳ್ಳುತ್ತವೆ. ಒಂದು ಧರ್ಮದವರಿಗೆ ತನ್ನ ಧರ್ಮೀಯರು ಒಳಸಮೂಹ ಇತರೆ ಧರ್ಮದವರು ಹೊರ ಸಮೂಹ, ಒಂದು ಜಾತಿಯವರು ಒಳ ಸಮೂಹ ಮತ್ತು ಇತರ ಜಾತಿಯವರು ಹೊರ ಸಮೂಹ.

### ಗೆಮೈನ್‌ಶಾಫ್ಟ್ ಮತ್ತು ಗೆಸೆಲ್‌ಶಾಫ್ಟ್ (Gemeinschaft and Gesellschaft)

ಜರ್ಮನಿಯ ಸಮಾಜಶಾಸ್ತ್ರಜ್ಞ ಫರ್ಡಿನೆಂಡ್ ಟೋನಿಸ್ ಎಂಬುವರು ಸದಸ್ಯರುಗಳ ನಡುವಿನ ಅಂತಃಕ್ರಿಯೆಯ ಸ್ವರೂಪವನ್ನು ಆಧಾರವಾಗಿಟ್ಟುಕೊಂಡು 'ಗೆಮೈನ್‌ಶಾಫ್ಟ್' ಮತ್ತು 'ಗೆಸೆಲ್‌ಶಾಫ್ಟ್' ಎಂಬ ಎರಡು ಬಗೆಯ ಸಮೂಹಗಳ ಬಗ್ಗೆ ಪ್ರಸ್ತಾಪಿಸಿದ್ದಾರೆ. ಈ ಜರ್ಮನ್ ಪದಗಳನ್ನು ಅನುಕ್ರಮವಾಗಿ 'ಸಮುದಾಯ' ಮತ್ತು 'ಸಂಘ' (Community and Association) ಎಂದು ಅನುವಾದಿಸಲಾಗಿದೆ.

i) **'ಗೆಮೈನ್‌ಶಾಫ್ಟ್'** ಎಂಬುದು ಪ್ರತ್ಯಕ್ಷ ಮತ್ತು ವೈಯಕ್ತಿಕ ಸ್ವರೂಪದ ಸಂಬಂಧವನ್ನು ಆಧರಿಸಿದ್ದು ಚಿಕ್ಕ ಗಾತ್ರದ್ದಾಗಿರುತ್ತದೆ. ಸದಸ್ಯರ ನಡುವೆ ಇಲ್ಲಿ ಸ್ನೇಹ, ಪ್ರೀತಿ, ಸಹಕಾರ, ಸಹಾನುಭೂತಿ, ತ್ಯಾಗ ಮುಂತಾದ ಗುಣಗಳು ಕಾಣಬರುವವು. ಉದಾ: ಕುಟುಂಬ, ನೆರೆಹೊರೆ, ಗ್ರಾಮ, ಆದಿವಾಸಿ ಸಮೂಹ ಗೆಳೆಯರ ಬಳಗ ಇತ್ಯಾದಿ.

ii) **'ಗೆಸೆಲ್‌ಶಾಫ್ಟ್'** ಎಂಬುದು ಅವೈಯಕ್ತಿಕ, ವ್ಯವಹಾರಿಕ ಸಂಬಂಧವನ್ನು ಆಧರಿಸಿದ್ದು ದೊಡ್ಡಗಾತ್ರದ್ದಾಗಿರುತ್ತದೆ. ನಿಶ್ಚಿತ ಉದ್ದೇಶವೊಂದರ ಇಡೇರಿಕೆಗಾಗಿ ಸ್ಥಾಪಿತವಾದ ಈ ಸಮೂಹಗಳು "ಸಂಘ" ಗಳಿದ್ದಂತೆ ಉದಾ: ರಾಜಕೀಯ ಪಕ್ಷಗಳು, ವ್ಯಾಪಾರಿ ಸಂಘಟನೆಗಳು, ಕಾರ್ಮಿಕ ಸಂಘಟನೆಗಳು, ನಗರ ಇತ್ಯಾದಿ.

## ಪ್ರಾಥಮಿಕ ಸಮೂಹಗಳು ಮತ್ತು ಮಾಧ್ಯಮಿಕ ಸಮೂಹಗಳು: (Primary Groups and Secondary Groups):

ಸಮೂಹದ ಸದಸ್ಯರುಗಳ ನಡುವೆ ಏರ್ಪಟ್ಟಿರುವ ಸಾಮಾಜಿಕ ಅಂತಃಕ್ರಿಯೆಗಳ ಸ್ವರೂಪ ಮತ್ತು ಗುಣಗಳನ್ನು ಆಧಾರವಾಗಿಟ್ಟುಕೊಂಡು ಸಿ.ಎಚ್. ಕೂಲೇ ಯವರು ಸಮೂಹಗಳನ್ನು **"ಪ್ರಾಥಮಿಕ ಸಮೂಹ"** ಎಂದು ಕರೆದಿದ್ದಾರೆ. ಕೂಲೇ ನಂತರದ ಸಮಾಜಶಾಸ್ತ್ರಜ್ಞರು ಮುಖಾ ಮುಖಿ ಸಂಬಂಧವಿರದ ಸಮೂಹಗಳನ್ನು ಮಾಧ್ಯಮಿಕ ಸಮೂಹಗಳೆಂದು ಕರೆದಿದ್ದಾರೆ. ಸಿ.ಹೆಚ್. ಕೂಲೇ ಯವರು ಮಾಧ್ಯಮಿಕ ಸಮೂಹಗಳ ಬಗ್ಗೆ ಪ್ರಸ್ತಾಪಿಸಿರುವುದಿಲ್ಲ.

1. ಪ್ರಾಥಮಿಕ ಸಮೂಹಗಳೆಂದರೆ, ಅನ್ಯೋನ್ಯವಾದ, ಮುಖಾಮುಖಿ ಸಂಬಂಧ ಮತ್ತು ಸಹಕಾರ ಗುಣಗಳನ್ನು ಹೊಂದಿದ ಸಮೂಹಗಳಾಗಿವೆ. ಉದಾ: ಕುಟುಂಬ, ಗೆಳೆಯರ ಬಳಗ, ನೆರೆಹೊರೆ, ಚಿಕ್ಕ ಸಮುದಾಯ.

2. "ಅನ್ಯೋನ್ಯತೆಯ ಕೊರತೆಯಿರುವ ಅನುಭವವನ್ನು ನೀಡುವಂತಹ ಸಮೂಹಗಳಿಗೆ ಮಾಧ್ಯಮಿಕ ಸಮೂಹಗಳೆಂದು ಹೇಳಬಹುದು. ಉದಾ: ಶಾಲಾ–ಕಾಲೇಜುಗಳು, ಸರಕಾರಿ ಕಾರ್ಯಾಲಯಗಳು, ಬ್ಯಾಂಕುಗಳು, ರಾಜಕೀಯ ಪಕ್ಷಗಳು, ವೃತ್ತಿ ಕಾರ್ಮಿಕ ಸಂಘಗಳು ಇತ್ಯಾದಿ.

**i) ಐಚ್ಛಿಕ ಸಮೂಹಗಳು ಮತ್ತು ಅನೈಚ್ಛಿಕ ಸಮೂಹಗಳು, ii) ಸಾಂಸ್ಥಿಕ ಸಮೂಹಗಳು ಮತ್ತು ಸಾಂಸ್ಥಿಕವಲ್ಲದ ಸಮೂಹಗಳು, iii) ಶಾಶ್ವತ ಸಮೂಹಗಳು ಮತ್ತು ಅಶಾಶ್ವತ ಸಮೂಹಗಳು:** ಚಾರ್ಲ್ಸ್ ಎ. ಎಲ್‌ವುಡ್ (Charles A. Ellwood) ಎಂಬಾತನು ತನ್ನ "ಸೈಕಾಲಜಿ ಆಫ್ ಹ್ಯೂಮನ್ ಸೊಸೈಟಿ" ("Psychology of Human Society") ಎಂಬ ಗ್ರಂಥದಲ್ಲಿ ಈ ಮೂರು ರೀತಿಯ ವರ್ಗೀಕರಣಗಳನ್ನು ನೀಡಿರುವನು.

### i) ಐಚ್ಛಿಕ ಸಮೂಹಗಳು ಮತ್ತು ಅನೈಚ್ಛಿಕ ಸಮೂಹಗಳು: (Voluntary and Involuntary Groups):

ಯಾವ ಸಮೂಹಗಳ ಸದಸ್ಯನಾಗುವುದು ವ್ಯಕ್ತಿಯ ಸ್ವಂತ ಇಚ್ಛೆಯನ್ನು ಅವಲಂಬಿಸಿರುವುದೋ ಅಂತಹ ಸಮೂಹಗಳು "ಐಚ್ಛಿಕ ಸಮೂಹಗಳು" ಎನ್ನಿಸಿಕೊಳ್ಳುತ್ತವೆ. ಉದಾ: ರಾಜಕೀಯ ಪಕ್ಷಗಳು, ಕಾರ್ಮಿಕ ಸಂಘಗಳು, ಮನೋರಂಜನಾ ಮಂಡಳಿ, ಮಿತ್ರರ ಬಳಗ, ಕ್ಲಬ್ ಮುಂತಾದವು

ಯಾವ ಸಮೂಹಗಳ ಸದಸ್ಯನಾಗುವುದು ವ್ಯಕ್ತಿಯ ನಿಯಂತ್ರಣಕ್ಕೆ ಒಳಪಟ್ಟಿರದೆ ಹೆಚ್ಚು ಕಡಿಮೆ ಕಡ್ಡಾಯ ಪೂರ್ವಕವಾಗಿರುತ್ತದೆಯೋ ಅಂತಹ ಸಮೂಹಗಳು "ಅನೈಚ್ಛಿಕ ಸಮೂಹಗಳು" ಎನ್ನಿಸಿಕೊಳ್ಳುತ್ತವೆ. ಉದಾ: ಕುಟುಂಬ, ಜಾತಿ, ಜನಾಂಗ, ಸಮುದಾಯ, ನಗರ, ರಾಜ್ಯ ಮುಂತಾದ

ಕೆಲವು ಸಮೂಹಗಳು ಅನೈಚ್ಛಿಕ ಸ್ವರೂಪದವುಗಳಾಗಿವೆ. ವ್ಯಕ್ತಿಯು ತನಗಿಷ್ಟವಿರಲಿ ಇಲ್ಲದಿರಲಿ ಅವುಗಳ ಸದಸ್ಯನಾಗಿರಬೇಕಾಗುವುದು.

**ii) ಸಾಂಸ್ಥಿಕ ಹಾಗೂ ಸಾಂಸ್ಥಿಕವಲ್ಲದ ಸಮೂಹಗಳು (Institutional and Non-Institutional Groups):**

ಸಾಂಸ್ಥಿಕ ಸಮೂಹಗಳು ಸಂಸ್ಥೆಯ ಸ್ವರೂಪದವುಗಳಾಗಿದ್ದು, ಸಾಂಸ್ಥಿಕ ರಚನೆ ಹಾಗೂ ಗುಣಗಳನ್ನು ಹೊಂದಿದ್ದು ಹೆಚ್ಚು ಸುಭದ್ರವೂ ಶಾಶ್ವತವು ಆಗಿರುತ್ತವೆ. ಉದಾ: ಕುಟುಂಬ, ರಾಜ್ಯ, ಶಾಲೆ, ಕಾಲೇಜು, ವಿಶ್ವವಿದ್ಯಾಲಯ, ಕಾರ್ಖಾನೆ ಮುಂತಾದವುಗಳನ್ನೊಳಗೊಂಡಿದ್ದು ಹೆಚ್ಚು ಶಾಶ್ವತವೂ ಆಗಿವೆ. ಸಾಂಸ್ಥಿಕವಲ್ಲದ ಸಮೂಹಗಳಿಗೆ ಸಾಂಸ್ಥಿಕ ನೆಲೆ, ಸ್ವರೂಪ, ಸಂರಚನೆ ಹಾಗೂ ಗುಣ ಸ್ವರೂಪಗಳಿರುವುದಿಲ್ಲ. ಅಂತಹ ಅನೇಕ ಸಮೂಹಗಳು ಕೇವಲ 'ಸಂಘ' ದ ಸ್ಥಿತಿಯಲ್ಲಿರಬಹುದು. ಅಥವಾ ಜನಮಂದೆಯ ಸ್ಥಿತಿಯಲ್ಲಿದ್ದು ಅಶಾಶ್ವತ ಸ್ವರೂಪದವುಗಳಾಗಿಯೂ ಇರಬಹುದು. ಉದಾ: ರಾಜಕೀಯ ಪಕ್ಷಗಳು, ಕಾರ್ಮಿಕ ಸಂಘಗಳು, ವಿದ್ಯಾರ್ಥಿ ಸಂಘಗಳು, ಜನಮುಂದೆ, ಶ್ರೋತೃವರ್ಗ– ಮುಂತಾದವು ಈ ವರ್ಗಕ್ಕೆ ಸೇರುತ್ತವೆ.

**iii) ಶಾಶ್ವತ ಮತ್ತು ಅಶಾಶ್ವತ ಸ್ವರೂಪದ ಸಮೂಹಗಳು: (Permanent and Non-permanent Groups)**

ಜನಮಂದೆ, ಶ್ರೋತೃವರ್ಗ, ಉದ್ರಿಕ್ತ ಜನಮಂದೆ (mob) ಮುಂತಾದವುಗಳು ತೀರಾ ಅಶಾಶ್ವತ ಸ್ವರೂಪದವುಗಳಾಗಿದ್ದರೆ ಉಳಿದ ಬಹುತೇಕ ಸಮೂಹಗಳು. ಉದಾ: ಬ್ಯಾಂಕ್, ಶಾಲೆ, ಕಾಲೇಜು, ರಾಜಕೀಯ ಪಕ್ಷ, ಕಾರ್ಮಿಕ ಸಂಘ, ರೋಟರಿ ಕ್ಲಬ್, ಇತ್ಯಾದಿ ಶಾಶ್ವತ ಸ್ವರೂಪದವುಗಳಾಗಿವೆ.

### ಸಮಾನಾಂತರ ಸಮೂಹಗಳು ಮತ್ತು ಲಂಬ ಸಮೂಹಗಳು: (Horizontal Groups and Vertical Groups):

ಅಮೆರಿಕದ ಸಮಾಜಶಾಸ್ತ್ರಜ್ಞ ಪಿ.ಎ. ಸೊರೊಕಿನ್ ಎಂಬುವರು ಸಮೂಹಗಳನ್ನು "ಸಮಾನಾಂತರ ಸಮೂಹಗಳು" ಮತ್ತು "ಲಂಬ ಸಮೂಹಗಳು" ಎಂಬುದಾಗಿ ವಿಂಗಡಿಸಿದ್ದಾರೆ.

i. ಸಮಾನಾಂತರ ಸಮೂಹಗಳು ಗಾತ್ರದಲ್ಲಿ ದೊಡ್ಡದಾಗಿದ್ದು ಸಾರ್ವತ್ರಿಕ ಸ್ವರೂಪದವುಗಳಾಗಿರುತ್ತವೆ. ಉದಾ: ರಾಷ್ಟ್ರೀಯ ಸಮೂಹಗಳು, ರಾಜಕೀಯ ಪಕ್ಷಗಳು, ಜನಾಂಗೀಯ ಹಾಗೂ ಕುಲಸಂಬಂಧಿ ಸಮೂಹಗಳು, ಸಾಂಸ್ಕೃತಿಕ ಸಂಘಟನೆಗಳು ಧಾರ್ಮಿಕ ಸಮೂಹಗಳು, ಇತ್ಯಾದಿ.

ii. ಲಂಬಾಂತರ ಅಥವಾ ಶೃಂಗ ಸಮೂಹಗಳು ಚಿಕ್ಕ ಗಾತ್ರದ ಸಮೂಹಗಳಾಗಿದ್ದು ಸಮಾಜದಲ್ಲಿನ ನಿರ್ದಿಷ್ಟ ಅಂತಸ್ತು ಅಥವಾ ಹುದ್ದೆಯನ್ನು ಹೊಂದಿದ ವ್ಯಕ್ತಿಗಳನ್ನು ಒಳಗೊಂಡಿರುತ್ತವೆ. ಉದಾ: ಆರ್ಥಿಕ ಸಾಮಾಜಿಕ ವರ್ಗಗಳು (ಮೇಲ್ವರ್ಗ, ಮಧ್ಯಮವರ್ಗ ಹಾಗೂ ಕೆಳವರ್ಗ) ಮತ್ತು ಜಾತಿ ಸಮೂಹಗಳು, ಲಂಬಾಂತರ ಸಮೂಹವು ವಿಸ್ತೃತವಾದ ಸಮಾನಾಂತರ ಸಮೂಹದ ಭಾಗವಾಗಿರುವುದರಿಂದ ವ್ಯಕ್ತಿಯೋರ್ವನು ಎರಡೂ ಸಮೂಹಗಳ ಸದಸ್ಯನಾಗಿರುತ್ತಾನೆ.

### ಪ್ರಾದೇಶಿಕ ಸಮೂಹಗಳು ಮತ್ತು ಪ್ರಾದೇಶಿಕವಲ್ಲದ ಸಮೂಹಗಳು: (Territorial Groups and

**Non-Territorial Groups):**

ಪಾರ್ಕ್ ಮತ್ತು ಬರ್ಗೆಸ್ (Park and Burgess) ರವರು ಪ್ರಾದೇಶಿಕ ಸಮೂಹಗಳು ಮತ್ತು ಪ್ರಾದೇಶಿಕವಲ್ಲದ ಸಮೂಹಗಳು ಎಂದು ಎರಡು ಬಗೆಯ ಸಮೂಹಗಳ ಬಗ್ಗೆ ಪ್ರಸ್ತಾಪಿಸಿದ್ದಾರೆ.

i) ಪ್ರಾದೇಶಿಕ ಸಮೂಹಗಳು: ಪ್ರಾದೇಶಿಕತೆ ಅಥವಾ ಭೌತಿಕ ನೆಲೆಯನ್ನು ಹೊಂದಿರುವ ಶಾಶ್ವತ ಸ್ವರೂಪದ ಸಮೂಹಗಳಾಗಿವೆ. ಉದಾ: ಹಳ್ಳಿ, ಪಟ್ಟಣ, ನಗರ ರಾಜ್ಯ, ದೇಶ, ಆದಿವಾಸಿ ಸಮುದಾಯ, ಇತ್ಯಾದಿ.

ii) ಪ್ರಾದೇಶಿಕವಲ್ಲದ ಸಮೂಹಗಳು: ಪ್ರಾದೇಶಿಕತೆಯ ನೆಲೆಯನ್ನು ಹೊಂದಿರದ ಸಮೂಹಗಳಾಗಿವೆ. ಇವು ಶಾಶ್ವತ ಅಥವಾ ಅಶಾಶ್ವತ, ಇಲ್ಲವೇ ಸಂಘಟಿತ ಅಥವಾ ಅಸಂಘಟಿತ ಸ್ವರೂಪದಲ್ಲಿರಬಹುದಾಗಿವೆ. ಉದಾ: ಜಾತಿ, ಸಾಮಾಜಿಕ ವರ್ಗ, ಜನಮಂದೆ, ಶ್ರೋತೃವೃಂದ, ಸಾರ್ವಜನಿಕ ಸಮೂಹ (Public) ಇತ್ಯಾದಿ.

**ವಂಶವಾಹಿಕ ಮತ್ತು ನೆರೆದಿರುವ ಸಮೂಹಗಳು (Genetic Groups and Congregate Groups)**

ಎಫ್.ಹೆಚ್. ಗಿಡ್ಡಿಂಗ್ಸ್ ಎಂಬುವರು ಈ ವರ್ಗೀಕರಣವನ್ನು ಪರಿಚಯಿಸಿದ್ದಾರೆ

i) ವಂಶವಾಹಿಕ ಸಮೂಹಗಳು ಅನೈಚ್ಛಿಕವಾದ ಜೈವಿಕ ನೆಲೆಯನ್ನು ಹೊಂದಿದವುಗಳಾಗಿದ್ದು ವ್ಯಕ್ತಿಗಳು ಹುಟ್ಟಿನಿಂದಲೇ ಅವುಗಳ ಸದಸ್ಯರಾಗಿರುತ್ತಾರೆ. ಉದಾ: ಕುಟುಂಬ, ಕುಲ, ಜನಾಂಗೀಯ ಸಮೂಹ, ಜಾತಿ ಹಾಗೂ ಕುಲಸಂಬಂಧೀ ಸಮೂಹಗಳು.

ii) ನೆರೆದಿರುವ ಸಮೂಹಗಳು ಯಾವುದೇ ಭೌತಿಕ ಅಥವಾ ಜೈವಿಕ ನೆಲೆಯನ್ನು ಹೊಂದಿರದೆ ವ್ಯಕ್ತಿಗಳ ಇಚ್ಛೆಯನ್ನು ಅವಲಂಭಿಸಿ ಸದಸ್ಯತ್ವವನ್ನು ಹೊಂದಿರುತ್ತವೆ. ಉದಾ: ರಾಜಕೀಯ ಪಕ್ಷಗಳು, ಕಾರ್ಮಿಕ ಸಂಘಗಳು, ಆಟದ ತಂಡಗಳು, ಸ್ನೇಹಿತರ ಸಮೂಹ, ಪ್ರೇಕ್ಷಕರ ಗುಂಪು, ಇತ್ಯಾದಿ.

**ಚಿಕ್ಕ ಸಮೂಹಗಳು ಮತ್ತು ಬೃಹತ್ ಸಮೂಹಗಳು: (Small Groups and Large Groups)**

ಗಾತ್ರವನ್ನು ಆಧಾರವಾಗಿಟ್ಟುಕೊಂಡು ಜಾರ್ಜ್ ಸಿಮ್ಮೆಲ್ ಸಮೂಹಗಳನ್ನು "ಚಿಕ್ಕ ಸಮೂಹಗಳು" (ಉದಾ: ಸ್ನೇಹಿತರ ಗುಂಪು, ಸಮವಯಸ್ಕರ ಸಮೂಹ, ಮಕ್ಕಳ ಆಟದ ಗುಂಪು, ಕೆಲಸಗಾರರ ನಡುವೆ ಕಾಣುವ ಚಿಕ್ಕ ಚಿಕ್ಕ ಮಿತ್ರರ ಕೂಟಗಳು, ಇತ್ಯಾದಿ) ಮತ್ತು "ಬೃಹತ್ ಸಮೂಹಗಳು" (ಉದಾ: ಬೃಹತ್ ಗಾತ್ರದ ರಾಜಕೀಯ ಪಕ್ಷಗಳು, ಕಾರ್ಮಿಕ ಸಂಘಗಳು, ವೃತ್ತಿ ಸಂಘಟನೆಗಳು, ಧಾರ್ಮಿಕ ಸಂಘಟನೆಗಳು ಇತ್ಯಾದಿ) ಎಂಬ ವರ್ಗೀಕರಣವನ್ನು ನೀಡಿದ್ದಾರೆ.

**ಸಂಘಟಿತ ಮತ್ತು ಅಸಂಘಟಿತ ಸಮೂಹಗಳು (Organised and Unorganised Groups)**

ಸಮೂಹಗಳ ಸಂಘಟಿತತೆಯ ಮಟ್ಟವನ್ನು ಆಧರಿಸಿ ಅವುಗಳನ್ನು ಸಂಘಟಿತ ಸಮೂಹಗಳು ಹಾಗೂ ಅಸಂಘಟಿತ ಸಮೂಹಗಳು ಎಂದು ವರ್ಗೀಕರಣೆ ಮಾಡಲಾಗಿದೆ.

i. ಸಂಘಟಿತ ಸಮೂಹಗಳು: ಸಂಘಟನಾತ್ಮಕ ಸಂರಚನೆಯನ್ನು ಹೊಂದಿದ್ದು ಇವುಗಳ ಸದಸ್ಯರ ಪಾತ್ರ

ಅಂತಸ್ತು ಅಧಿಕಾರ ಮೊದಲಾದ ಅಂಶಗಳ ಬಗ್ಗೆ ನಿಶ್ಚಿತತೆ ಇರುತ್ತದೆ. ಉದಾ: ಕಾಲೇಜು, ಬ್ಯಾಂಕು, ವಿಶ್ವವಿದ್ಯಾಲಯ, ಆಸ್ಪತ್ರೆ, ಇತ್ಯಾದಿ.

ii. ಅಸಂಘಟಿತ ಸಮೂಹಗಳಿಗೆ ಸಂಘಟನಾತ್ಮಕ ಸಂರಚನೆಯಿರುವುದಿಲ್ಲ. ಇವುಗಳಲ್ಲಿ ಸದಸ್ಯತ್ವವೆಂಬುದೇ ಇಲ್ಲದಿರಬಹುದು. ಇವು ತೀರಾ ಅಶಾಶ್ವತ ಸ್ವರೂಪದಲ್ಲಿರುವುದೇ ಹೆಚ್ಚು. ಉದಾ: ಜನಮಂದೆ, ಪ್ರೇಕ್ಷಕರ ಸಮೂಹ, ಶ್ರೋತೃವೃಂದ, ಉದ್ರಿಕ್ತ ಜನಮಂದೆ, ಇತ್ಯಾದಿ.

## ಇತರ ವರ್ಗೀಕರಣಗಳು (Other Classifications)

ಈ ಮೇಲೆ ವಿವರಿಸಲಾಗಿರುವ ವರ್ಗೀಕರಣಗಳಲ್ಲದೆ ಸಮೂಹಗಳನ್ನು ಇನ್ನೂ ಇತರ ರೀತಿಗಳಲ್ಲಿ ವರ್ಗೀಕರಿಸಲಾಗಿದ್ದು ಅವುಗಳ ಉಲ್ಲೇಖ ಈ ಕೆಳಗಿನಂತಿದೆ:

1. ನೆರೆದಿರುವ ಸಮೂಹಗಳು ಮತ್ತು ಚದುರಿದ ಸಮೂಹಗಳು (Congregated Groups and Dispersed Groups)
2. ಬಹುಸಂಖ್ಯಾತ ಮತ್ತು ಅಲ್ಪಸಂಖ್ಯಾತ ಸಮೂಹಗಳು (Majority and Minority Groups)
3. ತೆರೆದ ಸಮೂಹಗಳು ಮತ್ತು ಮುಚ್ಚಿದ ಸಮೂಹಗಳು (Open Groups and Closed Groups)
4. ಸ್ವತಂತ್ರ ಸಮೂಹಗಳು ಮತ್ತು ಅವಲಂಬಿತ ಸಮೂಹಗಳು (Independent Groups and Dependent Groups)
5. ಔಪಚಾರಿಕ ಸಮೂಹಗಳು ಮತ್ತು ಅನೌಪಚಾರಿಕ ಸಮೂಹಗಳು (Formal Groups and Informal Groups)
6. ಗತಿಶೀಲ ಸಮೂಹಗಳು ಹಾಗೂ ಜಡ ಸಮೂಹಗಳು (Mobile Groups and Immobile Groups)

ಈ ರೀತಿಯ ವರ್ಗೀಕರಣದಲ್ಲಿ ಪ್ರಾಥಮಿಕ ಸಮೂಹಗಳು ಮತ್ತು ಮಾಧ್ಯಮಿಕ ಸಮೂಹಗಳನ್ನು ವಿವರವಾಗಿ ತಿಳಿಯಲು ಅವಶ್ಯವಾಗಿದೆ.

## ಪ್ರಾಥಮಿಕ ಸಮೂಹಗಳು (Primary Groups)

### I) ಅರ್ಥ ಮತ್ತು ವ್ಯಾಖ್ಯೆಗಳು:

ಪ್ರಾಥಮಿಕ ಸಮೂಹದ ಪರಿಕಲ್ಪನೆಯು ಸಮಾಜಶಾಸ್ತ್ರೀಯ ಸಾಹಿತ್ಯಕ್ಕೆ **"ಸಿ.ಹೆಚ್.ಕೂಲೇ"** ನೀಡಿರುವ ಅಮೂಲ್ಯವಾದ ಕೊಡುಗೆ ಎನಿಸಿದೆ. ಜಗತ್ತಿನ ಇತಿಹಾಸದಲ್ಲಿ ಮಾನವ ಸಮಾಜದ ಉದ್ದಗಲಕ್ಕೂ ಕಂಡುಬರುವ ಬಹು ಪ್ರಮುಖ ಸಮೂಹಗಳೆಂದರೆ ಪ್ರಾಥಮಿಕ ಸಮೂಹಗಳೇ ಆಗಿರುತ್ತವೆ. ಇವುಗಳನ್ನು **"ಮಾನವ ಸ್ವಭಾವದ ಸಂಪೋಷಣೆಯ ತಾಣಗಳು"** ಎಂದು ಪರಿಗಣಿಸಲಾಗಿದೆ.

1. **ಸಿ. ಹೆಚ್. ಕೂಲೇ:** "ಯಾವ ಸಮೂಹದಲ್ಲಿ ವ್ಯಕ್ತಿ–ವ್ಯಕ್ತಿಗಳ ನಡುವೆ ಅನ್ಯೋನ್ಯ ಸಂಬಂಧಗಳು ಏರ್ಪಟ್ಟಿವೆಯೋ ಆ ಸಮೂಹವನ್ನು ಪ್ರಾಥಮಿಕ ಸಮೂಹವೆನ್ನಬಹುದು"

2. **ವಾಲ್ಲೇಸ್ ಮತ್ತು ವಾಲ್ಲೇಸ್:** "ಪ್ರಾಥಮಿಕ ಸಮೂಹವೆಂಬುದು ಅತ್ಯಂತ ನಿಕಟತಮವಾದ ಹಾಗೂ ಮುಖಾ–ಮುಖಿ ಸ್ವರೂಪದ ಅಂತಃ ಕ್ರಿಯೆಯನ್ನು ಆಧರಿಸಿರುವ ಸಮೂಹವಾಗಿದೆ"

**ಉದಾಹರಣೆಗಳು:** ಕುಟುಂಬ, ನೆರೆಹೊರೆ, ಮಕ್ಕಳ ಆಟದ ಸಮೂಹ, ಗೆಳೆಯರ ಬಳಗ, ಚಿಕ್ಕ ಸಮುದಾಯ.

### II) ಪ್ರಾಥಮಿಕ ಸಮೂಹದ ಲಕ್ಷಣಗಳು (Characteristics of Primary Groups) :

a. **ಪ್ರಾಥಮಿಕ ಸಂಬಂಧಗಳ ಪ್ರಾಧಾನ್ಯತೆ:** ಪ್ರಾಥಮಿಕ ಸಮೂಹಗಳಲ್ಲಿ ಮುಖಾ–ಮುಖಿ ಸಂಬಂಧಗಳ ಪ್ರಾಧಾನ್ಯತೆಯನ್ನು ಕಾಣಬಹುದು. ಸದಸ್ಯರ ನಡುವೆ ಸ್ನೇಹ ಪರತೆ, ಅನ್ಯೋನ್ಯತೆ, ಸಾಹಚರ್ಯ, ಸಹಕಾರ ಇವು ಎದ್ದು ಕಾಣುತ್ತವೆ. ಇಲ್ಲಿ ಪ್ರತಿಯೊಬ್ಬ ಸದಸ್ಯನೂ ಇನ್ನೊಬ್ಬ ಸದಸ್ಯನಿಗೆ ಪೂರ್ಣವಾಗಿ ಪರಿಚಿತನಿರುತ್ತಾನೆ. ಪ್ರತಿಯೊಬ್ಬನೂ ಇನ್ನೊಬ್ಬನ ಹೆಸರು, ಸ್ಥಾನಮಾನ, ಪಾತ್ರ, ಉದ್ಯೋಗ, ಸಂಪತ್ತು, ಶಿಕ್ಷಣಮಟ್ಟ, ಕೀರ್ತಿ, ಚಾರಿತ್ರ್ಯ ಮುಂತಾದವುಗಳನ್ನು ತಿಳಿದುಕೊಂಡಿರುತ್ತಾನೆ.

b. **ಚಿಕ್ಕ ಗಾತ್ರ:** ಪ್ರಾಥಮಿಕ ಸಮೂಹಗಳು ಗಾತ್ರದಲ್ಲಿ ಚಿಕ್ಕದಾಗಿದ್ದು, ಅವುಗಳ ಸದಸ್ಯತ್ವವು ಬಹಳ ಸೀಮಿತವಾಗಿರುತ್ತದೆ. ಸದಸ್ಯರ ಸಂಖ್ಯೆ ಕಡಿಮೆಯಾಗಿರುವುದರಿಂದಲೇ ಸದಸ್ಯರಲ್ಲಿ ಪರಸ್ಪರ ಅನ್ಯೋನ್ಯ ಮತ್ತು ವೈಯಕ್ತಿ ಸಂಪರ್ಕ–ಸಂಬಂಧಗಳು ಏರ್ಪಟ್ಟಿರುತ್ತವೆ.

c. **ಭೌತಿಕ ಸಾಮೀಪ್ಯ:** ಪ್ರಾಥಮಿಕ ಸಮೂಹಗಳ ಸದಸ್ಯರು ಒಂದೇ ಪ್ರದೇಶದಲ್ಲಿ ಒಟ್ಟಿಗೆ ಬಹಳ ಸಮಯ ಜೀವಿಸುವರು. ಎಲ್ಲರೂ ಒಟ್ಟಿಗೆ ಕೆಲಸ ಮಾಡುವುದು, ಆಟವಾಡುವುದು, ಊಟ ಮಾಡುವುದು, ನಲಿದಾಡುವುದು ಮಾಡುತ್ತಾರೆ. ಇದರಿಂದ ಪರಸ್ಪರದಲ್ಲಿ ನಿಕಟತೆ, ಸ್ನೇಹಪರತೆ ಬೆಳೆದು ಬರಲು ಅವಕಾಶವಾಗಿದೆ.

d. **ಸಮೂಹದ ಶಾಶ್ವತತೆ:** ಪ್ರಾಥಮಿಕ ಸಮೂಹಗಳು ಹೆಚ್ಚು ಸುಭದ್ರವೂ ಶಾಶ್ವತ ಸ್ವರೂಪವೂ ಆಗಿವೆ. ಸಾಮಾಜಿಕ ಸಂಬಂಧಗಳು ಹೆಚ್ಚು ಹೆಚ್ಚು ಆಳವಾಗುತ್ತಾ ಬಂದಂತೆ ಸದಸ್ಯರಲ್ಲಿ ಸ್ನೇಹಪರತೆ, ನಿಕಟತೆ ಹೆಚ್ಚುತ್ತಾ ಬಂದಂತೆ ಸಮೂಹಗಳ ಶಾಶ್ವತತೆಯು ಹೆಚ್ಚುತ್ತಾ ಬರುವುದು.

e. **ಸಮಾನ ಹಿನ್ನಲೆ:** ಪ್ರಾಥಮಿಕ ಸಮೂಹದ ಸದಸ್ಯರು ಸಾಮಾನ್ಯವಾಗಿ ಸಮಾನ ರೂಪದ ಸಾಂಸ್ಕೃತಿಕ, ಮಾನಸಿಕ ಹಾಗೂ ಸಾಮಾಜಿಕ ಹಿನ್ನಲೆಯನ್ನು ಹೊಂದಿರುತ್ತಾರೆ. ಗ್ರಾಮೀಣ ಹಾಗೂ ಆದಿವಾಸಿ ಸಮುದಾಯಗಳಲ್ಲಿ ಕಂಡುಬರುವ ಪ್ರಾಥಮಿಕ ಸಮೂಹಗಳಲ್ಲಂತೂ ಕೆಲವೊಮ್ಮೆ ಅವರ ಆರ್ಥಿಕ ಹಾಗೂ ಧಾರ್ಮಿಕ ಹಿನ್ನಲೆಯೂ ಕೂಡಾ ಒಂದೇ ಆಗಿರುತ್ತದೆ.

f. **ಹಿತಾಸಕ್ತಿಗಳಲ್ಲಿ ಸಮಭಾಗಿತ್ವ:** ಪ್ರಾಥಮಿಕ ಸಮೂಹದ ಸದಸ್ಯರು ಎಲ್ಲರಿಗಾಗಿ ಯೋಚಿಸುವರು, ದುಡಿಯುವರು, ಸಮೂಹದ ಪ್ರಗತಿಯತ್ತ, ಕಲ್ಯಾಣದತ್ತ ಎಲ್ಲರ ಗಮನವಿರುತ್ತದೆ. ಸಮೂಹದ ಕಷ್ಟಕಾರ್ಪಣ್ಯಗಳಲ್ಲಿಯೂ, ಸುಖಸಂತೋಷಗಳಲ್ಲಿಯೂ ಸದಸ್ಯರದು ಸಮಭಾಗಿತ್ವವಿರುವುದು. ಎಲ್ಲರೂ ಸಮಾನ ಉದ್ದೇಶದ ಇಡೇರಿಕೆಗಾಗಿ ಕೂಡಿ ದುಡಿಯುವರು.

## ಮಾಧ್ಯಮಿಕ ಸಮೂಹಗಳು Secondary Groups

### I) ಅರ್ಥ ಮತ್ತು ವ್ಯಾಖ್ಯೆಗಳು:

ಆಧುನಿಕ ಕೈಗಾರಿಕಾ ಮತ್ತು ನಗರ ಸಮುದಾಯಗಳಲ್ಲಿ ಮಾಧ್ಯಮಿಕ ಸಮೂಹಗಳು ಹೆಚ್ಚಿನ ಸಂಖ್ಯೆಯಲ್ಲಿ ಕಂಡುಬರುತ್ತವೆ. ಇವುಗಳನ್ನು ವಿಶೇಷಾಸಕ್ತ ಸಮೂಹಗಳು ಎಂದು ಕರೆಯಲಾಗುತ್ತದೆ. ಸಾಂಪ್ರದಾಯಕ

ಮತ್ತು ಸರಳ ಸಮಾಜಗಳು ಸಂಕೀರ್ಣ ಸಮಾಜಗಳಾಗಿ ಬದಲಾದಾಗ ಈ ರೀತಿಯ ಸಮೂಹಗಳು ಅಸ್ಥಿತ್ವಕ್ಕೆ ಬರುವುದು ಅನಿವಾರ್ಯ. ಜನರ ಅಸಂಖ್ಯಾತ ಮಾಧ್ಯಮಿಕ ಬೇಡಿಕೆಗಳನ್ನು ಇಡೇರಿಸಲು ಇವು ಸಮಾಜದಲ್ಲಿ ತಲೆ ಎತ್ತುತ್ತವೆ. ಈ ಮಾಧ್ಯಮಿಕ ಸಮೂಹಗಳು ಕರಣಾಹೀನ ಜಗತ್ತಿನ ಪ್ರತಿನಿಧಿಗಳಿದ್ದಂತೆ.

1. **ಆಗ್‌ಬರ್ನ್ ಮತ್ತು ನಿಮ್‌ಕಾಫ್ ಹೇಳುವಂತೆ:** "ಅನ್ಯೋನ್ಯತೆಯ ಕೊರತೆಯಿರುವ ಅನುಭವವನ್ನು ನೀಡುವಂತಹ ಸಮೂಹಗಳಿಗೆ ಮಾಧ್ಯಮಿಕ ಸಮೂಹ" ಎಂದು ಕರೆಯಬಹುದು.

2. **ರಿಚರ್ಡ್ ಟಿ. ಶಾಫರ್ –** "ಔಪಚಾರಿಕ, ಅವ್ಯೆಯಕ್ತಿಕ ಸ್ವರೂಪದ ಸಮೂಹವನ್ನು ಮಾಧ್ಯಮಿಕ ಸಮೂಹವೆಂದು ಕರೆಯಬಹುದು".

3. **ಸರಳ ಅರ್ಥದಲ್ಲಿ–** "ಪ್ರಾಥಮಿಕ ಸಮೂಹಗಳನ್ನು ಬಿಟ್ಟು ಉಳಿದ ಸಮೂಹಗಳೆಲ್ಲವೂ ಮಾಧ್ಯಮಿಕ ಸಮೂಹಗಳಾಗಿವ".

   **ಉದಾಹರಣೆಗಳು:** ಕಾರ್ಖಾನೆ, ವ್ಯಾಪಾರಿ ಸಂಘ, ರಾಜಕೀಯ ಪಕ್ಷಗಳು, ಕಾರ್ಮಿಕ ಸಂಘಗಳು, ಕಾಲೇಜ, ವಿಶ್ವವಿದ್ಯಾಲಯ, ಕ್ಲಬ್, ಸೈನ್ಯ, ಇತ್ಯಾದಿ.

## II) ಮಾಧ್ಯಮಿಕ ಸಮೂಹಗಳ ಲಕ್ಷಣಗಳು (Characteristics of Secondary Groups)

a. **ಮಾಧ್ಯಮಿಕ ಸಂಬಂಧಗಳ ಪ್ರಾಧಾನ್ಯತೆ:** ಮಾಧ್ಯಮಿಕ ಸಮೂಹಗಳಲ್ಲಿ ಅಪ್ರತ್ಯಕ್ಷ, ಅವ್ಯೆಯಕ್ತಿಕವಾದ, ಕರಾರಿನ ಸ್ವರೂಪದ ಸಂಬಂಧಗಳ ಪ್ರಾಧಾನ್ಯತೆಯನ್ನು ಗಮನಿಸಬಹುದು. ಉದಾಹರಣೆ: ವಿದ್ಯಾರ್ಥಿ ಮತ್ತು ಶಿಕ್ಷಕರ ಸಂಬಂಧ.

b. **ಸಮೂಹದ ಗಾತ್ರ:** ಮಾಧ್ಯಮಿಕ ಸಮೂಹಗಳು ಸಾಮಾನ್ಯವಾಗಿ ಬ್ರಹತ್‌ಗಾತ್ರವನ್ನು ಹೊಂದಿರುತ್ತವೆ. ಹೊಸದಾಗಿ ಹುಟ್ಟಿಕೊಳ್ಳುವ ಎಷ್ಟೋ ಮಾಧ್ಯಮಿಕ ಸಮೂಹಗಳು ಆರಂಭದಲ್ಲಿ ಚಿಕ್ಕ ಗಾತ್ರದಲ್ಲಿದ್ದರೂ ಕಾಲಾಂತರದಲ್ಲಿ ದೊಡ್ಡಗಾತ್ರದೊಂದಿಗೆ ಬೆಳೆದು ನಿಲ್ಲಬಹುದು. ರೆಡ್‌ಕ್ರಾಸ್, ರೋಟರಿ ಕ್ಲಬ್, ರಾಜಕೀಯ ಪಕ್ಷಗಳು, ಕಾರ್ಮಿಕ ಸಮೂಹಗಳಂತಹ ಮಾಧ್ಯಮಿಕ ಸಮೂಹಗಳ ಸದಸ್ಯರು ಸಾವಿರ, ಲಕ್ಷಗಟ್ಟಲೆ ಇರುತ್ತಾರೆ.

c. **ಭೌತಿಕ ಸಾಮೀಪ್ಯದ ಅಭಾವ:** ಪ್ರಾಥಮಿಕ ಸಮೂಹದಲ್ಲಿ ಸದಸ್ಯರು ಭೌತಿಕವಾಗಿ ಸನಿಹದಲ್ಲಿ ವಾಸಿಸುತ್ತಿರುತ್ತಾರೆ. ಆದರೆ ಮಾಧ್ಯಮಿಕ ಸಮೂಹದ ಸದಸ್ಯರು ವಿಶಾಲ ಭೂ ಪ್ರದೇಶದಲ್ಲಿ ಕೆಲವೊಮ್ಮೆ ಹರಡಿಕೊಂಡಿರುತ್ತಾರೆ. ಅವುಗಳ ಸದಸ್ಯರು ಒಂದೇ ಪ್ರದೇಶದವರಾಗಿರಬೇಕಾದ ಅಗತ್ಯವೂ ಇಲ್ಲ.

d. **ಸದಸ್ಯತ್ವದ ಸ್ವರೂಪ:** ಮಾಧ್ಯಮಿಕ ಸಮೂಹದ ಸದಸ್ಯತ್ವವು ನಮಗೆ ಹುಟ್ಟಿನಿಂದಲೇ ಪ್ರಾಪ್ತವಾಗುವುದಿಲ್ಲ. ಸಮೂಹದ ಸದಸ್ಯತ್ವ ನಮಗೆ ಕಡ್ಡಾಯವೇನಲ್ಲ. ಅವುಗಳನ್ನು ಸೇರಲು ಅಥವಾ ಬಿಡಲು ನಾವು ಸ್ವಂತಂತ್ರರಿರುವುದರಿಂದ ಮಾಧ್ಯಮಿಕ ಸಮೂಹದ ಸದಸ್ಯತ್ವವು ಐಚ್ಛಿಕವಾದುದು.

e. **ನಿಶ್ಚಿತ ಗುರಿ ಅಥವಾ ಆಸಕ್ತಿ:** ಮಾಧ್ಯಮಿಕ ಸಮೂಹಗಳು ರಚನೆಯಾಗಿರುವುದೇ ಕೆಲವು ನಿಶ್ಚಿತ ಉದ್ದೇಶಗಳ ಅಥವಾ ಹಿತಾಸಕ್ತಿಗಳ ಪೂರೈಕೆಗಾಗಿ, ಉದಾ: ರಾಜಕೀಯ ಆಸಕ್ತಿಗಳ ಪೂರೈಕೆಗಾಗಿ ರಾಜಕೀಯ ಪಕ್ಷಗಳು, ಧಾರ್ಮಿಕ ಆಸಕ್ತಿಗಳ ಈಡೇರಿಕೆಗಾಗಿ ಧಾರ್ಮಿಕ ಸಂಘಟನೆಗಳು, ಕಾರ್ಮಿಕರ ಹಿತಾಸಕ್ತಿಗಳ ರಕ್ಷಣೆಗಾಗಿ ಕಾರ್ಮಿಕ ಸಂಘಗಳು ಅಸ್ಥಿತ್ವಕ್ಕೆ ಬಂದಿವೆ. ಆದ್ದರಿಂದಲೇ ಅವುಗಳನ್ನು "ವಿಶೇಷಾಸಕ್ತಿ ಸಮೂಹಗಳು" ಎಂದು ಕರೆಯಲಾಗಿದೆ.

f. **ಸಮೂಹದ ನಿಯಂತ್ರಣದ ಸ್ವರೂಪ:** ಮಾಧ್ಯಮಿಕ ಸಮೂಹಗಳು ಬ್ರಹತ್‌ಗಾತ್ರ ಹೊಂದಿದ್ದರಿಂದ ಅನೌಪಚಾರಿಕ ನಿಯಂತ್ರಣದ ಸಾಧನಗಳು ವಿಫಲವಾಗಬಹುದು. ಆದ್ದರಿಂದ ಸಮೂಹದ ಸದಸ್ಯರ ವರ್ತನೆಯನ್ನು ಪರಿಣಾಮಕಾರಿಯಾಗಿ ನಿಯಂತ್ರಿಸಲು ಔಪಚಾರಿಕ ಸಾಧನಗಳಾದ ಕಾನೂನು, ಸಂವಿಧಾನ, ಸಾರ್ವಜನಿಕ ಅಭಿಪ್ರಾಯ, ರಾಜಕೀಯ ಸಿದ್ಧಾಂತಗಳನ್ನು ಬಳಸಲಾಗುತ್ತದೆ.

## ಮಾಧ್ಯಮಿಕ ಮಸೂಹಗಳ ವರ್ಗೀಕರಣ (Classification of secondary groups)

ಮಾಧ್ಯಮಿಕ ಸಮೂಹಗಳನ್ನು ಅಧಾರವಾಗಿ 2 ಪ್ರಕಾರಗಳಾಗಿ ವಿಂಗಡಿಸಲಾಗಿದೆ.

1. ಸಂಸ್ಕೃತಿಯ ಆಧಾರಿತ ಸಂಘಟಿತ ಸಮೂಹಗಳು
   * ಅಂತಸ್ತು ಅಧರಿತ ಸಮೂಹಗಳು – ಸಾಮಾಜಿಕ ವರ್ಗಗಳು, ಜಾತಿ ಸಮೂಹಗಳು
   * ರಾಷ್ಟ್ರೀಯತೆಯ ಸಮೂಹಗಳು– ರಾಷ್ಟ್ರ ಮತ್ತು ರಾಜ್ಯಗಳು
   * ವಾಸಸ್ಥಳ ಸಮೂಹಗಳು – ಸಮುದಾಯಗಳು, ನಗರಗಳು, ನೆರೆಹೊರೆ ಮತ್ತು ಪ್ರಾದೇಶಿಕ ಸಮೂಹಗಳು
   * ಆಸಕ್ತ ಸಮೂಹಗಳು ಧಾರ್ಮಿಕ ಸಂಘಟನೆಗಳು, ಕಾರ್ಮಿಕ ಸಂಘಟನೆ ಮುಂತಾದವು
2. ಸಂಸ್ಕೃತಿ ಆಧಾರವಲ್ಲದ ಸಮೂಹಗಳು
   * ಜೈವಿಕ ಆಧಾರ ಸಮೂಹಗಳು –ವಯಸ್ಸು, ಲಿಂಗ ಮತ್ತು ಜನಾಂಗೀಯ ಸಮೂಹಗಳು
   * ಸಾಮಾನ್ಯವಾದ ಸಮೂಹಗಳು – ಜನಮಂದೆ, ಪ್ರೇಕ್ಷಕರು, ಉದ್ರಿಕ್ತ ಜನಮಂದೆ ಮುಂತಾದವು

## ಮಾಧ್ಯಮಿಕ ಸಮೂಹಗಳ ಕಾರ್ಯಗಳು;– Functions of Secondary Groups):

ಆಧುನಿಕ ಯುಗದಲ್ಲಿ ಮಾಧ್ಯಮಿಕ ಸಂಸ್ಥೆಗಳು ಕಾರ್ಯವಿಧಾನಗಳನ್ನು ಕಳೆಕಂಡ ಅಂಶಗಳ ಮೂಲಕ ವಿಶ್ಲೇಷಿಸಿಲಾಗಿದೆ.

1. ಮಾನವನ ವಿವಿಧ ಬೇಡಿಕೆಗಳನ್ನು ಈಡೇರಿಸಲು ಸಹಾಯಕವಾಗಿದೆ.
2. ಸಾಮಾಜಿಕ ಪರಿವರ್ತನೆ ಮತ್ತು ಸಾಮಾಜಿಕ ಜಾಗೃತಿಗಳ ಬಗ್ಗೆ ಅರಿವು ಮೂಡಿಸುತ್ತದೆ.
3. ಶಿಕ್ಷಣ ಮತ್ತು ಕಾನೂನಿನ ಮೂಲಕ ಮೂಢನಂಬಿಕೆ ಮತ್ತು ಅಂಧಕಾರ ಭಾವನೆಗಳನ್ನು ನಿರ್ಮೂಲನೆ ಮಾಡುತ್ತದೆ.
4. ಸಾಮಾಜಿಕ ಚಲನೆಯನ್ನು ಹೆಚ್ಚಿಸುತ್ತದೆ.

## ಸಂಘಟಿತ ಸಮೂಹಗಳು (Organised Groups):

### I) ಅರ್ಥ:

ಸಂಘಟಿತ ಸಮೂಹಗಳನ್ನು ಸಂಘಗಳು ಅಥವಾ ಸಾಂಸ್ಥಿಕ ಸಮೂಹಗಳು ಎಂದೂ ಕರೆಯಲಾಗುತ್ತದೆ. ಆಧುನಿಕ ಸಂಕೀರ್ಣ ಮತ್ತು ನಾಗರೀಕ ಸಮಾಜಗಳಲ್ಲಿ ಸಂಘಟಿತ ಸಮೂಹಗಳನ್ನು ಅತ್ಯಧಿಕ ಸಂಖ್ಯೆಯಲ್ಲಿ ಕಾಣುತ್ತೇವೆ. ಮಾನವನು ತನ್ನ ಅನನ್ಯ ಆಸಕ್ತಿಗಳನ್ನು ಇಡೇರಿಸಿಕೊಳ್ಳಲು ಹಲವು ರೀತಿಯ ಸಮೂಹಗಳನ್ನು

ಸ್ಥಾಪಿಸಿರುವನು. "ಸಮೂಹಗಳು ನಿಶ್ಚಿತ ಉದ್ದೇಶವನ್ನು ಒಳಗೊಂಡಿದ್ದು, ಸ್ಪಷ್ಟವಾದ ಕಾರ್ಯವಿಧಾನವನ್ನು ಮತ್ತು ನಿಯಮಗಳನ್ನು ಹೊಂದಿದ್ದು, ಶ್ರಮ ವಿಭಜನೆಯ ಹಾಗೂ ಅಧಿಕಾರ ಹಂಚಿಕೆಯ ತತ್ವದ ಮೇಲೆ ರಚಿತವಾಗಿದ್ದು, ಯೋಜನಾಬದ್ದವಾಗಿ ಹಾಗೂ ಸುವ್ಯವಸ್ಥಿತವಾಗಿ ರೂಪುಗೊಂಡಿರುತ್ತವೆ. ಇವುಗಳನ್ನು ಸಂಘಟಿತ ಸಮೂಹಗಳು" ಎಂದು ಕರೆಯುತ್ತೇವೆ. ಸಮಾಜ ಜೀವನದ ಆರ್ಥಿಕ, ರಾಜಕೀಯ, ಧಾರ್ಮಿಕ, ಶೈಕ್ಷಣಿಕ, ವೈಜ್ಞಾನಿಕ ಮುಂತಾದವುಗಳು ಎಲ್ಲಾ ಕ್ಷೇತ್ರಗಳಲ್ಲಿಯೇ ಅವು ಇಂದು ಅನಿವಾರ್ಯವಾಗಿವೆ.

**ಉದಾಹರಣೆಗಳು:** ಶಾಲೆ, ಕಾಲೇಜು, ವಿಶ್ವವಿದ್ಯಾಲಯ, ಕಾರ್ಖಾನೆ, ಆಸ್ಪತ್ರೆ, ರಾಜಕೀಯ ಪಕ್ಷಗಳು, ಕಾರ್ಮಿಕ ಸಂಘಟನೆ, ವೃತ್ತಿ ಸಂಘಗಳು, ಧಾರ್ಮಿಕ ಸಂಘಟನೆಗಳು, ಬ್ಯಾಂಕ್, ಕ್ಲಬ್, ಅಂತರಾಷ್ಟ್ರೀಯ ಸಂಘಟನೆಗಳು, ರಾಜ್ಯ, ಕುಟುಂಬ, ಇತ್ಯಾದಿ.

### II) ಸಂಘಟಿತ ಸಮೂಹಗಳ ಲಕ್ಷಣಗಳು:

a. **ನಿಶ್ಚಿತ ಉದ್ದೇಶ:** ಸಂಘಟಿತ ಸಮೂಹಗಳು ನಿಶ್ಚಿತ ಉದ್ದೆಶ ಅಥವಾ ಗುರಿಗಳ ಪೂರೈಕೆಗಾಗಿಯೇ ಸ್ಥಾಪಿತವಾದವುಗಳಾಗಿವೆ. ಉದಾ:– ಶಾಲೆ, ಕಾಲೇಜು, ವಿಶ್ವವಿದ್ಯಾಲಯ ಶಿಕ್ಷಣ ನೀಡಲು ಕಾರ್ಮಿಕ ಸಂಘಗಳು ಕಾರ್ಮಿಕರ ಹಕ್ಕು ಮತ್ತು ಹಿತಾಸಕ್ತಿಗಳನ್ನು ಕಾಯ್ದುಕೊಳ್ಳಲು ಸ್ಥಾಪಿತವಾಗಿವೆ.

b. **ಸಂಘಟನಾ ವ್ಯವಸ್ಥೆ:** ಸಂಘಟಿತ ಸಮೂಹಗಳು ಯೋಜನಾಬದ್ಧವಾಗಿರುತ್ತವೆ. ಇಲ್ಲಿ ಸದಸ್ಯರ ಸ್ಥಾನಮಾನ, ಪಾತ್ರ, ಹೊಣೆಗಾರಿಕೆ, ಅಧಿಕಾರ, ಕಾರ್ಯಕ್ರಮಗಳು, ಮೊದಲಾದವುಗಳ ಬಗ್ಗೆ ಸ್ಪಷ್ಟತೆಯಿರುತ್ತದೆ. ಈ ಸಮೂಹಗಳಿಗೆ ವೈಚಾರಿಕತೆ ಮತ್ತು ವಾಸ್ತವಿಕತೆಯ ಹಿನ್ನಲೆಯಿರುವುದರಿಂದ ಇವು ಹೆಚ್ಚು ಸಮರ್ಥವಾಗಿರುತ್ತವೆ.

c. **ಸಮೂಹದ ಗಾತ್ರ:** ಸಂಘಟಿತ ಸಮೂಹಗಳು ವೈವಿಧ್ಯಮಯ ಗಾತ್ರವನ್ನು ಹೊಂದಿದ್ದು ಕೆಲವು ಗಾತ್ರದಲ್ಲಿ ಚಿಕ್ಕದಾಗಿರಲೂಬಹುದು ಮತ್ತೆ ಕೆಲವು ಬ್ರಹತ್ ಗಾತ್ರವನ್ನು ಹೊಂದಿರಲೂಬಹುದು. ಉದಾ: ಕುಟುಂಬ ಚಿಕ್ಕದಾಗಿದ್ದು, ರಾಜಕೀಯ ಪಕ್ಷವೊಂದು ಲಕ್ಷಾಂತರ ಸದಸ್ಯರನ್ನು ಹೊಂದಿರಬಹುದು.

d. **ಸಾಮಾಜಿಕ ಸಂಬಂಧಗಳ ಸ್ವರೂಪ:** ಸಾಮಾಜಿಕ ಅಂತಕ್ರಿಯೆ ಅನೇಕ ರೂಪಗಳಲ್ಲಿದ್ದು ಮುಖ್ಯವಾಗಿ ಸಮೂಹದ ಸ್ವರೂಪ ಮತ್ತು ಉದ್ದೇಶವನ್ನು ಆಧರಿಸುತ್ತದೆ. ಅದು ಪ್ರತ್ಯಕ್ಷವಾಗಿ, ಅನ್ಯೋನ್ಯವಾಗಿ ವೈಯಕ್ತಿಕ ನೆಲೆಯಲ್ಲಿ ಸ್ಥಾಪನೆಯಾಗಿದ್ದು ಭಾವನಾತ್ಮಕವಾಗಿಯೂ ಇರಬಹುದು ಅಥವಾ ಪರೋಕ್ಷವಾಗಿ, ಅವೈಯಕ್ತಿಕ ನೆಲೆಯಲ್ಲಿ ಸ್ಥಾಪನೆಯಾಗಿದ್ದು, ವೈಚಾರಿಕತೆ ಮತ್ತು ಸ್ವಾರ್ಥ ಸಾಧನೆಗಳ ಗುಣವನ್ನು ಹೊಂದಿರಬಹುದು. ಅಂದರೆ ಅವು ಪ್ರಾಥಮಿಕ ಅಥವಾ ಮಾಧ್ಯಮಿಕ ಸಮೂಹಗಳಂತೆ ಕಾಣಿಸಿಕೊಳ್ಳಬಹುದು.

e. **ಶಾಶ್ವತ ಸ್ವರೂಪ:** ಸಂಘಟಿತ ಸಮೂಹಗಳು ಬಹುಕಾಲ ಬದುಕುವ ಸಾಮರ್ಥ್ಯವನ್ನು ಹೊಂದಿರುತ್ತವೆ. ಕೆಲವು ರಾಜಕೀಯ ಪಕ್ಷಗಳು ಮತ್ತು ಸಾಂಸ್ಕೃತಿಕ ಸಂಘಟನೆಗಳು ಶತಮಾನಗಳ ಇತಿಹಾಸವನ್ನು ಹೊಂದಿರುವುದಿದೆ. ಸಮೂಹಗಳ ಶಾಶ್ವತ ಸ್ವರೂಪದಿಂದ ಅವುಗಳ ವಿಶ್ವಾಸಾರ್ಹತೆ ಹೆಚ್ಚುತ್ತದೆಯಲ್ಲದೆ ಸದಸ್ಯರು ತಮ್ಮ ಆಸಕ್ತಿಗಳನ್ನು ಪೂರೈಸಿಕೊಳ್ಳಲು ಸಾಧ್ಯವಾಗುವುದು.

f. **ಸಮೂಹದ ರಚನಾ ಸ್ವರೂಪ:** ಸಂಘಟಿತ ಸಮೂಹಗಳು ಔಪಚಾರಿಕ ಅಥವಾ ಅನೌಪಚಾರಿಕ ಸ್ವರೂಪವನ್ನು ಹೊಂದಿರಬಹುದು. ಅವು ಕುಟುಂಬ, ಹಳ್ಳಿ, ಗಿರಿಜನ ಸಮೂಹಗಳಂತೆ ಅನೌಪಚಾರಿಕವಾಗಿದ್ದು

ಸರಳವಾಗಿರಬಹುದು ಅಥವಾ ಕಾರ್ಖಾನೆ, ವಿಶ್ವವಿದ್ಯಾಲಯ, ಬ್ಯಾಂಕುಗಳಂತೆ ಔಪಚಾರಿಕವಾಗಿ ಮತ್ತು ಸಂಕೀರ್ಣವಾಗಿಯೂ ಇರಬಹುದು.

### ಅಸಂಘಟಿತ ಸಮೂಹಗಳು (Unorganised Groups):

**I) ಅರ್ಥ:**

ಯಾವುದೇ ರೀತಿಯ ಸಂಘಟನಾತ್ಮಕ ವ್ಯವಸ್ಥೆಯನ್ನು ಹೊಂದಿರದೇ ಇರುವ ಸಮೂಹಗಳನ್ನು ಅಸಂಘಟಿತ ಸಮೂಹಗಳೆಂದು ಕರೆಯಬಹುದು. "ಅಸಂಘಟಿತ ಸಮೂಹಗಳು ಯಾವುದೇ ಯೋಜನೆ-ಯೋಚನೆಗಳಿಗೆ ಒಳಪಟ್ಟಿರದ ನಿಶ್ಚಿತ ಉದ್ದೇಶ ಅಥವಾ ಗುರಿಯನ್ನು ಹೊಂದಿರದ, ಶ್ರಮವಿಭಜನೆ ಮತ್ತು ಅಧಿಕಾರ ಹಂಚಿಕೆಯ ನಿಯಮಗಳಿಗೆ ಒಳಪಡದ, ಅಶಾಶ್ವತ ಮತ್ತು ಅಸ್ಥಿರ ರೂಪದ ಸಮೂಹಗಳಾಗಿವೆ." ಅವುಗಳಿಗೆ ನಿಶ್ಚಿತ ರೂಪವೆಂಬುದೇ ಇಲ್ಲ. ಅವುಗಳು ಹುಟ್ಟು ಕಾರ್ಯ ಮತ್ತು ಅಸ್ತಿತ್ವದ ಬಗ್ಗೆ ಖಚಿತವಾಗಿ ಹೇಳಲು ಸಾಧ್ಯವಿಲ್ಲ. ಅಸಂಘಟಿತ ಸಮೂಹಗಳಲ್ಲಿ ವ್ಯಕ್ತಿಗಳ ಅಂತಸ್ತು ಮತ್ತು ಪಾತ್ರಗಳ ಬಗ್ಗೆ ಯಾವುದೇ ಖಚಿತತೆ ಇರುವುದಿಲ್ಲ. ಆದಾಗ್ಯೂ ಅವುಗಳ ಪಾತ್ರ ಬಹಳ ಮುಖ್ಯವಾಗಿದೆ. ಉದಾಹರಣೆ: ಜನಮಂದೆ, ಉದ್ರಿಕ್ತ ಜನಸ್ತೋಮ, ಪ್ರೇಕ್ಷಕ ಸಮೂಹ, ಸಾರ್ವಜನಿಕರು, ವೀಕ್ಷಕ ವರ್ಗ, ಇತ್ಯಾದಿ.

**II) ಅಸಂಘಟಿತ ಸಮೂಹಗಳ ಲಕ್ಷಣಗಳು:**

1. **ಸಂಘಟನೆಯಿಲ್ಲದಿರುವುದು:** ಅಸಂಘಟಿತ ಸಮೂಹ ಹೆಸರೇ ಸೂಚಿಸುವಂತೆ ಯಾವುದೇ ರೀತಿಯ ಸಂಘಟನಾ ವ್ಯವಸ್ಥೆಯನ್ನು ಹೊಂದಿರುವುದಿಲ್ಲ. ಇಲ್ಲಿ ಮಾನವ ಸಂಬಂಧಗಳು ವ್ಯವಸ್ಥಿತವಾಗಿ ಸಂಘಟಿಸಲ್ಪಟ್ಟಿರುವುದಿಲ್ಲ. ಇವುಗಳು ನಿರ್ದಿಷ್ಟ ನಾಯಕರನ್ನಾಗಲಿ, ಸ್ಪಷ್ಟ ಧ್ಯೆಯೋದ್ದೇಶಗಳನ್ನಾಗಲಿ ಸ್ಪಷ್ಟ ನಿಯಮಗಳನ್ನಾಗಲಿ, ಹೊಂದಿರುವುದಿಲ್ಲ.

2. **ಹಠಾತ್ತನೆ ಉಗಮವಾಗುವಂಥವುಗಳು:** ಅಸಂಘಟಿತ ಸಮೂಹಗಳನ್ನು ಯಾರೂ ಉದ್ದೇಶ ಪೂರ್ವಕವಾಗಿ, ನೀಲಿನಕ್ಷೆಗಳನ್ನು ಹಾಕಿಕೊಂಡು, ಪೂರ್ವ ಯೋಜನೆಗಳ ಸಹಾಯದಿಂದ ಸೃಷ್ಟಿಸಿರುವುದಿಲ್ಲ. ನಮ್ಮ ವ್ಯವಸ್ಥಿತ ಪ್ರಯತ್ನಗಳಿಂದ ಇವು ಸ್ಥಾಪನೆಯಾಗಿರದೇ ತಮ್ಮಷ್ಟಕ್ಕೆ ತಾವೇ ಕಾಣಿಸಿಕೊಳ್ಳುತ್ತವೆ. ಮತ್ತು ಅಷ್ಟೇ ಶೀಘ್ರವಾಗಿ ಮರೆಯಾಗುತ್ತವೆ.

3. **ಅಲ್ಪಕಾಲಿಕ ಅಸ್ಥಿತ್ವ:** ಅಸಂಘಟಿತ ಸಮೂಹಗಳ ಜೀವತಾವಧಿ ಅತೀ ಕಡಿಮೆ. ಇವುಗಳು ಎಷ್ಟು ಶೀಘ್ರವಾಗಿ ಅಸ್ಥಿತ್ವಕ್ಕೆ ಬರುತ್ತವೆಯೋ ಅಷ್ಟೇ ವೇಗವಾಗಿ ಮಾಯವಾಗುತ್ತವೆ. ಅವುಗಳಿಗೆ ಜಾಗರೂಕವಾಗಿ ಯೋಚಿಸಲ್ಪಟ್ಟ ಉದ್ದೇಶವಿರುವುದಿಲ್ಲ. ಸಮೂಹದ ಸಮಾನ ಗುರಿಗಳನ್ನು ಸಾಧಿಸುವತ್ತ ಅವುಗಳಿಗೆ ಗಮನವೂ ಇರುವುದಿಲ್ಲ.

4. **ಸುಸಂಘಟಿತವಾಗಿರದ ಸಾಮಾಜಿಕ ಅಂತಕ್ರಿಯೆ:** ಈ ಸಮೂಹಗಳಲ್ಲಿ ಸಾಮಾಜಿಕ ಅಂತಕ್ರಿಯೆ ಸಂಘಟಿತವಾಗಿರುವುದಿಲ್ಲ. ಇದರಿಂದಾಗಿ ಸದಸ್ಯರ ವರ್ತನೆಯಲ್ಲಿ ಅನಿಶ್ಚಿತತೆ ಮತ್ತು ಅನಿರ್ಧಿಷ್ಟತೆಯಿರುತ್ತದೆ. ಯಾರೂ ಯಾವ ಸಂಧರ್ಭದಲ್ಲಿ ಹೇಗೆ ವರ್ತಿಸುತ್ತಾರೆಂದು ಭವಿಷ್ಯ ನುಡಿಯಲು ಸಾಧ್ಯವಿಲ್ಲ. ಉದಾ: ಜನಸಂದಣೆ, ಜನರು ಇದೇ ರೀತಿ ವರ್ತಿಸುತ್ತಾರೆಂದು ಊಹಿಸಲು ಬರುವುದಿಲ್ಲ.

## 2.7 ಸಾಮಾಜಿಕ ನಿಯಂತ್ರಣ (Social Control)

### ಅರ್ಥ ಮತ್ತು ವ್ಯಾಖ್ಯೆಗಳು:

ಮಾನವ ಸಮಾಜವು ನಿರಾತಂಕವಾಗಿರಬೇಕಾದರೆ ಮತ್ತು ಸುಗಮವಾಗಿ ಕಾರ್ಯನಿರ್ವಹಿಸಬೇಕಾದರೆ ಸಮಾಜದಲ್ಲಿ ಸಾಮರಸ್ಯ, ಐಕ್ಯಭಾವ ಮತ್ತು ಕ್ರಮಬದ್ಧವಾದ ವ್ಯವಸ್ಥೆ ಇರಬೇಕು. ಸಮೂಹ ವ್ಯಕ್ತಿ ಅಥವಾ ವ್ಯಕ್ತಿಗಳ ಮೇಲೆ ಹೊಂದಿರುವ ನಿಯಂತ್ರಣವನ್ನು ಸಮೂಹ ಸಮ್ಮತ ನಡುವಳಿಕೆಗೆ ಅನುಸಾರವಾಗಿ ವರ್ತಿಸುವಂತೆ ಮಾಡುವ ಪ್ರಯತ್ನವನ್ನು "ಸಾಮಾಜಿಕ ನಿಯಂತ್ರಣ" ಎನ್ನಬಹುದು. **ಈ. ಎ. ರಾಸ್** ಎಂಬ ಅಮೇರಿಕದ ಸಮಾಜಶಾಸ್ತ್ರಜ್ಞ 1901 ರಲ್ಲಿ ಪ್ರಕಟಿಸಿದ ತನ್ನ ಗ್ರಂಥವಾದ "**Social Control**" ದಲ್ಲಿ ಮೊದಲ ಬಾರಿಗೆ ಸಾಮಾಜಿಕ ನಿಯಂತ್ರಣ ಎಂಬ ಪರಿಕಲ್ಪನೆಯನ್ನು ಬಳಕೆಗೆ ತಂದರು. ಸಮಾಜವು ಕಾನೂನು, ಧರ್ಮ, ನೈತಿಕತೆ, ಸೂಚನೆಗಳು, ಆದರ್ಶಗಳು ಮುಂತಾದವುಗಳ ಮೂಲಕ ವ್ಯಕ್ತಿಗಳ ನಡತೆಯನ್ನು ನಿಯಂತ್ರಿಸುವುದರೊಂದಿಗೆ ಸಾಮಾಜಿಕ ಹಿತವನ್ನು ಸಾಧಿಸುವುದು ಎಂದು ಆತನ ಅಭಿಪ್ರಾಯಪಟ್ಟಿರುವರು.

1. **ಈ. ಎ. ರಾಸ್** – "ಒಪ್ಪಿತವಾದ ವರ್ತನೆಯ ಪ್ರಮಾಣಿಕಗಳಿಗೆ ಅನುಸಾರವಾಗಿ ಸಮಾಜದ ಸದಸ್ಯರುಗಳು ನಡೆದುಕೊಳ್ಳುವಂತೆ ಮಾಡುವ ತಂತ್ರ ಸಾಧನಗಳ ವ್ಯವಸ್ಥೆಯನ್ನು ಸಾಮಾಜಿಕ ನಿಯಂತ್ರಣ" ಎನ್ನಬಹುದು.

2. **ಆಗ್‌ಬರ್ನ್ ಮತ್ತು ನಿಮ್‌ಕಾಫ್** – "ಸಾಮಾಜಿಕ ಪ್ರಕ್ರಮ ಮತ್ತು ಸ್ಥಾಪಿತ ನಿಯಮಗಳನ್ನು ಕಾಯ್ದುಕೊಳ್ಳಲು ಸಮಾಜವು ಬಳಸುವ ಒತ್ತಡದ ನಮೂನೆಗಳಿಗೆ ಸಾಮಾಜಿಕ ನಿಯಂತ್ರಣ" ಎನ್ನಬಹುದು.

3. **ಜೆ. ಎಸ್. ರೌಸೆಕ್** – "ಸಾಮಾಜಿಕ ನಿಯಂತ್ರಣ" ವೆಂಬುದು ಸಮೂಹದ ಜೀವನ ಮೌಲ್ಯಗಳಿಗೆ ಹಾಗೂ ಆಚರಣೆಗಳಿಗೆ ಅನುಸಾರವಾಗಿ ನಡೆದುಕೊಳ್ಳುವಂತೆ ವ್ಯಕ್ತಿಗಳಿಗೆ ತಿಳಿಯ ಹೇಳಲು, ಅವರ ಮನವಲಿಸಲು ಅಥವಾ ಕಡ್ಡಾಯವಾಗಿ ಒಡಂಬಡಿಸಲು ಬಳಸಲಾಗುವ ಎಲ್ಲಾ ಅಯೋಜಿತ ಅಥವಾ ಯೋಜಿತ ಪ್ರಕ್ರಿಯೆಗಳನ್ನು ಸೂಚಿಸುವಂತಹ ಸಾಂಘಿಕ ಪದವಾಗಿದೆ".

4. **ಆರ್. ರಾಬರ್ಟ್ಸ್**– "ಯಾವುದೇ ಸಮಾಜದಲ್ಲಿನ ಮಾನವ ವರ್ತನೆಯನ್ನು ನಿಯಂತ್ರಿಸಲು ಬಳಸುವ ಸಾಧನೆಗಳನ್ನು ಮತ್ತು ತಂತ್ರಗಳನ್ನು ಸಾಮಾಜಿಕ ನಿಯಂತ್ರಣ" ಎನ್ನಬಹುದು.

### ಸಾಮಾಜಿಕ ನಿಯಂತ್ರಣದ ಸ್ವರೂಪ (Nature of Social Control)

1. **ಸಾಮಾಜಿಕ ನಿಯಂತ್ರಣವು ಸಾರ್ವತ್ರಿಕವಾದುದು (Social Control is Universal):** ಸಮಾಜವಿದ್ದೆಡೆಯಲ್ಲೆಲ್ಲಾ ಸಾಮಾಜಿಕ ನಿಯಂತ್ರಣವಿದೆ. ಅನಾಗರಿಕ, ಬರ್ಬರ ಸಮಾಜಗಳಲ್ಲೂ ಅದು ಕಾಣಬರುವುದು. ಆದರೆ ನಿಯಂತ್ರಣದ ವಿಧಿ–ವಿಧಾನಗಳು, ರೀತಿ–ನೀತಿಗಳು ಮಾತ್ರ ಸಮಾಜದಿಂದ ಸಮಾಜಕ್ಕೆ ಬೇರೆಯಾಗಬಹುದು.

2. **ಸಾಮಾಜಿಕ ನಿಯಂತ್ರಣವು ಒಂದು ಬಗೆಯ ಪ್ರಭಾವವನ್ನು ಸೂಚಿಸುವುದು. {Social Control Denotes Some Kind of Influence}:** ಇಲ್ಲಿ ವರ್ಚಸ್ಸು ಎಂಬುದು ಹಲವಾರು ರೀತಿಗಳಲ್ಲಿ ಹಾಗೂ ಹಲವಾರು ವಿಧಾನಗಳಲ್ಲಿ ಕಂಡುಬರಬಹುದು. ಅದು ಸಾರ್ವಜನಿಕ ಅಭಿಪ್ರಾಯ, ಮತಧರ್ಮ, ನೈತಿಕತೆ, ತತ್ವಾದರ್ಶ, ನಾಯಕತ್ವ, ಕಾನೂನು, ಬಲಪ್ರಯೋಗ ಮತ್ತಿತರ ಸಾಧನಗಳ ಮೂಲಕ ಬಳಸಲ್ಪಡಹುಬುದು.

3. **ಸಮಾಜ ಅಥವಾ ಸಮುದಾಯವು ಬೀರುವ ಪ್ರಭಾವವನ್ನು ಮಾತ್ರ ಸಾಮಾಜಿಕ ನಿಯಂತ್ರಣ ಎನ್ನಬಹುದಾಗಿದೆ. {Influence is Exerted by the Society OR Community}:** ಈ ವರ್ಚಸ್ಸನ್ನು ಹಲವಾರು ಮಟ್ಟಗಳಲ್ಲಿ

ಕಾಣಬಹುದು. ಇಡೀ ಸಮಾಜವು ತಾನು ಒಳಗೊಂಡಿರುವ ಎಲ್ಲಾ ಚಿಕ್ಕ ಸಮೂಹಗಳು, ಉಪಗುಂಪುಗಳು [Sub-groups] ಮತ್ತು ವ್ಯಕ್ತಿಗಳ ಮೇಲೆ ಬೀರಬಹುದಾದ ವರ್ಚಸ್ಸನ್ನು ಅದು ಸಂಕೇತಿಸಬಹುದು. ಅಥವಾ ಪ್ರಬಲ ಸಮೂಹವೊಂದು ಹಲವಾರು ಚಿಕ್ಕ ಸಮೂಹಗಳ ಮೇಲೆ ಬೀರುವ ಪ್ರಭಾವವನ್ನು ಅದು ಸೂಚಿಸಬಹುದು. ಅದೇ ರೀತಿಯಲ್ಲಿ ಯಾವುದೇ ಸಮೂಹವು ತನ್ನ ಸದಸ್ಯರುಗಳ ಮೇಲೆ ಬೀರುವ ಪ್ರಭಾವವನ್ನೂ ಅದು ಒಳಗೊಂಡಿರಬಹುದು. ಕೆಲವೊಮ್ಮೆ ಕೆಲವು ವಿಶಿಷ್ಟ ವ್ಯಕ್ತಿಗಳು ಸಮೂಹದ ಸಾಮಾನ್ಯ ಸದಸ್ಯರುಗಳ ಮೇಲೆ ಬೀರಬಹುದಾದ ಪ್ರಭಾವವನ್ನೂ ಅದು ಸಂಕೇತಿಸಬಹುದು.

4. **ಸಾಮಾಜಿಕ ಪ್ರಭಾವವನ್ನು ಎಲ್ಲಾ ವ್ಯಕ್ತಿಗಳ ಅಥವಾ ಸಮೂಹದ ಸಮಗ್ರ ಕಲ್ಯಾಣದ ದೃಷ್ಟಿಯಿಂದ ಬೀರಲಾಗಿರುತ್ತದೆ. [Influence is Exercised for Promoting the Welfare of All]:** ಸಾಮಾಜಿಕ ನಿಯಂತ್ರಣವು ಉದ್ದೇಶರಹಿತವಾದ ಪ್ರಕ್ರಿಯೆ ಆಗಿಲ್ಲ. ಜನರ ಅಪಾಯಕಾರೀ ಸ್ವಾರ್ಥಸಾಧಕ ಬಯಕೆಗಳನ್ನು ಅದುಮಿಡಲು ಹಾಗೂ ಸಮೂಹದ ಒಟ್ಟು ಹಿತವನ್ನು ಕಾಪಾಡಲು ಸಮಾಜಿಕ ನಿಯಂತ್ರಣವನ್ನು ಬಳಸಲಾಗುವುದು.

5. **ಸಾಮಾಜಿಕ ಪ್ರಭಾವ ಎಂಬುದು ಬಹುಕಾಲದಿಂದಲೂ ಬಳಕೆಯಲ್ಲಿದೆ. [The Influence has been there since a long time]:** ಮಾನವನ ಸಮಾಜ ಜೀವನ ಆರಂಭವಾದಂದಿನಿಂದಲೇ ಸಾಮಾಜಿಕ ನಿಯಂತ್ರಣವೆಂಬುದು ಅಸ್ತಿತ್ವದಲ್ಲಿದೆ ಎನ್ನಬಹುದು. ಸಾಮಾಜಿಕ ನಿಯಂತ್ರಣವಿಲ್ಲದೆ ಸಮಾಜದ ಅಸ್ತಿತ್ವವೇ ಅಸಾಧ್ಯವೆನಿಸುವುದು. ಸಾಮಾಜಿಕ ನಿಯಂತ್ರಣದ ಹೊರತಾಗಿ ಮಾನವ ಸಮಾಜ ತನ್ನ ಸದಸ್ಯರುಗಳನ್ನು ಒಂದುಗೂಡಿಸುವುದು ಕೂಡ ಅಸಾಧ್ಯವೆನಿಸಬಹುದು.

## ಸಾಮಾಜಿಕ ನಿಯಂತ್ರಣದ ಉದ್ದೇಶಗಳು (Purpose of Social Control)

ಸಮಾಜದ ಸದಸ್ಯರುಗಳ ವರ್ತನೆಯನ್ನು ಮತ್ತು ಚಟುವಟಿಕೆಗಳನ್ನು ನಿಯಂತ್ರಿಸುವುದು ಮತ್ತು ಅವರ ಸಂಬಂಧಗಳನ್ನು ಕ್ರಮಬದ್ಧಗೊಳಿಸುವುದೇ ಸಾಮಾಜಿಕ ನಿಯಂತ್ರಣದ ಸಾಮಾನ್ಯ ಕಾರ್ಯ ಎನ್ನಬಹುದು. ಕಿಂಬಾಲ್ ಯಂಗ್‌ರವರ ಅಭಿಪ್ರಾಯದಲ್ಲಿ ಸಾಮಾಜಿಕ ನಿಯಂತ್ರಣವು ಮೂರು ಮುಖ್ಯ ಉದ್ದೇಶಗಳನ್ನು ಹೊಂದಿದೆ. ಅವು ಈ ಮುಂದಿನಂತಿವೆ. ಸಾಮಾಜಿಕ ಅನುವರ್ತನೆ, ಸಾಮಾಜಿಕ ಐಕ್ಯಮತ್ಯ ಮತ್ತು ಸಾಮಾಜಿಕ ನಿರಂತರತೆಯನ್ನು ಕಾಯ್ದುಕೊಳ್ಳುವುದು.

1. **ಸಾಮಾಜಿಕ ನಿಯಂತ್ರಣವು ಸಾಮಾಜಿಕ ಅನುವರ್ತನೆಯನ್ನು ತರುವುದು** [Social Control Brings About Social Conformity]: ಇದು ಸಾಮಾಜಿಕ ನಿಯಂತ್ರಣದ ಮುಖ್ಯ ಕಾರ್ಯ. ಇಂದಿನ ಆಧುನಿಕ ಸಂಕೀರ್ಣ ಸಮಾಜವು ಹಲವಾರು ಸಮೂಹಗಳಿಂದ ಕೂಡಿರುವುದರಿಂದ ಅವುಗಳಿಗನುಸಾರವಾಗಿ ಸಾಮಾಜಿಕ ನಿಯಮಗಳಲ್ಲಿಯೂ ಬಹಳಷ್ಟು ವೈವಿಧ್ಯತೆಯನ್ನು ಕಾಣಬಹುದು. ಆದ್ದರಿಂದ ವಿವಿಧ ಸಮೂಹಗಳ ಸದಸ್ಯರ ವರ್ತನೆಯಲ್ಲಿಯೂ ಬಹಳಷ್ಟು ವ್ಯತ್ಯಾಸಗಳಿರುತ್ತವೆ. ಈ ವ್ಯತ್ಯಾಸಗಳ ಮಧ್ಯದಲ್ಲಿಯೂ ಅವರ ವರ್ತನೆಯಲ್ಲಿ ಒಂದು ಬಗೆಯ ಸಾಮ್ಯತೆಯ [Similarity] ಅವಶ್ಯಕತೆ ಇರುತ್ತದೆ. ಈ ಬಗೆಯ ಸಾಮ್ಯತೆ ಇಲ್ಲವಾದಲ್ಲಿ ಜನರಲ್ಲಿ "ಸಾಮೂಹಿಕ ಅಥವಾ ಸಾಮುದಾಯಿಕ ಭಾವನೆ" [Community feeling] ಉಂಟಾಗುವುದಿಲ್ಲ. ಅದಕ್ಕಾಗಿ ನಿಯಂತ್ರಣದ ಅಗತ್ಯವಿದೆ. ಜನರು ತಮ್ಮ ಸ್ವಂತ ಹಿತದ ಸಂರಕ್ಷಣೆಯ ದೃಷ್ಟಿಯಿಂದಲೂ ಸಮಾಜವನ್ನು ಆಶ್ರಯಿಸುವುದರಿಂದ ಸಮಾಜದ ನಿಯಂತ್ರಣಕ್ಕೆ ಒಳಪಟ್ಟು ನಡೆಯುವುದು ಅನಿವಾರ್ಯವಾಗುವುದು. ಇದರಿಂದ ಸಮಾಜದಲ್ಲಿ ಏಕರೂಪತೆಯನ್ನು ಕಾಣುವುದು ಸಾಧ್ಯವಾಗುವುದು.

2. **ಸಾಮಾಜಿಕ ನಿಯಂತ್ರಣವು ಐಕ್ಯಮತ್ಯವನ್ನುಂಟು ಮಾಡುವುದು** [Social Control Contributes to Social Solidariy]: ಸಾಮಾಜಿಕ ನಿಯಂತ್ರಣವು ಜನರಲ್ಲಿ ಅನನ್ಯತೆಯ ಹಾಗೂ ಐಕ್ಯಮತ್ಯದ ಭಾವನೆಗಳನ್ನು ಉಂಟು ಮಾಡುವುದು. ಸಮಾಜದ ಗಾಲಿಗಳು ಸುಗಮವಾಗಿ ಉರುಳಬೇಕಾದರೆ ಸಮಾಜದ ವಿವಿಧ ಘಟಕಗಳಾದ ಸಂಘಟನೆಗಳು, ಸಂಸ್ಥೆಗಳು ಮತ್ತು ಉಪ–ಸಮೂಹಗಳು ಪರಸ್ಪರ ಸಾಮರಸ್ಯವನ್ನು ಹೊಂದಿರಬೇಕಾಗುವುದು. ವಿಭಜಕ ಶಕ್ತಿಗಳ ವಿರುದ್ಧ ಸಮಾಜವು ಸದಾ ಜಾಗೃತವಿರಬೇಕಾಗುವುದು. ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಪ್ರಬಲ ಸಮೂಹವು ದುರ್ಬಲ ಸಮೂಹವನ್ನು ಅಥವಾ ವ್ಯಕ್ತಿಗಳನ್ನು ಶೋಷಣೆ ಮಾಡಿ ನಾಶ ಮಾಡದಿರುವಂತೆ ಸಾಮಾಜಿಕ ಸಮತೋಲನವನ್ನು ಕಾಯ್ದುಕೊಳ್ಳುವುದು ಅವಶ್ಯ. ಸಾಮಾಜಿಕ ನಿಯಂತ್ರಣದ ಮೂಲಕ ಸಮಾಜವು ಈ ಕಾರ್ಯಗಳನ್ನು ನಿರ್ವಹಿಸುವುದು. ಹೀಗೆ ಸಮಾಜವಿರೋಧಿ ಶಕ್ತಿಗಳನ್ನು ಹತ್ತಿಕ್ಕಿ, ಪರಸ್ಪರ ಶೋಷಣೆ ಮಾಡುವುದನ್ನು ನಿವಾರಿಸಿ, ಶಾಂತಿ–ಸುವ್ಯವಸ್ಥೆ ನೆಲೆಸುವಂತೆ ಮಾಡುವುದರೊಂದಿಗೆ ಸಾಮಾಜಿಕ ಐಕ್ಯಭಾವವನ್ನು ಸಂಪೋಷಿಸುವುದು ಸಾಮಾಜಿಕ ನಿಯಂತ್ರಣದ ಮುಖ್ಯ ಕಾರ್ಯವಾಗಿದೆ.

3. **ಸಮೂಹಗಳ ಅಥವಾ ಸಮಾಜದ ನಿರಂತರತೆಯನ್ನು ಸಂರಕ್ಷಿಸುವುದು** [Social Control Assures Continuity of Social Groups OR Society]: ಸಮಾಜವು ಐಕ್ಯಮತ್ಯವನ್ನು ಸಾಧಿಸುವುದರ ಜೊತೆಗೆ ತನ್ನ ಅಸ್ತಿತ್ವದ ನಿರಂತರತೆಯ ಬಗ್ಗೆಯೂ ಸತತವಾಗಿ ಹೋರಾಟ ಮಾಡುತ್ತಲೇ ಇರುತ್ತದೆ. ಅನ್ಯನ್ಯ ಸಮೂಹಗಳ ಮತ್ತು ಅವುಗಳ ಸದಸ್ಯರುಗಳ ವರ್ತನೆಯನ್ನು ನಿಯಂತ್ರಿಸುವದರ ಮೂಲಕ ಸಮಾಜವು ತನ್ನ ನಿರಂತರತೆಯನ್ನು ಕಾಯ್ದುಕೊಳ್ಳುವುದು. ಸಾಮಾಜಿಕ ನಿಯಂತ್ರಣದ ವಿವಿಧ ಸಾಧನಗಳು ಈ ಕಾರ್ಯವನ್ನು ನಿರಂತರವಾಗಿ ಮಾಡುತ್ತಲೇ ಇರುವುದರಿಂದ ಅವು ಕ್ರಮೇಣ ಸಂಸ್ಕೃತಿಯ ಭಾಗಗಳೇ ಆಗಿ ಪರಿಣಮಿಸುವುವು. ಸಂಸ್ಕೃತಿಯ ಅಂಗಗಳಾದ ಈ ಸಾಧನಗಳು ಒಂದು ಪೀಳಿಗೆಯಿಂದ ಇನ್ನೊಂದು ಪೀಳಿಗೆಗೆ ಸಂಚರಣೆಗೊಳ್ಳುತ್ತಾ ಬರುತ್ತವೆ.

## ಸಾಮಾಜಿಕ ನಿಯಂತ್ರಣದ ವಿಧಗಳು

1. **ಅನೌಪಚಾರಿಕ ನಿಯಂತ್ರಣ:** ಅರ್ಥ "ಯಾವುದೇ ಬಗೆಯ ಪೂರ್ವನಿರ್ಧಾರಿತ ಉದ್ದೇಶ ಅಥವಾ ಯೋಜನೆಗಳಿಂದಲ್ಲದೆ ಆದರೆ ತಮ್ಮಿಂದ ತಾವೇ ಸ್ವಾಭಾವಿಕವಾಗಿ ಎಂಬಂತೆ ಕಾಲಾನುಕ್ರಮದಲ್ಲಿ ವಿಕಾಸಗೊಂಡು ಬಂದ ಸಾಮಾಜಿಕ ನಿಯಂತ್ರಣದ ಸಾಧನಗಳ ಸಮಷ್ಟಿಯನ್ನು "ಅನೌಪಚಾರಿಕ ನಿಯಂತ್ರಣ" ಎನ್ನುತ್ತೇವೆ.

   **ಉದಾ:** ಲೋಕಾಚಾರಗಳು, ನೈತಿಕ ನಿಯಮಗಳು, ಪದ್ಧತಿಗಳು, ಶೋಭಾಚಾರ, ಸಾರ್ವಜನಿಕ ಅಭಿಪ್ರಾಯ ಇತ್ಯಾದಿ.

2. **ಔಪಚಾರಿಕ ನಿಯಂತ್ರಣ:** ಅರ್ಥ "ಔಪಚಾರಿಕ ನಿಯಂತ್ರಣವೆಂಬುದು ಉದ್ದೇಶ ಪೂರ್ವಕವಾಗಿ ಹಾಗೂ ಯೋಜಿತವಾಗಿ ಸ್ಥಾಪಿತವಾದ ಹಾಗೂ ನಿಶ್ಚಿತ ಮತ್ತು ನಿಗಧಿತ ಕ್ರಮ ವಿಧಾನ ಹಾಗೂ ಸಾಧನಗಳನ್ನೊಳಗೊಂಡ ಸಾಮಾಜಿಕ ನಿಯಂತ್ರಣದ ರೂಪವಾಗಿದೆ".

   **ಉದಾ:** ಕಾನೂನು, ಶಾಸನ, ಪೋಲೀಸ್, ನ್ಯಾಯಾಲಯ, ಶಾಲೆ, ಸೈನಿಕಶಕ್ತಿ, ನೌಕರಿಶಾಹಿ ಇತ್ಯಾದಿ.

## A) ಲೋಕರೂಢಿ (Folkways)

### 1. ಅರ್ಥ ಮತ್ತು ವ್ಯಾಖ್ಯೆಗಳು:

ಲೋಕರೂಢಿ ಅನೌಪಚಾರಿಕ ಸಾಮಾಜಿಕ ನಿಯಂತ್ರಣದ ಪ್ರಮುಖ ಸಾಧನವಾಗಿದೆ. W.G. ಸೆಮ್ನರ್ ಎಂಬ ಸಮಾಜಶಾಸ್ತ್ರಜ್ಞ 1906 ರಲ್ಲಿ ಪ್ರಕಾಶಿತವಾದ ತನ್ನ "ಫೋಕ್‌ವ್ವೇಸ್" **(Folkways)** ಎಂಬ ಗ್ರಂಥದಲ್ಲಿ ಮೊದಲ ಬಾರಿಗೆ "ಲೋಕಾಚಾರಗಳು" ಎಂಬ ಪರಿಕಲ್ಪನೆಯನ್ನು ಪರಿಚಯಿಸಿದ್ದಾರೆ. **'Folk'** ಎಂದರೆ ಜನರು **'Ways'** ಎಂದರೆ ಆಚಾರ ಅಥವಾ ಅರೂಢಿ ಎಂದರ್ಥ. ಹೀಗೆ ಜನರ ದೈನಂದಿನ ಆಚಾರ ಕ್ರಮಗಳನ್ನು 'ಲೋಕರೂಢಿ' ಎಂದು ಕರೆಯಲಾಗಿದೆ.

1. **ಲುಂಡ್‌ಬರ್ಗ್:** "ಸಮೂಹ ಅಥವಾ ಸಮುದಾಯವೊಂದರಲ್ಲಿ ಕಾಣಬರುವ ವಿಶಿಷ್ಟ ಅಥವಾ ಆಚರಣೆಯ ನಂಬಿಕೆಗಳು, ಮನೋಭಾವನೆಗಳು ಮತ್ತು ನಡತೆಯ ಶೈಲಿಗಳನ್ನು ಲೋಕರೂಢಿ" ಎಂದು ಕರೆಯಬಹುದು.

2. **ಎ. ಡಬ್ಲ್ಯೂ ಗ್ರೀನ್–** "ಒಂದು ತಲೆಮಾರಿನಿಂದ ಇನ್ನೊಂದು ತಲೆಮಾರಿಗೆ ಸಾಗಿಹೋಗುವಂತಿದ್ದು ಸಮೂಹದ ಅಥವಾ ಸಮಾಜವೊಂದರಲ್ಲಿ ಕಾಣಬರುವ ಸಾಮಾನ್ಯ ವರ್ತನೆಯ ಕ್ರಮಗಳೇ ಲೋಕರೂಢಿಗಳು".

3. **ಗಿಲಿನ್ ಮತ್ತು ಗಿಲಿನ್–** "ಸಮೂಹವೊಂದರಲ್ಲಿ ಜನರಿಗೆ ಅರಿವಿಲ್ಲದೆಯೇ ತಾನೇತಾನಾಗಿ ಬೆಳೆದು ಬಂದಿರುವ ದೈನಂದಿನ ಜೀವನದ ನಡುವಳಿಕೆಯ ನಮೂನೆಗಳೇ ಲೋಕರೂಢಿಗಳು".

   **ಉದಾಹರಣೆಗೆ–** ಜನಸಮ್ಮತ ರೀತಿಯಲ್ಲಿ ಆಹಾರ ಸೇವಿಸುವ, ನಡೆಯುವ, ಆಟವಾಡುವ, ಮಾತನಾಡುವ, ಸಂಭಾಷಿಸುವ, ಕೆಲಸಮಾಡುವ, ಅಧ್ಯಯನ ಮಾಡುವ, ಇತರರನ್ನು ಸ್ವಾಗತಿಸುವ ಇನ್ನಿತರ ವರ್ತನೆಗಳೆಲ್ಲ ಲೋಕರೂಢಿಗಳಾಗಿವೆ.

### 2. ಲಕ್ಷಣಗಳು:

**ಲೋಕರೂಢಿಗಳು ಸಾಮಾಜಿಕವಾದವುಗಳು:** ಲೋಕರೂಢಿಗಳು ಮಾನವನ ಸಮೂಹ ಜೀವನದ ಸೃಷ್ಟಿಯಾಗಿವೆ. ಸಮೂಹಗಳ ಅಸ್ತಿತ್ವಕ್ಕೆ ಹಾಗೂ ಮುಂದುವರಿಯುವಿಕೆಗೆ ಅವು ಅಗತ್ಯವಾಗಿವೆ. ಆನರು ಲೋಕಾಚಾರಗಳನ್ನು ಪಾಲಿಸುವುದರಿಂದಾಗಿಯೇ ಸಾಮಾಜಿಕವಾಗಿ ಒಂದುಗೂಡಲು ಸಾಧ್ಯ. ವ್ಯಕ್ತಿಗಳು ಬೆಳೆಸಿಕೊಂಡಿರುವ ಸಾಮಾಜಿಕ ಸಂಬಂಧಗಳಿಂದಾಗಿ ಲೋಕರೂಢಿಗಳು ವ್ಯಕ್ತಿಗತ ಜೀವನದಲ್ಲಿ ಅನುಷ್ಠಾನದಲ್ಲಿರುತ್ತವೆ.

a. **ಅನೌಪಚಾರಿಕ ಜಾರಿಗೊಳಿಸುವಿಕೆ:** ಲೋಕರೂಢಿಗಳು ಅನೌಪಚಾರಿಕ ನಿಯಂತ್ರಣದ ಸಾಧನಗಳು. ಇವುಗಳನ್ನು ಜಾರಿಗೊಳಿಸಲು ಕೋರ್ಟುಗಳು, ಪೋಲೀಸರು ಇರುವುದಿಲ್ಲ. ಇವುಗಳನ್ನು ಉಲ್ಲಂಘಿಸಿದರೆ ಯಾರು ನಮ್ಮನ್ನು ಬಂಧಿಸುವುದಾಗಲಿ, ಶಿಕ್ಷಿಸುವುದಾಗಲಿ ಮಾಡುವುದಿಲ್ಲ. ಆದಾಗ್ಯೂ ಇವುಗಳನ್ನು ಸಾಮಾನ್ಯವಾಗಿ ಜನರು ಅನುಸರಿಸುತ್ತಾರೆ. ಏಕೆಂದರೆ ಸಾಮಾಜೀಕರಣ ಪ್ರಕ್ರಿಯೆಯಲ್ಲಿ ನಾವು ಇವುಗಳನ್ನು ಮೈಗೂಡಿಸಿಕೊಂಡಿರುತ್ತೇವೆ.

**b.** **ಯೋಜನಾರಹಿತ ಉಗಮ:** ಲೋಕರೂಡಿಗಳು ಕ್ರಮಬದ್ದ ಯೋಜನೆಯ ಫಲಶೃತಿಗಳಲ್ಲ. **'ಸಮ್ನರ'**ನ ಅಭಿಪ್ರಾಯದಲ್ಲಿ ಅವು ಇದ್ದಕ್ಕಿದ್ದಂತೆಯೇ ಮತ್ತು ಜನರಿಗೆ ಅರಿವಿಲ್ಲದೆಯೇ ಆಚರಣೆಯಲ್ಲಿ ಕಾಣಬರುತ್ತವೆ.

**c.** **ಲೋಕರೂಡಿಗಳು ವೈವಿಧ್ಯಮಯವಾಗಿವೆ:** ಲೋಕರೂಡಿಗಳು ಪ್ರದೇಶದಿಂದ ಪ್ರದೇಶಕ್ಕೆ, ಸಮಾಜದಿಂದ ಸಮಾಜಕ್ಕೆ ಬದಲಾಗುತ್ತಾ ಹೋಗುತ್ತವೆ. ಉದಾ: ಆಹಾರ ಪದ್ಧತಿ, ಉಡುಗೆ–ತೊಡುಗೆ, ಅಲಂಕಾರ ಮುಂತಾದ ವಿಷಯಗಳಲ್ಲಿ ವೈವಿಧ್ಯತೆ ಇದೆ. ಭಾರತೀಯ ಮಹಿಳೆಯರು ತಮ್ಮ ತಲೆಕೂದಲನ್ನು ಉದ್ದವಾಗಿ ಬೆಳೆಸುವುದಾದರೆ ಪಾಶ್ಚಾತ್ಯ ಸ್ತ್ರೀಯರು ಅವುಗಳನ್ನು ಚಿಕ್ಕದಾಗಿ ಕತ್ತರಿಸಿ ಶೃಂಗರಿಸಿಕೊಳ್ಳುವರು. ಭಾರತೀಯರು ನೆಲದ ಮೇಲೆ ಕುಳಿತು ಊಟಮಾಡುವರಾದರೆ ಪಾಶ್ಚಾತ್ಯರು ಊಟಕ್ಕೆ ಮೇಜು, ಖುರ್ಚಿಗಳನ್ನು ಬಳಸುವರು.

**d.** **ಲೋಕರೂಡಿಗಳು ಅಸಂಖ್ಯಾತವಾದವು:** ಲೋಕರೂಡಿಗಳೆಲ್ಲವನ್ನು ಒಟ್ಟಾಗಿ ಪಟ್ಟಿ ಮಾಡುವುದು ಸಾಧ್ಯವಿಲ್ಲ. ಅವು ಅಷ್ಟು ಅಪಾರ ಸಂಖ್ಯೆಯಲ್ಲಿವೆ. "ಅತ್ಯಂತ ಹಿಂದುಳಿದ ಆದಿವಾಸಿ ಸಮಾಜದಲ್ಲಿ ನೂರಾರು ಲೋಕರೂಡಿಗಳಿರಬಹುದಾದರೆ, ಕೈಗಾರಿಕಾ ಸಮಾಜದಲ್ಲಿ ಅವು ಸಹಸ್ರಾರು ಸಂಖ್ಯೆಯಲ್ಲಿವೆ" ಎಂದು **"ಹಾರ್ಟನ್"** ಮತ್ತು **"ಹಂಟ್"** ಸರಿಯಾಗಿಯೇ ಅಭಿಪ್ರಾಯ ಪಟ್ಟಿದ್ದಾರೆ.

**e.** **ಲೋಕರೂಡಿಗಳು ಪರಿವರ್ತನಾ ಶೀಲವಾದವುಗಳು:** ಲೋಕರೂಡಿಗಳು ಜಡಸ್ವರೂಪದವುಗಳಲ್ಲ. ಅವು ನಿರಂತರವಾಗಿ ಪರಿವರ್ತನೆಗೆ ಒಳಪಡುತ್ತಿರುತ್ತವೆ. ಕಾಲಗತಿಯಲ್ಲಿ ಅಸಂಖ್ಯಾತ ಲೋಕರೂಡಿಗಳು ಕಣ್ಮರೆಯಾಗಿ ಹೋಗಿವೆ. ಹೊಸ ಲೋಕರೂಡಿಗಳು ಸಾಮಾಜಿಕ ಜಗತ್ತಿನಲ್ಲಿ ಕಾಣಿಸಿಕೊಂಡಿವೆ. ಕೆಲವು ಲೋಕರೂಡಿಗಳು ತೀವ್ರಗತಿಯಲ್ಲಿ ಪರಿವರ್ತಿತವಾಗುತ್ತಿದ್ದರೆ ಮತ್ತೆ ಕೆಲವು ಮಂದಗತಿಯಲ್ಲಿ ಪರಿವರ್ತನೆಗೊಳ್ಳುತ್ತವೆ.

## B ನೈತಿಕ ನಿಯಮಗಳು (Mores)

### 1. ಅರ್ಥ ಮತ್ತು ವ್ಯಾಖ್ಯೆಗಳು:

ನೈತಿಕ ನಿಯಮಗಳು ಸಮಾಜದ ಅತ್ಯಂತ ಪ್ರಮುಖ ಮತ್ತು ಪ್ರಬಲ ನಿಯಮಗಳು. ಇವು ಸಮಾಜವನ್ನು ನಿಯಂತ್ರಿಸುವುದಲ್ಲದೆ ಸಮಾಜದ ಎಲ್ಲ ಸದಸ್ಯರನ್ನು ಒಟ್ಟಾಗಿ ಬೆಸೆಯುತ್ತವೆ. ಇಂಗ್ಲೀಷಿನ ಮೋರ್ಸ್ ಎಂಬ ಪದವು ಲ್ಯಾಟಿನ್ನಿನ ಮೋಸ್ **(Mos)** ಎಂಬ ಪದದಿಂದ ಉತ್ಪತ್ತಿಯಾಗಿದೆ. ಮೋಸ್ ಎಂಬುದರ ಬಹುವಚನವೇ ಮೋರ್ಸ್ **(Mores)**.

1. **ಮೆಕೈವರ್ ಮತ್ತು ಪೇಜ್–** "ಲೋಕರೂಡಿಗಳು ಸಮೂಹ ಕಲ್ಯಾಣದ ಕಲ್ಪನೆಯನ್ನು ಮತ್ತು ಸರಿ–ತಪ್ಪುಗಳೆಂಬ ಮೌಲ್ಯಗಳನ್ನು ಒಳಗೊಂಡಾಗ ನೈತಿಕ ನಿಯಮಗಳಾಗಿ ಪರಿವರ್ತಿತವಾಗುತ್ತವೆ".

2. **ಗಿಲಿನ್ ಮತ್ತು ಗಿಲಿನ್–** "ಸಮಾಜದ ಸದಸ್ಯರುಗಳು ತಮ್ಮ ಸಮೂಹದ ನಿರಂತರ ಅಸ್ಥಿತ್ವಕ್ಕೆ ಅಗತ್ಯವೆಂದು ಪರಿಗಣಿಸುವ ಎಲ್ಲಾ ರೂಢಿಗಳನ್ನು ಮತ್ತು ಸಮೂಹದ ದೈನಂದಿನ ಕ್ರಮಗಳನ್ನು ನೈತಿಕ ನಿಯಮಗಳೆಂದು ಕರೆದಿದ್ದಾರೆ".

3. **ಎಡ್ವರ್ಡ್ ಸಫೀರ್–** "ವರ್ತನೆಯ ನಮೂನೆಗೆ ಸಂಬಂಧಿಸಿದಂತೆ "ಸರಿ" ಅಥವಾ "ತಪ್ಪು" ಎಂಬ ಭಾವನೆಗಳನ್ನು ಒಳಗೊಂಡಿರುವ ರೂಢಿಗಳನ್ನು ಸೂಚಿಸಲು ನೈತಿಕ ನಿಯಮಗಳು ಎಂಬ ಪದವನ್ನು ಬಳಸಲಾಗಿದೆ."

## 2. ನೈತಿಕ ನಿಯಮಗಳ ಲಕ್ಷಣಗಳು (Characteristics of mores) :

**a. ನೈತಿಕ ನಿಯಮಗಳು ನಮ್ಮ ಸಾಮಾಜಿಕ ಜೀವನದ ನಿಯಂತ್ರಕಗಳಿದ್ದಂತೆ: –** ನೈತಿಕ ನಿಯಮಗಳು ಸಮೂಹ ಜೀವನದ ಸ್ವರೂಪವನ್ನು ಬಿಂಬಿಸುತ್ತವೆ. ಅವು ನಮ್ಮ ವರ್ತನೆಯ ಮೇಲೆ ಇತಿಮಿತಿಗಳನ್ನು ಹೇರುತ್ತವೆ. ಲೋಕರೂಡಿಗಳಿಗಿಂತಲೂ ನೈತಿಕ ನಿಯಮಗಳು ಹೆಚ್ಚು ಒತ್ತಾಯಪೂರ್ವಕವಾಗಿ ಮತ್ತು ಆಗ್ರಹ ಪೂರ್ವಕವಾಗಿ ಹೇರಲ್ಪಟ್ಟಿರುತ್ತವೆ.

**b. ನೈತಿಕ ನಿಯಮಗಳು ಹೆಚ್ಚು ಶಾಶ್ವತವಾದವುಗಳು:** ಮಾನವನ ಸಮೂಹ ಜೀವನಕ್ಕೆ ಅಗತ್ಯವಾಗಿರುವ ನೈತಿಕ ನಿಯಮಗಳು ಬಹುತೇಕ ಶಾಶ್ವತ ಸ್ವರೂಪ ಎನ್ನಬಹುದು. ಸತ್ಯ, ನ್ಯಾಯ, ಅಹಿಂಸೆ, ತ್ಯಾಗ, ಸಹಾಯ, ಪ್ರೀತಿ ಇತ್ಯಾದಿಗಳು ಶಾಶ್ವತವಾದವುಗಳು. ಕೆಲವು ನೈತಿಕ ನಿಯಮಗಳು ಪ್ರಗತಿಗೆ ತಡೆಯನ್ನು ಒಡ್ಡುವುದೂ ಇದೆ. ಉದಾ: ಗುಲಾಮಗಿರಿ, ಸತಿಪದ್ಧತಿ, ಬಾಲ್ಯವಿವಾಹ, ನರಬಲಿ ಇತ್ಯಾದಿ.

**c. ನೈತಿಕ ನಿಯಮಗಳು ಸಮೂಹದಿಂದ ಸಮೂಹಕ್ಕೆ ಬೇರೆಯಾಗುತ್ತವೆ:–** ನೈತಿಕ ನಿಯಮಗಳು ಸಾರ್ವತ್ರಿಕವಾಗಿ ಎಲ್ಲಾ ಸಮಾಜಗಳಲ್ಲೂ ಕಾಣಬರಬಹುದಾದರೂ ಎಲ್ಲಾ ಸಮಾಜಗಳಲ್ಲಿ ಒಂದೇ ತೆರನಾದ ನೈತಿಕ ನಿಯಮಗಳಿಲ್ಲ. ಉದಾ: ಹೆಣ್ಣುಶಿಶು ಹತ್ಯೆ ಎಸ್ಕಿಮೋ ಸಮಾಜದಲ್ಲಿ ತೀರಾ ಸಹಜವಾದುದಾದರೆ ಆಧುನಿಕ ಸಮಾಜದಲ್ಲಿ 'ಅಕ್ಷಮ್ಯ ಅಪರಾಧ'ವೆನಿಸಿಕೊಳ್ಳುವುದು. ಮುಂಡುಗು ಮೋರ್ ಆದಿವಾಸಿಗಳಲ್ಲಿ ನರಮಾಂಸ ಭಕ್ಷಣೆ ಒಂದು ಒಪ್ಪಿತ ನಡತೆಯಾಗಿದ್ದರೆ ಇತರರಲ್ಲಿ ಅದನ್ನು 'ಪೈಶಾಚಿಕ ಪ್ರವೃತ್ತಿ' ಎನ್ನುತ್ತೇವೆ.

**d. ನೈತಿಕ ನಿಯಮಗಳಿಗೆ ಮೌಲ್ಯಗಳ ಧರ್ಮದ ಬೆಂಬಲವಿರುವುದು:–** ಮೌಲ್ಯಗಳಿಂದ ಸಮರ್ಥನೆ ಮತ್ತು ಧರ್ಮದ ಸಮ್ಮತಿ ಸಿಗುವುದರಿಂದಾಗಿ ನೈತಿಕ ನಿಯಮಗಳು ಹೆಚ್ಚು ಪ್ರಭಾವಿ ಮತ್ತು ಪರಿಣಾಮಕಾರಿಯಾಗಿ ನಮ್ಮ ವರ್ತನೆಯನ್ನು ನಿಯಂತ್ರಿಸುವುವು. ಉದಾ: ಕ್ರೈಸ್ತರ 'ದಶಧರ್ಮ ನಿಯಮ', ಬೌದ್ಧರ 'ಅಷ್ಟಾಂಗಮಾರ್ಗ'ಗಳಿಗೆ ಧರ್ಮದ ಬೆಂಬಲವಿರುವುದರಿಂದಲೇ ಅವು ಹೆಚ್ಚು ಪ್ರಭಾವಿಯಾಗಿವೆ.

## C ಕಾನೂನು (Law)

### 1. ಅರ್ಥ ಮತ್ತು ವ್ಯಾಖ್ಯೆಗಳು:

ಕಾನೂನುಗಳು ಔಪಚಾರಿಕ ಸಾಮಾಜಿಕ ನಿಯಂತ್ರಣದ ಬಹಳ ಪ್ರಭಾವಿಯಾದ ಹಾಗೂ ಶಕ್ತಿಶಾಲಿಯಾದ ಸಾಧನಗಳಲ್ಲೊಂದು. ಕಾನೂನುಗಳು ಆಧುನಿಕ ಸಮಾಜದಲ್ಲಿ ಬಹು ವ್ಯಾಪಕವಾಗಿ ಎಂಬಂತೆ ಕಾಣಬರುತ್ತವೆ. ಸಮಾಜವೊಂದರ ಕೆಲವು ಸಾಮಾಜಿಕ ನಿಯಮಗಳು ಜನರ ವರ್ತನೆಯನ್ನು ಪರಿಣಾಮಕಾರಿಯಾಗಿ ನಿಯಂತ್ರಿಸಲು ಔಪಚಾರಿಕ ಸ್ವರೂಪ ಪಡೆದು **"ಕಾನೂನುಗಳು"** ಎನ್ನಿಸಿಕೊಳ್ಳುತ್ತವೆ. ರಾಜಕೀಯ ಅಧಿಕಾರ ಹೊಂದಿದ ಸಾಂಸ್ಥಿಕ ವ್ಯವಸ್ಥೆಗಳಿಂದ ಕಾನೂನುಗಳು ಸ್ಥಾಪಿತವಾಗುತ್ತವೆ.

1. **ಜೆ. ಎಸ್. ರೌಸೆಕ್–** "ರಾಜಕೀಯ ಸಂಸ್ಥೆಗಳ ಮೂಲಕ ಹೊರಹೊಮ್ಮುವ ಸಾಮಾಜಿಕ ನಿಯಮಗಳನ್ನು ಕಾನೂನುಗಳು" ಎನ್ನಬಹುದು.
2. **ರೊಸ್‌ಕ್ಯೂ ಫೌಂಡ್–** "ರಾಜಕೀಯವಾಗಿ ಸಂಘಟಿತ ಸಮಾಜದ ಬಲದಿಂದ ಸ್ಥಾಪಿತವಾದ ಅಧಿಕಾರಿಯುಕ್ತವಾದ ಮೌಲ್ಯ ಸೂತ್ರವು ಕಾನೂನು ಎನ್ನಿಸಿಕೊಳ್ಳುವುದು.

3. **ಐಯಾನ್ ರಾಬರ್ಟ್‌ಸನ್–** "ಕಾನೂನು ಎಂಬುದು ರಾಜಕೀಯ ಅಧಿಕಾರದ ಮುಖಾಂತರ ಔಪಚಾರಿಕವಾಗಿ ಸ್ಥಾಪಿತವಾದ ಮತ್ತು ರಾಜ್ಯ ಶಕ್ತಿಯ ಬೆಂಬಲವನ್ನು ಹೊಂದಿದ ಒಂದು ಬಗೆಯ ನಿಯಮವಾಗಿರುತ್ತದೆ".

## 2. ಕಾನೂನಿನ ಲಕ್ಷಣಗಳು (Characteristics of Laws) :

a. ಕಾನೂನನ್ನು ರಾಜಕೀಯವಾಗಿ ಸುಸಂಘಟಿತವಾದ ಸಮಾಜಗಳಲ್ಲಿ ಮಾತ್ರ ಕಾಣಬಹುದಾಗಿದೆ.

b. ಕಾನೂನುಗಳು ಮಾನವನ ವರ್ತನೆಗೆ ಸಂಬಂಧಿಸಿದ ನಿಯಮಗಳಾಗಿದ್ದು, ರಾಜ್ಯಶಕ್ತಿಯಿಂದ ತನ್ನ ಪ್ರಜೆಗಳಿಗಾಗಿ ರಚಿಸಲ್ಪಟ್ಟಿವೆ.

c. ಕಾನೂನುಗಳು ಮಾನವನ ಉದ್ದೇಶ ಪೂರ್ವಕವಾದ ಚಿಂತನೆಯಿಂದ ಮತ್ತು ಜಾಗರೂಕತೆಯಿಂದ ಮಾಡಲಾದ ಯೋಜನೆಯಿಂದ ಮಾಡಿದ ನಿಯಮಗಳಾಗಿರುತ್ತವೆಯೇ ವಿನಹ ಇದ್ದಕ್ಕಿದ್ದಂತೆ ಕಾಣಬರುವ ಸ್ವರೂಪದವುಗಳಲ್ಲ.

d. ಕಾನೂನುಗಳು ಸ್ಪಷ್ಟತೆ, ನಿಶ್ಚಿತತೆ, ನಿಸ್ಸಂದೇಹಯುಕ್ತ ಗುಣಗಳನ್ನು ಹೊಂದಿರುತ್ತವೆ.

e. ಕಾನೂನಿನ ಉಲ್ಲಂಘನೆಗೆ ಶಿಕ್ಷೆ ಕಡ್ಡಾಯ.

f. ಕಾನೂನುಗಳು ಸಾಮಾನ್ಯವಾಗಿ ಲಿಖಿತ ರೂಪದಲ್ಲಿರುವುದರಿಂದ ಒಂದಲ್ಲ ಒಂದು ಬಗೆಯಲ್ಲಿ ದಾಖಲುಗಳಂತೆ ಉಳಿಯುತ್ತವೆ.

g. ಕಾನೂನುಗಳು ಎಲ್ಲರಿಗೂ ಸಮಾನವಾಗಿ ಅನ್ವಯವಾಗುತ್ತವೆ. ಒಂದು ಪ್ರದೇಶದ ಕಾನೂನು ಅಲ್ಲಿ ವಾಸಿಸುತ್ತಿರುವ ಎಲ್ಲಾ ಜನರಿಗೆ ಸಮಾನವಾಗಿ ಅನ್ವಯವಾಗುತ್ತದೆ.

h. ಕಾನೂನುಗಳು ಒಮ್ಮೆ ಸ್ಥಾಪಿತವಾಗಿ ಮಾನ್ಯತೆ ಗಳಿಸಿದ ಮೇಲೆ ಅವುಗಳನ್ನು ಬಳಸುವಾಗ ಸಂಬಂಧಿತ ವ್ಯಕ್ತಿಗಳ ಸ್ವಂತ ಅಭಿಪ್ರಾಯವನ್ನು ಕೇಳುವ ಅಗತ್ಯವಿರುವುದಿಲ್ಲ.

i. ಕಾನೂನು ಗತಿಶೀಲ ಸ್ವರೂಪದವುಗಳಾಗಿದ್ದು ಪರಿವರ್ತನೆಗೆ ಒಳಪಟ್ಟಿರುತ್ತವೆ.

❑❑❑

# ಅಧ್ಯಾಯ – 3
# ಸಾಮಾಜಿಕ ಪ್ರಕ್ರಿಯೆಗಳು

## 3.1 ಸಾಮಾಜಿಕ ಅಂತಃಕ್ರಿಯೆ ಅರ್ಥ:

ಸಾಮಾಜಿಕ ಅಂತಃಕ್ರಿಯೆಯು ಮಾನವನ ಸಾಮಾಜಿಕ ಜೀವನದ ಅವಶ್ಯಕ ಅಂಶ. ಸಮಾಜದ ನಿರ್ಮಿತಿಗೆ ಕಾರಣರಾದ ವ್ಯಕ್ತಿಗಳು ಪರಸ್ಪರ ಒಡನಾಟ ನಡೆಸುವುದನ್ನು "ಸಾಮಾಜಿಕ ಅಂತಃಕ್ರಿಯೆ" ಎನ್ನುತ್ತೇವೆ. ಈ ಒಡನಾಟದಲ್ಲಿ ಒಬ್ಬರು ಇನ್ನೊಬ್ಬರ ಮೇಲೆ ಪ್ರಭಾವ ಬೀರುವುದು ತೀರಾ ಸಹಜ. "ಒಬ್ಬಾತನ ಕ್ರಿಯೆಗಳು, ಇನ್ನೊಬ್ಬಾತನ ಅಥವಾ ಇತರರ ಕ್ರಿಯೆಗಳ ಮೇಲೆ ಪ್ರಭಾವ ಭೀರಿದಲ್ಲಿ ಅಥವ ಪ್ರಭಾವಕ್ಕೆ ಒಳಪಟ್ಟಲ್ಲಿ ಆಗ ಸಾಮಾಜಿಕ ಅಂತಃಕ್ರಿಯೆ ಏರ್ಪಡುವುದು" ಜನರಿದ್ದ ಮಾತ್ರಕ್ಕೆ ಸಮೂಹ ಅಥವ ಸಮಾಜಗಳು ನಿರ್ಮಾಣಗೊಳ್ಳುವುದಿಲ್ಲ. ಆದರೆ ಅವರು ಮಾತನಾಡಲು, ಆಟವಾಡಲು, ಸಹಕಾರದಿಂದ ಕೂಡಿ ದುಡಿಯಲು, ತಮ್ಮತಮ್ಮಲ್ಲಿ ಪೈಪೋಟಿ ನಡೆಸಲು, ಸುಖ ದುಃಖ ಹಂಚಿಕೊಳ್ಳಲು, ಇಲ್ಲವೇ ಜಗಳವಾಡಲು ಪುನಃ ಹೊಂದಿಕೊಂಡು ಹತ್ತಿರ ಬರಲು, ವ್ಯಾಪಾರ ವ್ಯವಹಾರ ನಡೆಸಲು, ಹೀಗೆ ಇಂತಹ ಹತ್ತಾರು ಬಗೆಯ ಕಾರ್ಯಚಟುವಟಿಕೆಗಳ ನಿಮಿತ್ತ ಪರಸ್ಪರ ಒಡನಾಟದಲ್ಲಿ ತೊಡಗಿದಾಗ ಮಾತ್ರ ಸಮಾಜವೆಂಬುದು ರೂಪುಗೊಳ್ಳಲು ಸಾಧ್ಯ.ಸಾಮಾಜಿಕ ಒಡನಾಟ ಅಥವಾ ಅಂತಃಕ್ರಿಯೆ ಎಂಬುದು ಜನರನ್ನು 'ಸಮಾಜ–ಸಮುಧಾಯಸಮೂಹಗಳ ರೂಪದಲ್ಲಿ ಬೆಸೆದ ಶಕ್ತಿಯಾಗಿದೆ. ಸಾಮಾಜಿಕ ನಿಯಮಗಳು, ಅಂತಸ್ತುಗಳು, ಸಮಾಜದ ಸ್ಥಿರತೆಗೆ–ಭದ್ರತೆಗೆ ಕಾರಣವಾಗಿರುವಂತೆ ಸಾಮಾಜಿಕ ಅಂತಃಕ್ರಿಯೆಯು ಸಮಾಜದ ಗತಿಶೀಲತೆಗೆ ಕಾರಣವಾಗಿದೆ ಎನ್ನಬಹುದು.

### ಸಾಮಾಜಿಕ ಅಂತಃಕ್ರಿಯೆಯ ವ್ಯಾಖ್ಯೆಗಳು :–

1. **ಎನ್.ಪಿ.ಗಿಶ್:** "ಪರಸ್ಪರ ಪ್ರಚೋದನೆ ಮತ್ತು ಪ್ರತಿಕ್ರಿಯೆಗಳ ಮೂಲಕ ಮಾನವರು ಒಬ್ಬರು ಇನ್ನೊಬ್ಬರ ಮೇಲೆ ಪರಸ್ಪರ ಪ್ರಭಾವ ಬೀರುವುದಕ್ಕೆ ಸಾಮಾಜಿಕ ಅಂತಃಕ್ರಿಯೆ" ಎನ್ನಬಹುದು.

2. **ಡಾಸನ್ ಮತ್ತು ಗೆಟ್ಟಿಸ್: "ಸಾಮಾಜಿಕ** ಅಂತಃಕ್ರಿಯೆಯು ಒಂದು ಪ್ರಕ್ರಿಯೆಯಾಗಿದ್ದು. ಇದರ ಮುಖಾಂತರ ಜನರು ಒಬ್ಬರ ಮನಸ್ಸಿನ ಅಂತರ್ಯವನ್ನು ಮತ್ತೊಬ್ಬರು ಭೇದಿಸುವರು" ಎಂದಿದ್ದಾರೆ.

3. **ಐಯಾನ್ ರಾಬರ್ಟ್ಸನ್:** "ಜನರು ಇತರರೊಂದಿಗೆ ಕ್ರಿಯೆಗಳಲ್ಲಿ ತೊಡಗಿರುತ್ತಾ ಅವರ ಕ್ರಿಯೆಗಳಿಗೆ ಪ್ರತಿಸ್ಪಂದನವನ್ನು ಅಥವಾ ಪ್ರತಿಕ್ರಿಯೆಯನ್ನು ತೋರುವುದನ್ನು ಸಾಮಾಜಿಕ ಅಂತಃಕ್ರಿಯೆ" ಎನ್ನಬಹುದು.

### ಸಾಮಾಜಿಕ ಅಂತಃಕ್ರಿಯೆಯ ಎರಡು ಮೂಲಾಂಶಗಳು :–

**ಪಾರ್ಕ್ ಮತ್ತು ಬರ್ಗೆಸ್** ಪ್ರಕಾರ ಅಂತಃಕ್ರಿಯೆಯು ಎರಡು ಮೂಲಾಂಶಗಳನ್ನು ಅವಲಂಭಿಸಿದೆ. ಅವುಗಳೆಂದರೆ 1. **ಸಂಪರ್ಕ** ಮತ್ತು 2. **ಸಂವಹನ** ಇವು ಪರಸ್ಪರ ಪೂರಕವಾಗಿವೆ.

1. **ಸಂಪರ್ಕ:** (Contact) ಸಂಪರ್ಕವಿಲ್ಲದೆ ಅಂತಃಕ್ರಿಯೆ ಏರ್ಪಡಲಾರದು, ಇದು ಅಂತಃ ಕ್ರಿಯೆಯ ಆರಂಭಿಕ ಹಂತ. ಸಂಪರ್ಕದ ಮುಖಾಂತರ ವ್ಯಕ್ತಿಗಳು ಪರಸ್ಪರ ಹತ್ತಿರಕ್ಕೆ ಬರಲು ಸಾಧ್ಯವಾಗುವುದು. ಸಂಪರ್ಕದಲ್ಲಿ ಎರಡು ಪ್ರಕಾರಗಳಿವೆ.

a) **ಸಾಮಯಿಕ ಸಂಪರ್ಕ** (contact in time) b) **ಪ್ರಾದೇಶಿಕ ಸಂಪರ್ಕ** (Contact in Space) ಮೊದಲನೆಯದು ವ್ಯಕ್ತಿಗಳು ತಮಗಿಂತಲೂ ಹಿರಿಯ ತಲೆಮಾರುಗಳರವರೊಂದಿಗೆ ರೂಢಿ–ಸಂಪ್ರದಾಯಗಳು, ಲೋಕಾಚಾರಗಳು ಮತ್ತು ನೈತಿಕ ನಿಯಮಗಳು ಮುಂತಾದುವುಗಳ ಮೂಲಕ ಹೊಂದಿರುವ ಸಂಪರ್ಕವನ್ನು ಸೂಚಿಸುವುದು. ಎರಡನೆಯದು ಒಂದು ನಿರ್ಧಿಷ್ಟ ಪ್ರದೇಶದಲ್ಲಿರುವ ಸಮಕಾಲೀನ ವ್ಯಕ್ತಿಗಳು ಮತ್ತು ಸಮೂಹಗಳೊಳಗಿನ ಸಂಪರ್ಕವನ್ನು ಸೂಚಿಸುವುದು. ಸಂಪರ್ಕವು ಪ್ರಾಥಮಿಕವಾದದ್ದು, ಪ್ರತ್ಯಕ್ಷವಾದದ್ದು ಹಾಗೂ ಅನ್ಯೋನ್ಯತೆಯಿಂದ ಕೂಡಿರುವುದಾಗಿದೆ. ಇಲ್ಲವೇ ಅಪ್ರಾಥಮಿಕವಾದದ್ದು, ಪರೋಕ್ಷವಾದದ್ದು ಹಾಗೂ ಅನ್ಯೋನ್ಯತೆಯಿಲ್ಲದ ಅನಾಸಕ್ತ ಸ್ವರೂಪದ್ದಿರಬಹುದು.

2. **ಸಂವಹನ : (Communication)** ಸಂವಹನವು ಸಾಮಾಜಿಕ ಅಂತಃಕ್ರಿಯೆಯ ಮಾಧ್ಯಮವಾಗಿದೆ. ಸಂವಹನದ ಮೂಲಕ ಒಬ್ಬಾತ ಇನ್ನೊಬ್ಬನ ಅಭಿಪ್ರಾಯ ಹಾಗೂ ಭಾವನೆಗಳನ್ನು ಅರ್ಥೈಸುವುದು ಸಾಧ್ಯ. ಸಂವಹನೆಯಲ್ಲಿ ಮೂರು ವಿಧಗಳಲ್ಲಿ ಕಾಣಬಹುದು ಅವುಗಳೆಂದರೆ ಅ) ಸಂವೇದನೆ ಆ) ಸಂವೇಗ ಹಾಗೂ ಇ) ಭಾವನೆಗಳು ಮತ್ತು ವಿಚಾರಗಳು (Sentiments and ideas) ಮಾನವ ಅಂತಃಕ್ರಿಯೆಯಲ್ಲಿ ಮುಖ್ಯ ಪಾತ್ರವಹಿಸುತ್ತವೆ. ವಿಧಾನದಲ್ಲಿ ಮಾತು ಮತ್ತು ಭಾಷೆ (Speech and language) ಪ್ರಧಾನ ಅಂಗಗಳಾಗಿವೆ. ಭಾಷೆಯ ವಿವಿಧ ರೂಪಗಳು (ಮಾತನಾಡುವುದು, ಓದುವುದು ಮತ್ತು ಬರೆಯುವುದು) ಮೂಲಕ ವಿಚಾರಗಳನ್ನು ಒಂದು ತಲೆಮಾರಿನಿಂದ ಇನ್ನೊಂದು ತಲೆಮಾರಿಗೆ ವರ್ಗಾವಣೆಯಾಗುತ್ತದೆ. ತಂತ್ರಜ್ಞಾನದಿಂದಾಗಿ ಇಂದಿನ ಆಧುನಿಕ ಪ್ರಪಂಚದಲ್ಲಿ ಪತ್ರಿಕೆಗಳು, ರೇಡಿಯೋ, ದೂರದರ್ಶನ, ದೂರವಾಣಿ, ಇ–ಮೇಲ್ ಮುಂತಾದ ಉಪಕರಣಗಳ ಮೂಲಕ ಸಂವಹನೆಯನ್ನು ತ್ವರಿತಗತಿಯಿಂದ ಪ್ರಸಾರ ಮಾಡಲು ಸಾಧ್ಯವಾಗಿದೆ.

ಸಾಮಾಜಿಕ ಅಂತಃಕ್ರಿಯೆಯು 'ಪ್ರತ್ಯಕ್ಷ ಸ್ವರೂಪವಿರಬಹುದು ಅಥವಾ ಸಾಂಕೇತಿಕ ಸ್ವರೂಪದ್ದಿರಬಹುದು ('Direct interaction or symbolic interaction') ಪ್ರತ್ಯಕ್ಷವಾದ ದೈಹಿಕ ಚಲನೆಯ ಮೂಲಕ ಪರಸ್ಪರ ತಳ್ಳುವುದು, ಎಳೆಯುವುದು, ಹೊಡೆದಾಡುವುದು, ಆಲಿಂಗನ ಮಾಡಿಕೊಳ್ಳುವುದು, ಮುದ್ದಾಡುವುದು, ಇತ್ಯಾದಿ ಪ್ರತ್ಯೇಕ ಅಂತಃಕ್ರಿಯೆ ಕಾಣಬಹುದು. ಮಾತು, ಭಾಷೆ, ಹಾವಭಾವಗಳು ಮತ್ತಿತರ ಸಂಕೇತಗಳ ಮೂಲಕ ಅಂತಃಕ್ರಿಯೆಯು ಸಾಂಕೇತಿಕ ಸ್ವರೂಪವನ್ನು ಪಡೆಯುವುದು. ಸಂಕೇತವು (Symbol) ಒಂದು ಅನುಭವದ ಪ್ರತೀಕವಿದ್ದಂತೆ. ಅದು ವಸ್ತು, ಕ್ರಿಯೆ, ಗುಣ, ಮೌಲ್ಯ, ವಿಚಾರ ಮುಂತಾದವುಗಳನ್ನು ಪ್ರತಿನಿಧಿಸಬಹುದು. ಭಾಷೆಯು ಅಂತಹ ಸಂಕೇತಗಳ ಬೃಹತ್ ಆಗರವೇ ಆಗಿದೆ.

ಅಂತಃಕ್ರಿಯೆಯು ಪ್ರಚೋದನೆ ಮತ್ತು ಪ್ರತಿಕ್ರಿಯೆಗಳನ್ನು (Stimulus and response) ಒಳಗೊಂಡಿರುವುದು. ಸಮೂಹದ ಸದಸ್ಯರು ನಮ್ಮ ಒಡನಾಟದಲ್ಲಿ ವರ್ತನೆಗಳನ್ನು, ಆಲೋಚನೆಗಳನ್ನು ಭಾವನೆಗಳನ್ನು ಹಾಗೂ ವಿಚಾರಗಳನ್ನು ಪರಸ್ಪರ ಪ್ರಚೊದನೆಗೆ ಒಳಪಡಿಸುತ್ತಲೇ ಇರುತ್ತಾರೆ. ಪ್ರಚೋದನೆಗೆ ಸಿಗುವ ಪ್ರತ್ಯುತ್ತರವೇ ಪ್ರಕ್ರಿಯೆ.

### 3.1.2. ಸಾಮಾಜಿಕ ಪ್ರಕ್ರಿಯೆಗಳು: (Social Process)

ಮಾನವ ಸಮಾಜವೆಂಬುದು ಸಾಮಾಜಿಕ ಅಂತಃಕ್ರಿಯೆಯ ಒಂದು ವ್ಯವಸ್ಥೆ. ಅಂತಹ ಅತಃಕ್ರಿಯೆಗಳು ತಂದೆ ತಾಯಿಯರು–ಮಕ್ಕಳು, ಉದ್ಯೋಗಪತಿಗಳು– ಉದ್ಯೋಗಿಗಳು, ಆಳುವವರು–ಆಳ್ವಿಕೆಗೆ ಒಳಪಟ್ಟವರು, ವ್ಯಾಪಾರಿಗಳು–ಗಿರಾಕಿಗಳು ನಡುವೆ ಕಂಡುಬರುತ್ತದೆ. ಅವುಗಳನ್ನು ವಿಮರ್ಶಿಸಿ ಅಧ್ಯಯನ ಮಾಡುವ ಕಾರ್ಯ

ಸಮಾಜಶಾಸ್ತ್ರದ್ದು. ಸಮಾಜದ ಗತಿಶೀಲ ಅಂಶಗಳಾದ ಈ ಸಾಮಾಜಿಕ ಅಂತಃಕ್ರಿಯೆಗಳು ವಿವಿಧ ರೂಪಗಳನ್ನು ತಳೆಯುತ್ತವೆ. ಅಂತಃಕ್ರಿಯೆಯೆಂಬುದು ಜನರನ್ನು ಹತ್ತಿರ ತರುವುದಕ್ಕೆ ಸಹಾಯಕವಾಗಿದ್ದರೆ ಇನ್ನು ಕೆಲವೊಮ್ಮೆ ಅದು ಜನರನ್ನು ಮತ್ತಷ್ಟು ದೂರ ಸರಿಯುವಂತೆ ಮಾಡುವುದು. ಇಂತಹ ಸಾಮಾಜಿಕ ಅಂತಃಕ್ರಿಯೆಗಳು ಏರ್ಪಡುವ ವಿವಿಧ ರೂಪಗಳನ್ನು 'ಸಾಮಾಜಿಕ ಪ್ರಕ್ರಿಯೆ'ಗಳೆಂದು ಕರೆಯಲಾಗಿದೆ.

### ಸಾಮಾಜಿಕ ಪ್ರಕ್ರಿಯೆಯ ವ್ಯಾಖ್ಯೆಗಳು: (Definition of Social Process)

1. **ಮೆಕೈವರ್ ಮತ್ತು ಪೇಜ್**: "ಸಮೂಹದ ಸದಸ್ಯರುಗಳ ಸಂಬಂಧಗಳು ಒಮ್ಮೆ ಒಗ್ಗೂಡಿದಾಗ ವಿಶೇಷ ರೂಪವನ್ನು ಪಡೆಯುವ ವಿಧಾನವನ್ನುಸಾಮಾಜಿಕ ಪ್ರಕ್ರಿಯೆಗಳು " ಎಂದಿದ್ದಾರೆ.

2. **ಎ.ಡಬ್ಲ್ಯೂ ಗ್ರೀನ್**: "ಸಾಮಾಜಿಕ ಅಂತಃಕ್ರಿಯೆಗಳು ಏರ್ಪಡುವ ವಿಶಿಷ್ಠ ವಿಧಾನಗಳನ್ನು ಸಾಮಾಜಿಕ ಪ್ರಕ್ರಿಯೆಗಳು" ಎನ್ನಬಹುದು.

3. **ಹಾರ್ಟನ್ ಮತ್ತು ಹಂಟ್**: "ಸಾಮಾಜಿಕ ಜೀವನದಲ್ಲಿ ಸಾಮಾನ್ಯವಾಗಿ ಕಂಡು ಬರುವ, ಪುನರಾವರ್ತಿತ ಸ್ವರೂಪದ ವರ್ತನೆಯ ಬಗೆಗಳನ್ನು ಸಾಮಾಜಿಕ ಪ್ರಕ್ರಿಯೆಗಳು" ಎನ್ನಬಹುದು.

### ಸಾಮಾಜಿಕ ಪ್ರಕ್ರಿಯೆಗಳ ಪ್ರಕಾರಗಳು : (Types of Social process)

ಸಾಮಾಜಿಕ ಪ್ರಕ್ರಿಯೆಗಳ ಬಗ್ಗೆ ಸಮಾಜಶಾಸ್ತ್ರದ ಚಿಂತಕರಲ್ಲಿ ಭಿನ್ನಾಭಿಪ್ರಾಯಗಳಿವೆ. ಸಮಾಜಶಾಸ್ತ್ರಜ್ಞರಾದ ಪಾರ್ಕ್ ಮತ್ತು ಬರ್ಗೆಸ್‌ರವರು ಸಹಕಾರ, ಸ್ಪರ್ಧೆ, ಸಂಘರ್ಷ, ಹೊಂದಾಣಿಕೆ ಮತ್ತು ಸ್ವಾಂಗೀಕರಣ ಎಂಬ ಐದು ಪ್ರಕಾರದ ಸಾಮಾಜಿಕ ಪ್ರಕ್ರಿಯೆಗಳಾಗಿ ವರ್ಗೀಕರಿಸಿದ್ದಾರೆ. ಇವುಗಳನ್ನು ಈ ಕೆಳಕಂಡಂತೆ ವಿವರಿಸಲಾಗಿದೆ.

### ಸಹಕಾರ (Co-operation) :

**ಅರ್ಥ ಮತ್ತು ವ್ಯಾಖ್ಯೆಗಳು:–** ಸಹಕಾರವು ಅತ್ಯಂತ ಮೂಲಭೂತವಾದ, ಸರ್ವವ್ಯಾಪಕವಾದ ಮತ್ತು ನಿರಂತರವಾದ ಸಾಮಾಜಿಕ ಪ್ರಕ್ರಿಯೆ. ಸಹಕಾರವು ಸಮಾಜ ಜೀವನದ ತಳಹದಿಯಾಗಿದೆ. ಸಹಕಾರವಿಲ್ಲದೇ ಸಂಘಗಳಾಗಲೀ, ಸಂಸ್ಥೆಗಳಾಗಲೀ, ಸಮೂಹಗಳಾಗಲೀ ಇರಲು ಸಾಧ್ಯವಿಲ್ಲ. ಮಾನವನ ಸಾಮಾಜಿಕ ಹಾಗೂ ಜೈವಿಕ ಅಸ್ತಿತ್ವಕ್ಕೂ ಸಹಕಾರ ಅಗತ್ಯ. 'ಸಹಕಾರ' ಎಂಬ ಪದದ ಇಂಗ್ಲೀಷ್ ಅನುವಾದವೇ **"ಕೊ–ಆಪರೇಷನ್"** **(Co operation)**. ಈ ಪದವು ಲ್ಯಾಟಿನ್ ಭಾಷೆಯ **" ಕೋ"** **(Co** ಎಂದರೆ ಒಟ್ಟಿಗೆ ಸೇರು) ಮತ್ತು **"ಆಪೆರರಿ"** (**Operari** ಎಂದರೆ ಕೆಲಸ ಮಾಡು) ಎಂಬ ಶಬ್ದಗಳಿಂದ ಬಂದಿದೆ. ಒಟ್ಟಿಗೆ ಸೇರಿ ಕೆಲಸ ಮಾಡುವುದು ಅಥವಾ ದುಡಿಯುವುದೇ ಸಹಕಾರ ಎಂಬ ಪದದ ಅಕ್ಷರಶಃ ಅರ್ಥವಾಗಿದೆ.

1. **ಮೆರಿಲ್ ಮತ್ತು ಎಲ್ರಿಜ್:** "ಸಹಕಾರವು ಸಾಮಾಜಿಕ ಅಂತಃಕ್ರಿಯೆಯ ಒಂದು ರೂಪವಾಗಿದ್ದು ಇದರಲ್ಲಿ ಇಬ್ಬರು ಅಥವಾ ಹೆಚ್ಚು ಜನರು ಸಾಮಾನ್ಯ ಗುರಿಯನ್ನು ತಲುಪಲು ಒಟ್ಟಿಗೆ ಸೇರಿ ಕೆಲಸ ಮಾಡುತ್ತಾರೆ" ಎಂದಿದ್ದಾರೆ.

2. **ಎ.ಡಬ್ಲ್ಯೂ ಗ್ರೀನ್:** "ಸಾಮಾನ್ಯವಾಗಿ ಎಲ್ಲರೂ ಸಂಪೋಷಿಸುವಂತಹ ಗುರಿಯೊಂದನ್ನು ತಲುಪಲು, ಅಥವಾ ಕಾರ್ಯವೊಂದನ್ನು ನಿರ್ವಹಿಸಲು ಇಬ್ಬರು ಅಥವಾ ಅದಕ್ಕೂ ಹೆಚ್ಚಿನ ಸಂಖ್ಯೆಯ ಜನರು ನಡೆಸುವ ನಿರಂತರವಾದ ಮತ್ತು ಜಂಟಿಯಾದ ಪ್ರಯತ್ನವನ್ನು ಸಹಕಾರ" ಎಂದಿದ್ದಾರೆ.

3. **ಸರಳ ಅರ್ಥದಲ್ಲಿ:** "ಸಹಕಾರವೆಂಬುದು ಸಾಮಾನ್ಯ ಉದ್ದೇಶಗಳನ್ನು ಸಾಧಿಸಲು ಅಥವಾ ಪರಸ್ಪರ ಹಂಚಿಕೊಳ್ಳಬಹುದಾದ ಪ್ರತಿಫಲಗಳನ್ನು ಪಡೆಯಲು ಜನರು ನಡೆಸುವ ಜಂಟಿ ಪ್ರಯತ್ನವಾಗಿದೆ".

## 2. ಸಹಕಾರದ ಲಕ್ಷಣಗಳು:– (Characteristics of Co-operation)

a. **ಸಹಕಾರವು ಸಾರ್ವತ್ರಿಕವಾದದು. ಮತ್ತು ನಿರಂತರವಾದುದು :–** ಸಹಕಾರವು ಎಲ್ಲಾ ಸಮಾಜಗಳಲ್ಲೂ ಕಂಡುಬರುವುದು. ಇದೊಂದು ನಿರಂತರವಾದ ಪ್ರಕ್ರಿಯೆ, ಇದಕ್ಕೆ ಕೊನೆಯಿಲ್ಲ. ಸಹಕಾರದಿಂದ ವ್ಯಕ್ತಿಗಳು ಹಾಗೂ ಸಮೂಹಗಳ ನಡುವೆ ಹೊಂದಾಣಿಕೆ ಹಾಗೂ ಸಹಬಾಳ್ವೆ ಸಾಧ್ಯವಾಗುವುದು. ಸಹಕಾರವು ಸಮೂಹ ಜೀವನದ ಮೂಲಾಧಾರವಿದ್ದಂತೆ ಎನ್ನಬಹುದು.

b. **ಸಾಮಾನ್ಯ ಉದ್ದೇಶಗಳ ಗ್ರಹಿಕೆ :–** ಸಹಕಾರಿ ಚಟುವಟಿಕೆಗಳಲ್ಲಿ ಭಾಗಿಗಳಾದವರು ಕೆಲವು ಸಾಮಾನ್ಯ ಉದ್ದೇಶಗಳನ್ನು ಹೊಂದಿರುತ್ತಾರೆ. ಉದಾ:– ಕಾರ್ಖಾನೆ ಅಥವಾ ಕಂಪನಿಯಲ್ಲಿ ಲಾಭಗಳಿಸುವುದು ಒಟ್ಟಿಗೆ ಆಟವಾಡುವುದು ಇಂತಹ ಯಾವುದೇ ಉದ್ದೇಶದ ಜನರನ್ನು ಪರಸ್ಪರ ಹತ್ತಿರ ತರುತ್ತದೆ.

c. **ಸಾಮಾನ್ಯ ಪ್ರತಿಫಲಕ್ಕಾಗಿ ಕೂಡಿ ದುಡಿಯುವಿಕೆ:–** ಸಹಕಾರವು ಸಾಂಘಿಕ ಅಥವಾ ಜಂಟಿ ಪ್ರಯತ್ನವಾಗಿದೆ. ಹಾಗೇ ಒಂದುಗೂಡಿ ದುಡಿದವರೆಲ್ಲರೂ ಪ್ರತಿಫಲಗಳನ್ನು ಹಂಚಿಕೊಳ್ಳುತ್ತಾರೆ. ಉದಾಹರಣೆಗೆ ಆಟದಲ್ಲಿ ಭಾಗಿಗಳಾದವರು ತಮ್ಮ ವಿಜಯವನ್ನು ಹಂಚಿಕೊಳ್ಳುತ್ತಾರೆ. ಕಾರ್ಖಾನೆಯ ಒಟ್ಟು ಲಾಭದಲ್ಲಿ ಕಾರ್ಮಿಕರೆಲ್ಲರೂ ಒಂದು ಭಾಗ ಪಾಲನ್ನು ಹಂಚಿಕೊಳ್ಳುತ್ತಾರೆ.

d. **ಸಹಕಾರ ಯಾವಾಗಲೂ ಸ್ವಾರ್ಥರಹಿತವಾಗಿರುತ್ತದೆ ಎನ್ನುವಂತಿಲ್ಲ:–** ಸಹಕಾರ ಸ್ವಾರ್ಥರಹಿತ ಕ್ರಿಯೆಯೆಂದು ಪರಿಗಣಿಸಿದ್ದರೂ ಸ್ವಾರ್ಥ ಸಾಧನೆಗೂ ಅದು ಸಹಾಯಕವಾಗಿದೆ. ಸ್ವಂತಲಾಭಕ್ಕಾಗಿ, ಸ್ವರಕ್ಷಣೆಗಾಗಿ, ಇತರರಿಗೆ ಒಳ್ಳೆಯದನ್ನು ಮಾಡಲು ಜನರು ಸಹಕರಿಸಿ ದುಡಿಯಬಹುದು. ಸಮೂಹಗಳೂ ಕೂಡ ಏಕಸ್ವಾಮ್ಯವಿದ್ದಂತೆ ಅಥವಾ ಪರಸ್ಪರ ರಕ್ಷಣೆಗಾಗಿ ಅಥವಾ ಎಲ್ಲಾ ಸಮೂಹಗಳ ಕಲ್ಯಾಣಕ್ಕಾಗಿ ಸಹಕರಿಸಿಕೊಂಡಿರಬಹುದು.

e. **ಸಹಕಾರಕ್ಕೆ ಅಗತ್ಯವಾದ ಪರಿಸ್ಥಿತಿಗಳು:–** ಸಹಕಾರವು ಕೆಲವು ಪರಿಸ್ಥಿತಿಗಳಲ್ಲಿ ಮಾತ್ರ ಕಾಣಬಹುದು. ಸಹಕಾರಕ್ಕೆ ಅಗತ್ಯವಾಗಿರುವ ಅಂಶಗಳೆಂದರೆ ಅ) ಒಂದು ಉದ್ದೇಶ ಸಾಧನೆಗಾಗಿ ಪ್ರೇರಣೆ ಆ) ಸಹಕಾರದ ಬಗ್ಗೆ ಶಿಕ್ಷಣ ಮತ್ತು ಸಹಕಾರ ಚಟುವಟಿಕೆಯಿಂದ ಆಗುವ ಲಾಭದ ಕಲ್ಪನೆ. ಇ) ಪ್ರತಿಫಲವನ್ನು ಪಡೆಯಲು ಅಗತ್ಯವಾದ ಪರಿಶ್ರಮವನ್ನೂ ಪರಸ್ಪರ ಹಂಚಿಕೊಳ್ಳುವ ಮನೋಭಾವ ಈ) ಸಹಕಾರಿ ಯೋಜನೆಯು ಸರಿಯಾಗಿ ಕಾರ್ಯನಿರ್ವಹಿಸುವಂತೆ ಮಾಡಲು ಅಗತ್ಯವಾದ ನೈಪುಣ್ಯವನ್ನು ಬೆಳಿಸಿಕೊಳ್ಳುವುದು.

f. **ಸಹಕಾರಿ ಮನೋಭಾವದ ಬೆಳವಣಿಗೆಗೆ ಅವಶ್ಯವೆನಿಸಿರುವ ಮಾನಸಿಕ ಗುಣಗಳು:–** ಸಹಕಾರವು ಅನುಕಂಪ ಮತ್ತು ಅನ್ಯೋನ್ಯತೆಯನ್ನು ಅವಲಂಬಿಸಿದೆ. ಇತರರ ಬಗ್ಗೆ ಯಾವುದೇ ಕಾಳಜಿ ಇಲ್ಲದವನು ಸಹಕಾರದ ಅರ್ಥವನ್ನು ಗ್ರಹಿಸಲಾರ. ಪರಸ್ಪರ ಸಹಾಯ ಎನ್ನುವುದು ಸಹಕಾರದ ಇನ್ನೊಂದು ಹೆಸರು. ಸಮಾನ ಮನೋಭಾವ, ಪರಸ್ಪರ ಅರಿವು, ಸಹಾಯ ಮಾಡುವ ಮನೋಧರ್ಮ ಮತ್ತು ಸ್ವಲ್ಪಮಟ್ಟಿನ ಸ್ವಾರ್ಥರಹಿತ ಭಾವ ಇವುಗಳು ಜನರಲ್ಲಿ ಕಂಡು ಬರುವುದರಿಂದಾಗಿಯೇ ಸಹಕಾರವು ಸಾಧ್ಯವಾಗಿದೆ.

## 3. ಸಹಕಾರದ ಪ್ರಕಾರಗಳು :– (Types of Co-operation)

ಸಹಕಾರದ ಪ್ರಕಾರಗಳನ್ನು ಎರಡು ರೀತಿಯಲ್ಲಿ ವಿಂಗಡಿಸಲಾಗಿದೆ. ಒಂದು ವರ್ಗೀಕರಣದಂತೆ 1) ಪ್ರತ್ಯಕ್ಷ ಸಹಕಾರ 2) ಪರೋಕ್ಷ ಸಹಕಾರ ಎಂದು ವರ್ಗೀಕರಿಸಬಹುದು. ಈ ವರ್ಗೀಕರಣದವನ್ನು ಪ್ರಾಥಮಿಕ ಸಹಕಾರ ಮತ್ತು ಮಾಧ್ಯಮಿಕ ಸಹಕಾರ ಎಂದು ತಿಳಿಯಬಹುದು.

1) **ಪ್ರತ್ಯಕ್ಷ ಸಹಕಾರ** (Direct cooperator) :– ಪ್ರತ್ಯಕ್ಷ ಸಹಕಾರದಲ್ಲಿ ವ್ಯಕ್ತಿಗಳು ಸಾಮಾನ್ಯವಾಗಿ ಒಂದೇ ಉದ್ದೇಶವನ್ನು ಹೊಂದಿದ್ದು ಅದನ್ನು ಕೈಗೊಳ್ಳಲು ಒಂದೇ ಬಗೆಯ ಕಾರ್ಯದಲ್ಲಿ ಭಾಗವಹಿಸುತ್ತಾರೆ. ಸಹಕಾರದಲ್ಲಿ ಜನರು ಒಟ್ಟಾಗಿ ಕಾರ್ಯನಿರ್ವಹಿಸುತ್ತಾರೆ. ಸಹಕಾರದಲ್ಲಿ ಜನರು ಸಾಮಾನ್ಯವಾಗಿ ದೈಹಿಕವಾಗಿ ಹಾಗೂ ಮಾನಸಿಕವಾಗಿ ಒಟ್ಟಾಗಿ ದುಡಿಯುವರು. ಉದಾಹರಣೆಗೆ ಒಟ್ಟಾಗಿ ಹೊಲಗದ್ದೆಗಳಲ್ಲಿ ದುಡಿಯುವುದು. ಒಟ್ಟಿಗೆ ಉತ್ಸವ ಮತ್ತು ಧಾರ್ಮಿಕ ಸಮಾರಂಭಗಳನ್ನು ನಡೆಸುವುದು. ಒಟ್ಟಿಗೆ ಭಾರವಾದ ವಸ್ತುಗಳನ್ನು ಎತ್ತುವುದು ಇತ್ಯಾದಿ. ಇಂತಹ ಸಹಕಾರವು ವ್ಯಕ್ತಿಗಳಲ್ಲಿ ಅನ್ಯೋನ್ಯತೆಯನ್ನು, ಐಕ್ಯತೆಯನ್ನು ಬೆಳೆಸುವುದು ಮಾತ್ರವಲ್ಲದೆ ವ್ಯಕ್ತಿಗಳಿಗೆ ಮತ್ತು ಸಮೂಹಗಳಿಗೆ ಸಾಮಾಜಿಕ ಸಂತೃಪ್ತಿಯನ್ನು ತರುವುದು.

2) **ಪರೋಕ್ಷ ಸಹಕಾರ** (Indirect cooperator) : ಪರೋಕ್ಷ ಸಹಕಾರದಲ್ಲಿ ಒಂದು ಗುರಿಸಾಧನೆಗಾಗಿ ವ್ಯಕ್ತಿಗಳು ವಿವಿಧ ಬಗೆಯ ಕಾರ್ಯಗಳಲ್ಲಿ ಭಾಗಿಗಳಾಗುತ್ತಾರೆ. ವ್ಯಕ್ತಿಗಳು ಇಲ್ಲಿ ವೈಯುಕ್ತಿಕ ನೆಲೆಯಲ್ಲಿ ಕೆಲಸ ಮಾಡುತ್ತಾರೆ. ಆದರೂ ಅವರ ಉದ್ದೇಶವು ಒಂದೇ ಆಗಿರುತ್ತದೆ. ಈ ಬಗೆಯ ಸಹಕಾರವು ಶ್ರಮವಿಭಜನೆ ಮತ್ತು ವಿಶೇಷ ಪರಿಣತಿಯನ್ನು ಆಧರಿಸಿದೆ. ಇಂದಿನ ಆಧುನಿಕ ಸಮಾಜದಲ್ಲಿ ಪರೋಕ್ಷ ಸಹಕಾರವು ಪ್ರಮುಖ ಪಾತ್ರ ವಹಿಸುತ್ತದೆ. ಉದಾಹರಣೆಗೆ ಬ್ಯಾಂಕಿನ ಬೇರೆ ಬೇರೆ ಸಿಬ್ಬಂದಿ ವರ್ಗದವರು ಬೇರೆ ಬೇರೆ ಕ್ಷೇತ್ರಗಳಲ್ಲಿ ಕೆಲಸ ಮಾಡುವುದರಿಂದ ಬ್ಯಾಂಕಿನ ಕೆಲಸ ಸುಗಮವಾಗಲು ಸಾಧ್ಯ. ಇದಕ್ಕಾಗಿ ಬ್ಯಾಂಕಿನ ನೌಕರರಲ್ಲಿ ಸಹಕಾರದ ಪ್ರಜ್ಞೆಯು ಇರಬೇಕಾಗುತ್ತದೆ. ಹಾಗೆಯೇ ಆಸ್ಪತ್ರೆಯಲ್ಲಿ ದಾದಿಯರು, ವೈದ್ಯರು, ಇತರ ಸಿಬ್ಬಂಧಿವರ್ಗದವರು ಮತ್ತು ರೋಗಿಗಳ ನಡುವಿನ ಸಹಕಾರದಿಂದಾಗಿ ಆಸ್ಪತ್ರೆಯು ಕಾರ್ಯನಿರ್ವಹಿಸುವುದು ಸಾಧ್ಯವಾಗಿದೆ. ಸರ್ಕಾರದ ಕಾರ್ಯಕ್ಷೇತ್ರದಲ್ಲಿ ಕೈಗಾರಿಕ ಕ್ಷೇತ್ರದಲ್ಲಿ, ವೈಜ್ಞಾನಿಕ ಸಂಶೋಧನೆಯಲ್ಲಿ ಶ್ರಮವಿಭಜನೆ ಆಧಾರದ ಮೇಲೆ ಪರೋಕ್ಷ ಸಹಕಾರ ನಡೆಯುವುದು ಸಮಾಜವು ಹೆಚ್ಚು ಸಂಕೀರ್ಣವಾಗುತ್ತಾ ಹೋದಂತೆ ಪರೋಕ್ಷ ಸಹಕಾರವು ಹೆಚ್ಚಾಗಿ ಕಂಡುಬರುತ್ತದೆ.

## 4. ಸಹಕಾರದ ಪ್ರಾಮುಖ್ಯತೆಗಳು (importance of Co-operation):

a. **ಸಹಕಾರವು ಒಂದು ಸಾಮಾಜಿಕ ಅಗತ್ಯತೆಯಾಗಿದೆ. (Co-operation is a social necessity)** ಸಹಕಾರದಿಂದಾಗಿ ನಮ್ಮ ಸಾಮಾಜಿಕ ಜೀವನ ಸಾಧ್ಯವಾಗಿದೆ. ಅದು ನಮ್ಮ ಜೀವನವನ್ನು ಸಂಪೂರ್ಣವಾಗಿ ಆವರಿಸಿ ನಿಲ್ಲುತ್ತದೆ. ಮೆಕೈವರ್ ಮತ್ತು ಪೇಜ್‌ರವರು ಹೇಳಿರುವಂತೆ ಸಹಕಾರವಿಲ್ಲದೆ ಮತ್ತು ಸಮಾನ ಆಸಕ್ತಿಗಳ ಪೂರೈಕೆಯ ದೃಷ್ಟಿಯಿಂದ ಇತರರೊಂದಿಗೆ ಸಹಕರಿಸಿ ದುಡಿದಲ್ಲದೇ ಮಾನವನು ಇತರರೊಂದಿಗೆ ಸಹ ಜೀವನ ನಡೆಸಲಾರ.

b. **ಸಹಕಾರವು ನಮ್ಮ ಜೈವಿಕ ಅಸ್ತಿತ್ವಕ್ಕೆ ಕೂಡ ಅಗತ್ಯವಾದುದು :– ( Co-operation is necessary for our biological survival also)** ರಷ್ಯಾದ ಸಮಾಜಶಾಸ್ತ್ರಜ್ಞ ಪ್ರಿನ್ಸ್ ಕ್ರೋಪಾಟ್‌ಕಿನ್ ಹೇಳುವಂತೆ ಸಹಕಾರದ

ಹೊರತಾಗಿ ಬದುಕುವುದೇ ಅಸಾಧ್ಯ. ಮಾನವ ಜನಾಂಗದ ಮುಂದುವರೆಯುವಿಕೆಯ ದೃಷ್ಟಿಯಿಂದಲಾದರೂ ಸ್ತ್ರೀ–ಪುರುಷರ ನಡುವೆ ಸಹಕಾರವಿರಬೇಕಾದುದು ಅನಿವಾರ್ಯವಾಗಿದೆ. ಈ ಅನಿವಾರ್ಯತೆಯ ಕಾರಣದಿಂದಲೇ "ಕುಟುಂಬ" ಎಂಬ ಅತ್ಯಂತ ಪ್ರಾಥಮಿಕ ಸ್ವರೂಪದ ಸಮೂಹವು ಹುಟ್ಟಿಕೊಂಡಿದ್ದು ಸಹಕಾರದ ತತ್ವದ ಆಧಾರದಲ್ಲಿಯೇ ನಡೆಯುವುದು. ಹೀಗೆ ಸಹಕಾರವು ಜೈವಿಕ ಮಟ್ಟದಲ್ಲಿಯೂ ಕಂಡುಬರುವುದು.

c. **ಸಹಕಾರವು ಪ್ರಗತಿ ಸಾಧಿಸಲು ಸಹಾಯಕವಾದುದು :– (Co-operation helps progress)** ಸರಕಾರವು ಸಮಾಜದ ಪ್ರಗತಿಗೆ ಅತೀ ಅವಶ್ಯಕವಾಗಿದೆ. ಕೃಷಿ, ಉದ್ದಿಮೆ, ಸಾರಿಗೆ ಸಂಪರ್ಕ, ತಾಂತ್ರಿಕತೆ ಮೊದಲಾದ ಕ್ಷೇತ್ರಗಳಲ್ಲಿ ಸಹಕಾರವಿಲ್ಲದೇ ಪ್ರಗತಿ ಸಾಧಿಸುವುದು ಅಸಾಧ್ಯ.

d. **ಸಹಕಾರವು ಅಂತಾರಾಷ್ಟ್ರೀಯ ವಿವಾದಗಳಿಗೆ ಹಾಗೂ ಸಮಸ್ಯೆಗಳಿಗೆ ಪರಿಹಾರ ನೀಡಬಹುದು. (Co-operation provides solutions to international disputes and problems)** ಸಹಕಾರವು ಇಂದು ರಾಷ್ಟ್ರ ಹಾಗೂ ಅಂತಾರಾಷ್ಟ್ರೀಯ ಮಟ್ಟದಲ್ಲಿಯೂ ಕಂಡುಬರುವುದು. ವಿಶ್ವದಲ್ಲಿ ಶಾಂತಿ ಏರ್ಪಡಿಸಬೇಕಾದರೆ ಜಗತ್ತಿನ ಎಲ್ಲಾ ರಾಷ್ಟ್ರಗಳ ನಡುವೆ ಉನ್ನತ ಮಟ್ಟದಲ್ಲಿ ಸಹಕಾರವು ಏರ್ಪಡಿಸಬೆಕು. ಅನೇಕ ಜಾಗತಿಕ ಸಮಸ್ಯೆಗಳಿಗೆ ಮತ್ತು ಕಲಹಗಳಿಗೆ ಸಹಕಾರವು ಶಾಶ್ವತ ಪರಿಹಾರವನ್ನು ಒದಗಿಸಬಲ್ಲದು.

e. **ಸಹಕಾರ ಮತ್ತು ಪರಸ್ಪರಾವಲಂಬನೆ, ಇವು ಒಟ್ಟಿಗೆ ಸಾಗುವುವು :– (Co-operation and interdependence go hand in hand)** ಸಹಕಾರ ಮತ್ತು ಪರಸ್ಪರ ಅವಲಂಬಿಯು ಆಧುನಿಕ ಜೀವನದ ಅನಿವಾರ್ಯತೆಗಳಲ್ಲೊಂದು, ಇದಕ್ಕೆ ಮುಖ್ಯ ಕಾರಣ ವ್ಯಕ್ತಿಗಳು, ಸಮೂಹಗಳು, ಸಮಾಜಗಳು ಹಾಗೂ ದೇಶಗಳ ನಡುವಿನ ಪರಸ್ಪರ ಅವಲಂಬನೆ. ವಿಶ್ವ ರಾಷ್ಟ್ರಸಂಘದಂತಹ ಸಂಘಟನೆಯು ತನ್ನ ಸದಸ್ಯ ರಾಷ್ಟ್ರಗಳ ನಡುವಿನ ಸಹಕಾರ ವರ್ಧನೆಯ ಉದ್ದೇಶವನ್ನು ಹೊಂದಿದೆ.

## 3.4. ಸ್ಪರ್ಧೆ (Competition) :–

### ಅರ್ಥ ಮತ್ತು ವ್ಯಾಖ್ಯೆಗಳು (Meaning and Definition):

ಸಹಕಾರದಂತೆ ಸ್ಪರ್ಧೆಯೂ ಸಹ ಒಂದು ಸಾರ್ವತ್ರಿಕವಾದ ಸಾಮಾಜಿಕ ಪ್ರಕ್ರಿಯೆಯಾಗಿದೆ. ತನ್ನ ಅಸ್ತಿತ್ವಕ್ಕಾಗಿ ಮಾನವನು ನಡೆಸುವ ಹೋರಾಟದ ಫಲವಾಗಿರುವ ಸ್ಪರ್ಧೆಯು ಇಂದು ಮಾನವನ ಅನೇಕ ಕ್ಷೇತ್ರಗಳನ್ನು ವ್ಯಾಪಿಸಿಕೊಂಡಿದೆ. ಎಲ್ಲಾ ವ್ಯಕ್ತಿಗಳು ತಮ್ಮ ಎಲ್ಲಾ ಬೇಡಿಕೆಗಳನ್ನು ಈಡೇರಿಸಿಕೊಳ್ಳುವುದು ಅಸಾಧ್ಯವೆಂಬ ಸತ್ಯಾಂಶದ ಮೇಲೆ ಸ್ಪರ್ಧೆಯು ಆಧಾರಿತವಾಗಿದೆ ಎನ್ನಬಹುದು. ಜನರು ಸಾಮಾನ್ಯವಾಗಿ ಬಯಸುವ ವಸ್ತುಗಳು ಪೂರೈಕೆಯಲ್ಲಿ ಸೀಮಿತವಾದಾಗ ಅವುಗಳನ್ನು ಪಡೆಯಲು ಸ್ಪರ್ಧೆಯು ಅನಿವಾರ್ಯವಾಗುವುದು. ಹೀಗೆ ಪರಿಮಿತ ಪ್ರಮಾಣದಲ್ಲಿ ಸಿಗುವ ವಸ್ತುವಿಗಾಗಿ ವ್ಯಕ್ತಿಗಳೊಳಗೆ ಮತ್ತು ಸಮೂಹಗಳೊಳಗೆ ನಡೆಯುವ ಸತತ ಹೋರಾಟವೇ ಸ್ಪರ್ಧೆಯಾಗಿದೆ.

1. **ಬೈಸಾಂಜ್ ಮತ್ತು ಬೈಸಾಂಜ್:** "ಎಲ್ಲರೂ ಹಂಚಿಕೊಳ್ಳಲು ಸಾಧ್ಯವಾಗದ ನೇಮಕ ಉದ್ದೇಶಕ್ಕಾಗಿ ಇಬ್ಬರು ಅಥವಾ ಅದಕ್ಕೂ ಹೆಚ್ಚು ಜನರ ನಡುವೆ ನಡೆಯುವ ಹೋರಾಟವೇ ಸ್ಪರ್ಧೆ".

2. **ಇ.ಎಸ್.ಬೋಗಾರ್ಡಸ್:** "ಬೇಡಿಕೆಯನ್ನು ಈಡೇರಿಸಲು ಅಗತ್ಯ ಪ್ರಮಾಣದಲ್ಲಿ ಪೂರೈಕೆ ಇಲ್ಲದಿದ್ದಾಗ ಅದನ್ನು ಪಡೆಯಲು ನಡೆಸುವ ಹೋರಾಟವೇ ಸ್ಪರ್ಧೆ".

3. **ಹಾರ್ಟನ್ ಮತ್ತು ಹಂಟ್:** "ಪ್ರತಿಸ್ಪರ್ಧಿಗಳನ್ನು ಹಿಂದೆ ತಳ್ಳಿ ಪ್ರತಿಫಲದ ಮೇಲೆ ಏಕಸ್ವಾಮ್ಯವನ್ನು ಸ್ಥಾಪಿಸುವ ಪ್ರಯತ್ನವೇ ಸ್ಪರ್ಧೆ".

**2. ಸ್ಪರ್ಧೆಯ ಲಕ್ಷಣಗಳು (Characteristics of competition):–**

a. **ಸ್ಪರ್ಧೆ ಮತ್ತು ಕೊರತೆ (Competition and Scarcity)** ಜನರು ಬಯಸುವ ವಸ್ತುಗಳು, ಸಂಪತ್ತು, ಹಣ, ಅಧಿಕಾರ, ಸ್ಥಾನಮಾನ, ಕೀರ್ತಿ, ಉದ್ಯೋಗ, ಹೆಸರು, ಪ್ರೀತಿ ಮೊದಲಾದುವುಗಳು ಪೂರೈಕೆಯಲ್ಲಿ ಸೀಮಿತವಾದಾಗ ಸ್ಪರ್ಧೆಯೂ ಅನಿವಾರ್ಯವಾಗುವುದು. ಸೀಮಿತ ಸಂಪತ್ತನ್ನು ಹೊಂದಿರುವ ಜಗತ್ತಿನಲ್ಲಿ ಪೂರ್ಣ ಸಂತೃಪ್ತಿಗೊಳಿಸಲಾಗದ ಬಯಕೆಗಳನ್ನು ಹೊಂದಿರುವ ಜನರು ಇರುವಾಗ ಸ್ಪರ್ಧೆ ಅನಿವಾರ್ಯ.

b. **ಸ್ಪರ್ಧೆ ಮತ್ತು ಸಂಪತ್ತು (competition and affluence)** ಧನ ಸಮೃದ್ಧಿಯಿರುವ ಸಮಾಜಗಳಲ್ಲಿ ಹಣ, ಸಂಬಳ, ಉದ್ಯೋಗ, ಬಟ್ಟೆ, ಆಹಾರ, ವಸತಿ, ಮುಂತಾದವುಗಳಿಗಿಂತ ಹೆಚ್ಚಾಗಿ ಹೆಸರು, ಕೀರ್ತಿ,ಸಾಮಾಜಿಕ ಸ್ಥಾನಮಾನ, ಅಧಿಕಾರ ಸಂಗಾತಿಗಳು, ಭೋಗ, ಪ್ರೀತಿ, ಸ್ನೇಹ ಮೊದಲಾದವುಗಳನ್ನು ಪಡೆಯಲು ಜನರು ಪರಸ್ಪರ ಸ್ಪರ್ಧೆಯಲ್ಲಿ ತೊಡಗುವರು.

c. **ಸ್ಪರ್ಧೆಯು ಸರ್ವವ್ಯಾಪಕವಾದುದು:– (Competition is universal)** ಸ್ಪರ್ಧೆಯು ಇಂದು ಸಾರ್ವತ್ರಿಕವಾಗಿರುವ ಒಂದು ಪ್ರಕ್ರಿಯೆಯಾಗಿದೆ. ಸ್ಪರ್ಧೆಯು ನಮ್ಮ ಸಾಮಾಜಿಕ ಜೀವನದ ಎಲ್ಲಾ ಕ್ಷೇತ್ರಗಳಲ್ಲಿಯೂ ಕಂಡು ಬರುತ್ತದೆ. ವರ್ತಕರು ಗಿರಾಕಿಗಳಿಗಾಗಿ, ವಕೀಲರು ಕಕ್ಷಿದಾರರಿಗಾಗಿ, ರಾಜಕೀಯ ಪಕ್ಷಗಳು ಅಧಿಕಾರಕ್ಕಾಗಿ, ಯುವಕ ಯುವತಿಯರು ಸಂಗಾತಿಗಳನ್ನು ಪಡೆಯಲು, ಕ್ರೀಡಾಪಟುಗಳು ವಿಜಯ ಫಲಕಗಳಿಗಾಗಿ ಪರಸ್ಪರ ಸ್ಪರ್ಧೆಯಲ್ಲಿ ತೊಡಗುವುದು ಸಾಮಾನ್ಯವಾಗಿದೆ.

d. **ಸ್ಪರ್ಧೆಯು ನಿರಂತರವಾದುದು (Competition is continuous)** ಸ್ಪರ್ಧೆಯು ನಿರಂತರವಾದ ಪ್ರಕ್ರಿಯೆಯಾಗಿದೆ. ಸ್ಪರ್ಧೆಗೆ ಅಂತ್ಯವೆಂಬುದಿಲ್ಲ. ಮಾನವ ಸಮಾಜದ ಆರಂಭದಿಂದಲೂ ಸ್ಪರ್ಧೆಯು ನಿರಂತರವಾಗಿ ನಡೆದುಕೊಂಡು ಬಂದಿದೆ.

e. **ಸ್ಪರ್ಧೆಯು ಗತಿಶೀಲವಾಗಿದೆ (Competition is dynamic)** ಸ್ಪರ್ಧೆಯು ಸಾಧನೆ, ಸಹಾಯ ಮಾಡಲು ಪ್ರೇರಣಾದಾಯಕವಾಗಿದೆ. ಅದು ಜನರ ಹಂಬಲದ ಮಟ್ಟವನ್ನು ಕೆಳಗಿನಿಂದ ಮೇಲಕ್ಕೇರಿಸುವುದು. ಉದಾ; ತನ್ನ ಕಾಲೇಜು ಕ್ರಿಕೆಟ್ ತಂಡಕ್ಕೆ ಆಯ್ಕೆಯಾಗಬೇಕೆಂದು ಬಯಸುವ ವಿದ್ಯಾರ್ಥಿಯೋರ್ವನು ಇತರರೊಂದಿಗೆ ಸ್ಪರ್ಧೆಗೆ ತೊಡಗುವನು ಅದಕ್ಕೆ ಆಯ್ಕೆಯಾದ ನಂತರ ಆತನು ವಿಶ್ವವಿದ್ಯಾಲಯದ ತಂಡಕ್ಕೆ ನಂತರ ರಾಜ್ಯ, ರಾಷ್ಟ್ರತಂಡಕ್ಕೆ ಹೀಗೆ ಉನ್ನತ ಮಟ್ಟಕ್ಕೇರಲು ಸ್ಪರ್ಧಾತ್ಮಕ ಕ್ರಿಯೆಯಲ್ಲಿ ತೊಡಗುತ್ತಾನೆ.

f. **ಸ್ಪರ್ಧೆಯು ನಿಯಮಗಳಿಗೆ ಬದ್ಧವಾಗಿದೆ. (Competition is governed by norms )** ಸ್ಪರ್ಧೆಯು ಸಾಮಾನ್ಯವಾಗಿ ಇತಿಮಿತಿಗಳಿಂದ ಕೂಡಿದ್ದು ನಿಯಮಗಳಿಗೆ ಬದ್ಧವಾಗಿದೆ. ನಿಯಮಗಳನ್ನು ಉಲ್ಲಂಘಿಸುವ ಪ್ರವೃತ್ತಿ ಜನರಿಗಿರುವುದಾದರೂ ನಿಯಮರಹಿತ ಮತ್ತು ಅನಿಯಂತ್ರಿತ ಸ್ಪರ್ಧೆಯು ಯಾವುದೇ ಸಮಾಜದಲ್ಲಿ ಮಾನ್ಯತೆ ಪಡೆದಿಲ್ಲ. ನೈತಿಕ, ಕಾನೂನಿನ ಮತ್ತು ಸಾಮಾಜಿಕ ನಿಯಮಗಳು ಸ್ಪರ್ಧೆಯನ್ನು ನಿಯಂತ್ರಿಸುತ್ತವೆ.

g. **ಸ್ಪರ್ಧೆಯು ಪ್ರಜ್ಞಾಪೂರ್ವಕವಲ್ಲದ ಕ್ರಿಯೆಯೂ ಆಗಿರಬಹುದು: Competition may be unconscious also) :–** ಒಮ್ಮೊಮ್ಮೆ ವ್ಯಕ್ತಿಗಳು ತಮಗರಿವಿಲ್ಲದೆಯೇ ಇತರರೊಡನೆ ಸ್ಪರ್ಧೆಗಿಳಿಯಬಹುದು. ಚಿಕ್ಕಮಕ್ಕಳು ತಮಗರಿವಿಲ್ಲದೆಯೇ ತಾಯಿಯ ಪ್ರೀತಿ ಮತ್ತು ಪ್ರಶಂಸೆಯನ್ನು ಗಳಿಸಲು ಪರಸ್ಪರ ಸ್ಪರ್ಧೆಯಲ್ಲಿ ತೊಡಗಬಹುದು.

h. **ಸ್ಪರ್ಧೆಯು ರಚನಾತ್ಮಕವಾಗಿರಬಹುದು ಇಲ್ಲದೇ ವಿನಾಶಾತ್ಮಕವಾಗಿರಬಹುದು (Competition may be constructive or destructive) :-** ರಚನಾತ್ಮಕ ಸ್ಪರ್ಧೆಯಿಂದ ಎಲ್ಲರಿಗೂ ಲಾಭವಾಗುವುದು. ಅದು ಅಂತಿಮವಾಗಿ ಎಲ್ಲರ ಕಲ್ಯಾಣದಲ್ಲಿ ಪರ್ಯವಸಾನವಾಗುವುದು. ಕೃಷಿಕರು ಮತ್ತು ಕಾರ್ಮಿಕರು ಉತ್ಪಾದನೆ ಹೆಚ್ಚಿಸಲು ಪರಸ್ಪರ ಸ್ಪರ್ಧಿಸುವುದರಿಂದ ಉತ್ಪಾದನೆ ಹೆಚ್ಚಾಗಿ ಎಲ್ಲರಿಗೂ ಲಾಭವಾಗುವುದು. ಆದರೆ ವಿನಾಶಾತ್ಮಕ ಸ್ಪರ್ಧೆಯು ನಷ್ಟವನ್ನು ತರುವುದು. ತಾವು ಲಾಭಗಳಿಸಬೇಕೆಂಬುದಕ್ಕಿಂತ ಪ್ರತಿಸ್ಪರ್ಧಿಗಳಿಗೆ ನಷ್ಟವನ್ನುಂಟು ಮಾಡಬೇಕೆಂಬುದು ಸ್ಪರ್ಧಿಗಳ ಮನೋಭಾವವಾಗಿರುವುದು. ಈ ಬಗೆಯ ಸ್ಪರ್ಧೆಯನ್ನುಂಟು ಮಾಡುವುದು ತೀರಾ ಸಹಜವಾಗಿದೆ.

i. **ವೈಯುಕ್ತಿಕ ಮತ್ತು ಅವೈಯುಕ್ತಿಕ ಸ್ಪರ್ಧೆ (Personal and Impersonal competition):** ಸ್ಪರ್ಧೆಯು ವೈಯುಕ್ತಿಕ ಮತ್ತು ಅವೈಯುಕ್ತಿಕ ಸ್ವರೂಪಗಳಲ್ಲಿಯೂ ಕಂಡುಬರುವುದು. ಸ್ಪರ್ಧೆಯು ಸಾಮಾನ್ಯವಾಗಿ ಒಂದು ಉದ್ದೇಶವನ್ನು ಸಾಧಿಸಲು ಅಥವಾ ಗುರಿಯನ್ನು ತಲುಪಲು ಉದ್ದೇಶಿಸಲ್ಪಟ್ಟಿರುತ್ತದೆಯೇ ವಿನಃ ಯಾವುದೇ ವ್ಯಕ್ತಿಯ ವಿರುದ್ದವಾದ ಹೋರಾಟವಾಗಿರುವುದಿಲ್ಲ. ಒಮ್ಮೊಮ್ಮೆ ಇತರರ ಅಸ್ತಿತ್ವದ ಪರಿವಿಲ್ಲದ ರೀತಿಯಲ್ಲಿ ಅದು ಸಂಭವಿಸುತ್ತದೆ. ಅಂತಹ ಸ್ಪರ್ಧೆಯು ಅವೈಯುಕ್ತಿಕ ಸ್ಪರ್ಧೆ ಸ್ವರೂಪದ್ದಾಗಿರುತ್ತದೆ. ಉದಾ: ಭಾರತೀಯ ಆಡಳಿತ ಸೇವೆ (IAS) ಹಲವಾರು ಸ್ಪರ್ಧಿಗಳು ಸ್ಪರ್ಧಿಸಬಹುದಾದರೂ ಅವರುಗಳಿಗೆ ಪರಸ್ಪರ ಪರಿಚಯವಿರುವುದಿಲ್ಲ. ಸ್ಪರ್ಧೆಯು ವೈಯುಕ್ತಿಕ ಸ್ವರೂಪದಲ್ಲಿಯೂ ನಡೆಯುವುದು ಇಬ್ಬರು ವ್ಯಕ್ತಿಗಳ ನಡುವೆ ನೇರವಾಗಿ ನಡೆಯುವ ಸ್ಪರ್ಧೆಯು ವೈಯುಕ್ತಿಕ ಸ್ವರೂಪದ್ದಾಗಿರುತ್ತದೆ. ಇದನ್ನು ಮೇಲಾಟ ಎಂತಲೂ ಕರೆಯುವುದುಂಟು ಉದಾಹರಣೆಗೆ ಇಬ್ಬರು ಅಭ್ಯರ್ಥಿಗಳು ಒಂದು ಅಧಿಕಾರಕ್ಕಾಗಿ, ಸ್ಥಾನಕ್ಕಾಗಿ ಚುನಾವಣೆಯ ಕಣಕ್ಕಿಳಿದು ಪರಸ್ಪರ ಮೇಲಾಟ ನಡೆಸುವುದು.ಸಾಮಾಜಿಕ ಜಗತ್ತಿನಲ್ಲಿ ಸ್ಪರ್ಧೆಯು ಹೆಚ್ಚಾಗಿ ಅವೈಯುಕ್ತಿಕ ಸ್ವರೂಪದಲ್ಲಿಯೇ ಕಾಣಿಸಬಹುದು. ಆದರೆ ಅವೈಯಕ್ತಿಕ ಸ್ವರೂಪದಿಂದ ತೀರ ವೈಯುಕ್ತಿಕ ಮಟ್ಟಕ್ಕಿಳಿದಾಗ ಸ್ಪರ್ಧೆಯು ಸಂಘರ್ಷಕ್ಕೆ ಕಾರಣವಾಗಬಹುದು.

### 3. ಸ್ಪರ್ಧೆಯ ಪ್ರಕಾರಗಳು: (Types of competition)

**ಬರ್ನಾರ್ಡ್‌ರವರು ಸಾಮಾಜಿಕ ಸ್ಪರ್ಧೆ, ಆರ್ಥಿಕ ಸ್ಪರ್ಧೆ ಮತ್ತು ರಾಜಕೀಯ ಸ್ಪರ್ಧೆ, ಜನಾಂಗೀಯ ಸ್ಪರ್ಧೆಗಳು ಕೂಡ ಮುಖ್ಯವಾಗಿವೆ.**

a. **ಸಾಮಾಜಿಕ ಸ್ಪರ್ಧೆ:– (Social Competition)** ಉನ್ನತ ಸಾಮಾಜಿಕ ಅಂತಸ್ತು ಮತ್ತು ಸ್ಥಾನಮಾನವನ್ನು ಪಡೆಯಲು ಜನರು ಯಾವಾಗಲೂ ಪರಸ್ಪರ ಸ್ಪಧೆಯಲ್ಲಿ ತೊಡಗಿರುತಾರೆ. ಈ ಬಗೆಯ ಸ್ಪರ್ಧೆಯು ಪರಿವರ್ತನಾಶೀಲವಾದ ಮತ್ತು ಮುಕ್ತ ಸಮಾಜಗಳಲ್ಲಿ ತೀವ್ರವಾಗಿ ಕಂಡುಬರುವುದು. ಪ್ರಜಾತಾತ್ಮಕ ವ್ಯವಸ್ಥೆಯಲ್ಲಿ ಈ ರೀತಿಯ ಸ್ಪರ್ಧೆಗೆ ಹೆಚ್ಚು ಅವಕಾಶಗಳಿರುತ್ತವೆ. ವೈಯುಕ್ತಿಕ ಪ್ರತಿಭೆ, ಸಾಮರ್ಥ್ಯ ಮತ್ತು ಬುದ್ದಿಶಕ್ತಿಯನ್ನು ಸಾಧನೆ ಸಾಹಸಗಳನ್ನು ಗೌರವಿಸುವ ಎಲ್ಲಾ ಸಮಾಜಗಳಲ್ಲೂ ಸಾಮಾಜಿಕ ಸ್ಪರ್ಧೆಯು ಸ್ಪಷ್ಟವಾಗಿ ಕಂಡುಬರುತ್ತದೆ.

b. **ಆರ್ಥಿಕ ಸ್ಪರ್ಧೆ :- (Economic Competition)** ಸ್ಪರ್ಧೆಯು ಇತರ ರೂಪಗಳಿಗಿಂತಲೂ ಆರ್ಥಿಕ ಸ್ಪರ್ಧೆಯೂ ಹೆಚ್ಚು ವ್ಯಾಪಕವಾಗಿ, ತೀವ್ರವಾಗಿ ಮತ್ತು ನಿರಂತರವಾಗಿ ಕಂಡುಬರುವುದು. ಸಂಪತ್ತಿನ ಉತ್ಪಾದನೆ, ವಿನಿಮಯ, ವಿತರಣೆ ಮತ್ತು ಅನುಭೋಗ ಮುಂತಾದ ಆರ್ಥಿಕ ಚಟುವಟಿಕೆಗಳಲ್ಲಿ ಈ ಬಗೆಯ ಸ್ಪರ್ಧೆಯನ್ನು ಕಾಣಬಹುದಾಗಿದೆ. ಜನರು ಸಂಪತ್ತಿಗಾಗಿ, ಆಸ್ತಿಗಾಗಿ, ಹಣಕ್ಕಾಗಿ, ಲಾಭಕ್ಕಾಗಿ, ಉದ್ಯೋಗಗಳಿಸುವುದಕ್ಕಾಗಿ, ಗಿರಾಕಿಗಳನ್ನು ಪಡೆಯಲು, ಸಂಬಳ, ಕೂಲಿಯನ್ನು ಪಡೆಯಲು ಹೆಚ್ಚುವರಿ ವೇತನ ಹಾಗೂ ಉನ್ನತ ಆರ್ಥಿಕ ಸ್ಥಾನಗಳಿಸಲು, ಹಣಕ್ಕಾಗಿ ರೋಗಿಗಳನ್ನು ಪಡೆಯಲು, ಕಕ್ಷಿದಾರರನ್ನು ಸಂಪಾದಿಸಲು ನಿರಂತರ ಸ್ಪರ್ಧೆಯಲ್ಲಿ ತೊಡಗಿರುತ್ತಾರೆ.

c. **ರಾಜಕೀಯ ಸ್ಪರ್ಧೆ :– (Political Competition)** ಎಲ್ಲಾ ದೇಶಗಳಲ್ಲಿಯೂ ರಾಜಕೀಯ ಪಕ್ಷಗಳೊಳಗೆ ಮತ್ತು ಒಂದೇ ಪಕ್ಷದ ಸದಸ್ಯರುಗಳೊಳಗೆ ರಾಜಕೀಯ ಅಧಿಕಾರಕ್ಕೆ ಸ್ಪರ್ಧೆಯು ನಡೆಯುವುದು. ಚುನವಣೆ ಸಂದರ್ಭಗಳಲ್ಲಿ ರಾಜಕೀಯ ಸ್ಪರ್ಧೆಯು ಎದ್ದು ತೋರುವುದು. ಹಾಗೆಯೇ ಅಂತರಾಷ್ಟ್ರೀಯ ಮಟ್ಟದಲ್ಲಿಯೂ ಕೂಡ ವಿವಿಧ ದೇಶಗಳೊಳಗೆ ರಾಜಕೀಯ ಸ್ಪರ್ಧೆಯು ಕಂಡುಬರುವುದು.

d. **ಸಾಂಸ್ಕೃತಿಕ ಸ್ಪರ್ಧೆ :– (Cultural Competition)** ವಿಭಿನ್ನ ಸಾಂಸ್ಕೃತಿಕ ಸಮೂಹಗಳೊಳಗೆ ಸಾಂಸ್ಕೃತಿಕ ಸ್ಪರ್ಧೆಯು ಕಂಡು ಬರುತ್ತದೆ. ಉದಾ: ಇಸ್ಲಾಂ ಮತ್ತು ಕ್ರೈಸ್ತ ಧರ್ಮಗಳ ನಡುವೆ, ಇಸ್ಲಾಂ ಮತ್ತು ಹಿಂದೂಧರ್ಮಗಳು, ಪ್ರೊಟೆಸ್ಟೆಂಟ್ ಮತ್ತು ಕ್ಯಾಥೋಲಿಕರು, ಭಾರತೀಯರು ಮತ್ತು ಪಾಶ್ಚಿಮಾತ್ಯರು ಆರ್ಯರು ಮತ್ತು ದ್ರಾವಿಡರ ನಡುವೆ ಸ್ಪರ್ಧೆಯು ವಿವಿಧ ಸ್ತರಗಳಲ್ಲಿ ಸಂಭವಿಸಿರುವುದಕ್ಕೆ ಇತಿಹಾಸದಲ್ಲಿ ನಿದರ್ಶನಗಳಿವೆ.

e. **ಜನಾಂಗೀಯ ಸ್ಪರ್ಧೆ :– (Racial Competition)** ಆರ್ಥಿಕ ಮತ್ತು ಪ್ರಾದೇಶಿಕ ಲಾಭಗಳಿಗಾಗಿ, ಸೀಮಿತ ದೃಷ್ಟಿಕೋನದ ಫಲವಾಗಿ ಮತ್ತು ರಾಜಕೀಯ ಉದ್ದೇಶಗಳಿಗಾಗಿ ವಿವಿಧ ಜನಾಂಗಗಳ ನಡುವೆ ಸ್ಪರ್ಧೆಯು ಹಿಂಸಾತ್ಮಕ ಹಾಗೂ ಅಹಿಂಸಾತ್ಮಕವಾಗಿರುತ್ತದೆ. ಉದಾ: ಬಿಳಿಯರು ಮತ್ತು ಕರಿಯರ ನಡುವಿನ ಸ್ಪರ್ಧೆಯು ದಕ್ಷಿಣ ಆಫ್ರಿಕಾ ಮತ್ತು ದಕ್ಷಿಣ ಅಮೇರಿಕಾದಲ್ಲಿ ಸರ್ವೆಸಾಮಾನ್ಯವಾಗಿದೆ.

### 4. ಸ್ಪರ್ಧೆಯ ಸಾಮಾಜಿಕ ಮಹತ್ವ (Importance or Functions of competiton):

ಮಾನವನ ಸಾಮಾಜಿಕ ಜೀವನದಲ್ಲಿ ಸ್ಪರ್ಧೆಗೆ ಬಹಳ ಪ್ರಾಮುಖ್ಯತೆ ಇದೆ. ಸ್ಪರ್ಧೆಯು ಅನೇಕ ಬಗೆಯ ಸಾಮಾಜಿಕ ಕಾರ್ಯಗಳನ್ನು ಮಾಡುವಲ್ಲಿ ಸಹಕಾರಿಯಾಗಿದೆ. ಸ್ಪರ್ಧೆಯ ಕಾರ್ಯಗಳನ್ನು ಈ ಕೆಳಕಂಡಂತೆ ವಿವರಿಸಬಹುದು.

a. **ಸ್ಪರ್ಧೆಯು ಕಾರ್ಯದಕ್ಷತೆಯನ್ನು ಹೆಚ್ಚಿಸುವುದು (Competition increases effieiency):–** ಸ್ಪರ್ಧೆಯು ಕ್ರಿಯಾತ್ಮಕವಾದುದ್ದಾದ್ದರಿಂದ ವ್ಯಕ್ತಿಯನ್ನು ನಿರಂತರವಾಗಿ ದುಡಿಯುವಂತೆ ಪ್ರೇರೇಪಿಸುತ್ತದೆ. ಸಹಕಾರವು ಕಾರ್ಯಸಾಧಿಸಬಹುದಾದರೆ, ಸ್ಪರ್ಧೆಯ ಮುಖಾಂತರ ಕಾರ್ಯವು ಹೆಚ್ಚು ಸಮರ್ಥಕವಾಗಿ ನೆರವೇರುವುದು.

b. **ಸ್ಪರ್ಧೆಯು ವ್ಯಕ್ತಿಗಳಿಗೆ ಸಾಮಾಜಿಕ ಸ್ಥಾನಮಾನ ಕಲ್ಪಿಸಿಕೊಡುವುದು (Competition assigns status to Individuals).** ವಿಭಿನ್ನ ವ್ಯಕ್ತಿಗಳಿಗೆ ಅವರವರ ಪ್ರತಿಭೆ ಮತ್ತು ಸಾಮರ್ಥ್ಯಕ್ಕೆ ಅನುಗುಣವಾದ ಸಾಮಾಜಿಕ

ಸ್ಥಾನಮಾನವನ್ನು ನೀಡುವಲ್ಲಿ ಸ್ಪರ್ಧೆಯು ಸಹಕಾರಿಯಾಗಿದೆ. ಪ್ರತಿಭೆಯನ್ನು ಗುರುತಿಸುವ ಏಕೈಕ ವಿಧಾನವೆಂದರೆ ಸ್ಪರ್ಧೆ.

c. **ಸ್ಪರ್ಧೆಯು ಹೊಸ ಅನುಭವ ಹಾಗೂ ಸಾಧನೆಗೆ ಪ್ರೇರಣೆ ನೀಡುವುದು (Competition acts as a motivation):** ಆಗ್‌ಬರ್ನ್ ಮತ್ತು ನಿಮ್‌ಕಾಫ್ ಹೇಳಿರುವಂತೆ, ಸಾಮಾಜಿಕ ಮಾನ್ಯತೆಯನ್ನು, ಹೊಸ ಅನುಭವಗಳನ್ನು ಪಡೆಯಬೇಕೆಂಬ ವ್ಯಕ್ತಿಗಳ ಬಯಕೆಗಳನ್ನು ಈಡೇರಿಸಲು ಸ್ಪರ್ಧೆಯು ಸೂಕ್ತ ಅವಕಾಶಗಳನ್ನು ನೀಡುವುದು.

d. **ಸ್ಪರ್ಧೆಯು ಸಾಮಾಜಿಕ, ಆರ್ಥಿಕ ಹಾಗೂ ತಾಂತ್ರಿಕ ಪ್ರಗತಿಗೆ ಸಹಕಾರಿಯಾಗಿದೆ:–** ಉತ್ತಮ ರೀತಿಯ ಸ್ಪರ್ಧೆಯಿಂದ ಉತ್ಪಾದನೆ ಅಧಿಕಗೊಂಡ ಪ್ರಗತಿ ಸಾಧ್ಯವಾಗುವುದು. ಸ್ಪರ್ಧೆಯಲ್ಲಿ ಜಯಶೀಲರಾದವರು ತಮ್ಮ ವೈಯಕ್ತಿಕ ಉದ್ದೇಶಗಳನ್ನು ಸಾಧಿಸಿಕೊಳ್ಳುವುದರ ಜೊತೆಗೆ ಸಮಾಜದ ಏಳಿಗೆಗೂ ಕಾರಣರಾಗುವರು. ವ್ಯಕ್ತಿಗಳ ಮತ್ತು ಸಮೂಹಗಳ ಸ್ಪರ್ಧೆಯಿಂದ ಜನರಿಗೆ ಒಳ್ಳೆಯ ವಸ್ತುಗಳು ಮತ್ತು ಅವಕಾಶಗಳು ಸಿಗುವ ಸಾಧ್ಯತೆಯೂ ಇದೆ. ವ್ಯಾಪಾರ ಹಾಗೂ ವಾಣಿಜ್ಯ ಕ್ಷೇತ್ರಗಳಲ್ಲಿ ಇದನ್ನು ನಾವು ಕಾಣಬಹುದು.

e. **ಸ್ಪರ್ಧೆಯು ಸಾಮಾಜಿಕ ಚಲನೆಗೆ ಕಾರಣವಾಗುವುದು:–** ಸ್ಪರ್ಧೆಯಿಂದಾಗಿ ಸಾಮಾಜಿಕ ಪರಿವರ್ತನೆಯ ವೇಗವು ತೀವ್ರವಾಗುವುದು. ಇದರ ಪರಿಣಾಮವಾಗಿ ವ್ಯಕ್ತಿಗಳ ಸಾಮಾಜಿಕ ಚಲನೆಗೆ, ಅಂದರೆ ಒಂದು ಅಂತಸ್ತಿನಿಂದ ಇನ್ನೊಂದು ಅಂತಸ್ತಿಗೆ ಪ್ರವೇಶಿಸಲು ಅಥವಾ ಇದ್ದ ಸಾಮಾಜಿಕ ಅಂತಸ್ತಿನಲ್ಲಿಯೇ ಸೂಕ್ತ ಬದಲಾವಣೆ ಮಾಡಿಕೊಳ್ಳಲು ಸ್ಪರ್ಧೆಯು ಸಹಕಾರಿಯಾಗುವುದು.

## 3.4 ಸಂಘರ್ಷ :– (Conflict):-

### ಅರ್ಥ ಮತ್ತು ವ್ಯಾಖ್ಯೆಗಳು (Meaning and Definition)

ಸಂಘರ್ಷವು ಸಾಮಾಜಿಕ ಪ್ರಕ್ರಿಯೆಗಳ ಪ್ರಕಾರಗಳಲ್ಲಿ ಒಂದು. ಮಾನವ ಸಂಬಂಧಗಳಲ್ಲಿ ಸಹಕಾರ ಹಾಗೂ ಸ್ಪರ್ಧೆ ಕಾಣಿಸುವಂತೆ ಸಂಘರ್ಷವೂ ಸಹ ಕಾಣಿಸಿಕೊಳ್ಳುತ್ತಿರುತ್ತದೆ. ವ್ಯಕ್ತಿವ್ಯಕ್ತಿಗಳ ಮತ್ತು ಸಮೂಹ ಸಮೂಹಗಳೊಳಗಿನ ಸಂಬಂಧವು ಯಾವಾಗಲೂ ಸಹ ಅನ್ಯೋನ್ಯತೆ, ಆತ್ಮೀಯತೆ, ಸಹಕಾರ ಮತ್ತು ಪರಸ್ಪರ ಹೊಂದಾಣಿಕೆಯಿಂದ ಕೂಡಿರುತ್ತದೆ ಎನ್ನಲಾಗದು. ಅನೇಕ ಕಾರಣಗಳಿಂದ ಸಂಬಂಧವು ದುರ್ಬಲವಾಗಿ ಸಂಘರ್ಷವು ತಲೆದೋರುತ್ತದೆ. ಜನರ ಅಭಿಪ್ರಾಯಗಳು, ಆದರ್ಶಗಳು, ಮೌಲ್ಯಗಳು, ನಂಬಿಕೆಗಳು, ಆಚಾರ, ವಿಚಾರ, ವ್ಯವಹಾರಗಳಲ್ಲಿ ಕಂಡುಬರುವ ಭಿನ್ನತೆಯು ತೀವ್ರವಾಗಿ ಪರಸ್ಪರ ವಿರೋಧಾತ್ಮಕವಾದಾಗ ಘರ್ಷಣೆಯು ಸಂಭವಿಸುತ್ತದೆ.

1. **ಎ.ಡಬ್ಲ್ಯೂ.ಗ್ರೀನ್:** " ಬೇರೆಯವರ ಇಚ್ಚೆಯನ್ನು ಉದ್ದೇಶಪೂರ್ವಕವಾಗಿ ಮತ್ತು ಒತ್ತಾಯ ಪೂರ್ವಕವಾಗಿ ಹತ್ತಿಕ್ಕುವ ಪ್ರಯತ್ನವೇ ಸಂಘರ್ಷ" ಎಂದಿದ್ದಾರೆ.

2. **ಜೆ.ಪಿ.ಗಿಲನ್ ಮತ್ತು ಜೆ.ಎ.ಗಿಲನ್:** "ಹಿಂಸಾಚಾರ ಬೆದರಿಕೆಯ ಮೂಲಕ ಎದುರಾಳಿಗೆ ನೇರವಾಗಿ ಸವಾಲನ್ನೆಸೆದು ವ್ಯಕ್ತಿಗಳು ಮತ್ತು ಸಮೂಹಗಳು ತಮ್ಮ ಉದ್ದೇಶಗಳನ್ನು ಸಾಧಿಸಿಕೊಳ್ಳುವ ಪ್ರಕ್ರಿಯೆಯೇ ಸಂಘರ್ಷ" ಎಂದಿದ್ದಾರೆ.

3. **ಹಾರ್ಟನ್ ಮತ್ತು ಹಂಟ್:** " ಎದುರಾಳಿಗಳನ್ನು ದುರ್ಬಲಗೊಳಿಸುವ ಅಥವಾ ನಾಶಪಡಿಸುವುದರ ಮೂಲಕ ಪ್ರತಿಫಲಗಳ ಮೇಲೆ ಏಕಸ್ವಾಮ್ಯವನ್ನು ಸ್ಥಾಪಿಸುವ ಪ್ರಕ್ರಿಯೆಯೇ ಸಂಘರ್ಷವಾಗಿದೆ." ಎಂದಿದ್ದಾರೆ.

## 2. ಸಂಘರ್ಷದ ಲಕ್ಷಣಗಳು (Characteristics of Conflict):-

a.. **ಸಂಘರ್ಷವು ಸಾರ್ವತ್ರಿಕವಾದುದು:–** ಸಂಘರ್ಷವು ಜಗತ್ತಿನ ಎಲ್ಲಾ ಸಮಾಜಗಳಲ್ಲು ಕಂಡು ಬರುವ ಒಂದು ಸಾರ್ವತ್ರಿಕವಾದ ಪ್ರಕ್ರಿಯೆಯಾಗಿದೆ. ಸಂಘರ್ಷವನ್ನು ಅರಿಯದ ಸಮಾಜವು ಜಗತ್ತಿನಲ್ಲಿಲ್ಲ. ಸಮಾಜ ಜೀವನದಲ್ಲಿ ಸಂಘರ್ಷವೇ ಬಹಳ ಪ್ರಧಾನ ಪಾತ್ರವಹಿಸುವುದೆಂದು ಅಭಿಪ್ರಾಯಪಟ್ಟಿದ್ದಾರೆ. ಮಾರ್ಕ್ಸ್‌ರವರ ಅಭಿಪ್ರಾಯದಲ್ಲಿ "ಇದುವರೆಗಿನ ಮಾನವ ಸಮಾಜದ ಇತಿಹಾಸವು ವರ್ಗಸಂಘರ್ಷದ ಇತಿಹಾಸವೇ ಆಗಿದೆ." (The Hiterto History is the History of Class struggle)ಎಂದಿದ್ದಾರೆ.

b. **ಸಂಘರ್ಷವು ಪ್ರಜ್ಞಾಪೂರ್ವಕವಾದ ಕ್ರಿಯೆಯಾಗಿದೆ (Conflict is a conscious Action):–** ಘರ್ಷಣೆಯಲ್ಲಿ ತೊಡಗಿರುವ ವ್ಯಕ್ತಿಗಳು ತಮ್ಮ ಎದುರಾಳಿಗಳನ್ನು ಉರುಳಿಸಬೇಕೆಂಬ ಉದ್ದೇಶದಿಂದ ಪ್ರಜ್ಞಾಪೂರ್ವಕವಾಗಿಯೇ ಹೋರಾಟ ಮಾಡುವರು ಪಾರ್ಕ್ ಮತ್ತು ಬರ್ಗೆಸ್ ಹೇಳಿರುವಂತೆ "ಸಂಘರ್ಷವು ಯಾವಾಗಲೂ ಪ್ರಜ್ಞಾಪೂರ್ವಕವಾದ ಕ್ರಿಯೆಯಾಗಿದ್ದು ಆಳವಾದ ಭಾವನೆಗಳನ್ನು ಮತ್ತು ಬಲವಾದ ಭಾವೋದ್ವೇಗಗಳನ್ನು ಉಂಟುಮಾಡುವುದು " ಎಂದಿದ್ದಾರೆ.

c. **ಸಂಘರ್ಷವು ವೈಯಕ್ತಿಕ ಕ್ರಿಯೆಯಾಗಿದೆ (Conflict is personal) :–** ಸ್ಪರ್ಧೆಯ ಉದ್ದೇಶ ಮತ್ತು ಗುರಿಯ ಕಡೆಯಿಂದ ಸರಿದು ಎದುರಾಳಿಯತ್ತ ಕೇಂದ್ರೀಕರಿಸಲ್ಪಟ್ಟಿದ್ದಾಗಿ ಸಂಘರ್ಷವಾಗಿ ಮಾರ್ಪಡುವುದು. ಸಂಘರ್ಷದಲ್ಲಿ ಗುರಿಯನ್ನು ಸಾಧಿಸಬೇಕು ಮತ್ತು ಪ್ರತಿಫಲವನ್ನು ಪಡೆಯಬೇಕೆಂಬುದಕ್ಕಿಂತ ಎದುರಾಳಿಗೆ ಹಾನಿ ಮತ್ತು ನಷ್ಟವನ್ನುಂಟುಮಾಡಬೇಕು, ಸಾಧ್ಯವಾದ್ದಲ್ಲಿ ಎದುರಾಳಿಯನ್ನು ನಾಶಪಡಿಸಬೇಕೆಂಬುದೇ ಬಲವತ್ತರವಾಗಿರುತ್ತದೆ.

d. **ಸಂಘರ್ಷವು ನಿರಂತರವಾದುದಾಗಿರದೆ ಆಗಿಂದ್ದಾಗೆ ಸಂಭವಿಸುತ್ತದೆ (Conflict is intermittent):** ಸಂಘರ್ಷವು ನಿರಂತರವಾಗಿರದೇ ಆಗಿಂದ್ದಾಗ್ಗೆ ಕಾಣಿಸಿಕೊಳ್ಳುವ ಪ್ರಕ್ರಿಯೆಯಾಗಿದೆ. ಸಂಘರ್ಷವು ನಿರಂತರವಾಗಿ ನಡೆಯುವುದೇ ಆದರೆ ಸಮಾಜ ಜೀವನವು ಅತ್ಯಂತ ಅನಿಶ್ಚಿತತೆ, ಅಭದ್ರತೆ ಮತ್ತು ಸಂತೃಪ್ತಿಯಿಂದ ಕೂಡಿರಬೇಕಾಗುವುದು ಆದ್ದರಿಂದ ಯಾವುದೇ ಸಮಾಜವು ಬಹುದೀರ್ಘಕಾಲದವರೆಗೆ ಸಂಘರ್ಷದಲ್ಲಿ ತೊಡಗಿರಲಾರದು.

e. **ಸಂಘರ್ಷವು ಸಂಸ್ಕೃತಿಯ  ಪ್ರಭಾವಕ್ಕೆ ಒಳಪಟ್ಟಿದೆ (Conflict & cultural related) :–** ಯಾವ ಕಾರಣಗಳಿಗಾಗಿ ಸಂಘರ್ಷವು ಸಂಭವಿಸುದೆನ್ನುವುದು ಎಷ್ಟೋಭಾರಿ ಸಂಸ್ಕೃತಿಯಿಂದ ನಿರ್ಧಾರಿತವಾಗಿರುತ್ತದೆ. ಸಂಸ್ಕೃತಿಯಿಂದ ನಿರ್ಧಾರಿತವಾದ ಸಾಮಾಜಿಕ ಮೌಲ್ಯಗಳು, ಸಂಘರ್ಷಕ್ಕೆ ನಿರ್ದಿಷ್ಠ ವೇದಿಕೆಯನ್ನು ನಿರ್ಮಾಣ ಮಾಡುತ್ತದೆ. ಸಂಪತ್ತು, ಅಧಿಕಾರ, ಕೀರ್ತಿ,ಸಾಮಾಜಿಕ ಸ್ಥಾನಮಾನ, ವಿಚಾರ, ಸ್ವಾತಂತ್ರ್ಯ ಅಥವಾ ಇತರ ಮೌಲ್ಯಾಧಾರಿತ ಕಾರಣಗಳಿಗಾಗಿ ಸಂಘರ್ಷವು ತಲೆಹಾಕಬಹುದು. ರಾಜಕೀಯ ವ್ಯವಸ್ಥೆಯ ಭದ್ರತೆಯು ಬೆದರಿಕೆಗೆ ಒಳಪಟ್ಟಾಗ ರಾಜಕೀಯ ಸಂಘರ್ಷವುಂಟಾಗುವುದು. ಹಾಗೆಯೇ, ಪಂಥೀಯ ಭಾವನೆಯಿಂದ ಧಾರ್ಮಿಕ ಸಂಘರ್ಷವುಂಟಾಗಬಹುದು.

f. **ಸಂಘರ್ಷ ಮತ್ತು ನಿಯಮಗಳು (Conflict and Norms):–**ಸಾಮಾನ್ಯವಾಗಿ ಸಂಸ್ಕೃತಿಯು ಸಂಘರ್ಷದ ರೂಪಗಳನ್ನು ನಿಯಂತ್ರಿಸುವುದು ಮತ್ತು ನಿರ್ದೇಶಿಸುವುದು. ಸಂಘರ್ಷವು ಸಾಮಾಜಿಕ ನಿಯಮಗಳಿಗೆ ಬದ್ದವಾಗಿ ನಡೆಯುವುದಾದರೂ ಅಂತಹ ಸಂದರ್ಭಗಳಲ್ಲಿ ಹಿಂಸೆ ದೊಂಬಿಯಿಂದ ವಿಪರೀತ ಹಾನಿಯಾಗುವ ಸಂಭವವೂ ಇದೆ. ಸಂಘರ್ಷವು ಯಾವುದಾರದರೊಂದು ಕಾರಣದಿಂದ ನಡೆಯುತ್ತಿದ್ದು ಅದನ್ನು ನಿಯಂತ್ರಿಸುವ ಯಾವುದೇ ಕ್ರಮಬದ್ದ ಪ್ರಯತ್ನ ನಡೆಯದೇ ಇರುವಾಗ ಅನಪೇಕ್ಷಿತ ಪರಿಣಾಮಗಳುಂಟಾಗಬಹುದು.

g. **ಆಶಾಭಂಗ ಮತ್ತು ಅಭದ್ರತೆ ಸಂಘರ್ಷಕ್ಕೆ ಎಡೆ ಮಾಡಿಕೊಡುತ್ತದೆ (Frustration and Insecurity Leads to conflict):–** ನಿರಾಶೆ, ಆಶಾಭಂಗ, ಜಿಗುಪ್ಸೆ, ಅಸುರಕ್ಷತೆ, ಅನಿಶ್ಚಿತತೆ, ಮತ್ತು ಅಸಂತೃಪ್ತಿ ಇದು ಸಂಘರ್ಷಕ್ಕೆ ಹಾದಿ ಮಾಡಿಕೊಡುತ್ತದೆ. ವ್ಯಕ್ತಿಗಳು ಹಣ ಸಂಪತ್ತು ಸ್ಥಾನಮಾನಗಳನ್ನು ಪಡೆಯಬೇಕೆಂಬ ತಮ್ಮ ಪ್ರಯತ್ನದಲ್ಲಿ ವಿಫಲರಾದಾಗ, ಆಶಾಭಂಗಗೊಂಡು ನಿರಾಶೆಗೊಳ್ಳುವರು, ಆರ್ಥಿಕ ಬಿಕ್ಕಟ್ಟು, ನಿರುದ್ಯೋಗ, ಉದ್ಯೋಗ ಕಳೆದುಕೊಳ್ಳುವ ಸಂಭವ, ಪ್ರೀತಿಯಿಂದ ವಂಚಿತರಾಗುವ ಪರಿಸ್ಥಿತಿ ಮುಂತಾದ ಅಭದ್ರ ಸ್ಥಿತಿಯೂ ಕಂಡ ನಿರಾಶೆಯನ್ನು ದ್ವಿಗುಣಗೊಳಿಸುವುದು. ನಿರಾಶೆಗೊಂಡ ಜನರು ಹತಾಶರಾಗಿ ಘರ್ಷಣೆಗೆ ಇಳಿಯುವುದೂ ಇದೆ. ಅಸುರಕ್ಷತೆ, ಅನಿಶ್ಚಿತತೆ ಮತ್ತು ಅಭದ್ರತೆಗಳಿಂದ ಕೂಡಿದ ಸಮಾಜದಲ್ಲಿ ಸಂಘರ್ಷವು ಯಾವುದೇ ಕ್ಷಣದಲ್ಲಿಯಾದರೂ ಭುಗಿಲೇಳಬಹುದು

## 4. ಸಂಘರ್ಷದ ಪ್ರಕಾರಗಳು :– (Types of Conflict)

ಜಾರ್ಜ್ ಸಿಮ್ಮೆಲ್ ಪ್ರಕಾರ ಸಂಘರ್ಷವು ನಾಲ್ಕು ಮುಖ್ಯವಾದ ಪ್ರಕಾರಗಳಲ್ಲಿ ವ್ಯಕ್ತವಾಗುತ್ತದೆ. ಹೊಂದಿದೆ. ಅವುಗಳೆಂದರೆ.

1. **ಯುದ್ದ (War):–** ಯುದ್ದವು ಮಾನವನಲ್ಲಿ ಅತ್ಯಂತ ಆಳವಾಗಿ ಬೇರೂರಿರುವ ವಿರೋಧಾತ್ಮಕ ಅವೇಗವನ್ನು ಪ್ರತಿನಿಧಿಸುವುದು. ದ್ವೇಷ, ಪ್ರತೀಕಾರ, ಸಂಪತ್ತು, ಸಾಮ್ರಾಜ್ಯ ವಿಸ್ತರಣೆ ಮುಂತಾದ ಗುರಿಗಳನ್ನು ಮುಂದಿಟ್ಟುಕೊಂಡು ಈ ಆವೇಗವು ಕಾರ್ಯರೂಪಕ್ಕೆ ಇಳಿದು ಯುದ್ದದ ರೂಪದಲ್ಲಿ ಕಾಣಿಸಬಹುದು. ಯುದ್ದವು ಸಾಮನ್ಯವಾಗಿ ಎರಡು ದೇಶಗಳ ಅಥವಾ ರಾಷ್ಟ್ರಗಳ ನಡುವೆ ಸಂಭವಿಸುವುದು. ಅತ್ಯಂತ ಘೋರ ರೂಪವನ್ನು ಹೊಂದಿರುವ ಈ ಬಗೆಯ ಸಂಘರ್ಷವು ಮಾನವನಿಗೆ ಭಾರೀ ಗಂಡಾಂತರವನ್ನು ಮತ್ತು ಹಾನಿಯನ್ನು ಉಂಟುಮಾಡುವುದು.

2. **ಪಕ್ಷವೈಷಮ್ಯ ಅಥವಾ ಅಂತಃಕಲಹ (Fued):–** ಪಕ್ಷವೈಷಮ್ಯ ಒಂದು ಸಮೂಹದೊಳಗೆ ನಡೆಯುವ ಘರ್ಷಣೆ. ಕೆಲವು ವ್ಯಕ್ತಿಗಳು ತಮಗೆ ಅನ್ಯಾಯವಾಗಿದೆ ಎಂದು ತಿಳಿದಾಗ ತಮ್ಮ ಸಮೂಹದ ವಿರುದ್ದವೇ ಬಂಡಾಯ ಏಳಬಹುದು, ತಮಗಾದ ಅನ್ಯಾಯವನ್ನು ಪ್ರತಿಭಟಿಸಬಹುದು.

3. **ದಾವೆ ಅಥವಾ ಮೊಕದ್ದಮೆ (Litigation) :–** ದಾವೆಯು ಒಂದು ಬಗೆಯ ಕಾನೂನಿನ ಹೋರಾಟ ಒಬ್ಬ ವ್ಯಕ್ತಿ ಅಥವಾ ಒಂದು ಸಮೂಹ ತನ್ನ ಹಕ್ಕುಗಳಿಗಾಗಿ ಅಥವಾ ತನಗೆ ನ್ಯಾಯ ದೊರಕಿಸಿಕೊಳ್ಳಲು ನ್ಯಾಯಾಲಯದ ಮೂಲಕ ಈ ಬಗೆಯ ಹೋರಾಟ ನಡೆಸಬಹುದು. ಈ ರೀತಿಯ ಘರ್ಷಣೆಯಲ್ಲಿ ಭಾವನಾತ್ಮಕತೆಗಿಂತಲೂ ವಾಸ್ತವಿಕತೆಗೆ ಹೆಚ್ಚು ಪ್ರಾಧಾನ್ಯತೆಯಿದೆ. ಇದು ಕಾನೂನಿನ ಅನುಸಾರವಾಗಿ, ತರ್ಕಬದ್ಧವಾಗಿ ನಡೆಯುವುದು.

4. **ಅವ್ಯೆಯಕ್ತಿಕ ಆದರ್ಶಗಳ ನಡುವಿನ ಸಂಘರ್ಷ ಅಥವಾ ತಾತ್ವಿಕ ಸಂಘರ್ಷ (Conflict of impersonality Ideas) :–** ವೈಯುಕ್ತಿಕ ಕಾರಣಗಳಿಗಿಂತಲೂ ಕೆಲವು ತತ್ವಗಳಿಗಾಗಿ, ಆದರ್ಶಗಳಿಗಾಗಿ ವ್ಯಕ್ತಿಗಳು ಹೋರಾಡುತ್ತಾರೆ. ಈ ಬಗೆಯ ಸಂಘರ್ಷದಲ್ಲಿ ಎದುರಾಳಿಗಳು ತಮ್ಮ ತತ್ವ ಮತ್ತು ಆದರ್ಶಗಳನ್ನು ಸಮರ್ಥಿಸಿಕೊಂಡು ಹೋರಾಡುವರು. ಸೌಮ್ಯವಾದ ಮತ್ತು ಪ್ರಜಾತಂತ್ರ, ರಾಷ್ಟ್ರೀಯವಾದ ಮತ್ತು ಅಂತರಾಷ್ಟ್ರೀಯತೆ, ಪ್ರಾಪಂಚಿಕತೆ ಮತ್ತು ಪಾರಮಾರ್ಥಿಕತೆ, ಆಧುನಿಕತೆ ಮತ್ತು ಸಾಂಪ್ರದಾಯಕತೆ, ಧಾರ್ಮಿಕತೆ ಮತ್ತು ಧರ್ಮನಿರಪೇಕ್ಷತೆ, ವೈಯಕ್ತಿಕ ಸ್ವಾತಂತ್ರ್ಯ ಮತ್ತು ಸರ್ವಾಧಿಕಾರ ಹೀಗೆ ಅನೇಕ ವಿಚಾರ ಪ್ರಣಾಳಿಕೆಗಳ ನಡುವೆ ಘರ್ಷಣೆ ಇರುತ್ತದೆ. ಇದು ಒಮ್ಮೊಮ್ಮೆ ಭಯಾನಕ ರೂಪವನ್ನು ಪಡೆಯುತ್ತದೆ.

## ಸಂಘರ್ಷಧ ಕಾರಣಗಳು (Causes of Conflict)

ಸಂಘರ್ಷಏಕೆ ಸಂಭವಿಸುತ್ತದೆ? ಎಂಬ ಪ್ರಶ್ನೆಗೆ ಈ ಕೆಳಕಂಡಂತಹ ಕಾರಣಗಳನ್ನು ನೀಡಬಹುದು.

1. ವ್ಯಕ್ತಿಗಳ ವಿಭಿನ್ನ ದೃಷ್ಟಿಕೋನಗಳು
2. ಸಾಂಸ್ಕೃತಿಕ ವ್ಯತ್ಯಾಸಗಳು
3. ಆಸಕ್ತಿಗಳ ಘರ್ಷಣೆ
4. ಸಾಮಾಜಿಕ ಪರಿವರ್ತನೆ

### 1) ವ್ಯಕ್ತಿಗಳ ವಿಭಿನ್ನ ದೃಷ್ಟಿಕೋನಗಳು

ಯಾವುದೇ ಎರಡು ವ್ಯಕ್ತಿಗಳು ತಮ್ಮ ಸ್ವಭಾವದಲ್ಲಿ ಏಕರೂಪತೆ ಹೊಂದಿಲ್ಲ ಮನೋಭಾವನೆಗಳು, ಚಿಂತನೆಗಳು, ಅಭಿಪ್ರಾಯಗಳು ಮತ್ತು ಆಸಕ್ತಿಗಳು–ಇವೆಲ್ಲಾ ಸಂಬಂಧಿಸಿದಂತೆ ವಿಭಿನ್ನವಾದ ದೃಷ್ಟಿಕೋನ ಹೊಂದಿರುತ್ತಾರೆ. ಇಂತಹ ವ್ಯತ್ಯಾಸಗಳು ಒಂದಲ್ಲ ಒಂದು ರೀತಿಯಲ್ಲಿ ವ್ಯಕ್ತಿಗಳ ನಡುವೆ ಸಂಘರ್ಷಕ್ಕೆ ವೇದಿಕೆಯನ್ನು ನಿರ್ಮಿಸುತ್ತದೆ ವ್ಯಕ್ತಿಗಳ ತಮ್ಮ ಆಸಕ್ತಿ ಚಿಂತನೆ ಮತ್ತು ಮನೋಭಾವನೆಯನ್ನು ಅನುಷ್ಠಾನ ಗೊಳಿಸಲು ಪ್ರಯತ್ನಿಸುತ್ತಾನೆ. ಇಂತಹ ಕ್ರಿಯೆಗಳಲ್ಲಿ ಪ್ರತಿರೋಧನೆ ಉಂಟಾದರೆ ಸಂಘರ್ಷ ಸಹಜವಾಗಿ ಸಂಭವಿಸುತ್ತದೆ.

### 2) ಸಂಸ್ಕೃತಿಕ ವ್ಯತ್ಯಾಸಗಳು;

ಸಮೂಹ ಮತ್ತು ವ್ಯಕ್ತಿಗಳಲ್ಲಿ ಸಾಂಸ್ಕೃತಿಕ ವ್ಯತ್ಯಾಸಗಳು ಕಂಡುಬರುತ್ತದೆ. ಒಂದು ಸಮೂಹ ಇನ್ನೊಂದು ಸಂಸ್ಕೃತಿಯನ್ನು ನಿರಾಕರಿಸಿದಾಗ ಅಥವಾ ಖಂಡಿಸಿದಾಗ, ವ್ಯತ್ಯಾಸಗಳು ಸಂಘರ್ಷ ಸಹಜವಾಗಿ ಸಂಭವಿಸುತ್ತದೆ. ಭಾರತದ ಸಮಾಜದಲ್ಲಿ ಧಾರ್ಮಿಕ ವಿಭಿನ್ನತೆಯಿಂದಾಗಿ ಹಲವಾರು ಭಾರಿ ನೆಲೆಸಿರುವ ಪ್ರದೇಶಗಳಲ್ಲಿ ಸಂಘರ್ಷಣೆ ಸಂಭವಿಸುತ್ತದೆ. ಈ ನಿಟ್ಟಿನಲ್ಲಿ ನಗರ–ಪಟ್ಟಣ ಪ್ರದೇಶಗಳಲ್ಲಿ ಗ್ರಾಮಕ್ಕಿಂತ ಹೆಚ್ಚು ಸಂಘರ್ಷಣೆ ಪ್ರಕರಣಗಳು ದಾಖಲೆಯಾಗಿದೆ.

### 3) ಆಸಕ್ತಿಗಳ ಘರ್ಷಣೆ;–

ವಿವಿಧ ಜನರು ಅಥವಾ ಸಮೂಹಗಳ ಮಾನಸಿಕ ಚಿಂತನೆ ಸಮರೂಪತೆಯಿರುವುದಿಲ್ಲ, ಸಮಾಜಗಳಲ್ಲಿ ಎರಡು ವೈರುದ್ಯ ಭಾವನೆ ಮತ್ತು ಅನಿಸಿಕೆಗಳು ಸದಾ ಜಾಗೃತವಾಗಿರುತ್ತದೆ.

ಉದಾ; ಶ್ರಮಿಕವರ್ಗ ಮತ್ತು ಬಂಡವಾಳಶಾಹಿ, ಉದಾರನೀತಿತ್ವ ಮತ್ತು ಸಂಪ್ರದಾಯಿಕ ಚಿಂತನೆಗಳು ರಾಷ್ಟ್ರೀಯತೆ ಮತ್ತು ಪ್ರಾದೇಶಿಕವಾದ – ಹೀಗೆ ಎರಡು ವಿಭಿನ್ನ ಚಿಂತನೆಗಳೊಂದಿಗೆ ಇನ್ನೂ ಹಲವಾರು

ಚಿಂತನೆಗಳು ಕಂಡು ಬರುತ್ತದೆ. ಇಂತಹ ಪ್ರವೃತ್ತಿಗಳು ಹೆಚ್ಚಾಗಿ ಕ್ರಿಯಾಶೀಲವಾದಾಗ ಸಂಘರ್ಷ ತೀರಾ ಸಹಜವಾಗಿ ಸಂಭವಿಸುತ್ತದೆ.

### 4). ಸಾಮಾಜಿಕ ಪರಿವರ್ತನೆ:

ಸಮಾಜದ ಎಲ್ಲಾ ಸಮೂಹಗಳು ಮತ್ತು ಸಂಸ್ಥೆ ಏಕ ರೂಪವಾಗಿ ಸಾಮಾಜಿಕ ಪರಿವರ್ತನೆಗಳನ್ನು ಸ್ವೀಕರಿಸುವುದಿಲ್ಲ. ಕೆಲವು ಸಮೂಹಗಳು ಸಹಮತ ವ್ಯಕ್ತ ಪಡಿಸುತ್ತವೆ. ಪ್ರಸಕ್ತ ಸಾಮಾಜಿಕ ಪರಿವರ್ತನೆಯ ಫಲಶೃತಿಯಿಂದ ಉನ್ನತ ಅಂತಸ್ತು ಮತ್ತು ಜೀವನ ವಿಧಾನಗಳನ್ನು ಸುಧಾರಿಸಿಕೊಳ್ಳುತ್ತಾರೆ ಆದರೆ ಇನ್ನೊಂದು ಸಮೂಹ ಇಂತಹ ಪರಿವರ್ತನೆ ಪಡದು ಕೊಳ್ಳಲು ವಿಫಲವಾಗುತ್ತದೆ.ಇದ್ದರಿಂದ ಸಮಾಜದಲ್ಲಿ "ಹಿಂಬೀಳಿಕೆ" (lag) ಹೆಚ್ಚಾದಂತೆ ಸಂಘರ್ಷ ವ್ಯಾಪಕವಾಗಿ ಗೋಚರವಾಗುತ್ತದೆ ಪೀಳಿಗೆಗಳ–ಸಂಘರ್ಷ (ತಂದೆ–ತಾಯಿ–ಮಕ್ಕಳು) ನಡುವಿನ ಘರ್ಷಣೆಗಳು ಭೌತಿಕ ಪರಿವರ್ತನೆಗಳಿಂದ ಸಂಭವಿಸುತ್ತದೆ.

## ಸಂಘರ್ಷದ ಅನುಕೂಲ ಮತ್ತು ಅನಾನುಕೂಲಗಳು

ಲಿವಿಸ್.ಎ.ಕೋಸರ್ ತಮ್ಮ ಗ್ರಂಥವಾದ "The Functions of Conflict" ನಲ್ಲಿ ಸಂಘರ್ಷದ ಕಾರ್ಯಗಳನ್ನು ಈ ಕೆಳಕಂಡಂತೆ ವಿಶ್ಲೇಸಿಷಿದ್ದಾರೆ.

## ಸಂಘರ್ಷದ ಅನುಕೂಲಗಳು

1. ಸಂಘರ್ಷದಿಂದ ವ್ಯಕ್ತಿ ಅಥವಾ ಸಮೂಹಗಳು ಸಾಮಾಜಿಕ ವ್ಯವಸ್ಥೆಯಲ್ಲಿ ಅಂತಸ್ತು ಮತ್ತು ಸ್ಥಾನಮಾನ ಪಡೆದುಕೊಳ್ಳವ ಸಾಧನವಾಗಿದೆ.ಯುದ್ಧ, ಆಂತರಿಕ ಗಲಭೆ ಮತ್ತು ವೈಯುಕ್ತಿಕ ಹೋರಾಟ ಪ್ರತಿಫಲದಿಂದ ವ್ಯಕ್ತಿಗಳು ಉನ್ನತ ಸ್ಥಾನಮಾನ ಪಡೆದವರು ಐತಿಹಾಸಿಕ ನಿದರ್ಶನಗಳುಂಟು

   ಉದಾ;– ನೆಪೋಲಿನ್, ರಾಬರ್ಟ್‌ಕ್ಲೈವ್, ಗಾಂಧೀಜಿ, ಅಂಬೇಡ್ಕರ್ ಮುಂತಾದವರು.

2. ಸಂಘರ್ಷದಿಂಧ ನಿರ್ದಿಷ್ಟ ಸಮೂಹಗಳು ಐಕ್ಯತೆ ಭಾವನೆ ಬೆಳೆಸಿಕೊಂಡು ಅಂತರೀಕ ಸಂಘಟನೆ ಹೆಚ್ಚಿಸಿಕೊಳ್ಳಲು ಪ್ರೇರಣೆ ನೀಡುತ್ತದೆ. "ಸಾಮಾನ್ಯ ಶತ್ರು" ಗುರುತಿಸಿಕೊಳ್ಳವ ಪ್ರವೃತ್ತಿಯಿಂದ ಆಂತರೀಕ ಸಂಘಟನೆ ಭದ್ರವಾಗಿ ಬೇರೂರುತ್ತದೆ.

   ಉದಾ;– ಭಾರತದಲ್ಲಿ ಸ್ವಾತ್ರಂತ್ರ್ಯ ಸಂಗ್ರಾಮದಲ್ಲಿ ಬ್ರಿಟಿಷ್ ವಿರುದ್ಧ ಎಲ್ಲಾ ಜನಸಮೂಹ ಒಟ್ಟಿಗೆ ಶ್ರಮಿಸಿದರು. ದ್ವಿತೀಯ ಮಹಾಯುದ್ಧದಲ್ಲಿ ಜರ್ಮನಿಯರ ಅಟ್ಟಹಾಸಕ್ಕೆ ಕಡಿವಾಣ ಹಾಕಲು ಐರೋಪಿನ ದೇಶಗಳು ಅಂತರಿಕ ಘರ್ಷಣೆ ಮರೆತು ಸಂಘಟಿತರಾಗಿ ಹೋರಾಟ ನಡೆಸಿದರು

3. ಸಂಘರ್ಷ ಸಾಮಾಜಿಕ ಸನ್ನಿವೇಶಗಳ ನೈಜ ಸ್ಥಿತಿಗತಿಗಳ ಬಗ್ಗೆ ಮನವರಿಕೆ ಮಾಡುತ್ತದೆ. ಉನ್ನತ ಅಧಿಕಾರಿಗಳು ಮತ್ತು ಕಾನೂನು ಪಾಲಕರಿಗೆ"ಎಚ್ಚರಿಕೆ ಗಂಟೆ" ಯಂತೆ ಪಾತ್ರ ನಿರ್ವಹಿಸುತ್ತದೆ. ಸಾಮಾಜಿಕ ನಿಯಮಗಳನ್ನು ಸ್ವಲ್ಪ ಮಟ್ಟಿಗೆ ಸಡಿಲಗೊಳಿಸುವಂತೆ ಒತ್ತಡ ಬೀರುತ್ತದೆ. ಕೆಲವೊಮ್ಮೆ ನೌಕರ ಶಾಹಿಗಳ ದರ್ಪ ಮತ್ತು ದೌಜನ್ಯಗಳನ್ನು ಪ್ರಶ್ನಿಸುವ ಸಾಂಕೇತಿಕ ಕ್ರಿಯೆ–ಸಂಘರ್ಷವಾಗಿದೆ.

4. ಸಂಘರ್ಷದ ಬಳಿಕ ಜನರು ಶಾಂತಿ ಮತ್ತು ಅಹಿಂಶೆ ತತ್ವವನ್ನು ಎತ್ತಿಹಿಡಿಯಲು ಪ್ರೇರಣೆ ನೀಡಿತ್ತದೆ.

   ಉದಾ;– ಅಶೋಕನು ಕಾಳಿಂಗ ಯುದ್ಧ ನಂತರ ಶಾಂತಿ ಮತ್ತು ಅಹಿಂಶೆ ತತ್ವಕ್ಕೆ ಮಹತ್ವ ಕಲ್ಪಸಿದನು 2ನೇ ಮಹಾಯುದ್ಧದ ಘೋರಸ್ವರೂಪವನ್ನು ಪ್ರತ್ಯಕ್ಷವಾಗಿ ಅನುಭವಿಸಿದ ನಂತರ ವಿಶ್ವಸಂಸ್ಥೆ ಸ್ಥಾಪನೆಗೊಂಡಿತ್ತು.

5. ಸಂಘರ್ಷದಿಂಧ ವ್ಯಕ್ತಿ ಅಥವಾ ಸಮೂಹಗಳ ನಡುವೆ ಇರುವ ಅಪನಂಬಿಕೆ ಮತ್ತು ತಪ್ಪುಗ್ರಹಿಕೆಯನ್ನು ದೂರ ಮಾಡುತ್ತ ವ್ಯಕ್ತಿಗಳ ನಡುವೆ ಮತ್ತೊಮ್ಮೆ ಉತ್ತಮ ಸಂಬಂಧಗಳನ್ನು ಬೆಳಸಿಕೊಳ್ಳಲು ಸಾಧ್ಯ

   ಉದಾ;-ಕುಟುಂಬದಲ್ಲಿ ಗಂಡ-ಹೆಂಡತಿ, ಇಬ್ಬರು ಮಿತ್ರರುಗಳ ನಡುವೆ ಸಣ್ಣ-ಪುಟ್ಟ ಜಗಳ ಸಂಭವಿಸುತ್ತಾ ತಪ್ಪು ಗ್ರಹಿಕೆ ಮತ್ತು ಸಂದೇಶವನ್ನು ದೂರಮಾಡಲಾಗಿದೆ.

6. ಸಂಘರ್ಷಾತ್ಮಕ ಸಿದ್ಧಾಂತದ ಪ್ರಕಾರ ಸಂಘರ್ಷದಿಂದ ಸಮಾಜ ಪರಿವರ್ತನೆ ಸಂಭವಿಸುತ್ತದೆ. ಬಂಡವಾಳಶಾಹಿ ಮತ್ತು ಊಳಿಗಮಾನ್ಯ ಪದ್ಧತಿಯಲ್ಲಿ ಅಂತರಿಕ ಸಂಘರ್ಷದಿಂದಲೇ ಶ್ರಮಿಕ ವರ್ಗ ಶೋಷಣೆ ಮತ್ತು ದೌರ್ಜನ್ಯದಿಂದ ಮುಕ್ತರಾಗಲು ಸಾಧ್ಯವಾಗಿದೆ.

**ಸಂಘರ್ಷದ ಅನಾನುಕೂಲಗಳು**

1. ಸಂಘರ್ಷದಿಂದ ಸಮಾಜದಲ್ಲಿ ಮಾನವರ ಪ್ರಾಣ ಹಾನಿ ಮತ್ತು ನಾಗರೀಕತೆ ವಿನಾಶವಾಗುತ್ತದೆ. ಅಸಂಖ್ಯಾತ ಮಂದಿ ಹೊಂದಿದುತ್ತಾ ಮತ್ತು ಅಂಗವಿಕಲರಾಗುತ್ತಾರೆ, ಹಲವಾರು ಮಂದಿ ಸ್ತ್ರೀಯರು ವಿಧವೆಯಾಗಿ ಜೀವಿಸಬೇಕಾಗುತ್ತದೆ.

2. ವಿವಿಧ ಸಂಸ್ಕ್ರತಿಕ ಸಮೂಹದೊಂದಿಗೆ ದ್ವೇಷ ನಿಂತರವಾಗಿ ಮುಂದುವರಿಯುತ್ತದೆ ಪ್ರತಿಯೊಂದು ಹೊಸ ಪೀಳಿಗೆಗೆ ದ್ವೇಷ ಮತ್ತು ಸೇಡಿನ ಮನೋಭಾವದ ವಿಷಯಬೀಜ ಬಿತ್ತಲಾಗುತ್ತದೆ.

3. ಸಮಾಜದಲ್ಲಿ ಶಾಂತಿ ಮತ್ತು ಸುವ್ಯವಸ್ಥೆಗೆ ಧಕ್ಕೆ ಉಂಟಾಗುತ್ತದೆ. ಇದರಿಂದ ಜನ ಸಾಮಾನ್ಯರು ದೈನಂದಿನ ಜೀವನದಲ್ಲಿ ಆತಂಕಕ್ಕೆ ಒಳಗಾಗುತ್ತಾರೆ.

4. ಸಾಮಾಜಿಕ ಅಭಿವೃದ್ಧಿ ಕಾರ್ಯಕಮ್ರಗಳು ನಿರ್ಲಕ್ಷಗೊಳಗಾಗುತ್ತವೆ. ಅಧಿಕವಾದ ಹಣವನ್ನು ಸೈನ್ಯ ಮತ್ತು ಪೊಲೀಸರಿಗೆ ಖರ್ಚುಮಾಡಬೇಕಾಗುತ್ತದೆ.

5. ಸಂಘರ್ಷವನ್ನು ನಿಲ್ಲಿಸಲು ಅಪಾರ ಹಣ ಮತ್ತು ಸಮಯ ವಚ್ಚವಾಗುತ್ತದೆ.

## 3.5 ಹೊಂದಾಣಿಕೆ:- (Accommodation):

### 1. ಅರ್ಥ ಮತ್ತು ವ್ಯಾಖ್ಯೆಗಳು (Meaning and Definition):

ಹೊಂದಾಣಿಕೆ ಎಂಬುದು ಸಾಮಾಜಿಕ ಪ್ರಕ್ರಿಯೆಯ ಒಂದು ಮುಖ್ಯ ರೂಪವಾಗಿದೆ. ಸಾಮಾಜಿಕ ಪ್ರಕ್ರಮದ ಸ್ಥಾಪನೆಗೆ ಇದು ಅತ್ಯಗತ್ಯ. ಪಾರ್ಕ್ ಮತ್ತು ಬರ್ಗೆಸ್ ರವರ ಅಭಿಪ್ರಾಯದಲ್ಲಿ ಸಂಘರ್ಷತ್ಮಕ ಅಂಶಗಳ ನಡುವಿನ ಹೊಂದಾಣಿಕೆಯ ಫಲವಾಗಿಯೇ ಮಾನವ ಸಂಘಟನೆಗಳು ರೂಪುಗೊಂಡಿವೆ. ಮಾನವನು ತನ್ನ ಜೀವನ ಪರ್ಯಾಂತ ಹಲವಾರು ಸಂಘರ್ಷದ ಪ್ರತಿಫಲದ ಪ್ರತೀಕ್ಷೆಯಲ್ಲಿ ಇರುವುದಿಲ್ಲ. ಆದ್ದರಿಂದ ಆತ ಹೊಂದಾಣಿಕೆಯನ್ನು ಬಯಸುತ್ತಾನೆ. ಕೆಲವೊಮ್ಮೆ ಸಂಘರ್ಷವು ಅನಿವಾರ್ಯವಾಗುವ ಪರಿಸ್ಥಿತಿ ಬಂದರೂ ಅದರಿಂದ ತಪ್ಪಿಸಿಕೊಳ್ಳುವ ಅಥವಾ ಆದನ್ನು ಆದಷ್ಟು ಮುಂದೆ ಹಾಕುವ ಪ್ರಯತ್ನವನ್ನೂ ಆತ ಮಾಡುತ್ತಾನೆ. ಹೀಗೆ ಮಾನವನು ತನ್ನ ಪರಿಸರದೊಂದಿಗೆ ಮತ್ತು ಸಹಚರರೊಂದಿಗೆ ಹೊಂದಿಕೊಳ್ಳುತ್ತಾ ಸಾಗುವ ಪ್ರಕ್ರಿಯೆಯನ್ನು 'ಹೊಂದಾಣಿಕೆ" ವ್ಯತ್ಯಾಸ ಮತ್ತು ವಿರೋಧಗಳ ಹೊರತಾಗಿಯೂ ವ್ಯಕ್ತಿಗಳೊಂದಿಗೆ ಮತ್ತು ಪರಿಸ್ಥಿತಿಗಳೊಂದಿಗೆ ರಾಜಿ ಮಾಡಿಕೊಂಡು ಸಹ ಜೀವನವನ್ನು ನಡೆಸುವ ಮಾನವನ ಅವಿರತ ಪ್ರಯತ್ನವನ್ನು 'ಹೊಂದಾಣಿಕೆ'ಯಾಗಿದೆ.

ಜೀವನದುದ್ದಕ್ಕೂ ಮಾನವನು ಹಲವಾರು ಬಗೆಯ ಅಡಚಣೆಗಳನ್ನು ಎದುರಿಸಬೇಕಾಗುವುದು. ಜೀವನದಲ್ಲಿ ಸಂಘರ್ಷಗಳು ಸಾಮಾನ್ಯ. ಆದಾಗ್ಯೂ ಸಂಘರ್ಷದಲ್ಲಿ ಭಾಗಿಗಳಾದ ವ್ಯಕ್ತಿಗಳು ಮತ್ತು ಸಮೂಹಗಳು ತಮ್ಮ ಭಿನ್ನತೆಗಳನ್ನು ಬಿಟ್ಟು ಒಟ್ಟಿಗೆ ದುಡಿಯಬೇಕಾದ ಹಾಗೆ ಸಹಬಾಳ್ವೆ ನಡೆಸಬೇಕಾದ ಪರಿಸ್ಥಿತಿ ಅನಿವಾರ್ಯ. ಉದಾ: ಗಂಡ ಮತ್ತು ಹೆಂಡತಿ ಕೆಲವೊಮ್ಮೆ ಕ್ಷುಲ್ಲಕ ಕಾರಣಗಳಿಗಾಗಿ ಪರಸ್ಪರ ಜಗಳ ಮಾಡಬಹುದು ಆದರೆ ಅವರು ತಮ್ಮ ಜೀವನದ ಬಹಳಷ್ಟು ಸಮಯವನ್ನು ಸ್ನೇಹ–ಬಾಂಧವ್ಯ ಪ್ರೀತಿ ವಿಶ್ವಾಸದಲ್ಲಿಯೇ ಕಳೆಯುತ್ತಾರೆ. ಕಾರ್ಮಿಕರು ಕೆಲವೊಂದು ಬೇಡಿಕೆಗಳನ್ನು ಮುಂದಿಟ್ಟು ಮುಷ್ಕರ ಹೂಡಿ ಮಾಲೀಕರ ವಿರುದ್ಧ ಹೋರಾಟಗಳನ್ನು ಮುಂದಿಟ್ಟು ಆದರೆ ಮಾಲೀಕರೊಂದಿಗೆ ಆದಷ್ಟು ಬೇಗ ಒಪ್ಪಂದ ಮಾಡಿಕೊಂಡು ಅವರು ಪುನಃ ಕೆಲಸಕ್ಕೆ ಮರಳುವರು. ವಿದ್ಯಾರ್ಥಿಗಳು ಮಿಂಚಿನ ಮುಷ್ಕರ ನಡೆಸಿ ಬೆಳಿಗ್ಗೆ ತರಗತಿಗಳಿಂದ ಹೊರ ನಡೆದರೂ ಮಧ್ಯಾಹ್ನವೇ ತರಗತಿಗಳಿಗೆ ಪುನಃ ಹಿಂದಿರುಗಬಹುದು. ಹಾಗೆಯೇ ಯುದ್ಧನಿರತ ದೇಶಗಳು ಶಾಂತಿಯ ಮಾತುಕತೆಗೆ ಸಿದ್ಧವಾಗಬಹುದು. ಹೇಗೆ ಹೊಂದಾಣಿಕೆಯ ಪ್ರಯತ್ನ ನಡೆಯುತ್ತಲೇ ಇರುತ್ತದೆ.

1. **ಆಗ್‌ಬರ್ನ್ ಮತ್ತು ನಿಮಾಕಾಫ್:** "ವೈರಭಾವವುಳ್ಳ ವ್ಯಕ್ತಿಗಳು ಅಥವಾ ಸಮೂಹಗಳ ಹೊಂದಿಕೆಯನ್ನು ಸೂಚಿಸಲು ಸಮಾಜಶಾಸ್ತ್ರಜ್ಞರು ಹೊಂದಾಣಿಕೆ".

2. **ಮೆಕೈವರ್:** "ಹೊಂದಾಣಿಕೆ ಎಂಬ ಪದವು ಮುಖ್ಯವಾಗಿ ಮಾನವನು ತನ್ನ "ಪರಿಸರದೊಂದಿಗೆ ಸಾಮರಸ್ಯವನ್ನು ಸಾಧಿಸುವ ಪ್ರಕ್ರಿಯೆಯನ್ನು ಸೂಚಿಸುತ್ತದೆ".

3. **ಲುಂಡ್‌ಬರ್ಗ್:** "ಹೊಂದಾಣಿಕೆ ಎಂಬ ಪದವನ್ನು ಸ್ಪರ್ಧೆ ಮತ್ತು ಸಂಘರ್ಷಗಳಿಂದುಂಟಾಗಬಹುದಾದ ಆಯಾಸ ಮತ್ತು ಆತಂಕಗಳನ್ನು ನಿವಾರಣೆ ಮಾಡಲು ವ್ಯಕ್ತಿಗಳು ಸಮೂಹಗಳಲ್ಲಿ ಮಾಡಿಕೊಳ್ಳುವ ಹೊಂದಾಣಿಕೆಯನ್ನು ಸೂಚಿಸಲು ಬಳಸಲಾಗಿದೆ".

## 2. ಹೊಂದಾಣಿಕೆಯ ಲಕ್ಷಣಗಳು(Characteristics of Accommedation):–

a. **ಹೊಂದಾಣಿಕೆಯ ಸಂಘರ್ಷದ ಸಹಜವಾದ ಫಲಶೃತಿಯಾಗಿದೆ (Accommodation is the Natural outcoure of conflict):–** ಸಂಘರ್ಷವನ್ನು ನಿರಂತರವಾಗಿ ನಡೆಸಲು ಸಾಧ್ಯವಾಗದಿರುವುದರಿಂದಲೇ ಅದು ಸಹಜವಾಗಿ ಹೊಂದಾಣಿಕೆಗೆ ಅವಕಾಶ ನೀಡುವುದು. ವ್ಯಕ್ತಿಗಳು ಮತ್ತು ಸಮೂಹಗಳು ಸಂಘರ್ಷವನ್ನು ಇಷ್ಟಪಡದೇ ಇದ್ದಾಗ ಅವರು ಒಪ್ಪಂದಕ್ಕೆ ಸಿದ್ಧರಾಗುತ್ತಾರೆ. ಅಂತಹ ಶಾಶ್ವತ ಅಥವಾ ಅಶಾಶ್ವತ ಸ್ವರೂಪದ ಒಪ್ಪಂದಗಳನ್ನೇ ನಾವು "ಹೊಂದಾಣಿಕೆ" ಎನ್ನುವುದು.

b. **ಹೊಂದಾಣಿಕೆಯು ವ್ಯಕ್ತಿಗಳ ಪೂರ್ಣ ಅರಿವಿನಿಂದ ಅಥವಾ ಅರಿವಿಲ್ಲದೆಯೇ ಸಂಭವಿಸಬಹುದು (Accommedation may be conscious or unconscious):** ಮಾನವನು ತನ್ನ ಸಾಮಾಜಿಕ ಪರಿಸರಕ್ಕೆ ತನಗೆ ಅರಿವಿಲ್ಲದೆ ಹೊಂದಿಕೊಳ್ಳುತ್ತಾನೆ. ಉದಾ: ನವಜಾತ ಶಿಶುವು ಲೋಕಾಚಾರ, ನೈತಿಕ ನಿಯಮ, ಪದ್ಧತಿಗಳು, ಕ್ರಿಯಾವಿಧಿಗಳು, ಸಂಪ್ರಧಾಯಗಳು, ನಂಬಿಕೆಗಳು ಮುಂತಾದುವುಗಳಿಂದ ಕೂಡಿದ ನಿಯಮಗಳಿಗೆ ತನಗರಿವಿಲ್ಲದಂತೆಯೇ ಹೊಂದಿಕೊಳ್ಳುತ್ತಾನೆ. ಈ ಹೊಂದಾಣಿಕೆ ಅವನಿಗೆ ಸಾಧ್ಯವಾಗದೇ ಹೋದರೆ ಅವನು ಸಮಾಜದ ಪೂರ್ಣಪ್ರಮಾಣದ (Fullfledged) ವ್ಯಕ್ತಿಯಾಗುವುದೇ ಕಷ್ಟ. ಪ್ರತಿಯೊಬ್ಬನು ತನ್ನ ಕುಟುಂಬ,ಜಾತಿ, ಜನಾಂಗ, ಬಡಕಟ್ಟು, ನೆರೆಹೊರೆ, ಆಟದ ಸಮೂಹ, ಮಿತ್ರರಕೂಟ, ಶಾಲೆ ಮತ್ತು

ಕಾರ್ಯಕ್ಷೇತ್ರಗಳಿಗೆ ಹೊಂದಿಕೊಳ್ಳುವುದು ತೀರಾ ಸಹಜವಾದುದು. ವ್ಯಕ್ತಿಯ ಅರಿವಿಲ್ಲದೆಯೇ ಅಂತಹ ಹೊಂದಾಣಿಕೆ ಜೀವನ ಪರ್ಯಂತ ನಡೆಯುತ್ತಲೇ ಇರುತ್ತದೆ. ಆದರೆ ವ್ಯಕ್ತಿಗಳು ಮತ್ತು ಸಮೂಹಗಳು ಎಷ್ಟೋಭಾರಿ ಬುದ್ಧಿಪೂರ್ವಕವಾಗಿ ಪೂರ್ಣ ಅರಿವಿನಿಂದ ಸಂಘರ್ಷವನ್ನು ನಿಲ್ಲಿಸಿ ರಾಜಿ ಮಾಡಿಕೊಳ್ಳುತ್ತಾರೆ. ಉದಾ: ಯುದ್ಧನಿರತ ದೇಶಗಳು ಶಾಂತಿ ಮಾತುಕತೆಗೆ ಸಿದ್ಧವಾಗುವುದು. ಕಾರ್ಮಿಕರು ಮುಷ್ಕರ ನಿಲ್ಲಿಸಿ ಆಡಳಿತ ಮಂಡಳಿಯೊಂದಿಗೆ ಒಪ್ಪಂದ ಮಾಡಿಕೊಂಡು ಮರಳಿ ಕೆಲಸಕ್ಕೆ ಹಾಜರಾಗುವುದು.

3. **ಹೊಂದಾಣಿಕೆಯು ಸಾರ್ವತ್ರಿಕವಾದುದು (Accommodation is universal) :–**

ಹೊಂದಾಣಿಕೆಯು ಎಲ್ಲಾ ಕಡೆಕಂಡುಬರುವ ಒಂದು ಪ್ರಕ್ರಿಯೆಯಾಗಿದೆ. ಮಾನವ ಸಮಾಜದಲ್ಲಿ ಒಂದಲ್ಲ ಒಂದು ಬಗೆಯ ತಿಕ್ಕಾಟ ಸಂಭವಿಸುತ್ತಲೇ ಇರುವುದು. ಈ ತಿಕ್ಕಾಟಗಳ ನಿವಾರಣೆಗೆ ಅಥವಾ ಅವುಗಳನ್ನು ತಾತ್ಕಾಲಿಕವಾಗಿಯಾದರೂ ಸ್ಥಗಿತಗೊಳಿಸಲು ಹೊಂದಾಣಿಕೆ ಅಗತ್ಯವಾಗುವುದು.

4. **ಹೊಂದಾಣಿಕೆಯು ನಿರಂತರವಾದುದು (Accommodation is continious):–**

ಹೊಂದಾಣಿಕೆಯು ಯಾವುದೇ ಒಂದು ನಿರ್ಧಿಷ್ಟ ಪರಿಸ್ಥಿತಿ ಅಥವಾ ಪರಿಸರಕ್ಕೆ ಅಥವಾ ವ್ಯಕ್ತಿಯ ಬೆಳವಣಿಗೆಯ ಯಾವುದೋ ನಿರ್ಧಿಷ್ಟ ಹಂತಕ್ಕೆ ಮಾತ್ರ ಸೀಮಿತವಾಗಿರುವುದಿಲ್ಲ. ವ್ಯಕ್ತಿಯ ಪಾತ್ರಗಳು ಅಂತಸ್ತುಗಳು, ಪರಿಸ್ಥಿತಿಗಳು ಮತ್ತು ಪರಿಸರ ಬದಲಾವಣೆ ಹೋದಂತೆ ಹೊಸ ಹೊಸ ಸಂಘರ್ಷಗಳು, ಸವಾಲುಗಳು, ಎದುರಾಗಬಹುದು. ಅಂತಹ ಸಮಯದಲ್ಲಿ ಅವುಗಳೊಂದಿಗೆ ಹೊಂದಾಣಿಕೆ ಮಾಡಿಕೊಳ್ಳುತ್ತಲೇ ವ್ಯಕ್ತಿ ತನ್ನ ಸಹಜೀವನವನ್ನು ಮುಂದುವರಿಸಬೇಕಾಗುತ್ತದೆ.

5. **ಹೊಂದಾಣಿಕೆಯ ಪರಿಣಾಮಗಳು ಸಂದರ್ಭಕ್ಕನ್ನುಸರಿಸಿ ಬೇರೆಯಾಗಬಹುದು (Accommedation differs according to situations):–**

ಅ) ಹೊಂದಾಣಿಕೆಯು ವ್ಯಕ್ತಿಗಳು ಮತ್ತು ಸಮೂಹಗಳು ಸಂಘರ್ಷವನ್ನು ನಿಲ್ಲಿಸಿ ಸ್ವಾಂಗೀಕರಣಕ್ಕೆ ವೇದಿಕೆಯನ್ನು ಸಿದ್ಧವಾಗಿಸಬಹುದು. ಆ) ಕಾರ್ಮಿಕರು ಮತ್ತು ಆಡಳಿತ ಮಂಡಳಿಗಳ ನಡುವಿನ ಒಪ್ಪಂದಗಳಂತೆ ಹೊಂದಾಣಿಕೆಯು ಒಂದು ನಿಶ್ಚಿತ ಅವಧಿಯವರೆಗೆ ಸಂಘರ್ಷವನ್ನು ಮುಂದೆ ಹಾಕಬಹುದು. ಇ) ಎದ್ದು ಕಾಣುವ ಸಾಮಾಜಿಕ ಅಂತರಗಳಿಂದ ಕೂಡಿರುವ ಸಮೂಹಗಳು ಕೂಡ ಹೊಂದಾಣಿಕೆಯಿಂದಾಗಿ ಸಹಭಾಳ್ವೆ **ನಡೆಸಲು ಸಾಧ್ಯವಾಗುವುದು.**

3. **ಹೊಂದಾಣಿಕೆಯ ವಿಧಾನಗಳು ಅಥವಾ ರೂಪಗಳು (Forms of Accommodation):**

ಹೊಂದಾಣಕೆಯು ಅನೇಕ ವಿಧಾನ ಅಥವ ರೂಪಗಳಲ್ಲಿ ನಡೆಯುವುದು . ಗಿಲಿನ್ ಮತ್ತು ಗಿಲಿನ್ ರವರು ಈ ಕೆಳಗಿನಂತೆ ಪ್ರಸ್ತಾಪಿಸಿದ್ದಾರೆ.

1. **ಬಲಪ್ರಯೋಗಕ್ಕೆ ಮಣಿಯುವುದು(Yielding to coercion):** ಬಲಪ್ರಯೋಗದ ಬಳಕೆಯಿಂದ ಅಥವಾ ಅದರ ಬೆದರಿಕೆಯನ್ನೊಡ್ಡಿ ಒಮ್ಮೊಮ್ಮೆ ಸಂಘರ್ಷವನ್ನು ನಿಲ್ಲಿಸಲಾಗುವುದು. ಸಂಘರ್ಷದಲ್ಲಿ ತೊಡಗಿರುವ ವ್ಯಕ್ತಿಗಳು ಮತ್ತು ಪಕ್ಷಗಳು ಅಸಮಬಲರಾಗಿದ್ದಾಗ ಮಾತ್ರ ಈ ವಿಧಾನ ಬಳಕೆಗೆ ಬರುವುದು. ಅಂತಹ ಸಂದರ್ಭದಲ್ಲಿ ಸಾಮಾನ್ಯವಾಗಿ ಸಮಬಲರಾಗಿದ್ದವರು ದುರ್ಬಲರಾಗಿದ್ದವರ ಮೇಲೆ ಹಲವಾರು ಶರತ್ತುಗಳನ್ನು ಹೇರಿ ಒಪ್ಪಂದಕ್ಕೆ ಮಣಿಯುವಂತೆ ಮಾಡುವರು ಉದಾ: ಗುಲಾಮಗಿರಿಯಲ್ಲಿ ಯಜಮಾನರು ಸೇವಕ

ಅಥವಾ ಗುಲಾಮನ ಮೇಲೆ ತನ್ನ ಪ್ರಭುತ್ವವನ್ನು ಚಲಾಯಿಸುತ್ತಾರೆ. ಯುದ್ದದಲ್ಲಿ ಗೆದ್ದ ದೇಶಗಳ ದುರ್ಬಲ ದೇಶಗಳ ಮೇಲೆ ತನಗಿಷ್ಟ ಬಂದ ಶರತ್ತುಗಳನ್ನು ಹೇರುವುದುಂಟು. ಸರ್ವಾಧಿಕಾರದಲ್ಲಿ ಅಧಿಕಾರರೂಢ ವ್ಯಕ್ತಿ ಅಥವಾ ಪಕ್ಷ ಅಧಿಕಾರದ ಬಲದಿಂದ ದುರ್ಬಲ ಜನರ ಮೇಲೆ ತಮ್ಮ ಆಳ್ವಿಕೆಯನ್ನು ಹೇರುವುದು ತೀರಾ ಸಾಮಾನ್ಯ.

2. **ಒಪ್ಪಂದ ಅಥವಾ ರಾಜಿ (Compramise):** ಸಂಘರ್ಷ ನಿರತ ಪಕ್ಷಗಳು ಸಮಬಲರಾಗಿದ್ದು ಸಂಘರ್ಷವನ್ನು ಮುಂದುವರಿಸಲು ಇಷ್ಟಪಡದೇ ಇದ್ದಾಗ ಒಪ್ಪಂದ ಅಥವಾ ರಾಜಿಯಾಗುತ್ತಾರೆ. ಇಲ್ಲಿ ಪಕ್ಷಗಳು, ತಮ್ಮ ಧೋರಣೆಯ ಜಿಗುಟುತನವನ್ನು ಕೈಬಿಟ್ಟು ಪರಸ್ಪರ 'ಕೊಡುವ ಮತ್ತು ತೆಗೆದುಕೊಳ್ಳುವ (give and take) ಬಗ್ಗೆ ಆಲೋಚಿಸುತ್ತೇವೆ ಕೆಲವೊಂದು ಅಂಶಗಳನ್ನು ಇನ್ನೊಂದು ಪಕ್ಷಕ್ಕೆ ಬಿಟ್ಟುಕೊಟ್ಟು ಅದ್ದರಿಂದ ಮತ್ತೆ ಕೆಲಸವನ್ನು ಪಡೆಯಲಾಗುವುದು. "ಸಂಪೂರ್ಣ ಅಥವಾ ಇಲ್ಲವೇ ಇಲ್ಲ" (all for nothing) ಎನ್ನುವ ನಿಲುವು ಇಲ್ಲಿ ಸರಿಹೊಂದುವುದಿಲ್ಲ. ಉದಾ: ಅಂತರಾಷ್ಟ್ರೀಯ ಒಪ್ಪಂದಗಳಲ್ಲಿ ಹಾಗೂ ಕಾರ್ಮಿಕರ ಮತ್ತು ಆಡಳಿತ ಮಂಡಳಿಯ ನಡುವಿನ ಸಂಧಾನಗಳಲ್ಲಿ ಕೊಡುವ ಮತ್ತು ತೆಗೆದುಕೊಳ್ಳುವ ಸೂತ್ರಕ್ಕೆ ಹೆಚ್ಚಿನ ಮಹತ್ವವಿದೆ.

3. **ಮಧ್ಯಸ್ಥಗಾರನ ಪಾತ್ರ (Role of middleman):–**

ಒಪ್ಪಂದವು ಬೇರೆ ಬೇರೆ ರೀತಿಯಲ್ಲಿ ಏರ್ಪಡಬಹುದು ಉದಾ: ಅ) ಪಂಚಾಯಿತಿ ಆ) ಮಧ್ಯಸ್ಥಿಕೆ ಮತ್ತು ಇ) ಮನವೊಲೈಸುವಿಕೆ.

ಅ) **ಪಂಚಾಯಿತಿ(Arbitration) :–** ಸಂಘರ್ಷದಲ್ಲಿ ತೊಡಗಿರುವವರು ತಾವಾಗಿಯೇ ಅದನ್ನು ಪರಿಹರಿಸಿಕೊಳ್ಳಲಾರೆ ಎಂದು ತಿಳಿದೊಡನೆ ಅವರು ಪಂಚಾಯಿತಿಗೆ ಸಿದ್ದವಾಗುವುದುಂಟು. ಎರಡು ಪಕ್ಷಗಳಿಂದ ಆಯ್ಕೆಯಾಗಲ್ಪಟ್ಟ ಪಂಚಾಯಿತಿದಾರನು ಪಂಚಾಯಿತಿಯ ಮೂಲಕ ಕೊಡುವ ತೀರ್ಮಾನಕ್ಕೆ ಪಕ್ಷಗಳು ಬದ್ದರಾಗಿರಬೇಕು. ಉದಾ: ರಾಜಕೀಯ ಪಂಚಾಯಿತಿಗಳು., ಕಾರ್ಮಿಕ ಆಡಳಿತ ಮಂಡಳಿಯ ಒಪ್ಪಂದಗಳು ಇತ್ಯಾದಿ.

ಆ) **ಮಧ್ಯಸ್ಥಿಕೆ (Mediation):–** ಇದು ಪಂಚಾಯಿತಿ ಸ್ವರೂಪದಲ್ಲಿಯೇ ಇರುವುದು, ಆದರೆ ಇಲ್ಲಿ ಮಧ್ಯಸ್ಥಿಕೆ ವಹಿಸುವ ಮೂರನೇ ವ್ಯಕ್ತಿಯ ಅಥವಾ ಪಕ್ಷವು ಕೊಡುವ ತೀರ್ಮಾನಕ್ಕೆ ಸಂಘರ್ಷನಿರತ ಪಕ್ಷಗಳು ಬದ್ದರಾಗಿರಬೇಕೆಂಬ ನಿಯಮವಿರುವುದಿಲ್ಲ. ಪಕ್ಷಗಳ ಜಗಳದಲ್ಲಿ ತಟಸ್ಥ ಧೋರಣೆಯುಳ್ಳ ಮಧ್ಯಸ್ಥಿಕೆದಾರರು ಅವುಗಳು ಒಂದು ಶಾಂತಿಯುತ ಒಪ್ಪಂದಕ್ಕೆ ಬರಲೆಂದು ತನ್ನ ವರ್ಚಸ್ಸನ್ನು ಪ್ರಯೋಗಿಸುವರು. ಅವರ ಕಾರ್ಯೋನ್ಮುಖವಾಗಿ ಸಲಹೆ ನೀಡುವುದು. ಆದರೆ ನಿರ್ಣಯಿಸುವುದಿಲ್ಲ ಉದಾ: ಧಾರ್ಮಿಕ ಹಾಗೂ ಕೈಗಾರಿಕಾ ಸಂಘರ್ಷಗಳಲ್ಲಿ ಪಂಚಾಯಿತಿಯ ಜೊತೆಗೆ ಮಧ್ಯಸ್ಥಿಕೆಯ ವಿಧಾನವೂ ಬಳಸಲ್ಪಡುವುದು.

ಇ) **ಮನವೊಲೈಸುವಿಕೆ (Conciliation):–** ಒಪ್ಪಂದಕ್ಕೆ ಸಂಬಂಧಿಸಿದ ಮತ್ತೊಂದು ವಿಧಾನವೆಂದರೆ ಸಂಘರ್ಷನಿರತರಾದವರ ಮನವೊಲೈಸಿ ಅವರ ನಡುವೆ ರಾಜಿಯುಂಟಾಗುವಂತೆ ಮಾಡುವುದು.

ಪರಸ್ಪರ ವಿರೋಧಿ ಮತ್ತು ಪಕ್ಷಗಳು ದ್ವೇಷ ಮತ್ತು ಹಠಮಾರಿತನವನ್ನು ಕೈಬಿಟ್ಟು ಸ್ನೇಹ ಸಹಬಾಳ್ವೆಯನ್ನು ಆರಂಭಿಸಬೇಕೆಂದು ಅವರನ್ನು ಅನುನಯದಿಂದ ಒಲಿಸಿಕೊಳ್ಳುವ ಪ್ರಯತ್ನವಿದು ಉದಾ: ಬುಡಕಟ್ಟು ಸಂಬಂಧಿತ, ಧಾರ್ಮಿಕ, ಔದ್ಯಮಿಕ ಮತ್ತಿತರ ಕ್ಷೇತ್ರಗಳಲ್ಲಿ ಈ ವಿಧಾನವನ್ನು ಬಳಸಲಾಗುವುದು. ಇದರಿಂದಾಗಿ ಸ್ವಾಂಗೀಕರಣಕ್ಕೆ ನಾಂದಿಯಾಗುವುದು ಇದೆ.

**ಈ. ಸಹನೆ (Toleration):–** ಪಕ್ಷಗಳು ಮತ್ತು ವ್ಯಕ್ತಿಗಳು ಸಹನೆಯನ್ನು ಬೆಳಸಿಕೊಂಡು ಸಂಘರ್ಷವನ್ನು ನಿಲ್ಲಿಸಿಬಿಡುವುದುಂಟು. ಸಹನೆಯನ್ನು ಸಂಘರ್ಷದ ಪರಿಹಾರೋಪಾಯ ಎನ್ನುವುದಕ್ಕಿಂತ ಅದನ್ನು ತಪ್ಪಿಸಿಕೊಳ್ಳುವ ವಿಧಾನ ಎಂದೇ ಹೇಳಬಹುದು. ಇದು "ಬಾಳು ಮತ್ತು ಬಾಳಗೋಡು" (live and let live) ಎನ್ನುವ ತತ್ವವನ್ನು ಆಧರಿಸಿದೆ. ಔಪಚಾರಿಕ ಒಪ್ಪಂದವಿಲ್ಲದೆ ಸಂಘರ್ಷವನ್ನು ಕೊನೆಗಾಣಿಸುವ ಮಾರ್ಗವಿದು. ತಮ್ಮ ಭಿನ್ನತೆಗಳಿಗೆ ಪರಿಹಾರವಿಲ್ಲವೆಂಬ ವಾಸ್ತವಿಕ ಪ್ರಜ್ಞೆಯನ್ನು ಬೆಳೆಸಿಕೊಳ್ಳುವ ಪಕ್ಷಗಳು ಪರಸ್ಪರ ಸಹನೆಯಿಂದಿರಲು ಕಲಿಯುವುವು. ಉದಾ: ರಾಜಕೀಯ ಪಕ್ಷಗಳು, ಧಾರ್ಮಿಕ ಸಮೂಹಗಳು, ಬುಡಕಟ್ಟು ಸಮೂಹಗಳು (racial groups) ಜಾತಿ ಸಮೂಹಗಳು ಮತ್ತು ಸೈದ್ಧಾಂತಿಕವಾಗಿ ವಿರೋಧಿಗಳಾಗಿರುವ ಗುಂಪುಗಳು ಪರಸ್ಪರ ಸಹನೆಯಿಂದಿರಲು ಪ್ರಯತ್ನಿಸುತ್ತವೆ.

4. **ಮನಃ ಪರಿವರ್ತನೆ (Conversion):–** ವ್ಯಕ್ತಿಗಳು ಅಥವಾ ಪಕ್ಷಗಳು ತಮ್ಮ ನಂಬಿಕೆಗಳನ್ನು ದೃಢ ನಿಶ್ಚಯಗಳನ್ನು ನಿಷ್ಠೆಯನ್ನು ಇದ್ದಕ್ಕಿದ್ದಂತೆ ಬದಲಿಸಿ ಬೇರೆಯವರನ್ನು ಸ್ವೀಕರಿಸುವುದನ್ನು "ಮನಃ ಪರಿವರ್ತನೆ" ಎನ್ನಲಾಗಿದೆ. ಸಾಮಾನ್ಯವಾಗಿ ಈ ಪದವನ್ನು ಧಾರ್ಮಿಕ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಬಳಸುವುದೇ ಹೆಚ್ಚು ಅಂದರೆ ತನ್ನ ವಂಶಧರ್ಮವನ್ನು ತೊರೆದು ಮತ್ತೊಂದು ಧರ್ಮವನ್ನು ಸ್ವೀಕಾರ ಮಾಡುವುದು. ಆದರೆ ಇಂದು ಈ ಪದವನ್ನು ಸಾಹಿತ್ಯ, ಕಲೆ, ಆರ್ಥಿಕ, ಕ್ಷೇತ್ರ ಹಾಗೂ ರಾಜಕೀಯ ಕ್ಷೇತ್ರಗಳಿಗೆ ಸಂಬಂದಿಸಿದಂತೆಯೂ ಬಳಸಲಾಗುತ್ತಿದೆ. ಭಾರತದಲ್ಲಂತೂ ಇಂದು ರಾಜಕೀಯ ಕ್ಷೇತ್ರದಲ್ಲಿ "ಪಕ್ಷಾಂತರ" ವೆಂಬುದು ಮನೆಮಾತಾಗಿದೆ.

5. **ಉದಾತ್ತೀಕರಣ (Sublimation):** ಆಕ್ರಮಣಶೀಲ ಪ್ರವೃತ್ತಿಯನ್ನು ತೊರೆದು ಸೌಹಾರ್ದಯುತ ಸಹಜೀವನ ನಡೆಸುವ ಪ್ರಯತ್ನವೇ ಉದಾತ್ತೀಕರಣ. ಇದು ವ್ಯಕ್ತಿ ಹಾಗೂ ಸಮೂಹಗಳ ಮಟ್ಟದಲ್ಲಿ ಕಾಣಬಹುದು. ಸಂಘರ್ಷದಿಂದ ಶಕ್ತಿಯ ಕುಂದಿಸಿಕೊಳ್ಳುವುದರ ಬದಲು ಅದನ್ನು ಉನ್ನತ ಗುರಿಯ ಕಡೆಗೆ ತಿರುಗಿಸುವುದೇ ಶ್ರೇಯಸ್ಕರವೆಂದು ವ್ಯಕ್ತಿಗಳು ಭಾವಿಸುತ್ತಾರೆ. ಇದರಿಂದ ಅವರುಗಳಿಗೆ ಮಾತ್ರವಲ್ಲದೇ ಸಮಾಜಕ್ಕೂ ಶಾಂತಿ– ಸಮಾಧಾನ ಲಭಿಸುವುದು. ಧಾರ್ಮಿಕ ನಾಯಕರು ಹಾಗೂ ಸಮಾಜ ಸುಧಾರಕರು (ಗೌತಮಬುದ್ಧ, ಮಹಾವೀರ, ಏಸುಕ್ರಿಸ್ತ, ಬಸವಣ್ಣ, ಗಾಂಧೀಜಿ) ಈ ವಿಧಾನದ ಪ್ರಾಮುಖ್ಯತೆಯನ್ನು ಒತ್ತಿ ಹೇಳಿದ್ದಾರೆ.

6. **ಸಯುಕ್ತಿಕ ವಿವರಣೆ (Rationalization):–** ತಮ್ಮ ತಪ್ಪುಗಳಿಗೆ ಅಥವಾ ವೈಫಲ್ಯಗಳಿಗೆ ಯುಕ್ತಿಪೂರ್ವಕವಾಗಿ ವಿವರಣೆ ಕೊಟ್ಟು ತಮ್ಮನ್ನು ಸಮರ್ಥಿಸಿಕೊಳ್ಳುವ ಪ್ರಯತ್ನವಿದು. ಇದು ವ್ಯಕ್ತಿ ಹಾಗೂ ಸಮೂಹಗಳಲ್ಲಿ ಕಂಡುಬರುವುದು. ಉದಾ: ಅ) ಪರೀಕ್ಷೆಯಲ್ಲಿ ತೇರ್ಗಡೆಯಾಗದೆ ಇರುವ ವಿದ್ಯಾರ್ಥಿಯು ತನ್ನ ವೈಫಲ್ಯಕ್ಕೆ ಅನಾರೋಗ್ಯ ಕಾರಣವೆಂದೂ, ಅಥವಾ ಅಧ್ಯಾಪಕರು ಸರಿಯಾಗಿ ಪಾಠ ಮಾಡದೇ ಇರುವುದು ಕಾರಣವೆಂದೂ, ಮೌಲ್ಯಮಾಪಕರ ತಪ್ಪಿನಿಂದಾಗಿ ಹಾಗಾಗಿದೆ ಎಂದು ಕಾರಣ ನೀಡಬಹುದು. ಇದೇ ರೀತಿಯ ಸಮೂಹಗಳೂ ತಮ್ಮ ಧೋರಣೆಯನ್ನು ಇಲ್ಲದೇ ವೈಪಲ್ಯವನ್ನು ಸಮರ್ಥಿಸಿಕೊಳ್ಳುವರು. ಎರಡನೇ ಮಹಾಯುದ್ಧವನ್ನು ಆರಭಿಸಿದ ಜರ್ಮನಿಯ ಯುದ್ದಕ್ಕೆ ಮಿತ್ರರಾಷ್ಟ್ರಗಳೇ ಹೊಣೆ ಎಂದು ಹೇಳಿತು. ಅದೇ ಅಮೇರಿಕಾವು

"ಜಗತ್ತಿನಲ್ಲಿ ಪ್ರಜಾಸತ್ತೆಯನ್ನು ಉಳಿಸುವುದಕ್ಕಾಗಿ" ತಾನು ಮಹಾಯುದ್ಧದಲ್ಲಿ ಭಾಗವಹಿಸುತ್ತಿರುವುದಾಗಿ ಸಮರ್ಪಿಸಿಕೊಂಡಿತ್ತು. ಈ ರೀತಿ ಸಯುಕ್ತಿಪೂರ್ವಕವಾಗಿ ವಿವರಣೆ ಕೊಡುವುದರ ಮೂಲಕ ಆತ್ಮ ಗೌರವವನ್ನು ಉಳಿಸಿಕೊಳ್ಳುವುದು ಹಾಗೂ ತಮ್ಮಲ್ಲಿ ಅಪರಾಧಿ ಭಾವನೆ (guilt feeling ) ಇಲ್ಲದಂತೆ ತಮಗೆ ತಾವೇ ಸಮಾಧಾನ ಮಾಡಿಕೊಳ್ಳಲು ಸಾಧ್ಯವಾಗುವುದು.

### 4. ಹೊಂದಾಣಿಕೆಯ ಪ್ರಾಮುಖ್ಯತೆ (Importance of Accommodation):

ಸಾಮಾಜಿಕ ಜೀವನದ ನಿರಂತರಕ್ಕೆ ಹೊಂದಾಣಿಕೆ ಅಗತ್ಯ. ಸಂಘರ್ಷದಿಂದ ಮುಖ್ತವಾದ ಸಮಾಜವೇ ಇಲ್ಲ. ಹಾಗೆಯೇ ಸಂಘರ್ಷವು ಹಾನಿಯನ್ನು ತಂದೊಡ್ಡುತ್ತಲೇ ಇರುತ್ತದೆ. ಅದು ಸಾಮಾಜಿಕ ಏಕತೆಯನ್ನು ಭಗ್ನಗೊಳಿಸುವುದು. ಸಾಮಾಜಿಕ ಭದ್ರತೆಯನ್ನು ಅಭದ್ರಗೊಳಿಸುತ್ತದೆ ಹಾಗೂ ಸಾಮಾಜಿಕ ಪ್ರಕ್ರಮಕ್ಕೆ ನಿರಂತರವಾಗಿ ಸವಾಲೊಡ್ಡುವುದು. ಆದ್ದರಿಂದ ಸಂಘರ್ಷವನ್ನು ಪರಿಹರಿಸುವ ಪ್ರಯತ್ನವನ್ನು ಎಲ್ಲಾ ಸಮಾಜಗಳು ನಡೆಯುತ್ತಿರುತ್ತವೆ. ಹೊಂದಾಣಿಕೆಯಿಂದ ಮಾತ್ರ ಸಂಘರ್ಷವನ್ನು ನಿವಾರಿಸಿ ಸಹಭಾಳ್ವೆ ನಡೆಸಲು ಸಾಧ್ಯ. ಬದಲಾದ ಸ್ಥಿತಿಗತಿಗಳಿಗೆ ಹೊಂದಿಕೊಳ್ಳಲು ಹೊಂದಾಣಿಕೆ ಸಹಾಯ ಮಾಡುವುದು. ದೀರ್ಘಕಾಲದ ಹೊಂದಾಣಿಕೆಯ ವೈಷಮ್ಯಗಳನ್ನು ಮುಂದುವರಿಸಿಕೊಂಡು ಹೋಗುವುದು ಅರ್ಥಹೀನವೆಂದು ಮನವರಿಕೆ ಮಾಡಿಕೊಡುವುದು. ಸಂಘರ್ಷಾತ್ಮಕ ಹಿತಾಸಕ್ತಿಗಳನ್ನು ಹೊಂದಿದ್ದರೂ ಕೂಡ ಹೆಚ್ಚು ತೊಂದರೆಗಳಿಲ್ಲದೆ ದೈನಂದಿನ ಚಟುವಟಿಕೆಗಳನ್ನು ನಡೆಸಿಕೊಂಡು ಹೋಗಲು ಹೊಂದಾಣಿಕೆಯು ಸಹಾಯಕವಾಗಿದೆ. ವಿರೋಧಿಯನ್ನು ನಾಶಪಡಿಸದೆಯೇ ಸಂಘರ್ಷಕ್ಕೆ ಪರಿಹಾರವನ್ನು ಕಂಡುಕೊಳ್ಳುವ ರಚನಾತ್ಮಕ ವಿಧಾನವಿದು. ವಿರೋಧಾತ್ಮಕ ಗುಂಪು ಸಹಕಾರದ ಸಹಭಾಳ್ವೆ ನಡೆಸುವಂತಾಗಲು ಹೊಂದಾಣಿಕೆ ಕಾರಣವಾಗಿದೆ. ಆದ್ದರಿಂದಲೇ ಹೊಂದಾಣಿಕೆಯನ್ನು "ವಿರೋಧಾತ್ಮಕ ಸಹಕಾರ" ("Anatagonistic Co-operation"). ಎಂದು ಕರೆಯುತ್ತೇವೆ.

## 3.6 ಸ್ವಾಂಗೀಕರಣ:– (Assimilation)

### 1. ಅರ್ಥ ಮತ್ತು ವ್ಯಾಖ್ಯೆಗಳು (Meaning and Definition):

ಸ್ವಾಂಗೀಕರಣವು ಸಾಮಾಜಿಕ ಅಂತಃಕ್ರಿಯೆಯ ಇನ್ನೊಂದು ಪ್ರಕಾರ. ಇದು ಒಂದು ಬಗೆಯ ಸಾಮಾಜಿಕ ಹೊಂದಾಣಿಕೆ. ಇಲ್ಲಿ ವ್ಯಕ್ತಿ ಅಥವಾ ಸಮೂಹ ನಿಧಾನಗತಿಯಿಂದ ಹೊಸ ಸ್ಥಿತಿಗತಿಗಳಲ್ಲಿ ಲೀನವಾಗುವುದನ್ನು ಕಾಣಬಹುದು. ಇದನ್ನು ಒಂದು ಸಂಸ್ಕೃತಿ ಇನ್ನೊಂದು ಸಂಸ್ಕೃತಿಯಲ್ಲಿ ಲೀನಗೊಳ್ಳುವ ಪ್ರಕ್ರಿಯೆ' ಎಂದು ಕರೆಯುತ್ತೇವೆ. ವ್ಯಕ್ತಿ – ಸಮೂಹದ ಸಂಬಂಧಗಳು ಕೇವಲ ಹೊಂದಾಣಿಕೆಯ ಮಟ್ಟದಲ್ಲಿ ಮಾತ್ರ ಉಳಿಯುವುದಾಗಿದ್ದಲ್ಲಿ ವ್ಯಕ್ತಿಗಳು ಮತ್ತು ಸಮೂಹಗಳು ಸಮರಸಗೊಳ್ಳಲು ಹೆಚ್ಚು ಅವಕಾಶವೇ ಆಗುತ್ತಿರಲಿಲ್ಲ. ಅದಕ್ಕೆ ಬದಲಾಗಿ ಒಂದು ಸಂಸ್ಕೃತಿ ಇನ್ನೊಂದರೊಂದಿಗೆ ಒಂದು ಗೂಡುವ ಮತ್ತು ಲೀನವಾಗುವ ಅವಕಾಶವಾಗುವುದು ಸ್ವಾಂಗೀಕರಣದಲ್ಲಿ ಆದ್ದರಿಂದ ಸ್ವಾಂಗೀಕರಣದಲ್ಲಿ ಬಹಳ ಮೂಲಭೂತ ಬದಲಾವಣೆಗಳೇ ಆಗಬೇಕಾಗುತ್ತದೆ.

1. **ಯಂಗ್ ಮತ್ತು ಮ್ಯಾಕ್:** "ಆರಂಭದಲ್ಲಿ ಪರಸ್ಪರ ಸಂಪೂರ್ಣವಾಗಿ ಬೇರೆ–ಬೇರೆಯಾಗಿದ್ದ ಸಮೂಹಗಳು ಒಂದುಗೂಡುವ ಪ್ರಕ್ರಿಯೆಯೇ ಸ್ವಾಂಗೀಕರಣ".

2. **ಬೊಗಾರ್ಡಸ್:** "ಸಾಮಾಜಿಕಪ್ರಕ್ರಿಯೆಯ ಒಂದು ರೂಪವಾಗಿರುವ ಸ್ವಾಂಗೀಕರಣದ ಮೂಲಕ ಹಲವಾರು ವ್ಯಕ್ತಿಗಳ ಮನೋಭಾವನೆಗಳು ಒಂದುಗೂಡಿ ಸಂಯುಕ್ತ ಸಮೂಹವೊಂದರ ರಚನೆಯಾಗುವುದು".

3. **ಸ್ಯಾಮ್ಯುಯೆಲ್ ಕೋಯನಿಕ್:** "ವ್ಯಕ್ತಿಗಳು ಮತ್ತು ಸಮೂಹಗಳು ಇನ್ನೊಂದು ಸಮೂಹದ ಸಂಸ್ಕೃತಿಯನ್ನು ಪಡೆಯುವ ಪ್ರಕ್ರಿಯೆಯೇ ಸ್ವಾಂಗೀಕರಣ".

## 2. ಸ್ವಾಂಗೀಕರಣದ ಗುಣಲಕ್ಷಣಗಳು (Characteristics of Assimileration):

a. **ಸ್ವಾಂಗೀಕರಣವು ಯಾವುದೇ ಒಂದು ಕ್ಷೇತ್ರಕ್ಕೆ ಮಾತ್ರ ಸೀಮಿತವಾಗಿಲ್ಲ(Assimilation is not confined to single field):–** ಸ್ವಾಂಗೀಕರಣದ ಪ್ರಕ್ರಿಯೆಯನ್ನು ಜೀವನದ ವಿವಿಧ ಕ್ಷೇತ್ರಗಳಲ್ಲಿ ಕಾಣಬಹುದು ಉದಾ: ಕುಟುಂಬದಲ್ಲಿ ನವಜಾತ ಶಿಶುಗಳು ಕಾಲಾನುಕ್ರಮದಲ್ಲಿ ತಮ್ಮ ಸಂಸ್ಕೃತಿಯೊಂದಿಗೆ ಸಾಮಾಜೀಕರಣಗೊಳ್ಳುತ್ತಾರೆ. ಬೇರೆ ಬೇರೆ ಕೌಟುಂಬಿಕ ಹಿನ್ನಲೆಯ ಗಂಡು–ಹೆಣ್ಣು ತಮ್ಮ ವ್ಯತ್ಯಾಸವನ್ನು ಮರೆತು ಸಮರಸಗೊಳ್ಳುವರು. ಧಾರ್ಮಿಕ ಕ್ಷೇತ್ರದಲ್ಲಿ ಒಬ್ಬ ವ್ಯಕ್ತಿ ತನ್ನ ಮಾತೃಧರ್ಮವನ್ನು ತೊರೆದು ಮತ್ತೊಂದು ಧರ್ಮವನ್ನು ಸ್ವೀಕಾರ ಮಾಡುವ 'ಮತಾಂತರ'ವು ಸ್ವಾಂಗೀಕರಣವೇ ಆಗಿದೆ.

b. **ಸ್ವಾಂಗೀಕರಣವು ಮಂದಗತಿಯಿಂದ ಕ್ರಮಕ್ರಮವಾಗಿ ನಡೆಯುವುದು (Assimilation is slow and gradual processes):–** ಸ್ವಾಂಗೀಕರಣವು ಇದಕ್ಕಿದ್ದಂತೆಯೇ ಸಂಭವಿಸುವ ಪ್ರಕ್ರಿಯೆಯಲ್ಲ. ಅದಕ್ಕೆ ಸಮಯಬೇಕು. ವ್ಯಕ್ತಿಗಳು ಮತ್ತು ಸಮೂಹಗಳು ಒಂದು ಗೂಡುವುದಕ್ಕೆ ಸಾಕಷ್ಟು ಕಾಲಾವಕಾಶ ಬೇಕಾಗುವುದು. ಪ್ರತ್ಯಕ್ಷವಾದ ಹಾಗೂ ನಿರಂತರವಾದ ಸಂಪರ್ಕಗಳಿಂದ ಮಾತ್ರ ಇದು ಸಾಧ್ಯ. ಸಾಮಾಜಿಕ ಸಂಪರ್ಕದ ಸ್ವರೂಪವನ್ನು ಆಧರಿಸಿಯೇ ಸ್ವಾಂಗೀಕರಣವು ನಡೆಯುವುದು. ಪ್ರಾಥಮಿಕ ಸ್ವರೂಪದ ಸಂಪರ್ಕಗಳಿಂದ ಸ್ವಾಂಗೀಕರಣವು ತ್ವರಿತಗತಿಯಿಂಧಲೂ ಮಾಧ್ಯಮಿಕ ಸ್ವರೂಪದ ಸಂಪರ್ಕಗಳಿಂದ ಮಂದಗತಿಯಿಂದಲೂ ನಡೆಯುತ್ತದೆ ಎನ್ನಬಹುದು.

c. **ಸ್ವಾಂಗೀಕರಣವು ಸಾಮಾನ್ಯವಾಗಿ ಪ್ರಜ್ಞಾಪೂರ್ವಕವಲ್ಲದ ಒಂದು ಪ್ರಕ್ರಿಯೆ (Assimilation is unconscious processes):–** ಸ್ವಾಂಗೀಕರಣ ಪ್ರಕ್ರಿಯೆಯಲ್ಲಿ ವ್ಯಕ್ತಿಗಳಿಗೆ ಹಾಗೂ ಸಮೂಹಗಳಿಗೆ ಏನು ನಡೆಯುತ್ತಿದೆ ಎನ್ನುವುದರ ಪರಿವೆಯೇ ಇರುವುದಿಲ್ಲಬಹುದು. ಪ್ರತ್ಯಕ್ಷವಾಗಿ ಅವರ ಗಮನಕ್ಕೆ ಬಾರದಂತೆ ಪರೋಕ್ಷವಾಗಿ ಅವರ ಮನಸ್ಸು ಪರಿವರ್ತನೆಯಾಗಬಹುದು. ಇಂತಹ ಸ್ಥಿತಿಯಲ್ಲಿಯೇ ಚಿಕ್ಕಮಕ್ಕಳು ಸಮಾಜದ ಸಂಸ್ಕೃತಿಯೊಂದಿಗೆ ಸಮರಸಗೊಳ್ಳವುದು. ಪ್ರೌಢರ ಮಟ್ಟದಲ್ಲಿ ವ್ಯಕ್ತಿಗಳ ಗಮನಕ್ಕೆ ಬಾರದಂತೆ ಸೈದ್ಧಾಂತಿಕ ವಿಚಾರಗಳನ್ನು ಅವರ ಮನದಾಳಕ್ಕೆ ತೂರಿಸುವ ಪ್ರಯತ್ನವು ನಡೆಯುವುದಿದೆ. ಇದನ್ನು ತತ್ವಭೋಧನೆ ಎಂದು ಕರೆಯುವುದುಂಟು.

d. **ಸ್ವಾಂಗೀಕರಣವು ಒಮ್ಮುಖವಾದ ಪ್ರಕ್ರಿಯೆಯಾಗಿಲ್ಲ (Assimilation is not a one way process):–** ಸ್ವಾಂಗೀಕರಣವು ಕೊಡುವ–ತೆಗೆದುಕೊಳ್ಳುವ (Give and Take) ತತ್ವವನ್ನು ಆಧರಿಸಿ ನಿಂತಿದೆ. ಆದ್ದರಿಂದ ಇದು ಏಕಮಾರ್ಗಿಯ ಪ್ರಕ್ರಿಯೆಯಾಗಿಲ್ಲ. ಸಾಮಾನ್ಯವಾಗಿ ಇದು ಸಂಸ್ಕೃತಿ ಗ್ರಹಣ" ಪ್ರಕ್ರಿಯೆಯ ನಂತರವೇ ನಡೆಯುವುದು ಎನ್ನಬಹುದು. ಸಾಂಸ್ಕೃತಿಕ ಅಂಶಗಳನ್ನು ಎರವಲು ಪಡೆದು ಅವುಗಳನ್ನು ಕಾಲಕ್ರಮೇಣ ತನ್ನದಾಗಿಸಿಕೊಳ್ಳುವ ಪ್ರಕ್ರಿಯೆಯನ್ನು "ಸಂಸ್ಕೃತಿ ಗ್ರಹಣ" ಎನ್ನಬಹುದು. ಸಾಮಾನ್ಯವಾಗಿ ಸಂಸ್ಕೃತಿಕವಾಗಿ

ಹೆಚ್ಚು ಸತ್ವಶಾಲಿಯಾದ ಸಂಸ್ಕೃತಿಯಿಂದ ಸಾಂಸ್ಕೃತಿಕ ಅಂಶಗಳನ್ನು ಎರವಲು ಪಡೆಯುವುದೇ ಹೆಚ್ಚು. ಉದಾ: ಕೆಲವು ಅಮೇರಿಕಾದ ಮೂಲನಿವಾಸಿಗಳು ಅಮೇರಿಕದ ಸಂಸ್ಕೃತಿಯಿಂದ ಹಲವಾರು ಅಂಶಗಳನ್ನು ಪಡೆದು ತಮ್ಮದಾಗಿಸಿ ಕೊಂಡರು. ಹಾಗೆಯೇ ಭಾರತದಲ್ಲಿ ಆರ್ಯರು ಮತ್ತು ದ್ರಾವಿಡ ಸಂಸ್ಕೃತಿಗಳ ಹಲವಾರು ಅಂಶಗಳು ವಿನಿಮಯ ನಡೆಯಿತು. ಸಾಂಸ್ಕೃತಿಕ ಅಂಶಗಳ ವಿನಿಮಯದ ಜೊತೆಗೆ ಪ್ರಬಲ ಸಾಂಸ್ಕೃತಿಕ ಸಮೂಹದೊಂದಿಗೆ ದುರ್ಬಲ ಸಾಂಸ್ಕೃತಿಕ ಸಮೂಹವು ಸಮ್ಮಿಳಿತವಾದಾಗ ಸ್ವಾಂಗೀಕರಣವು ಪೂರ್ಣವಾಗುವುದು.

### 3. ಸ್ವಾಂಗೀಕರಣಕ್ಕೆ ಪೂರಕವಾದ ಅಂಶಗಳು:– (Factors favouring Assimilation)

1. **ಸಹನೆ (Toleration):–** ನಿಲುವು ನಿರ್ಧಾರಗಳಲ್ಲಿನ ಅಚಲತೆ, ವಿರೋಧಿಗಳ ಬಗೆಗಿನ ಅಸಹನೆ ಮತ್ತು ವೈಶಮ್ಯ ವಾತಾವರಣದಲ್ಲಿ ಸ್ವಾಂಗೀಕರಣವು ನಡೆಯಲಾರದು. ಸಾಂಸ್ಕೃತಿಕ ವ್ಯತ್ಯಾಸಗಳ ಬಗೆಗೆ ಜನರು ಸಹನೆಯಿಂದಿರುವುದಾದರೆ ಮಾತ್ರ ಅದು ಸಾಧ್ಯ. ಸಹನೆಯಿಂದ ಭಿನ್ನ ಸಂಸ್ಕೃತಿಗಳ ಜನರು ಪರಸ್ಪರ ಸಂಪರ್ಕ ಬೆಳೆಸಿಕೊಳ್ಳುವುದು. ಮತ್ತು ಅಂತಿಮವಾಗಿ ಒಂದುಗೂಡುವುದು ಸಾಧ್ಯ.

2. **ಅನ್ಯೋನ್ಯ ಸಾಮಾಜಿಕ ಭಾಂಧವ್ಯ (Intimate relationship):–** ಅನ್ಯೋನ್ಯ ಸಾಮಾಜಿಕ ಬಾಂಧವ್ಯಅಂತಿಮ ಫಲಶೃತಿಯೇ ಸ್ವಾಂಗೀಕರಣ. ಸ್ವಾಂಗೀಕರಣದ ಸಾಧ್ಯತೆಯು ಅದರ ಗತಿ ಹಾಗೂ ವೇಗ ಮತ್ತು ಸಾಮಾಜಿಕ ಸಂಬಂಧದ ಸ್ವರೂಪವನ್ನು ಆಧರಿಸಿದೆ. ಅನ್ಯೋನ್ಯವಾಗಿದ್ದರೆ ಸ್ವಾಂಗೀಕರಣವು ಕಡಿಮೆ ಸಮಯದಲ್ಲಿ ಪೂರ್ಣಗೊಳ್ಳುವುದು.

3. **ಸಂಯೋಗ ಅಥವಾ ಅಂತರ್ವಿವಾಹ (Inter marraige):–** ಅಂತರ್ವಿವಾಹವು ವಿವಿಧ ಗುಂಪುಗಳ ನಡುವೆ ಆತ್ಮೀಯವಾದ ಸಂಬಂಧವೇರ್ಪಡುವುದರೊಂದಿಗೆ ಜೈವಿಕ ಸಂಬಂಧವೇರ್ಪಡುವುದಕ್ಕೂ ಅವಕಾಶವಾಗುವುದು. ಸಮೂಹಗಳ ಪರಸ್ಪರ ಒಡನಾಟವು ಕೇವಲ ಒಡನಾಟಕ್ಕಾಗಿ ಮಾತ್ರ ಸೀಮಿತವಾಗಿದ್ದಲ್ಲಿ ಸ್ವಾಂಗೀಕರಣವು ಪೂರ್ಣವಾಗಲಾರದು. ವೈವಾಹಿಕ ಸಂಬಂಧವು ಎಲ್ಲಾ ಬಗೆಯ ಅಂತರಗಳನ್ನು ನಿವಾರಿಸಿ ಸ್ವಾಂಗೀಕರಣಕ್ಕೆ ದಾರಿಯನ್ನು ಸುಗಮಗೊಳಿಸುವುದು.

4. **ಸಾಂಸ್ಕೃತಿಕ ಸಾಮ್ಯತೆ (Cultural similarity):–** ಸಂಸ್ಕೃತಿಯ ಕೆಲವು ಮುಖ್ಯ ವಿಷಯಗಳ ಬಗ್ಗೆ ಸಮೂಹಗಳೊಳಗೆ ಸಾಮ್ಯತೆ ಮತ್ತು ಸಹಮತ ಇರುವುದಾದಲ್ಲಿ ಸ್ವಾಂಗೀಕರಣವು ಸುಗಮವಾಗುವುದು. ಉದಾ: ಅಮೇರಿಕಾದಲ್ಲಿ ಇಂಗ್ಲೀಷ್ ಮಾತನಾಡುವ ಪ್ರೊಟೆಸ್ಟೆಂಟರು ಇಂಗ್ಲೀಷ್ ಬಾರದ ಕ್ರೈಸ್ತೇತರರಿಗಿಂತಲೂ ಹೆಚ್ಚು ಸುಲಭ ಹಾಗೂ ವೇಗವಾಗಿ ಸಾಮರಸ್ಯಗೊಳ್ಳಲು ಸಾಧ್ಯವಾಯಿತು.

5. **ಶಿಕ್ಷಣ (Education):–** ಶಿಕ್ಷಣದ ಮೂಲಕ ವ್ಯಕ್ತಿಗಳ ಹಾಗೂ ಸಮೂಹಗಳ ಪೂರ್ವಾಗ್ರಹವನ್ನು ತೊಡೆದುಹಾಕಲು ಹಾಗೂ ವ್ಯತ್ಯಾಸಗಳ ತೀವ್ರತೆಯನ್ನು ತಗ್ಗಿಸಲು ಶಿಕ್ಷಣವು ಸಹಕಾರಿಯಾಗಿದೆ. ಇದರಿಂದ ಸ್ವಾಂಗೀಕರಣವು ಸುಲಭವಾಗುವುದು. ಮೌರೀಸಸ್ ಆರ್ ಡೇವಿ ಎಂಬುವವರು ತಮ್ಮ "ಪ್ರಪಂಚದ ವಲಸೆ" ಎಂಬ ಗ್ರಂಥದಲ್ಲಿ ಅಮೇರಿಕದಲ್ಲಿ ವಿದೇಶ ಮೂಲದ ಪೋಷಕರ ಮಕ್ಕಳುಗಳ ಅಮೇರಿಕೀಕರಣದಲ್ಲಿ ಅಲ್ಲಿನ ಸಾರ್ವಜನಿಕ ಶಾಲೆಗಳು ವಹಿಸುತ್ತಿರುವ ಪಾತ್ರಗಳನ್ನು ಎತ್ತಿತೋರಿಸಿದ್ದಾರೆ.

**6. ಸಮಾನ ಸಾಮಾಜಿಕ ಹಾಗೂ ಆರ್ಥಿಕ ಅವಕಾಶ (Equal social economic opportunities):** ಸ್ವಾಂಗೀಕರಣಕ್ಕೆ ಶಿಕ್ಷಣವೊಂದೇ ಸಾಕಾಗದು, ಎಲ್ಲ ಸಮೂಹಗಳಿಗೆ ಸಮಾನ ಅವಕಾಶಗಳನ್ನು ಕಲ್ಪಿಸಿದಾಗ ಸ್ವಾಂಗೀಕರಣವು ತ್ವರಿತವಾಗುವುದು. ಸಾಮಾಜಿಕ ಹಾಗೂ ಆರ್ಥಿಕ ಅಸಮಾನತೆಯಿಂದ ದ್ವೇಷ, ಅಸೂಯೆ, ಮತ್ತು ಸಂಘರ್ಷಗಳು ಹೆಚ್ಚಾಗುತ್ತವೆ. ಆದರೆ ಸಮಾನತೆಯಿಂದ ಮಾತ್ರ ಸೌಹಾರ್ದಯುತವಾದ ಸಹಜೀವನ ಮತ್ತು ಸ್ವಾಂಗೀಕರಣವು ಸಾಧ್ಯವಾಗುವುದು.

## ಸ್ವಾಂಗೀಕರಣದ ಹಂತಗಳು (Stages of Assimilation)

ಸ್ವಾಂಗೀಕರಣದ ಪ್ರಕಾರಗಳು 3 ಹಂತಗಳಲ್ಲಿ ಸಂಭವಿಸುತ್ತದೆ.

1, ವ್ಯಕ್ತಿಗತ 2. ಸಮೂಹ 3. ಸಂಸ್ಕೃತಿ

### 1. ವ್ಯಕ್ತಿಗತ ಹಂತ:

ವ್ಯಕ್ತಿಗಳು ವಿವಿಧ ಸಮೂಹದೊಂದಿಗೆ ಅನಿವಾರ್ಯ ಕಾರಣಗಳಿಂದ ಸಂಪರ್ಕ ಬೆಳಸಿಕೊಳ್ಳುತ್ತಾರೆ. ಇಂತಹ ಅನವಾರ್ಯ ಕಾರಣಗಳು ಆರ್ಥಿಕ, ರಾಜಕೀಯ, ಸಾಂಸ್ಕೃತಿಕ, ಸಾಮಾಜಿಕವಾಗಿ ವ್ಯಕ್ತಿಯ ಹೊಸ ಅಭ್ಯಾಸಗಳು, ಹವ್ಯಾಸಗಳು, ಸಂಪ್ರದಾಯ, ನಂಬಿಕೆಗಳು ಮತ್ತು ಇನ್ನಿತರ ಸಾಂಸ್ಕೃತಿಕ ಅಂಶಗಳನ್ನು ತಮ್ಮ ದೈನದಿಂದಿನ ಜೀವನದಲ್ಲಿ ಅನುಸರಿಸುತ್ತಾರೆ. ಉದಾ;– 19ನೇ ಶತಮಾನದಲ್ಲಿ ಭಾರತದ ಅಂದಿನ ಯುವ ಪೀಳಿಗೆ ಹೊಸ ವೃತ್ತಿಗಳನ್ನು ಅವಲಂಬಿಸುತ್ತಾ ಪಾಶ್ಚಾಮಾತ್ಯ ಉಡುಗೆ–ತೊಡುಗೆ, ಆಹಾರ ಪದ್ಧತಿ, ಕ್ರೀಡೆ ಮತ್ತು ಮನೋರಂಜನೆ ಮುಂತಾದವುಗಳನ್ನು ಸ್ವೀಕರಿಸಿ ಕೊಂಡರು.

ವಿವಾಹದ ನಂತರ ಸ್ತ್ರೀಯರು ತವರು ಮನೆಕ್ಕಿಂತಲೂ ವಿಭಿನ್ನತೆಯಾಗಿಯಿರುವ ಪತಿಯ ಕೌಟುಂಬಿಕ ಪರಿಸರದೊಂದಿಗೆ ಸಹಜವಾಗಿ ಲೀನವಾಗುತ್ತಾರೆ. ಇಂತಹ ಸಂದರ್ಭಗಳಲ್ಲಿ ವ್ಯಕ್ತಿಗಳು ತಮ್ಮ ಸಮೂಹದ ನಿಯಮಗಳನ್ನು ತ್ಯಜಿಸುತ್ತಾ ಇನ್ನೊಂದು ಸಮೂಹದ ನಿಯಮಗಳನ್ನು ಸ್ವೀಕರಿಸಿಕೊಳ್ಳುವ ಪ್ರವೃತ್ತಿಗಳು ಹೆಚ್ಚಾಗುತ್ತವೆ.

### 2. ಸಮೂಹಗಳ ಹಂತ

ಯಾವುದೇ ಎಂಡು ವಿಭಿನ್ನ ಸಂಸ್ಕೃತಿಕ ಸಮೂಹಗಳು ಸಾಮಾಜಿಕ, ರಾಜಕೀಯ, ಆರ್ಥಿಕ ಮತ್ತು ಇನ್ನತರ ಕಾರಣಗಳಿಂದ ಪರಸ್ಪರ ಸಂಪರ್ಕ ಬೆಳಸಿಕೊಂಡಾಗ–ಸ್ವಾಂಗೀಕರಣವಾಗುತ್ತದೆ. ಇಂತಹ ಸಂದರ್ಭಗಳಲ್ಲಿ ದುರ್ಬಲ ಮತ್ತು ಶೋಷಿತ ಸಮೂಹಗಳು ಪರಕೀಯ ಸಂಸ್ಕೃತಿಕ ಅಂಶಗಳನ್ನು ಪಡೆದು ಕೊಳ್ಳುತ್ತಾರೆ ಉದಾ;– ಬ್ರಿಟಿಷ್‌ರ ಆಳ್ವಿಕೆಯ ಕಾಲಾವಧಿಯಲ್ಲಿ ಭಾರತೀಯ ಪಾಶ್ಚಮಾತ್ಯ ಸಂಸ್ಕೃತಿಗಳನ್ನು ಅನುಸರಿಸುತ್ತಾ ಕಾಲಕ್ರಮೇಣ ಜೀವನದ ಒಂದು ಭಾಗವಾಯಿತು. ಕೆಲವರು ತಮ್ಮ ಸ್ಥಳೀಯ ಸಂಸ್ಕೃತಿಗಳನ್ನು ಉಳಿಸಿಕೊಳ್ಳಲು ಪ್ರಯತ್ನಿಸಿದರು, ಅದು ವ್ಯರ್ಥ ಪ್ರಯತ್ನವಾಗುತ್ತದೆ. ಅಮೆರಿಕಾ ಮತ್ತು ಬ್ರಿಟನ್ ದೇಶದ ವಲಸೆಗಾರರು ಸಾಮಾನ್ಯವಾಗಿ ಉಡುಗೆ–ತೊಡಿಗೆ, ಆಹಾರ ಪದ್ಧತಿ ಭಾಷೆಶೈಲಿ ಮುಂತಾದವುಗಳನ್ನು ಸ್ಥಳೀಯ ಸಮೂಹದೊಂದಿಗೆ ಗುರುತಿಸಿಕೊಂಡರು, ಇಂದಿನ ಆಧುನಕ ಯುಗ ವಿವಿಧ ಸಮೂಹಗಳು ತಮ್ಮ ಸ್ಥಳಿಯ ಸಮೂಹಗಳೊಂದಿಗೆ ಬೆರತುಕೊಳ್ಳಲು ಸ್ವಾಂಗೀಕರಣ ಪ್ರಕ್ರಿಯೆಯಲ್ಲಿ ಭಾಗವಹಿಸುತ್ತದೆ.

3) **ಸಂಸ್ಕೃತಿ ಅಂತ;–** ಎರಡು ವಿಭಿನ್ನ ಸಂಸ್ಕೃತಿ ಪ್ರದೇಶಿಕವಾಗಿ ಸಂಪರ್ಕ ಬೆಳಸಿಕೊಳ್ಳುತ್ತಾ, ಈ ಪ್ರಕ್ರಿಯೆ ವೇದಿಕೆಯನ್ನು ನಿರ್ಮಿಸುತ್ತದೆ ಇಲ್ಲಿ ಕೊಡುವ–ತೆಗೆದುಕೊಳ್ಳವ ತತ್ವವನ್ನು ಅವಲಂಬಿಸಿದೆ. ದುರ್ಬಲ ಸಮೂಹ ಪ್ರಬಲ ಸಮೂಹಗಳಿಂದ ಬಹುತೇಕ ಸಾಂಸ್ಕ್ರತಿಕ ಅಂಶಗಳನ್ನು ಎರವಲು ಪಡೆದುಕೊಂಡರು ಕೆಲವೊಮ್ಮೆ ಸಾಂಸ್ಕೃತಿಕ ಅಂಶಗಳನ್ನು ನೀಡುವ ಸಾಮರ್ಥ್ಯತೆವನ್ನು ಹೊಂದಿರುತ್ತದೆ. ಭಾರತದಲ್ಲಿ ಶತಮಾನಗಳ ಉದ್ದಕ್ಕೂ ವಿಭಿನ್ನ ಸಂಸ್ಕೃತಿಗಳ ಸಮೀಕರಣ ನಿರಂತವಾಗಿ ಸಂಭವಿಸಿದೆ .

❑❑❑

# ಅಧ್ಯಾಯ – 4
# ಸಂಸ್ಕೃತಿ ಮತ್ತು ಸಾಮಾಜೀಕರಣ
# (CULTURE AND SOCIALIZATION)

## 4.1. ಸಂಸ್ಕೃತಿ – ಅರ್ಥ (Meaning):–

ಸಂಸ್ಕೃತಿ ಮತ್ತು ಮಾನವ ಸಮಾಜ ಒಂದೇ ನಾಣ್ಯದ ಎರಡು ಮುಖಗಳಾಗಿವೆ. ಅವುಗಳು ಜೊತೆಜೊತೆಯಾಗಿ ಹೋಗುವ ಅಂಶಗಳಾಗಿವೆ. ಪ್ರಾಣಿ ಸಮಾಜದಿಂದ ಮಾನವ ಸಮಾಜವನ್ನು ಬೇರ್ಪಡಿಸುವ ಮಾನದಂಡ ಅಥವಾ ವಿಶಿಷ್ಟ ಲಕ್ಷಣವೇ ಸಂಸ್ಕೃತಿ. ಸಂಸ್ಕೃತಿಯು ಮಾನವ ಸಮುದಾಯದ ವಿಶಿಷ್ಟವಾದ ಆಸ್ತಿಯಾಗಿದೆ. ಪ್ರತಿಯೊಬ್ಬ ಮಾನವನನ್ನು ಸಂಸ್ಕೃತಿಯ ಪ್ರತಿನಿಧಿ ಎನ್ನಬಹುದು. ಸಂಸ್ಕೃತಿ ಮಾನವ ಸಮಾಜವನ್ನು ಶ್ರೀಮಂತವಾಗಿಸುತ್ತದೆ ಮತ್ತು ಅರ್ಥಪೂರ್ಣವಾಗಿಸುತ್ತದೆ. ಸಂಸ್ಕೃತಿಯು ಸಾಮಾಜಿಕ ಪರಿವರ್ತನೆಯ ಒಂದು ನಿಯೋಗಿಯೂ ಆಗಿದೆ.

ಸಂಸ್ಕೃತಿ ಎಂಬ ಪದಕ್ಕೆ ತತ್ಸಮಾನವಾದ ಆಂಗ್ಲಭಾಷೆಯ **"ಕಲ್ಚರ್"** ಎಂಬ ಪದವು ಲ್ಯಾಟಿನ್ ಭಾಷೆಯ **"ಕೊಲೆರ್"** (**Colere**) ಎಂಬ ಪದದಿಂದ ಬಂದಿದೆ. ಕೊಲೆರ್ ಎಂದರೆ **'ಬೆಳೆಸು'**, (To cultivate or till the soil) ಕೃಷಿ ಮಾಡು ಎಂದರ್ಥವಾಗುತ್ತದೆ. ಆದ್ದರಿಂದ ಸಂಸ್ಕೃತಿಯು ಸಮೂಹವೊಂದರ ನಂಬಿಕೆಗಳು, ಮೌಲ್ಯಗಳು ಹಾಗೂ ಅಭಿವ್ಯಕ್ತಾತ್ಮಕ ಸಂಕೇತಗಳನ್ನು ಸೂಚಿಸುತ್ತದೆ. ಆದ್ದರಿಂದ ಸಮಾಜದ ಸದಸ್ಯರಾಗಿದ್ದುಕೊಂಡು ವ್ಯಕ್ತಿಗಳು ಕಲಿತಿರುವ ಅಂಶಗಳ ಸಮಷ್ಟಿಗೆ ಸಂಸ್ಕೃತಿ ಎನ್ನುವರು.

## ವ್ಯಾಖ್ಯೆಗಳು (Definitions):-

ಸಂಸ್ಕೃತಿ ಎಂಬ ಕಲ್ಪನೆಯನ್ನು ವಿಭಿನ್ನ ರೀತಿಯಲ್ಲಿ ವ್ಯಾಖ್ಯಾನಿಸಲಾಗಿದೆ.

1. **ಮ್ಯಾಲಿನಾಸ್ಕಿ:** "ಮಾನವ ತನ್ನ ಜೀವಿತದ ಗೊತ್ತು ಗುರಿಗಳನ್ನು ಈಡೇರಿಸಿಕೊಳ್ಳಲು ಮಾನವನೇ ನಿರ್ಮಿಸಿಕೊಂಡಂತಹ ಸಾಧನಗಳೇ ಸಂಸ್ಕೃತಿ".

2. **ಎಡ್ವರ್ಡ್ ಬಿ. ಟೈಲರ್:** "ಜ್ಞಾನ, ನಂಬಿಕೆ, ಕಲೆ, ನೈತಿಕ ನಿಯಮ, ಕಾನೂನು, ರೂಢಿ ಮತ್ತು ಮಾನವನು ತನ್ನ ಸಮಾಜದ ಸದಸ್ಯನಾಗಿದ್ದುಕೊಂಡು ಸಾಧಿಸಿದ ಇನ್ನುಳಿದ ಸಾಮರ್ಥಗಳನ್ನು ನೈಪುಣ್ಯಗಳನ್ನು ಒಳಗೊಂಡಿರುವ ಅಖಂಡವಾದ ಒಂದು ಸಂಕೀರ್ಣ ವ್ಯವಸ್ಥೆ".

3. **ರಾಬರ್ಟ್ ಬೈರ್‌ಸ್ಟೆಡ್:** "ಸಂಸ್ಕೃತಿಯು ಒಂದು ಸಂಕೀರ್ಣ ವ್ಯವಸ್ಥೆಯಾಗಿದ್ದು ಅದು ನಾವು ಯೋಚಿಸುವ ನಿರ್ವಹಿಸುವ ಹಾಗೂ ನಾವು ಹೊಂದಿದ ಎಲ್ಲಾ ಸಂಗತಿಗಳನ್ನು ಒಳಗೊಂಡಿದೆ".

ಈ ಮೇಲಿನ ವ್ಯಾಖ್ಯೆಗಳಿಂದ ಸಾಬೀತು ಪಡಿಸಬಹುದಾದ ಅಂಶವೆಂದರೆ ಸಂಸ್ಕೃತಿ ಎಂಬುದನ್ನು ಸಮಾಜವೊಂದರ ಸದಸ್ಯರು ತಮ್ಮಲ್ಲಿ ಹಂಚಿಕೊಂಡಿರುವ ವರ್ತನೆಯ ವ್ಯವಸ್ಥೆ ಎನ್ನಬಹುದು. ಅದು ಮಾನವನ

ಜೀವನ ವಿಧಾನದ ಪ್ರತೀಕ. ಅದು ನಮ್ಮ ನಡತೆ, ದೃಷ್ಟಿಕೋನ, ನೈತಿಕತೆ, ರೂಢಿ ಸಂಪ್ರದಾಯಗಳನ್ನು, ನಂಬಿಕೆ ಆಚರಣೆ, ಮೌಲ್ಯಾದರ್ಶನ, ಧರ್ಮ, ರಾಜಕೀಯ, ಆರ್ಥಿಕ, ಮೊದಲಾದ ಚಟುವಟಿಕೆಗಳನ್ನು ಒಳಗೊಂಡಿದೆ.

ಸಂಸ್ಕೃತಿ ಎಂಬ ಪದವನ್ನು ಸಮಾಜಶಾಸ್ತ್ರ ಹಾಗೂ ಮಾನವ ಶಾಸ್ತ್ರಗಳಲ್ಲಿ ಒಂದು ವಿಶಿಷ್ಟ ಅರ್ಥದಲ್ಲಿ ಬಳಸಿದರೆ ಸಾಮಾನ್ಯ ಜನರು ಅದನ್ನು ತಮ್ಮದೇ ಅರ್ಥದಲ್ಲಿ ಬಳಸುವುದುಂಟು. ಉದಾ:– ಸಂಸ್ಕೃತಿ ಎಂಬ ಪದವನ್ನು ಶಿಕ್ಷಿತರು ಮತ್ತು ಅಶಿಕ್ಷಿತರ ನಡುವಿನ ವ್ಯತ್ಯಾಸವನ್ನು ಸೂಚಿಸಲು ಬಳಸುತ್ತೇವೆ. ಅಂದರೆ ಶಿಕ್ಷಿತರು "ಸುಸಂಸ್ಕೃತರು" ಮತ್ತು ಅಶಿಕ್ಷಿತರು "ಅಸುಸಂಸ್ಕೃತರು" ಎಂದು ಅರ್ಥೈಸುತ್ತೇವೆ. ಆದರೆ ವಾಸ್ತವಿಕವಾಗಿ ಎಲ್ಲಾ ಶಿಕ್ಷಿತರು ಸುಸಂಸ್ಕೃತರಾಗಿರುವುದಿಲ್ಲ ಮತ್ತು ಎಲ್ಲಾ ಅಶಿಕ್ಷಿತರು, ಅಸುಸಂಸ್ಕೃತರಾಗಿರುವುದಿಲ್ಲ.

ಸಂಸ್ಕೃತಿ ಮತ್ತು ಸಮಾಜ ಎಂದೆಂದಿಗೂ ಜೊತೆಯಾಗಿಯೇ ಇರುತ್ತವೆ. ಸಂಸ್ಕೃತಿವಿನಹ ಸಮಾಜವಿಲ್ಲ ಮತ್ತು ಸಮಾಜದ ಹೊರತಾಗಿ ಸಂಸ್ಕೃತಿ ಅಸ್ತಿತ್ವದಲ್ಲಿರದು. ಸಮಾಜವೆಂಬುದು ಒಂದೇ ಸ್ಥಳದಲ್ಲಿ ವಾಸಿಸುವ ಮತ್ತು ಸಾಮಾನ್ಯ ಸಂಸ್ಕೃತಿಯನ್ನು ಹಂಚುವ ಒಂದು ಜನಸಮೂಹವನ್ನು ಸೂಚಿಸುವುದು. ಸಂಸ್ಕೃತಿಯು ಜನರ ಪದ್ದತಿಗಳಿಗೆ ಸಂಬಂಧಿಸಿದ್ದಾದರೆ ಸಮಾಜವು ಆ ಪದ್ದತಿಗಳನ್ನು ಪಾಲಿಸುವ ಜನರಿಗೆ ಸಂಬಂಧಿಸಿದ್ದಾಗಿದೆ. ಮಾನವರು ತಮ್ಮ ಅನುಭವಗಳನ್ನು ವ್ಯಕ್ತಪಡಿಸುವ ಮತ್ತು ತಮ್ಮ ಕಾರ್ಯಗಳನ್ನು ನಿರ್ದೇಶಿಸುವ ವ್ಯವಸ್ಥೆಯನ್ನು ಸಂಸ್ಕೃತಿ ಒದಗಿಸುತ್ತದೆ. ಆದರೆ ಸಮಾಜವು ಜನರ ನಡುವೆ ಉದ್ಭವಿಸುವ ಸಾಮಾಜಿಕ ಸಂಬಂಧಗಳನ್ನು ಪ್ರತಿನಿಧಿಸುತ್ತದೆ.

### ಸಂಸ್ಕೃತಿಯ ಲಕ್ಷಣಗಳು: (Charectaristics of culture):-

**a. ಸಂಸ್ಕೃತಿ ಕಲಿಕೆಯಿಂದ ಬರುವಂತಹದು (Culture is learnt):–**

ಸಂಸ್ಕೃತಿ ಹುಟ್ಟಿನಿಂದ ಬರುವ ಸಂಗತಿಯಲ್ಲ. ಇದನ್ನು ಕಲಿತುಕೊಳ್ಳಲಾಗಿದೆ ಅಥವಾ ಗಳಿಸಲಾಗಿದೆ. ಗುಂಪು ಸನ್ನಿವೇಶದಲ್ಲಿ ಪಡೆದದ್ದು ಅಥವಾ ಸಾಮಾಜೀಕರಣದಲ್ಲಿ ಕಲಿತುಕೊಂಡಿದ್ದು ಏನಿದೆ ಅದುವೇ ಸಂಸ್ಕೃತಿ. ಹಾಗಾಗಿ, ಕೈಕುಲುಕುವುದು, ಧನ್ಯವಾದ ಸಮರ್ಪಿಸುವುದು, ನಿರ್ದಿಷ್ಟ ಶೈಲಿಯಲ್ಲಿ ಸೀರೆ ತೊಡುವುದು, ಪೂಜೆ ಮಾಡುವುದು ಇತ್ಯಾದಿ ಎಲ್ಲವೂ ಗಳಿಸಿದವು. ಹಾಗಾಗಿ, ಇವೆಲ್ಲವೂ ಸಾಂಸ್ಕೃತಿಕವಾದವು.

**b. ಸಂಸ್ಕೃತಿ ಸಾಮಾಜಿಕವಾದುದು (Culture is social):**

ಸ್ವಭಾವತಃ ಸಂಸ್ಕೃತಿ ಸಾಮಾಜಿಕವಾದುದು. ಇದು ವ್ಯಕ್ತಿಯ ಸ್ವಂತ ಆಸ್ತಿಯಲ್ಲ. ಇದೊಂದು ಜೀವನ ಕ್ರಮ. ಇದು ಸಾಮಾಜಿಕ ಅನ್ಯೋನ್ಯಕ್ರಿಯೆಯಲ್ಲಿ ಹುಟ್ಟುತ್ತದೆ ಮತ್ತು ಇದರ ಮೂಲಕವೇ ಮುಂದುವರಿಯುತ್ತದೆ. ಒಂದು ಗುಂಪು ಜನರಿಗೆ ಸಾಮಾನ್ಯವಾದ ಅಸಂಖ್ಯ ವರ್ತನಾ ಪ್ರಕಾರಗಳನ್ನು ಸಂಸ್ಕೃತಿ ಒಳಗೊಳ್ಳುತ್ತದೆ. ಯಾವುದೇ ವ್ಯಕ್ತಿಯೊಬ್ಬನಿಗೆ ಸೀಮಿತವಾದ ವರ್ತನಾ ವಿಶೇಷವನ್ನು ಸಂಸ್ಕೃತಿ ಒಳಗೊಳ್ಳುವುದಿಲ್ಲ. ಹಾಗಾಗಿ, ಗುಂಪಿನ ಹೆಚ್ಚಿನ ಸದಸ್ಯರಿಂದ ಹಂಚಿಕೊಳ್ಳಲ್ಪಟ್ಟ ಸಾಮಾಜಿಕ ಉತ್ಪಾದನೆ ಸಂಸ್ಕೃತಿ.

**c. ಸಂಸ್ಕೃತಿ ಹಂಚಿಕೊಳ್ಳಲ್ಪಟ್ಟದ್ದು (Culture is shared):**

ಸಂಸ್ಕೃತಿ ಯಾವುದೇ ವ್ಯಕ್ತಿಯ ಆಸ್ತಿಯಲ್ಲ ಇದು ಸಮೂಹಕ್ಕೆ ಸೇರುತ್ತದೆ. ಭಾಷೆ, ಪದ್ಧತಿ, ನಂಬಿಕೆ, ಭಾವನೆ, ಲೋಕ ರೂಢಿ, ನೈತಿಕ ನಿಯಮ ಇತ್ಯಾದಿಗಳೆಲ್ಲವನ್ನೂ ಒಂದು ಗುಂಪಿನ ಜನ ಹಂಚಿಕೊಂಡಿದ್ದಾರೆ.

ಗುಂಪಿನ ಜನರಿಗೆ ಸಾಮಾನ್ಯವಾಗಿ ಅನ್ವಯವಾಗುವ ಸಂಗತಿಗಳಿವು. ಹಾಗಾಗಿ, ಸಂಸ್ಕೃತಿ ವ್ಯಕ್ತಿಯ ಸ್ವಂತದ್ದಲ್ಲ, ಇದು ಸಾಮಾಜಿಕ; ಸಮೂಹ ಜೀವನದ ಉತ್ಪನ್ನ. ರಾಬರ್ಟ್ ಬಿಯರ್ ಸ್ಟೆಡ್ ಹೇಳುವಂತೆ "ಸಂಸ್ಕೃತಿಯು ಒಂದಕ್ಕಿಂತ ಹೆಚ್ಚು ಜನರು ಅನುಸರಿಸುವ ಅಥವಾ ಹೊಂದಿದ, ನಂಬಿದ, ಬಳಸಿದ, ಅಡಕಗೊಳಿಸಿಕೊಂಡ ಸಂಗತಿಗಳೇ ಆಗಿದೆ. ಇದು ತನ್ನ ಅಸ್ತಿತ್ವಕ್ಕೆ ಸಮೂಹ ಜೀವನವನ್ನು ಅವಲಂಬಿಸಿದೆ".

### d. ಸಂಸ್ಕೃತಿಯು ವರ್ಗಾಯಿಸುವಂತಹುದು (Culture is Transmissive):

ಸಂಸ್ಕೃತಿಯು ವಿಕಸಿತವಾದುದು ಮತ್ತು ತಲೆಮಾರಿನಿಂದ ತಲೆಮಾರಿಗೆ ವರ್ಗಾವಣೆಗೊಳ್ಳುತ್ತದೆ. ಎಂದಿಗೂ ಮುಗಿಯದ ಪ್ರಕ್ರಿಯೆ ಇದು. ಗತಕಾಲದೊಂದಿಗೆ ಇದು ಹೊಂದಿಕೊಂಡಿದೆ. ಭಾಷೆಯ ಸೌಕರ್ಯ ಹೊಂದಿರುವ ಮಾನವ ತನ್ನ ಆಲೋಚನೆಗಳು, ಆದರ್ಶಗಳು ಮತ್ತು ಅನುಭವಗಳನ್ನು ಯುವ ತಲೆಮಾರಿಗೆ ವರ್ಗಾಯಿಸುತ್ತಾನೆ. ಭಾಷೆ ಮತ್ತು ಅವನ ಕಲಿಕೆಯ ಸಾಮರ್ಥ್ಯದಿಂದಾಗಿ ಮಾನವ ಸಂಸ್ಕೃತಿ ಅಷ್ಟೊಂದು ಶ್ರೀಮಂತವಾಗಿದೆ. ಭಾಷೆ ಸಂಸ್ಕೃತಿಯ ಮುಖ್ಯವಾಹಕವಾಗಿ ಸಂಸ್ಕೃತಿಯ ಸಂಚಯನಕ್ಕೆ ಮತ್ತು ವರ್ಗಾವಣೆಗೆ ಸಹಾಯ ಮಾಡಿದೆ.

### e. ಸಂಸ್ಕೃತಿಯು ಸಾಪೇಕ್ಷವಾದುದು (Culture is relative):

ಕಾಲದಿಂದ ಕಾಲಕ್ಕೆ ಮತ್ತು ಸಮಾಜದಿಂದ ಸಮಾಜಕ್ಕೆ ಸಂಸ್ಕೃತಿಯಲ್ಲಿ ವ್ಯತ್ಯಾಸವಾಗುತ್ತದೆ. ಕೆಲವೊಂದು ಸಾಂಸ್ಕೃತಿಕ ಸಾರ್ವತ್ರಿಕಗಳು ಕಂಡುಬರಬಹುದಾದರೂ ಸಮಾಜದಿಂದ ಸಮಾಜಕ್ಕೆ ಸಂಸ್ಕೃತಿಯಲ್ಲಿ ವ್ಯತ್ಯಾಸಗಳು ಕಂಡುಬರುತ್ತವೆ. ಪ್ರತಿಯೊಂದು ಸಂಸ್ಕೃತಿಯೂ ಅದ್ವಿತೀಯವಾದುದು. ಸಂಪ್ರದಾಯ, ನೈತಿಕ ನಿಯಮ, ಲೋಕರೂಢಿ, ಕಲಾಪ್ರಕಾರಗಳು, ಊಟೋಪಚಾರದ ವಿಧಾನಗಳು, ಮೌಲ್ಯ ವ್ಯವಸ್ಥೆ, ಸಂಸ್ಥೆಗಳು ಇತ್ಯಾದಿಗಳಲ್ಲಿ ಕುತೂಹಲಕಾರಿ ವ್ಯತ್ಯಾಸಗಳನ್ನು ಸಂಸ್ಕೃತಿಗಳೊಳಗೆ ಕಾಣಬಹುದಾಗಿದೆ. ಸಂಸ್ಕೃತಿ ಕಾಲದಿಂದ ಕಾಲಕ್ಕೆ ಬದಲಾಗುತ್ತದೆ. ಕಾಲದಿಂದ ಕಾಲಕ್ಕೆ ಸಂಸ್ಕೃತಿ ಹೇಗೆ ಬದಲಾಗಿದೆ ಎಂಬುದನ್ನು ತಿಳಿಸಲು ಚರಿತ್ರೆ ಸ್ಪಷ್ಟ ದಾಖಲೆಯಾಗಿದೆ.

### f. ಸಂಸ್ಕೃತಿಯು ಪರಿವರ್ತನಾಶೀಲವಾದುದು (Culture is dynamic):

ಯಾವುದೇ ಸಂಸ್ಕೃತಿ ಸ್ಥಿರ ಸ್ವಭಾವದ್ದಲ್ಲ, ಅದು ಪರಿವರ್ತನಾಶೀಲವಾದುದು. ಸಂಸ್ಕೃತಿಯು ಒಂದು ಜೀವನ ವಿಧಾನವನ್ನು ಸೂಚಿಸುತ್ತದೆ. ಆವಿಷ್ಕಾರಗಳು, ಸಮಸ್ಯೆಗಳು, ಯೋಜಿತ ಬದಲಾವಣೆಗಳು ಇತ್ಯಾದಿಗಳು ಸಂಸ್ಕೃತಿಯನ್ನು ಪರಿವರ್ತಿಸಿವೆ. ಬದಲಾದ ಸನ್ನಿವೇಶಗಳಿಗೆ ಹೊಂದಿಕೊಳ್ಳುವ ಪ್ರಯತ್ನದಲ್ಲಿ ಹೊಸ ಜೀವನ ವಿಧಾನಗಳನ್ನು ಕಂಡುಕೊಳ್ಳಲಾಗುತ್ತದೆ ಮತ್ತು ಅಳವಡಿಸಿಕೊಳ್ಳಲಾಗುತ್ತದೆ. ಸಮಾಜದಲ್ಲಿ ಬದಲಾವಣೆ ತರುವ ಪ್ರತಿಯೊಂದು ಅಂಶವೂ ಸಂಸ್ಕೃತಿಯಲ್ಲಿ ಬದಲಾವಣೆಯನ್ನು ತರಬಹುದಾಗಿದೆ. ಸಾಮಾಜಿಕ ಬದಲಾವಣೆ ನಿತ್ಯಸತ್ಯವಾಗಿರುವುದರಿಂದ ಸಂಸ್ಕೃತಿ ಕೂಡ ಗತಿಶೀಲವಾಗಿದೆ.

### g. ಸಂಸ್ಕೃತಿಯು ತೃಪ್ತಿದಾಯಕವಾದುದು (Culture is gratifying):

ಜೈವಿಕ ಮತ್ತು ಸಾಮಾಜಿಕ ಎರಡೂ ಪ್ರಕಾರದ ಮಾನವ ಅಗತ್ಯಗಳ ಈಡೇರಿಕೆಗೆ ಅಗತ್ಯವಾದ ಪರಿಸರವನ್ನು ಸಂಸ್ಕೃತಿ ಒದಗಿಸಿಕೊಡುತ್ತದೆ. ಇಷ್ಟೇ ಅಲ್ಲದೆ ಮಾನವನ ವಿಭಿನ್ನ ಚಟುವಟಿಕೆಗಳನ್ನು ಸಂಸ್ಕೃತಿಯೇ ನಿರ್ಧರಿಸುತ್ತದೆ ಮತ್ತು ನಿರ್ದೇಶಿಸುತ್ತದೆ. ಉದಾಹರಣೆಗೆ ಸಂಸ್ಕೃತಿಯು ವಿವಾಹದ ಮೂಲಕ ಮಾನವನ ದೈಹಿಕ ಅಗತ್ಯಗಳ ತೃಪ್ತಿಗೆ ಅವಕಾಶಗಳನ್ನು ಒದಗಿಸುತ್ತದೆ.

**h. ಸಂಸ್ಕೃತಿಯು ನಿರಂತರವಾದದ್ದರು, ಮತ್ತು ಸಂಗ್ರಹಕವಾದದ್ದು (Culture is continuous and cumilative):**

ಮಾನವನ ಸಮಾಜದ ಆರಂಭದಿಂದ ಇಂದಿನವರೆಗೂ ಸಂಸ್ಕೃತಿ ನಿರಂತರವಾಗಿ ಬೆಳೆಯುತ್ತಿದೆ, ಗತ ಕಾಲದ ವೈಭವ ಮತ್ತು ವರ್ತಮಾನದ ಹೊಸ ಆವಿಷ್ಕಾರಗಳ ಸಾಧನೆಗಳನ್ನು ಸಂಸ್ಕೃತಿಯು ಒಳಗೊಂಡಿದೆ. ಉದಾ: ಎತ್ತಿನ ಗಾಡಿ, ರೈಲು, ವಿಮಾನ, ಅಂತರ್ಜಾಲ ಇತ್ಯಾದಿಗಳು. ಸಂಸ್ಕೃತಿಯು ಸಂಗ್ರಹವಾಹಕ ಎಂದರೆ ಮಾನವನ ಸಂಸ್ಕೃತಿಯ ಎಲ್ಲಾ ಅಂಶಗಳನ್ನು ಕ್ರೂಢಿಕರಿಸಿದೆ. ಆಧುನಿಕ ಮತ್ತು ಸಾಂಪ್ರದಾಯಿಕ ಮತ್ತು ಹೊಸ ಸಾಧನಗಳು ಇಲ್ಲಿ ಸೇರಿವೆ.

**i. ಸಂಸ್ಕೃತಿಯು ಆದರ್ಶಾತ್ಮಕವಾದದ್ದು:(Culture is Ideational):**

ಸಂಸ್ಕೃತಿಯನ್ನು ಕೇವಲ ಭೌತ ಮತ್ತು ಅಭೌತ ವಸ್ತುಗಳೆಂದು ಪರಿಗಣಿಸಿಲ್ಲ. ದೈನಂದಿನ ಉದ್ದೇಶಗಳನ್ನು ಈಡೇರಿಸುವ ಸಾಧನವೂ ಅಲ್ಲ. ಅದಕ್ಕೆ ಸಮೂಹದ ಸದಸ್ಯರೆಲ್ಲರೂ ವಿಶಿಷ್ಟವಾದ ಅರ್ಥ ಮತ್ತು ಭಾವನೆಯನ್ನು ಹಂಚಿಕೊಳ್ಳುತ್ತಾರೆ. ಉದಾ: ರಾಷ್ಟ್ರಧ್ವಜವು ಕೇವಲ ಬಣ್ಣದ ಬಟ್ಟೆಯಲ್ಲ. ಅದು ದೇಶಭಕ್ತಿ ಮತ್ತು ರಾಷ್ಟ್ರೀಯತೆಯ ಸಂಕೇತವಾಗಿದೆ. ಭಾಷೆ ಕೇವಲ ಅಕ್ಷರ ಮತ್ತು ವ್ಯಾಕರಣದ ನಿಮಯಗಳು ಎಂದು ಪರಿಗಣಿಸುವುದಿಲ್ಲ. ಭಾಷೆಯು ಒಂದು ಸಮೂಹದ ಜೀವನಾಡಿ ಎಂದು ಗುರುತಿಸಲಾಗಿದೆ. ಈ ಉದ್ದೇಶದಿಂದಲೇ ಹೆರ್ಬಟ್ ಸ್ಪೆನ್ಸರ್ ಸಂಸ್ಕೃತಿಯನ್ನು ಅತಿ ಜೈವಿಕ (Super organic) ಎಂದು ಕರೆದಿದ್ದಾರೆ.

## 4.2. ಸಂಸ್ಕೃತಿಯ ವಿಧಗಳು (Types of culture):

ಸಮಾಜದ ಸದಸ್ಯನಾಗಿದ್ದುಕೊಂಡು ಮಾನವ ಗಳಿಸಿದ ಭಾಷೆ, ನಂಬಿಕೆ, ಕಲೆ, ನೈತಿಕ ನಿಯಮ, ಆಲೋಚನೆ, ಲೋಕರೂಢಿ ಇತ್ಯಾದಿಗಳ ಒಟ್ಟು ಸಮಷ್ಟಿಯನ್ನು ಸಂಸ್ಕೃತಿ ಎನ್ನಲಾಗಿದೆ. ವ್ಯಕ್ತಿ ಸಮಾಜದ ಸದಸ್ಯನಾಗಿದ್ದುಕೊಂಡು ಕಲಿತಂತಹ ಎಲ್ಲಾ ಅಂಶಗಳನ್ನು ಇದು ಒಳಗೊಂಡಿದೆ. ಆಗ್‌ಬರ್ನ್ ಮತ್ತು ನಿಮ್‌ಕಾಫ್‌ರವರು ಸಂಸ್ಕೃತಿಯನ್ನು ಎರಡು ಭಾಗಗಳಲ್ಲಿ ವಿಂಗಡಿಸಿದ್ದಾರೆ.

1) ಭೌತ ಸಂಸ್ಕೃತಿ 2) ಅಭೌತ ಸಂಸ್ಕೃತಿ

### 1) ಭೌತ ಸಂಸ್ಕೃತಿ (Materal Culture):

ಮಾನವನು ತನ್ನ ಅಗತ್ಯಗಳನ್ನು ಈಡೇರಿಸಿಕೊಳ್ಳಲು ಸೃಷ್ಟಿಸಿರುವ ಭೌತವಸ್ತುಗಳಿಗೆಲ್ಲಾ ಭೌತ ಸಂಸ್ಕೃತಿ ಎನ್ನುವರು. ಇದು ಮಾನವನು ರೂಪಿಸಿದ ಎಲ್ಲಾ ಸ್ಪರ್ಶ ಸಾಧ್ಯ ವಸ್ತುಗಳನ್ನು ಒಳಗೊಂಡಿದೆ. ಭೌತ ಸಂಸ್ಕೃತಿಯು ದೃಷ್ಟಿಗೆ ಗೋಚರವಾಗುವಂತಹ, ಮರ್ತ ಸ್ವರೂಪದ, ಮಾನವ ಬಳಕೆಯ ವಸ್ತುಗಳನ್ನು ಪ್ರತಿಬಿಂಬಿಸುವುದು. ಉದಾ: ಮಾನವ ನಿರ್ಮಿತವಾದ ಮನೆ, ಕಟ್ಟಡ, ಯಂತ್ರೋಪಕರಣಗಳು, ವಾಹನ, ಹಣ, ಬ್ಯಾಂಕು, ವೈಜ್ಞಾನಿಕ ಸಾಧನೆಗಳು ಇತ್ಯಾದಿ. ಭೌತ ಸಂಸ್ಕೃತಿಯನ್ನು ನಾಗರೀಕತೆ ಎಂದೂ ಕರೆಯಲಾಗಿದೆ. ನಾವು ಏನನ್ನು ಹೊಂದಿದ್ದೇವೆ ಎನ್ನವುದನ್ನು ನಾಗರೀಕತೆಯು ತಿಳಿಸಿದರೆ ನಾವು ಏನಾಗಿದ್ದೇವೆ ಎನ್ನುವುದನ್ನು ಸಂಸ್ಕೃತಿ ತಿಳಿಸುತ್ತದೆ. ಮಾನವನ ಜೀವನದ ಮೇಲೆ ಭೌತ ಸಂಸ್ಕೃತಿ ಗಾಢವಾದ ಪ್ರಭಾವವನ್ನು ಬೀರಬಲ್ಲುದು.

## 2) ಅಭೌತ ಸಂಸ್ಕೃತಿ (Non material culture):

ಸ್ಪರ್ಶ ಸಾಧ್ಯವಿಲ್ಲದ ಎಲ್ಲಾ ವಸ್ತುಗಳನ್ನು ಈ ಪ್ರವರ್ಗದಲ್ಲಿ ಹಾಕಲಾಗಿದೆ. ಆಗ್‌ಬರ್ನ್‌ರವರು ಭಾಷೆ, ನಂಬಿಕೆ, ಮೌಲ್ಯಗಳು, ಹವ್ಯಾಸಗಳು, ಸಂಸ್ಕಾರಗಳು ಮತ್ತು ಆಚರಣೆಗಳು, ಆಲೋಚನೆಗಳು ಮತ್ತು ಆದರ್ಶಗಳು ಇತ್ಯಾದಿಗಳನ್ನು ಈ ಪ್ರವರ್ಗದಲ್ಲಿ ಸೇರಿಸುತ್ತಾರೆ. ಆದ್ದರಿಂದ ಅಭೌತ ಸಂಸ್ಕೃತಿ ಮಾನವನ ಮೌಲ್ಯಗಳ ಭಾವನಾತ್ಮಕ ಮತ್ತು ಮಾನಸಿಕ ಅಂಶಗಳನ್ನು ಒಳಗೊಂಡಿರುತ್ತದೆ. ಇದು ಒಂದು ಜನಾಂಗದ ಅಂತರಾತ್ಮವನ್ನು ಪ್ರತಿನಿಧಿಸುತ್ತದೆ. ಭೌತ ಸಂಸ್ಕೃತಿಯು ಹಾಗೆಯೇ ಅಭೌತ ಸಂಸ್ಕೃತಿಯೂ ಮಾನವನ ಮೇಲೆ ಬಹಳ ಗಾಢವಾದ ಪ್ರಭಾವ ಬೀರುವುದು.

ಈ ಮೇಲೆ ತಿಳಿಸಿರುವ ಸಂಸ್ಕೃತಿಯ ವರ್ಗೀಕರಣದ ಜೊತೆಗೆ ಸಮಾಜಶಾಸ್ತ್ರಜ್ಞರು ಸಂಸ್ಕೃತಿಯ ಕೆಲವು ಪ್ರಕಾರಗಳನ್ನು ಗುರುತಿಸಿದ್ದಾರೆ. ಅವುಗಳೆಂದರೆ–

**1. ಉನ್ನತ ಸಂಸ್ಕೃತಿ:** ಉನ್ನತ ಸಂಸ್ಕೃತಿ ಎಂದರೆ ಉನ್ನತ ಸ್ಥಾನ ಅಥವಾ ಉನ್ನತ ಸೃಜನಾತ್ಮಕ ಕಲೆ. ಉದಾಹರಣೆ: ಶಾಸ್ತ್ರೀಯ ಸಂಯೋಜನೆ (Classical Composers) ವರ್ಣ ಚಿತ್ರ ಮತ್ತು ಉತ್ತಮ ಸಾಹಿತ್ಯ ಕೃತಿಗಳು.

**2. ಜಾನಪದ ಸಂಸ್ಕೃತಿ:** ಜಾನಪದ ಸಂಸ್ಕೃತಿ ಎಂದರೆ ಜನಸಾಮಾನ್ಯರ ಸಂಸ್ಕೃತಿ. ಜನಸಾಮಾನ್ಯರ ದೈನಂದಿನ ಚಟುವಟಿಕೆಗಳು ತಮ್ಮ ಜೀವನಕ್ಕೆ ಹತ್ತಿರವಾದ ಜಾನಪದ ಹಾಡುಗಳು, ಕತೆಗಳು ಇತ್ಯಾದಿ. ಜಾನಪದ ಸಂಸ್ಕೃತಿಯು ಒಂದು ತಲೆಮಾರಿನಿಂದ ಮತ್ತೊಂದು ತಲೆಮಾರಿಗೆ ವರ್ಗಾವಣೆಯಾಗುತ್ತದೆ.

**3. ಸಮೂಹ ಸಂಸ್ಕೃತಿ:** ಸಮೂಹ ಸಂಸ್ಕೃತಿಯು ಸಮೂಹ ಮಾಧ್ಯಮಗಳ ಸೃಷ್ಟಿ. ಉದಾಹರಣೆ: ಜನಪ್ರಿಯ ಸಿನಿಮಾ, ದೂರದರ್ಶನ ಕಾರ್ಯಕ್ರಮಗಳು ಮತ್ತು ಸಂಗೀತ ಕಾರ್ಯಕ್ರಮಗಳು.

**4. ಜನಪ್ರಿಯ ಸಂಸ್ಕೃತಿ:** ಜನಪ್ರಿಯ ಸಂಸ್ಕೃತಿಯನ್ನು ಸಮೂಹ ಸಂಸ್ಕೃತಿಯ ರೀತಿ ವ್ಯಾಖ್ಯಾನಿಸಬಹುದು. ಇದರಲ್ಲಿ ಜನಸಾಮಾನ್ಯರಿಂದ ಪ್ರಶಂಸೆಗೆ ಒಳಗಾಗುವ ಟಿವಿ ಕಾರ್ಯಕ್ರಮಗಳು, ಸಂಗೀತ ಮತ್ತು ಜನಪ್ರಿಯ ಸಿನಿಮಾಗಳು. ಉದಾಹರಣೆ: ಟೈಟಾನಿಕ್ ಸಿನಿಮಾ, ಹಿಂದಿ ಸಿನಿಮಗಳಾದ ಶೋಲೆ, ಡಿಡಿಎಲ್‌ಜೆ ಇತ್ಯಾದಿಗಳು.

**5. ಉಪಸಂಸ್ಕೃತಿ:** ಉಪಸಂಸ್ಕೃತಿಯು ಒಂದು ಸಮೂಹದ ವಿಶಿಷ್ಟ ಸಂಸ್ಕೃತಿಯಾಗಿದ್ದು, ಮತ್ತೊಂದು ಸಮೂಹಕ್ಕಿಂತ ಭಿನ್ನವಾಗಿರುತ್ತದೆ. ಈ ವಿಭಿನ್ನ ಸಂಸ್ಕೃತಿಯನ್ನು ಪ್ರತಿ ಸಂಸ್ಕೃತಿ ಎಂದು ಕರೆಯುತ್ತಾರೆ.

## ಸಾಂಸ್ಕೃತಿಕ ಹಿಂಬೀಳುವಿಕೆ (Cultural Lag):

ಸಾಂಸ್ಕೃತಿಕ ಹಿಂಬೀಳುವಿಕೆ ಎಂಬ ಕಲ್ಪನೆ ಸಂಸ್ಕೃತಿಯಲ್ಲಿನ ಒಂದು ಭಾಗಕ್ಕೆ ಹೋಲಿಸಿದಾಗ ಮತ್ತೊಂದು ಭಾಗದಲ್ಲಿನ ಕುಂಠಿತ ಚಲನೆಯನ್ನು ಸೂಚಿಸುತ್ತದೆ. ನಾವು ಈಗಾಗಲೇ ಗಮನಿಸಿರುವಂತೆ ಸಂಸ್ಕೃತಿಯಲ್ಲಿ ಭೌತ ಮತ್ತು ಅಭೌತ ಎಂಬ ಭಾಗಗಳಿವೆ. ಆಗ್‌ಬರ್ನ್‌ರವರು ಅಭಿಪ್ರಾಯಿಸುವಂತೆ ಭೌತಸಂಸ್ಕೃತಿಯಲ್ಲಿನ ತ್ವರಿತ ಆವಿಷ್ಕಾರಗಳಿಗೆ ಅಭೌತ ಸಂಸ್ಕೃತಿ ಕೂಡಲೇ ಪ್ರತಿಕ್ರಿಯಿಸುವುದಿಲ್ಲ. ಭೌತಿಕ ಬದಲಾವಣೆಗಳಿಗೆ ತನ್ನನ್ನು ಹೊಂದಿಸಿಕೊಳ್ಳುವುದು ಅಭೌತ ಸಂಸ್ಕೃತಿಗೆ ಸಾಧ್ಯವಾಗದೇ ಇದ್ದಾಗ ಇವೆರಡರ ನಡುವೆ ಒಂದು

ಅಂತರ ಅಥವಾ ಕಂದಕ ಉಂಟಾಗುತ್ತದೆ. ಭೌತ ಮತ್ತು ಅಭೌತ ಸಂಸ್ಕೃತಿಗಳ ನಡುವಿನ ಈ ಕಂದಕವನ್ನು ಸೂಚಿಸಲು 'ಸಾಂಸ್ಕೃತಿಕ ಹಿಂಬೀಳುವಿಕೆ' ಎಂಬ ಕಲ್ಪನೆಯನ್ನು ಬಳಸಲಾಗಿದೆ. ಆಗ್‌ಬರ್ನ್‌ರವರ ಮಾತುಗಳಲ್ಲೇ ಹೇಳುವುದಾದರೆ – ಅಸಮ ವೇಗದಲ್ಲಿ ಬದಲಾಗುವ ಸಂಸ್ಕೃತಿಯ ಪರಸ್ಪರ ಸಂಬಂಧಿತ ಭಾಗಗಳ ನಡುವೆ ಇರುವ ಪ್ರಯಾಸವನ್ನು ಸಾಂಸ್ಕೃತಿಕ ಹಿಂಬೀಳುವಿಕೆ ಎಂದು ಅರ್ಥೈಸಬಹುದಾಗಿದೆ. ನಿಧಾನ ಗತಿಯಲ್ಲಿ ಬದಲಾಗುವ ಭಾಗ ಇನ್ನೊಂದರ ಹಿಂದೆ ಬೀಳುತ್ತದೆ. ಉದಾಹರಣೆಗೆ, ಭೌತ ಸಂಸ್ಕೃತಿಯಲ್ಲಿ ಉಂಟಾದ ತ್ವರಿತ ಆವಿಷ್ಕಾರಗಳಿಗೆ ತನ್ನನ್ನು ಹೊಂದಿಸಿಕೊಳ್ಳಲು ಅಭೌತ ಸಂಸ್ಕೃತಿ ವಿಫಲಗೊಂಡಾಗ ಇವುಗಳ ನಡುವೆ ಒಂದು ಅಂತರ ಏರ್ಪಡುತ್ತದೆ. ಹಾಗೆಯೇ, ಭೂಮಾಲೀಕ ಪದ್ಧತಿಯಲ್ಲಿ ವ್ಯತ್ಯಾಸವಾಗದೇ ಜನರು ಕೇವಲ ಸಾಗುವಳಿ ಪದ್ಧತಿಯಲ್ಲಿ ಬದಲಾವಣೆ ತಂದರೆ ಇಂತಹ ಹಿಂಬೀಳುವಿಕೆಯನ್ನು ಕಾಣಬಹುದಾಗಿದೆ. ಆಧುನಿಕ ಸಮಾಜದಲ್ಲಿನ ಹೊಂದಿಕೆಯ ಸಮಸ್ಯೆಯೆಂದರೆ ಅಭೌತ ಸಂಸ್ಕೃತಿಯ ಅಂಶಗಳನ್ನು ಭೌತ ಸಂಸ್ಕೃತಿಯ ಅಂಶಗಳಿಗೆ ಹೊಂದಿಸುವುದೇ ಆಗಿದೆ ಎಂದು 'ಆಗ್‌ಬರ್ನ್' ಅಭಿಪ್ರಾಯ ಪಡುತ್ತಾರೆ.

## 4.3. ಸಾಮಾಜೀಕರಣ (Socialisation):-

### ಅರ್ಥ ಮತ್ತು ವ್ಯಾಖ್ಯೆಗಳು: (Meaning and definitions):-

ಜೈವಿಕ ಅರ್ಥದಲ್ಲಷ್ಟೇ ವ್ಯಕ್ತಿ ಹುಟ್ಟಿನಿಂದ ಮಾನವ. ಜೈವಿಕ ಅಗತ್ಯಗಳೊಂದಿಗೆ ಮಾನವ ಶಿಶು ಈ ಪ್ರಪಂಚಕ್ಕೆ ಬರುತ್ತದೆ. ಕ್ರಮೇಣ ಅವನನ್ನು ಸಮಾಜ ಜೀವಿಯನ್ನಾಗಿ ರೂಪಿಸಲಾಗುತ್ತದೆ ಮತ್ತು ಅವನು ನಡೆದುಕೊಳ್ಳುವ ಮತ್ತು ಆಲೋಚಿಸುವ ಸಾಮಾಜಿಕ ಕ್ರಮಗಳನ್ನು ಕಲಿಯುತ್ತಾನೆ. ಸಮೂಹ ಜೀವನದಲ್ಲಿ ಅವನು ಭಾಗವಹಿಸುತ್ತಾನಾಗಿ ಅವನಲ್ಲಿ ವ್ಯಕ್ತಿತ್ವ ಮೂಡಿಬರುತ್ತದೆ. ಇತರರ ಜೊತೆಗಿನ ಸಂಬಂಧದಲ್ಲಿ ವ್ಯಕ್ತಿ ಆಲೋಚನೆಗಳು, ಹವ್ಯಾಸಗಳು, ಅಭಿವ್ಯಕ್ತಿಗಳು, ಪ್ರಮಾಣಕಗಳು ಇತ್ಯಾದಿಗಳನ್ನು ಪಡೆದುಕೊಳ್ಳುತ್ತಾನೆ. ಹಂಚಿಕೊಂಡ ಈ ಪ್ರಮಾಣಕಗಳ ಆಧಾರದಲ್ಲಿ ಅವನು ಇತರೆ ವ್ಯಕ್ತಿಗಳ ಜೊತೆಗೆ ವ್ಯವಹರಿಸುತ್ತಾನೆ. ಈ ಅನ್ಯೋನ್ಯಕ್ರಿಯೆಯಲ್ಲಿ ಆ ವ್ಯಕ್ತಿ ತನ್ನದೇ ಆದ ಅಭಿರುಚಿಗಳು ಮತ್ತು ಮೌಲ್ಯಗಳು, ಇತ್ಯಾದಿಗಳನ್ನು ಹೊಂದಿದ ಮಾನವ ಜೀವಿಯಾಗಿ ಬದಲಾಗುತ್ತಾನೆ. ಈ ಪರಿವರ್ತನೆಯ ಪ್ರಕ್ರಿಯೆಯಿಲ್ಲದೆ ಸಮಾಜ ಮುಂದುವರಿಯುವುದು ಸಾಧ್ಯವಿಲ್ಲ, ಸಂಸ್ಕೃತಿ ಕೂಡ ಇರಲಾರದು ಮತ್ತು ವ್ಯಕ್ತಿ ಕೂಡ ಸಾಮಾಜಿಕ ಮಾನವನಾಗಲಾರ. ಇಂತಹ ಪರಿವರ್ತನೆಯ ಪ್ರಕ್ರಿಯೆಯನ್ನೇ ಸಾಮಾಜೀಕರಣ ಎನ್ನುತ್ತೇವೆ. ಹಾಗಾಗಿ, ಜೈವಿಕ ಜೀವಿಯನ್ನು ಸಮಾಜ ಜೀವಿಯಾಗಿ, ವ್ಯಕ್ತಿಯನ್ನು ಸಾಮಾಜಿಕ ವ್ಯಕ್ತಿಯನ್ನಾಗಿ ಬದಲಿಸುವ ಈ ಪ್ರಕ್ರಿಯೆಯನ್ನೇ ಸಾಮಾಜೀಕರಣ ಎಂದು ಅರ್ಥೈಸಬಹುದು.

ಸಾಮಾಜೀಕರಣ ಎಂಬ ಕಲ್ಪನೆಗೆ ಸಾಮಾನ್ಯವಾದ ವ್ಯಾಖ್ಯೆಯೊಂದಿಲ್ಲ. ವಿದ್ವಾಂಸರು ಅನೇಕ ವಿವರಣೆಗಳನ್ನು ನೀಡಿದ್ದಾರೆ. ಈ ಕೆಳಗೆ ಕೆಲವೊಂದು ವ್ಯಾಖ್ಯೆಗಳನ್ನು ನೀಡಲಾಗಿದೆ.

1. **ಹ್ಯಾರಿ ಎಂ.ಜಾನ್‌ಸನ್**: "ಸಾಮಾಜಿಕ ಪಾತ್ರಗಳನ್ನು ನಿರ್ವಹಿಸಲು ಪಾತ್ರದಾರಿಯನ್ನು ಸಮರ್ಥನನ್ನಾಗಿಸುವ ಕಲಿಕೆಯೇ ಸಾಮಾಜೀಕರಣ."

2. **ಆಗ್‌ಬರ್ನ್ ಮತ್ತು ನಿಮ್‌ಕಾಫ್**: "ವ್ಯಕ್ತಿಯು ಗುಂಪಿನ ಪ್ರಮಾಣಕಗಳಿಗೆ ಅನುವರ್ತಿಸುವುದನ್ನು ಕಲಿಯುವ ಪ್ರಕ್ರಿಯೆಗೆ ಸಾಮಾಜೀಕರಣ"

ಈ ಮೇಲೆ ನೀಡಿದ ವ್ಯಾಖ್ಯೆಗಳು ಸಾಮಾಜೀಕರಣ ಒಂದು ಕಲಿಕೆಯ ಪ್ರಕ್ರಿಯೆ ಎಂಬುದನ್ನು ಸ್ಪಷ್ಟಪಡಿಸುತ್ತವೆ. ಈ ಪ್ರಕ್ರಿಯೆಯಲ್ಲಿ ವ್ಯಕ್ತಿ ತನ್ನ ಸಮೂಹದ ಸಂಸ್ಕೃತಿಯನ್ನು ಪಡೆದುಕೊಳ್ಳುತ್ತಾನೆ. ಸಂಸ್ಕೃತಿಯ ಗಳಿಕೆಯಿಂದ ವ್ಯಕ್ತಿಯ ಸ್ವಕಲ್ಪನೆ ವಿಸ್ತೃತಗೊಳ್ಳುತ್ತದೆ. ಸಮೂಹದ ಕ್ರಿಯಾಶೀಲ ವ್ಯಕ್ತಿಯಾಗಿ ಅವನು ಪರಿವರ್ತಿತಗೊಳ್ಳುತ್ತಾನೆ. ಹೀಗಾದಾಗ, ಅವನು ನಿಜಾರ್ಥದಲ್ಲಿ 'ಮಾನವ' ಎನಿಸಿಕೊಳ್ಳುತ್ತಾನೆ.

## 4.4 ಸಾಮಾಜೀಕರಣದ ಹಂತಗಳು (Stages of sociolisation):-

ಬಾಲ್ಯದಿಂದ ಪ್ರೌಢ ದೆಸೆಯವರೆಗೆ ಸಾಮಾಜೀಕರಣದಲ್ಲಿ ನಾಲ್ಕು ಹಂತಗಳಿವೆ. ಹ್ಯಾರಿ ಎಂ. ಜಾನ್‌ಸನ್‌ರವರು ಈ ಹಂತಗಳ ಸ್ಪಷ್ಟ ವಿವರಣೆ ನೀಡುತ್ತಾರೆ. ಅವುಗಳೆಂದರೆ – 1) ಮೌಖಿಕ ಹಂತ, 2) ಶೌಚ ಹಂತ, 3) ಈಡಿಪಲ್ ಹಂತ ಮತ್ತು 4) ಕಿಶೋರಾವಸ್ಥೆಯ ಹಂತ. ಈ ಹಂತಗಳ ಸಂಕ್ಷಿಪ್ತ ವಿವರಣೆ ಈ ಕೆಳಗಿನಂತಿದೆ.

### 1. ಮೌಖಿಕ ಅಥವಾ ವಾಚಕ ಹಂತ (The Oral Stage):

ಮೌಖಿಕ ಹಂತವು ಜನನದಿಂದ ಪ್ರಾರಂಭವಾಗಿ ಮಗುವಿಗೆ ವರ್ಷವಾಗುವವರೆಗೆ ಮುಂದುವರಿಯುತ್ತದೆ. ಜನನಕ್ಕೆ ಮುಂಚೆ ಮಗುವು ಭ್ರೂಣದ ರೂಪದಲ್ಲಿ ತಾಯಿಯ ಗರ್ಭದಲ್ಲಿ ಬೆಚ್ಚಗೆ ಸುಖವಾಗಿರುತ್ತದೆ. ಜನನದ ನಂತರ ಅದು ಮೊದಲ ಬಿಕ್ಕಟ್ಟನ್ನು ಎದುರಿಸುತ್ತದೆ – ಅದು ಉಸಿರಾಡುಬೇಕು, ಆಹಾರ ಸೇವಿಸಬೇಕು, ತೇವ ಮತ್ತಿತರ ಅನಾನುಕೂಲ ಸ್ಥಿತಿಗಳಿಗೆ ಒಳಗಾಗಬೇಕು. ಮಗುವು ಪ್ರತಿಯೊಂದಕ್ಕೂ ಸಾಕಷ್ಟು ಅಳುತ್ತದೆ. ಅಳುವ ಮೂಲಕ ಮಗುವು ಮೌಖಿಕ ಅವಲಂಬನೆಯನ್ನು ಸ್ಥಾಪಿಸಿಕೊಳ್ಳತ್ತದೆ ಮತ್ತು ತನ್ನ ಆರೈಕೆಗಾಗಿ ಸಂಕೇತ ನೀಡುವುದನ್ನು ಕಲಿಯುತ್ತದೆ. ಆಹಾರ ಪಡೆಯುವ ಸಮಯದ ಬಗ್ಗೆ ನಿರ್ದಿಷ್ಟ ನಿರೀಕ್ಷಣೆಗಳನ್ನು ಕಲ್ಪಿಸಿಕೊಳ್ಳುವುದನ್ನು ಕಲಿಯುತ್ತದೆ.

ಈ ಹಂತದಲ್ಲಿ ಮಗುವು ಇಬ್ಬರು ವ್ಯಕ್ತಿಗಳಿರುವ – ತಾನು ಮತ್ತು ತನ್ನ ತಾಯಿ – ಒಂದು ಉಪ ವ್ಯವಸ್ಥೆಯಲ್ಲಿರುತ್ತದೆ. ಇತರರಿಗೆ ಮಗುವು ಒಂದು ಸ್ವತ್ತಿಗಿಂತ ಸ್ವಲ್ಪ ಹೆಚ್ಚು. ಮಗುವು ತಾಯಿಯಿಂದ ಇತರರ ಪಾತ್ರವನ್ನು ಬೇರ್ಪಡಿಸಲಾರದು. ಈ ಹಂತದಲ್ಲಿ ಮಗುವಿನ ವ್ಯಕ್ತಿತ್ವದಲ್ಲಿ ಅದರ ಪಾತ್ರ ಮತ್ತು ತಾಯಿಯ ಪಾತ್ರಗಳ ನಡುವೆ ಬಹುಶಃ ಸ್ಪಷ್ಟವಾದ ವ್ಯತ್ಯಾಸ ಗುರುತಿಸಲಾಗದು. ತಾಯಿ ಮತ್ತು ಮಗು ಐಕ್ಯರಾಗಿರುತ್ತಾರೆ. ಈ ಹಂತವನ್ನು "ಪ್ರಾಥಮಿಕ ಗುರುತಿಸುವಿಕೆ" (Stage of Primary Indentification) ಯ ಹಂತ ಎಂದು ಕರೆದಿದ್ದಾರೆ. ಈ ಹಂತದಲ್ಲಿ ಹಸಿವೆಯ ಮೇಲೆ ಸ್ವಲ್ಪ ಹತೋಟಿಯನ್ನು ಸ್ಥಾಪಿಸಲಾಗುವುದು. ತಾಯಿಯೊಂದಿಗೆ ದೇಹ ಸ್ಪರ್ಶ ಸಂಬಂಧದಿಂದ ಮಗುವಿಗೆ ಸಿಗುವ ಸಂತೋಷದ ಭಾವನೆಗಳಿಗೂ ಸಂವೇದನೆಗೊಳಿಸಲಾಗುತ್ತದೆ.

ಸಂಕ್ಷಿಪ್ತವಾಗಿ, ಈ ಅವಧಿಯ ಲಕ್ಷಣಗಳೇನೆಂದರೆ: 1) ಈ ಅವಧಿಯ ಬಿಕ್ಕಟ್ಟನ್ನು ಮೌಖಿಕ ಬಿಕ್ಕಟ್ಟು **(oral crisis)** ಎನ್ನುವರು. 2) ಇದನ್ನು ನಿವಾರಿಸಲು ಮಗುವು ಮೌಖಿಕ ಅವಲಂಬನೆಯನ್ನು ಸ್ಥಾಪಿಸಿಕೊಳ್ಳುತ್ತದೆ **(Oral dependency)** 3) ಮಗುವು ತಾನು ಮತ್ತು ತನ್ನ ತಾಯಿ ಇರುವ ಉಪವ್ಯವಸ್ಥೆಯಲ್ಲಿ ಕಂಡುಬರುತ್ತದೆ. 4) ಇತರರಿಗೆ ಅದು ಸ್ವತ್ತಿಗಿಂತ ಸ್ವಲ್ಪ ಹೆಚ್ಚಿನದು. 5) ಈ ಹಂತವನ್ನು ಪ್ರಾಥಮಿಕ ಗುರುತಿಸುವಿಕೆಯ ಹಂತ ಎಂದೂ ಕರೆಯುವರು.

### 2. ಶೌಚ ತರಬೇತಿ ಹಂತ (The Anal Stage):

ಸಾಮಾನ್ಯವಾಗಿ ಅದು ಮೊದಲನೆಯ ವರ್ಷದ ನಂತರ ಪ್ರಾರಂಭವಾಗಿ ಮೂರನೆಯ ವರ್ಷದಲ್ಲಿ ಮುಕ್ತಾಯವಾಗುತ್ತದೆ. ಈ ಅವಧಿಯ ಬಿಕ್ಕಟ್ಟನ್ನು "ಶೌಚ ಬಿಕ್ಕಟ್ಟು" ಎಂದು ಕರೆಯಲಾಗುವುದು ಮತ್ತು ಹೊಸ

ಬೇಡಿಕೆಗಳನ್ನು ಹೇರುವುದರಿಂದ ಇದು ಉಂಟಾಗುತ್ತದೆ. ಈಗ ಮಗುವು ತನ್ನ ಆರೈಕೆಯನ್ನು ಸ್ವಲ್ಪ ಮಟ್ಟಿಗೆ ತಾನೇ ನೋಡಿಕೊಳ್ಳುವಂತೆ ಕೇಳಲಾಗುವುದು. ಸಾಮಾನ್ಯವಾಗಿ ಶೌಚ ತರಬೇತಿ (Toilet training) ಎಂದು ಕರೆಯಲಾಗುವ ತರಬೇತಿನಿಂದ ಶೌಚಸಂಬಂಧಿ ಶಿಸ್ತನ್ನು ಕಲಿಸಲಾಗುತ್ತದೆ.

ಈ ಹಂತದಲ್ಲಿ ಮಗುವು ತನ್ನ ಮತ್ತು ತನ್ನ ತಾಯಿಯ ಎರಡೂ ಪಾತ್ರಗಳನ್ನು ಅಂತರ್ಗತಗೊಳಿಸಿಕೊಳ್ಳುತ್ತದೆ. ಈಗ ಮಗುವು ಪ್ರೀತಿ ಮತ್ತು ಆರೈಕೆಯನ್ನು ಪಡೆಯುವುದರ ಜೊತೆಗೆ ಪ್ರೀತಿಯನ್ನು ನೀಡಲೂ ಪ್ರಾರಂಭಿಸುತ್ತದೆ. ಸರಿಯಾದ ಮತ್ತು ಸರಿಯಲ್ಲದ ಚಟುವಟಿಕೆಗಳ ನಡುವಿನ ವ್ಯತ್ಯಾಸಗಳನ್ನು ತಿಳಿಯುವಂತೆ ಎರಡು ರೀತಿಗಳಲ್ಲಿ ಮಗುವನ್ನು ಸಮರ್ಥನನ್ನಾಗಿಸಲಾಗುತ್ತದೆ. ಮೊದಲನೆಯದಾಗಿ, ಸಾಮಾಜೀಕರಿಸುವ ನಿಯೋಗಿಯು ನೀಡುವ ಸೂಚನೆಗಳಿಂದ ಮತ್ತು ಎರಡನೆಯದಾಗಿ, ಸರಿಯಾದ ಚಟುವಟಿಕೆಗಳಿಗೆ ಪ್ರತಿಫಲ ನೀಡುವುದರಿಂದ ಮತ್ತು ತಪ್ಪು ಕಾರ್ಯಗಳಿಗೆ ಬಹುಮಾನ ನೀಡದಿರುವ ಅಥವಾ ಶಿಕ್ಷಿಸುವ ಮೂಲಕ.

ಈ ಹಂತದಲ್ಲಿ ತಾಯಿಯೇ ಸಾಮಾಜೀಕರಣದ ಮುಖ್ಯ ನಿಯೋಗಿ. ಆಕೆ ದ್ವಂದ್ವ ಪಾತ್ರಗಳನ್ನು ನಿರ್ವಹಿಸುತ್ತಾಳೆ. ಮೊದಲನೆಯದಾಗಿ, ತನ್ನ ಮತ್ತು ಮಗುವಿನ ಒಡನಾಟದ ಉಪವ್ಯವಸ್ಥೆಯಲ್ಲಿ ಆಕೆ ಮಗುವಿನೊಡನೆ ಭಾಗವಹಿಸುತ್ತಾಳೆ. ಎರಡನೆಯದಾಗಿ, ಆಕೆ ಒಟ್ಟಾರೆ ಸಂಸಾರದಲ್ಲಿ ಭಾಗವಹಿಸುತ್ತಾಳೆ. ಈ ಎರಡೂ ವ್ಯವಸ್ಥೆಗಳ ನಡುವೆ ಆಕೆ ಸಂಧಾನ ನಡೆಸುತ್ತಾಳೆ. ಉನ್ನತ ವ್ಯವಸ್ಥೆಯ ಸಾಮಾನ್ಯ ಮೌಲ್ಯಗಳ ಮತ್ತು ಪಾತ್ರಗಳ ಜ್ಞಾನ ಹೊಂದಿರುವ ತಾಯಿ ಸಂಕೀರ್ಣ ಸಾಮಾಜಿಕ ವ್ಯವಸ್ಥೆಯಲ್ಲಿ ಮಗುವಿನ ಭಾಗವಹಿಸುವಿಕೆ ಹೆಚ್ಚು ಪರಿಣಾಮಕಾರಿಯಾಗಿರುವಂತೆ ಮಾಡುತ್ತಾಳೆ.

### 3. ಈಡಿಪಲ್ (ಬಾಲ್ಯ) ಹಂತ (The Oedipal Stage):

ಈ ಮೂರನೆಯ ಹಂತವು ನಾಲ್ಕನೆಯ ವರ್ಷದಿಂದ ಹರೆಯದವರೆಗೆ ಅಂದರೆ ಸುಮಾರು 12 ರಿಂದ 13ನೇ ವರ್ಷದವರೆಗೆ ಇರುತ್ತದೆ. ಈ ಹಂತದಲ್ಲಿ ಮಗುವು ಒಟ್ಟಾರೆ ಕುಟುಂಬದ ಪೂರ್ಣ ಪ್ರಮಾಣದ ಸದಸ್ಯನಾಗುತ್ತಾನೆ. ಈಗ ಮಗುವು ತನಗೆ ಲಿಂಗದ ಆಧಾರದಲ್ಲಿ ಆರೋಪಿಸಲಾಗಿರುವ ಪಾತ್ರವನ್ನು ಗುರುತಿಸಬೇಕಾಗುತ್ತದೆ. ಈ ಅವಧಿಯ ಬಿಕ್ಕಟ್ಟನ್ನು "ಈಡಿಪಲ್ ಬಿಕ್ಕಟ್ಟು" ಎಂದು ಕರೆಯುತ್ತಾರೆ. ಇದು ನಾಲ್ಕರಿಂದ ಐದು ವರ್ಷಗಳ ನಡುವೆ ಉಂಟಾಗುತ್ತದೆ. ನಂತರ ಬರುವ ಅವಧಿಗೆ "ಅವ್ಯಕ್ತ ಸ್ಥಿತಿ" (Latency Period) ಎಂದು ಹೆಸರು. ಈಡಿಪಲ್ ಪ್ರವೃತ್ತಿ ಎಂಬುದು ತಾಯಿಗಾಗಿ ಆದ ಪೈಪೋಟಿಯಲ್ಲಿ ಮಗನಾದವನಿಗೆ ತಂದೆಯ ಮೇಲೆ ಬರುವ ಈರ್ಷ್ಯೆ. ಹುಡುಗಿಗೆ "ಎಲೆಕ್ಟ್ರಾ ಪ್ರವೃತ್ತಿ" (ಪಿತೃಗಮನ ಭಾವಗ್ರಂಥಿ) ಇದೆಯೆಂದು ಹೇಳಲಾಗಿದೆ. ಅಂದರೆ ತಂದೆಗಾಗಿ ಆದ ಪೈಪೋಟಿಯಲ್ಲಿ ಮಗಳಾದವಳಿಗೆ ತಾಯಿಯ ಮೇಲೆ ಉಂಟಾಗುವ ಈರ್ಷ್ಯೆ. ಈ ಎರಡೂ ಸಂದರ್ಭಗಳಲ್ಲೂ ಭಾವನೆಗಳು ಲೈಂಗಿಕವಾದವು ಎಂದು ತಿಳಿಯಲಾಗಿದೆ. ಅನೇಕ ವಿದ್ವಾಂಸರು ಇದನ್ನು ಒಪ್ಪುವುದಿಲ್ಲ. ಅವರ ಪ್ರಕಾರ 4,5,6 ವಯಸ್ಸಿನ ಮಗುವಿಗೆ ಸ್ಪಷ್ಟವಾದ ಲೈಂಗಿಕ ಜ್ಞಾನ ಅಥವಾ ಲೈಂಗಿಕ ಕ್ರಿಯೆಯ ಬಗ್ಗೆ ತಿಳುವಳಿಕೆ ಇರುವುದಿಲ್ಲ. ಮಗುವಿಗೆ ಲೈಂಗಿಕ ಅರ್ಥದಲ್ಲಿ ತಾಯಿ ಹೆಣ್ಣೂ ಅಲ್ಲ, ತಂದೆ ಗಂಡೂ ಅಲ್ಲ. ಹುಡುಗರ ಮತ್ತು ಹುಡುಗಿಯರ ನಡುವಿನ ಅಂಗರಚನಾ ವ್ಯತ್ಯಾಸವನ್ನು ಮಗುವು ಗಮನಿಸಿದ್ದರೂ ಲೈಂಗಿಕ ಕ್ರಿಯೆಯನ್ನು ಶ್ಲಾಘಿಸುವ ಸಾಮರ್ಥ್ಯ ಮಗುವಿಗೆ ಇರುವುದಿಲ್ಲ. ಈ ಹಂತದಲ್ಲಿ ಮಗುವು ಸರಿಯಾದ ಲಿಂಗದೊಂದಿಗೆ ಗುರುತಿಸಿಕೊಳ್ಳಬೇಕಾಗುತ್ತದೆ. ಇದಕ್ಕೆ ಸಮಾಜವೂ ಸಹ ಒತ್ತಡ ಹಾಕುತ್ತದೆ. ಹುಡುಗರಿಗೆ ಮತ್ತು ಹುಡುಗಿಯರಿಗೆ ಅವರಿಗೆ ತಕ್ಕ ನಡವಳಿಕೆಗಳಿಗಾಗಿ ಬಹುಮಾನ ನೀಡಲಾಗುವುದು. ಇನ್ನೂ ಹೆಚ್ಚಾಗಿ ಹುಡುಗರಿಗೆ ಕೊಡುವ

ಆಟಿಕೆಗಳಿಗೂ ಮತ್ತು ಹುಡುಗಿಯರಿಗೆ ಕೊಡುವ ಆಟಿಕೆಗಳಿಗೂ ವ್ಯತ್ಯಾಸಗಳಿವೆ. ಸ್ಪಷ್ಟವಾಗಿ ಕಾಣಬಹುದಾದ ಅಂಗರಚನಾ ವಿನ್ಯಾಸಗಳು ಗುರುತು ಹಿಡಿಯುವಿಕೆಯನ್ನು ಸುಲಭ ಮಾಡುತ್ತವೆ. ಆದರೂ ಸರಿಯಾದ ಗುರುತು ಹಿಡಿಯುವಿಕೆ ಸಾಮಾಜೀಕರಣದ ಸಾಧನೆ ಎಂಬುದರಲ್ಲಿ ಸಂಶಯವಿಲ್ಲ.

ಆರನೆಯ ವರ್ಷದ ಅವಧಿಯಲ್ಲಿ ಮಗು ತಂದೆಯೊಡನೆ ಯಶಸ್ವಿಯಾಗಿ ಗುರುತಿಸಿಕೊಳ್ಳುತ್ತದೆ. ಮಗುವು ಲೈಂಗಿಕ ಪಾತ್ರದಲ್ಲಿ ತನ್ನ ತಾಯಿ/ತಂದೆಯೊಡನೆ ಯಶಸ್ವಿಯಾಗಿ ಗುರುತಿಸಿಕೊಂಡರೆ, ಅದು ತನ್ನ ತಂದೆ/ತಾಯಿಯ ಬಗ್ಗೆ ಈರ್ಷ್ಯೆ ಹೊಂದಿದೆ ಎಂದು ಅರ್ಥವಾಗುತ್ತದೆ. ಮೊರರ್‌ರ ಪ್ರಕಾರ ವಿರುದ್ಧ ಲಿಂಗದಲ್ಲಿನ ವಿಶೇಷ ಆಸಕ್ತಿ ಹುಟ್ಟು ಗುಣವೂ ಅಲ್ಲ ಅಥವಾ ತನ್ನದೇ ಲಿಂಗ ಪ್ರಭೇದದೊಂದಿಗೆ ಸರಿಯಾಗಿ ಗುರುತಿಸಕೊಳ್ಳುವಿಕೆಯ ಕಾರಣವೂ ಅಲ್ಲ. ತದ್ವಿರುದ್ಧವಾಗಿ, ತನ್ನದೇ ಲಿಂಗ ಪ್ರಭೇದದೊಂದಿಗೆ ಗುರುತಿಸಿಕೊಳ್ಳುವುದು ವಿರುದ್ಧ ಲಿಂಗದ ಬಗ್ಗೆ ಉತ್ಸುಕತೆ ಹೊಂದಿರಲು ಕಾರಣ.

ಮಗುವು ಈ ಹಂತದಲ್ಲಿ ಕುಟುಂಬದ ವಿಸ್ತೃತ ವ್ಯವಸ್ಥೆಯಲ್ಲಿ ಕಾಣಬರುತ್ತದೆ. ತಂದೆ – ತಾಯಿಯ ನಡುವೆ ಮತ್ತು ಇತರೆ ಮಕ್ಕಳ ಪ್ರವೇಶದಿಂದಾಗಿ ಮಗುವಿನ ಮನಸ್ಸಿನಲ್ಲಿ ಗೊಂದಲ ಉಂಟಾಗುತ್ತದೆ. ಮಗುವು ಸ್ವಾತಂತ್ರ್ಯ ಪಡೆಯಲು ಅನೇಕ ಹೊಸ 'ಬೇಕು'ಗಳ ಪಟ್ಟಿಯನ್ನು ಮುಂದಿಟ್ಟು ಅವುಗಳನ್ನು ಹೊಂದಲು ಪ್ರಯತ್ನಿಸುತ್ತದೆ. ಮಗುವು ಶಾಲೆಗೆ ಹೋಗಬೇಕಾಗುತ್ತದೆ, ಅವರ ಜೊತೆಗಾರರೊಂದಿಗೆ ಸೇರುತ್ತದೆ. ಈ ಅವಧಿಯಲ್ಲಿ ಕೌಶಲ್ಯಗಳ ಮೇಲೆ ಹೇಗೆ ಮೇಲುಗೈ ಸಾಧಿಸಬೇಕೆಂದು ತಿಳಿಸುವ ಪ್ರಯತ್ನದಲ್ಲಿ ವಿರುದ್ಧ ಲಿಂಗದಲ್ಲಿನ ಆಸಕ್ತಿಯನ್ನು ದಮನಿಸಲಾಗುತ್ತದೆ. ಈ ಹಂತದಲ್ಲಿ ವಿರುದ್ಧ ಲಿಂಗದಲ್ಲಿನ ಆಸಕ್ತಿ ಸಾಪೇಕ್ಷವಾಗಿ ಅವ್ಯಕ್ತವಾದುದು.

ವಿಭಿನ್ನ ಪಾತ್ರ ಮಾದರಿಗಳ ಗುರುತಿಸುವಿಕೆ ಈ ಹಂತದಲ್ಲಿ ಗಮನಿಸಬೇಕಾದ ಪ್ರಮುಖ ಅಂಶವಾಗಿದೆ. ಒಟ್ಟಿನಲ್ಲಿ ಹುಡುಗನು ಮೂರನೆಯ ಹಂತದ ಸಾಮಾಜೀಕರಣದಲ್ಲಿ ಮೂರು ಪ್ರಕಾರದ ಗುರುತಿಸುವಿಕೆ ಮಾಡುತ್ತಾನೆ. ಅವುಗಳೆಂದರೆ 1) ತಂದೆ ಮತ್ತು ಸಹೋದರರೊಡನೆ ಗುರುತಿಸಕೊಳ್ಳುವುದು (ಲೈಂಗಿಕ–ಪಾತ್ರ ಗುರುತಿಸುವಿಕೆ), 2) ಬಂಧುಗಳೊಂದಿಗೆ ಗುರುತಿಸಿಕೊಳ್ಳುವಿಕೆ (ಸಂಸಾರದಲ್ಲಿ ಮಗುವಿನ ಪಾತ್ರ) ಮತ್ತು 3) ಒಬ್ಬ ಸದಸ್ಯನಾಗಿ ಒಟ್ಟಾರೆ ಕುಟುಂಬದೊಡನೆ ಗುರುತಿಸಿಕೊಳ್ಳುವಿಕೆ.

### 4. ಕಿಶೋರಾವಸ್ಥೆಯ ಹಂತ (The Stage of Adolescence):

ನಾಲ್ಕನೆಯ ಹಂತವು ಹರೆಯದಿಂದ ಪ್ರಾರಂಭವಾಗುತ್ತದೆ. ಈ ಹಂತದಲ್ಲಿ ಮಕ್ಕಳು ತಮ್ಮ ತಂದೆ–ತಾಯಿಗಳ ನಿಯಂತ್ರಣದಿಂದ ಹೊರ ಬರಲು ಇಚ್ಛಿಸುತ್ತಾರೆ. ಈ ಅವಧಿಯ ಮುಕ್ತ ಲೈಂಗಿಕ ಚಟುವಟಿಕೆಗಳಿಗೆ ಅವಕಾಶವಿಲ್ಲವಾಗಿ ಹರೆಯವನ್ನು ಹಿಂಬಾಲಿಸುವ ಶಾರೀರಿಕ ವ್ಯತ್ಯಾಸಗಳು ಸಮಸ್ಯೆಗಳನ್ನು ಉಂಟುಮಾಡುತ್ತವೆ. ಇದುವರೆಗೆ ಅವ್ಯಕ್ತವಾಗಿದ್ದ ಲೈಂಗಿಕ ಪ್ರಮಾಣಕಗಳಿಂದಾಗಿ ಅವನು ಕಾಮತೃಷೆಯನ್ನು ತಣಿಸುವುದು ಆಗುವುದಿಲ್ಲ. ಆತನು ಸಮುದಾಯದ ಪ್ರಮಾಣಕಗಳಿಗೆ ಅನುವರ್ತಿಸಬೇಕಾಗುತ್ತದೆ. ನೈತಿಕ ಸರಿ–ತಪ್ಪುಗಳನ್ನು ತಿಳಿಯಲು ಕಲಿಯುತ್ತಾನೆ. ಮುಂದಿನ ಪ್ರೌಢ ಹಂತದಲ್ಲಿ ತಾನು ನಿರ್ವಹಿಸಬೇಕಾದ ಸಾಮಾಜಿಕ ಜವಾಬ್ದಾರಿ ಕಲಿಯುತ್ತಾನೆ. ಸಾಮಾನ್ಯವಾಗಿ ಈ ಹಂತದಲ್ಲಿ ಒಬ್ಬ ವ್ಯಕ್ತಿ ಶಾಲಾ ಶಿಕ್ಷಣವನ್ನು ಪೂರ್ಣಗೊಳಿಸಿ ಜೀವನ ನಿರ್ವಹಣೆಗೆ ಸಾಮರ್ಥ್ಯ ನೀಡುವ ಕೌಶಲ್ಯಗಳನ್ನು ಕಲಿಯುತ್ತಾನೆ. ಆದಾಗಿಯೂ ಸಮಾಜೀಕರಣವು ಹುಟ್ಟಿನಿಂದ ಸಾಯುವವರೆಗೆ ನಿರಂತರವಾಗಿ ನಡೆಯುವ ಪ್ರಕ್ರಿಯೆ.

## 4.5. ಸಾಮಾಜೀಕರಣದ ನಿಯೋಗಿಗಳು (Agencies of Socialization):

ಸಾಮಾಜೀಕರಣ ಜೀವನ ಪರ್ಯಂತ ನಿರಂತರವಾಗಿ ಮುಂದುವರಿಯುವ ಕಲಿಕೆಯ ಪ್ರಕ್ರಿಯೆ. ಇದು ಹುಟ್ಟಿನಿಂದಲೇ ಪ್ರಾರಂಭವಾಗಿ ವ್ಯಕ್ತಿಯ ಸಾವಿನವರೆಗೂ ತಡೆಯಿಲ್ಲದೇ ಸಾಗುತ್ತದೆ. ಕೆಲವರ ಪ್ರಕಾರ ಇದು ಮಗು ಹುಟ್ಟುವ ಮೊದಲೇ ಪ್ರಾರಂಭವಾಗುತ್ತದೆ. ಅವನ ಹುಟ್ಟಿಗೆ ಮೊದಲಿದ್ದ ಸಾಮಾಜಿಕ ಸನ್ನಿವೇಶಗಳು ಕುಟುಂಬದಲ್ಲಿನ ಸಾಂಸ್ಕೃತಿಕ ಆಚರಣೆಗಳು, ಪೋಷಕರ ಅಭಿರುಚಿಗಳು ಇತ್ಯಾದಿ ಪರೋಕ್ಷವಾಗಿ ಅವನ ವ್ಯಕ್ತಿತ್ವವನ್ನು ಪ್ರಭಾವಿತಗೊಳಿಸುತ್ತದೆ. ಆದರೆ ಜನನದ ನಂತರವಷ್ಟೇ ಪ್ರತ್ಯಕ್ಷ, ನೇರ ಸಾಮಾಜೀಕರಣ ಪ್ರಾರಂಭವಾಗುತ್ತದೆ.

ಸಾಮಾಜೀಕರಣ ಒಂದು ಘಟನೆಯೂ ಅಲ್ಲ ಅಥವಾ ಒಂದು ಆಕಸ್ಮಿಕವೂ ಅಲ್ಲ. ಇದು ಯಾವಾಗಲೂ ಸಾಂಸ್ಥಿಕ ವ್ಯವಸ್ಥೆಯೊಳಗೇ ನಡೆಯುತ್ತದೆ ಮತ್ತು ಸಾಂಸ್ಥಿಕ ಕ್ರಮಗಳ ಮೂಲಕ ನಿಯಂತ್ರಿಸಲ್ಪಟ್ಟಿದೆ. ಮಗುವು ಏನಾಗಿದ್ದಾನೆ ಎಂಬುದಕ್ಕಿಂತ ಏನಾಗಲಿದ್ದಾನೆ ಎಂಬುದೇ ಮುಖ್ಯವಾದುದರಿಂದ ಇಂತಹ ನಿಯಂತ್ರಣವನ್ನು ಕಾಣುತ್ತೇವೆ. ಸಾಮಾಜೀಕರಣ ಅವನನ್ನು ಸಮಾಜದ ಉಪಯುಕ್ತ ಸದಸ್ಯನನ್ನಾಗಿಸುತ್ತದೆ. ಆದ್ದರಿಂದ ಮಗುವನ್ನು ಯಾರು ಸಾಮಾಜೀಕರಣಗೊಳಿಸುತ್ತಾರೆ ಎಂಬುದು ಬಹಳ ಗಣನೀಯವಾದುದು. ಸಾಮಾಜೀಕರಣದ ನಿಯೋಗಿಗಳನ್ನು ಅಧ್ಯಯನದ ಅನುಕೂಲಕ್ಕಾಗಿ ಔಪಚಾರಿಕ ಮತ್ತು ಅನೌಪಚಾರಿಕ ನಿಯೋಗಿಗಳು ಎಂದು ಈ ಮುಂದೆ ವಿವರಿಸಲಾಗಿದೆ.

### ಅನೌಪಚಾರಿಕ ನಿಯೋಗಿಗಳು (Informal agencies):

ಸಾಮಾಜೀಕರಣ ಒಂದು ವ್ಯಕ್ತಿತ್ವ ರೂಪಿಸುವ ಪ್ರಕ್ರಿಯೆ. ಸಮಾಜದ ಉಪಯುಕ್ತ ಸದಸ್ಯನಾಗಲು ಇದು ಮಗುವಿಗೆ ಸಹಾಯ ಮಾಡುತ್ತದೆ. ಮಗುವಿನ ವ್ಯಕ್ತಿತ್ವ ರೂಪಿಸುವ ಕೆಲವೊಂದು ಪ್ರಮುಖ ನಿಯೋಗಿಗಳನ್ನು ಈ ಕೆಳಗೆ ವಿಶ್ಲೇಷಿಸಲಾಗಿದೆ.

### 1) ಕುಟುಂಬ (Family)

ಮಗುವನ್ನು ಮೊದಲಿಗೆ ಬರಮಾಡಿಕೊಳ್ಳೂವುದೇ ಕುಟುಂಬ. ಹಾಗಾಗಿ ಕುಟುಂಬ ಸಾಮಾಜೀಕರಣದ ಅತಿಮುಖ್ಯ ನಿಯೋಗಿ. ಭೌತಿಕ ಸಾಮಿಪ್ಯ, ನಿಕಟ ಸಂಬಂಧ, ಮಗುವಿನ ಮೃದುತ್ವ, ಮಗುವಿನ ಮೇಲೆ ಪೋಷಕರಿಗೆ ಇರುವ ಅಧಿಕಾರ ಇತ್ಯಾದಿಗಳು ಮಗುವಿನ ವ್ಯಕ್ತಿತ್ವ ರೂಪಿಸುವಲ್ಲಿ ಹೆಚ್ಚಿನ ಪ್ರಭಾವ ಹೊಂದಿವೆ.

ಕುಟುಂಬದಲ್ಲಿ ಪೋಷಕರ ಪ್ರಭಾವ, ಅದರಲ್ಲಿಯೂ ಮುಖ್ಯವಾಗಿ ತಾಯಿಯ ಪ್ರಭಾವ ಬಹಳ ಮುಖ್ಯವಾದುದು. ಮಗುವು ಪೋಷಕರಿಂದಲೇ ಮಾತು ಮತ್ತು ಭಾಷೆಯನ್ನು ಕಲಿಯುವುದು. ಅದಕ್ಕೆ ಸಾಮಾಜಿಕ ನೈತಿಕತೆಯನ್ನು ಕಲಿಸಲಾಗುತ್ತದೆ. ಅಧಿಕಾರದಲ್ಲಿನ ವ್ಯಕ್ತಿಗಳಿಗೆ ಗೌರವ ನೀಡುವುದನ್ನು ಕಲಿಯುತ್ತದೆ. ಕೆಲವೊಂದು ನಾಗರೀಕ ಮೌಲ್ಯಗಳನ್ನು ಶಿಶುವು ಕುಟುಂಬದಲ್ಲಿ ಕಲಿಯುತ್ತದೆ. ಸಹಕಾರ, ಸಹನೆ, ತ್ಯಾಗ, ಪ್ರೀತಿ ಮತ್ತು ಪ್ರೇಮ ಇತ್ಯಾದಿಗಳಲ್ಲಿ ಮೊದಲ ಪಾಠ ಕುಟುಂಬದಲ್ಲಿ ಆಗುತ್ತದೆ.

ಯಾವನೇ ವ್ಯಕ್ತಿಯ ಮೊದಲಿನ ಮತ್ತು ಅತಿನಿಕಟವಾದ ಸಂಬಂಧಗಳು ಅವನ ಪೋಷಕರು ಮತ್ತು ಬಂಧುಗಳೊಂದಿಗೆ ಉಂಟಾಗುವಂತಹವು. ಇವರುಗಳಿಗೆ ಮಗುವಿನ ಮೇಲೆ ಅಧಿಕಾರವೂ ಇದೆ. ಮಗುವಿಗೆ ಇನ್ನೂ ವಿವೇಚಿಸುವ ಸಾಮರ್ಥ್ಯವಿಲ್ಲವಾದ್ದರಿಂದ ನೀಡಿದ್ದೆಲ್ಲವನ್ನು ಸ್ವೀಕರಿಸುತ್ತದೆ. ಬಂಧುಗಳ ಮತ್ತು ಪೋಷಕರ ಜೊತೆ ಮಗುವಿಗೆ ಭಾವನಾತ್ಮಕ ಸಾಮಾಜೀಕರಣ ಸುಲಭವಾಗುತ್ತದೆ, ಕುಟುಂಬದಲ್ಲಿ ತಲೆಮಾರಿಗೆ ತಲೆಮಾರಿಗೆ ಸಂಸ್ಕೃತಿಯು ಸಂಬಂಧದಿಂದ ವರ್ಗಾವಣೆಯಾಗುತ್ತದೆ.

## 2) ಸಮವಯಸ್ಕರು: (The peer group)

ಸಾಮಾಜೀಕರಣದ ನಿಯೋಗಿಗಳಲ್ಲಿ ಸಮ ವಯಸ್ಕರು ಕುಟುಂಬದ ನಂತರದ ಸ್ಥಾನ. ಇದು ಮಗುವಿನ ಸಮವಯಸ್ಕರು, ಜೊತೆ ಆಟಗಾರರು, ಸಮಾನ ಅಂತಸ್ತು ಹೊಂದಿದವರು, ನಿಕಟ ಸ್ನೇಹಿತರು, ತರಗತಿಯ ಮಿತ್ರರು, ಮೊದಲಾದವರನ್ನು ಒಳಗೊಳ್ಳುತ್ತದೆ. ಸೂಕ್ತ ವರ್ತನೆಗಳನ್ನು ವ್ಯಾಖ್ಯಾನಿಸುವಲ್ಲಿ, ಸೂಕ್ತ ಪಾತ್ರಗಳನ್ನು ಹೊಂದುವಲ್ಲಿ ವರ್ತನೆಗೆ ಆದರ್ಶಗಳನ್ನು ರೂಪಿಸುವಲ್ಲಿ, ಒಂದು ಹಂತದ ವೈಯಕ್ತಿಕ ಸ್ವಾತಂತ್ರ್ಯವನ್ನು ಪಡೆದುಕೊಳ್ಳುವಲ್ಲಿ ಮತ್ತು ಗುರಿಗಳನ್ನು ಮೈಗೂಡಿಸಿಕೊಳ್ಳುವಲ್ಲಿ ಸಮಾನ ವಯಸ್ಕರು ಕೆಲವೊಂದು ಪ್ರಮುಖ ಕರ್ತವ್ಯಗಳನ್ನು ನಿರ್ವಹಿಸುತ್ತಾರೆ. ಪೋಷಕರು ಮತ್ತು ಶಿಕ್ಷಕರಿಂದ ಪಡೆದುಕೊಳ್ಳಲಾಗದ ಕೆಲವೊಂದು ಸಂಗತಿಗಳನ್ನು ಮಗುವು ತನ್ನ ಸ್ನೇಹಿತರು ಮತ್ತು ಜೊತೆ ಆಟಗಾರರಿಂದ ಪಡೆದುಕೊಳ್ಳುತ್ತಾನೆ. ಸಾಮಾನ್ಯವಾಗಿ ಸಮಾನ ವಯಸ್ಕರು ಸಮೂಹ ಹೆಚ್ಚು ಸಮಾನತೆಯ ಅನುಭವವನ್ನು ನೀಡುತ್ತದೆ. ಈ ಸಮೂಹಗಳಲ್ಲಿ ಮಗುವು ಸಂಸ್ಕೃತಿಯ ಅನೌಪಚಾರಿಕ ಅಂಶಗಳಾದ ಸೊಗಸುಗಾರಿಕೆ, ಗೀಳು, ತೃಪ್ತಿ ಪಡಿಸುವ ಕೆಲವೊಂದು ರಹಸ್ಯ ಕ್ರಮಗಳು ಇತ್ಯಾದಿಗಳನ್ನು ಕಲಿಯುತ್ತಾನೆ. ನಿಷೇಧಿತ ಸಂಗತಿಗಳ ಬಗ್ಗೆ ತಿಳಿದುಕೊಳ್ಳುವುದಕ್ಕೂ ಈ ಸಮೂಹಗಳು ಅವಕಾಶ ನೀಡುತ್ತವೆ. ಉದಾಹರಣೆಗೆ, ಮೊದಲಿನ ಹಂತಗಳಲ್ಲಿ ಹೆಚ್ಚಿನ ಲೈಂಗಿಕ ಜ್ಞಾನ, ಅದು ಸರಿಯಾಗಿ ಅಥವಾ ತಪ್ಪಾಗಿ ಬಂದಿರಲಿ, ಮಗುವಿನ ಸಮಾನ ವಯಸ್ಕರ ಸಮೂಹದಿಂದ ಬಂದಿರುತ್ತವೆ.

## ಔಪಚಾರಿಕ ನಿಯೋಗಿಗಳು (Formal Agencies):

### 1) ಶಾಲೆ (School):

ಶಾಲೆ ಕೂಡ ಸಾಮಾಜೀಕರಣದ ಬಹುಮುಖ್ಯ ನಿಯೋಗಿ–ಮಗುವಿನ ವ್ಯಕ್ತಿತ್ವ ರೂಪಿಸುವಲ್ಲಿ ಶಿಕ್ಷಕರು ನಿರ್ಣಯಾತ್ಮಕ ಪಾತ್ರ ವಹಿಸುತ್ತಾರೆ. ವಯಸ್ಕ ಪಾತ್ರಗಳಿಗೆ ಮಗುವನ್ನು ಸಿದ್ಧಗೊಳಿಸಲು ಕುಟುಂಬ ಸದೃಡವಾಗಿಲ್ಲದ್ದರಿಂದ ಶಾಲೆಗೆ ಬಹುಮುಖ್ಯವಾದ ಪಾತ್ರವಿದೆ. ಮಗು ಶಾಲೆಯಲ್ಲಿ ಶಿಕ್ಷಣವನ್ನು ಪಡೆದುಕೊಳ್ಳುತ್ತಾನೆ. ಇದು ಅವನ ಆಲೋಚನೆಗಳು ಮತ್ತು ಅಭಿರುಚಿಗಳು ರೂಪಿಸಿಕೊಳ್ಳಲು, ತಿದ್ದಿಕೊಳ್ಳಲು ಸಹಕರಿಸುತ್ತದೆ. ಶಾಲೆ ಅಗತ್ಯವಾದ ಜ್ಞಾನ ಮತ್ತು ಕೌಶಲ್ಯವನ್ನು ವರ್ಗಾಯಿಸುವುದರ ಜೊತೆಗೆ ಸಹಕಾರ, ಶಿಸ್ತು, ದೇಶಭಕ್ತಿ, ಸ್ನೇಹ ಇತ್ಯಾದಿ ಮೌಲ್ಯಗಳನ್ನು ಮಕ್ಕಳಿಗೆ ನೀಡುತ್ತದೆ. ಭಾವನಾತ್ಮಕ ಮತ್ತು ಸಾಮಾಜಿಕ ಅಭಿವೃದ್ಧಿಯನ್ನು ಮತ್ತಷ್ಟು ಮುಂದೆ ತೆಗೆದುಕೊಂಡು ಹೋಗಲು ಶಾಲೆ ಸಹಾಯ ಮಾಡುತ್ತದೆ. ಮಗುವನ್ನು ಅಧಿಕಾರಯುಕ್ತವಾಗಿ ಸಾಮಾಜೀಕರಣಗೊಳಿಸುವ ಒಂದು ಔಪಚಾರಿಕ ನಿಯೋಗಿಯಾಗಿದೆ.

### 2) ಸಮೂಹ ಮಾಧ್ಯಮಗಳು (Mass Media):

ಮಗುವಿನ ಸಾಮಾಜೀಕರಣದಲ್ಲಿ ಸಂವಹನದ ಮುದ್ರಣ ಮಾಧ್ಯಮ ಮತ್ತು ದೃಶ್ಯ–ಶ್ರವಣ ಮಾಧ್ಯಮಗಳು ಬಹುಮುಖ್ಯ ಪಾತ್ರ ನಿರ್ವಹಿಸುತ್ತದೆ. ಸಮಾಚಾರ ಪತ್ರಿಕೆಗಳು, ಮ್ಯಾಗಜಿನ್‌ಗಳು, ಪುಸ್ತಕಗಳು, ಬಾನುಲಿ, ದೂರವಾಣಿ, ದೂರದರ್ಶನ, ಮೊಬೈಲ್, ಇಂಟರ್‌ನೆಟ್, ಸಾಮಾಜಿಕ ಅಂತರ್ಜಾಲ ವ್ಯವಸ್ಥೆ ಇತ್ಯಾದಿಗಳು ತಲೆಮಾರಿನಿಂದ ತಲೆಮಾರಿಗೆ ಸಂಸ್ಕೃತಿಯನ್ನು ವರ್ಗಾಯಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಸಮೂಹ ಶಿಕ್ಷಣದಲ್ಲಿ ರಾಜ್ಯ ಕೂಡ ಇವುಗಳನ್ನು ಪ್ರಯತ್ನ ಪೂರ್ವಕವಾಗಿ, ಉದ್ದೇಶ ಪೂರ್ವಕವಾಗಿ ಬಳಸಿಕೊಳ್ಳಬಹುದಾಗಿದೆ. ನಿರ್ದಿಷ್ಟ ಮೌಲ್ಯವ್ಯವಸ್ಥೆಯನ್ನು ಬದಲಿಸಲು ಅಥವಾ ಪರಿಚಯಿಸಲು ಇವುಗಳನ್ನು ಬಳಸಿಕೊಳ್ಳಬಹುದಾಗಿದೆ.

### 3) ರಾಜ್ಯ (State):–

ರಾಜ್ಯವು ಸಾಮಾಜೀಕರಣ ಪ್ರಕ್ರಿಯೆಯಲ್ಲಿ ಪ್ರಮುಖವಾದ ಪಾತ್ರವನ್ನು ನಿರ್ವಹಿಸುತ್ತದೆ. ಅದೊಂದು ಅಧಿಕಾರಯುಕ್ತ ನಿಯೋಗಿಯಾಗಿದೆ. ರಾಜ್ಯವು ಜನರಿಗಾಗಿ ಕಾನೂನುಗಳನ್ನು ರೂಪಿಸುತ್ತದೆ, ಮತ್ತು ಜನರಿಗೆ ಅಪೇಕ್ಷಣೀಯ ನಡವಳಿಕೆಯ ರೂಪುರೇಶೆಗಳನ್ನು ತಿಳಿಸಿಕೊಡುತ್ತದೆ. ವ್ಯಕ್ತಿತ್ವದ ಬೆಳವಣಿಗೆಗೆ ಸಂಬಂಧಿಸಿದಂತೆ ರಾಜ್ಯವು ಅಧಿಕಾರವನ್ನು ಹೊಂದಿದೆ. ಇದು ವ್ಯಕ್ತಿಗೆ ವಿವಿಧ ಸಾಮಾಜಿಕ ಸನ್ನಿವೇಶಗಳಲ್ಲಿ ಹೊಂದಿಕೊಂಡು ನಡೆಯಲು ಸಹಾಯ ಮಾಡುತ್ತದೆ. ಜನರನ್ನು ಸಾಮಾಜೀಕರಣಗೊಳಿಸಲು ರಾಜ್ಯವು ಮಾಧ್ಯಮಗಳ ಮೂಲಕ ಮತ್ತು ಇತರ ಸಂವಹನ ಸಾಧನಗಳ ಮೂಲಕ ವ್ಯವಸ್ಥೆಮಾಡುತ್ತದೆ. ರಾಜ್ಯವು ಪ್ರಜೆಗಳಿಗೆ ಕಾನೂನಿನ ನಿಯಮಗಳನ್ನು ಮತ್ತು ಮೌಲ್ಯಗಳನ್ನು ಕಲಿಸುತ್ತದೆ. ರಾಜ್ಯವು ಪ್ರಜೆಗಳಿಗೆ ತಮ್ಮ ಸಾಧನೆಗಳಿಗೆ ಪ್ರತಿಫಲಗಳನ್ನು ನೀಡುವುದರ ಮೂಲಕ ಉತ್ತಮ ವ್ಯಕ್ತಿಗಳಾಗಲು ಪ್ರೇರೇಪಿಸುತ್ತದೆ.

## 4.6. ಸಾಮಾಜೀಕರಣದಲ್ಲಿ ಸಂಸ್ಕೃತಿಯ ಪಾತ್ರ : (Role of culture in socialisation)

ಸಾಮಾಜೀಕರಣವು ಸಮಾಜಕ್ಕೆ ಒಂದು ಪ್ರಮುಖ ವಿಚಾರವಾಗಿದೆ. ಅದು ಆಕಸ್ಮಿಕವಾಗಿ ಸಂಭವಿಸಲಾರದು. ಸಾಮಾಜೀಕರಣವನ್ನು ಸಾಂಸ್ಕೃತಿಕ ನಿರ್ದೇಶನಗಳಿಂದ ನಿಯಂತ್ರಿಸಬೇಕಾಗುತ್ತದೆ. ವ್ಯಕ್ತಿಯ ಸಾಮಾಜಿಕ ಸ್ವಭಾವವು ಬಹುಮುಖ್ಯವಾಗಿ ಅವನ ಸಂಸ್ಕೃತಿಯಿಂದ ಪ್ರಭಾವಿತವಾಗುತ್ತದೆ. ಹುಟ್ಟಿನಿಂದ ಮಾನವನು ಒಂದು ಜೈವಿಕ ಪ್ರಾಣಿ ಎಂದು ಎಲ್ಲರಿಗೂ ತಿಳಿದ ವಿಚಾರವಾಗಿದೆ. ಕೇವಲ ಸಾಮಾಜೀಕರಣದಿಂದ ಅವನು ಸಾಮಾಜಿಕ ಜೀವಿಯಾಗಿದ್ದಾನೆ. ಸಂಸ್ಕೃತಿಯು ಸಾಮಾಜೀಕರಣ ಪ್ರಕ್ರಿಯೆಯ ಕಲಿಕೆಯ ಅಂಶವಾಗಿದೆ. ಸಂಸ್ಕೃತಿಯು ಸಮಾಜದಿಂದ ಸಮಾಜಕ್ಕೆ ಭಿನ್ನವಾಗಿದ್ದರೂ, ಪ್ರತಿ ಸಮಾಜವು ತನ್ನದೇ ಆದ ವಿಶಿಷ್ಟ ಸಂಸ್ಕೃತಿಯನ್ನು ಹೊಂದಿದೆ. ಆದ್ದರಿಂದ ಸಮಾಜ ಮತ್ತು ಸಂಸ್ಕೃತಿ ಸಾಮಾಜೀಕರಣ ಪ್ರಕ್ರಿಯೆಯಲ್ಲಿ ಸಂಬಂಧವುಳ್ಳವುಗಳಾಗಿವೆ. ಒಂದು ಶಿಶು ಈಗ ಏನಾಗಿದೆ ಎನ್ನುವುದಕ್ಕಿಂತಲೂ ಭವಿಷ್ಯದಲ್ಲಿ ಏನಾಗಬಲ್ಲುದು ಎಂಬುದು ಬಹಳ ಪ್ರಾಮುಖ್ಯವಾಗಿದೆ. ಸಾಮಾಜೀಕರಣ ಪ್ರಕ್ರಿಯೆಯ ಮೂಲಕ ಮಗು ಸಮಾಜದ ಉತ್ತಮ ಸದಸ್ಯನಾಗಿ ಪರಿವರ್ತನೆಯಾಗುತ್ತಾನೆ.

ಸಾಮಾಜೀಕರಣದಲ್ಲಿ ಸಂಸ್ಕೃತಿಯ ಪಾತ್ರವನ್ನು ಈ ಕೆಳಗಿನಂತೆ ವಿಶ್ಲೇಷಿಸಬಹುದು.

1. ಮಾನವನನ್ನು ಕ್ರಮಬದ್ಧವಾದ ಸಾಮಾಜಿಕ ವ್ಯಕ್ತಿಯನ್ನಾಗಿ ಪರಿವರ್ತಿಸಲು ಸಂಸ್ಕೃತಿಯು ಸಾಮಾಜೀಕರಣ ಪ್ರಕ್ರಿಯೆಗೆ ತಳಹದಿಯನ್ನು ನೀಡುತ್ತದೆ.

2. ವ್ಯಕ್ತಿಗೆ ತನ್ನ ವಿವಿಧ ಚಟುವಟಿಕೆಗಳನ್ನು ನಿಯಂತ್ರಿಸಲು ಸಂಸ್ಕೃತಿಯು ಮಾರ್ಗದರ್ಶನವನ್ನು ನೀಡುತ್ತದೆ. ಇದನ್ನು ವ್ಯಕ್ತಿಯು ಸಾಮಾಜೀಕರಣ ಪ್ರಕ್ರಿಯೆಯಿಂದ ಕಲಿಯುತ್ತಾನೆ.

3. ನೈತಿಕತೆ, ಉತ್ತಮನಡವಳಿಕೆ, ಧನಾತ್ಮಕ ದೃಷ್ಟಿಕೋನ, ತತ್ವಗಳು ಮತ್ತು ಮೌಲ್ಯಗಳನ್ನು ಕಲಿಸುವಲ್ಲಿ ಸಾಮಾಜೀಕರಣ ಪ್ರಕ್ರಿಯೆಗೆ ಸಂಸ್ಕೃತಿ ಸಹಾಯ ಮಾಡುತ್ತದೆ.

4. ಸಾಮಾಜೀಕರಣ ಪ್ರಕ್ರಿಯೆಯ ಮೂಲಕ ವ್ಯಕ್ತಿಯು ಭವಿಷ್ಯವನ್ನು ರೂಪಿಸಿಕೊಳ್ಳುವಲ್ಲಿ ಸಂಸ್ಕೃತಿಯು ಸಹಾಯ ಮಾಡುತ್ತದೆ.

5. ವ್ಯಕ್ತಿಯು ಸಮಾಜಕ್ಕೆ ಕೊಡುಗೆ ನೀಡಲು ಸಂಸ್ಕೃತಿಯು ಸಾಮಾಜೀಕರಣದ ಮೂಲಕ ಸಹಾಯ ಮಾಡುತ್ತದೆ.

6. ಸಂಸ್ಕೃತಿಯು ಸಾಮಾಜೀಕರಣದ ಸಹಾಯದಿಂದ ವಿವಿಧ ಸಾಮಾಜಿಕ ಸನ್ನಿವೇಶಗಳಲ್ಲಿ ವ್ಯಕ್ತಿಗೆ ತನ್ನ ನಡವಳಿಕೆಯ ವಿಧಾನಗಳನ್ನು ಸರಿಯಾಗಿ ಪಾಲಿಸುವಂತೆ ನಿರ್ದೇಶಿಸುತ್ತದೆ.

7. ಸಂಸ್ಕೃತಿಯು ಸಾಮಾಜೀಕರಣ ಪ್ರಕ್ರಿಯೆಯ ಮೂಲಕ ವ್ಯಕ್ತಿಗೆ ಇತರರ ಬಗ್ಗೆ ಸಹಾನುಭೂತಿ, ಅನುಕಂಪವನ್ನು ಬೆಳೆಸಲು ಸಹಾಯ ಮಾಡುತ್ತದೆ.

8. ಸಂಸ್ಕೃತಿಯು ಸಾಮಾಜೀಕರಣದ ಮೂಲಕ ಸಾಮಾಜಿಕ ಕ್ಷೇಮಾಭಿವೃದ್ಧಿಗೆ ದುಡಿಯಲು ಹಾಗೂ ಎಲ್ಲರ ಬಗ್ಗೆ ಧನಾತ್ಮಕ ದೃಷ್ಟಿಕೋನವನ್ನು ಬೆಳೆಸುವಲ್ಲಿ ಸಹಾಯ ಮಾಡುತ್ತದೆ.

❑❑❑

# ಅಧ್ಯಾಯ – 5
# ಸಾಮಾಜಿಕ ಸಂಸ್ಥೆಗಳು

# (Social Institutions)

## 5.1 ವಿವಾಹ (Marriage)

### ಅರ್ಥ ಮತ್ತು ವ್ಯಾಖ್ಯೆಗಳು: (Meaning and definitions):-

ವಿವಾಹ ಅತ್ಯಂತ ಪ್ರಮುಖ ಮತ್ತು ಸಾರ್ವತ್ರಿಕ ಸ್ವರೂಪದ ಸಾಮಾಜಿಕ ಸಂಸ್ಥೆಯಾಗಿದೆ. ಸಾಮಾಜಿಕ ಸಂಸ್ಥೆಯಾಗಿ–ಎರಡು ವಿರುದ್ದ ಲಿಂಗಗಳಾದ ಸ್ತ್ರೀ ಮತ್ತು ಪುರುಷರು ಸಾಪೇಕ್ಷವಾಗಿ ಮುಂದುವರಿಯುವ ಲೈಂಗಿಕ ಸಂಬಂಧಗಳನ್ನು ಸಾಮಾಜಿಕ ಮನ್ನಣೆ ಪಡೆದುಕೊಂಡು ಮತ್ತು ಸಂತಾನೋತ್ಪತ್ತಿ ಹಾಗೂ ಮಕ್ಕಳ ಲಾಲನೆ–ಪಾಲನೆ ಮಾಡುವ ವ್ಯವಸ್ಥೆಯಾಗಿದೆ. ಈ ಸಂಸ್ಥೆ ಪ್ರಾಥಮಿಕವಾಗಿ ಮಾನವನ ಸಂತಾನೋತ್ಪತ್ತಿ ನಿರಂತರತೆಯನ್ನು ಕಾಪಾಡಿಕೊಳ್ಳುವ ಉದ್ದೇಶವಾಗಿದೆ.

1. **ಎಡ್ವರ್ಡ್ ವೆಸ್ಟರ್ ಮಾರ್ಕ್** ತಮ್ಮ ಮಾನವ ಸಮಾಜದ ವಿವಾಹದ ಇತಿಹಾಸ (**History of Human Marriage**): "ವಿವಾಹವು ಸಂತತಿಯ ಜನನದ ನಂತರವೂ ಮುಂದುವರೆಯುವ ಗಂಡು ಹೆಣ್ಣಿನ ದೀರ್ಘಕಾಲದ ಸಂಬಂಧ".

2. **ಹೆಚ್.ಟಿ. ಮಜುಂದಾರ:** "ಒಂದು ಗೃಹವನ್ನು ಸ್ಥಾಪಿಸುವ ಮೂಲಕ ಲೈಂಗಿಕ ಸಂಬಂಧಗಳಿಗೆ ಪ್ರವೇಶಿಸುವ ಸಂತಾನೋತ್ಪತ್ತಿ ಮತ್ತು ಶಿಶುವಿಗೆ ಸಂರಕ್ಷಣೆ ನೀಡುವ ಸಾಮಾಜಿಕವಾಗಿ ಅಂಗೀಕೃತವಾದ ಗಂಡು ಹೆಣ್ಣಿನ ಸಂಬಂಧವನ್ನು ರೂಪಿಸುವ ಒಂದು ಸಂಸ್ಥೆಯೇ ವಿವಾಹ".

3. **ರಾಬರ್ಟ್ ಹೆಚ್ ಲೂಯಿ:** "ಅನುಮತಿ ನೀಡಬಹುದಾದ ಸಂಗಾತಿಗಳ ನಡುವೆ ಶಾಶ್ವತವಾದ ಬಂಧನವೇ ವಿವಾಹ' ಎಂದಿದ್ದಾರೆ".

ವಿವಾಹದ ಉದ್ದೇಶ ಅಥವಾ ಗುರಿ ಕೇವಲ ಹೊಸಸಂತತಿಯ ಪ್ರಜನನ ಅಥವಾ ಸಂತಾನೋತ್ಪತ್ತಿಗೆ ಮಾತ್ರ ಸೀಮಿತವಾಗಿರದೆ – ಸಂಗಾತಿಯ ಬಯಕೆ, ಭಾವನಾತ್ಮಕ ಮತ್ತು ಮಾನಸಿಕ ಸ್ಥಿರತೆಯ ಬೆಂಬಲ ಮುಂತಾದವುಗಳ ಬಗ್ಗೆ ಸಮಾನಾದ ಪ್ರಾಮುಖ್ಯತೆ ನೀಡುತ್ತದೆ. ವಿವಾಹದ ಮೊದಲನೇ ಉದ್ದೇಶವೇ ಜೀವನಸಂಗಾತಿಯ ಬಯಕೆ. ಮಾನವ ಸಮಾಜದ ಪ್ರತಿಯೊಂದು ಐತಿಹಾಸಿಕ ಹಂತದಲ್ಲೂ ವಿವಾಹಕ್ಕೆ ಸಾಮಾಜಿಕ ಕರ್ತವ್ಯ ಮತ್ತು ಸಾಮಾಜಿಕ ಮನ್ನಣೆ ತೀರಾ ಅಗತ್ಯವೆಂದು ಪರಿಗಣಿಸಿದೆ. ಈ ರೀತಿ ಸಾಮಾಜಿಕ ಹೊಣೆಗಾರಿಕೆಯು ಕೌಟುಂಬಿಕ, ಸಾಮಾಜಿಕ ಮತ್ತು ಆರ್ಥಿಕ ಜವಾಬ್ದಾರಿಯನ್ನು ಹೊಂದಿದೆ.

### ವಿವಾಹದ ಲಕ್ಷಣಗಳು (Characterstic of Marriage)

a. **ವಿವಾಹವು ಸಾರ್ವತ್ರಿಕವಾದುದು (Marriage is universal):** ವಿವಾಹವು ಯಾವುದೊಂದು ಸಮಾಜ ಅಥವಾ ಸಮುದಾಯಕ್ಕೆ ಸಿಮೀತವಾದುದಲ್ಲ. ಇದೊಂದು ಸಾರ್ವತ್ರಿಕವಾದ ಸಾಮಾಜಿಕ ಸಂಸ್ಥೆಯಾಗಿದೆ.

ಅನಾದಿಕಾಲದಿಂದ ನಾಗರೀಕ ಸಮಾಜ ಇರುವ ಕಡೆಯಲೆಲ್ಲ ವಿವಾಹವು ಆಚರಣೆಯಲ್ಲಿರುವುದು ಕಂಡುಬರುತ್ತದೆ. ಅದರಲ್ಲೂ ಕೆಲವು ಅತೀ ಸಂಪ್ರದಾಯಸ್ಥ ಸಮುದಾಯಗಳಲ್ಲಿ ವಿವಾಹವು ಒಂದು ಅಗತ್ಯವಾದ ಮತ್ತು ಪವಿತ್ರವಾದ ಕರ್ತವ್ಯ. "ಅವಿವಾಹಿತ ವ್ಯಕ್ತಿ ಅಪೂರ್ಣ ವ್ಯಕ್ತಿ" ಎಂದು ಪರಿಗಣಿಸುತ್ತಾರೆ. ವ್ಯಕ್ತಿಯು ಪರಿಪೂರ್ಣವಾಗಬೇಕಾದರೆ ಆತ ವಿವಾಹವಾಗಲೇ ಬೇಕು. ಕೆಲವೊಂದು ಆದಿವಾಸಿ ಸಮುದಾಯಗಳಲ್ಲಿ ಅವಿವಾಹಿತನಾಗಿ ಸಾಯುವ ವ್ಯಕ್ತಿಗೆ ಅಂತ್ಯ ಸಂಸ್ಕಾರಗಳನ್ನು ನಿರಾಕರಿಸಲಾಗುತ್ತದೆ. ಕೊನೆಗೆ ಮೃತದೇಹಕ್ಕೆ ವಿವಾಹ ಮಾಡಿಸಿ ಅಂತ್ಯಕ್ರಿಯೆ ನೆರವೇರಿಸುತ್ತಾರೆ. ಹಾಗಾಗಿ ವಿವಾಹವು ಎಲ್ಲಾ ಸಮಾಜ, ಸಮುದಾಯಗಳಲ್ಲಿ ಕಂಡುಬರುವ ಸಾರ್ವತ್ರಿಕ ಸಂಸ್ಥೆಯಾಗಿದೆ.

**b. ಸ್ತ್ರೀ ಮತ್ತು ಪುರಷರ ನಡುವಿನ ಸಂಯೋಗ (Relationship between male and female):** ಒಬ್ಬ ವ್ಯಕ್ತಿ ಒಬ್ಬ ಸ್ತ್ರೀ ಅಥವಾ ಅನೇಕ ಸ್ತ್ರೀಯರೊಂದಿಗೆ ವಿವಾಹವಾಗುವ ಮುಂಖಾತರ ಶಾಶ್ವತ ಸಂಬಂಧವನ್ನ ಏರ್ಪಡಿಸಿಕೊಂಡಿರುವುದನ್ನು ಕಾಣಬಹುದು ಮತ್ತು ಇವರ ವೈವಾಹಿಕ ಜೀವನವು ಸುದೀರ್ಘದವರೆಗೆ ಬಾಳಿಕೆ ಬರುವಂತಹುದಾಗಿದ್ದು ಅವರ ನಡುವಿನ ಐಹಿಕ ಜೀವನಕ್ಕೆ ಅನುವು ಮಾಡಿಕೊಡುವುದೇ ವಿವಾಹ ಸಂಸ್ಕಾರವಾಗಿದೆ.

**c. ವೈವಾಹಿಕ ಜೀವನವು ಶಾಶ್ವತ ಸ್ವರೂಪದ್ದು (Marriage is durable):** ವೈವಾಹಿಕ ಸಂಬಂಧವು ಪತಿ – ಪತ್ನಿಯರ ನಡುವೆ ಹೆಚ್ಚು ಕಾಲ ಬಾಳಿಕೆ ಬರುವಂತಹುದು. ಇದು ಕೇವಲ ಲೈಂಗಿಕ ಬಯಕೆನ್ನು ಆಧರಿಸಿ ನಿಂತಿಲ್ಲ. ರೂಢಿ, ಕಾನೂನು ಮತ್ತು ಧರ್ಮದ ಮನ್ನಣೆ ಇಲ್ಲದ ವೈವಾಹಿಕ ಸಂಬಂಧವು ಸಮಾಜ ಬಾಹಿರವಾಗಿರುತ್ತದೆ. ಈ ಕಾರಣದಿಂದ ಲೈಂಗಿಕ ತೃಪ್ತಿಯ ನಂತರವು ಸಂಬಂಧವು ಶಾಶ್ವತವಾಗಿ ಮುಂದುವರೆಯುವುದು ಮತ್ತು ಮಕ್ಕಳ ಜನನ, ಲಾಲನೆ, ಪಾನೆಯ ನಂತರವು ಪತಿ – ಪತ್ನಿಯರ ಸಂಬಂಧವು ಮುಂದುವರೆಯುವುದು.

**d. ವಿವಾಹಕ್ಕೆ ಸಮಾಜದ ಮನ್ನಣೆ ಅಗತ್ಯ (Marriage requires social approval):** ಸಮಾಜದ ಒಪ್ಪಿಗೆಯ ನಂತರ ಮಾತ್ರವೇ ಸ್ತ್ರೀ ಮತ್ತು ಪುರಷರ ನಡುವಿನ ಸಂಬಂಧವನ್ನು ವಿವಾಹ ಎಂದು ಕರೆಯಲಾಗಿದ್ದು, ಲೋಕಾರೂಢಿ ಮತ್ತು ಕಾನೂನಿನ ಮೂಲಕ ಸಮಾಜವು ವಿವಾಹಕ್ಕೆ ಮನ್ನಣೆಯನ್ನು ನೀಡುವುದು. ಈ ರೀತಿಯ ಮನ್ನಣೆಯಿಂದಾಗಿ ಹುಟ್ಟಿದ ಮಕ್ಕಳ ವಂಶವಾಹಿ, ವಾರುಸುದಾರರಾಗುವಿಕೆ, ಆಸ್ತಿಯ ಹಕ್ಕುದಾರಿಗೆ ಮುಂತಾದ ಅಂಶಗಳನ್ನು ನಿರ್ಧರಿಸಲಾಗುತ್ತದೆ.

**e. ವಿವಾಹವು ಸಾಮಾಜಿಕ ಮತ್ತು ಧಾರ್ಮಿಕ ಸಂಬಂಧದೊಂದಿಗೆ ಹೆಣೆದುಕೊಂಡಿದೆ (Marriage associated with civil & religious ceremonies):** ಯಾವುದೇ ಸಮಾಜವಾದರು ಕೆಲವೊಂದು ಸಂಸ್ಕಾರಗಳು, ಪದ್ಧತಿಗಳು ಮತ್ತು ನಂಬಿಕೆಗಳನ್ನು ಒಳಗೊಂಡು ವಿವಾಹ ಸಂಸ್ಕಾರವನ್ನು ಏರ್ಪಡಿಸಲಾಗುತ್ತದೆ. ಸಾಮಾನ್ಯವಾಗಿ ಸಾರ್ವಜನಿಕವಾಗಿಯೇ ಏರ್ಪಡುವ ವಿವಾಹವು ಸಾಮಾಜಿಕ ಮತ್ತು ಧಾರ್ಮಿಕ ಸಮ್ಮತಿಯೊಂದಿಗೆ ನೇರವೆರಲ್ಪಡುತ್ತದೆ. ಆದುದರಿಂದ ಇದೊಂದು ಪವಿತ್ರ ಕರ್ತವ್ಯವೆಂದು ಭಾವಿಸಲಾಗುತ್ತದೆ.

**f. ಪರಸ್ಪರ ಹಕ್ಕು ಮತ್ತು ಭಾದ್ಯತೆಗಳ ಮನವರಿಕೆ (Marriage requires mutual responsibility):** ವಿವಾಹವು ವ್ಯಕ್ತಿಗಳಿಗೆ ಅವರ ಕರ್ತವ್ಯ ಹಾಗೂ ಹೊಣೆಗಾರಿಕೆಗಳ ಬಗ್ಗೆ ಮನವರಿಕೆ ಮಾಡಿಕೊಡುವುದು.

ಉದಾಹರಣೆಗೆ ಮಕ್ಕಳು ಮತ್ತು ಹೆಂಡತಿಯನ್ನು ಸಂಕ್ಷಿಸುವುದು ಗಂಡನ ಕರ್ತವ್ಯವಾದರೆ, ಗಂಡ ಹಾಗೂ ಮಕ್ಕಳನ್ನು ಸರಿಯಾಗಿ ನೋಡಿಕೊಳ್ಳುವುದು ಪತ್ನಿಯ ನೈತಿಕ ಹೊಣೆಗಾರಿಕೆಯಾಗಿರುತ್ತದೆ. ಮಕ್ಕಳ ಜನನ, ಲಾಲನೆ, ಪಾಲನೆ ಮತ್ತು ಪೋಷಣೆಯು ಪತಿ – ಪತ್ನಿಯರಿಬ್ಬರ ಕರ್ತವ್ಯವಾಗಿರುತ್ತದೆ. ವಯೋವೃದ್ಧರಾದ ನಂತರ ತಂದೆ – ತಾಯಿಗಳನ್ನು ಸಂರಕ್ಷಿಸುವುದು ಮಕ್ಕಳ ಹೊಣೆಗಾರಿಕೆಯಾಗಿರುತ್ತದೆ.

**ವಿವಾಹದ ಕಾರ್ಯಗಳು (Functions of marriage):-**

**a. ಲೈಂಗಿಕ ಜೀವನದ ನಿಯಂತ್ರಣ (Regulation of sex file):–** ಮಾನವನ ಲೈಂಗಿಕ ಜೀವನವನ್ನು ನಿಯಂತ್ರಿಸುವುದರಲ್ಲಿ ಅತ್ಯಂತ ಪ್ರಭಾವಶಾಲಿ ಸಾಧನವೇ ವಿವಾಹ, ಲೈಂಗಿಕಾಸಕ್ತಿಯು– ಮೂಲಭೂತ ಜೈವಿಕ ಪ್ರವೃತ್ತಿಯಾಗಿದ್ದು, ಲೈಂಗಿಕ ಅಭಿಲಾಷೆ ಮತ್ತು ತೃಪ್ತಿಯನ್ನು ಹೊಂದಲು ವಿವಾಹ ಮನ್ನಣೆಯನ್ನು ನೀಡುತ್ತದೆ. ಒಟ್ಟಾರೆ ಲೈಂಗಿಕ ಜೀವನಕ್ಕೆ ಸಂಪೂರ್ಣ ಅನುಮತಿ ಮತ್ತು ಸಾಮಾಜಿಕ ಮಾನ್ಯತೆ ನೀಡುವುದೇ ವಿವಾಹ.

**b. ವಿವಾಹವು ಲೈಂಗಿಕ ಸಂಬಂಧಗಳ ಮೇಲೆ ಇತಿಮಿತಿ ಹೇರಿದೆ (Marriage regulaties sex relations):–** ವಿವಾಹ ಎಂಬ ಸಾಮಾಜಿಕ ಸಂಸ್ಥೆ ಯಾರು? ಯಾರಿಂದ? ಲೈಂಗಿಕ ಸಂಬಂಧ ಹೊಂದಬಹುದು ಹಾಗೇ ಹೊಂದಬಾರದು ಎಂಬ ನಿಯಮವನ್ನು ಸ್ಪಷ್ಟವಾಗಿ ತಿಳಿಸಿದೆ. ಪ್ರತಿಯೊಂದು ಸಮಾಜಗಳಲ್ಲಿ ತೀರಾ ಹತ್ತಿರದ ರಕ್ತ ಸಂಬಂಧಿಗಳೊಂದಿಗೆ ಲೈಂಗಿಕ ಸಂಬಂಧಗಳನ್ನು ನಿಷೇಧಿಸಿದೆ. ಉದಾ:– ತಂದೆ–ಮಗಳು, ತಾಯಿ–ಮಗ, ಸಹೋದರ–ಸಹೋದರಿ–ನಡುವೆ ಲೈಂಗಿಕ ಸಂಬಂಧಗಳನ್ನು "ನಿಷೇದಾಜ್ಞೆ " ಎಂದು ಘೋಷಿಸಲಾಗಿದೆ. ವಿವಾಹ ವ್ಯವಸ್ಥೆ ಕೂಡ ವಿವಾಹಿತ ಪೂರ್ವ ಮತ್ತು ಬಹು–ಲೈಂಗಿಕ ಸಂಬಂಧಗಳನ್ನು ಮೇಲೆ ಸಾಕಷ್ಟು ಇತಿಮಿತಿಗಳನ್ನು ಹೇರಿದೆ.

**c. ವಿವಾಹ ಕುಟುಂಬ ಸಂರಚನೆಗೆ ವೇದಿಕೆ ನಿರ್ಮಾಣ ಮಾಡುತ್ತದೆ (Marriage leads to establishment of family):–**ವಿವಾಹ ಮತ್ತು ಕುಟುಂಬ ಪರಸ್ಪರ ಪೂರಕವಾದ ಸಂಸ್ಥೆಯಾಗಿದೆ. ವಿವಾಹದ ಲೈಂಗಿಕ ಅಭಿಲಾಷೆಯನ್ನು ಪಡೆದುಕೊಳ್ಳುತ್ತಾ ಕಾಲಕ್ರಮೇಣ ಸಂತತಿಯ ನಿರಂತರತೆಯನ್ನು ಕಾಪಾಡಿಕೊಳ್ಳಲು 'ಕುಟುಂಬ' ಸ್ಥಾಪನೆಗೊಳ್ಳುತ್ತದೆ. ಹೊಸ ಪೀಳಿಗೆ ಜನ್ಮತಾಳುತ್ತಾ ಹಾಗೂ ಬೆಳೆದಂತೆ ಕುಟುಂಬ ವ್ಯವಸ್ಥೆ ಕಾರ್ಯ ಮಗ್ನವಾಗುತ್ತದೆ. ಸಾಮಾಜಿಕ ಮನ್ನಣೆ ಪಡೆದುಕೊಂಡ ವಿವಾಹವೂ–ವಂಶಪರಂಪರೆ, ಆಸ್ತಿಯ ಹಕ್ಕು ಮತ್ತು ಉತ್ತಾರಧಿಕಾರಿಯ ಮತ್ತು ಸಾಮಾಜಿಕ ಹೊಣೆಗಾರಿಕೆಯನ್ನು ಗುರುತಿಸಿಕೊಳ್ಳುವುದಕ್ಕೆ ಅನುವು ಮಾಡಿಕೊಡುತ್ತದೆ.

**d. ಆರ್ಥಿಕ ಸಹಕಾರಕ್ಕೆ ಅವಕಾಶ ಕಲ್ಪಿಸುತ್ತದೆ (Marriage provides economic cooperation):–** ವಿವಾಹದಿಂದ ದಂಪತಿಗಳಿಗೆ ಆರ್ಥಿಕ ಹೊಣೆಗಾರಿಕೆಯು ಹೆಚ್ಚಾಗುತ್ತದೆ. ಪತಿ–ಪತ್ನಿಯರು ದೈನಂದಿನ ಜೀವನಕ್ಕೆ ಮೂಲಭೂತ ಅಗತ್ಯವಾದ ಆಹಾರ, ವಸತಿ, ಶಿಕ್ಷಣ, ಆರೋಗ್ಯ , ಮನೋರಂಜನೆ ಮತ್ತು ಭದ್ರತೆಯ ಅಗತ್ಯತೆಗಳನ್ನು ಈಡೇರಿಸಿಕೊಳ್ಳಲು ಶ್ರಮಿಸಬೇಕಾಗಿದೆ. ವಿವಾಹವು ಶ್ರಮವಿಭಜನೆಯನ್ನು ಸ್ಪಷ್ಟವಾಗಿ ನಿರೂಪಿಸುತ್ತದೆ. ವಿವಾಹಿತ ಜೋಡಿಗಳು ತಮ್ಮೊಳಗೆ ದುಡಿಮೆಯ ಮತ್ತು ಕೆಲಸ ಕಾರ್ಯಗಳ ನಿರ್ವಹಣೆಯನ್ನು ಪರಸ್ಪರ ಹಂಚಿಕೊಳ್ಳುತ್ತಾರೆ.

ಕೆಲವು ಸಮಾಜಗಳಲ್ಲಿ, ಪತಿ–ಪತ್ನಿಯರ ನಡುವೆ ಸ್ಪಷ್ಟವಾದ ಶ್ರಮವಿಭಜನೆ ಇದೆ. ಉದಾ:– ಸಂಪ್ರದಾಯಿಕ ಸಮಾಜಗಳಲ್ಲಿ ಪುರುಷರು ಮನೆಯ ಹೊರಗೆ ದುಡಿಯಬೇಕು ಅದೇ ಸ್ತ್ರೀ ಮನೆಒಳಗೆ ಗೃಹಕೃತ್ಯಗಳಲ್ಲಿ ಶ್ರಮಿಸಬೇಕು.

e. **ವಿವಾಹವೂ ಸಂಗಾತಿಗಳಿಗೆ ಭಾವನಾತ್ಮಕ ಮತ್ತು ಬೌದ್ಧಿಕ – ಉತ್ತೇಜನ ಬೆಳೆಸಿಕೊಳ್ಳಲು ಸಹಾಯಕವಾಗಿದೆ(Marriage contributes to emotional and intelectual Interstimulation of the partners):–** ವಿವಾಹ ಜೀವನ–ಸಂಗಾತಿಗಳನ್ನು ದೈಹಿಕವಾಗಿ ಹತ್ತಿರಗೊಳ್ಳುಸುವುದಲ್ಲದೆ ಪರಸ್ಪರ ತೀರಾ ಆತ್ಮೀಯ ಸಂಬಂಧಗಳನ್ನು ಬೆಳಸಿಕೊಳ್ಳಲು ಪ್ರೇರಣೆ ನೀಡುತ್ತದೆ. ಇಬ್ಬರಲ್ಲೂ ಪ್ರೀತಿ–ಪ್ರೇಮ ಮತ್ತು ಆತ್ಮೀಯತೆ ಹೊಂದಲು ಸಹಾಯಕವಾಗಿದೆ. ಇಲ್ಲಿ ಆಳವಾದ ಮತ್ತು ಶಕ್ತಿಶಾಲಿಯಾದ ಭಾವನೆಗಳು ಅಂತರಾಳದಲ್ಲಿ ಬೇರೂರಲು ಅವಕಾಶಕಲ್ಪಸುತ್ತದೆ. ಒಟ್ಟಾರೆ, ಸಂಗಾತಿಗಳು ಭಾವನಾತ್ಮಕ ಮತ್ತು ಬೌದ್ಧಿಕ ಸಹಕಾರ ಬೆಳೆಸಿಕೊಳ್ಳುತ್ತಾರೆ.

f. **ವಿವಾಹ ಸಾಮಾಜಿಕ ಐಕ್ಯತೆಯನ್ನು ತರುತ್ತದೆ (Marriage aims at social solidality):–** ವಿವಾಹವು ಕೇವಲ ಎರಡು ವಿರುದ್ಧ ಲಿಂಗಗಳನ್ನು ಮಾತ್ರ ಒಟ್ಟಿಗೆ ಸೇರುಸುವುದಿಲ್ಲ ಆದರೆ ಎರಡು ವಿಭಿನ್ನ ಕುಟುಂಬದ ಸಮೂಹಗಳ, ಹಾಗೂ ರಕ್ತ ಸಂಬಂಧಿಗಳಿಗೆ ಸಂಬಂಧಗಳನ್ನು ಬೆಳಸಿಕೊಳ್ಳಲು ಅವಕಾಶ ಕಲ್ಪಿಸುತ್ತದೆ. ಇತ್ತಿಚಿನ ದಿನಗಳಲ್ಲಿ ಎರಡು ವಿಭಿನ್ನ ಧಾರ್ಮಿಕ, ಭಾಷೆ, ವರ್ಗಗಳು, ಜನಾಂಗ ನಡುವೆ ವೈವಾಹಿಕ ಸಂಬಂಧಗಳು ಏರ್ಪಾಡಿಸಿದಾಗ–ಹೊಸ ಸಮಾಜದ ನಿರ್ಮಾಣ ಮಾಡಲು ಸಾಧ್ಯ. ಇಂತಹ ವಿವಾಹದಿಂದ ಜಾತೀಯತೆ, ಕೋಮುವಾದ, ಜನಾಂಗವಾದ, ಪ್ರಾದೇಶಿಕವಾದ ಮುಂತಾದ ಸಂಕುಚಿತ ಮನೋಭಾವನೆಗಳನ್ನು ಕಡಿಮೆ ಮಾಡಬಹುದು.

## ವಿವಾಹದ ಪ್ರಕಾರಗಳು (Types of Marriage)

ಐತಿಹಾಸಿಕ ದಾಖಲೆಗಳ ಆಧಾರವಾಗಿ ವಿವಿಧ ಸಮಾಜಗಳಲ್ಲಿ ವಿವಾಹವೆಂಬುದು ಹಲವಾರು ಪ್ರಕಾರಗಳಲ್ಲಿ ಆಚರಿಸಲ್ಪಡುತ್ತಿತ್ತು. ವೈವಾಹಿಕ ಸಂಬಂಧಗಳಿಗೆ ಪ್ರವೇಶಿಸುವ ಸಂಗಾತಿಗಳ ಸಂಖ್ಯೆಯ ಹಿನ್ನೆಲೆಯಲ್ಲಿ ವಿವಾಹವನ್ನು ಎರಡು ಪ್ರಕಾರಗಳಾಗಿ ವಿಗಂಡಿಸಲಾಗಿದೆ. (ಎ) **ಏಕ ಸಂಗಾತಿ ವಿವಾಹ** (ಬಿ) **ಬಹು ಸಂಗಾತಿ ವಿವಾಹ.**

**(ಎ) ಏಕ ಸಂಗಾತಿ ವಿವಾಹ (Monogamy) :–** ಈ ವ್ಯವಸ್ಥೆಯಲ್ಲಿ ನಿಗದಿತ ಅವಧಿಯಲ್ಲಿ ಪುರುಷನು ಸ್ತ್ರೀಯನ್ನು ಪತ್ನಿಯಾಗಿ ಅಥವಾ ಸ್ತ್ರೀಯೋರ್ವಳು ಒಬ್ಬನೇ ಪುರುಷರನ್ನು ಪತಿಯಾಗಿ ಪಡೆಯುತ್ತಾರೆ. ಏಕಸಂಗಾತಿ ವಿವಾಹ ಪದ್ಧತಿಯು ಎಲ್ಲಾ ಸಮಾಜಗಳಲ್ಲೂ ಆದರ್ಶಾತ್ಮಕ ವಿವಾಹವೆಂದು ಪರಿಗಣಿಸಲಾಗಿದ್ದು, ಪ್ರಸಕ್ತ ಸಮಾಜದಲ್ಲಿ ವಿಶೇಷ ಮಾನ್ಯತೆ ಪಡೆದಿದೆ.

ಬಹುತೇಕ ಎಲ್ಲಾ ಸಮಾಜಗಳಲ್ಲೂ, ವ್ಯಕ್ತಿ ತಮ್ಮ ಜೀವನಸಂಗಾತಿಯಿಂದ ವಿಚ್ಛೇದನ ಅಥವಾ ಮರಣ ಹೊಂದಿದ ನಂತರ ಇನ್ನೊಂದು ಬಾರಿ ವಿವಾಹವಾಗಲು ಅವರಿಗೆ ಅವಕಾಶ ಕಲ್ಪಿಸಲಾಗಿದೆ. ಆದರೆ ವ್ಯಕ್ತಿ ಒಂದೇ ಕಾಲಾವಧಿಯಲ್ಲಿ ಇಬ್ಬರು ಅಥವಾ ಅಧಿಕ ಜೀವನಸಂಗಾತಿಗಳನ್ನು ಹೊಂದಲು ಸಾಧ್ಯವಿಲ್ಲ. ಜೀವನಸಂಗಾತಿಯ ಮರಣ ಅಥವಾ ವಿವಾಹ ವಿಚ್ಛೇದನೆ ಪ್ರಕರಣ ನಂತರ ಮರುವಿವಾಹವಾಗುವ ಪದ್ಧತಿಯನ್ನು ಅನುಕ್ರಮ ಅಥವಾ ಸರಣಿ ವಿವಾಹ (**serial monogamy**) ಎಂದು ಕರೆಯುತ್ತಾರೆ.

**(ಬಿ) ಬಹು ಸಂಗಾತಿ ವಿವಾಹ (Polygamy) :–**

ಬಹುಸಂಗಾತಿ ವಿವಾಹ ಒಂದಕ್ಕಿಂತ ಹೆಚ್ಚು ಜೀವನ ಸಂಗಾತಿಗಳ ಆಯ್ಕೆಮಾಡುವ ಪದ್ದತಿಯಾಗಿದೆ. ಈ ರೀತಿಯ ವಿವಾಹದಲ್ಲಿ ಏಕಕಾಲದಲ್ಲಿ ಅಥವಾ ಕಾಲಾಂತರದಲ್ಲಿ ವ್ಯಕ್ತಿಯು ಎರಡು ಅಥವಾ ಅಧಿಕ ಜೀವನಸಂಗಾತಿಗಳನ್ನು ಪಡೆದುಕೊಳ್ಳುತ್ತಾರೆ. ಬಹುಸಂಗಾತಿ ವಿವಾಹ ಪದ್ದತಿಯನ್ನು ಎರಡು ಪ್ರಕಾರಗಳಾಗಿ ವಿಂಗಡಿಸಲಾಗಿದೆ:– ಬಹುಪತ್ನಿತ್ವ ಮತ್ತು ಬಹುಪತಿತ್ವ.

**ಬಹುಪತ್ನಿತ್ವ (Polygyny):** ಒಬ್ಬ ಪುರುಷ ಎರಡು ಅಥವಾ ಹಲವಾರು ಸ್ತ್ರೀಯರನ್ನು ವಿವಾಹವಾಗುವ ಪದ್ಧತಿಯಾಗಿದೆ.

**ಬಹುಪತಿತ್ವ (Polyandry):** ಸ್ತ್ರೀಯೋರ್ವಳು ಎರಡು ಅಥವಾ ಹಲವಾರು ಪುರುಷರನ್ನು ವಿವಾಹವಾಗುವ ಪದ್ಧತಿಯಾಗಿದೆ.

ಏಕಪತ್ನಿ ವಿವಾಹ ಬಹುತೇಕ ಎಲ್ಲಾ ಸಮಾಜಗಳಲ್ಲಿ ಸಾಮಾಜಿಕ ಮನ್ನಣೆ ಪಡೆದಿದೆ. ಆದರೆ ಬಹುಪತ್ನಿತ್ವ ಹಾಗೂ ಬಹುಪತಿತ್ವ – ಕೆಲವು ಸಮಾಜಗಳಲ್ಲಿ ಮಾತ್ರ ಸೀಮಿತವಾಗಿದೆ. ಮರ್ಡೋಕ್‌ರ ಸಂಶೋಧನೆಯಲ್ಲಿ 283 ಮಾನವ ಸಮಾಜಗಳನ್ನು ಅಧ್ಯಯನ ನೆಡಸಲಾಗಿದ್ದು ಅದರಲ್ಲಿ 193 ಸಮಾಜಗಳಲ್ಲಿ ಬಹುಪತ್ನಿತ್ವ ವಿವಾಹ, 43 ಸಮಾಜಗಳಲ್ಲಿ ಏಕಪತ್ನಿತ್ವ ಹಾಗೇ ಕೇವಲ ಎರಡು ಸಮಾಜಗಳಲ್ಲಿ ಬಹುಪತಿತ್ವ ಅಚರಿಸಲ್ಪಟ್ಟಿದೆ ಎಂದು ದೃಢಪಡಿಸಲಾಗಿದೆ.

ಬಹುಪತ್ನಿತ್ವದಲ್ಲಿ ಜೀವನಸಂಗಾತಿ ಆಯ್ಕೆಗೆ ಕೆಲವು ನಿಯಮಗಳನ್ನು ಜಾರಿಗೊಳಿಸಲಾಗಿದೆ. ಕೆಲವು ಸಮಾಜಗಳಲ್ಲಿ ಪುರುಷರು ತನ್ನ ಪತ್ನಿಯ ಸೋದರಿಯರನ್ನು ವಿವಾಹವಾಗಲು ಸಮ್ಮತಿ ನೀಡಲಾಗಿದೆ. ಅಂತಹ ವಿವಾಹವನ್ನು **ಭಗೀನಿ** ಬಹುಪತ್ನಿತ್ವ. ಎಂದು ಕರೆಯುತ್ತೇವೆ. ಪತ್ನಿಯ ಮರಣ ಅಥವಾ ಬಂಜೆತನದಿಂದ ಪುರುಷನು ಪತ್ನಿಯ ಸೋದರಿಯನ್ನು ವಿವಾಹವಾಗಲು ಅವಕಾಶ ಕಲ್ಪಿಸಲಾಗಿದೆ.

ಕೆಲಮೊಮ್ಮೆ ಪುರುಷರು ಎರಡು ಅಥವಾ ಹೆಚ್ಚಿನ ಸ್ತ್ರೀಯರನ್ನು ವಿವಾಹವಾಗುತ್ತಾರೆ. ಆದರೆ ಈ ಎಲ್ಲಾ ಪತ್ನಿಯರು ಸೋದರಿ–ಸಂಬಂಧಗಳನ್ನು ಹೊಂದಿರುವುದಿಲ್ಲ. ಇಂತಹ ಪತ್ನಿಯರು ವಿವಿಧ ಕೌಟುಂಬಿಕ, ಪ್ರಾದೇಶಿಕ, ಸಾಂಸ್ಕೃತಿಕ ಮತ್ತು ಇನ್ನಿತರ ಹಿನ್ನೆಲೆಯನ್ನು ಹೊಂದಿರುತ್ತಾರೆ. ಈ ರೀತಿಯ ವಿವಾಹವನ್ನು **"ಭಗಿನೇತರ ಬಹುಪತ್ನಿ ವಿವಾಹ" (Non sorral polygyny)** ಎಂದು ಪರಿಗಣಿಸಲಾಗಿದೆ.

ಬಹುಪತ್ನಿತ್ವ ಆಚರಣೆಯುಳ್ಳ ಸಮಾಜಗಳಲ್ಲಿ **"ಸೋದರ ಬಹುಪತಿತ್ವ" (Fraterual polyandry)** ಸರ್ವೇಸಾಮಾನ್ಯವಾಗಿ ಕಂಡುಬರುತ್ತದೆ. ಇಂತಹ ಸಮಾಜಗಳಲ್ಲಿ ಸಹೋದರರು ಸಾಮೂಹಿಕವಾಗಿ ಒಂದೇ ಸ್ತ್ರೀಯನ್ನು ವಿವಾಹವಾಗುತ್ತಾರೆ. ಈ ರೀತಿಯ ವಿವಾಹವನ್ನು ಸೋದರ ಬಹುಪತ್ನಿತ್ವ ಎಂದು ಪರಿಗಣಿಸಲಾಗಿದೆ. ಇಂತಹ ವಿವಾಹದ ಪದ್ಧತಿ ಹೆಚ್ಚಾಗಿ ನೀಲಗಿರಿಯ ತೋಡರು, ಟಿಬೇಟಿಯನ್ನರು, ಅಸ್ಸಾಂನ ಖಾಸೀ ಮತ್ತು ಗಾರೋ ಸಮುದಾಯಗಳಲ್ಲಿ ಬಹುಪತಿತ್ವ ಆಚರಣೆಯಲ್ಲಿದೆ. **"ಸೋದರೇತರ ಬಹುಪತಿತ್ವ" (Non-fraternal polyandry)** ಮತ್ತೊಂದು ಪ್ರಕಾರವಾಗಿದ್ದು, ಸ್ತ್ರೀ ಹಲವಾರು ಪತಿಗಳೊಂದಿಗೆ ಸಂಬಂಧ ಹೊಂದಿದ್ದು, ಅವರೆಲ್ಲರೂ ಸೋದರ ಸಂಬಂಧಿಗಳಾಗಿರುವುದಿಲ್ಲ. ಈ ಎಲ್ಲಾ ಪತಿಯರು ವಿಭಿನ್ನ ಕೌಟುಂಬಿಕ, ಸಾಂಸ್ರೃತಿಕ, ಪ್ರಾದೇಶಿಕ ಮತ್ತು ಇನ್ನಿತರ ಹಿನ್ನೆಲೆಯನ್ನು ಹೊಂದಿರುತ್ತಾರೆ.

ದಕ್ಷಿಣ ಭಾರತದ ಕೆಲವು ಆದಿವಾಸಿಗಳ ಸಮೂಹಗಳಲ್ಲಿ ಪತ್ನಿ–ವಿನಿಮಯ ಮತ್ತು ಪರಸ್ಪರ ಪತ್ನಿಗಳ ಹಂಚಿಕೆ ಬಗ್ಗೆ ದಾಖಲೆಗಳಿವೆ. ಕೆಲವು ಜಾತಿಗಳಲ್ಲಿ ಬಹುಪತಿತ್ವ ಆಚರಣೆ ಕಂಡುಬರುತ್ತದೆ.

## 5.2 ಕುಟುಂಬ (Family):

ಕುಟುಂಬವು – ಸಾಮಾಜಿಕ ಸಂರಚನೆಯ ಮೂಲ ಘಟಕವಾಗಿದೆ. ಕುಟುಂಬವು ವಿಶ್ವದ ಸಾರ್ವತ್ರಿಕ ಸ್ವರೂಪದ ಸಾಮಾಜಿಕ ಸಂಸ್ಥೆ ಹಾಗೂ ಮಾನವ ಸಮಾಜದ ತೀರಾ ಅಗತ್ಯವಾದ ಅಂಗವೆಂದು ಪರಿಗಣಿಸಲಾಗಿದೆ. ಈ ಸಂಸ್ಥೆಯು ಮಾನವ ಜೀವಿಗಳ ಲೈಂಗಿಕ ವರ್ತನೆಗಳನ್ನು ನಿಯಂತ್ರಿಸಲು ಮತ್ತು ಹೊಸ ತಲೆಮಾರಿನ ಲಾಲನೆ–ಪಾಲನೆ ಮತ್ತು ರಕ್ಷಣೆ ಉದ್ದೇಶವನ್ನು ಹೊಂದಿದೆ. ವಿವಾಹವು ಸಾಮಾಜಿಕ ಸಂಘಟನೆಯಾಗಿದ್ದು ಭಾವನಾತ್ಮಕ ಅಂಶಗಳಾದ ಪ್ರೀತಿ–ಪ್ರೇಮ, ವಿವಾಹ ಸಂಬಂಧಗಳು, ಮನೆ ಮತ್ತು ಸಂತಾನೋತ್ಪತ್ತಿ ಪ್ರಕ್ರಿಯನ್ನು ಅವಲಂಬಿಸಿದೆ. ಕುಟುಂಬ ವ್ಯಕ್ತಿಗಳಿಗೆ ಸಾಮಾಜಿಕ ಅಂತಸ್ತು ಮತ್ತು ಸ್ಥಾನಮಾನ ಪಡೆದುಕೊಳ್ಳುವ ಸಾಧನವಾಗಿದೆ. ಕುಟುಂಬದ ಹಿನ್ನೆಲೆಯಿಂದಲೇ ವ್ಯಕ್ತಿಯ ಅಂತಸ್ತು –ಸ್ಥಾನಮಾನದ ಪ್ರಮಾಣವನ್ನು ಗುರುತಿಸಲಾಗಿದೆ.

## ಅರ್ಥ ಮತ್ತು ವ್ಯಾಖ್ಯೆಗಳು (Meaning and definitions):

ಕುಟುಂಬದ ಅಂಗ್ಲ ಪದವಾದ **"ಫ್ಯಾಮಿಲಿ"**ಯು ಲ್ಯಾಟಿನ್ ಭಾಷೆಯ **"ಫಾಮುಲಸ್"** ಪದದಿಂದ ಬಂದಿದೆ. ಇದರ ಅರ್ಥ ಸೇವಕ ಅಥವಾ ಆಳು. ಅಂದಿನ ಪ್ರಾಚೀನ ರೋಮ್‌ನ ಕಾನೂನಿನಲ್ಲಿ (ಫ್ಯಾಮಿಲಿ) ಫಾಮುಲಸ್ ಎಂಬ ಪರಿಕಲ್ಪನೆ, ಉತ್ಪಾದಕರ ಸಮೂಹಗಳು, ಗುಲಾಮರು ಮತ್ತು ಇನ್ನಿತರ ಸೇವಕರನ್ನು ಒಳಗೊಂಡಿರುವ ಸಂಕಲನವಾಗಿದ್ದು ಈ ಸದಸ್ಯರು ಒಂದೇ ಪೀಳಿಗೆ ಅಥವಾ ವೈವಾಹಿಕ ಸಂಬಂಧ ಉಳ್ಳವರಾಗಿದ್ದರು. ಆದರೂ ವಾಸ್ತವಿಕವಾಗಿ ಕುಟುಂಬವೆಂಬುವುದು ಪುರುಷ ಮತ್ತು ಸ್ತ್ರೀ, ಪತಿ ಮತ್ತು ಪತ್ನಿಯೆಂದು ಸಾಮಾಜಿಕ ಮನ್ನಣೆ ಪಡೆದುಕೊಂಡು ತಮ್ಮ ಮಕ್ಕಳೊಡನೆ ಜೀವಿಸುವ ಸಮೂಹವಾಗಿದೆ.

ಸಾಮಾನ್ಯವಾಗಿ ಕುಟುಂಬವನ್ನು ವಿವಾಹ, ಸಾಮಾನ್ಯ ವಾಸಸ್ಥಳ, ಭಾವನಾತ್ಮಕ ಬಂಧನಗಳು ಮತ್ತು ಗೃಹಕೃತ್ಯ ಸೇವೆಗಳು, ವೈವಾಹಿಕ ಸಂಬಂಧಗಳು, ಮಾತೃ–ಪಿತೃತ್ವದ ಹಕ್ಕು–ಬಾಧ್ಯತೆಗಳು ಮತ್ತು ಕರ್ತವ್ಯಗಳು ಹಾಗೂ ಮಾತೃ–ಪಿತೃ ಮತ್ತು ಮಕ್ಕಳ ನಡುವೆಯಿರುವ ಪರಸ್ಪರ ಪೂರಕವಾದ ಸಂಬಂಧಗಳು – ಇವೆಲ್ಲಾ ಚೌಕಟ್ಟಿನ ಹಿನ್ನೆಲೆಯಲ್ಲಿ ವ್ಯಾಖ್ಯಾನಿಸಲಾಗಿದೆ. ಕೆಲವು ಸಮಾಜಶಾಸ್ತ್ರಜ್ಞರ ಪ್ರಕಾರ ಕುಟುಂಬವೆಂಬುದು – ಸಾಮಾನ್ಯ ವಾಸಸ್ಥಳ, ಆರ್ಥಿಕ ಸಹಕಾರ ಮತ್ತು ಸಂತಾನೋತ್ಪತ್ತಿಯ ಪ್ರಕ್ರಿಯೆಯ ಲಕ್ಷಣಗಳನ್ನು ಒಳಗೊಂಡಿರುವ ಸಾಮಾಜಿಕ ಸಮೂಹವಾಗಿದೆ

## ವ್ಯಾಖ್ಯೆಗಳು (Definitions)

1. **ಬರ್ಗೇಸ್ ಮತ್ತು ಲಾಕ್:** ತಮ್ಮ 'ದಿ ಫ್ಯಾಮಿಲಿ' ಎಂಬ ಗ್ರಂಥದಲ್ಲಿ ಕುಟುಂಬವು ವಿವಾಹ, ರಕ್ತ ಸಂಬಂಧ ಅಥವಾ ದತ್ತು ಸ್ವೀಕಾರದಿಂದ ಕೂಡಿದ ಒಂದು ಪ್ರಾಥಮಿಕ ಸಂಸ್ಥೆ. ಇದರ ಸದಸ್ಯರು ಒಂದು ಮನೆಯಲ್ಲಿ ವಾಸಿಸುತ್ತಾ ಗಂಡ, ಹೆಂಡತಿ ಮತ್ತು ಮಕ್ಕಳು ತಮ್ಮ ಸ್ಥಾನಗಳಿಗೆ ತಕ್ಕಂತೆ ಪಾತ್ರ ನಿರ್ವಹಿಸಿ ಸಾಮಾನ್ಯ ಸಂಸ್ಕೃತಿಯನ್ನು ಕಾಪಾಡುವುದರಲ್ಲಿ ನಿರತರಾಗಿರುತ್ತಾರೆ ಎಂದು ವಾಖ್ಯಾನಿಸಿದ್ದಾರೆ.

2. **ಆಗ್‌ಬರ್ನ್ ಮತ್ತು ನಿಮ್‌ಕಾಫ್:** ರವರು 'ಕುಟುಂಬವು ಸಾಮಾನ್ಯವಾಗಿ ಸಂತತಿ ರಹಿತ ಅಥವಾ ಸಂತತಿ ಸಹಿತ ಗಂಡ ಹೆಂಡತಿ ದೀರ್ಘಕಾಲ ಜೀವನ ಮಾಡುವ ಒಂದು ಸಮೂಹ' ಎಂದು ವಿವರಿಸಿದ್ದಾರೆ.

3. **ಮೆಕೈವರ್ ಮತ್ತು ಪೇಜ್:** ಸಂತಾನೋತ್ಪತ್ತಿ ಮಕ್ಕಳ ಲಾಲನೆ ಪಾಲನೆಯ ಉದ್ದೇಶದಿಂದ ಏರ್ಪಡುವ ಲೈಂಗಿಕ ಸಂಬಂಧಕ್ಕೆ ಸಾಮಾಜಿಕ ಮತ್ತು ಧಾರ್ಮಿಕ ಒಪ್ಪಿಗೆಯನ್ನು ಪಡೆದು ಸ್ತ್ರೀ ಪುರುಷರು ರೂಪಿಸಿಕೊಂಡ ಘಟಕವೇ ಕುಟುಂಬ.

ಕುಟುಂಬ ಎಂಬುವು ಪ್ರಾಥಮಿಕವಾಗಿ ರಕ್ತಸಂಬಂಧಿಗಳ ಘಟಕವಾಗಿದ್ದು, – ಲೈಂಗಿಕ ತೃಪ್ತಿ, ಸಂತಾನೋತ್ಪತ್ತಿ, ಆರ್ಥಿಕ ಮತ್ತು ಶೈಕ್ಷಣಿಕ ಕಾರ್ಯಗಳನ್ನು ನೆರವೇರಿಸುವ ವ್ಯವಸ್ಥೆಯಾಗಿದೆ. ಈ ವ್ಯಾಖ್ಯಾನದ ಆಧಾರವಾಗಿ ಕುಟುಂಬವೆಂಬುದು ಶಾಶ್ವತವಾದ ಪತಿ ಮತ್ತು ಪತ್ನಿ ಸಂಬಂಧಗಳ – ಮಕ್ಕಳ ಮತ್ತು ಮಕ್ಕಳರಹಿತ ಸಹವಾಸದ ಸಮೂಹವಾಗಿದೆ. ಒಟ್ಟಾರೆ ಕುಟುಂಬದ ಸದಸ್ಯರು ಒಂದು ನಿರ್ದಿಷ್ಟ ವಾಸಸ್ಥಳದಲ್ಲಿ ಒಟ್ಟಿಗೆ ನೆಲಸಿರುತ್ತಾರೆ, ತಮ್ಮ ಆರ್ಥಿಕ ಸಂಪನ್ಮೂಲವನ್ನು ಕ್ರೋಢೀಕರಿಸುತ್ತಾ, ಸಾಮೂಹಿಕವಾಗಿ ದುಡಿಯುತ್ತಾ ಮತ್ತು ಹೊಸ ಪೀಳಿಗೆಯನ್ನು ಸೃಷ್ಟಿಸುವ ಸಮೂಹವಾಗಿದೆ.

### 5.2.2. ಕುಟುಂಬದ ಗುಣಲಕ್ಷಣಗಳು (Characteristics of Family):-

#### (1) ಕುಟುಂಬವು ಸಾರ್ವತ್ರಿಕವಾದುದು (Family is universal):

ಮಾನವ ಸಮಾಜಗಳ ಅಧ್ಯಯನಗಳ ಸಮೀಕ್ಷೆಯಂತೆ – ಕುಟುಂಬವು ಪ್ರತಿಯೊಂದು ಸಮಾಜಗಳ ಶಾಶ್ವತ ಮತ್ತು ವ್ಯಾಪಕವಾಗಿ ಹರಡಿರುವ ಸಾಮಾಜಿಕ ಸಂಸ್ಥೆಯಾಗಿದೆ. ಜಿ.ಪಿ. ಮರ್ಡಕ್‌ರವರ 250 ಮಾನವ ಸಮಾಜಗಳ ಅಧ್ಯಯನದಲ್ಲಿ ಕುಟುಂಬವೆಂಬ ಸಂಸ್ಥೆ ಕಂಡುಬಂದಿದೆ. ನಾಗರಿಕ, ಸರಳ, ಆಧುನಿಕ, ಸಂಪ್ರದಾಯಿಕ, ಬರ್ಬರ ಸಮಾಜಗಳಲ್ಲೂ ಕುಟುಂಬ ಅಸ್ತಿತ್ವ ಹೊಂದಿದೆ. ಇಂತಹ ಸಂಸ್ಥೆಯಿಂದಲೇ ಮಾನವ ಸಮಾಜ ನಿರಂತರವಾಗಿ ಮುಂದುವರಿಯಲು ಹಾಗೂ ಹೊಸಪೀಳಿಗೆ ಸೃಷ್ಟಿಯಾಗಲು ಕಾರಣವಾಗಿದೆ.

#### (2) ಕುಟುಂಬವು ಜೈವಿಕ–ಅಂಶಗಳ ಆಧಾರ (Biologicial basis of Family)

ಕುಟುಂಬ ಎಂಬ ಸಾಮಾಜಿಕ ಸಂಸ್ಥೆಯನ್ನು ಜೈವಿಕ ಅಂಶಗಳ ಹಿನ್ನೆಲೆಯಲ್ಲಿ ವಿಶ್ಲೇಷಿಸಲಾಗಿದೆ. ಈ ದೃಷ್ಟಿಕೋನದ ಪ್ರಕಾರ – ಲೈಂಗಿಕ ಸಂಬಂಧಗಳ ಅಸ್ತಿತ್ವ ಮತ್ತು ಲೈಂಗಿಕ ಅಭಿಲಾಷೆಗಳೊಂದಿಗೆ ಹೊಸ ಪೀಳಿಗೆ ಅಥವಾ ಸಂತತಿಯನ್ನು ಮುಂದುವರಿಸಿಕೊಂಡು ಹೋಗುತ್ತದೆ. ಮಾನವನ ಸಹಜವಾದ ಲೈಂಗಿಕ ಬಯಕೆಗಳನ್ನು ಈಡೇರಿಸಿಕೊಳ್ಳಲು ಕುಟುಂಬವು ಸಹಕಾರಿಯಾಗಿದೆ. ಪ್ರತಿಯೊಬ್ಬ ಮಾನವನ ಜೈವಿಕ ಅಭಿಲಾಷೆಯನ್ನು ಕುಟುಂಬ ವ್ಯವಸ್ಥಿತವಾಗಿ ಈಡೇರಿಸುವ ಸಾಮರ್ಥ್ಯ ಹೊಂದಿದೆ. ಕುಟುಂಬವು ವಿವಾಹ ಎಂಬ ಸಂಸ್ಕಾರದ ಮೂಲಕ ಲೈಂಗಿಕ ತೃಪ್ತಿ ಈಡೇರಿಸಿಕೊಳ್ಳಲು ಅನುಮತಿ ನೀಡುತ್ತದೆ.

#### (3) ಸೀಮಿತ ಗಾತ್ರ (Limited size):

ಸಮಾಜದ ಪ್ರಾಥಮಿಕ ಸಮೂಹವೇ ಕುಟುಂಬವಾಗಿದೆ. ಇದು ಸೀಮಿತ ಸದಸ್ಯತ್ವ ಹೊಂದಿದ್ದು – ತಂದೆತಾಯಿ ಮತ್ತು ಅವಿವಾಹಿತವಾದ ಮಕ್ಕಳನ್ನು ಒಳಗೊಂಡಿರುತ್ತದೆ ಅಥವಾ ತಂದೆ–ತಾಯಿ ಮತ್ತು ಮಕ್ಕಳೊಂದಿಗೆ ವೈವಾಹಿಕ ಸಂಬಂಧಗಳಿಂದ ಮತ್ತು ಹೊಸಸಂತತಿಗಳಿಂದ ಸೇರ್ಪಡಿಯಾಗಿರುವ ಸದಸ್ಯರನ್ನು ಒಳಗೊಂಡಿದೆ. ಕುಟುಂಬವು ಇಂತಹ ಸೀಮಿತ ಸದಸ್ಯತ್ವವನ್ನು ಒಟ್ಟಿಗೆ ಸೇರಿಸಿರುವ ಸಂಬಂಧಗಳ ಬಲೆ. ವಿಸ್ತೃತ ಸಾಮಾಜಿಕ ಉದ್ದೇಶಗಳನ್ನು ಈಡೇರಿಸಿಕೊಳ್ಳುವ ಮತ್ತು ಭಾವನಾತ್ಮಕ ಅಂಶಗಳಾದ ಪ್ರೀತಿ–ಪ್ರೇಮ, ಪರಸ್ಪರ ಆತ್ಮೀಯತೆ ಮತ್ತು ಹಲವಾರು ಬೇಡಿಕೆಗಳನ್ನು ಈಡೇರಿಸಿಕೊಳ್ಳುವ ವ್ಯವಸ್ಥೆಯಾಗಿದೆ.

**(4) ಸಾಮಾನ್ಯ ವಾಸಸ್ಥಳ, ಮೂಲಭೂತ ಅವಶ್ಯಕತೆ ಪೂರೈಕೆ ಮತ್ತು ನಾಮಕರಣ ವ್ಯವಸ್ಥೆ (A common Residence, fullfillment of basic needs and a system of namiclature)**

ಕುಟುಂಬದ ಸದಸ್ಯರು ಸಾಮಾನ್ಯವಾಗಿ ಒಂದು ಮನೆಯಲ್ಲಿ ವಾಸಿಸುತ್ತಾರೆ. ಅದು ಸದಸ್ಯರಿಗೆ ಮೂಲಭೂತ ಅಗತ್ಯತೆಗಳಾದ ಆಹಾರ, ರಕ್ಷಣಾ, ವಸತಿ, ಶಿಕ್ಷಣವನ್ನು ಪೂರೈಸುತ್ತದೆ. ಪ್ರತಿಯೊಂದು ಕುಟುಂಬವು ಒಂದು ನಿರ್ದಿಷ್ಟ ಹೆಸರು ಅಥವಾ ಉಪನಾಮದಿಂದ ಗುರುತಿಸಲ್ಪಡುತ್ತದೆ.

ಕುಟುಂಬ ಎಲ್ಲಾ ಸಾಮಾಜಿಕ ಸಂಸ್ಥೆಗಳಿಗಿಂತ ಹೆಚ್ಚು ಶಾಶ್ವತವಾದ ಸ್ವರೂಪ ಹೊಂದಿದೆ. ಧಾರ್ಮಿಕ, ರಾಜಕೀಯ, ಆರ್ಥಿಕ, ಶೈಕ್ಷಣಿಕ, ಮನರಂಜನೆ, ಹೀಗೆ ವಿವಿಧ ಸಂಸ್ಥೆಗಳಿಗಿಂತ ಕುಟುಂಬವು ಶಾಶ್ವತವಾದ ಆಸ್ತಿತ್ವ ಹೊಂದಿದೆ ಎಂದು ಪರಿಗಣಿಸಲಾಗಿದೆ. ಕುಟುಂಬದ ಉಪಯುಕ್ತತೆಯ ಅಂಶಗಳನ್ನು ವಿಶ್ಲೇಷಿಸುತ್ತಾ ಎರಡು ವಿಭಿನ್ನ ಅಂಶಗಳ ಮೇಲೆ ಬೆಳಕು ಚೆಲ್ಲಲಾಗಿದೆ. ಅವುಗಳೆ– (1) ನವಜಾತ ಶಿಶು ಅಥವಾ ಮಗು ಕುಟುಂಬದ ಮುಂದಿನ ಭವಿಷ್ಯದ ಕೇಂದ್ರ ಬಿಂದು (2) ತಂದೆ–ತಾಯಿ ಕುಟುಂಬದ ವಂಶಪರಂಪರೆಯನ್ನು ಮುಂದುವರಿಸುವ ಆಧಾರಸ್ತಂಭ.

ಕುಟುಂಬಗಳು ಕಾಲಕ್ರಮೇಣ ವಿವಿಧ ಆಂತರಿಕ ಮತ್ತು ಬಾಹ್ಯ ಪ್ರಭಾವದಿಂದ ಭೌಗೋಳಿಕ ಪ್ರದೇಶಗಳಲ್ಲಿ ಚದುರಿದರೂ ಒಂದು ಮೂಲ ಪ್ರಾದೇಶಿಕ ಹಿನ್ನೆಲೆಯೊಂದಿಗೆ ಭಾವನಾತ್ಮಕ, ಸಾಂಸ್ಕೃತಿಕ ಮತ್ತು ಮಾನಸಿಕವಾದ ನಿಕಟ ಸಂಪರ್ಕವನ್ನು ಏರ್ಪಡಿಸಿಕೊಳ್ಳುತ್ತವೆ. ಉದಾ:– ವಿವಾಹಿತ ದಂಪತಿಗಳು ಅನಿವಾರ್ಯ ಕಾರಣಗಳಿಂದ ಎರಡು ನಗರಗಳಲ್ಲಿ ನೆಲೆಸಿರಬಹುದು ಮತ್ತು ಅವರ ಮಕ್ಕಳು ಕೂಡ ಬೇರೆ ಪ್ರದೇಶಗಳಲ್ಲಿ ಶಿಕ್ಷಣ ಅಥವಾ ಆರ್ಥಿಕ ಉದ್ದೇಶದಿಂದ ನೆಲಸಿರಬಹುದು, ಆದರೂ ಅವರೆಲ್ಲರೂ ಒಂದು ಕುಟುಂಬದ ಸದಸ್ಯರು ಎಂಬ ಮನೋಭಾವನೆ ಆಳವಾಗಿ ಬೇರೂರಿರುತ್ತದೆ.

### 5.2.3. ಕುಟುಂಬದ ಕಾರ್ಯಗಳು (Functions of family):-

ಕುಟುಂಬವು ನಿರ್ವಹಿಸುವ ಕಾರ್ಯವಿಧಾನದ ಆಧಾರದ ಮೇಲೆ ಕುಟುಂಬದ ಕಾರ್ಯಗಳನ್ನು ಎರಡು ಪ್ರಕಾರಗಳಾಗಿ ವಿಂಗಡಿಸಬಹುದು. ಅವುಗಳಾವುವೆಂದರೆ, ಪ್ರಾಥಮಿಕ ಕಾರ್ಯಗಳು ಮತ್ತು ಮಾಧ್ಯಮಿಕ ಕಾರ್ಯಗಳು

**(1) ಪ್ರಾಥಮಿಕ ಕಾರ್ಯ (Primary Functions) :–**

**(a) ಹೊಸ ಸದಸ್ಯರ ಸೇರ್ಪಡೆ ಮತ್ತು ಭೌತಿಕ ಸಂರಕ್ಷಣೆ (Reproduction and physical protection)**

ಪ್ರತಿಯೊಂದು ಸಮಾಜಗಳು ಶಾಶ್ವತವಾಗಿ ಸಂತತಿ ಆಸ್ತಿತ್ವ ಹೊಂದಬೇಕಾದರೆ ಕಾಲಾನುಗುಣವಾಗಿ ಹೊಸ ಸದಸ್ಯರಿಗೆ ಜನ್ಮ ನೀಡುವುದು ತೀರಾ ಅಗತ್ಯವಾಗಿದೆ. ಹಳೆಪೀಳಿಗೆಗಳು ಕಣ್ಮರೆಯಾದಂತೆ ಅದರ ಜಾಗಕ್ಕೆ ಹೊಸಪೀಳಿಗೆಗಳನ್ನು ಸೇರ್ಪಡಿಸಲೇಬೇಕಾಗಿದೆ. ಸಂತಾನೋತ್ಪತ್ತಿ ನಿರಂತರತೆಯಿಂದ ಸುಪ್ತವಾದ ಕಾರ್ಯಗಳನ್ನು ನಿರ್ವಹಿಸಲು ಸಾಧ್ಯವಾಗಿದೆ. ವಯೋವೃದ್ದರು ಮತ್ತು ಅನಾರೋಗ್ಯ

ಪೀಡಿತ ಸದಸ್ಯರಿಗೆ ಉತ್ತಮವಾದ ಆಹಾರ ಸೌಲಭ್ಯ ಮತ್ತು ಆರ್ಥಿಕ, ಸಾಮಾಜಿಕ ಮತ್ತು ಇನ್ನಿತರ ಆರೈಕೆಗಳನ್ನು ನೀಡುವುದು ಅಗತ್ಯವಾಗಿದೆ. ಈ ನಿಟ್ಟಿನಲ್ಲಿ ಹೊಸ ಸಂತತಿ ಹಂತ ಹಂತವಾಗಿ ಪ್ರೌಢವಯಸ್ಸು ತಲುಪಿ ಇಳಿವಯಸ್ಸಿನ ಸಮೂಹಕ್ಕೆ ಆಹಾರ ಸೌಲಭ್ಯ ಮತ್ತು ಆರೈಕೆ ಮಾಡುತ್ತಾರೆ. ಈ ರೀತಿಯ ಸಾಮಾಜಿಕ ನಿರೀಕ್ಷೆ ಎಲ್ಲಾ ಕಾಲಾವಧಿಗಳಲ್ಲಿ ಕಂಡುಬರುತ್ತದೆ. ಕುಟುಂಬವು ಮಕ್ಕಳ ಜನನ ಕಾರ್ಯಕ್ಕೆ ಮಾತ್ರ ಸೀಮಿತವಾಗಿರದೆ ಲಾಲನೆ–ಪಾಲನೆ, ವಸ್ತ್ರ ಮತ್ತು ವಸತಿ ಸೌಲಭ್ಯಗಳನ್ನು ಕಲ್ಪಿಸುವುದು, ಆರೋಗ್ಯ ಸಂರಕ್ಷಣೆ ಮುಂತಾದ ಸವಲತ್ತುಗಳನ್ನು ಪೂರೈಸುತ್ತದೆ.

### (b) ಲೈಂಗಿಕ ವರ್ತನೆಗಳ ನಿಯಂತ್ರಣ (Regulation of sexual behaviour)

ಕುಟುಂಬ ತನ್ನ ಸದಸ್ಯರ ಲೈಂಗಿಕ ವರ್ತನೆಗಳ ಮೇಲೆ ಕಟ್ಟುಪಾಡು ಹೇರಿದೆ. ಪ್ರತಿಯೊಬ್ಬ ವ್ಯಕ್ತಿಯ ಲೈಂಗಿಕ ಕ್ರಿಯೆ ಮತ್ತು ವರ್ತನೆಗಳ ದೃಷ್ಟಿಕೋನಗಳು ಕೌಟುಂಬಿಕ ಹಿನ್ನಲೆಯನ್ನು ಅವಲಂಬಿಸಿರುತ್ತದೆ. ಲೈಂಗಿಕ ಆಸಕ್ತಿಗಳನ್ನು ನಿಯಂತ್ರಿಸಲು ಸಮಾಜ ತನ್ನದೇ ಆದ ಸಾಮಾಜಿಕ ನಿಯಮಗಳನ್ನು ಒಳಗೊಂಡಿದೆ. ವ್ಯಕ್ತಿಗಳ ಲೈಂಗಿಕಕ್ರಿಯೆ ಯಾವ ರೀತಿ ಮತ್ತು ಯಾವ ಸಂಗಾತಿಯೊಂದಿಗೆ ಪಡೆದುಕೊಳ್ಳಬೇಕೆಂಬುದನ್ನು ಸಾಮಾಜಿಕ ನಿಯಮಗಳು ಸ್ಪಷ್ಟಪಡಿಸುತ್ತವೆ.

### (c) ನವಜಾತ ಶಿಶುವಿನ ಹಾಗೂ ಯುವಪೀಳಿಗೆಯ ಸಾಮಾಜೀಕರಣ (Socialization of younger generation)

ಕುಟುಂಬ ತನ್ನ ಸಮೂಹದಲ್ಲಿ ಜನಿಸಿರುವ ಮಕ್ಕಳ ಸಾಮಾಜೀಕರಣದ ಹೊಣೆಗಾರಿಕೆಯನ್ನು ನಿಭಾಯಿಸುತ್ತವೆ. ಕುಟುಂಬವು ನಿರ್ದಿಷ್ಟ ಧಾರ್ಮಿಕ, ಸಾಂಸ್ಕೃತಿಕ ಹಾಗೂ ಇನ್ನಿತರ ಹಿನ್ನೆಲೆಯ ಆಧಾರವಾಗಿ ತನ್ನ ಹೊಸ ಸದಸ್ಯರಿಗೆ ಸಾಮಾಜಿಕ ನಿಯಮಗಳನ್ನು ರೂಪಿಸಿಕೊಳ್ಳಲು ಒತ್ತಡ ಬೀರುತ್ತದೆ. ಕುಟುಂಬವೂ ಪ್ರಮುಖವಾದ ಸಂಸ್ಕೃತಿಯ ವಾಹಕವಾಗಿ ಪಾತ್ರನಿರ್ವಹಿಸಿದೆ. ಪ್ರತಿಯೊಬ್ಬ ವ್ಯಕ್ತಿಯ ಸಾಮಾಜೀಕರಣ ಪ್ರಕ್ರಿಯೆ ಆರಂಭವಾಗುವುದೇ ಕುಟುಂಬದಲ್ಲಿ ಎಂಬುವುದು ಸಾರ್ವತ್ರಿಕವಾದ ಸತ್ಯಸಂಗತಿಯಾಗಿದೆ. ಕುಟುಂಬ ಪ್ರಮುಖವಾದ ಸಾಮಾಜೀಕರಣದ ನಿಯೋಗಿಯಾಗಿ ಕಾರ್ಯನಿರ್ವಹಿಸುತ್ತಾ ವ್ಯಕ್ತಿಯು ವಿಸ್ತೃತ ಸಮಾಜದಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಾ ಮತ್ತು ಸಮಾಜದ ನಿರೀಕ್ಷಿತ ಪಾತ್ರವನ್ನು ನಿರ್ವಹಿಸುವಂತೆ ರೂಪಿಸುತ್ತದೆ. ಒಟ್ಟಾರೆ ಮುಂದಿನ ಭವಿಷ್ಯದಲ್ಲಿ ಉತ್ತಮವಾದ ನಾಗರಿಕರಾಗಿ ಜೀವಿಸಲು ಅನುವು ಮಾಡಿಕೊಡುತ್ತದೆ. ಕೆಲವು ಸಮಾಜಶಾಸ್ತ್ರಜ್ಞರು ಸಾಮಾಜೀಕರಣವೆಂದರೆ, ಸಾಮಾಜಿಕ ಪಾತ್ರಗಳ ಮತ್ತು ಅಂತರ್ಗತಗೊಳಿಸಿಕೊಳ್ಳುವ ಪ್ರಕ್ರಿಯೆ ಎಂದಿದ್ದಾರೆ.

### (d) ಅಂತಸ್ತಿನ ವರ್ಗಾವಣೆ (Status transmission)

ವ್ಯಕ್ತಿಯು ಯಾವ ಕುಟುಂಬದಲ್ಲಿ ಜನ್ಮ ತಾಳಿದ್ದಾನೆ ಎಂಬ ಆಧಾರವಾಗಿ ಅವನು ಅಂತಸ್ತನ್ನು ಪಡೆದುಕೊಳ್ಳವುದು ಸಾಮಾನ್ಯ. ತಂದೆ–ತಾಯಿಯ ಅಂತಸ್ತು ನವಜಾತ ಮಗುವಿಗೆ ಸಹಜವಾಗಿ ವರ್ಗಾವಣೆಯಾಗುತ್ತದೆ. ಉದಾ:– ತಂದೆ–ತಾಯಿ ಶ್ರೀಮಂತ ವರ್ಗದವರಾಗಿದ್ದರೆ ಅಥವಾ ಶಿಕ್ಷಣದ ಪ್ರಭಾವ, ಪ್ರತಿಷ್ಠಿತ ವೃತ್ತಿ ಮತ್ತು ಉತ್ತಮ ಕುಟುಂಬದಲ್ಲಿ ಜನಿಸುವ ಮಕ್ಕಳು ಜೀವನಪರ್ಯಂತ ಉನ್ನತ ಅಂತಸ್ತನ್ನು ಅನುಭವಿಸುತ್ತಾರೆ. ಈ ನಿಟ್ಟಿನಲ್ಲಿ ಮಕ್ಕಳು ತಮ್ಮ ಕುಟುಂಬದ ಪ್ರವೃತ್ತಿ, ನಂಬಿಕೆ

ಆಚಾರ–ವಿಚಾರ ಹಾಗೂ ಮನೋಭಾವನೆಗಳನ್ನು ತಮ್ಮ ವ್ಯಕ್ತಿತ್ವದಲ್ಲಿ ರೂಡಿಸಿಕೊಳ್ಳುತ್ತಾರೆ. ಹಾಗೂ ಇನ್ನಿತರ ಸಮೂಹದ ಜನರು–ತಂದೆತಾಯಿಗಳ ಭವ್ಯ ಪರಂಪರೆಯನ್ನು ಮುಂದುವರಿಸಿಕೊಂಡು ಹೋಗಲು ಹೊಸ ಪೀಳಿಗೆಗೆ ವಿಶೇಷ ಮಾನ್ಯತೆ ನೀಡುತ್ತಾರೆ, ಅಂತಿಮವಾಗಿ, ಕುಟುಂಬವೂ ಸಂಸ್ಕೃತಿಯ ವಾಹಕವಾಗಿ ಪಾತ್ರ ನಿರ್ವಹಿಸುತ್ತಾ ತನ್ನ ಸದದ್ಯರಿಗೆ "ಅರೋಪಿತ ಅಂತಸ್ತು" ಕಲ್ಪಿಸುವ ಸಾಮರ್ಥ್ಯ ಹೊಂದಿದೆ.

### (e) ಭಾವನಾತ್ಮಕ ಬೆಂಬಲ (Emotional support)

ಕುಟುಂಬ ಪ್ರಾಥಮಿಕ ಸಂಸ್ಥೆಯಾಗಿ ಕಾರ್ಯನಿರ್ವಹಿಸುತ್ತಾ ತನ್ನ ಸದಸ್ಯರಿಗೆ ಪ್ರೀತಿ–ಪ್ರೇಮ ಆತ್ಮೀಯತೆಯನ್ನು ಕಲ್ಪಿಸುತ್ತದೆ. ಕುಟುಂಬ ಭಾವನಾತ್ಮಕ ಅಂಶಗಳ ಕೇಂದ್ರವಾಗಿದೆ. ಪ್ರೀತಿ–ಪ್ರೇಮ, ಸಹಕಾರ ಮನೋಭಾವ, ಮಮತೆ–ವಾತ್ಸಲ್ಯ ಮುಂತಾದಗಳನ್ನು ಸದಸ್ಯರು ಹಂಚಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ. ಇಂತಹ ಭಾವನಾತ್ಮಕ ಭಾವನೆಗಳ ಹೆಚ್ಚು ಪ್ರಕಟಿತ ರೂಪವಾಗಿ ಗೋಚರವಾಗುತ್ತದೆ ಇದರಿಂದ ಮಾನಸಿಕ ತೃಪ್ತಿ ಅನುಭವಿಸಲು ಸಾಧ್ಯ

### (f) ಅಪೇಕ್ಷಿತ ತೃಪ್ತಿಯನ್ನು ಪೂರೈಸುವ ಕಾರ್ಯ (Wish fulfilment function)

ಪ್ರತಿಯೊಂದು ಸಾಮಾಜಿಕ ಸಂಸ್ಥೆಗಳಿಂದ ಸದಸ್ಯರು ನಿರ್ದಿಷ್ಟ ಬಯಕೆಯ ಈಡೇರಿಕೆಗಳನ್ನು ಅಪೇಕ್ಷಿಸುತ್ತಾರೆ. ಉದಾ:– ರಾಜಕೀಯ ವ್ಯವಸ್ಥೆಯಿಂದ ನಾಗರಿಕರ ಸಂರಕ್ಷಣೆ ಮತ್ತು ಸಮಾನತೆಯ ಜೀವನ ಶೈಲಿ ಆರ್ಥಿಕ ವ್ಯವಸ್ಥೆಯಿಂದ – ಮೂಲಭೂತ ಅಗತ್ಯತೆಗಳಾದ ಆಹಾರ, ವಸತಿ, ಶಿಕ್ಷಣ, ಆರೋಗ್ಯ. ಧರ್ಮವು ಆಧ್ಯಾತ್ಮಿಕ ಭಾವನೆ ಬೆಳೆಸಿ ಜೀವನದ ಕಷ್ಟ ಸಂಗತಿಯಲ್ಲಿ ಆತ್ಮವಿಶ್ವಾಸ ಗಳಿಸಿಕೊಡುವುದು. ಮನರಂಜನೆ – ಮಾನಸಿಕ ಸಂತೃಪ್ತಿ ಮತ್ತು ವಿರಾಮ ವೇಳೆಯ ಸದುಪಯೋಗ ಮುಂತಾದವುಗಳನ್ನು ಈಡೇರಿಸುವುದು. ಹೀಗೆ ಕುಟುಂಬ ತನ್ನ ಸದಸ್ಯರಿಗೆ ಸಮಗ್ರ ಅಪೇಕ್ಷಿತ ಹಂಬಲಗಳಲ್ಲಿ ಈಡೇರಿಸುವ ಸಾಧನವಾಗಿದೆ.

## 2. ಮಾಧ್ಯಮಿಕ ಕಾರ್ಯಗಳು (Secondary functions)

### (a) ಆರ್ಥಿಕ ಕಾರ್ಯ (Economic function):–

ಪ್ರಾಚೀನ ಮತ್ತು ಮಧ್ಯಕಾಲೀನ ಯುಗದವರೆಗೂ – ಕುಟುಂಬವು ಉತ್ಪಾದನೆ ಮತ್ತು ಅನುಭೋಗ ಚಟುವಟಿಕೆಗಳ ಕೇಂದ್ರಬಿಂದುವಾಗಿತ್ತು. ಆದರೆ, ಇಂದಿನ ಯುಗದಲ್ಲಿ ಬಹುತೇಕ ಕುಟುಂಬಗಳು ಅದಾಯ ಸಂಪಾದಿಸುವ ವ್ಯವಸ್ಥೆಯಾಗಿದೆ. ಈ ನಿಟ್ಟಿನಲ್ಲಿ ಹೊರಗೆ ದುಡಿಯುವ ಸನ್ನಿವೇಶಗಳು ಸೃಷ್ಟಿಯಾಗಿವೆ. ಈ ಎಲ್ಲಾ ಬೆಳವಣಿಗೆಯಿಂದ ಕುಟುಂಬಗಳು ಗ್ರಾಹಕರ ಸಮೂಹಗಳಾಗಿ ಮಾರ್ಪಟ್ಟಿವೆ. ಮಾರುಕಟ್ಟೆಯಲ್ಲಿ ಲಭ್ಯವಾಗುವ ವಸ್ತು ಮತ್ತು ಸೇವೆಗಳನ್ನು ಪಡೆದುಕೊಳ್ಳುವುದೇ ಕುಟುಂಬದ ಮತ್ತೊಂದು ಕಾರ್ಯವಾಗಿದೆ. ಆದಾಯ ಸೃಷ್ಟಿಯಾದಂತೆ ವಿವಿದ ವಲಯಗಳಲ್ಲಿ ಕುಟುಂಬದ ಸದಸ್ಯರು ದುಡಿಯುತ್ತಾರೆ.

### (b) ಶೈಕ್ಷಣಿಕ ಕಾರ್ಯ (Educational function):–

ಇಂದಿನ ಆಧುನಿಕ ಯುಗದಲ್ಲಿ ನವಜಾತಶಿಶು ಮತ್ತು ಮಕ್ಕಳು ಶಾಲೆ ಮತ್ತು ಕಾಲೇಜುಗಳಲ್ಲಿ ಮೂಲಭೂತವಾದ

ಕಲೆ ಮತ್ತು ಪ್ರತಿಭೆಗಳನ್ನು ಕಲಿತುಕೊಳ್ಳುತ್ತಾರೆ. ಹಾಗೆಯೇ ಕುಟುಂಬದಲ್ಲಿ ಮಾತೃಭಾಷೆ ಮತ್ತು ಸಂಪ್ರಾದಾಯಿಕ ಕಲೆಗಳನ್ನು ಕಲಿಯುತ್ತಾರೆ. ಇಂದಿಗೂ ಬಹುತೇಕ ಸಾಂಪ್ರದಾಯಿಕ ಕುಟುಂಬಗಳು ತಮ್ಮದೇ ಆದ ವಂಶಪಾರಂಪರ್ಯ ವೃತ್ತಿಗಳನ್ನು ತಮ್ಮ ಮುಂದಿನ ಪೀಳಿಗೆಗೆ ವರ್ಗಾಯಿಸುತ್ತವೆ.

### (c) ಧಾರ್ಮಿಕ ಕಾರ್ಯ(Religious function):–

ಕುಟುಂಬ ಧರ್ಮದ ಬಗ್ಗೆ ಅರಿವು ಮೂಡಿಸುವ ಕೇಂದ್ರವಾಗಿದೆ. ನವಜಾತಶಿಶು ತನ್ನ ಬಾಲ್ಯಾವಸ್ಥೆಯಲ್ಲಿ ಧಾರ್ಮಿಕ–ನಿಷ್ಠೆ ಮತ್ತು ಶಿಸ್ತು ಬೆಳೆಸಿಕೊಳ್ಳಲು ಪ್ರಮುಖವಾದ ಪಾತ್ರ ನಿರ್ವಹಿಸುತ್ತದೆ. ತಂದೆ–ತಾಯಿ ಮತ್ತು ಹಿರಿಯರು ನವಜಾತಶಿಶು ಮತ್ತು ಮಕ್ಕಳ ವ್ಯಕ್ತಿತ್ವದಲ್ಲಿ ಧಾರ್ಮಿಕ ಮನೋಭಾವನೆಗಳನ್ನು ಮೈಗೂಡಿಸಿಕೊಳ್ಳಲು ಒತ್ತಡ ಬೀರುತ್ತಾರೆ. ಧಾರ್ಮಿಕ ಕಾರ್ಯಗಳಾದ ಆರಾಧನೆ, ಕ್ರಿಯಾವಿಧಿಗಳು ಹಬ್ಬಹರಿದಿನಗಳು, ಜಾತ್ರೆ ಸಂಭ್ರಮ ಮುಂತಾದಗಳನ್ನು ಕಾಲಾನುಗುಣವಾಗಿ ಆಚರಿಸುತ್ತಾ ಮಕ್ಕಳಲ್ಲಿ ಧಾರ್ಮಿಕ ಭಾವನೆಗಳು ಬೇರೂರುವಂತೆ ಮಾಡುತ್ತದೆ.

### (d) ಮನೋರಂಜನೆ ಕಾರ್ಯಗಳು (Recreational function)

ಮನೆಯು ಎಲ್ಲಾ ಮನೋರಂಜನೆಗಳ ಕೇಂದ್ರಬಿಂದು. ಸಂಸ್ಕೃತಿಯು ಕುಟುಂಬದ ಸದಸ್ಯರಿಗೆ ಮನೋರಂಜನೆಯ ರಸದೌತಣವನ್ನು ನೀಡುತ್ತದೆ ಹಬ್ಬ–ಹರಿದಿನಗಳ ಆಚರಣೆ, ವಿವಾಹ ಸಮಾರಂಭ, ಧಾರ್ಮಿಕ ಕ್ರಿಯಾವಿಧಿಗಳು ಕುಟುಂಬದೊಳಗೆ ಸಂತಸ–ಸಂಭ್ರಮವನ್ನು ನೀಡುತ್ತವೆ.

ಕುಟುಂಬವು ನಾಗರಿಕ ಸದ್ಗುಣಗಳ ಪಾಠಶಾಲೆಯಾಗಿ ಕಾರ್ಯನಿರ್ವಹಿಸುತ್ತದೆ. ವ್ಯಕ್ತಿತ್ವದಲ್ಲಿ ಪ್ರೀತಿ–ಪ್ರೇಮ, ಸಹಕಾರ ಮನೋಭಾವನೆ, ಸಹನೆ, ತ್ಯಾಗ ವಿಧೇಯತೆ ಮತ್ತು ಶಿಸ್ತು – ಇವೆಲ್ಲಾ ಗುಣಗಳು ಕುಟುಂಬದಿಂದಲೇ ವಿಕಾಸಗೊಳ್ಳುತ್ತವೆ. ಈ ಕಾರಣದಿಂದ ಕುಟುಂಬವನ್ನು ನಾಗರಿಕ ಸದ್ಗುಣಗಳ ತೊಟ್ಟಿಲು ಎಂದು ಪರಿಗಣಿಸಲಾಗಿದೆ ಮತ್ತು ಹೊಸ ಪೀಳಿಗೆಗೆ ಸಾಮಾಜಿಕ ಅರಿವುವನ್ನು ಮೂಡಿಸುತ್ತದೆ. ಕುಟುಂಬವು ತನ್ನ ಸದಸ್ಯರ ಸ್ವಯಂ–ನಿಯಂತ್ರಣ ಸಾಮರ್ಥ್ಯತೆಯನ್ನು ಬೆಳೆಸುತ್ತದೆ. ಇದರ ಪ್ರಭಾವದಿಂದ ಸಮಾಜದಲ್ಲಿ ಶಾಂತಿ ಸುವ್ಯವಸ್ಥೆ ಕಾಪಾಡಿಕೊಳ್ಳಲು ಸಾಧ್ಯವಾಗಿದೆ. ಸದಸ್ಯರ ವ್ಯಕ್ತಿತ್ವ ಮೈಗೊಡಿಸಿಕೊಳ್ಳಲು ಒತ್ತಡ ಹೇರುತ್ತದೆ.

### (e) ಸಂಸ್ಥೆಗಳ ಆಂತರಿಕ ಸಂಪರ್ಕ (Inter Institutional Linkage)

ಪ್ರತಿಯೊಂದು ಶಿಶುವು ತನ್ನ ಸಮೂಹದ ಸಾಮಾಜಿಕ ಜೀವನದಲ್ಲಿ ಸಕ್ರಿಯವಾಗಿ ಭಾಗವಹಿಸುತ್ತದೆ. ಈ ರೀತಿ ಭಾಗವಹಿಸಲು ಕುಟುಂಬವು ಸಮಗ್ರ ಮಾಹಿತಿ ಮತ್ತು ಸಲಹೆಗಳನ್ನು ನೀಡುವುದು. ಕುಟುಂಬ ತನ್ನ ನವಜಾತಶಿಶು ಸದಸ್ಯರಿಗೆ ವಿವಿಧ ಸಂಸ್ಥೆಗಳಾದ ಧರ್ಮ, ಶಿಕ್ಷಣ, ಆರ್ಥಿಕ, ರಾಜಕೀಯ, ಕಾನೂನು ಮತ್ತು ಮನೋರಂಜನೆ ಮುಂತಾದವುಗಳಲ್ಲಿ ಭಾಗವಹಿಸುವುದರ ಬಗ್ಗೆ ಮಾರ್ಗದರ್ಶನ ನೀಡುತ್ತದೆ.

ಕುಟುಂಬ ತನ್ನ ಸದಸ್ಯರು ನಿರ್ವಹಿಸಬೇಕಾದ ಸಾಮಾಜಿಕ ಪಾತ್ರಗಳ ಬಗ್ಗೆ ಮಾರ್ಗದರ್ಶನವನ್ನು ನೀಡುತ್ತದೆ ಹಾಗೂ ಸಮೂಹದಲ್ಲಿ ವಿಶಿಷ್ಟ ಆಂತಸ್ತು ಮತ್ತು ಸ್ಥಾನಮಾನ ಹೊಂದಲು ಸಹಾಯಕವಾಗಿದೆ. ಹಾಗೆಯೇ ವಿವಿಧ ಸನ್ನಿವೇಶಗಳಲ್ಲಿ ನಾನಾರೀತಿ ಪಾತ್ರ ನಿರ್ವಹಿಸಲು ಸಹಕಾರಿಯಾಗಿದೆ.

ಉದಾ:–ವಿದ್ಯಾರ್ಥಿ, ಗ್ರಾಹಕ, ಭಕ್ತ, ಪ್ರೇಕ್ಷಕ, ರೋಗಿ, ಕಾರ್ಮಿಕ, ಮುಂತಾದಗಳ ಪಾತ್ರ ನಿರ್ವಹಣೆಯ ಬಗ್ಗೆ ಅರಿವು ಮೂಡಿಸುತ್ತದೆ.

### 5.2.4. ಕುಟುಂಬದ ಪ್ರಕಾರಗಳು : (Types of family)

(ಎ) ಅಣು ಕುಟುಂಬ (Nuclear family)

(ಬಿ) ಅವಿಭಕ್ತ ಕುಟುಂಬ (Joint family)

**(ಎ) ಅಣು ಕುಟುಂಬ:** ತೀರಾ ಚಿಕ್ಕ ಸಮೂಹವಾಗಿದ್ದು ಮತ್ತು ಸೀಮಿತ ಸದಸ್ಯತ್ವವನ್ನು ಹೊಂದಿರುತ್ತದೆ. ಈ ಸಮೂಹವು ತಂದೆ – ತಾಯಿ ಮತ್ತು ಅವಿವಾಹಿತ ಮಕ್ಕಳನ್ನು ಒಳಗೊಂಡಿರುತ್ತದೆ. ಮಕ್ಕಳು ವಿವಾಹದ ನಂತರ ಮನೆಯನ್ನು ತೊರೆದು ತಮ್ಮದೇ ಆದ ಹೊಸ ಮನೆಯಲ್ಲಿ ವಾಸಿಸುತ್ತಾರೆ.

ಅಣು ಕುಟುಂಬಗಳು ಸಂಪೂರ್ಣ ಸ್ವಯಂ ಅಧಿಕಾರಯುಕ್ತ ಘಟಕವಾಗಿದ್ದು ಅವಿಭಕ್ತ ಕುಟುಂಬದ ಸದಸ್ಯರ ನಿಯಂತ್ರಣದಿಂದ ಮುಕ್ತವಾಗಿರುತ್ತವೆ. ನವವಿವಾಹಿತ ದಂಪತಿಗಳು ತಮ್ಮದೇ ಆದ ಪ್ರತ್ಯೇಕ ವಾಸಸ್ಥಳವನ್ನು ನಿರ್ಮಿಸಿಕೊಳ್ಳುತ್ತಾರೆ. ಇದರಿಂದ ತಂದೆ–ತಾಯಿ ಮತ್ತು ಇನ್ನಿತರ ಸಂಬಂಧಗಳಿಂದ ಭೌಗೋಳಿಕ ಅಂತರವೂ ಏರ್ಪಾಡಾಗುತ್ತದೆ. ಕುಟುಂಬ ಸ್ವಾವಲಂಬನೆ ಕ್ಷೀಣಿಸುತ್ತಾ ಅಂತರಿಕ ಅವಲಂಬನೆ ಹೆಚ್ಚಾಗುತ್ತದೆ. ಇದಕ್ಕೆ ಉತ್ತಮ ನಿದರ್ಶನ ಅಮೆರಿಕಾದ ಕೇಂದ್ರೀಕೃತ ಕುಟುಂಬಗಳು.

**(ಬಿ)ಅವಿಭಕ್ತ ಕುಟುಂಬ:** ಹಲವಾರು ಅಣು ಕುಟುಂಬಗಳ ಸಮನ್ವಯದ ಪ್ರತಿಫಲವೆಂದು ಪರಿಗಣಿಸಲಾಗಿದೆ. ಇಂತಹ ಅವಿಭಕ್ತ ಕುಟುಂಬವು ವಯೋವೃದ್ಧ ತಂದೆ–ತಾಯಿ, ಅವರ ಮಕ್ಕಳು, ಸೊಸೆಯಂದಿರು ಮತ್ತು ಮೊಮಕ್ಕಳನ್ನು ಹೊಂದಿರುತ್ತದೆ. ಕೆಲವೊಮ್ಮೆ ಎರಡು ಅಥವಾ ಮೂರು ನವದಂಪತಿಗಳ ಅಣು ಕುಟುಂಬಗಳು ಒಟ್ಟಿಗೆ ಸಹಬಾಳ್ವೆ ನಡೆಸುತ್ತಾ ಅವಿಭಕ್ತ ಕುಟುಂಬಗಳು ರೂಪುಗೊಳ್ಳುತ್ತದೆ. ಅವಿಭಕ್ತ ಕುಟುಂಬಗಳಲ್ಲಿ ರಕ್ತ ಸಂಬಂಧಿ ಸಮೂಹಗಳು ವಾಸಿಸುತ್ತಾರೆ ಅಥವಾ ಹಲವಾರು ಮನೆಗಳ ಸಂಕಲನಗಳು ಒಂದೇ ವಠಾರದಲ್ಲಿ ನೆಲಸಿರುತ್ತಾರೆ. ಉದಾ:– ಹಿಂದೂ ಅವಿಭಕ್ತ ಕುಟುಂಬ.

### 5.3. ಧರ್ಮ (Religion):

### ಅರ್ಥ ಮತ್ತು ವ್ಯಾಖ್ಯೆಗಳು: (Meaning and Definition):-

ಧರ್ಮವು ಮಾನವನ ಬದುಕಿನ ಎಲ್ಲಾ ಸ್ಥರಗಳನ್ನು ಅಂದರೆ ಹುಟ್ಟಿನಿಂದ ಸಾವಿನವರೆಗೆ, ಹಲವಾರು ನಂಬಿಕೆಗಳನ್ನು, ಪದ್ಧತಿಗಳನ್ನು, ನೈತಿಕ ವಿಧಿವಿಧಾನಗಳನ್ನು ಒಳಗೊಂಡಿದೆ. ಧರ್ಮವು ಜೀವನದ ಗುರಿಯನ್ನು ಮತ್ತು ಅದರ ಅರ್ಥವನ್ನು ತಿಳಿಸುತ್ತದೆ, ಸಾಮಾಜೀಕರಣದ ಹಂತದಲ್ಲಿ ಮತ್ತು ಸಾಮಾಜಿಕ ನಿಯಂತ್ರಣದ ಮೇಲೆ ಧರ್ಮದ ಪ್ರಭಾವ ಅಪಾರ.

1. **ಡರ್ಕೈಮ್**‌ರವರ ಪ್ರಕಾರ "ಪ್ರತ್ಯೇಕವಾಗಿರಿಸಿದ ಮತ್ತು ನಿಷೇಧಿಸಲ್ಪಡುವ ಪವಿತ್ರವಸ್ತುಗಳಿಗೆ ಸಂಬಂಧಿಸಿದ ಮಾನವನ ನಂಬಿಕೆ ಮತ್ತು ಆಚರಣೆಗಳ ಒಟ್ಟು ವ್ಯವಸ್ಥೆಯಾಗಿದೆ".
2. **ಜೇಮ್ಸ್ ಜಿ ಫ್ರೇಜರ್**‌ರವರ ಪ್ರಕಾರ "ಮಾನವನಿಗಿಂತಲೂ ಶ್ರೇಷ್ಠವಾದ ಶಕ್ತಿಯು ನಿಸರ್ಗದ ಮತ್ತು ಮಾನವ ಜೀವನದ ಆಗು ಹೋಗುಗಳನ್ನು ನಿರ್ದೇಶಿಸುವ ಮತ್ತು ನಿಯಂತ್ರಿಸುವ ನಂಬಿಕೆಯೇ ಧರ್ಮ"

3. **ಸಿಂಗರ್**(1957)ರವರ ಧರ್ಮ ಸಮಾಜ ಮತ್ತು ವ್ಯಕ್ತಿ ಎಂಬ ಪುಸ್ತಕದಲ್ಲಿ 'ಧರ್ಮವು ಜನರ ಗುಂಪನ್ನು ಒಳಗೊಂಡಿರುತ್ತದೆ ಮತ್ತು ಅವರು ಹಂಚಿಕೊಂಡಿರುವುದನ್ನು ನಂಬಿಕೆ ಹಾಗೂ ಪದ್ಧತಿಯು ಒಳಗೊಂಡಿರುತ್ತದೆ. ಪ್ರತಿ ಧರ್ಮವು ಸಾಮೂಹಿಕ ಆರಾಧನೆ, ಹಬ್ಬ ಹರಿದಿನಗಳು ಮತ್ತು ಧಾರ್ಮಿಕ ಸಂಸ್ಕಾರಗಳಿಂದ ಜನರನ್ನು ಒಟ್ಟುಗೂಡಿಸುತ್ತದೆ ಎಂದಿದ್ದಾರೆ'.

## ಧರ್ಮದ ಮೂಲಾಂಶಗಳು (Elements of Religion):-

**ಧರ್ಮವು ಈ ಕೆಳಕಂಡ ಮೂಲಾಂಶಗಳನ್ನು ಒಳಗೊಂಡಿದೆ:**

### a. ಧರ್ಮವು ಅಲೌಕಿಕ ಶಕ್ತಿ ಮತ್ತು ಪವಿತ್ರ ಸಂಗತಿಗಳನ್ನು ಒಳಗೊಂಡಿದೆ (Religion is supernatural and the sacred)

ಸಾಮಾನ್ಯವಾಗಿ ಎಲ್ಲಾ ಧರ್ಮಗಳ ಮೂಲ ಕಲ್ಪನೆ ಅಲೌಕಿಕವಾದುದು. ಇದು ನಮ್ಮ ಭೌತಿಕ ಅನುಭವಕ್ಕೆ ನಿಲುಕದ ಅಮೂರ್ತ ಕಲ್ಪನೆಯಾಗಿದ್ದು, ಅತಿಮಾನುಷ ಶಕ್ತಿಯುಳ್ಳದ್ದಾಗಿದೆ. ಅದು **"ಸರ್ವಶಕ್ತವು" "ಅನಂತವು"** ಅಥವಾ ಅಸಾಮಾನ್ಯವಾದುದು. ಇ.ಬಿ. ಟೈಲರ್‌ರವರ ಪ್ರಕಾರ ಅಲೌಕಿಕ ಶಕ್ತಿಯ ಮೇಲಿನ ನಂಬಿಕೆಯನ್ನು ಧರ್ಮವೆನ್ನಲಾಗುವುದು. ಅಲೌಕಿಕ ಶಕ್ತಿಯ ನಂಬಿಕೆಯಲ್ಲಿ ಇತರೆ ಶಕ್ತಿಯು ಒಳಗೊಂಡಿದೆ, ಅಂದರೆ ಮಂತ್ರಶಕ್ತಿ, ದೇವತೆಗಳು ಅಥವಾ ಸತ್ತ ಪೂರ್ವಜರ ಆತ್ಮವನ್ನು ಒಳಗೊಂಡಿರುತ್ತದೆ. ಅಲೌಕಿಕ ಶಕ್ತಿಯ ಮೇಲೆ ನಂಬಿಕೆವುಳ್ಳವರು ಅವುಗಳ ಶಕ್ತಿಗೆ ಅನುಸಾರವಾಗಿ ಅಥವಾ ಅವರುಗಳು ಅಲೌಕಿಕ ಶಕ್ತಿಯ ಮಾಡುವ ಕಾರ್ಯಗಳ ಮೇಲೆ ಅವುಗಳನ್ನು ವಿಂಗಡಿಸಿದ್ದಾರೆ. ಬ್ರಹ್ಮ, ವಿಷ್ಣು ಮತ್ತು ಶಿವ, ಈ ಮೂರು ಹಿಂದೂ ದೇವರುಗಳು ಬ್ರಹ್ಮಾಂಡದ ಸೃಷ್ಟಿ, ಅದರ ನಿರ್ವಹಣೆ ಮತ್ತು ನಾಶ ಮಾಡುವ ಕಾರ್ಯಗಳನ್ನು ಅನುಕ್ರಮವಾಗಿ ನಡೆಸುತ್ತವೆ ಎಂದು ಹೇಳುವುದು ಒಂದು ಆಸಕ್ತಿದಾಯಕ ವಿಷಯವಾಗಿದೆ. ಅಲೌಕಿಕ ಶಕ್ತಿಯಲ್ಲೂ ಹಲವಾರು ವಿಧಗಳಿವೆ. ಉದಾಹರಣೆಗೆ ದೆವ್ವ, ದುಷ್ಟ ಶಕ್ತಿಗಳು ಇತ್ಯಾದಿ., ಯಾವುದನ್ನು ನಾವು "ದುಷ್ಟ" ಎಂದು ಕರೆಯುವೆವೋ ಅವುಗಳು ಕೂಡಾ ಶಕ್ತಿಶಾಲಿಗಳು.

ಕೆಲವು ವಿದ್ವಾಂಸರ ಪ್ರಕಾರ ಪವಿತ್ರತೆ ಮತ್ತು ಅಪವಿತ್ರತೆಗಳ ನಡುವೆ ನಿರ್ದಿಷ್ಟವಾದ ವ್ಯತ್ಯಸವಿದೆ. ಪವಿತ್ರತೆಯ ವಿರುದ್ಧ ಅಪವಿತ್ರತೆ ಲೌಕಿಕದ ವಿರುದ್ಧ ಅಲೌಕಿಕ, ಅಸಾಮಾನ್ಯದ ವಿರುದ್ಧ ಸಾಮಾನ್ಯ ಎಂಬ ವ್ಯತ್ಯಾಸಗಳಿವೆ ಎಂದು ತಿಳಿಸಿದ್ದಾರೆ. ಎಮಿಲಿ ಡರ್ಖೈಮ್‌ರವರ ಹೇಳಿಕೆಯಂತೆ (1912) ಪವಿತ್ರತೆಯನ್ನು ಪ್ರತ್ಯೇಕಿಸಿ ಮತ್ತು ಅಪವಿತ್ರತೆಯನ್ನು ನಿಷೇಧಿಸಲಾಗಿದೆ. ಅಪವಿತ್ರತೆ ಎಂಬ ಪದವು ಐಹಿಕವಾದದ್ದು.

ಧಾರ್ಮಿಕ ವಿಧಿವಿದಾನಗಳ ಸಂದರ್ಭದಲ್ಲಿ ಅಪವಿತ್ರತೆ ಮತ್ತು ಪವಿತ್ರತೆಯ ನಡುವೆ ಸಂವಹನ ಸಾಧ್ಯ. ಒಬ್ಬ ಪವಿತ್ರತೆಯನ್ನು ಬಯಸಿದಲ್ಲಿ ಆತನು ಹಲವಾರು ವಿಧಿವಿಧಾನಗಳಿಂದ ತನ್ನನ್ನು ಪರಿಶುದ್ಧಿಗೊಳಿಸಿಕೊಳ್ಳಲು ಸಾಧ್ಯ.

### b. ನಂಬಿಕೆ ಮತ್ತು ಪದ್ಧತಿಗಳು ಧರ್ಮದ ಭಾಗವಾಗಿದೆ (Religion is a body of belifs and practices).

ಧಾರ್ಮಿಕ ನಂಬಿಕೆಗಳು ಜ್ಞಾನದ ವಿಧಾನ ಇದು ಮಾನವನಿಗೂ ದೈವಿಕ ಶಕ್ತಿಗೂ ಇರುವ ಸಂಬಂಧವನ್ನು ತಿಳಿಸುತ್ತದೆ. ಇಲ್ಲಿ ಕೇವಲ ಅಲೌಕಿಕ ಶಕ್ತಿಯ ಇರುವಿಕೆಯನ್ನು ನಂಬಿದರಷ್ಟೆ ಸಾಕಾಗುವುದಿಲ್ಲ. ಈ ಅಲೌಕಿಕ

ಶಕ್ತಿಯ ಇರವಿಕೆಯ ಜ್ಞಾನವನ್ನು ಜನರಿಗೆ ವಿವರಿಸ ಬೇಕಾಗುತ್ತದೆ ಹಾಗೂ ಅದನ್ನು ಮುಂಬರುವ ಜನಾಂಗಕ್ಕೂ ತಿಳಿಸಬೇಕಾಗುತ್ತದೆ. ನಂಬಿಕೆಗಳು ಅಲೌಕಿಕ ಶಕ್ತಿಯ, ದೇವರ ಮತ್ತು ಪವಿತ್ರತೆಯ ಇರುವಿಕೆಯ ಉದ್ದೇಶವನ್ನು ತಿಳಿಸುತ್ತದೆ. ನಂಬಿಕೆಗಳು ದೈವಿ ಸ್ವಭಾವ, ಕಾರ್ಯಕ್ರಮಗಳನ್ನು ವಿವರಿಸುತ್ತವೆ ಅಥವಾ ದೈವಿಕ ನುಡಿಗಳು ಮತ್ತು ನಿರ್ದಿಷ್ಟ ವಿಧಿವಿಧಾನಗಳ ಮೂಲಕ ಮಾನವ ದೈವಿಕ ಶಕ್ತಿಯ ಜೊತೆಗೆ ಸಂವಹನ ಮಾಡಬಹುದು.

ನಂಬಿಕೆಗಳು ಸಾಮಾನ್ಯವಾಗಿ ವರ್ತಮಾನದ ಭಾವನೆಗಳನ್ನು ಒಳಗೊಂಡಿರುತ್ತದೆ. ಸಂಪ್ರದಾಯಗಳ ಬಗ್ಗೆ ತಿಳಿಸುತ್ತವೆ, ನಂಬಿಕೆಗಳು ಮಾನವ ಮತ್ತು ದೈವಿಕ ಶಕ್ತಿಗಳ ನಡುವಿನ ಸಂವಹನದ ಹಿನ್ನಲೆಯನ್ನು ನಿರೂಪಿಸುತ್ತದೆ ಮತ್ತು ಧಾರ್ಮಿಕ ಸಂಸ್ಕಾರಗಳಿಗೆ ಅರ್ಥವನ್ನು ನೀಡುತ್ತವೆ.

ಅವರವರ ಸಂಪ್ರದಾಯಕ್ಕೆ ತಕ್ಕಂತೆ ಧಾರ್ಮಿಕ ವಿಧಿವಿಧಾನಗಳನ್ನು ಆಚರಿಸಲಾಗುವುದು. ಆಗಿಂದಾಗ್ಗೆ ಧಾರ್ಮಿಕ ವಿಧಿವಿಧಾನಗಳನ್ನು ನಿರ್ದಿಷ್ಟವಾದ ಉದ್ದೇಶಗಳಿಗಾಗಿ ಉಪಯೋಗಿಸಲಾಗುತ್ತದೆ. ಈ ವಿಧಿ ವಿಧಾನಗಳು ಹಲವಾರು ಸಾಂಕೇತಿಕ ಕಾರ್ಯಗಳನ್ನು ಹೊಂದಿದ್ದು, ಧಾರ್ಮಿಕ ನಂಬುಗೆಗಳಿಗೆ ಅನುಗುಣವಾಗಿ ನಿರ್ಧಿಷ್ಟ ಅರ್ಥವನ್ನೊಳಗೊಂಡ ಸಂಬಂಧವಿದೆ. ಈ ಧಾರ್ಮಿಕ ವಿಧಿವಿಧಾನಗಳನ್ನು ಪ್ರಮಾಣಿಕರಿಸಿ, ಪುನರಾವರ್ತಿಸಿ ಮತ್ತು ಸಂಗ್ರಹಿಸಿ ಜೋಪಾನ ಮಾಡುತ್ತಾರೆ.

### c. ಧರ್ಮವು ನೈತಿಕ ಸಲಹೆಗಳನ್ನು ಒಳಗೊಂಡಿರುತ್ತದೆ (**Religion provides moral prescriptions**).

ಧರ್ಮವು ನೈತಿಕ ಮೌಲ್ಯಗಳ ಆಧಾರವಾಗಿದೆ, ನೈತಿಕ ಸಲಹೆಗಳಿಲ್ಲದ ಧರ್ಮವು ಇರಲು ಸಾಧ್ಯವಿಲ್ಲ. ಧರ್ಮವು ತಪ್ಪು ಮತ್ತು ಸರಿ ನಡುವಿನ ವ್ಯತ್ಯಾಸವನ್ನು ತಿಳಿಸುತ್ತದೆ, ಧರ್ಮವು ಇತರ ಸಾಮಾಜಿಕ ಸಂಸ್ಥೆಗಳಿಗಿಂತ ಹೆಚ್ಚು ಶಕ್ತಿಶಾಲಿಯಾದುದು.

### d. ಮುಕ್ತಿಯ ವಿಧಾನಗಳು (**Methods of salvation**):

ಮುಕ್ತಿ ಹೊಂದುವ ಮಾರ್ಗವು ಧರ್ಮದ ಇನ್ನೊಂದು ಮೂಲಂಶವಾಗಿದೆ.ಅವುಗಳನ್ನು ನಿರ್ವಾಣ, ಮೋಕ್ಷ, ವಿಮೋಚನೆ ಎಂದು ಕರೆಯುತ್ತಾರೆ. ಕ್ರೈಸ್ತರಲ್ಲಿ ಕ್ರಿಸ್ಟನ ವಿಮೋಚಕರು, ದೇವ ಪುತ್ರರು, ಮನುಷ್ಯ ಮಾಡುವ ಕರ್ಮಕ್ಕೆ ತಕ್ಕ ಜೀವನವನ್ನು ನೀಡುತ್ತಾನೆ ಎಂದು ನಂಬಿದ್ದಾರೆ.

## ಧರ್ಮದ ಕಾರ್ಯಗಳು (Functions of Religion)

ಧರ್ಮವು ಸಮಾಜದ ಪ್ರಮುಖ ಸಾಮಾಜಿಕ ಸಂಸ್ಥೆಯಾಗಿದೆ. ಇದು ಸಮಾಜದ ಒಂದು ಭಾಗವಾಗಿದ್ದು, ಇದು ಮನುಷ್ಯನ ಬದುಕಿನಲ್ಲಿ ಬೆರೆತು ಹೋಗಿದೆ. ಸಮಾಜದಲ್ಲಿ ಧರ್ಮದ ಪಾತ್ರ ಬಹು ಮುಖ್ಯವಾದುದು ಎಂದು ಹೇಳಬಹುದು. ಇದರಿಂದ ಹಲವಾರು ಮುಖ್ಯವಾದ ಕಾರ್ಯಗಳು ನಡೆಯುತ್ತವೆ. ಈ ಕಾರ್ಯಗಳನ್ನು ಮುಖ್ಯವಾಗಿ ಮೂರು ವಿಭಾಗಗಳಾಗಿ ವಿಂಗಡಿಸಲಾಗಿದೆ. ಅವುಗಳೆಂದರೆ ಸಾಮಾಜಿಕ ಐಕ್ಯತೆ, ಸಾಮಾಜಿಕ ನಿಯಂತ್ರಣ ಮತ್ತು ಸಾಮಾಜಿಕ ಬದಲಾವಣೆ.

### A. ಸಾಮಾಜಿಕ ಐಕ್ಯತೆ (Social solidarity):

(1) ಎಮಿಲಿ ಡರ್ಖೈಮ್ ರವರು ಹೇಳುವಂತೆ ಸಮಾಜದ ಜನರ ನಂಬಿಕೆ ಶ್ರದ್ಧೆ, ಮೌಲ್ಯ, ಭಾವನೆ

ಮುಂತಾದವುಗಳು ಜನರನ್ನು ಒಗ್ಗೂಡಿಸುತ್ತವೆ. ಭಯ, ಭೀತಿ ರೋಗ ರುಜಿನಗಳಿಂದ ರಕ್ಷಿಸಿಕೊಳ್ಳಲು ಐಕ್ಯತೆಯಿಂದ ಸಾಮಾಜಿಕವಾಗಿ ಧರ್ಮಾಚರಣೆಯಲ್ಲಿ ತೊಡಗಿರುವುದನ್ನು ಕಾಣಬಹುದು ಎಂದಿದ್ದಾರೆ.

(2) ಮೌಲ್ಯ ಮತ್ತು ನೈತಿಕ ನಿಯಮಗಳನ್ನು ಪವಿತ್ರವಾದವು ಎಂದು ವ್ಯಾಖ್ಯಾನಿಸಿ ಧರ್ಮವು ಮಾನವನ ಕ್ರಿಯೆಯನ್ನು ನಿರ್ಧರಿಸುತ್ತದೆ. ಸಾಮಾಜಿಕ ಹೊಣೆಗಾರಿಕೆಯನ್ನು ಧಾರ್ಮಿಕ ಕರ್ತವ್ಯವೆಂದು ಪರಿಗಣಿಸಿ ಸಾಮಾಜಿಕ ಐಕ್ಯತೆಯನ್ನು ತರುತ್ತದೆ.

(3) ಸಾಮಾಜಿಕ ಪ್ರಾರ್ಥನೆಯು ಸಾಮಾಜಿಕ ಐಕ್ಯತೆಯ ಸಾಧನವಾಗಿ ವ್ಯಕ್ತಿಯನ್ನು ಸಮಾಜದಲ್ಲಿ ಐಕ್ಯಗೊಳಿಸುತ್ತದೆ.

(4) ಮಾಲಿನೋಸ್ಕಿಯವರ ಪ್ರಕಾರ ಹುಟ್ಟು, ಸಾವು ಮತ್ತು ಸ್ವಾಭಾವಿಕ ವಿಕೋಪಗಳು ಒಂದು ಸಮೂಹವನ್ನು ಭಾವನಾತ್ಮಕವಾಗಿ ಘಾಸಿಗೊಳಿಸುತ್ತವೆ. ಇಂತಹ ಪರಿಸ್ಥಿತಿಯಲ್ಲಿ ಧಾರ್ಮಿಕ ಆಚರಣೆಯು ಸಮೂಹವನ್ನು ಒಟ್ಟುಗೂಡಿಸುತ್ತದೆ.

(5) ಧರ್ಮವು ಮೌಲ್ಯಗಳಿಗೆ ಸಮರ್ಥನೆ ನೀಡುತ್ತದೆ.

(6) ಒಳ್ಳೆಯ ಕೆಲಸಕ್ಕೆ ಗೌರವ ಮತ್ತು ತಪ್ಪಿಗೆ ಶಿಕ್ಷೆ ಸಾಮೂಹಿಕ ಮೌಲ್ಯಗಳನ್ನು ಸಮರ್ಥಿಸಿ ಸಾಮೂಹಿಕ ಐಕ್ಯತೆಗೆ ಸಹಾಯಕವಾಗಿದೆ.

### (B) ಸಾಮಾಜಿಕ ನಿಯಂತ್ರಣ (Social Control)

(1) ಧರ್ಮವು ಸಾಮಾಜಿಕ ನಿಯಂತ್ರಣದಂತೆ ಕಾರ್ಯನಿರ್ವಹಿಸಿ ಒಳ್ಳೆಯ ಮತ್ತು ಕೆಟ್ಟ ನಡತೆಗೆ ಅನುಗುಣವಾಗಿ ಪ್ರೋತ್ಸಾಹ ಮತ್ತು ಶಿಕ್ಷೆಯನ್ನು ನೀಡುತ್ತದೆ. ಹಾಗೂ ವ್ಯಕ್ತಿ ಮತ್ತು ಸಮುದಾಯದ ವರ್ತನೆಯನ್ನು ನಿಯಂತ್ರಿಸುತ್ತದೆ.

(2) ಧರ್ಮವು ಸಾಮಾಜಿಕ ಪರಿವರ್ತನೆಯ ಸಾಧನವಾಗಿದೆ ಎಂದು ಮ್ಯಾಕ್ಸ ವೆಬರ್ ತಮ್ಮ ಕೃತಿ 'ಪ್ರಾಟೆಸ್ಟಂಟ್‌ರ ನೀತಿಗಳು ಮತ್ತು ಬಂಡವಾಳಶಾಹಿ ತತ್ವ'ದಲ್ಲಿ ಹೇಳಿದ್ದಾರೆ.

(3) ಧರ್ಮವು ಸುಧಾರಣೆಯ ಜೊತೆಗೆ ರಾಷ್ಟ್ರೀಯತೆ, ಸಾಂಸ್ಕೃತಿಕ ಪರಿವರ್ತನೆ, ನಾಗರಿಕ ಹಕ್ಕುಗಳ ಸಂರಕ್ಷಣೆಗೆ ಸಹಕಾರಿಯಾಗಿದೆ.

(4) ಕಾರ್ಲ್ ಮಾರ್ಕ್ಸ್ ರವರು ಧರ್ಮವನ್ನು ಅಫೀಮಿನಂತಹ ಮಾದಕವಸ್ತುವಿಗೆ ಹೋಲಿಸಿ, ಧರ್ಮವು ಉಳ್ಳವರ ಹಿತಕಾಯುತ್ತದೆ ಎಂದಿದ್ದಾರೆ.

### (C) ಸಾಮಾಜಿಕ ಪರಿವರ್ತನೆ (Social Change)

(1) ಧರ್ಮವು ಸಾಮಾಜಿಕ ಪರಿವರ್ತನೆಯ ಸಾಧನವಾಗಿದೆ. ಮ್ಯಾಕ್ಸ್‌ವೆಬರ್‌ರವರು ಪ್ರಾಟಿಸ್ಟೆಂಟರ ಬಂಡವಾಳ ನೀತಿಗೆ ಕ್ಯಾಲ್ವಿನ್‌ರವರ ಚಿಂತನೆಗಳನ್ನು ವಿಶ್ಲೇಷಿಸಿದ್ದಾರೆ. ವೆಬರ್‌ರವರ ಪ್ರಕಾರ ಕ್ಯಾಲ್ವಿನ್‌ರ ಚಿಂತನೆಗಳು ದುಡಿಮೆಯನ್ನು ಒಂದು ನೈತಿಕತೆ ಎಂದು ಪರಿಗಣಿಸಿದ್ದಾರೆ. ಈ ಚಿಂತನೆಯು ದುಡಿಮೆಯನ್ನು ಪ್ರೋತ್ಸಾಹಿಸಿ ಬಂಡವಾಳದ ಸಂಚಯನ ಮತ್ತು ಹೊಸ ಸಾಮಾಜಿಕ ಪ್ರಕ್ರಿಯೆಗೆ ಕಾರಣವಾಗಿದೆ. ಕ್ಯಾಲ್ವಿನ್‌ರ ಚಿಂತನೆಗಳೆಂದರೆ ಬಂಡವಾಳಶಾಹಿ ಚಿಂತನೆಗಳಾಗಿವೆ.

(2) 18 ಮತ್ತು 19ನೇ ಶತಮಾನದ ಧಾರ್ಮಿಕ ಸುಧಾರಣೆಯು ಭಾರತದಲ್ಲಿ ರಾಷ್ಟ್ರೀಯ ಏಕತೆಯನ್ನು ಉದ್ದೀಪನಗೊಳಿಸಿ ಹಳೆಯ ಸಾಮಾಜಿಕ ಮತ್ತು ಸಾಂಸ್ಕೃತಿಕ ಸಂಗತಿಗಳು ಹೊಸತನಗೊಳ್ಳಲು ಕಾರಣವಾದವು. ಹಾಗೆಯೇ 1950–60ರ ದಶಕದಲ್ಲಿ ಅಮೇರಿಕಾದಲ್ಲಿ ಕಪ್ಪು ವರ್ಣೀಯರ ಚರ್ಚೆಗಳು ನಾಗರೀಕ ಹಕ್ಕುಗಳ ಹೋರಾಟದಲ್ಲಿ ಗಣನೀಯ ಪಾತ್ರ ವಹಿಸಿವೆ.

(3) ಧರ್ಮವು ನೈತಿಕತೆಯನ್ನು ಬೋಧಿಸುವುದು ಸಾಮಾಜಿಕ ಪರಿವರ್ತನೆಗೆ ಸಹಾಯಕವಾಗಿದೆ.

## 5.4. ಶಿಕ್ಷಣ (Education):

ಶೈಕ್ಷಣಿಕ ಸಮಾಜಶಾಸ್ತ್ರವು ಸಮಾಜಶಾಸ್ತ್ರದ ಪ್ರಮುಖವಾದ ಕ್ಷೇತ್ರ ಮತ್ತು ಪ್ರಭಾವಶಾಲಿ ಶಾಖೆ– ಈ ಶಾಖೆಯು ಶಿಕ್ಷಣದ ತತ್ವಜ್ಞಾನ ರೂಪಿಸಿ ಅದರ ಸಂರಚನೆಯಲ್ಲಿ ಮಹತ್ವವಾದ ಪರಿವರ್ತನೆ ತರುವುದರಲ್ಲಿ ಯಶಸ್ವಿಯಾಗಿದೆ. ಶಿಕ್ಷಣವು ಸಮಾಜದ ಅತ್ಯಂತ ಮೂಲಭೂತವಾದ ಚಟುವಟಿಕೆ ಸಮಾಜದ ನಿರಂತರರತೆಗೆ ಮತ್ತು ಯುವಪೀಳಿಗೆಗಳಿಗೆ ಸಂಸ್ಕೃತಿಯ ವರ್ಗಾವಣೆ ತೀರಾ ಅಗತ್ಯವಾಗಿದೆ. ಪೂರ್ವಜರ ಜೀವನಶೈಲಿ ಮತ್ತು ಸಾಮರಸ್ಯದ ಜೀವನವನ್ನು ಪ್ರತಿಯೊಂದು ಹೊಸತಲೆಮಾರುಗಳಿಗೆ ಶಿಕ್ಷಣದ ಮಾಧ್ಯಮಗಳಿಂದ ವರ್ಗಾಯಿಸಲಾಗಿದೆ ಮತ್ತು ಭವ್ಯ ಸಂಸ್ಕೃತಿಯ ಪರಂಪರೆಯನ್ನು ಶಾಶ್ವತವಾಗಿ ಮುಂದುವರಿಸಲು ಸಾಧ್ಯವಾಗಿದೆ. ಪ್ರತಿಯೊಂದು ಸಮಾಜವೂ ತನ್ನ ಪರಿಸರದೊಂದಿಗೆ ಹೊಂದುಕೊಳ್ಳುತ್ತಾ ಸಾಮರಸ್ಯ ಜೀವನವನ್ನು ಹಲವಾರು ಶತಮಾನಗಳಿಂದ ರೂಢಿಸಿಕೊಂಡಿದೆ. ಹಾಗೆಯೇ ಪರಿವರ್ತನೆ ಸಂಭವಿಸಿದಾಗ ಪರಿಸರದೊಂದಿಗೆ ಹೊಂದುಕೊಂಡು ಅಂತಹ ಸವಾಲುಗಳನ್ನು ಎದುರಿಸುತ್ತಾ ಸಹಬಾಳ್ವೆ ನಡೆಸಿಕೊಂಡಿದೆ. ಈ ನಿಟ್ಟಿನಲ್ಲಿ ಪ್ರಕೃತಿಯೇ ನಮ್ಮ ಗುರು "Nature is our teacher" ಎಂಬ ನಾಣ್ನುಡಿ ಅನ್ವಯಿಸುತ್ತದೆ. ಮಾನವ ಪ್ರಕೃತಿಯೊಂದಿಗೆ ಹೊಂದಿಕೊಂಡು ಫಲವನ್ನು ಅನುಭವಿಸುತ್ತಾ, ಜೀವನವನ್ನು ರೂಪಿಸಿಕೊಂಡಿದ್ದಾನೆ. "ಶಿಕ್ಷಣವು" ಕೃಷಿ, ವಿಜ್ಞಾನ, ವೈದ್ಯಕೀಯ, ತಾಂತ್ರಿಕ, ಸಸ್ಯಶಾಸ್ತ್ರ, ಇತಿಹಾಸ, ಅರ್ಥಶಾಸ್ತ್ರ, ವಾಣಿಜ್ಯಶಾಸ್ತ್ರ ಹೀಗೆ ವಿವಿಧ ವಿಜ್ಞಾನಗಳು ಪ್ರಕೃತಿ ಮತ್ತು ಸಮಾಜದ ವಿವಿಧ ಅಂಶಗಳ ಬಗ್ಗೆ ಜ್ಞಾನ ಸಂಪಾದನೆಯನ್ನು ಮಾಡಿಕೊಡುತ್ತವೆ.

### 5.4.2. ಅರ್ಥ ಮತ್ತು ವ್ಯಾಖ್ಯೆಗಳು: (Meaning and Definition):-

("Education") ಎಜುಕೇಷನ್ ಎಂಬ ಪದವೂ ಲ್ಯಾಟಿನ್ ಭಾಷೆಯ "ಎಜುಕೇರ್" **(Educare)** ನಿಂದ ಉತ್ಪತ್ತಿಯಾಗಿದ್ದು, ಅದರ ಮೂಲ ಅರ್ಥ "ಬೆಳೆಸು" ಮೇಲೆತ್ತು ಎಂಬುದನ್ನು ಸೂಚಿಸುತ್ತದೆ. ಶಿಕ್ಷಣದ ಉದ್ದೇಶ ವಿವಿಧ ಜ್ಞಾನಭಂಡಾರವನ್ನು ಕಲಿತು ಮುಂದಿನ ಭವಿಷ್ಯವನ್ನು ಸಮರ್ಪಕವಾಗಿ ಎದುರಿಸಲುಬೇಕಾದ ಆತ್ಮವಿಶ್ವಾಸವನ್ನು ಮೂಡಿಸುವುದಾಗಿದೆ.

1. **ಎಮಿಲಿ ಡರ್ಖೀಮ್** ರವರ ಪ್ರಕಾರ ಯುವ ಪೀಳಿಗೆಯನ್ನು ಸಾಮಾಜೀಕರಣಗೊಳಿಸುವ ನಿರಂತರ ಪ್ರಕ್ರಿಯೆಯಾಗಿ, ಆಲೋಚನೆ, ಭಾವನೆ ಮತ್ತು ಕ್ರಿಯೆಯನ್ನು ಬೆಳೆಸುವುದೇ ಶಿಕ್ಷಣ.

2. **ಡಬ್ಲ್ಯೂ.ಜಿ.ಸಮ್ನರ್**ರವರ ಪ್ರಕಾರ ಶಿಕ್ಷಣವು ಮಕ್ಕಳಿಗೆ ಸಮುದಾಯದ ನೀತಿ–ನಿಯಮಗಳನ್ನು ವರ್ಗಾಯಿಸುವ ಕ್ರಿಯೆ. ಆ ಮೂಲಕ ಸರಿ–ತಪ್ಪುಗಳನ್ನು ಗ್ರಹಿಸುವುದು.

3. **ಎ.ಡಬ್ಲ್ಯೂ.ಗ್ರೀನ್**ರವರ ಅಭಿಪ್ರಾಯದಲ್ಲಿ ಶಿಕ್ಷಣವು ಯುವ ಪೀಳಿಗೆಯನ್ನು ಪ್ರಜ್ಞಾಪೂರ್ವಕವಾಗಿ ತರಬೇತಿ ನೀಡಿ ವಯಸ್ಕರ ಪಾತ್ರಗಳನ್ನು ಯಶಸ್ವಿಯಾಗಿ ನಿರ್ವಹಿಸುವ ಕ್ರಿಯೆ ಮತ್ತು ಶಾಲೆಯಂತಹ ಔಪಚಾರಿಕ

ಸಂಘಟನೆಯಿಂದ ಪಡೆಯುವ ತರಬೇತಿ ಎಂದಿದ್ದಾರೆ.

## ಶಿಕ್ಷಣದ ಕಾರ್ಯಗಳು (Functions of Education)

ಶಿಕ್ಷಣ ಸಂಸ್ಥೆಗಳು ಸಮಾಜದ ಎಲ್ಲಾ ವರ್ಗಗಳಿಗೆ ಅನ್ವಯಿಸುವಂತೆ ತೀರಾ ಅಗತ್ಯವಾದ ಕನಿಷ್ಠ ಕೌಶಲ್ಯ ತರಬೇತಿ ನೀಡುತ್ತಾ ಅಕ್ಷರ ಜ್ಞಾನದ ಮೂಲಕ ಸೈದ್ಧಾಂತಿಕ ವಿಚಾರಧಾರೆಗಳನ್ನು ಯುವಜನತೆಗೆ ಅರಿವು ಮೂಡಿಸುವ ಉದ್ದೇಶ ಹೊಂದಿವೆ. ಒಟ್ಟಾರೆ, ಮುಂದಿನ ಸಾಮಾಜಿಕ ಸ್ಥಿತಿ–ಗತಿಗಳ ಬಗ್ಗೆ ವಾಸ್ತವಿಕ ಮಾಹಿತಿಗಳನ್ನು ನೀಡುತ್ತಾ ಮತ್ತು ಅಂತಹ ಸ್ಥಿತಿ–ಗತಿಗಳನ್ನು ಎದುರಿಸುವ ಮಾಹಿತಿ ನೀಡುವ ಕರ್ತವ್ಯನ್ನು–ಶಿಕ್ಷಣ ನಿಭಾಯಿಸಬೇಕಾಗಿದೆ. ಉದಾ:– ಕಂಪ್ಯೂಟರ್ ಬಳಕೆ, ಆಧುನಿಕ ವಾಹನಗಳ ಚಾಲನೆ ಮತ್ತು ದುರಸ್ಥಿ, ಯಂತ್ರಗಳ ಬಳಕೆ, ಮುದ್ರಣಾಲಯ ಮುಂತಾದವುಗಳು.

ಪ್ರಸಕ್ತ ಸಾಮಾಜಿಕ ವ್ಯವಸ್ಥೆಯಲ್ಲಿ ಹೊಸ ವಿಜ್ಞಾನ ಮತ್ತು ತಂತ್ರಜ್ಞಾನ ವ್ಯಾಪಕವಾಗಿ ಬೆಳೆಯುತ್ತಿದೆ. ಶಿಕ್ಷಣ ಇಂದಿನ ಯುವಜನತೆಗೆ ತಮ್ಮ ಮುಂದಿನ ಭವಿಷ್ಯ ರೂಪಿಸಿಕೊಳ್ಳಲು ಸೂಕ್ತ ಎನ್ನಿಸುವ ಹೊಸ ಮಾದರಿ ಶಿಕ್ಷಣ ನೀಡಬೇಕಾಗಿದೆ. ಇಂತಹ ಶಿಕ್ಷಣದಿಂದಲೇ ವಿವಿಧ ಉದ್ಯೋಗಾವಕಾಶಗಳನ್ನು ಸಮರ್ಪಕವಾಗಿ ನಿರ್ವಹಿಸುವ ಜವಾಬ್ದಾರಿ ಇದೆ. ಇಂದಿನ ರಾಜಕೀಯ ವ್ಯವಸ್ಥೆಯು ಕೂಡ ಶಿಕ್ಷಣವನ್ನು ಹೊಸಪೀಳಿಗೆಗಳಿಗೆ ಹೊಸ ಜ್ಞಾನವನ್ನು ಕಲ್ಪಿಸುತ್ತಾ ಮುಂದಿನ ಭವಿಷ್ಯದಲ್ಲಿ **"ದುಡಿಮೆಯ ಸಮೂಹ"** ನಿರೂಪಿಸುವ ಕಡೆಗೆ ಕಾಳಜಿ ವಹಿಸಿದೆ. ಸಂರಕ್ಷಣಾತ್ಮಕವಾಗಿ ಆರ್ಥಿಕ, ರಾಜಕೀಯ, ಸಾಮಾಜಿಕ, ತಾಂತ್ರಿಕ ಮತ್ತು ವೈದ್ಯಕೀಯ ಹೀಗೆ ಎಲ್ಲವನ್ನು ಪೂರೈಸುವುದು ಶಿಕ್ಷಣದ ಹೊಣೆಗಾರಿಕೆಯಾಗಿದೆ. ಶಿಕ್ಷಣದ ಪ್ರಮುಖ ಕಾರ್ಯವಿಧಾನಗಳನ್ನು ಕೆಳಕಂಡ ಅಂಶಗಳ ಮೂಲಕ ವಿಶ್ಲೇಷಿಸಲಾಗಿದೆ.

a. ಸಂರಕ್ಷಣಾತ್ಮಕ ಕಾರ್ಯಗಳು - Preservative functions

b. ಪಾತ್ರ ನಿರ್ವಹಣೆಯ ಕಾರ್ಯಗಳು – Allocative functions

c. ಸುಧಾರಣಾತ್ಮಕ ಕಾರ್ಯಗಳು – Reformative functions

### a. ಸಂರಕ್ಷಣಾತ್ಮಕ ಕಾರ್ಯಗಳು – Preservative functions :

ಪ್ರತಿಯೊಂದು ಹೊಸಪೀಳಿಗೆಗಳಿಗೆ ಸಂಸ್ಕೃತಿಯ ವರ್ಗಾವಣೆಯು ತೀರಾ ಅಗತ್ಯವಾಗಿದೆ. ಈ ಪ್ರಕ್ರಿಯೆಯಿಂದಲೇ ಸಮಾಜದಲ್ಲಿ ಶಾಂತಿ ಸುವ್ಯವಸ್ಥೆ ಕಾಪಾಡಿಕೊಳ್ಳಲು ಸಾಧ್ಯವಾಗಿದೆ. ಉದಾ:– ಮಾತೃಭಾಷೆಯ ಅಕ್ಷರಜ್ಞಾನ. ಪರಿಸರ ಸಂಪನ್ಮೂಲಗಳ ಬಳಕೆ, ಆರೋಗ್ಯ ಮತ್ತು ನೈಮಲ್ಯತೆ ಸಂರಕ್ಷಣೆಯ ಅನುಕೂಲತೆ, ಮರ ಮತ್ತು ಸಸ್ಯ ವರ್ಗಗಳಿಂದ ಔಷಧಿ ತಯಾರಿಕೆ–ಹೀಗೆ ಸಾವಿರಾರು ವಿಷಯಗಳ ಬಗ್ಗೆ ಯುವ ಪೀಳಿಗೆಗಳಿಗೆ ಅರಿವು ಮೂಡಿಸುವುದು ತೀರಾ ಅವಶ್ಯಕ. ಇಂತಹ ಮಾಹಿತಿಗಳನ್ನು ಹಿರಿಯರು–ಯುವ ಪೀಳಿಗೆ ರವಾನೆ ಮಾಡುವ ಪ್ರಯತ್ನವೇ– ಶಿಕ್ಷಣದ ಸಂರಕ್ಷಣಾತ್ಮಕ ಕಾರ್ಯವೆಂದು ಪರಿಗಣಿಸಲಾಗಿದೆ.

ಸಾಮಾಜಿಕ ಸಂರಚನೆಯ ಸ್ಥಿರಯಿಂದ ಸಾಮಾಜಿಕ ಮೌಲ್ಯ ಮತ್ತು ಜೀವನಶೈಲಿಗಳನ್ನು ಹೊಸ ಪೀಳಿಗೆಗಳಿಗೆ ವರ್ಗಾಯಿಸಬೇಕಾಗಿದೆ. ಆದ್ದರಿಂದ ಪ್ರತಿಯೊಂದು ಸಮಾಜಗಳಲ್ಲೂ ತಮ್ಮ ಭವ್ಯ ಪರಂಪರೆಯನ್ನು ಸಂರಕ್ಷಿಸಿ ಯುವ ಪೀಳಿಗೆ ತಮ್ಮ ಸಾಂಸ್ಕೃತಿಕ ಚೌಕಟ್ಟಿನಲ್ಲಿ ಜೀವನ ರೂಪಿಸಿಕೊಳ್ಳುವಂತೆ ಮಾಡಬೇಕಾಗಿದೆ.

ಕಾಲಕ್ರಮೇಣ ಸಾಮಾಜಿಕ ಪರಿವರ್ತನೆಯಿಂದ ಶಿಕ್ಷಣವು ಮಾರ್ಪಾಡುಗೊಳ್ಳುತ್ತದೆ. ಪ್ರಸಕ್ತ ಕಾಲಕ್ಕೆ ಅನ್ವಯಿಸುವ ಜ್ಞಾನವನ್ನು ಸ್ವೀಕರಿಸಿ ಮತ್ತು ಹೊಸ ಜ್ಞಾನದ ಬಗ್ಗೆ ಅರಿವು ಮತ್ತು ಸಂಪೂರ್ಣ ನೈಪುಣ್ಯತೆಯನ್ನು ಪಡೆದುಕೊಳ್ಳಲು ಶಿಕ್ಷಣವು ನೆರವು ನೀಡುತ್ತದೆ. ಶಿಕ್ಷಣ ಕೇವಲ ಆರ್ಥಿಕ ಬೇಡಿಕೆಗಳನ್ನು ಈಡೇರಿಸಿಕೊಳ್ಳುವ ಸಾಧನವಾಗಿರದೆ ರಾಜಕೀಯ, ಸಾಮಾಜಿಕ, ಕಾನೂನು ಪಾಲನೆ, ಆರೋಗ್ಯ ಮತ್ತು ಸಾಮಾಜಿಕ ಸ್ತರವಿನ್ಯಾಸದ ಅಸ್ತಿತ್ವದ ಸಂರಕ್ಷಣೆ ಮುಂತಾದ ಕಾರ್ಯಗಳನ್ನು ಮಾಡುತ್ತದೆ.

### b. ಪಾತ್ರ ನಿರ್ವಹಣೆಯ ಕಾರ್ಯಗಳು – (Allocative functions)

ಶಿಕ್ಷಣ ಹಲವಾರು ವಿಶೇಷ ಅಧ್ಯಯನಗಳನ್ನು ಹಾಗೂ ವಿವಿಧ ಹಂತಗಳ ಶಿಕ್ಷಣದ ಕ್ರಮಗಳನ್ನು ಒಳಗೊಂಡಿದೆ. ಉದಾ:– ಕಲೆ, ವಿಜ್ಞಾನ, ವಾಣಿಜ್ಯ ಎಂಬ ವಿಶಾಲ ವರ್ಗೀಕರಣದೊಂದಿಗೆ ಹಲವಾರು ಶಾಖೆಗಳನ್ನು ಒಳಗೊಂಡಿದೆ. ಶಿಕ್ಷಣದ ಅರ್ಹತೆಯಿಂದ ವಿವಿಧ ವೃತ್ತಿಗಳಲ್ಲಿ ದುಡಿದು ಅಂತಸ್ತು ಮತ್ತು ಸ್ಥಾನಮಾನವನ್ನು ಗಳಿಸುತ್ತಾರೆ. ಆಧುನಿಕ ಯುಗದಲ್ಲಿ ಶಿಕ್ಷಣದ ಪಾತ್ರದಿಂದಲೇ ಹಲವಾರು ಉದ್ಯೋಗ ಕ್ಷೇತ್ರಗಳಲ್ಲಿ ಕಾರ್ಯನಿರ್ವಹಿಸಲು ಸಾಧ್ಯವಾಗಿದೆ.

ಈ ಹಿನ್ನೆಲೆಯಲ್ಲಿ ಶಿಕ್ಷಣದ ಆಧಾರದ ಮೇಲೆ ವ್ಯಕ್ತಿಗಳಿಗೆ ನಿರ್ದಿಷ್ಟ ಉದ್ಯೋಗಾವಕಾಶಗಳು ಲಭಿಸುತ್ತವೆ. ಶಿಕ್ಷಣದ ಕೊರತೆಯಿಂದ ಹಲವರು ಕೆಳಅಂತಸ್ತು ಮತ್ತು ಸಾಧಾರಣ ಜೀವನ ಮಟ್ಟದಲ್ಲಿಯೇ ತೃಪ್ತಿಪಟ್ಟುಕೊಳ್ಳಬೇಕಾಗಿದೆ. ಈ ರೀತಿ ಶಿಕ್ಷಣದ ಯಶಸ್ಸು ಮತ್ತು ವಿಫಲತೆಯಿಂದ ಸಾಮಾಜಿಕ ಆರ್ಥಿಕ ಪ್ರಗತಿ ಮತ್ತು ಅಧಿಕಾರ ಹಂಚಿಕೆಯನ್ನು ನ್ಯಾಯಸಮ್ಮತಗೊಳಿಸಲಾಗಿದೆ. ಆದ್ದರಿಂದ ಒಂದು ಸಾಮಾಜಿಕ–ಆರ್ಥಿಕ ವ್ಯವಸ್ಥೆಯಲ್ಲಿ ಶಿಕ್ಷಣ ಮತ್ತು ಸ್ಥಾನಮಾನ ಪರಸ್ಪರ ಪೂರಕವಾಗಿದೆ.

ಶಿಕ್ಷಣವನ್ನು ಸಮಾಜದ ಎಲ್ಲಾ ವರ್ಗದ ಜನರು ವ್ಯಾಪಕವಾಗಿ ಅವಲಂಬಿಸಿದ್ದರಿಂದ ಅದರ ಗುಣಮಟ್ಟಕ್ಕೆ ವಿಶಿಷ್ಟ ಕಾಳಜಿ ವಹಿಸಲಾಗಿದೆ. ಈ ಎಲ್ಲಾ ಬೆಳವಣಿಗೆಯಿಂದಾಗಿ ಶಿಕ್ಷಣದ ಹಂತಗಳಲ್ಲಿ ಪ್ರಾಥಮಿಕ, ಮಾಧ್ಯಮಿಕ ಮತ್ತು ಉನ್ನತ ಶಿಕ್ಷಣ ಸಂಸ್ಥೆಗಳು ಸ್ಥಾಪನೆಗೊಂಡಿವೆ.

ಶಿಕ್ಷಣದ ಸಾರ್ವತ್ರಿಕವಾದ ಉದ್ದೇಶ ಸಾಮಾಜಿಕ ಮೌಲ್ಯಗಳನ್ನು ಎತ್ತಿಹಿಡಿಯುವುದು ಎಂದು ವಿಶ್ವ ಮಹಾಪುರುಷರಾದ ಉದಾ:– ಪ್ಲೋಟೋ, ಮಹಾತ್ಮಾಗಾಂಧಿ, ವಿವೇಕಾನಂದರು, ಡಾ॥ರಾಧಾಕೃಷ್ಣನ್ ಮುಂತಾದವರು ವ್ಯಕ್ತಪಡಿಸಿದ್ದಾರೆ. ಶಿಕ್ಷಣವನ್ನು ಸಾಂಪ್ರದಾಯಿಕ ಹಿನ್ನೆಲೆಯಲ್ಲಿ ವಿಶ್ಲೇಷಿಸಿದರೆ ಸಾಮಾಜಿ ಪರಂಪರೆಯನ್ನು ವೈಭವೀಕರಿಸುವ ಸಾಧನವೇ ಶಿಕ್ಷಣ. ಆದರೆ ಪ್ರಸಕ್ತ ಸಮಾಜದಲ್ಲಿ ಶಿಕ್ಷಣದ ಉದ್ದೇಶ ಮತ್ತು ವಿಷಯದ ಮಹತ್ವವನ್ನು ರಾಜಕೀಯ–ಆರ್ಥಿಕ ಶಕ್ತಿಗಳು ನಿರ್ಧರಿಸುತ್ತವೆ.

### c. ಸುಧಾರಣಾತ್ಮಕ ಕಾರ್ಯಗಳು- (Reformative function)

ಸಮಾಜದ ಅಭಿವೃದ್ಧಿ ಮತ್ತು ಪ್ರಗತಿಗೆ ಶಿಕ್ಷಣ ಮೂಲಭೂತ ಸಾಧನವಾಗಿದೆ. ಆದಾಗ್ಯೂ ಶಿಕ್ಷಣ ಸಾಮಾಜೀಕರಣದ ಪ್ರಮುಖವಾದ ನಿಯೋಗಿಯಾಗಿದೆ. ಮಾನವನ ಮನಸ್ಸನ್ನು ಗತಕಾಲ ಮತ್ತು ಭವಿಷ್ಯದ ಸಂಕೋಲೆಗಳಿಂದ ಮುಕ್ತಗೊಳಿಸಿ ವರ್ತಮಾನದಲ್ಲಿ ಜೀವಿಸುವ ವಿಧಾನಗಳ ಬಗ್ಗೆ ಶಿಕ್ಷಣ ಹೆಚ್ಚು ಕಾಳಜಿ ವಹಿಸುತ್ತದೆ. ಶಿಕ್ಷಣದಿಂದ ಸ್ಥಾಪಿತಗೊಂಡಿರುವ ಸಾಮಾಜಿಕ ನಿಯಮಗಳನ್ನು ಪ್ರಶ್ನಿಸುವ ಸಾಮರ್ಥ್ಯತೆಯನ್ನು ಹೊಸ ಪೀಳಿಗೆಗಳು ಬೆಳೆಸಿಕೊಂಡಿದ್ದಾರೆ. ಉದಾ:– ಸತಿ ಪದ್ಧತಿ, ಅಸ್ಪೃಶ್ಯತೆ, ಜೀತ ಪದ್ಧತಿ, ಸ್ತ್ರೀಯರ ಶೋಷಣೆ, ಮೂಢನಂಬಿಕೆ

ಮುಂತಾದವು. ಈ ನಿಟ್ಟಿನಲ್ಲಿ ಶಿಕ್ಷಣವನ್ನು **"ಸಾಮಾಜಿಕ ಸುಧಾರಣೆಯ ಸಾಧನ"** ಎಂದು ಕರೆಯಲಾಗಿದೆ. ಶಿಕ್ಷಣವು ಸಾಮಾಜಿಕ ಅನುವರ್ತನೆ ಮತ್ತು ಸಾಮಾಜಿಕ ಚಳುವಳಿಗಳ ಉಗಮಕ್ಕೆ ಸಹಾಯಕಾರಿಯಾಗಿ ಸಾಮಾಜಿಕ ಪರಿವರ್ತನೆಯನ್ನು ತರುತ್ತದೆ.

ಅಮೇರಿಕಾದ ಸಮಾಜಶಾಸ್ತ್ರಜ್ಞ ಬೋವಾಲ್ಸ್ ಮತ್ತು ಗಿನ್‌ಟಿಸ್ (**Bowles and Gintis**)ರವರ ಪ್ರಕಾರ ಆಧುನಿಕ ಶಿಕ್ಷಣದ ಪ್ರಮುಖ ಉದ್ದೇಶವೇನೆಂದರೆ – ಕಾರ್ಮಿಕ ಸಮೂಹದ ಸೃಷ್ಠಿ. ಈ ಉದ್ದೇಶವು ಶಿಕ್ಷಣ ಸಂಸ್ಥೆಗಳ ಸುಪ್ತವಾದ ಕಾರ್ಯಕ್ರಮದ ಪಟ್ಟಿಯಲ್ಲಿದೆ. (**Hidden Curriculum**). ವಿದ್ಯಾರ್ಥಿಗಳ ಪಠ್ಯಕ್ರಮಗಳು ಮತ್ತು ಪರೀಕ್ಷೆಯ ವ್ಯವಸ್ಥೆಗೆ ವ್ಯವಸ್ಥಿತ ಪ್ರವಚನಗಳು ಮತ್ತು ವಿದ್ಯಾರ್ಥಿಗಳ ಗ್ರಹಿಸುವಿಕೆ ಕಡೆಗೆ ಹೆಚ್ಚು ಪ್ರಾಮುಖ್ಯತೆ ನೀಡಲಾಗಿದೆ. ಒಟ್ಟಾರೆ ವಿದ್ಯಾರ್ಥಿಗಳು ಸಹಪಾಠಿಗಳೊಂದಿಗೆ ವ್ಯವಹರಿಸುತ್ತಾ ಮತ್ತು ದೈನಂದಿನ ಚಟುವಟಿಕೆಗಳಲ್ಲಿ ದೈಹಿಕ ಮತ್ತು ಮಾನಸಿಕವಾಗಿ ಹಾಜರಾಗುತ್ತಾ ವಿಷಯಗಳನ್ನು ಅರಿತುಕೊಳ್ಳುವುದು ಮುಖ್ಯವಾಗಿದೆ. ಪಠ್ಯಕ್ರಮಗಳು ಮತ್ತು ಪರೀಕ್ಷೆ ನೆಪಮಾತ್ರವಾಗಿದೆ.

ಬೊವಲ್ಸ್ (**Bowles**) ಮತ್ತು ಗಿನ್ಟ್‌ಸ್‌ರವರ ಪ್ರಕಾರ (**Gintis**) ಶೈಕ್ಷಣಿಕ ದೋರಣೆಯ ಸುಪ್ತ ಉದ್ದೇಶವೇನೆಂದರೆ ಭವಿಷ್ಯದಲ್ಲಿ ಮುಕ್ತ ಮತ್ತು ವೈಚಾರಿಕತೆಯಿಲ್ಲದ ದುಡಿಮೆ ವರ್ಗವನ್ನು ಸೃಷ್ಟಿಸಿಕೊಳ್ಳುವ ಒಳಸಂಚು. ವಿವೇಚನೆ ರಹಿತ, ನಿಷ್ಕ್ರಿಯ ಮತ್ತು ಗುಲಾಮತನ ಗುಣಗಳನ್ನು ಹೊಂದಿರುವ ಅತಿವಿನಯವಂತ ದುಡಿಯುವ ವರ್ಗಗಳನ್ನು ಸೃಷ್ಟಿಸಲು ಇಂದಿನ ಶಿಕ್ಷಣ ಕ್ರಮ ಸಹಾಯವಾಗಿದೆ. ಪ್ರತಿಯೊಬ್ಬ ವ್ಯಕ್ತಿಯ ಸ್ವಯಂ ಅಭಿಪ್ರಾಯ ಮತ್ತು ಸೃಜನಶೀಲತೆ ಬೆಳೆಸಿಕೊಳ್ಳದೆ ಸಂಕುಚಿತ ಮನೋಭಾವನೆಯನ್ನು ಹಂಚಿಕೊಳ್ಳಲು ಪ್ರೇರಣೆ ನೀಡಿದೆ. ಪ್ರಶ್ನೆ ಮಾಡದೆ ಮತ್ತು ವೈಚಾರಿಕತೆ ಚಿಂತನೆಯಿಲ್ಲದೆ ತಮ್ಮ ಉದ್ಯೋಗಾಪತಿ ಅಪ್ಪಣೆಯನ್ನು ನೆರವೇರಿಸುವ ವರ್ಗಗಳನ್ನು ನಿರ್ಮಿಸುತ್ತಿದೆ ಎಂದಿದ್ದಾರೆ.

ಶಾಲೆಯ ಆವರಣದಲ್ಲಿ ಆಂತರಿಕ ಕಲಿಯುವಿಕೆಗಿಂತಲೂ ಬಾಹ್ಯ ಪ್ರತಿಫಲಕ್ಕೆ ಹೆಚ್ಚು ಉತ್ತೇಜನ ನೀಡಲಾಗಿದೆ. ಏಕೆಂದರೆ ಬಂಡವಾಳ ವ್ಯವಸ್ಥೆಯಲ್ಲಿ ಬಾಹ್ಯ ಪ್ರತಿಫಲಕ್ಕೂ ಮಾನ್ಯತೆ ಕಲ್ಪಿಸಲಾಗಿದೆ. ಈ ನಿಟ್ಟಿನಲ್ಲಿ ವಿದ್ಯಾರ್ಥಿಗಳಲ್ಲಿ ನಿಯಂತ್ರಣ ಕೊರತೆ ಎದ್ದು ಕಾಣುತ್ತದೆ ಹಾಗೂ ಬೋಧನಾ ಚಟುವಟಿಕೆಗಳಲ್ಲಿ ಅರ್ಪಿಸಿಕೊಳ್ಳುವ ಸಾಮರ್ಥ್ಯವನ್ನು ಕಡೆಗಣಿಸಲಾಗಿದೆ. ವಿದ್ಯಾರ್ಥಿಗಳ ಕಲಿಯುವಿಕೆಯು ಕೇವಲ **"Jug and mug"** ತತ್ವವನ್ನು ಅವಲಂಬಿಸಿದೆ. ಶಿಕ್ಷಕರು ವಿದ್ಯಾರ್ಥಿಗಳ ಖಾಲಿ ಪಾತ್ರೆಗೆ ಜ್ಞಾನ ಭಂಡಾರ ಎಂಬ ನೀರನ್ನು ತುಂಬಿಸುತ್ತಾರೆ ಎಂಬ ವಾದ ಅನ್ವಯಿಸುತ್ತದೆ. ಇಂತಹ ಶಿಕ್ಷಣ ವ್ಯಕ್ತಿ ಕೇಂದ್ರೀಕೃತವಾಗಿಲ್ಲ, ಅಂದರೆ ಮಾನವನು ತನ್ನ ಆಂತರಿಕ ತೃಪ್ತಿಗಾಗಿ ದುಡಿಮೆಯಲ್ಲಿ ಭಾಗವಹಿಸುತ್ತಿಲ್ಲ. ಆದರೆ ಬಾಹ್ಯ ಒತ್ತಡದಿಂದ ಕಾರ್ಯಮಗ್ನನಾಗುತ್ತಿದ್ದಾನೆ ಮತ್ತು ಅತಿಯಾದ ಲಾಭಾಂಶ ವೃದ್ಧಿಸಿಕೊಳ್ಳುವ ಕಡೆಗೆ ಕಾಳಜಿ ನೀಡಲಾಗಿದೆ.

### ಶಿಕ್ಷಣದ ಪ್ರಕಾರಗಳು (Types of Education)

ಶಿಕ್ಷಣವೆಂಬುದು ನಿರಂತರವಾದ ಪ್ರಕ್ರಿಯೆಯಾಗಿದೆ. ಇದು ಮಾನವನಲ್ಲಿ ಸದಾ ಸಾಮಾಜಿಕ ನಿಯಮಗಳ ಬಗ್ಗೆ ಜಾಗೃತಿ ಮೂಡಿಸುವ ಉದ್ದೇಶವನ್ನು ಹೊಂದಿದೆ. ಈ ಹಿನ್ನೆಲೆಯಲ್ಲಿ ಸಮಾಜದ ಚೌಕಟ್ಟಿನಲ್ಲಿಯೇ ವ್ಯಕ್ತಿತ್ವ ವಿಕಾಸ, ಹಿರಿಯರ ಸಂಸ್ಕೃತಿಯನ್ನು ಹೊಸಪೀಳಿಗೆಗಳಿಗೆ ವರ್ಗಾವಣೆ, ಮಾನವನ ಸಾಮರ್ಥ್ಯತೆ ಬಗ್ಗೆ ಸ್ವಯಂಪ್ರೇರಿತವಾದ ಪ್ರಶಂಸೆ, ಹೊಸ ಜ್ಞಾನಗಳು ಮತ್ತು ವಿಷಯಗಳ ಅವಿಷ್ಕಾರಗಳು ಮುಂತಾದ ವಿಷಯಗಳ ಶಿಕ್ಷಣವನ್ನು ಎರಡು ಪ್ರಕಾರಗಳಾಗಿ ವಿಂಗಡಿಸಲಾಗಿದೆ. ಅವುಗಳೆಂದರೆ – ಅನೌಪಚಾರಿಕ ಮತ್ತು ಔಪಚಾರಿಕ ಶಿಕ್ಷಣ.

1. **ಅನೌಪಚಾರಿಕ ಶಿಕ್ಷಣ (Informal Education):–** ಇದೊಂದು ಸಮಾಜಿಕ ಶಿಕ್ಷಣವಾಗಿದ್ದು, ಉದ್ದೇಶಪೂರ್ವಕವಲ್ಲದ, ನಿರಂತರವಾಗಿ ಸಮವಯಸ್ಕರ ಸಮೂಹ ಹಾಗೂ ದುಡಿಮೆಯ ಜಾಗದಲ್ಲಿ ಹಲವಾರು ವಿಷಯಗಳನ್ನು ಕಲಿಯುವ ಪ್ರಕ್ರಿಯೆಯಾಗಿದೆ. ಈ ರೀತಿಯ ಶಿಕ್ಷಣವು, ಕುಟುಂಬ, ನೆರೆಹೊರೆ, ಧರ್ಮದಿಂದ ಲಭ್ಯವಾಗುತ್ತದೆ. ಉದಾಹರಣೆಗೆ ಕುಟುಂಬದಿಂದ ನವಜಾತ ಶಿಶುಗಳು ತಮ್ಮ ಸಮೂಹದ ಭಾಷೆ, ಆಚಾರ–ವಿಚಾರ, ಸಂಸ್ಕೃತಿ, ಸುತ್ತ–ಮುತ್ತಲಿನ ಪರಿಸರದ ಪ್ರಾಮುಖ್ಯತೆ – ಹೀಗೆ ಜೀವಿಸಲು ಅಗತ್ಯವಾದ ವಿಷಯಗಳನ್ನು ಅರಿತುಕೊಳ್ಳುತ್ತಾರೆ. ಕಾಲಕ್ರಮೇಣ ಕುಟುಂಬದ ಹೊರಗೆ – ಸಮ ವಯಸ್ಕರು, ರಕ್ತ ಸಂಬಂಧಿಗಳು, ಸಮೂಹ ಮಾಧ್ಯಮಗಳಿಂದ ವೈವಿಧ್ಯಮಯವಾದ ಹಾಗೂ ಹಲವಾರು ವಿಚಾರಧಾರೆಗಳ ಬಗ್ಗೆ ಮಾಹಿತಿ ಸಂಗ್ರಹಿಸಿಕೊಳ್ಳುತ್ತಾರೆ.

2. **ಔಪಚಾರಿಕ ಶಿಕ್ಷಣ (Formal Education) :–** ಪೂರ್ವ ಯೋಜಿತ, ಉದ್ದೇಶಪೂರ್ವಕ ಮತ್ತು ಸ್ಥಾಪಿತ ನಿಯಮಗಳಿಂದ ವ್ಯವಸ್ಥಿತವಾಗಿರುವ ಶಿಕ್ಷಣ ವ್ಯವಸ್ಥೆಯೇ ಔಪಚಾರಿಕ ಶಿಕ್ಷಣ. ಪಠ್ಯಕ್ರಮ ಮತ್ತು ಪರೀಕ್ಷೆಯ ಮೂಲಕ ವಿದ್ಯಾರ್ಥಿಗಳಿಗೆ ನಾಲ್ಕು ಗೋಡೆ ಒಳಗೆ ವಿಚಾರಗಳ ವಿನಿಮಯ ನಡೆಸುವುದೇ ಔಪಚಾರಿಕ ಶಿಕ್ಷಣ.

ಈ ಔಪಚಾರಿಕ ಶಿಕ್ಷಣವನ್ನು ಪ್ರಾಥಮಿಕ, ಮಾಧ್ಯಮಿಕ ಮತ್ತು ಉನ್ನತ ಶಿಕ್ಷಣ ಎಂದು ವರ್ಗೀಕರಿಸಲಾಗಿದೆ. ಈ ವರ್ಗೀಕರಣವೂ ವಯೋಮಾನದ ಆಧಾರವಾಗಿದೆ ಹಾಗೆಯೇ ಉನ್ನತ ಶಿಕ್ಷಣದಲ್ಲಿ ಕಲೆ, ವಾಣಿಜ್ಯ ಮತ್ತು ವಿಜ್ಞಾನ ಹಾಗೂ ತಾಂತ್ರಿಕ ಶಿಕ್ಷಣವೆಂದು ವರ್ಗೀಕರಿಸಲಾಗಿದ್ದು, ಉನ್ನತ ಶಿಕ್ಷಣವನ್ನು ಸಾವಿರಾರು ಶಾಖೆಗಳಾಗಿ ವಿಂಗಡಿಸಲಾಗಿದೆ. ಪ್ರತಿಯೊಂದು ಶಾಖೆಗಳಲ್ಲಿ ವಿಶಿಷ್ಟೀಕರಣ ಮತ್ತು ವಿಶೇಷ ಪರಿಣತಿ ಕಡೆಗೆ ಗಮನ ಹರಿಸಲಾಗಿದೆ.

❑❑❑

# ಅಧ್ಯಾಯ – 6
# ಸಾಮಾಜಿಕ ಪರಿವರ್ತನೆ
# [SOCIAL CHANGE]

## 6.1 ಅರ್ಥ ಮತ್ತು ವ್ಯಾಖ್ಯೆಗಳು:

ಜಗತ್ತಿನಲ್ಲಿ ಪ್ರತಿಯೊಂದು ಪ್ರಕ್ರಿಯೆಯು ಪರಿವರ್ತನೆಗೆ ಒಳಪಟ್ಟಿರುತ್ತದೆ. ಯಾವುದೇ ಸಮಾಜವು ಸ್ಥಿರವಾಗಿರುವುದಿಲ್ಲ. ಪರಿವರ್ತನೆ ನಿಧಾನವಾಗಿರಬಹುದು ಅಥವಾ ವೇಗವಾಗಿರಬಹುದು ಆದರೆ ನಿರಂತರವಾಗಿ ಪರಿವರ್ತನೆಯಾಗುತ್ತಿರುತ್ತದೆ. ಆಕ್ಸ್‌ಫರ್ಡ್ ಡಿಕ್ಸನರಿ ಪ್ರಕಾರ – "ಬದಲಾವಣೆ ಎಂದರೆ ಒಂದು ಸಂಗತಿ ಇನ್ನೊಂದು ರೂಪ ಪಡೆಯುವದು. ಅಥವಾ ಮತ್ತೊಂದು ವಿಧದಲ್ಲಿ ರೂಪಗೊಳ್ಳುವದು ಅಥವಾ ಒಂದು ವ್ಯವಸ್ಥೆ ಇನ್ನೊಂದೆಡೆಗೆ ಸಾಗುವುದು ಎಂದರ್ಥ"

ಅದೇ ರೀತಿಯಲ್ಲಿ ನಾವು ಸಮಾಜವನ್ನು ಗಮನಿಸಿದಾಗ ಬಹಳಷ್ಟು ಪರಿವರ್ತನೆಗಳಾಗಿರುವುದು ಕಂಡುಬರುತ್ತದೆ. ವಿಕಾಸ ಪ್ರಕ್ರಿಯೆಯ ಬಗ್ಗೆ ಡಾರ್ವಿನ್‌ರವರ ವಿವರಣೆ ಏನೆಂದರೆ ಮಂಗ ವಿಕಾಸ ಹೊಂದುತ್ತ ಮಾನವನಾದ. ಅದೇ ರೀತಿ ಮಾನವನ ಜೀವನವು ಬದಲಾವಣೆ ಹೊಂದಲು ಬಹಳಷ್ಟು ವರ್ಷಗಳೇ ಕಳೆದವು. ಇಂತಹ ಪರಿವರ್ತನೆಗಳು ಮಾನವನ ಜೀವನದಲ್ಲಿ ಮತ್ತು ಪರಿಸರದಲ್ಲಿ ಬದಲಾವಣೆ ತರುತ್ತವೆ. ಸಾಮಾಜಿಕ ಪರಿವರ್ತನೆಯ ಪರಿಕಲ್ಪನೆಯು ಮಾನವನ ಸಾಮಾಜಿಕ ಸಂಬಂಧಗಳ ವ್ಯವಸ್ಥೆಯಲ್ಲಿ ತರುವ ಮಾರ್ಪಾಟುಗಳನ್ನು ಸಂಕೇತಿಸುತ್ತದೆ.

ಸಾಮಾಜಿಕ ಸಂಬಂಧಗಳೇ ಸಾಮಾಜಿಕ ಪ್ರಕ್ರಿಯೆಗೆ, ಸಾಮಾಜಿಕ ಸಂಘಟನೆಗೆ ಕಾರಣವಾಗಿರುವುದಲ್ಲದೇ ಕುಟುಂಬ ವ್ಯವಸ್ಥೆ, ವಿವಾಹ, ಧರ್ಮ, ಸಂಸ್ಕೃತಿ ಮತ್ತು ನಾಗರಿಕತೆ ಇವುಗಳಲ್ಲಿ ಪರಿವರ್ತನೆ ತರುತ್ತದೆ.

ಅಗಷ್ಟ್ ಕೋಮ್ಟ್ ರವರು, ಸಮಾಜವನ್ನು ಎರಡು ಭಾಗಗಳನ್ನಾಗಿಸಿ ಅಭ್ಯಸಿಸಿದರು ಒಂದು– **"ಸಾಮಾಜಿಕ ಸ್ಥಿತಿಶಾಸ್ತ್ರ"** ವಾದರೆ ಇನ್ನೊಂದು **"ಸಾಮಾಜಿಕ ಚಲನಾಶಾಸ್ತ್ರ"**. ಸಾಮಾಜಿಕ ಚಲನಾಶಾಸ್ತ್ರವೇ ಸಮಾಜದಲ್ಲಾಗುತ್ತಿರುವ ಬದಲಾವಣೆಯನ್ನು ಸೂಚಿಸುತ್ತದೆ. ಕೆಲವು ಸಮಾಜಗಳು ನಿಧಾನವಾಗಿ ಬದಲಾಗುತ್ತವೆ. ಇನ್ನೂ ಕೆಲವು ವೇಗವಾಗಿ ಪರಿವರ್ತನೆ ಹೊಂದುತ್ತವೆ. ಸಮಾಜಶಾಸ್ತ್ರಜ್ಞರು ಸಮಾಜದ ಆರಂಭದಿಂದಲೇ ಆಗಿರುವ ಬದಲಾವಣೆ ಗುರುತಿಸಿ ಬೇರೆ ಬೇರೆ ದೃಷ್ಟಿಕೋನಗಳ ಮೂಲಕ ವಿಶ್ಲೇಷಿಸುವ ಪ್ರಯತ್ನ ಮಾಡಿದ್ದಾರೆ.

**ಎಂ.ಇ.ಜೋನ್ಸ್ :** "ಸಾಮಾಜಿಕ ಪ್ರಕ್ರಿಯೆಗಳು, ಸಾಮಾಜಿಕ ಮಾದರಿಗಳು, ಸಾಮಾಜಿಕ ಅಂತರಕ್ರಿಯೆ ಅಥವಾ ಸಾಮಾಜಿಕ ಸಂಘಟನೆಯಲ್ಲಿನ ಮಾರ್ಪಾಡುಗಳು ಅಥವಾ ವ್ಯತ್ಯಾಸಗಳನ್ನು ವಿವರಿಸಲು ಸಾಮಾಜಿಕ ಪರಿವರ್ತನೆ ಎಂಬ ಕಲ್ಪನೆಯನ್ನು ಬಳಸಲಾಗಿದೆ".

**ಕಿಂಗಸ್ಲೇ ಡೇವಿಸ್**: "ಸಾಮಾಜಿಕ ಸಂರಚನೆ ಮತ್ತು ಕಾರ್ಯಗಳಲ್ಲಿ ಅಂದರೆ ಸಾಮಾಜಿಕ ಸಂಘಟನೆಯಲ್ಲಿ ಉಂಟಾದ ಪರಿವರ್ತನೆಗೆ ಸಾಮಾಜಿಕ ಬದಲಾವಣೆ". ಎನ್ನಲಾಗಿದೆ.

**ಮೆಕೈವರ್ ಮತ್ತು ಪೇಜ್**: ಬಹಳ ಸರಳ ಶಬ್ದಗಳಲ್ಲಿ ಸಾಮಾಜಿಕ ಪರಿವರ್ತನೆಯನ್ನು "ಸಾಮಾಜಿಕ ಸಂಬಂಧಗಳಲ್ಲಾಗುವ ಪರಿವರ್ತನೆ" ಎಂದು ಕರೆದಿದ್ದಾರೆ.

## ಸಾಮಾಜಿಕ ಪರಿವರ್ತನೆಯ ಲಕ್ಷಣಗಳು [Characteristics of Social Change]

### a) ಸಾಮಾಜಿಕ ಪರಿವರ್ತನೆಯು ಸಾರ್ವತ್ರಿಕವಾದುದು [social change is Universal]:

ಸಾಮಾಜಿಕ ಪರಿವರ್ತನೆಯು ಜಗತ್ತಿನ ಎಲ್ಲಾ ಸಮಾಜಗಳಲ್ಲೂ ಸಂಭವಿಸುತ್ತಲೇ ಇರುತ್ತದೆ. ಕಾಲ ದೇಶ ಎಂಬ ಬೇಧವಿಲ್ಲದೇ ಎಲ್ಲಾ ಕಾಲಗಳಲ್ಲಿಯೂ ಎಲ್ಲಾ ದೇಶಗಳಲ್ಲಿಯೂ ಸಂಭವಿಸುತ್ತಿರುತ್ತದೆ. ಪ್ರಾಚೀನ ಆದಿವಾಸಿ – ಆಧುನಿಕ, ಗ್ರಾಮ – ನಗರ ಮುಂತಾದ ಎಲ್ಲಾ ಸಮಾಜಗಳಲ್ಲಿಯೂ ಸಹ ಸಾಮಾಜಿಕ ಪರಿವರ್ತನೆ ನಡೆಯುತ್ತಿರುತ್ತದೆ. ಗ್ರಾಮೀಣ ಸಮಾಜದಲ್ಲಿ ನಿಧಾನವಾಗಿ, ನಗರಸಮಾಜದಲ್ಲಿ ವೇಗವಾಗಿ ಬದಲಾವಣೆ ಕಾಣುತ್ತೇವೆ. ಭಾರತದಲ್ಲಿ ಇಂದು ಉತ್ತರದಿಂದ ದಕ್ಷಿಣದವರೆಗೆ ಬದಲಾವಣೆಯ ವೇಗವನ್ನು ಕಾಣುತ್ತಿದ್ದೇವೆ. ಬದಲಾವಣೆಯ ವೇಗ ಮತ್ತು ಪ್ರಮಾಣ ಸಮಾಜದಿಂದ ಸಮಾಜಕ್ಕೆ ವ್ಯತ್ಯಾಸವಾದರೂ ಸ್ಥಿರ, ಅಪರಿವರ್ತಿತ ಸಮಾಜ ಎಲ್ಲೂ ಕಾಣಸಿಗದು.

### b) ಸಾಮಾಜಿಕ ಪರಿವರ್ತನೆಯು ಸಂಕೀರ್ಣವಾದದ್ದು (Social change is complex):

ಸಮಾಜವು ಸಂಕೀರ್ಣವಾದದ್ದು. ಅದರಂತೆ ಸಾಮಾಜಿಕ ಪರಿವರ್ತನೆಯು ಸಂಕೀರ್ಣವಾಗಿದೆ. **ಸಾಮಾಜಿಕ ಪರಿವರ್ತನೆಗೆ ಕಾರಣಗಳಾವುವು? ಅದರ ಗುರಿ ಯಾವುದು ? ಯಾವ ದಿಸೆಯತ್ತ ಹೇಗೆ ಅದು ಸಾಗಬೇಕು?** ಈ ಪ್ರಶ್ನೆಗಳು ಸಮಾಜಶಾಸ್ತ್ರಜ್ಞರಿಗೆ ಇಂದಿಗೂ ಸವಾಲುಗಳೇ ಆಗಿವೆ. ಇದು ಸರಳವಾದದ್ದಲ್ಲ ಆದರೆ ಸಂಕೀರ್ಣವಾಗಿದೆ. ಇದರ ಒಳ–ಹೊರಗನ್ನು ಸಂಪೂರ್ಣವಾಗಿ ಅರಿತುಕೊಳ್ಳಲಿಕ್ಕೆ ಸಾಧ್ಯವಾಗಿಲ್ಲ ಸಾಮಾಜಿಕ ಪರಿವರ್ತನೆಯ ದಿಕ್ಕು ಪ್ರಮಾಣ ಮತ್ತು ವೇಗದಲ್ಲಿ ವಿವಿಧತೆ ಇರುವುದರಿಂದ ಸಂಕೀರ್ಣವಾದುದಾಗಿದೆ.

### c) ಸಾಮಾಜಿಕ ಪರಿವರ್ತನೆ ಸಾಮುದಾಯಿಕ ಪರಿವರ್ತನೆ [Social is change is community change]:

ಸಾಮಾಜಿಕ ಪರಿವರ್ತನೆಯು ವೈಯಕ್ತಿಕವಾದುದಲ್ಲ ಅದು ಸಾಮಾಜಿಕವಾದುದ್ದು. ಇದು ವ್ಯಕ್ತಿಯ ಜೀವನದಲ್ಲಾಗುವ ಪರಿವರ್ತನೆಗೆ ಸಂಬಂಧಿಸಿದುದಲ್ಲ. ಸಮುದಾಯದ ಸಾಮಾಜಿಕ ಜೀವನದಲ್ಲಿ ಉಂಟಾದ ಪರಿವರ್ತನೆಗಳನ್ನು ಸಾಮಾಜಿಕ ಪರಿವರ್ತನೆ ಸೂಚಿಸುತ್ತದೆ. ಅನೇಕ ಅಂಶಗಳು ಸಮುದಾಯದ ಮೇಲೆ ಪ್ರಭಾವ ಬೀರುವುದರಿಂದ ಸಮಗ್ರವಾದ ಪರಿವರ್ತನೆ ಕಾಣುತ್ತೇವೆ. ಉದಾಹರಣೆಗಾಗಿ ಹೇಳುವುದಾದರೆ. ಭಾರತ ಸ್ವಾತಂತ್ರ್ಯ ಪಡೆದ ಮೇಲೆ ಭಾರತೀಯ ಸಮುದಾಯಗಳು ಪರಿವರ್ತನೆಗೊಂಡವು, ಈಗ ಭಾರತವನ್ನು ಆಧುನಿಕ ಭಾರತವೆನ್ನುವುದಾದರೆ ಅದಕ್ಕೆ ಸಾಮಾಜಿಕ ಪರಿವರ್ತನೆಯೇ ಕಾರಣ.

### d) ಸಾಮಾಜಿಕ ಪರಿವರ್ತನೆಯು ನಿರಂತರವಾದುದು ಹಾಗೂ ಸಾಮಯಿಕವಾದುದು

[Social change is continuous and temporal ] : -

ಸಾಮಾಜಿಕ ಪರಿವರ್ತನೆಯು ನಿರಂತರವಾದುದು, ಸತತವಾಗಿ ಪರಿವರ್ತನೆ ಆಗುತ್ತಲೇ ಇರುತ್ತದೆ. ಪರಿವರ್ತನೆಗಳನ್ನು ಯಾರೂ ತಡೆಯಲಾರರು. ಮಾನವ ಸಮಾಜದ ಇತಿಹಾಸ ಆರಂಭವಾದಂದಿನಿಂದ ಇಂದಿನವರೆಗೂ ಪರಿವರ್ತನೆಗಳು ಸಮಾಜದಲ್ಲಿ ಸಂಭವಿಸುತ್ತಲೇ ಇವೆ ಇದಕ್ಕೆ ಕೊನೆಯೆಂಬುದು ಇಲ್ಲ. ಹಾಗೆಯೇ ಸಾಮಾಜಿಕ ಪರಿವರ್ತನೆ ಕಾಲದ ಮೂಲಕವೇ ಸಂಭವಿಸುತ್ತದೆ ಅಂದರೆ ಪರಿವರ್ತನೆ ಸಂಭವಿಸುವುದಕ್ಕೆ ಸಮಯ ಹಿಡಿಯುತ್ತದೆ. ಇದನ್ನು ಸಾಮಯಿಕ ಅನ್ನುತ್ತೇವೆ. ಅವಿಷ್ಕಾರಗಳು ಮತ್ತು ಮಾರ್ಪಾಡುಗಳು ಸಮುದಾಯದಲ್ಲಿ ನಿರಂತರವಾಗಿ ಪರಿವರ್ತನೆ ತರುತ್ತವೆ. ಎರಡು ಬೇರೆ ಬೇರೆ ಕಾಲಘಟ್ಟಗಳಲ್ಲಿ ಆಗಿರುವ ಪರಿವರ್ತನೆಗಳನ್ನು ಹೋಲಿಕೆ ಮಾಡಿದಾಗ ಆಯಾ ಕಾಲದಲ್ಲಿ ಪರಿವರ್ತನೆಯ ಸಂಬಂಧ ಗೊತ್ತಾಗುತ್ತದೆ.

**e) ಸಾಮಾಜಿಕ ಪರಿವರ್ತನೆಯ ವೇಗ ಮತ್ತು ಪರಿಮಾಣ [speed and extent of Social change]:-**

ಸಾಮಾಜಿಕ ಪರಿವರ್ತನೆಯ ವೇಗ ಹಾಗೂ ಪರಿಮಾಣ ಸಮಾಜದಿಂದ ಸಮಾಜಕ್ಕೆ ಬೇರೆ ಬೇರೆಯಾಗಿವೆ. ಅದಕ್ಕೆ ವಿವಿಧ ಅಂಶಗಳು ಕಾರಣವಾಗಿರುತ್ತವೆ. ಒಂದು ನಿರ್ದಿಷ್ಟ ಸಮಾಜದಲ್ಲಿಯೂ ಸಹ ಒಂದು ನಿರ್ದಿಷ್ಟ ಅವಧಿಯಲ್ಲಿ ಆಗುವ ಸಾಮಾಜಿಕ ಪರಿವರ್ತನೆಯ ವೇಗ ಮತ್ತು ಪರಿಮಾಣ ಮತ್ತೊಂದು ಅವಧಿಯಲ್ಲಿ ಭಿನ್ನವಾಗಿ ಕಂಡು ಬರುತ್ತದೆ. ಯಾವುದಾದರೂ ಒಂದು ಅಂಶ ಪರಿವರ್ತನೆಯನ್ನು ವೇಗವಾಗುವಂತೆ ಮಾಡಿದರೆ ಇನ್ನೊಂದು ಅಂಶ ನಿಧಾನವಾಗಿ ಸಾಗುವಂತೆ ಮಾಡುತ್ತದೆ.ಸಾಮಾಜಿಕ ಪರಿವರ್ತನೆ ಮೇಲ್ಮುಖವಾಗಿ ಅಥವಾ ಕೆಳಮುಖವಾಗಿ ಸಾಗಬಹುದು. ಈ ಘಟ್ಟದಲ್ಲಿಯೂ ವೇಗ ಮತ್ತು ಪರಿಮಾಣವನ್ನು ಕಾಣಬಹುದು.

**f) ಸಾಮಾಜಿಕ ಪರಿವರ್ತನೆ ಅನಿವಾರ್ಯವಾದುದಾಗಿದೆ [Social Change is Inevitable]**

ಸಾಮಾಜಿಕ ಪರಿವರ್ತನೆ ಸಮಾಜಕ್ಕೆ ಅನಿವಾರ್ಯವಾಗಿದೆ, ಕಾರಣ ಇದು ಸಹಜವಾಗಿದೆ. ಹಾಗೂ ಅದು ಮಾನವನ ಬೇಕು ಬೇಡಗಳನ್ನು ಅವಲಂಬಿಸಿಲ್ಲ, ಅಥವಾ ಮಾನವನ ಆಸಕ್ತಿಯಂತೆ ಪರಿವರ್ತನೆ ಹೊಂದಲಾರದು ವ್ಯಕ್ತಿ ತನ್ನ ಜ್ಞಾನ ಮತ್ತು ಕೌಶಲ್ಯದಿಂದ ಅಭಿವೃದ್ಧಿ ಪ್ರಕ್ರಿಯೆ ಪ್ರಾರಂಭಿಸಿದರೆ ಅದು ನಿರಂತರವಾಗಿ ಮುಂದುವರೆಯುತ್ತದೆ. ಅಭಿವೃದ್ಧಿ ಮತ್ತು ಕಲ್ಯಾಣ ಯೋಜನೆಗಳು ಅಗಾಧವಾದ ಪರಿವರ್ತನೆಯೊಂದಿಗೆ ವೇಗವನ್ನು ಹೆಚ್ಚಿಸುತ್ತವೆ. ಒಮ್ಮೆ ಆರಂಭವಾದ ಅಬಿವೃದ್ಧಿ ಪ್ರಕ್ರಿಯೆಯನ್ನು ನಿಲ್ಲಿಸಲಾಗುವುದಿಲ್ಲ ಮಾನವನ ಬೆಳವಣಿಗೆ ಮತ್ತು ವಿಕಾಸ ಹಿಮ್ಮುಖವಾಗಿ ಚಲಿಸುವುದಿಲ್ಲ, ಆದ್ದರಿಂದ ಬದಲಾವಣೆ ಅನಿವಾರ್ಯ.

**g) ಸಾಮಾಜಿಕ ಪರಿವರ್ತನೆ ಹೊಂದಾಣಿಕೆಯ ಪ್ರಕ್ರಿಯಾಗಿದೆ [Social change is a process of synchronization ] :**

ಸಾಮಾಜಿಕ ಪರಿವರ್ತನೆಯಿಂದ ಹಳೆಯದು ಬೇಗನೆ ನಾಶ ಹೊಂದಿ ಹೊಸತು ತಕ್ಷಣ ನಿರ್ಮಾಣಗೊಳ್ಳಲಾರದು ಹಳೆಯ ಮತ್ತು ಹೊಸದರ ನಡುವೆ ಸಂಘರ್ಷ ನಡೆದು ಹೊಸತೇನಾದರೂ ಬಂದರೆ ಅದು ಹಳೆಯ ಸಂಗತಿಗಳಿಂದಲೇ ಬರುತ್ತದೆ. ಹಳತು ಮತ್ತು ಹೊಸತರ ನಡುವೆ ಹೊಂದಾಣಿಕೆ ಏರ್ಪಡುತ್ತದೆ. ನಾವು ಧರ್ಮ–ದೇವರಲ್ಲಿ ಹೊಸ ಮೌಲ್ಯಗಳೊಂದಿಗೆ ನಂಬಿಕೆ ಇಟ್ಟಿದ್ದೇವೆ. ವಿವಾಹದ ವ್ಯವಸ್ಥೆಯಲ್ಲಿ ಅತ್ಯಾಧುನಿಕ ತಂತ್ರಗಳನ್ನು ಬಳಸುವುದರೊಂದಿಗೆ ಸಂಪ್ರದಾಯ ಪರಂಪರೆಗಳನ್ನು ಬಳಸುತ್ತೇವೆ. ಗಣಕಯಂತ್ರ ಮತ್ತು ಅಂತರ್‌ಜಾಲ ವ್ಯವಸ್ಥೆಯಿಂದ ವಧು–ವರರನ್ನು ಸಾಂಪ್ರದಾಯಕವಾಗಿ ಹೊಂದಾಣಿಕೆ ಮಾಡುವದನ್ನು ಕಾಣುತ್ತೇವೆ. ಅವಿಭಕ್ತ ಕುಟುಂಬದಲ್ಲಿ ಹಬ್ಬಗಳನ್ನು ಹಳೆಯ ಮತ್ತು ಹೊಸ ಶೈಲಿಯಲ್ಲಿ ಆಚರಿಸುತ್ತೇವೆ. ಶಿಕ್ಷಣದಲ್ಲಿ ಹಳೆಯ ಮತ್ತು ಹೊಸ ಜ್ಞಾನವನ್ನು ಜೋಡಿಸಿ ವಿದ್ಯಾರ್ಥಿಗಳು ವಿದ್ಯಾರ್ಜನೆ ಮಾಡುತ್ತಾರೆ ಸಾಮಾಜಿಕ ಪರಿವರ್ತನೆ ಹಳೆ ಬೇರು ಹೊಸ ಚಿಗುರುಗಳಿಂದ ಕೂಡಿದ ಸಮ್ಮಿಶ್ರಣವಾಗಿದೆ.

**h) ಸಾಮಾಜಿಕ ಪರಿವರ್ತನೆಯು ಪ್ರತಿಕ್ರಿಯೆಗಳ ಸರಮಾಲೆ (Social change is a chain reaction)**

ಸಮಾಜವು ಸಂಕೀರ್ಣವಾಗಿದ್ದರಿಂದ ಸಾಮಾಜಿಕ ಸಂಬಂಧಗಳೂ ಸಹ ಸಂಕೀರ್ಣವಾಗಿವೆ. ಸಮಾಜವು ಪರಸ್ಪರ ಸಂಬಂಧಿತ ಭಾಗಗಳ ಒಂದು ಸಮಷ್ಟಿ ಹಾಗಾಗಿ ಮಾನವನ ಸಾಮಾಜಿಕ ಜೀವನದ ಯಾವುದೊಂದು ಭಾಗದಲ್ಲಿ ಪರಿವರ್ತನೆ ಸಂಭವಿಸಿದರೂ ಅದು ಇತರ ಭಾಗಗಳ ಮೇಲೆ ತನ್ನ ಪ್ರಭಾವವನ್ನು ಬೀರುವುದು. ಇದರಿಂದ ಒಂದು ಪರಿವರ್ತನೆಯು ಸಮಾಜದ ಹಲವಾರು ಕ್ಷೇತ್ರಗಳಲ್ಲಿನ ಪರಿವರ್ತನೆಗೆ ಕಾರಣವಾಗಬಹುದು. ಉದಾಹರಣೆ (1) ಕೈಗಾರಿಕಾ ಜೀವನ ವಿಧಾನ ಗೃಹ ಉತ್ಪದನಾ ವ್ಯವಸ್ಥೆಯನ್ನು ನಾಶಮಾಡಿ ಸ್ತ್ರೀಯರನ್ನು

ಮನೆಯಿಂದ ಕಾರ್ಖಾನೆವರೆಗೆ ತಲುಪಿಸಿತು. ಇದರಿಂದ ಪುರುಷನ ಗುಲಾಮಗಿರಿಯಿಂದ ಅವಳಿಗೆ ಬಿಡುಗಡೆ ನೀಡಿತು ಆದಾಯ ತರುವ ಉದ್ಯೋಗ ಸ್ತ್ರೀಯರಿಗೆ ಹೊಸ ಜೀವನ ನೀಡಿ ಆತ್ಮಸ್ಥೈರ್ಯ ತುಂಬಿತು. (2) ಆಸ್ತಿ ಮತ್ತು ವಿವಾಹಕ್ಕೆ ಸಂಬಂಧಿಸಿದ ಹೊಸ ಶಾಸನಗಳ ಜಾರಿಯಿಂದ ಅವಿಭಕ್ತ ಕುಟುಂಬದಲ್ಲಿ ಪರಿವರ್ತನೆ ತಂದಿತು. ಜಾತಿ ಒಳಬಾಂಧವ್ಯ ವಿವಾಹಗಳು ಸಡಿಲವಾಗಿ ಅಂತರಜಾತಿಯ ವಿವಾಹಕ್ಕೆ ಅವಕಾಶ ನೀಡಿದೆ. ಹೀಗೆ ಸರಪಣಿ ಪ್ರಕಾರದ ಪರಿವರ್ತನೆಗಳು ಉಂಟಾಗುತ್ತವೆ.

### I) ಸಾಮಾಜಿಕ ಪರಿವರ್ತನೆ ಮೌಲ್ಯ ನಿರ್ಧಾರಿತವಾದುದಲ್ಲ. [Social change has no value judgement]:

ಸಾಮಾಜಿಕ ಪರಿವರ್ತನೆ ಒಂದು ಪ್ರಕ್ರಿಯೆ. ಕೆಲವೊಮ್ಮೆ ಧನಾತ್ಮಕ ಅಥವಾ ಋಣಾತ್ಮಕವಾಗಿರುತ್ತದೆ. ಪರಿವರ್ತನೆ ಪದ ತಟಸ್ಥ ಸ್ವರೂಪ ಹೊಂದಿರುತ್ತದೆ, ಸಮಾಜಶಾಸ್ತ್ರಜ್ಞರು ಪರಿವರ್ತನೆಯಿಂದಾಗುವ ಲಾಭ ನಷ್ಟಗಳನ್ನು ಅಭ್ಯಸಿಸದೇ ಕೇವಲ ಪರಿವರ್ತನೆಯ ಬಗೆಯನ್ನು ಅಭ್ಯಸಿಸುತ್ತಾರೆ. ಸಾಮಾಜಿಕ ಪರಿವರ್ತನೆಯ ಅಧ್ಯಯನ ಮೌಲ್ಯಾತೀತವಾದುದು. ಔದ್ಯೋಗಿಕರಣದ ಬದಲಾವಣೆಯನ್ನು ಮಾತ್ರ ಅಭ್ಯಸಿಸಲಾಗುವುದು. ಅದರಿಂದ ಉದ್ಯೋಗದ ವಿಕಾಸ ಅಥವಾ ಸಾಂಪ್ರದಾಯಿಕ ಉದ್ಯೋಗದ ಅವನತಿ ಪ್ರಮುಖವಾಗಿರುವದಿಲ್ಲ ಸಾಮಾಜಿಕ ಪರಿವರ್ತನೆ ನಿಖರವಾದ ಪರಿಶುದ್ಧವಾದ ಪ್ರಕ್ರಿಯೆ, ಅದು ವಸ್ತು ನಿಷ್ಠ ಅಧ್ಯಯನ.

### J) ಸಾಮಾಜಿಕ ಪರಿವರ್ತನೆ ನಿಯೋಜಿತ ಮತ್ತು ಅನಿಯೋಜಿತವಾಗಿದೆ (Social change may be planned and unplanned):

ಸಾಮಾಜಿಕ ಪರಿವರ್ತನೆಗೆ ನಿಸರ್ಗದ ಜೊತೆಗೆ ಮಾನವನೂ ಕಾರಣನಾಗಿದ್ದಾನೆ. ಸಾಮಾಜಿಕ ಪರಿವರ್ತನೆಯ ರೂಪ–ಗತಿ ಮತ್ತು ಪರಿಮಾಣ ಮೊದಲಾದವುಗಳು ಮಾನವನ ಪ್ರಯತ್ನದಿಂದ ಯೋಜಿತವಾಗಿದ್ದರೆ ಅಥವಾ ಅವನ ಆಯ್ಕೆಯಂತೆ ಯೋಜಿತಗೊಂಡಿದ್ದರೆ ಅದನ್ನು ನಿಯೋಜಿತ ಸಾಮಾಜಿಕ ಪರಿವರ್ತನೆ ಎನ್ನುತ್ತಾರೆ. ಅನೇಕ ಕಾರ್ಯಕ್ರಮಗಳು ಯೋಜನೆಗಳು ಪರಿಕಲ್ಪನೆಗಳು ಮುಂತಾದವುಗಳ ಮೂಲಕ ಮಾನವನು ಸಾಮಾಜಿಕ ಪರಿವರ್ತನೆಯ ದಿಸೆ ನಿಗದಿಗೊಳಿಸಲು ಪ್ರಯತ್ನಿಸುವನು. ಉದಾಹರಣೆಗೆ, ಸಮಾಜದ ಕಲ್ಯಾಣಕ್ಕಾಗಿ ಭಾರತ ಸರಕಾರ ಪಂಚವಾರ್ಷಿಕ ಯೋಜನೆಗಳನ್ನು ಜಾರಿ ಮಾಡುವುದು ಮಾನವನ ಪ್ರಯತ್ನ ಅರಸೊತ್ತಿಗೆಯಿಂದ– ಪ್ರಜಾಪ್ರಭುತ್ವದ ಕಡೆಗೆ ಪರಿವರ್ತನೆ ಹಾಗೂ ಭಾರತ ಬ್ರಿಟಿಷ್ ಆಳ್ವಿಕೆಯಿಂದ ಸ್ವಾತಂತ್ರ್ಯ ಆಂದೋಲನ ಆರಂಭಿಸಿ ಸ್ವಾತಂತ್ರ್ಯ ಪಡೆದದ್ದು ನಿಯೋಜಿತವಾಗಿದೆ. ಮಾನವನಿಂದ ಯೋಜಿತವಾಗಿಲ್ಲದಿದ್ದರೆ ಅದನ್ನು ಅನಿಯೋಜಿತ ಸಾಮಾಜಿಕ ಪರಿವರ್ತನೆ ಎನ್ನುತ್ತೇವೆ. ಉದಾಹರಣೆಗೆ ಭೂಕಂಪ, ಭೂಕುಸಿತ, ಜ್ವಾಲಾಮುಖಿ, ಬಿರುಗಾಳಿ, ಅತಿವೃಷ್ಟಿ, ಅನಾವೃಷ್ಟಿ, ಮುಂತಾದವುಗಳು.

## 6.2 ಸಾಮಾಜಿಕ ಪರಿವರ್ತನೆಯ ವಿಧಗಳು [Forms of social change ]:-

ಸಾಮಾಜಿಕ ಪರಿವರ್ತನೆಯ ವಿಶ್ಲೇಷಣೆಯಲ್ಲಿ ಸಾಮಾನ್ಯವಾಗಿ ವಿಕಾಸ ಮತ್ತು ಪ್ರಗತಿ ಎಂಬ ಪರಿಕಲ್ಪನೆಗಳನ್ನು ಬಳಕೆಮಾಡುತ್ತೇವೆ. ಜನಸಾಮಾನ್ಯರು ಇವುಗಳನ್ನು ಆಡುಮಾತಿನಲ್ಲಿ ಉಲ್ಲೇಖಿಸುವುದುಂಟು. ಸಮಾಜಶಾಸ್ತ್ರಜ್ಞರು ಈ ಪರಿಕಲ್ಪನೆಗಳನ್ನು ವಿಶೇಷ ರೀತಿಯಲ್ಲಿ ಬಳಸುತ್ತಾರೆ. ಸಾಮಾಜಿಕ ಪರಿವರ್ತನೆಯಲ್ಲಿ ಅಭಿವೃದ್ಧಿ, ವಿಕಾಸ, ಪ್ರಗತಿ, ಕ್ರಾಂತಿ, ಸುಧಾರಣೆ, ಬೆಳವಣಿಗೆ, ಮುಂತಾದ ಕಲ್ಪನೆಗಳು ಒಂದೇ ರೀತಿ ಕಂಡು ಬಂದರೂ ಇವುಗಳಲ್ಲಿ ಸಾಕಷ್ಟು ವ್ಯತ್ಯಾಸವಿದೆ. ಇವುಗಳಲ್ಲಿ ವಿಕಾಸ, ಮತ್ತು ಪ್ರಗತಿ ಈ ಎರಡು ಪರಿಕಲ್ಪನೆಗಳನ್ನು ವಿವರವಾಗಿ ತಿಳಿಸಲಾಗಿದೆ.

### A) ವಿಕಾಸ (Evolution)

**ಅರ್ಥ** : "ವಿಕಾಸ ಎಂಬುವುದು 19 ನೇ ಶತಮಾನದ ಅತಿ ಮಹತ್ವದ ಪರಿಕಲ್ಪನೆಗಳಲ್ಲೊಂದು. ಈ

ಪರಿಕಲ್ಪನೆ. ಕ್ರಿ.ಶ. 1859 ರಲ್ಲಿ **ಚಾರ್ಲ್ಸ್ ಡಾರ್ವಿನ್ "ಜೀವಸಂಕುಲಗಳ ಉಗಮ" "Origin of spicies"** ಎಂಬ ಗ್ರಂಥದಲ್ಲಿ ಪ್ರಥಮ ಬಾರಿಗೆ 'ವಿಕಾಸ'ದ ಪರಿಕಲ್ಪನೆ ಪ್ರಸ್ತಾಪಿಸಿದರು. ಜೀವನದ ಹೋರಾಟದಲ್ಲಿ ಯಶಸ್ವಿಯಾಗುವುದರ ಜೊತೆಗೆ ಪರಿಸರದೊಂದಿಗೆ ಹೆಚ್ಚು ಹೊಂದಿಕೊಂಡು ಮಾನವ ಕೆಳಸ್ತರದ ಪ್ರಾಣಿಗಳ ಮಟ್ಟದಿಂದ ವಿಕಾಸ ಹೊಂದಿದ್ದಾನೆ. [**ಮಂಗನಿಂದ ಮಾನವ**] ಎಂದು ಡಾರ್ವಿನ್ ಪ್ರತಿಪಾದಿಸಿದರು.

ಸಮಾಜಶಾಸ್ತ್ರಜ್ಞರಾದ ಹರ್ಬಟ್ ಸ್ಪೆನ್ಸರರವರು ಡಾರ್ವಿನ್ ವಿಕಾಸ ತತ್ವದಿಂದ ಪ್ರಭಾವಿತರಾಗಿ ತಮ್ಮ **"ಫಸ್ಟ್ ಪ್ರಿನ್ಸಿಪಲ್ಸ್"** ಎಂಬ ಗ್ರಂಥದಲ್ಲಿ ವಿಕಾಸ ತತ್ವವನ್ನು ಸರ್ವವ್ಯಾಪಕವಾಗುವಂತೆ ಮಾಡಿ **"ಸಾಮಾಜಿಕ ವಿಕಾಸ" ಪರಿಕಲ್ಪನೆಗೆ** ಕಾರಣರಾದರು.

ವಿಕಾಸ ಎಂಬ' ಪರಿಕಲ್ಪನೆಗೆ ತತ್ಸಮಾನವಾದ ಆಂಗ್ಲಪದ ಎವೊಲ್ಯೂಷನ್ (Evolution) ಎಂಬುದು ಲ್ಯಾಟಿನ್ ಭಾಷೆಯ ಇವೋಲ್ವೇರ್ (Evolvere) ಪದದಿಂದ ಬಂದಿದೆ. ಇವೊಲ್ವೇರ್ ಎಂದರೆ ಬೆಳವಣಿಗೆ ಹೊಂದು ಅಥವಾ ಪದರಗಳನ್ನು ಬಿಚ್ಚಿಕೊಳ್ಳು (To develop or to unfold) ಎಂದರ್ಥ, ಇದು ಸ್ವಯಂಚಾಲಿತ ಪ್ರಕ್ರಿಯೆ ಇದು ಆಂತರಿಕ ಪರಿವರ್ತನೆಯನ್ನು ಸಂಕೇತಿಸುತ್ತದೆ. ವಿಕಾಸ ಪದವು ಮೂಲಭೂತವಾಗಿ ಜೈವಿಕ ವಿಜ್ಞಾನದಿಂದ ಬಂದಿದ್ದು ತದನಂತರದಲ್ಲಿ ಸಮಾಜಶಾಸ್ತ್ರಜ್ಞರಾದ ಸರ್.ಹೆನ್ರಿಮೆಯಿನ್, ಎಲ್.ಎಚ್.ಮಾರ್ಗನ್, ಇ.ಬಿ.ಟೈಲರ್, ಸ್ಪೆನ್ಸರ್ ಮುಂತಾದವರು ವಿಕಾಸ ಸಿದ್ಧಾಂತವನ್ನು ಬೆಂಬಲಿಸಿದರು.

ಸಮಾಜಶಾಸ್ತ್ರದಲ್ಲಿ ವಿಕಾಸವನ್ನು ಮಾನವ ಸಂಬಂಧಗಳ ವಿಕಾಸ ಎಂದು ಬಳಸುತ್ತೇವೆ. ಪ್ರಾಚೀನ ಕಾಲದಿಂದ ಆಧುನಿಕ ಸಂಕೀರ್ಣ ಸಮಾಜದವರೆಗೆ ನಿಧಾನಗತಿಯಿಂದ ಮಾನವನ ಜೀವನ ಮತ್ತು ಅವನ ಸಮಾಜದ ಬೆಳವಣಿಗೆ ಆಗಿರುವುದು ಕಂಡುಬರುತ್ತದೆ. ಪ್ರಾಚೀನ ಕಾಲವಾದ ಶಿಲಾಯುಗದಲ್ಲಿ ಮಾನವ ಅರಣ್ಯಗಳಲ್ಲಿ ಸರಳ ಜೀವನ ನಡೆಸುತ್ತಿದ್ದ, ತದನಂತರ ಆದಿವಾಸಿ ಸಮೂಹ ಜೀವನ ಆರಂಭಿಸಿದ. ಆದಿವಾಸಿ ಜೀವನ ಪದ್ಧತಿ ಗ್ರಾಮೀಣ ಸಮಾಜದೆಡೆಗೆ ಪರಿವರ್ತನೆ ಹೊಂದಿತು. ನಂತರ ಸಂಕೀರ್ಣ ನಗರ ಜೀವನ ವಿಕಾಸವಾಗಿದೆ. ಸಮಾಜವು ಸರಳತೆಯಿಂದ – ಸಂಕೀರ್ಣತೆಯ ಕಡೆಗೆ ಸಾಗಿರುವುದು ಕಂಡು ಬರುತ್ತದೆ.

**ಸಾಮಾಜಿಕ ವಿಕಾಸದ ತತ್ವಗಳನ್ನು ಹರ್ಬರ್ಟಸೆನ್ಸ್‌ರವರು ಕೆಳಕಂಡಂತೆ ತಿಳಿಸಿದ್ದಾರೆ.**

1) ಸಾಮಾಜಿಕ ವಿಕಾಸವು ಸಾಂಸ್ಕೃತಿಕ ಹಾಗೂ ಮಾನವನ ವಿಕಾಸವನ್ನು ವಿವರಿಸುತ್ತದೆ.

2) ಜೈವಿಕ ವಿಕಾಸದಂತೆ ಸಾಮಾಜಿಕ ವಿಕಾಸವು ಘಟಿಸುತ್ತದೆ.

3) ಸಾಮಾಜಿಕ ವಿಕಾಸ ಅನುಕ್ರಮವಾಗಿರುತ್ತದೆ.

4) ಸಾಮಾಜಿಕ ವಿಕಾಸವು ಪ್ರಗತಿಯನ್ನು ಸೂಚಿಸುತ್ತದೆ ವಿನಃ ಹಿನ್ನೆಡೆಯನ್ನಲ್ಲ.

## ವ್ಯಾಖ್ಯೆಗಳು (Definitions)

1) **ಮೊರಿಸ್ ಗಿನ್ಸಬರ್ಗ್:** "ವಿಕಾಸವು ಸರಳತೆಯಿಂದ ಸಂಕೀರ್ಣತೆಯತ್ತ ಉಂಟಾದ ಚಲನೆ ಆಗಿದೆ ಎಂದಿದ್ದಾರೆ".

2) **ಹರ್ಬಟ್ ಸ್ಪೆನ್ಸ್‌ರ್:** ತಮ್ಮ **ಫಸ್ಟ್ ಪ್ರಿನ್ಸಿಪಲ್ಸ್** ಎಂಬ ಗ್ರಂಥದಲ್ಲಿ ವ್ಯಾಖ್ಯಾನಿಸುತ್ತ –"ವಿಕಾಸವೆಂಬುದು ಅನಿರ್ದಿಷ್ಟತೆಯಿಂದ ನಿರ್ದಿಷ್ಟತೆಯ ಕಡೆಗೆ ಹಾಗೂ ಅಸಂಗತ ಸಮೈಕ್ಯದಿಂದ ಸಂಗತ ವೈವಿಧ್ಯದ ಕಡೆಗೆ ಉಂಟಾಗುವ ಬದಲಾವಣೆ ಎಂದಿದ್ದಾರೆ.

3) ಸರಳ ಅರ್ಥದಲ್ಲಿ ಹೇಳುವುದಾದರೆ ಏಕತೆಯಿಂದ ವೈವಿಧ್ಯತೆಯ ಕಡೆಗೆ ಸಮಾಜದ ವರ್ಗಾವಣೆಯನ್ನು ವಿಕಾಸ" ಎನ್ನುತ್ತಾರೆ.

### ಲಕ್ಷಣಗಳು (Characteristics)

1) ಸಾಮಾಜಿಕ ವಿಕಾಸವು ಮಂದಗತಿಯಿಂದ ಕ್ರಮೇಣವಾಗಿ ಸಂಭವಿಸುವಂತಿದ್ದು.
2) ಸಾಮಾಜಿಕ ವಿಕಾಸವು ಪ್ರಗತಿದಾಯಕವಾದದ್ದು.
3) ಸಾಮಾಜಿಕ ವಿಕಾಸವು ಸುವ್ಯವಸ್ಥಿತವಾದ ಪ್ರಕ್ರಿಯೆ ಇದು ಹಂತ ಹಂತವಾಗಿ ನಡೆಯುವಂತಹದ್ದು.
4) ಸಾಮಾಜಿಕ ವಿಕಾಸವು ಪ್ರಬೇಧಿಕರಣದ ಪ್ರಕ್ರಿಯೆಯಾಗಿದೆ.
5) ಸಾಮಾಜಿಕ ವಿಕಾಸವು ಸಂಯೋಜನೆಯ ಪ್ರಕ್ರಿಯೆಯಾಗಿದೆ.
6) ಸಾಮಾಜಿಕ ವಿಕಾಸವು ಏಕತೆಯಿಂದ ವೈವಿಧ್ಯತೆ ಕಡೆಗೆ ಸಾಗುವ ಪ್ರಕ್ರಿಯೆಯಾಗಿದೆ.

## B) ಸಾಮಾಜಿಕ ಪ್ರಗತಿ (Social progress)

### ಅರ್ಥ :

ಸಾಮಾಜಿಕ ಪರಿವರ್ತನೆಯ ವಿಶ್ಲೇಷಣೆಯೊಂದಿಗೆ ಸೇರಿಕೊಂಡಿರುವ ಮುಖ್ಯ ಕಲ್ಪನೆ **"ಸಾಮಾಜಿಕ ಪ್ರಗತಿ"** ಈ ಕಲ್ಪನೆಯನ್ನು ಸಾಮಾಜಿಕಬದಲಾವಣೆ ಮತ್ತು ವಿಕಾಸದೊಂದಿಗೆ ವಿಶ್ಲೇಷಿಸಬಹುದು. ಈ ಮೊದಲು ಸಾಮಾಜಿಕ ವಿಕಾಸವನ್ನು ಕೇಡಿನಿಂದ ಒಳತಿನ ಕಡೆಗೆ ಸಾಗುವ ಪ್ರಕ್ರಿಯೆ ಎಂದು ತಿಳಿಯಲಾಗಿತ್ತು. ಅಂದರೆ ಸಮಾಜ ಮತ್ತು ಮಾನವನನ್ನು ಉತ್ತಮ ಸ್ಥಿತಿಯೆಡೆಗೆ ಕರೆದೊಯ್ಯುವುದು ಎಂದರ್ಥ. ಅದರಂತೆ ಪ್ರಗತಿಯು ತರ್ಕಬದ್ಧವಾಗಿ ಬೆಳೆಯುವ ಪ್ರಕ್ರಿಯೆಯಾಗಿದೆ. ಸಮಾಜವನ್ನು ಮಾನವನು ತನ್ನಿಚ್ಛೆಯ ಮೇರೆಗೆ ಸುಧಾರಿಸುವ ಕ್ರಮವನ್ನು ಪ್ರಗತಿ ಎನ್ನುತ್ತೇವೆ.

ಮಾನವನು ವಿಜ್ಞಾನ ಮತ್ತು ತಂತ್ರಜ್ಞಾನದೊಂದಿಗೆ ಸಮಾಜವನ್ನು ಬದಲಿಸುವ ಕ್ರಿಯೆಯನ್ನು ಪ್ರಗತಿ ಎನ್ನಬಹುದು. ಸಮಾಜಶಾಸ್ತ್ರಜ್ಞರಿಗೆ ಸಾಮಾಜಿಕ ಪ್ರಗತಿ ಆಸಕ್ತಿಯ ಕ್ಷೇತ್ರವಾಗಿದೆ. ಜಗತ್ತಿನಾದ್ಯಂತ ಸಾಕ್ರೇಟಿಸ್, ಅರಿಸ್ಟಾಟಲ್, ಮನು, ಕೌಟಿಲ್ಯ ಮುಂತಾದ ತತ್ವಜ್ಞಾನಿಗಳು ಸಾಮಾಜಿಕ ಕಲ್ಯಾಣವನ್ನು ಮತ್ತು ಧನಾತ್ಮಕ ಬದಲಾವಣೆಗಳನ್ನು ಸಮಾಜಿಕ ಪ್ರಗತಿ ಎಂದು ಗುರುತಿಸಿದ್ದಾರೆ. ಪ್ರಗತಿಯನ್ನು ಆಂಗ್ಲ ಭಾಷೆಯಲ್ಲಿ "Progress" ಎನ್ನುತ್ತಾರೆ. ಈ ಪದವನ್ನು ಲ್ಯಾಟಿನ್ ಭಾಷೆಯಿಂದ ಪಡೆಯಲಾಗಿದೆ. ಲ್ಯಾಟಿನ್ ಭಾಷೆಯ "Progressuss" ಮತ್ತು "Pro-gradeir" ಎಂಬ ಪದದಿಂದ ಬಂದಿದೆ ಹಾಗೆಂದರೆ, ಮುನ್ನಡೆಯುವಿಕೆ ಎಂದರ್ಥ. ಪ್ರಗತಿ ಎಂದರೆ ಗುರಿ ಮತ್ತು ಉದ್ದೇಶದತ್ತ ಮುನ್ನಡೆಯುವ ಕ್ರಿಯೆ ಎಂದು ಅರ್ಥೈಸಲಾಗಿದೆ. ಪ್ರಗತಿ ನಮ್ಮ ಬಯಕೆಯ ಗುರಿಯತ್ತ ಹೊಂದಿರುವ ಬದಲಾವಣೆ ಆಗಿದೆ. ಪ್ರತಿ ಪ್ರಗತಿಗೆ ನಿಶ್ಚಿತ ಗುರಿ ಇರುತ್ತದೆ. ಗುರಿ ಮತ್ತು ಉದ್ದೇಶದ ಸಾಧನೆಯ ಮೇರೆಗೆ ಪ್ರಗತಿಯನ್ನು ನಿರ್ಧರಿಸಲಾಗುತ್ತದೆ. ಪ್ರಗತಿಯೆಂದರೆ ನಿರ್ದೇಶಿತ ದಿಕ್ಕಿನಲ್ಲಿ ಸಾಗುವ ಬೆಳವಣಿಗೆ ಎಂದರ್ಥ. ಸಾಮಾಜಿಕ ಮೌಲ್ಯಗಳ ಒಪ್ಪಿಗೆಯ ಮೇರೆಗೆ ಮುಂದಡಿ ಇಡುವ ನಿಶ್ಚಿತ ಅಂಶಗಳನ್ನು ನಾವು ಪ್ರಗತಿ ಎಂದು ಕರೆಯುತ್ತೇವೆ. ಪ್ರಗತಿಯಲ್ಲಿ ತತ್ವ ಮತ್ತು ಆಲೋಚನೆಗಳು ಅಡಗಿವೆ. ಪ್ರಗತಿ ಸಾಮಾಜಿಕ ಬದಲಾವಣೆಯನ್ನು ತರುತ್ತದೆ.

### ವ್ಯಾಖ್ಯೆಗಳು (Definitions)

**ಗಿನ್ಸಬರ್ಗ್** ರವರ ಅಭಿಪ್ರಾಯದಲ್ಲಿ –"ಮೌಲ್ಯದಂತಹ ವೈಚಾರಿಕ ಮಾಪಕದ ಸಮರ್ಥನೆ ಪಡೆದ ದಿಕ್ಕಿನತ್ತ ಉಂಟಾಗುವ ಬೆಳವಣಿಗೆ ಅಥವಾ ವಿಕಾಸವೇ ಪ್ರಗತಿ".

**ಸಿ.ಎಸ್.ದಾಮ್ಲೆ** ರವರ ಪ್ರಕಾರ "ಪ್ರಗತಿ ಎಂಬುದು ಪರಿವರ್ತನೆಯಾಗಿದೆ. ಆದರೆ ಈ ಪರಿವರ್ತನೆ ಯಾವುದೋ ದಿಸೆಯತ್ತ ಸಂಭವಿಸುವ ಪರಿವರ್ತನೆಯಾಗಿರದೆ ಅಪೇಕ್ಷಣೀಯವಾದ ಅಥವಾ ಸ್ವೀಕೃತವಾದ ದಿಸೆಯತ್ತ ಸಂಭವಿಸುವ ಪರಿವರ್ತನೆಯಾಗಿದೆ."

**ಪಾರ್ಕ್ ಮತ್ತು ಬರ್ಗಸ್ ರವರ ಪ್ರಕಾರ** "ವ್ಯಕ್ತಿ ಇಲ್ಲವೇ ವ್ಯಕ್ತಿಗಳ ಸಮೂಹ ಇಲ್ಲವೇ ಜೀವನದ ಯಾವುದೇ ಇತರ ಸಂಘಟನೆಯ ರೂಪವು ಪ್ರಸ್ತುತ ಪರಿಸರಕ್ಕೆ ಬದಲಾವಣೆ ಹೊಂದಲು ಇಲ್ಲವೇ ಅನುಸರಣೆ ಮಾಡಲು ಸುಲಭ ಮಾಡಿಕೊಡುವುದನ್ನು ಪ್ರಗತಿ" ಎನ್ನುತ್ತೇವೆ.

### ಸಾಮಾಜಿಕ ಪ್ರಗತಿಯ ಲಕ್ಷಣಗಳು.

**ಸಾಮಾಜಿಕ ಪ್ರಗತಿ ಪರಿಕಲ್ಪನೆಗೆ ಸಂಬಂಧಿಸಿದಂತೆ ಈ ಕೆಳಗಿನ ಲಕ್ಷಣಗಳನ್ನು ಗುರುತಿಸಬಹುದು,**

1) ಅಪೇಕ್ಷಿತ ಗುರಿಯನ್ನು ತಲುಪಲು ಸಹಾಯಕವಾದ ಪರಿವರ್ತನೆಯು ಪ್ರಗತಿಯಾಗಿರುವುದು.
2) ಸಾಮಾಜಿಕ ಪ್ರಗತಿಯು ಸಾಮುದಾಯಿಕವಾದುದಾಗಿರುತ್ತದೆ. ಅದು ವೈಯಕ್ತಿಕವಾಗಿರುವುದಿಲ್ಲ.
3) ಪ್ರಗತಿಯು ಇಚ್ಛಾಶಕ್ತಿಯನ್ನಾಧರಿಸಿರುತ್ತದೆ.
4) ಪ್ರಗತಿಯನ್ನು ಅಳೆಯುವದು ಅಸಾಧ್ಯ.
5) ಪ್ರಗತಿಯು ಪಲ್ಲಟಗೊಳ್ಳುವುದು

## C) ಸಾಮಾಜಿಕ ಅಭಿವೃದ್ಧಿ (Social development)

ಅಭಿವೃದ್ಧಿ ಎಂಬ ಪರಿಕಲ್ಪನೆಯನ್ನು ಸಮಾಜ ವಿಜ್ಞಾನಗಳಲ್ಲಿ ವ್ಯಾಪಕವಾಗಿ ಬಳಸಲಾಗುತ್ತಿದೆ. ಅಂಗ್ಲ ಭಾಷೆಯಲ್ಲಿ Development ಎಂಬ ಪದಕ್ಕೆ ಬೆಳವಣಿಗೆ, ಅಭಿವೃದ್ಧಿ, ವಿಕಸನ ಎಂದು ಅರ್ಥೈಸಬಹುದು. ಅಭಿವೃದ್ಧಿ ನಿಧಾನವಾಗಿ ಅವ್ಯಕ್ತವಾದ ಸ್ಥಿತಿಯಿಂದ ವ್ಯಕ್ತವಾದ ಸ್ಥಿತಿಗೆ ಹೊರಹೊಮ್ಮುವ ಪರಿಸ್ಥಿತಿಯನ್ನು ಸೂಚಿಸುತ್ತದೆ. ಅಭಿವೃದ್ಧಿಯನ್ನು ಮುನ್ನಡೆ, ಪರಿಪಕ್ವತೆ ಎಂಬರ್ಥದಲ್ಲೂ ಬಳಸುವುದಿದೆ. ಸಮಾಜಿಕ ಅಭಿವೃದ್ಧಿಯನ್ನು ಮಾನವನ ಸಮಾಜದಲ್ಲಿ ಕಂಡುಬರುವ ಜ್ಞಾನದ ಹೆಚ್ಚಳ ಮತ್ತು ಪರಿಸರದ ಮೇಲೆ ಮಾನವನ ಪ್ರಭುತ್ವದಲ್ಲಾದ ಹೆಚ್ಚಳವನ್ನು ಮತ್ತು ಪರಿಮಾಣತ್ಮಾಕ ಬದಲಾವಣೆಯನ್ನು (Quantitative Changes) ಸೂಚಿಸುತ್ತದೆ.

ಸಾಮಾನ್ಯ ಅರ್ಥದಲ್ಲಿ ಸಾಮಾಜಿಕ ಅಭಿವೃದ್ಧಿ ಎಂಬ ಪರಿಕಲ್ಪನೆಯನ್ನು ಸಮಾಜದ ಬೆಳವಣಿಗೆ ಮತ್ತು ಅಭ್ಯುದಯಗಳನ್ನು ಸೂಚಿಸಲು ಬಳಸಲಾಗುತ್ತದೆ. ಕೆಲವೊಮ್ಮೆ ಸಮಾಜಿಕ ಅಭಿವೃದ್ಧಿ ಎಂದರೆ ಆರ್ಥಿಕ ಬೆಳವಣಿಗೆ, ಆದಾಯ ಮತ್ತು ಸಂಪತ್ತುಗಳ ಸಮಾನ ವಿತರಣೆ, ವ್ಯಕ್ತಿ ಸ್ವಾತಂತ್ರ್ಯದ ಹೆಚ್ಚಳ, ನೈತಿಕ ಬೆಳವಣಿಗೆ, ಎಂಬುದಾಗಿಯೂ ಅರ್ಥೈಸಲಾಗಿದೆ. ಆರ್ಥಿಕತೆ ಮತ್ತು ತಾಂತ್ರಿಕತೆಯು ಪರಿಣಾಮವಾಗಿ ಸಾಮಾಜಿಕ ಸಂರಚನೆ ಮತ್ತು ಸಂಘಟನೆಗಳಲ್ಲಾಗುವ ಬದಲಾವಣೆಯೇ ಸಾಮಾಜಿಕ ಅಭಿವೃದ್ಧಿ/ಬೆಳವಣಿಗೆ, ಆರ್ಥಿಕ ಉತ್ಪಾದನೆ, ಸಂಪತ್ತಿನ ಹೆಚ್ಚಳ, ಸಾಮಾಜಿಕ ಸಂರಚನೆ ಮತ್ತು ಸಂಘಟನೆಗಳಲ್ಲಿನ ಸಂಕೀರ್ಣತೆಗಳು ಸಾಮಾಜಿಕ ಅಭಿವೃದ್ಧಿಯ ಮುಖ್ಯ ಲಕ್ಷಣಗಳಾಗಿವೆ.

### ಸಾಮಾಜಿಕ ಅಭಿವೃದ್ಧಿಯ ಲಕ್ಷಣಗಳು:

ಪ್ರಸಿದ್ಧ ಸಮಾಜಶಾಸ್ತ್ರಜ್ಞನಾದ **ಎಲ್.ಟಿ. ಹಾಬ್ ಹೌಸ** ತನ್ನ The Social Development (1924) ಎಂಬ ಕೃತಿಯಲ್ಲಿ ಸಾಮಾಜಿಕ ಅಭಿವೃದ್ಧಿಯ ಲಕ್ಷಣಗಳನ್ನು ಈ ಕೆಳಕಂಡಂತೆ ತಿಳಿಸಿದ್ದಾನೆ.

ಜನಸಂಖ್ಯೆಯ ಗಾತ್ರ ಮತ್ತು ಸಾಮರ್ಥ್ಯದಲ್ಲಿನ ಹೆಚ್ಚಳ, ಪರಸ್ಪರ ಸಂಬಂಧದಲ್ಲಿನ ಸುಧಾರಣೆ ಮತ್ತು ಸ್ವಾತಂತ್ರ್ಯದಲ್ಲಿನ ಹೆಚ್ಚಳಗಳು ಸಾಮಾಜಿಕ ಅಭಿವೃದ್ಧಿಯ ಮಾಪಕಗಳಾಗಿವೆ.

ಸಮಾಜ ವಿಕಾಸ, ಸಾಮಾಜಿಕ ಪ್ರಗತಿ ಹಾಗೂ ಸಾಮಾಜಿಕ ಅಭಿವೃದ್ಧಿ ಎಂಬ ಪರಿಕಲ್ಪನೆಗಳು ಸಮಾಜಶಾಸ್ತ್ರೀಯ ವಿಶ್ಲೇಷಣೆಯಲ್ಲಿ ಪದೇ ಪದೇ ಕಂಡುಬರುತ್ತವೆ ಇವುಗಳನ್ನು ಸ್ಪಷ್ಟವಾದ ಅರ್ಥದಲ್ಲಿ ಬಳಸುವುದು ಸಾಧ್ಯವಾಗಿಲ್ಲ. ಟಿ.ಬಿ. ಬಬೋಟೋಮೋರ್ ಅಭಿಪ್ರಾಯದಲ್ಲಿ ಸಾಮಾಜಿಕ ವಿಕಾಸ, ಬೆಳವಣಿಗೆ, ಪ್ರಗತಿ ಕುರಿತಾದ ಅಭಿಪ್ರಾಯಗಳಲ್ಲಿನ

ಭಿನ್ನತೆಯಿಂದ ಸಾಮಾಜಿಕ ಪರಿವರ್ತನೆ ಎಂಬ ಸಾಮಾನ್ಯ ಪರಿಕಲ್ಪನೆಯ ಬಳಕೆ ಸೂಕ್ತವಾದುದು.

## 6.3. ಸಾಮಾಜಿಕ ಪರಿವರ್ತನೆಯ ಅಂಶಗಳು (Factors of Social Change):

ಜಗತ್ತಿನ ಎಲ್ಲ ಸಮಾಜಗಳಲ್ಲಿ ಸಾಮಾಜಿಕ ಪರಿವರ್ತನೆ ಹೊಂದಲು ಅನೇಕ ಅಂಶಗಳಿವೆ. ಸಮಾಜದ ಆಂತರಿಕ ಕಾರಣಗಳಿಂದ ಆಗುವ ಪರಿವರ್ತನೆ ಆಂತರಿಕ ಬದಲಾವಣೆಯಾಗಿದೆ. ತಾಂತ್ರಿಕ ಅಂಶಗಳನ್ನು ಮತ್ತು ಸಾಂಸ್ಕೃತಿಕ ಅಂಶಗಳನ್ನು ಬಾಹ್ಯ ಕಾರಣಗಳಲ್ಲಿ ಅಭ್ಯಸಿಸಬಹುದಾಗಿದೆ. ಈ ಘಟಕದಲ್ಲಿ ಬಾಹ್ಯ ಮತ್ತು ಆಂತರಿಕ ಅಂಶಗಳ ಪ್ರಭಾವವನ್ನು ವಿವರವಾಗಿ ಚರ್ಚಿಸಲಾಗಿದೆ.

### (I) ನೈಸರ್ಗಿಕ ಅಥವಾ ಭೌತಿಕ ಅಂಶಗಳು (Natural or Physical factors)

ನಿಸರ್ಗದತ್ತವಾಗಿ ತರುವ ಪರಿವರ್ತನೆಗಳನ್ನು ಭೌಗೋಳಿಕ ಅಥವಾ ಭೌತಿಕ ಅಂಶಗಳೆಂದು ಹೇಳಬಹುದು. ಇವು ನಿಸರ್ಗದ ಪರಿಸ್ಥಿತಿಗಳನ್ನು ಒಳಗೊಳ್ಳುತ್ತವೆ. ಸಮಾಜವು ನಿಸರ್ಗದ ಅಡಿಯಲ್ಲಿರುವಾಗ ಪರಿಸರದಲ್ಲಿ ಪರಿವರ್ತನೆ ಉಂಟಾದಾಗ ಸಮಾಜದ ಮೇಲೂ ಪ್ರಭಾವ ಬೀರುತ್ತದೆ. ಕಾರಣ ಇವೆರಡರ ನಡುವೆ ನೇರವಾದ ಸಂಬಂಧ ಕಾಣುತ್ತದೆ.

ಭೂಮಿ, ನೀರು, ಅರಣ್ಯ, ಸರೋವರ, ಬೆಟ್ಟ ಈ ಎಲ್ಲ ನೈಸರ್ಗಿಕ ಸಂಪನ್ಮೂಲಗಳನ್ನು ಭೌಗೋಳಿಕ ಅಥವಾ ಭೌತಿಕ ಅಂಶಗಳೆಂದು ಹೇಳಬಹುದು. ಮಾನವ ಜೀವನದ ಮೇಲೆ ಹವಾಮಾನವು ಪ್ರಭಾವ ಬೀರುತ್ತದೆ. ಮಳೆ, ಬಿಸಿಲು, ಚಳಿ ಮಾನವನ ಜೀವನಕ್ಕೆ ಬಹಳಷ್ಟು ಸಹಕಾರಿಯಾಗಿವೆ.

**a) ನೈಸರ್ಗಿಕ ವಿಕೋಪದಿಂದಾಗುವ ಪರಿವರ್ತನೆಗಳು :** ಅತಿವೃಷ್ಟಿ, ಭೂಕಂಪ, ಚಂಡಮಾರುತ ಮತ್ತು ಬಿರುಗಾಳಿ ಮಾನವನ ನಿಯಂತ್ರಣವನ್ನು ಮೀರಿದ್ದು ಇವುಗಳು ಸಾಮಾಜಿಕ ಜೀವನದಲ್ಲಿ ಕ್ರಾಂತಿಕಾರಕ ಗಂಭೀರ ಪರಿಣಾಮ ಬೀರುತ್ತವೆ. ಉದಾ: ಉತ್ತರ ಭಾರತದ ಬ್ರಹ್ಮಪುತ್ರ ನದಿಗೆ ಪದೇ ಪದೇ ಉಂಟಾಗುವ ನೆರೆಹಾವಳಿಯಿಂದ ಉತ್ತರ ಈಶಾನ್ಯ ಭಾರತೀಯರ ಸಾಮಾಜಿಕ ಜೀವನಕ್ಕೆ ಆತಂಕ ತರುತ್ತದೆ. ಇತ್ತೀಚಿಗೆ ಸಂಭವಿಸಿದ ಸುನಾಮಿ ತಮಿಳುನಾಡಿನಲ್ಲಿ ಸಾಕಷ್ಟು ಹಾನಿಯುಂಟುಮಾಡಿದೆ. 1923ರಲ್ಲಿ ಜಪಾನದ ಯಕೋಹ್ಯಾಮದಲ್ಲಿ ಸಂಭವಿಸಿದ ಜ್ವಾಲಾಮುಖಿಯ ಸಿಡಿತದಿಂದಾಗಿ ಉಂಟಾದ ನಷ್ಟದಿಂದ ಜಪಾನದಲ್ಲಿ ಹೊಸ ಶೈಲಿಯ ವಾಸ್ತುಶಿಲ್ಪ ಸೃಷ್ಟಿಯಾಯಿತು. ಲಂಡನ್ ನಗರದ ಬೆಂಕಿ ಅನಾಹುತದಿಂದ ಹೊಸ ನಗರ ನಿರ್ಮಾಣವಾಯಿತು.

**b) ಮಾನವನ ಚಟುವಟಿಕೆಯಿಂದ ಭೌಗೋಳಿಕ ಅಂಶದಲ್ಲಾಗುವ ಪರಿವರ್ತನೆಗಳು :** ಹಂಟಿಂಗಟನ್ ಪ್ರಕಾರ ಮಾನವನ ಚಟುವಟಿಕೆಗಳಿಗೂ ಮತ್ತು ಭೌಗೋಳಿಕ ಪರಿಸರಕ್ಕೂ ನೇರ ಸಂಬಂಧವಿದೆ. ತಂತ್ರಜ್ಞಾನದ ಬಳಕೆಯಿಂದ ಮಾನವನೇ ಸಾಮಾಜಿಕ ಪರಿವರ್ತನೆಗಳಿಗೆ ಕಾರಣನಾಗಿದ್ದಾನೆ. ಮಾನವನ ಚಟುವಟಿಕೆಯಿಂದಾಗಿ ಪರಿಸರದಲ್ಲಿ ಅಸಮತೋಲನ ಉಂಟಾಗಿ ಸಮಾಜದಲ್ಲಿ ಜಲಮಾಲಿನ್ಯ ವಾಯುಮಾಲಿನ್ಯ ಮತ್ತು ಅರಣ್ಯನಾಶ ಪರೋಕ್ಷವಾಗಿ ಪರಿಣಾಮ ಬೀರುತ್ತಿವೆ.

**ಇಯಾನ್ ರಾಬರ್ಟಸನ್**ರವರ ಪ್ರಕಾರ ಸಮಾಜ ಮತ್ತು ಪರಿಸರದ ಮಧ್ಯೆ ಸಂಬಂಧ ಇದೆ ಎಂದು ಹೇಳುತ್ತಾನೆ. ಧ್ರುವ ಪ್ರದೇಶದಲ್ಲಿ ಕಡಿಮೆ ನದಿ ಪಾತ್ರಗಳಲ್ಲಿ ಹೆಚ್ಚು ಪರಿವರ್ತನೆಯನ್ನು ಕಾಣಬಹುದು.

**c) ನಾಗರೀಕತೆಯ ಬೆಳವಣಿಗೆ:–** ಸಂಕೀರ್ಣ ಸಮಾಜ ಭೌಗೋಳಿಕ ಪರಿಸರದ ಮೇಲೆ ಪ್ರಭಾವ ಬೀರುತ್ತದೆ. ನಾಗರೀಕತೆ ಮಾನವನಿಗೆ ಬಹಳಷ್ಟು ಅನುಕೂಲಗಳನ್ನು ತಂದಿದೆ. ಹಾಗೂ ನಿಸರ್ಗಕ್ಕೆ ಹಾನಿಯುಂಟು ಮಾಡಿದೆ **"ಹಂಟಿಂಗಟನ್ ಹೇಳುವಂತೆ** ಸಂಸ್ಕೃತಿ ಮತ್ತು ನಾಗರಿಕತೆಯ ಬೆಳವಣಿಗೆ ಮತ್ತು ಅದರ ಅವನತಿ

ನೇರವಾಗಿ ವಾಯುಗುಣವನ್ನು ಅವಲಂಬಿಸಿದೆ. ಆದರೆ **ರಾಬರ್ಟ ಬೈರಸೈಡರವರ** ಪ್ರಕಾರ ಭೌಗೋಳಿಕ ಪರಿಸರವು ಮಾನವ ಜೀವನದ ಬಗ್ಗೆ ನಿರ್ದಿಷ್ಟವಾಗಿ ಏನನ್ನು ಹೇಳುವುದಿಲ್ಲ ಎಂದಿದ್ದಾರೆ.

ಮಾಂಟೆಸ್ಕೋ ಹೆಂಟಿಂಗ್‌ಟನ್ ಮತ್ತು ಮುಂತಾದವರು "ಸಾಮಾಜದ ಮೇಲೆ ಭೌತಿಕ ಅಂಶಗಳ ಪ್ರಭಾವವನ್ನು ಅಧ್ಯಯನ ಮಾಡುತ್ತ ಸಮಾಜದಲ್ಲಿಯ ಜನಸಾಂಧ್ರತೆಯನ್ನು ತಿಳಿದುಕೊಳ್ಳುವಲ್ಲಿ ಭೌತಿಕ ಅಂಶಗಳು ಸಹಕಾರಿಯಾಗಿವೆ ಎಂದಿದ್ದಾರೆ. ಉದಾಹರಣೆಗೆ ಮರುಭೂಮಿಯು ಕಡಿಮೆ ಜನಸಂಖ್ಯೆ ಹೊಂದಿರುತ್ತದೆ. ನದಿ ದಂಡೆಯಲ್ಲಿ ಜನಸಂಖ್ಯೆ ಹೆಚ್ಚಿರುತ್ತದೆ. ನಮ್ಮ ಉಟೋಪಚಾರಗಳು ಉಡುಗೆ ತೊಡಗೆ, ವಸತಿ ಇವೆಲ್ಲವುಗಳು, ಹವಾಮಾನ ಸ್ಥಿತಿಯನ್ನು ಅವಲಂಭಿಸಿರುತ್ತದೆ. ಅಷ್ಟೇ ಅಲ್ಲ ಕೃಷಿ, ಗಣಿ, ಮೀನುಗಾರಿಕೆ ಮುಂತಾದ ಉದ್ಯೋಗಗಳು ಭೌಗೋಳಿಕ ಸ್ಥಿತಿಯನ್ನು ಅವಲಂಬಿಸಿರುತ್ತವೆ.

## II) ಜೈವಿಕ ಅಂಶಗಳು (Biological Factor)

ಸಾಮಾಜಿಕ ಪರಿವರ್ತನೆಯ ಜೈವಿಕ ಅಂಶಗಳಲ್ಲಿ ಎರಡು ವಿಧ (ಅ) ಮಾನವೇತರ ಜೈವಿಕ ಅಂಶಗಳು (ಬ) ಮಾನವ ಜೈವಿಕ ಅಂಶಗಳು ಈ ಎರಡೂ ಅಂಶಗಳು ಆಂತರಿಕ ಸಂಬಂಧ ಹೊಂದಿದ್ದು, ಸಮಾಜದ ಮೇಲೆ ನಿಶ್ಚಿತವಾದ ಪರಿಣಾಮವನ್ನು ಬೀರುತ್ತವೆ.

ಮೆಕೈವರ್ ಮತ್ತು ಪೇಜ್‌ರವರು ಹೇಳುವಂತೆ ಜನಸಂಖ್ಯಾ ಗಾತ್ರ ಅದರ, ರಚನೆ ಅನುವಂಶೀಯತೆ ಜನಾಂಗ, ಜನನ ಪ್ರಮಾಣ, ಮರಣ ಪ್ರಮಾಣ, ಸ್ತ್ರೀಯರ ಫಲವತ್ತತೆ ಮುಂತಾದವುಗಳೇ ಜೈವಿಕ ಅಂಶಗಳಾಗಿವೆ.

### a) ಜನಸಂಖ್ಯಾ ಗಾತ್ರ

ರಾಬರ್ಟ್ ಮಾಲ್ತಸ್‌ರವರ ಪ್ರಕಾರ ಜನಸಂಖ್ಯಾ ಗಾತ್ರ ಸಮಾಜದ ಸಮತೋಲನವನ್ನು ಕಾಯುತ್ತದೆ ಮತ್ತು ಅತಿ ಹೆಚ್ಚಿನ ಜನಸಂಖ್ಯೆ ಬಡತನಕ್ಕೆ ಕಾರಣವಾಗುತ್ತದೆ ಹಾಗೆಯೇ ಜನಸಂಖ್ಯೆ ಮತ್ತು ಆಹಾರ ಉತ್ಪಾದನೆಯ ನಡುವೆ ಸಹ ಸಂಬಂಧವಿದೆ ಎನ್ನುತ್ತಾರೆ. ಜನಸಂಖ್ಯೆ ಗಾತ್ರ ಮತ್ತು ಸಂಕಲನ ಸಮಾಜದ ಮೇಲೆ ದೂರಗಾಮಿ ಪರಿಣಾಮಗಳನ್ನು ಬಿರುತ್ತವೆ ಎಂದಿದ್ದಾರೆ. ಉದಾ: ಸಮಾಜವೊಂದರಲ್ಲಿ ಪುರುಷರಿಗಿಂತ ಸ್ತ್ರೀಯರ ಸಂಖ್ಯೆ ಅಧಿಕವಾಗಿದ್ದರೆ ಅಂತಹ ಸಮಾಜದಲ್ಲಿ ಬಹುಪತ್ನಿತ್ವ ಪದ್ಧತಿ ಜಾರಿಗೆ ಬರಬಹುದು. ಅಥವಾ ಸ್ತ್ರೀಯರಿಗಿಂತ ಪುರುಷರ ಸಂಖ್ಯೆ ಅಧಿಕವಾಗಿದ್ದರೆ ಅಲ್ಲಿ ಬಹುಪತಿತ್ವ ಪದ್ಧತಿ ಬರಬಹುದು ಇದು ಸಾಮಾಜಿಕ ಪರಿವರ್ತನೆ ಮತ್ತು ಲಿಂಗಾನುಪಾತದ ನಡುವಿರುವ ಸಂಬಂಧವನ್ನು ತೋರಿಸುತ್ತದೆ.

### b) ಜನನ ಪ್ರಮಾಣ ಮತ್ತು ಮರಣ ಪ್ರಮಾಣ :

ಜನನ ಪ್ರಮಾಣ ಹೆಚ್ಚಾಗಿ, ಮರಣ ಪ್ರಮಾಣ ಕಡಿಮೆ ಆದಾಗ ಜನಸಂಖ್ಯೆ ಹೆಚ್ಚಳಕ್ಕೆ ಕಾರಣವಾಗುತ್ತದೆ. ಇದು ಬಡತನ, ನಿರುದ್ಯೋಗ, ವಸತಿ ಸಮಸ್ಯೆ ಇತ್ಯಾದಿ ಸಾಮಾಜಿಕ ಸಮಸ್ಯೆಗಳಿಗೆ ಕಾರಣವಾಗುತ್ತದೆ. ಹಾಗೆಯೇ ಜನನ ಪ್ರಮಾಣ ಕಡಿಮೆಯಾಗಿ ಮರಣ ಪ್ರಮಾಣ ಹೆಚ್ಚಾದಾಗ ಸಮಾಜದಲ್ಲಿ ಮಾನವ ಸಂಪನ್ಮೂಲದ ಕೊರತೆ, ಸಾಮರ್ಥ್ಯದಲ್ಲಿ ಇಳಿಮುಖ ಮುಂತಾದ ಸಮಸ್ಯೆಗಳನ್ನು ಸಮಾಜ ಎದುರಿಸಬೇಕಾಗಬಹುದು. ಸಮಾಜ ಕಲ್ಯಾಣ ಸಾಧಿಸಬೇಕಾದರೆ ಜನನ ನಿಯಂತ್ರಣದಿಂದ ಮಾತ್ರ ಸಾಧ್ಯ **ಉದಾಹರಣೆಗೆ** ಭಾರತದಲ್ಲಿ ಕುಟುಂಬ ಯೋಜನೆ ಜಾರಿಗೆ ತರುವುದರಿಂದ ಸಾಮಾಜಿಕ ಮೌಲ್ಯಗಳು, ವಿಚಾರಗಳು, ವೈವಾಹಿಕ ಸಂಬಂಧಗಳು ಪರಿವರ್ತನೆಗೊಂಡಿವೆ. ವಿಶೇಷವಾಗಿ ಧರ್ಮ ಮತ್ತು ಸಾಮಾಜಿಕ ಮೌಲ್ಯಗಳು, ವಿಚಾರಗಳು, ವೈವಾಹಿಕ ಸಂಬಂಧಗಳು ಪರಿವರ್ತನೆಗೊಳ್ಳುತ್ತವೆ.

### c) ವಲಸೆ

ಜನರು ವಲಸೆ ಹೋಗುವುದರಿಂದ ಸಮಾಜದಲ್ಲಿ ಪರಿವರ್ತನೆ ತರಬಹುದು. ವಲಸೆ ಎಂದರೆ ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ಸ್ಥಳಾಂತರಗೊಳ್ಳುವುದು ಎಂದು ಅರ್ಥ ಇದರಲ್ಲಿ ಎರಡು ಪ್ರಕಾರಗಳಿವೆ.

**1) ನಗರ–ಗ್ರಾಮೀಣ ವಲಸೆ (2) ಗ್ರಾಮೀಣ –ನಗರ ವಲಸೆ.**

ನಗರ–ಗ್ರಾಮೀಣ ವಲಸೆಯಲ್ಲಿ ಜನರು ನಗರದಿಂದ ಗ್ರಾಮಕ್ಕೆ ವಲಸೆ ಹೋಗುವುದು. ಗ್ರಾಮೀಣ–ನಗರ ವಲಸೆಯಲ್ಲಿ ಜನರು ಗ್ರಾಮಗಳಿಂದ ನಗರ ಪ್ರದೇಶಗಳಿಗೆ ವಲಸೆ ಹೋಗುವುದು. ಭಾರತದಲ್ಲಿ ಕೈಗಾರಿಕೀಕರಣಕ್ಕೆ ಆದ್ಯತೆ ಸಿಗುತ್ತಿರುವುದರಿಂದ ಗ್ರಾಮೀಣ–ನಗರ ವಲಸೆ ಹೆಚ್ಚಾಗುತ್ತಿದೆ. ಇದರಿಂದ ಭಾರತೀಯ ಸಮಾಜದಲ್ಲಿ ಪರಿವರ್ತನೆ ಕಾಣುತ್ತಿದ್ದೇವೆ. ಜನರ ಮನೋಭಾವನೆ, ಜೀವನಶೈಲಿ ಮೌಲ್ಯಗಳಲ್ಲಿ ವಲಸೆ ಪರಿವರ್ತನೆ ತರುತ್ತಿದೆ.

### d) ವಯೋಮಾನ ಮತ್ತು ಲಿಂಗಾನುಪಾತ

ಸಮಾಜದಲ್ಲಿ ಜನಸಂಖ್ಯೆಯನ್ನು ಮೂರು ವಿಧದಲ್ಲಿ ಕಾಣುತ್ತೇವೆ; ಮಕ್ಕಳು, ಯುವಕರು, ಹಾಗೂ ವಯೋವೃದ್ಧರು, ಎಲ್ಲಾ ಸಮಾಜದಲ್ಲಿ 14 ವರ್ಷಗಳಿಗೂ ಕಡಿಮೆ ವಯಸ್ಸಿನ ಮಕ್ಕಳ ಸಂಖ್ಯೆ ಹೆಚ್ಚಿರುತ್ತದೆ. ಚೀನಾದಲ್ಲಿ ಕಠಿಣ ನಿಯಮದಿಂದ ಒಂದು ಕುಟುಂಬಕ್ಕೆ ಒಂದೇ ಮಗು ಎಂಬ ನಿಯಮದಿಂದ, ಅಲ್ಲಿ 0–14 ವಯಸ್ಸಿನ ಮಕ್ಕಳ ಪ್ರಮಾಣ ಕುಸಿಯಿತು. ಹಾಗೆಯೇ ಯುವಕರ ಸಂಖ್ಯೆ ಕಡಿಮೆಯಾದರೆ ದೇಶದ ಕಾರ್ಯ ಸಾಮರ್ಥ್ಯತೆ ಕಡಿಮೆಯಾಗುತ್ತದೆ. ಇದರಿಂದ ಆರ್ಥಿಕ ಅಭಿವೃದ್ಧಿ ಕುಂಠಿತವಾಗುತ್ತದೆ.

65 ವರ್ಷ ಮೀರಿದ ವಯೋವೃದ್ಧರನ್ನು ಹೆಚ್ಚಿನ ಸಂಖ್ಯೆಯಲ್ಲಿ ಹೊಂದಿದ ಸಮಾಜ, ವೃದ್ಧಾಪ್ಯವೇತನ, ಆರೋಗ್ಯ ಮುಂತಾದ ಸಮಸ್ಯೆಗಳನ್ನು ಹೇಗೆ ಎದುರಿಸಬೇಕಾಗುತ್ತದೆ.

ಆದ್ದರಿಂದ ಜೈವಿಕ ಪರಿವರ್ತನೆಗಳು, ಸಾಮಾಜಿಕ ಸಂಘಟನೆ ಮತ್ತು ಕಾರ್ಯಗಳ ಮೇಲೆ ಪ್ರಭಾವ ಬೀರುತ್ತವೆ ಎಂಬುದನ್ನು ತಿಳಿದುಕೊಳ್ಳಬಹುದು.

## III) ಸಾಂಸ್ಕೃತಿಕ ಅಂಶಗಳು (Cultural factor)

ಮಾನವ ಸಮಾಜ ಜೀವಿ ಅಷ್ಟೇ ಅಲ್ಲ ಅವನು ಸಾಂಸ್ಕೃತಿಕ ಜೀವಿಯೂ ಹೌದು. ಸಮಾಜ ಮತ್ತು ಸಂಸ್ಕೃತಿ ಒಂದೇ ನಾಣ್ಯದ ಎರಡು ಮುಖಳಾಗಿರುವಾಗ ಸಂಸ್ಕೃತಿ ಇಲ್ಲದೇ ಸಮಾಜವನ್ನಾಗಲೀ, ಸಾಮಾಜಿಕ ಜೀವನವನ್ನಾಗಲೀ ಊಹಿಸುವದು ಕಷ್ಟ. ಸಂಸ್ಕೃತಿಯಲ್ಲಾದ ಪರಿವರ್ತನೆ ಸಮಾಜ ಪರಿವರ್ತನೆಗೆ ಕಾರಣವಾಗುತ್ತದೆ.

**ಮ್ಯಾಕ್ಸ್‌ವೇಬರ್‌ರವರ ಪ್ರಕಾರ :** "ಸಂಸ್ಕೃತಿಯಲ್ಲಿನ ಪರಿವರ್ತನೆಯು ಸಮಾಜದಲ್ಲೂ ಪರಿವರ್ತನೆಯನ್ನುಂಟು ಮಾಡುತ್ತದೆ" ಎಂದು ಅಭಿಪ್ರಾಯ ಪಟ್ಟಿದ್ದಾರೆ, ಧರ್ಮ, ಕಲೆ, ಭಾಷೆ, ಸಾಹಿತ್ಯ, ಲೋಕರೂಡಿಗಳು, ನೈತಿಕ ನಿಯಮಗಳು, ಸಂಸ್ಕೃತಿಯನ್ನು ಪ್ರತಿನಿಧಿಸುತ್ತವೆ. ಸಂಸ್ಕೃತಿ ಮಾನವನಿಂದ ನಿರ್ಮಾಣಗೊಂಡಿದ್ದು. ಸಮಾಜಕ್ಕೆ ಇದು ಮಾದರಿಯಾಗಿದ್ದು, ಮಾನವ ಇದರಲ್ಲಿ ನಂಬಿಕೆ ಇಟ್ಟು ಇಲ್ಲಯೇ ಜೀವಿಸಿದ್ದಾನೆ.

ಭೌತಿಕ ಸಂಸ್ಕೃತಿಯಾಗಲಿ ಅಥವಾ ಅಭೌತಿಕ ಸಂಸ್ಕೃತಿಯಾಗಲಿ ಸಮಾಜದಲ್ಲಿ ಸಾಮಾಜಿಕ ಪರಿವರ್ತನೆಯನ್ನು ತರುತ್ತವೆ. ಸಂಸ್ಕೃತಿ ತನ್ನದೇ ಆದ ವೇಗ ಮತ್ತು ದಿಕ್ಕಿನಲ್ಲಿ ಪರಿವರ್ತನೆ ಹೊಂದುತ್ತದೆ. ಪರಿವರ್ತನೆ ತರುವಲ್ಲಿ ಮುಖ್ಯವಾಗಿ ಮೂರು ಪ್ರಕ್ರಿಯೆಗಳನ್ನು ಗಮನಿಸಬಹುದು.

1. **ಪರಿಶೋಧನೆ (Discovery):** ಪರಿಶೋಧನೆ ಎಂಬ ಕಲ್ಪನೆಯು ಈಗಾಗಲೇ ಅಸ್ತಿತ್ವ ದಲ್ಲಿ ಇರುವ ನಮಗೆ ಗೋಚರಿಸದೇ ಇರುವ ಸಂಗತಿಗಳನ್ನು ಕಂಡು ಕೊಳ್ಳುವುದಾಗಿದೆ. ಉದಾ : ವಾಸ್ಕೊ–ಡಿ–ಗಾಮಾ ಸಮುದ್ರದ ಮೂಲಕ –ಭಾರತ ಕಂಡು ಹಿಡಿದನು.

2. **ಅವಿಷ್ಕಾರ (Invention) :** ಅವಿಷ್ಕಾರ ಸಾಮಾಜಿಕ ಬದಲಾವಣೆಯ ಪ್ರಮುಖಮೂಲ ಈ ಮೊದಲು ಅಸ್ತಿತ್ವದಲ್ಲಿ ಇರದ ಯಾವುದನ್ನಾದರೂ ರೂಪಿಸುವುದಕ್ಕೆ ಅವಿಷ್ಕಾರ ಎನ್ನಲಾಗುತ್ತದೆ. ವಿದ್ಯುತ್, ಅಣುಶಕ್ತಿ, ಮೊಬೈಲ್, ಕಾನೂನು, ಇತ್ಯಾದಿ, ಭೌತ ಮತ್ತು ಅಭೌತ ಜಗತ್ತಿನಲ್ಲಿ ಉಂಟಾಗುವ ಅವಿಷ್ಕಾರ ಅನೇಕ ಬದಲಾವಣೆಗಳನ್ನು ಉಂಟುಮಾಡುತ್ತದೆ.

3. **ಪ್ರಸರಣ (Diffusion) :** ಸಾಂಸ್ಕೃತಿಕ ಅಂಶಗಳು ಒಂದು ಸಂಸ್ಕೃತಿಯಿಂದ ಇನ್ನೊಂದು ಸಂಸ್ಕೃತಿಗೆ ಹರಡುವಿಕೆಯನ್ನು ಪ್ರಸರಣ ಎನ್ನುತ್ತಾರೆ. ಉದಾಹರಣೆಗೆ ಸಂಸ್ಕೃತಿ ಪಾಶ್ಚ್ಯಾತ್ಯರ ಕಡೆಗೆ ಪ್ರಸರಣವಾಗುವುದು, ಭೌದ್ಧ ಧರ್ಮ ಹಾಗೂ ಅದರ ಸಂಸ್ಕೃತಿ ಚೀನಾ ಮತ್ತು ಶ್ರೀಲಂಕಾ ದೇಶಗಳಿಗೆ ಪ್ರಸಾರವಾಯಿತು.

ಮ್ಯಾಕ್ಸವೇಬರ್ ರವರು **"ದಿ ಪ್ರೋಟೆಸ್ಟಂಟ ಎಥಿಕ್ಸ್ ಆ್ಯಂಡ ದಿ ಸ್ಪಿರಿಟ್ ಆಫ್ ಕ್ಯಾಪಿಟಾಲಿಸಂ"** ಎಂಬ ಗ್ರಂಥದಲ್ಲಿ ವಿವರಿಸಿದಂತೆ. ಜನರ ಧಾರ್ಮಿಕ ನಂಬಿಕೆಗಳು ಮತ್ತು ಆಚರಣೆಗಳು ಹಾಗೂ ಅವರ ಆರ್ಥಿಕ ಚಟುವಟಿಕೆಗಳ ನಡುವೆ ನೇರ ಸಂಬಂಧವಿದೆ, ಒಂದು ಸಮಾಜದ ಆಚರಣಾ ನೀತಿ ಸಂಹಿತೆಗೂ ಹಾಗೂ ಅದರ ಆರ್ಥಿಕ ವ್ಯವಸ್ಥೆಗೂ ನೇರ ಸಂಬಂಧವಿದೆ. ಆದ್ದರಿಂದ ಸಾಂಸ್ಕೃತಿಕ ಅಂಶವು ಆರ್ಥಿಕ ಪರಿವರ್ತನೆಗೆ ಸಾಧನವಾಗಬಹುದು.

### 4) ಸಾಮಾಜಿಕ ಶಾಸನಗಳು :

ಸಾಮಾಜಿಕ ಶಾಸನಗಳು ಜನರ ವರ್ತನೆ, ನಂಬಿಕೆಗಳು, ಮನೋಭಾವನೆಗಳು, ಮೌಲ್ಯಗಳನ್ನು ಪ್ರಭಾವಿಗೊಳಿಸುವೆ. ಸಾಮಾಜಿಕ ಪರಿವರ್ತನೆಗೆ ಚಾಲನೆ ನೀಡಿ ಕಲ್ಯಾಣ ರಾಜ್ಯ ಸ್ಥಾಪಿಸಿವೆ ಸಾಮಾಜಿಕ ಶಾಸನಗಳ ಮೂಲಕ ಜನರ ಜೀವನ ಶೈಲಿ, ಮೌಲ್ಯ, ದೃಷ್ಟಿಕೋನಗಳಲ್ಲಿ ಪರಿವರ್ತನೆ ತಂದಿವೆ.

ಉದಾಹರಣೆ – ಹಿಂದೂ ವಿವಾಹ ಕಾಯ್ದೆ – 1955, ಅಸ್ಪೃಶ್ಯತಾ ಅಪರಾಧ ಕಾಯ್ದೆ – 1955

ಸಮಾನ ವೇತನ ಕಾಯ್ದೆ 1976,

ಬಾಲಕಾರ್ಮಿಕ [ ನಿಷೇಧ ಮತ್ತು ನಿಯಂತ್ರಣ] ಕಾಯ್ದೆ 1986

### IV) ವಿಜ್ಞಾನ ಮತ್ತು ತಂತ್ರಜ್ಞಾನದ ಅಂಶಗಳು (Science and Technological Factor):

ಸುವ್ಯವಸ್ಥಿತವಾದ ಜ್ಞಾನವೇ ವಿಜ್ಞಾನ ಇಂಥಹ ಜ್ಞಾನವನ್ನು ಯಂತ್ರೋಪರಕಣಗಳ ಉಪಯೋಗಕ್ಕಾಗಿ ಬಳಸಿದರೆ ಅದು ತಂತ್ರಜ್ಞಾನವೆಂದು ಕರೆಸಿಕೊಳ್ಳುತ್ತದೆ. ತಾಂತ್ರಿಕ ಸಂಗತಿಗಳು ಕೂಡಾ ಸಾಮಾಜಿಕ ಬದಲಾವಣೆಯನ್ನು ತರುವ ಮಹತ್ವದ ಸಂಗತಿಗಳಾಗಿ ಕಾರ್ಯಮಾಡುತ್ತವೆ. ಆಧುನಿಕ ಯುಗದಲ್ಲಿ ಯಂತ್ರಗಳ ಬಳಕೆ ತೀರಾ ಸಾಮಾನ್ಯವಾಗಿದೆ. ತಂತ್ರಜ್ಞಾನದಲ್ಲಿ ಆಗಿರುವ ಸಾಧನೆ ಸುಲಭ ಜೀವನಕ್ಕೆ ಅವಕಾಶವಾಗಿದೆಯಲ್ಲದೇ ವೈಜ್ಞಾನಿಕ ಅಭಿವೃದ್ಧಿಗೂ ಕಾರಣವಾಗಿದೆ.

**ಎಂ.ಡಿ. ಬೋನೋರವರು** ಹೇಳುವಂತೆ –"ತಂತ್ರಜ್ಞಾನವು ಜ್ಞಾನದ ಯಾವುದೇ ಬಳಕೆಯಿಂದ ಮಾನವನಿಗೆ ಉಪಯುಕ್ತವಾಗಿರುವ ಯಾವುದೇ ವಸ್ತುಗಳನ್ನು ಉತ್ಪಾದಿಸುವ ಪ್ರಕ್ರಿಯೆಯಾಗಿದೆ".

**ಆಗಬರ್ನ್ ಮತ್ತು ನಿಮಕಾಫ್** – "ತಾಂತ್ರಿಕತೆಯು ನಮ್ಮ ಸಮಾಜವನ್ನು ಹಾಗೂ ನಾವು ಹೊಂದಿಕೊಂಡಿರುವ ಸಾಮಾಜಿಕ ಪರಿಸರವನ್ನು ಪರಿವರ್ತನೆಗೊಳಿಸಿದೆ. ಇಂತಹ ಬದಲಾವಣೆಯು ಭೌತಿಕವಾಗಿದೆ. ಇದರೊಂದಿಗಿರುವ ನಮ್ಮ ಹೊಂದಾಣಿಕೆಯು ಸಂಪ್ರದಾಯ ಹಾಗೂ ಸಾಮಾಜಿಕ ಸಂಸ್ಥೆಗಳಲ್ಲಿ ಮಾರ್ಪಾಡನ್ನು ತಂದಿದೆ."

### 1) ಸಾರಿಗೆ ಮತ್ತು ಸಂಪರ್ಕ :

ಔದ್ಯೋಗಿಕರಣದಿಂದಾಗಿ 18ನೇ ಶತಮಾನದ ನಂತರ ನಾವು ಸಾರಿಗೆ – ಸಂಪರ್ಕದಲ್ಲಿ ಪರಿವರ್ತನೆ ಕಾಣುತ್ತಿದ್ದೇವೆ. ಇಂತಹ ಪ್ರಗತಿಯು ತಂತ್ರಜ್ಞಾನದ ಬೆಳವಣಿಗೆಯಿಂದ ಸಾದ್ಯವಾಗಿದೆ. ಜನರ ಪ್ರಯಾಣ ಮತ್ತು ವಸ್ತುಗಳ ಸಾಗಣಿಕೆಗೆ ಅನೂಕೂಲಕರವಾಗಿದೆ. ವ್ಯಾಪಾರೋದ್ಯಮಗಳು ತ್ವರಿತವಾಗಿ ಬೆಳೆಯುತ್ತಿವೆ. ದೂರದರ್ಶನ, ಇಂಟರನೆಟ್, ಇ–ಮೇಲ್ ಮತ್ತು ದೂರವಾಣಿ ಮೂಲಕ ಸಂದೇಶಗಳನ್ನು ದೂರದವರೆಗೆ ಹರಡುವದು ಸಾಧ್ಯವಾಯಿತು. ಸಂಪರ್ಕ ಸಾಧನಗಳಲ್ಲಾದ ಕ್ರಾಂತಿಕಾರಕ ಬೆಳವಣಿಗೆಯಿಂದ ಜಗತ್ತಿನ ಗಾತ್ರ ಕಿರಿದಾಗಿರುವ ಭಾಸವಾಗಿ ಜಗತ್ತೇ ಒಂದು ಗ್ರಾಮವೆನಿಸಿ. ಎಂಬ **"ವಿಶ್ವ ಗ್ರಾಮ"ದ** [**Global Village]** ಕಲ್ಪನೆ ಮೂಡುತ್ತಿದೆ.

### 2) ಹೊಸ ವರ್ಗಗಳ ಉದಯ :

ನಗರೀಕರಣವು ಕೈಗಾರಿಕರಣದ ಫಲ. ಕುಟುಂಬದಿಂದ ಕಾರ್ಖಾನೆಯಡೆಗೆ ಉತ್ಪಾದನೆ ವ್ಯವಸ್ಥೆ ಬದಲಾದಂತೆ **"ಕೃಷಿ ಪ್ರಧಾನ"** ಅರ್ಥ ವ್ಯವಸ್ಥೆಯು 'ಉದ್ಯಮ ಪ್ರಧಾನ.' ಅರ್ಥ ವ್ಯವಸ್ಥೆಗೆ ದಾರಿ ಮಾಡಿಕೊಟ್ಟಿದೆ. ಇದರಿಂದ ಯುವಕರಿಗೆ ಹೊಸ ಉದ್ಯೋಗ ಅವಕಾಶಗಳು ಲಭ್ಯವಾಗುತ್ತಿವೆ. ಔದ್ಯಮಿಕ ಸಮಾಜಗಳಲ್ಲಿ ಶ್ರೀಮಂತರನ್ನು ಒಳಗೊಂಡ "ಬಂಡವಾಳದಾರರ ವರ್ಗ" ಹಾಗೂ ಬಡಜನತೆಯನ್ನು ಒಳಗೊಂಡ "ಶ್ರಮಿಕರ ವರ್ಗ" ಎಂಬ ಎರಡು ವರ್ಗಗಳು ಅಸ್ತಿತ್ವಕ್ಕೆ ಬಂದರೆ, ಈ ಎರಡು ವರ್ಗಗಳ ನಡುವೆ ಇನ್ನೊಂದು ಮಧ್ಯಮ ವರ್ಗ ಉದಯವಾಯಿತು.

### 3) ತಂತ್ರಜ್ಞಾನ ಮತ್ತು ಕೃಷಿ : '

ಇಂದು ಕೃಷಿಯಲ್ಲಿ ಯಾಂತ್ರೀಕರಣವು ಹಲವಾರು ರೀತಿಯ ಸುಧಾರಣೆಗಳನ್ನು ತಂದಿದೆ. ಸುಧಾರಿಸಿದ ಬೀಜ, ರಸಾಯನಿಕ ಗೊಬ್ಬರ, ನೀರಾವರಿ ಸೌಲಭ್ಯ ಮುಂತಾದವುಗಳ ಅವಿಷ್ಕಾರದಿಂದ ಹಾಗೂ ಹೊಸ ಸಾಧನ–ಸಲಕರಣೆಗಳ ಬೆಳವಣಿಗೆಯಿಂದ ಕೃಷಿ ಉತ್ಪಾದನೆಯಲ್ಲಿ ಅಗಾಧ ಬೆಳವಣಿಗೆ ಆಗಿದ್ದರಿಂದ ಗ್ರಾಮೀಣ ಜನರ ಜೀವನ ಮಟ್ಟದ ಸುಧಾರಣೆಗೆ ಕಾರಣವಾಗಿದೆ. ತಂತ್ರಜ್ಞಾನದಿಂದ ಔದ್ಯೋಗೀಕರಣ, ನಗರೀಕರಣ, ಬಂಡವಾಳದ ಬೆಳವಣಿಗೆ, ನೈಪುಣ್ಯತೆ, ಸರಕು ಸೇವೆಗಳು ಸುಲಭವಾಯಿತು.

## 6.4. ಸಾಮಾಜಿಕ ಪರಿವರ್ತನೆಗೆ ಪ್ರತಿರೋಧಗಳು [Resistance to social change]

ಪರಿವರ್ತನೆ ಸಹಜವಾದುದು. ಯಾರೂ ಇದನ್ನು ತಡೆಗಟ್ಟಲಾರರು ಪರಿವರ್ತನೆಯ ಪ್ರಕ್ರಿಯೆ ಆರಂಭಗೊಂಡಾಗ ಮಾನವ ಮತ್ತು ಅವನ ಸಮಾಜ ಪ್ರತಿರೋಧ ಒಡ್ಡುತ್ತದೆ. ಸಮಾಜದಲ್ಲಿ ಎಲ್ಲಾ ಪರಿವರ್ತನೆಗಳನ್ನು ಎಲ್ಲಾ ಸಂದರ್ಭಗಳಲ್ಲೂ ಎಲ್ಲರೂ ಸ್ವಾಗತಿಸುತ್ತಾರೆ ಎಂದೇನಿಲ್ಲ. ಇಂದು ಸಂಸ್ಕೃತಿ ಅಥವಾ ನಾಗರೀಕತೆಗಳಲ್ಲಾದ ಪರಿವರ್ತನೆಗಳಿಗೆ ಇನ್ನೊಂದು ಅವಧಿಯಲ್ಲಿ ವಿರೋಧ ವ್ಯಕ್ತವಾಗಬಹುದು. ಪರಿವರ್ತನೆ ತಕ್ಷಣ ಸಂಭವಿಸುವದಿಲ್ಲ ಇದು ವಿರೋಧಾತ್ಮಕ ಅಂಶಗಳಿಂದ ಕೂಡಿದೆ.

**ಆಗ್‌ಬರ್ನ್ ಮತ್ತು ನಿಮ್‌ಕಾಫ್** ಹೇಳುವಂತೆ –"ಅನೇಕ ವೇಳೆ ಸಮಾಜಕ್ಕೆ ಉಪಯುಕ್ತವಾದ ಅಂಶಗಳನ್ನು ವಿರೋಧಿಸಲಾಗಿತ್ತು. ಉದಾಹರಣೆಗೆ ಲಸಿಕೆಯನ್ನು ವಿರೋಧಿಸಲಾಗಿತ್ತು. ಪ್ರಜ್ಞಾವಂತ ಅಥವಾ ಸಾಂಪ್ರದಾಯಿಕ ಸಮಾಜದಲ್ಲಿ ಪ್ರತಿರೋಧ ಇದ್ದೇ ಇರುತ್ತದೆ. ಅಮೇರಿಕಾದಲ್ಲಿ ಗುಲಾಮಗಿರಿ ಪದ್ಧತಿಯು ದೀರ್ಘ ಹೋರಾಟದ

ನಂತರ ಪರಿವರ್ತನೆಯಾಯಿತು. ಭಾರತದಲ್ಲಿ ಅಸ್ಪೃಶ್ಯತೆ, ಸತಿಸಹಗಮನ ಪದ್ಧತಿ, ಬಾಲ್ಯ ವಿವಾಹಗಳನ್ನು ನಿಷೇದಿಸಲು ಸಾಕಷ್ಟು ಹೋರಾಟಗಳು ನಡೆದವು.

ಆಗ್‌ಬರ್ನ್ ಮತ್ತು ನಿಮ್‌ಕಾಫ್‌ರವರು ಪರಿವರ್ತನೆಯ ಪ್ರತಿರೋಧದ ಕಾರಣಗಳನ್ನು ಈ ಕೆಳಗಿನಂತೆ ತಿಳಿಸಿದ್ದಾರೆ.

### 1) ಅಸಮರ್ಪಕ ಅವಿಷ್ಕಾರಗಳು [Inadequacy of Invention]

ಹೊಸ ಅವಿಷ್ಕಾರಗಳು ಆರಂಭದಲ್ಲಿ ಪರಿಪಕ್ವತೆ ಹೊಂದಿರುವುದಿಲ್ಲ. ಕೆಲವು ದೋಷಗಳನ್ನು ಹೊಂದಿರುವುದು ಸಹಜ. ಒಂದು ಅಥವಾ ಬೇರೆ ಯಾವುದಾದರೂ ಕಾರಣದಿಂದ ಜನರು ಅವಿಷ್ಕಾರದಲ್ಲಿ ಆಸಕ್ತಿಯನ್ನು ತೋರಿಸಬಹುದು ಅಥವಾ ತೋರಿಸದೇ ಇರಬಹುದು. ಕೆಲವು ಬಾರಿ ಸಂಶೋಧಕರು ಸಮುದಾಯಕ್ಕೆ ಮನವರಿಕೆ ಮಾಡಿಕೊಡುವಲ್ಲಿ ವಿಫಲರಾಗುತ್ತಾರೆ. ಅವಿಷ್ಕಾರಗಳು ಸಾಮುದಾಯಿಕ ಜೀವನದ ಮೇಲೆ ಪ್ರಭಾವ ಬೀರಲಾರವು. ಅಥವಾ ಅವು ಆ ಕಾಲಕ್ಕೆ ಅವಶ್ಯಕವೆನಿಸಲಾರವು. ಇದು ಲಾಭ ಮತ್ತು ಹಾನಿಯನ್ನು ತರುತ್ತದೆ. ಉದಾಹರಣೆ ಅಟಂಬಾಂಬ ಸಿಡಿತ ಅಣುಶಕ್ತಿ ಉಪಯೋಗವನ್ನು ತಡೆಗಟ್ಟಿತು. ಇಂತಹ ಸಂದರ್ಭದಲ್ಲಿ ಪ್ರತಿರೋಧ ಕಂಡು ಬರುತ್ತದೆ.

### 2) ಭಯ [Fear]

ಹೊಸ ವಿಚಾರವು ಪರಿಚಯವಾದಾಗ ಜನರು ಅದರ ಬಗ್ಗೆ ಭಯ ಹೊಂದುತ್ತಾರೆ. ಜನರು ಯಾವಾಗಲೂ ಅವು ಆತಂಕ ತರಬಹುದು ಎಂದು ಭಾವಿಸಿರುತ್ತಾರೆ. ಅಥವಾ ಹೊಸ ಸಮಸ್ಯೆಗಳನ್ನು ತರಬಹುದು ಎಂದು ತಿಳಿದುಕೊಂಡಿರುತ್ತಾರೆ. ಅದಕ್ಕೆ ಜನರು ಹೊಸದನ್ನು ಬೇಗನೆ ಸ್ವೀಕರಿಸುವದಿಲ್ಲ. ಥಾಮಸ್ ಎಡಿಸನ್‌ನು ವಿದ್ಯುತ್ ಬಲ್ಬನ್ನು ಸಂಶೋಧನೆ ಮಾಡಿ ಆ ವಿದ್ಯುತ್ ಬಲ್ಬ್ ಹೇಗೆ ಬೆಳಕನ್ನು ನೀಡುತ್ತದೆ. ಎಂದು ಪ್ರದರ್ಶಿಸಿದ ತಕ್ಷಣ ಬೆಳಕನ್ನು ಕೊಡುವ ವಿದ್ಯುತ್ ಬಲ್ಬ ನೋಡಿ ಜನ ಭಯಗೊಂಡು ಓಡಿಹೋದರು. ಹಿಂದಿನ ಕಾಲದಲ್ಲಿ ಫೋಟೋಗ್ರಾಫಿಯಲ್ಲಿ ಕಾಣಿಸಿಕೊಂಡರೆ ಅವರ ಶಕ್ತಿ ಮತ್ತು ಸಾಮರ್ಥ್ಯ ಕಡಿಮೆಯಾಗುತ್ತದೆ ಎಂದು ಭಯಪಡುತ್ತಿದ್ದರು.

### 3) ಅಜ್ಞಾನ [Ignorance]

ಮನುಷ್ಯನ ಅಜ್ಞಾನವು ಪರಿವರ್ತನೆಯ ಪ್ರತಿರೋಧಕ್ಕೆ ಮೂಲ ಕಾರಣ ಶಿಕ್ಷಣ ಮತ್ತು ತರಬೇತಿ ಅವನನ್ನು ಬುದ್ಧಿವಂತನನ್ನಾಗಿ ಮಾಡಿದೆ. ಆದಾಗ್ಯೂ ಮಾನವ ಹೊಸದರ ಬಗ್ಗೆ ಅಜ್ಞಾನಿಯಾಗಿದ್ದಾನೆ. ಅವನಿಗೆ ಸರಿಯಾದ ಜ್ಞಾನ ಸಿಗುವವರೆಗೆ ವಿರೋಧ ವ್ಯಕ್ತ ಪಡಿಸುತ್ತಾನೆ.

ಅಜ್ಞಾನದ ಮುಂದುವರಿಕೆಯಿಂದ ಸಾಮಾಜಿಕ ಮೌಲ್ಯಗಳ ಬಗ್ಗೆ ಸಮುದಾಯಕ್ಕೆ ಬೋಧಿಸುವುದು ಕಷ್ಟದಾಯಕ. ಉದಾಹರಣೆಗೆ ಮಹಾತ್ಮಾಗಾಂಧಿ ಅವರ ಆದರ್ಶ **"ಮದ್ಯ ಸೇವನಾ ರಹಿತ ಸಮಾಜ"** ಈ ಪ್ರಕ್ರಿಯೆ ಇನ್ನೂ ಚಾಲನೆಯಲ್ಲಿದೆ. ಗೊತ್ತಿದ್ದು ಅಥವಾ ಗೊತ್ತಿಲ್ಲದೆಯೋ ಜನರು ಮಾದಕ ಸೇವನೆಯನ್ನು ಮುಂದುವರಿಸುತ್ತಿದ್ದಾರೆ.

### 4) ಅಭ್ಯಾಸ [Habit]

ಜನರು ಒಮ್ಮೆ ಕೆಲವೊಂದು ಅಭ್ಯಾಸಗಳಿಗೆ ಒಳಗಾದ ಮೇಲೆ ಅವುಗಳ ಪ್ರಭಾವದಿಂದ ಹೊರಬರಲು ಕಷ್ಟ ಪಡಬೇಕಾಗುವುದು. ವ್ಯಕ್ತಿತ್ವ ಎನ್ನುವದು ವಿವಿಧ ಅಭ್ಯಾಸಗಳ ಸಂಕೀರ್ಣರೂಪವಾಗಿದೆ. ಸಂಪ್ರದಾಯ ಅಭ್ಯಾಸಗಳ ಮೇಲೆ ಒತ್ತಡ ಹೇರುತ್ತದೆ. ಹಾಗೆಯೇ ನಮ್ಮ ವಿಚಾರಗಳ ಮೇಲೆ ಹಾಗೂ ನಿತ್ಯಜೀವನದ

ಮೇಲೆ ಪ್ರಭಾವ ಬೀರುತ್ತದೆ. ವ್ಯಕ್ತಿಯು ಗೊತ್ತಿಲ್ಲದ ಅಭ್ಯಾಸಗಳನ್ನು ಬೆಳಸಿಕೊಳ್ಳಲಾರ. ಹೊಸ ಅಭ್ಯಾಸಗಳ ಬಗ್ಗೆ ಇರುವ ಭಯದಿಂದ ಅವುಗಳನ್ನು ತಿರಸ್ಕರಿಸುತ್ತಾನೆ. ಅದರಲ್ಲಿ ಹಿರಿಯರು ಹೊಸ ಅಭ್ಯಾಸಗಳನ್ನು ಬೆಳೆಸಿಕೊಳ್ಳಲಾರರು. ಹೊಸ ಮಾದರಿಗಳು ಮತ್ತು ಶೈಲಿಗಳು ಹೊಸ ಅಭ್ಯಾಸಕ್ಕೆ ಕಾರಣವಾಗುತ್ತದೆ. ಇವುಗಳನ್ನು ಹಿರಿಯರು ಪ್ರಶ್ನಿಸುತ್ತಾರೆ.

ಹಿರಿಯ ನಾಗರಿಕರು ಸಮಾಜದ ಹೊಸ ನೀತಿ ನಿಯಮಗಳನ್ನು ಸ್ವೀಕರಿಸಲು ತಿರಸ್ಕರಿಸುತ್ತಾರೆ. ಹೊಸ ಅಭ್ಯಾಸಗಳು ಹಳೆಯ ಸಮಾಜಕ್ಕೆ ವಿಚಿತ್ರವೆನಿಸುತ್ತವೆ. ಅವರು ನಂಬುಗೆಗಳನ್ನು ಇಚ್ಛಿಸುತ್ತಾರೆ, ನಂಬುಗೆ ಅಭ್ಯಾಸವನ್ನು ಬೆಳೆಸುತ್ತಿದೆ. ಅಭ್ಯಾಸ ನಂಬುಗೆಯನ್ನು ಮುಂದುವರೆಸುತ್ತದೆ. ಆದ್ದರಿಂದ ಅಭ್ಯಾಸಗಳು ಪ್ರತಿರೋಧ ಒಡ್ಡುತ್ತವೆ.

### 5) ಪಟ್ಟಭದ್ರ ಹಿತಾಸಕ್ತಿಗಳು (Vested interests)

ಮಾನವ ತನ್ನ ಸ್ವಂತ ಆಸಕ್ತಿಯಿಂದಲೇ ಸಮಾಜದಲ್ಲಿ ಜೀವಿಸಲು ಆರಂಭಿಸಿದ. ಸಾಮಾನ್ಯವಾಗಿ ಇದನ್ನು ಸ್ವಾರ್ಥ ಎನ್ನುತ್ತೇವೆ. ಬದಲಾವಣೆ ಕೆಲವೂ ನಿತ್ಯ ಜೀವನದಲ್ಲಿ ಪದ್ಧತಿಗೆ ತೊಂದರೆ ಮಾಡುತ್ತದೆ. ಮಾನವನು ಸಧ್ಯದ ವ್ಯವಸ್ಥೆಯಲ್ಲೇ ಆನಂದವಾಗಿರುತ್ತಾನೆ. ಇದೇ ವ್ಯವಸ್ಥೆಯಲ್ಲೇ ಹೆಚ್ಚಿನ ಅವಕಾಶಗಳನ್ನು ಸರಳವಾಗಿ ಪಡೆದುಕೊಳ್ಳಲಿಕ್ಕೆ ಇಚ್ಚಿಸುತ್ತಾನೆ. ಸಾಮಾನ್ಯವಾಗಿ ಬದಲಾವಣೆಗಳು ಕೆಲವೊಮ್ಮೆ ಸ್ವಹಿತಕ್ಕೆ ಧಕ್ಕೆ ತರುತ್ತವೆ.

ಭಾರತದಲ್ಲಿ ಭೂ ಸುಧಾರಣೆ ಕಾಯಿದೆ ಬದಲಾವಣೆ ತಂದಿತು. ಈ ರೀತಿ ಪರಿವರ್ತನೆ ಮತ್ತು ಶಾಸನದಲ್ಲಾದ ಸುಧಾರಣೆಯನ್ನು ಶ್ರೀಮಂತ ಭೂಮಾಲಿಕರು ವಿರೋಧಿಸಿದರು, ಪಟ್ಟಭದ್ರ ಸಮಾಜ ಕಳೆದುಕೊಳ್ಳಲು ಇಚ್ಚಿಸುವದಿಲ್ಲ. ಇದರಂತೆ ಅಂತರ್‌ಜಾತಿಯ ವಿವಾಹವನ್ನು ಕೆಲವರು ವಿರೋಧಿಸುತ್ತಾರೆ. ಬದಲಾವಣೆಯ ಸ್ಥಿತಿಗಳು ಸಾಮಾಜಿಕ ಜೀವನವನ್ನು ಬದಲಾಯಿಸುತ್ತವೆ. ಲಾಭ ಪಡೆದವರು ಬದಲಾವಣೆ ಬೆಂಬಲಿಸುತ್ತಾರೆ. ಹಾನಿಗೊಳಗದವರು ವಿರೋಧಿಸುತ್ತಾರೆ. ಸಾಮಾನ್ಯವಾಗಿ ಮಾನವನು ವಿಶಾಲವಾಗಿ ಚಿಂತಿಸುವುದಿಲ್ಲ, ಸ್ವಹಿತ ಸಾಧನೆಗೆ ಪ್ರಯತ್ನಿಸುತ್ತಾನೆ.

### 6) ಆರ್ಥಿಕ ಅಸಮತೆ [Economic inequality]

ಹಣ ಮತ್ತು ಸಂಪತ್ತು ಪರಿವರ್ತನೆ ಸ್ವೀಕರಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತದೆ. ಉದಾಹರಣೆಗೆ–ಭಾರತ ಸರಕಾರ ಪಂಚವಾರ್ಷಿಕ ಯೋಜನೆಗಳನ್ನು ಅನುಷ್ಠಾನಕ್ಕೆ ತರಲು ಸಾಕಷ್ಟು ಹಣ ವ್ಯಯಿಸಬೇಕಾಗುತ್ತದೆ. ಇತ್ತೀಚೆಗೆ ಯೋಜನಾ ವೆಚ್ಚ (ಆರ್ಥಿಕಹೊರೆ) ಹೆಚ್ಚಾಗಿದೆ. ಶಿಕ್ಷಣ, ಆರೋಗ್ಯ, ವಸತಿಯಂತಹ ಯೋಜನೆಗಳನ್ನು ಅನುಷ್ಠಾನ ಮಾಡುವಾಗ ಹಣಕಾಸಿನ ವೆಚ್ಚದಲ್ಲಿ ಬದಲಾವಣೆ ಆಗಿ ಧನಾತ್ಮಕ ಫಲಿತಾಂಶ ಸಿಗುತ್ತಿಲ್ಲ. ಆರ್ಥಿಕ ತೊಂದರೆ ಬದಲಾವಣೆಗೆ ವಿರೋಧವಾಗಿದೆ.

### 7) ಸಂಯೋಜನೆಯ ಕೊರತೆ (Lack of an integrated approach)

ಸಮಾಜವು ವಿವಿಧ ಭಾಗಗಳ ಜೋಡಣೆಯಾಗಿದೆ. ಉದಾಹರಣೆಗೆ– ಧರ್ಮ, ಶಿಕ್ಷಣ, ಸರಕಾರ ಇವುಗಳಿಂದಲೇ ಸಮಾಜದ ವ್ಯವಸ್ಥೆ ನಿರ್ಮಾಣವಾಗಿದೆ. ಒಂದು ಅಂಶ (ಭಾಗ)ದಲ್ಲಿ ಆದ ಪರಿವರ್ತನೆ ಇನ್ನೊಂದು ಭಾಗದಲ್ಲಿ ಪರಿವರ್ತನೆ ತರುತ್ತದೆ. ನಾವು ಧರ್ಮದಲ್ಲಿ ಪರಿವರ್ತನೆ ತರಬಯಸಿದರೆ ಶಿಕ್ಷಣ ವ್ಯವಸ್ಥೆಯಲ್ಲಿ ಪರಿವರ್ತನೆ ತರುವುದು ಅವಶ್ಯ.

ಸಮಾಜವನ್ನು ಇಡಿಯಾಗಿ ಪರಿವರ್ತನೆ ತರಲಿಚ್ಛಿಸಿದಾಗ ಇದಕ್ಕೆ ಸಂಬಂಧಿಸಿದ ಎಲ್ಲ ಅಂಶಗಳಲ್ಲಿ ಪರಿವರ್ತನೆಯಾಗಬೇಕಾಗುತ್ತದೆ. ಕುರುಡು ನಂಬಿಕೆ ಅಥವಾ ದುಷ್ಟ ಪದ್ಧತಿ ನಿರ್ಮೂಲನೆವಾಗಬೇಕಾದರೆ

ಪ್ರಭಲವಾಗಿರುವ ಸಮಾಜ ಪರಿವರ್ತನೆಯಾಗಬೇಕಾಗುತ್ತದೆ. ಉದಾಹರಣೆಗೆ – ಸತಿಸಹಗಮನ ಪದ್ಧತಿಯು ಶಾಸನಾತ್ಮಕ ಕ್ರಮಗಳು, ಶಿಕ್ಷಣ, ಧರ್ಮದ ಸಹಕಾರದಿಂದ ನಿರ್ಮೂಲನವಾಯಿತು. ಸಮಾಜದ ವಿವಿಧ ಭಾಗಗಳ ನಡುವೆ ಸಂಯೋಜನೆಯ ಕೊರತೆಯುಂಟಾದಾಗ ಸಮಾಜದಲ್ಲಿ ಪರಿವರ್ತನೆ ತರಲು ಕಷ್ಟವಾಗುತ್ತದೆ.

### 8) ತಾಂತ್ರಿಕ ತೊಂದರೆಗಳು : (Technical Difficulties)

ಹೊಸ ತಾಂತ್ರಿಕ ಅವಿಷ್ಕಾರಗಳಾದಾಗ ಅದನ್ನು ಸಮಾಜ ತನ್ನ ಜೀವನ ಶೈಲಿಯಲ್ಲಿ ಅಳವಡಿಸಿಕೊಳ್ಳಲು ಪ್ರಯತ್ನಿಸುತ್ತದೆ. ಸಮುದಾಯದಲ್ಲಿ ತಾಂತ್ರಿಕ ಬದಲಾವಣೆಗಳಾದಾಗ ಹಲವು ಬಾರಿ ತಕ್ಷಣ ಸ್ವೀಕರಿಸಿದರೆ, ಕೆಲವು ಸಲ ನಿರಾಕರಿಸುತ್ತದೆ. ತಾಂತ್ರಿಕ ಯೋಜನೆಗಳು ಪುನರ್‌ರಚನೆಯಾಗಬೇಕು, ಕಾರಣ ಇದು ಸ್ವೀಕೃತಿಯಲ್ಲಿ ಹಿನ್ನಡೆ ತರುತ್ತದೆ. ಉದಾಹರಣೆಗೆ : ಸ್ಕೂಟರ ಸವಾರರು ಹೆಲ್ಮೆಟನ್ನು ಧರಿಸುವುದಿಲ್ಲ ಅದಕ್ಕೆ ಬೇರೆ ಕಾರಣವಿರಬಹುದು, ಸೋಲಾರ ಶಕ್ತಿ ಹೆಚ್ಚು ಜನಪ್ರಿಯವಾಗಿಲ್ಲ ಕಾರಣ ತಂತ್ರಜ್ಞಾನದಲ್ಲಿ ಹೊಸ ಮಾರ್ಪಾಡು ಅಗತ್ಯವಾಗಿರುತ್ತದೆ. ಸ್ಥಿರ ದೂರವಾಣಿಗಳು ಜನಪ್ರಿಯತೆ ಕಳೆದುಕೊಂಡು ಮೊಬೈಲ್ ದೂರವಾಣಿಗಳು ಹೆಚ್ಚು ಜನಪ್ರಿಯವಾಗಿವೆ ಇತ್ಯಾದಿ.

### 9) ಬೌದ್ಧಿಕ ಆಲಸ್ಯ (Intellectual laziness)

ಸೃಜನಶೀಲತೆ ಮಾನವನನ್ನು ಜಾಗ್ರತನನ್ನಾಗಿ ಮಾಡುತ್ತದೆ. ಮತ್ತು ಸಮುದಾಯದ ಗಮನ ಸೆಳೆಯುತ್ತದೆ. ಸೃಜನಶೀಲತೆ ಹೊಂದಿದ ವ್ಯಕ್ತಿ ಆಧುನಿಕ ಸ್ಥಿತಿಗೆ ಹೊಂದಿಕೊಂಡು ಹೋಗಲು ಒಪ್ಪಿದರೆ ಆಲಸಿಯಾದವನು ಒಪ್ಪಲಾರ. ಹೊಸದರ ಮಹತ್ವವನ್ನು ಕುರಿತು ತಿಳಿದುಕೊಳ್ಳಲು ಆಸಕ್ತಿ ತೋರಿಸಬೇಕಾಗುತ್ತದೆ. ಆಸಕ್ತಿ ಇರದಿದ್ದರೆ ಹೆಚ್ಚಿನ ಗಮನ ಕೊಡದೆ ಹೋದರೆ ವ್ಯಕ್ತಿ ತನ್ನನ್ನು ತಾನು ಪರಿವರ್ತನೆಗೆ ಒಳಪಡಿಸಿಕೊಳ್ಳಲು ಕಷ್ಟದಾಯಕವಾಗುತ್ತದೆ. ಆಲಸ್ಯ ಬುದ್ಧಿಮತ್ತೆಯ ಕೊರತೆಯಿಂದ ಪರವರ್ತನೆ ಕಾಣಲಾಗುವುದಿಲ್ಲ. ಸಾಮಾಜಿಕ ಶಾಸನಗಳನ್ನು ಕಾರ್ಯರೂಪಕ್ಕೆ ತರಲು ಪ್ರಯತ್ನಿಸಿದಾಗ ಸಮಾಜದ ನಿಯೋಗಿಗಳು ಕಾರ್ಯಶೀಲರಾಗಬೇಕು. ಆಡಳಿತದಲ್ಲಿ ಈ ಗುಣಗಳ ಕೊರತೆಯಿಂದ ಪರಿವರ್ತನೆ ತರಲು ಆಗುವುದಿಲ್ಲ.

### 10) ಸ್ಥಿರತೆಯ ಬಯಕೆ. (Desire for stability)

ಸಮಾಜದಲ್ಲಿ ಸಾಮಾಜಿಕ ಕಾರ್ಯ ಮತ್ತು ಚಟುವಟಿಕೆಗಳು ಸರಳವಾಗಿ ಸಾಗುತ್ತವೆ. ಮಾನವನು ಸ್ಥಿರ ಸಮಾಜದಲ್ಲಿ ಸುರಕ್ಷಿತವಾಗಿ ಇರುತ್ತೇನೆಂದು ಭಾವಿಸುತ್ತಾನೆ. ಬದಲಾವಣೆ ವರ್ತಮಾನ ಸಮಾಜದಲ್ಲಿ ಅಡೆತಡೆಗಳನ್ನು ಸೃಷ್ಟಿಸುತ್ತದೆ. ಇದು ಅಸುರಕ್ಷಿತೆಗೆ ಕಾರಣವಾಗಬಹುದು ಎಂದು ತಿಳಿದಿದ್ದಾನೆ. ಜನಸಾಮಾನ್ಯರಿಗೆ. ಹೊಸ ಸಮಾಜದ ಬಗ್ಗೆ ಭರವಸೆ ಇರುವುದು, ಹೊಸತನದಿಂದ ಎದುರಾಗಬಹುದಾದ ಅಭದ್ರತೆ, ಅಸ್ಥಿರತೆ ಪ್ರತಿರೋಧವನ್ನು ಹೆಚ್ಚುಮಾಡುತ್ತದೆ.

## 6.5. ಸಾಮಾಜಿಕ ಪರಿವರ್ತನೆಯ ಪರಿಣಾಮ (Consequesnces of Social change)

ಬದಲಾವಣೆ ಅನಿವಾರ್ಯ. ಮಾನವ ಮತ್ತು ಸಮಾಜ ಬದಲಾವಣೆಗೆ ಬದ್ಧರಾಗಲೇಬೇಕು. ಬದಲಾವಣೆಯನ್ನು ಎದುರಿಸಬೇಕು. ಮಾನವನ ಹಾಗೂ ಸಮಾಜದ ಇತಿಹಾಸವನ್ನು ಗಮನಿಸಿದಾಗ ಮಾನವ ಮತ್ತು ಸಮಾಜ ಪರಿವರ್ತನೆಯ ಪರಿಣಾಮವನ್ನು ಅನುಭವಿಸಿದ್ದನ್ನು ಕಾಣುತ್ತೇವೆ. ಸಾಮಾಜಿಕ ಪರಿವರ್ತನೆ ಎರಡು ರೀತಿಯ ಪರಿಣಾಮವನ್ನು ನೀಡುತ್ತದೆ. ಒಂದು ಧನಾತ್ಮಕವಾದ ಬದಲಾವಣೆ. ಇಂತಹ ಬದಲಾವಣೆಗಳು, ಸಾಮಾಜಿಕ ಬೆಳವಣಿಗೆ, ಸಾಮಾಜಿಕ ಪ್ರಗತಿ, ಸಾಮಾಜಿಕ ಸುಧಾರಣೆಗೆ ದಾರಿ ಮಾಡಿಕೊಟ್ಟಿದೆ. ಇನ್ನೊಂದು ರೀತಿಯಾದ ಋಣಾತ್ಮಕ ಬದಲಾವಣೆ ಸಮಾಜವನ್ನು ಹಿನ್ನೆಡೆಸುತ್ತದೆ. ನೈಸರ್ಗಿಕ ವಿಕೋಪ, ಪರಿಸರ ನಾಶ, ಪರಿಸರ ಅಸಮತೋಲನೆ, ಬರ, ಯುದ್ಧ, ರೋಗಗಳು ಇದಕ್ಕೆ ಸಾಕ್ಷಿ ಆಗಿವೆ. ಹೀಗೆ ನಾವು ಎರಡು ರೀತಿಯಿಂದ ಸಾಮಾಜಿಕ ಬದಲಾವಣೆಯ ಪರಿಣಾಮಗಳನ್ನು ಗ್ರಹಿಸಬಹುದು.

ಸಮಾಜದ ಒಂದು ಭಾಗದಲ್ಲಾದ ಬದಲಾವಣೆ ವಿವಿಧ ಭಾಗಗಳ ಮೇಲೆ ಪರಿಣಾಮ ಬೀರುತ್ತದೆ. ಪ್ರತ್ಯೇಕ ಪರಿಣಾಮವನ್ನು ತಕ್ಷಣ ಗ್ರಹಿಸಬಹುದು. ಅಪ್ರತ್ಯಕ್ಷ ಪರಿಣಾಮವನ್ನು ಕ್ರಮೇಣವಾಗಿ ಭವಿಷ್ಯದಲ್ಲಿ ಗುರುತಿಸಲಾಗುವುದು. ಚಿಕ್ಕ ಬದಲಾವಣೆಯೂ ಸಹ ಭವಿಷ್ಯದಲ್ಲಿ ಪರಿಣಾಮಕಾರಿ ಪ್ರಭಾವವನ್ನು ಉಂಟುಮಾಡುತ್ತದೆ. ಜನಸಂಖ್ಯಾ ಪರಿವರ್ತನೆ ಸಮಾಜದಲ್ಲಿ ಸಾಮಾಜಿಕ ಪರಿವರ್ತನೆಗೆ ದಾರಿ ಮಾಡಿಕೊಡುತ್ತದೆ. ಲಿಂಗಾನುಪಾತ, ಶಿಶು ಮರಣ, ಆರೋಗ್ಯದಂತಹ ಸಮಸ್ಯೆಗಳು, ಕುಟುಂಬ ವ್ಯವಸ್ಥೆ, ವಿವಾಹ ಪದ್ಧತಿಗಳ ಮೇಲೆ ಬಹಳಷ್ಟು ಪರಿಣಾಮ ಬೀರುತ್ತವೆ. ಇಂದಿನ ಅಣುಕುಟುಂಬ, ಹೊರ ಬಾಂಧವ್ಯ, ವಿವಾಹಗಳು ಭಾರತದಲ್ಲಿ ಬದಲಾವಣೆಯ ಉದಾಹರಣೆಗಳಾಗಿವೆ.

ತಂತ್ರಜ್ಞಾನದಿಂದ ಬದಲಾವಣೆ ಕಂಡು ಬಂದಾಗ, ಔದ್ಯೋಗಿಕರಣ, ನಗರೀಕರಣ ಹಾಗೂ ಆಧುನೀಕರಣಗಳು ಸಮಾಜದಲ್ಲಿ ಹೊಸ ವ್ಯವಸ್ಥೆಯನ್ನು ತರುತ್ತವೆ. ಇಂತಹ ಹೊಸತನ ಕೊಳಚೆ ಪ್ರದೇಶ, ವಸತಿ ಹಾಗೂ ಗ್ರಾಮ ನಗರ ವಲಸೆ ಸಮಸ್ಯೆಗಳು ಪರಿವರ್ತನೆಯ ಪರಿಣಾಮಗಳೆನಿಸಿವೆ. ಇಂತಹ ಪರಿಣಾಮ ಭಾರತದಲ್ಲಿಯೂ ಕಂಡು ಬರುತ್ತಿದೆ.

1947ರ ನಂತರ ಭಾರತದಲ್ಲಿ ಅನೇಕ ರಾಜಕೀಯ ಬದಲಾವಣೆಗಳೂ ಉಂಟಾದವು. ಅವು ಸಾಮಾಜಿಕ ಬದಲಾವಣೆಗೆ ಕಾರಣವೆನಿಸಿದವು. ಭಾರತೀಯ ಸಂವಿಧಾನದ ಗುರಿ ಮತ್ತು ಉದ್ದೇಶಗಳಾದ ಸ್ವಾತಂತ್ರ್ಯ ಸಮಾನತೆ ಮತ್ತು ಸಹೋದರತ್ವ ತತ್ವಗಳು ಆಚರಣೆಗೆ ಬಂದವು. ಇದರಿಂದಾಗಿ ಭಾರತದ ಸಾಂಪ್ರದಾಯಿಕ ಸಮಾಜ ಬದಲಾಯಿತು. ಆಧುನಿಕ ಭಾರತ ಸಮಾಜ ಉಗಮವಾಯಿತು. ಸಂವಿಧಾನ ಹಾಗೂ ಶಾಸನಗಳು ಭಾರತ ಸಮಾಜವನ್ನು ಆಳತೊಡಗಿದವು. ಬಾಲ್ಯ ವಿವಾಹ ನಿಷೇಧ ಕಾಯಿದೆ, ಅಸ್ಪೃಶ್ಯತೆ ನಿವಾರಣಾ ಕಾಯಿದೆ, ಮೀಸಲಾತಿ ಇತ್ಯಾದಿ ಪರಿಣಾಮಗಳನ್ನು ನಾವು ಇಂದು ಭಾರತದಲ್ಲಿ ಕಾಣುತ್ತೇವೆ. ಭಾರತ ದೇಶದಲ್ಲಿ ಆಗುತ್ತಿರುವ ಸಾಮಾಜಿಕ ಪರಿವರ್ತನೆಯಿಂದಾಗಿ ಇಂದು ಭಾರತ ದೇಶವು ಪ್ರಗತಿಹೊಂದಿದ ರಾಷ್ಟ್ರವಾಗಿ ಹೊರಹೊಮ್ಮುತ್ತಿದೆ. ಇಂದು ಭಾರತ ದೇಶವು ಜಗತ್ತಿನ ಇತರ ದೇಶಗಳ ಮೇಲೆ ಪ್ರಭಾವ ಬೀರುತ್ತಿದೆ. ಇಂತಹ ಸಾಮಾಜಿಕ ಪರಿವರ್ತನೆಯ ಪರಿಣಾಮವನ್ನು ಭಾರತದಲ್ಲಿ ಕಾಣುತ್ತಿದ್ದೇವೆ.

ಉಪಸಂಹಾರ:– ಎಲ್ಲ ಬದಲಾವಣೆಗಳು ಕೆಡಕನ್ನುಂಟುಮಾಡುವುದಿಲ್ಲ. ಬದಲಾವಣೆ ಮತ್ತು ಪ್ರತಿರೋಧದಲ್ಲಿ ಲಾಭ ಮತ್ತು ಹಾನಿಗಳು ಎರಡು ಇರುತ್ತವೆ. ಸಮುದಾಯ ತಾಳ್ಮೆಯಿಂದ ಅದನ್ನು ಗಮನಿಸಿ ಒಪ್ಪಿಕೊಳ್ಳಬೇಕಾಗುತ್ತದೆ. ಉದಾಹರಣೆಗೆ– ಹೊಸ ಅವಿಷ್ಕಾರಗಳನ್ನು ಅಭ್ಯಸಿಸಿ ಒಪ್ಪಿಕೊಳ್ಳಬೇಕು. ಇಂದಿನ ವಿಶ್ವದಲ್ಲಿ ಮಾಲಿನ್ಯ ದೊಡ್ಡ ಸಮಸ್ಯೆಯಾಗಿದೆ. ನಾವು ಪರಿಸರದ ಮೇಲಿನ ಪರಿಣಾಮವನ್ನು ಅಭ್ಯಸಿಸಿ ನಿರ್ಧರಿಸಬೇಕಾಗುತ್ತದೆ. ಕೃತಕ ಬದಲಾವಣೆಯನ್ನು ಪರೀಕ್ಷಿಸಿ ಒಪ್ಪಬೇಕು. ಪರಿವರ್ತನೆ ಅರ್ಥಪೂರ್ಣವಾಗಿದೆ, ಸಮಾಜ ತನ್ನ ಅವಶ್ಯಕತೆಗೆ ಅನುಗುಣವಾಗಿ ಒಪ್ಪಬಹುದು ಅಥವಾ ಬಿಡಬಹುದು.

❑❑❑

# ಅಧ್ಯಾಯ – 7
# ಸಾಮಾಜಿಕ ಸಂಶೋಧನೆ
# (SOCIAL RESEARCH)

## 7.1. ಅರ್ಥ ಮತ್ತು ವ್ಯಾಖ್ಯೆಗಳು (Meaning and Definitions):

ಸಾಮಾಜಿಕ ಸಂಶೋಧನೆಯು ವ್ಯವಸ್ಥಿತ ವಿಧಾನದಿಂದ ಸಾಮಾಜಿಕ ಜೀವನದ ಪರಿಶೋಧನೆ, ವಿಶ್ಲೇಷಣೆ ಮತ್ತು ಪರಿಕಲ್ಪನೆಯಿಂದ ಒಂದು ಸಿದ್ಧಾಂತದ ರಚನೆ ಅಥವಾ ಕಲೆಯ ಅಭ್ಯಾಸವನ್ನು ವಿಸ್ತರಿಸುವ, ಸರಿಪಡಿಸುವ ಅಥವಾ ಪರಿಶೀಲಿಸುವ ಜ್ಞಾನವಾಗಿದೆ.

ಸಂಶೋಧನೆ ಎಂಬ ಪರಿಕಲ್ಪನೆಯು ಹೊಸ ವಿಷಯವನ್ನು ಮತ್ತು ಜ್ಞಾನವನ್ನು ಹುಡುಕುವ ಪ್ರಯತ್ನವಾಗಿದೆ ಇದು ಜ್ಞಾನದಾಹವನ್ನು ನೀಗಿಸಲು ಬಳಸುವ ನಿರ್ದಿಷ್ಟ ವಿಧಾನಗಳ ಅನುಕರಣೆಯಾಗಿದೆ.

ಸಂಶೋಧನೆ ಎಂಬ ಪದವು ಲ್ಯಾಟಿನ್ ಭಾಷೆಯ **Re** ಮತ್ತು **search** ಎಂಬ ಪದಗಳಿಂದ ಬಂದಿದೆ. ಅಂದರೆ **"ಪುನರ್ ಶೋಧಿಸು"**, ಸರಿಯಾಗಿ ಹುಡುಕುವುದು, ಪರಿಶೋಧಿಸುವುದು ಎಂದರ್ಥವಿದೆ. ಸಾಮಾನ್ಯವಾಗಿ ಸಂಶೋಧನೆ ಎಂದರೆ ಪುನಃಹುಡುಕುವುದು, ಪರಿಶೋಧಿಸುವುದು, ಕಳೆದುಹೋದ ವಿಷಯ ಅಥವಾ ಹೊಸ ವಿಷಯದ ಅಸ್ಪಷ್ಟತೆಯನ್ನು ಹೊಗಲಾಡಿಸುವ ಪ್ರಕ್ರಿಯೆಯಾಗಿದೆ.

1. **ವಿಲ್ಲಿಯಂ ಸ್ಕಾಟ್:** "ಸಾಮಾಜಿಕ ಸಂಶೋಧನೆ ಎಂದರೆ ಯಾವುದೇ ಸಂಶೋಧನೆ ಮಾನವ ಸಮೂಹಗಳ ಅಥವಾ ಸಾಮಾಜಿಕ ಅಂತರ ಕ್ರಿಯೆಯ ಪ್ರಕ್ರಿಯೆಗಳ ಅಧ್ಯಯನಕ್ಕೆ ಪ್ರಾಮುಖ್ಯತೆ ನೀಡುವುದಾಗಿದೆ".
2. **ಪಿ.ವಿ.ಯಂಗ್:** "ಸಾಮಾಜಿಕ ಸಂಶೋಧನೆ ಎಂದರೆ ಕ್ರಮಬದ್ಧವಾದ ವಿಧಾನಗಳ ಮೂಲಕ ಹೊಸ ಘಟನೆಗಳನ್ನು ಕಂಡುಹಿಡಿಯುವುದು ಅಥವಾ ಈ ಹಿಂದಿನ ಘಟನೆಗಳನ್ನು ಪರಿಶೀಲಿಸಿ ಅದರ ಪರಿಣಾಮಗಳು, ಪರಸ್ಪರ ಸಂಬಂಧಗಳ ಸಾಮಾನ್ಯ ವಿವರಣೆ ಮತ್ತು ಪ್ರಕಟಿತ ನಿಯಮಗಳನ್ನು ನಿಯಂತ್ರಿಸುವುದಾಗಿದೆ".
3. **ಇ.ಎಸ್.ಬೋಗಾರ್ಡಸ್**: "ಸಹವರ್ತಿಗಳಾಗಿ ಜೀವಿಸುವ ಜನರ ಕಾರ್ಯನಿರ್ವಹಣೆಯ ಪ್ರಕ್ರಿಯಗಳ ಪರಿಶೀಲನೆಯೇ ಸಾಮಾಜಿಕ ಸಂಶೋಧನೆಯಾಗಿದೆ".

## 7.2. ದತ್ತಾಂಶ (ಮಾಹಿತಿ)ದ ಮೂಲಗಳು (Sources of Data or Information) :–

ಸಂಶೋಧನೆಯ ಪ್ರಕ್ರಿಯೆಯಲ್ಲಿ ದತ್ತಾಂಶ ಸಂಗ್ರಹಣೆ ಮುಖ್ಯ ಹಂತವಾಗಿದೆ. ಸಾಮಾನ್ಯವಾಗಿ ಯಾವ ಮಾಹಿತಿಯು ಸಂಶೋಧನೆಯ ಸಮಸ್ಯೆಗೆ ಸಂಬಂಧಿತವಾಗಿದೆಯೋ ಆ ಮಾಹಿತಿ ಸಂಗ್ರಹಣೆಯನ್ನು ದತ್ತಾಂಶ ಸಂಗ್ರಹಣೆ ಎನ್ನುವರು.

ವಿಲ್ಲಿಯಂ ಸ್ಕಾಟ್ ಪ್ರಕಾರ "ಅವಲೋಕನ ಅಥವಾ ಮಾಪನದಿಂದ ಸಂಗ್ರಹಿಸಿದ ಮಾಹಿತಿ ಮೂಲಕ ಸಾಮಾನ್ಯೀಕರ/ನ ಅಥವಾ ನಿರ್ಣಯ ಮಾಡುವುದೇ ದತ್ತಾಂಶವಾಗಿದೆ". ದತ್ತಾಂಶದಲ್ಲಿ ಎರಡು ವಿಧಗಳಿವೆ.

1. **ಪ್ರಾಥಮಿಕ ದತ್ತಾಂಶ (Primary Data)**

2. **ಮಾಧ್ಯಮಿಕ ದತ್ತಾಂಶ (Secondary Data)**

ಪ್ರಾಥಮಿಕ ದತ್ತಾಂಶ ಎಂದರೆ ಸಂಶೋಧನೆಗೆ ಸಂಬಂಧಿಸಿದ ಮಾಹಿತಿಯನ್ನು ಸಂಶೋಧಕನು ಪ್ರಥಮಬಾರಿಗೆ ಸಂಗ್ರಹಿಸುವನು. ಈ ದತ್ತಾಂಶವನ್ನು ಕ್ಷೇತ್ರ ಅಧ್ಯಯನ ಅಥವಾ ಪ್ರಯೋಗಾಲಯದಿಂದ ಸಂಗ್ರಹಿಸಲಾಗುವುದು.

ರಾಬರ್ಟ್‌ಸನ್ ಮತ್ತು ರೈಟ್ ಪ್ರಕಾರ ' ಪ್ರಾಥಮಿಕ ದತ್ತಾಂಶವು ನಿರ್ದಿಷ್ಟ ಸಂಶೋಧನೆಯ ಸಮಸ್ಯೆಯ ಪರಿಹಾರಕ್ಕೆ ನಿರ್ದಿಷ್ಟ ಉದ್ದೇಶದಿಂದ ಸಂಗ್ರಹಿಸಿದ ದತ್ತಾಂಶವಾಗಿದೆ"

ಪ್ರಾಥಮಿಕ ದತ್ತಾಂಶವು ಮೂಲ ದತ್ತಾಂಶವಾಗಿದ್ದು ಸಂಶೋಧಕನು ಕ್ಷೇತ್ರದಿಂದ ಸಂಗ್ರಹಿಸುತ್ತಾನೆ. ಪ್ರಾಥಮಿಕ ಮತ್ತು ಮಾಧ್ಯಮಿಕ ದತ್ತಾಂಶ ಸಂಗ್ರಹಕ್ಕೆ ಹಲವು ವಿಧಾನ ಹಾಗೂ ಸಾಧನಗಳನ್ನು ಅನುಸರಿಸಲಾಗುತ್ತದೆ. ಪ್ರಮುಖ ಪ್ರಾಥಮಿಕ ದತ್ತಾಂಶದ ಮೂಲಗಳೆಂದರೆ: ಅವಲೋಕನ, ಸಂದರ್ಶನ, ಪ್ರಶ್ನಾವಳಿ ಮತ್ತು ಸಾಮಾಜಿಕ ಸಮೀಕ್ಷೆ ಇತ್ಯಾದಿಗಳು.

ಪ್ರಾಥಮಿಕ ದತ್ತಾಂಶ ಪ್ರಥಮ ಬಾರಿ ಮತ್ತು ಇತ್ತೀಚಿನ ಮಾಹಿತಿಯಾಗಿದೆ. ಸಂಶೋಧನೆಯ ಸಮಸ್ಯೆಯನ್ನು ಅರ್ಥೈಸಲು ಮತ್ತು ಪರಿಹಾರ ಕಂಡುಕೊಳ್ಳಲು ಪ್ರಾಥಮಿಕ ದತ್ತಾಂಶವು ಉಪಯುಕ್ತವಾಗಿದೆ. ಈ ದತ್ತಾಂಶವು ಅಪ್ರಾಥಮಿಕ ದತ್ತಾಂಶದಲ್ಲಿ ಲಭಿಸುವುದಿಲ್ಲ. ಯಾಕೆಂದರೆ ಈ ದತ್ತಾಂಶವನ್ನು ಸಂಶೋಧಕನು ಪ್ರಥಮ ಬಾರಿ ಕ್ಷೇತ್ರ ಅಧ್ಯಯನ ಅಥವಾ ಪ್ರಯೋಗಾಲಯದಿಂದ ಸಂಗ್ರಹಿಸುತ್ತಾನೆ.

ಮಾಧ್ಯಮಿಕ ದತ್ತಾಂಶವನ್ನು ಸಂಶೋಧಕನು ವಿವಿಧ ದಾಖಲೆಗಳ ಮೂಲದಿಂದ ಸಂಗ್ರಹಿಸುತ್ತಾನೆ. ಮಾಧ್ಯಮಿಕ ದತ್ತಾಂಶವು ಈಗಾಗಲೇ ಬೇರೊಂದು ಉದ್ದೇಶಕ್ಕಾಗಿ ದಾಖಲಿಸಿದ ದತ್ತಾಂಶವನ್ನು ಸಂಶೋಧನೆಗೆ ಬಳಸಲಾಗುವುದು. ಇವುಗಳೆಂದರೆ ವೈಯುಕ್ತಿಕ ದಾಖಲೆ, ಸಾರ್ವಜನಿಕ ದಾಖಲೆಗಳು, ಪುಸ್ತಕಗಳು, ನಿಯತಕಾಲಿಕಗಳು, ಗ್ರಂಥಗಳು, ವಾರ್ಷಿಕ ಪುಸ್ತಕಗಳು, ವಿಶ್ವಕೋಶಗಳು ಮತ್ತು ಇತರ ದಾಖಲೆಗಳು.

### ಮಾಹಿತಿ ಸಂಗ್ರಹಣೆಯ ತಂತ್ರಗಳು ಮತ್ತು ಸಾಧನಗಳು:

### 7.3.1 ಅವಲೋಕನ (Observation)

ಅವಲೋಕನ ಎಂದರೆ ಉದ್ದೇಶವಿರಿಸಿಕೊಂಡು ಖಚಿತತೆಯಿಂದ ವೀಕ್ಷಣೆ ಮಾಡುವುದು. ಘಟನೆಗಳು ಜರುಗಿದಂತೆ ವೀಕ್ಷಣೆಯ ಮೂಲಕ ಅವುಗಳ ಪರಸ್ಪರ ಸಂಬಂಧವನ್ನು ತಿಳಿಯುವುದು. ಅವಲೋಕನವು ಘಟನೆಗಳ ಜರುಗುವಿಕೆಯನ್ನು ಉದ್ದೇಶಪೂರ್ವಕವಾಗಿ ಗ್ರಹಿಸುವುದು. ವಸ್ತು ನಿಷ್ಠತೆಯಿಂದ ಅವಲೋಕನ ಮಾಡಿದಾಗ ವೀಕ್ಷಕನ ವೈಯುಕ್ತಿಕ ಅಭಿಪ್ರಾಯ, ಪೂರ್ವಾಗ್ರಹ ಪೀಡಿತ ದೃಷ್ಟಿ, ಅನಿಸಿಕೆಗಳು ಅಧ್ಯಯನದಲ್ಲಿ ಪ್ರವೇಶಿಸುವುದಿಲ್ಲ, ಆದರೆ ವಸ್ತು ನಿಷ್ಠತೆಯಿಂದ ಅವಲೋಕನ ಮಾಡುವುದು ಬಹಳಷ್ಟು ಕಷ್ಟಕರ ಪ್ರಕ್ರಿಯೆಯಾಗಿದೆ.

**ಪಿ.ವಿ. ಯಂಗ್ ವ್ಯಾಖ್ಯೆ** "ಅವಲೋಕನ ಎಂದರೆ ವ್ಯವಸ್ಥಿತ ಮತ್ತು ಉದ್ದೇಶ ಪೂರಕ ಅಧ್ಯಯನವವನ್ನು ಘಟನೆಗಳು ಜರುಗಿದಂತೆ ವೀಕ್ಷಿಸುವುದು. ಸಾಮಾಜಿಕ ಪರಿಕಲ್ಪನೆ, ಸಂಸ್ಕೃತಿಯ ಸ್ವರೂಪ ಮತ್ತು ಮಾನವನ ವರ್ತನೆಗಳ ಸಂಕಿರಣತೆಯ ಪರಸ್ಪರ ಸಂಬಂಧಗಳ ಅಂಶಗಳನ್ನು ವೀಕ್ಷಿಸುವುದು.

**ಅವಲೋಕನದ ವಿಧಗಳು:** ಪ್ರಮುಖವಾಗಿ ಎರಡು ವಿಧಗಳ ಅವಲೋಕನಗಳನ್ನು ಗುರುತಿಸಬಹುದು.

1. **ನಿಯಂತ್ರಿತ ಮತ್ತು ಅನಿಯಂತ್ರಿತ ಅವಲೋಕನ (Control and uncontrolled observation)**
   ನಿಯಂತ್ರಿತ ಅವಲೋಕನವು ಪ್ರಯೋಗಾಲಯದಲ್ಲಿ ಜರಗುವುದು. ಇಲ್ಲಿ ವೀಕ್ಷಕನು ಅಧ್ಯಯನದ ಕೆಲವು ಅಂಶಗಳನ್ನು ನಿಯಂತ್ರಣದಲ್ಲಿಡುವನು. ಅನಿಯಂತ್ರಿತ ಅವಲೋಕನ ಎಂದರೆ ಸಹಕಾರವಿಲ್ಲದ ಅವಲೋಕನ. ಇದು ಸಹಜ ಪರಿಸರದಲ್ಲಿರುವುದನ್ನು ನಿಯಂತ್ರಣಗಳಿಲ್ಲದೆ ಅವಲೋಕಿಸುವುದು.

2. **ರಚನಾತ್ಮಕ ಮತ್ತು ಅರಚನಾತ್ಮಕ ಅವಲೋಕನ (Structured and unstructured observation)**

   ನಿರ್ದಿಷ್ಟ ಮಾಹಿತಿ ಸಂಗ್ರಹಣೆಯ ಉದ್ದೇಶದಿಂದ ನಿರ್ದಿಷ್ಟ ವರ್ಗದ ಮಾಹಿತಿಯನ್ನು ಪಡೆಯಲು ಅವಲೋಕಿಸುವುದು. ಅರಚನಾತ್ಮಕ ಅವಲೋಕನವು ಯಾವುದೇ ಪೂರ್ವನಿಗದಿತ ಯೋಜನೆಯಲ್ಲದೆ, ವಿಧಾನಗಳನ್ನು ನಿರ್ಧರಿಸದೆ ಘಟನೆಗಳನ್ನು ಅವಲೋಕನ ಮಾಡುವುದು.

3. **ಸಹಭಾಗಿ ಅವಲೋಕನ ಮತ್ತು ಅಸಹಭಾಗಿ ಅವಲೋಕನ (Participant and Non participant observation)**
   ಸಹಭಾಗಿ ಅವಲೋಕನದಲ್ಲಿ ಸಂಶೋಧಕನು ಸಂಶೋಧನ ಅಧ್ಯಯನದಲ್ಲಿ ಭಾಗವಹಿಸುವನು ಅಸಹಭಾಗಿ ಅವಲೋಕನದಲ್ಲಿ ಸಂಶೋಧಕನು ಏಕಾಂಗಿಯಾಗಿ ಅಥವಾ ಪ್ರತ್ಯೇಕವಾಗಿದ್ದುಕೊಂಡು ವೀಕ್ಷಿಸುವನು.

**ಸಹಭಾಗಿ ಅವಲೋಕನ ಅನುಕೂಲತೆಗಳು (Advantages and participant observation)**

1) ಪರಿಚಿತನಾಗಿ ಸಮೂಹದ ಸಹಜ ನಡವಳಿಕೆಯನ್ನು ವೀಕ್ಷಿಸಲು ಅವಕಾಶವಾಗುತ್ತದೆ.
2) ಈ ವಿಧಾನದಿಂದ ಹೆಚ್ಚಿನ ಪ್ರಮಾಣದ ಮತ್ತು ಗುಣಾತ್ಮಕ ಮಾಹಿತಿ ಪಡೆಯಲು ಸಾಧ್ಯವಾಗುತ್ತದೆ.
3) ಈ ವಿಧಾನದ ಅಧ್ಯಯನದಲ್ಲಿ ಸ್ಪಷ್ಟ ಅಂತರಾಳದ ಅಂಶಗಳು ದಾಖಲಾಗುತ್ತವೆ.
4) ಸಮೂಹದ ರಹಸ್ಯ ನಡವಳಿಕೆಯನ್ನು ವೀಕ್ಷಿಸಬಹುದು.
5) ವೀಕ್ಷಕನು ನೇರವಾಗಿ ಪ್ರಥಮ ಬಾರಿ ಮಾಹಿತಿ ಸಂಗ್ರಹಿಸುವುದರಿಂದ ದತ್ತಾಂಶವು ಹೆಚ್ಚು ನಂಬಲರ್ಹವಾಗಿರುವುದು.

**ಸಹಭಾಗಿ ಅವಲೋಕನದ ಅನಾನುಕೂಲತೆಗಳು (Disadvantages)**

1) ಈ ವಿಧಾನದಲ್ಲಿ ವೀಕ್ಷಕನು ವಸ್ತು ನಿಷ್ಠತೆಯನ್ನು ಕಾಯ್ದುಕೊಳ್ಳಲು ವಿಫಲನಾದಾಗ ಅವನ ವೈಯಕ್ತಿಕ ಅಂಶಗಳು ಪಾತ್ರ ವಹಿಸುತ್ತವೆ.
2) ಕೆಲವು ಘಟನೆಗಳಲ್ಲಿ ವೀಕ್ಷಕನು ಭಾಗವಹಿಸಲು ಸಾಧ್ಯವಿಲ್ಲ. ಉದಾಹರಣೆಗೆ ಸಂಶೋಧಕ ಅಪರಾಧಿಯಾಗಿ ವೀಕ್ಷಿಸಲು ಸಾಧ್ಯವಿಲ್ಲ.
3) ಈ ವಿಧಾನದಿಂದ ಸಂಗ್ರಹಿಸಿದ ಮಾಹಿತಿಯು ಅಧ್ಯಯನ ಸಮೂಹಕ್ಕೆ ಮಾತ್ರ ಸೀಮಿತವಾಗಿರುತ್ತದೆ.

**ಅಸಹಭಾಗಿ ಅವಲೋಕನದ ಅನುಕೂಲತೆಗಳು (Advantages of Non participant observation)**

1. ವಸ್ತು ನಿಷ್ಠತೆಯನ್ನು ಕಾಯ್ದುಕೊಳ್ಳಲು ತುಂಬಾ ಸಹಕಾರಿಯಾಗಿದೆ.
2. ಮುಕ್ತ ಮನಸ್ಸಿನ ಮತ್ತು ಕಲಿಕೆಯ ಉದ್ದೇಶವಿರುವ ಸಂಶೋಧಕ ಹೆಚ್ಚು ಮಾಹಿತಿ ಸಂಗ್ರಹಿಸಲು ಸಾಧ್ಯವಾಗುತ್ತದೆ.

### ಅಸಹಭಾಗಿ ಅವಲೋಕನದ ಅನಾನುಕೂಲತೆಗಳು : (Disadvantages Non-participant observation)

1. ಈ ವಿಧಾನದಿಂದ ಸಂಗ್ರಹಿಸಿದ ಮಾಹಿತಿಯು ಸೀಮಿತ ಪ್ರಮಾಣದ್ದಾಗಿದ್ದು ಸಮಗ್ರ ಮಾಹಿತಿ ಲಭಿಸುವುದಿಲ್ಲ.
2. ವ್ಯಕ್ತಿಯು ಅಪರಿಚಿತನಾಗುವುದರಿಂದ ನಡವಳಿಕೆಯ ಎಲ್ಲಾ ರೂಪಗಳನ್ನು ತಿಳಿಯಲು ಸಾಧ್ಯವಿಲ್ಲ.

## 7.3.2. ಸಂದರ್ಶನ ವಿಧಾನ (Interview method)

ಸಾಮಾಜಿಕ ಸಂಶೋಧನಾ ಕ್ಷೇತ್ರದಲ್ಲಿ ಸಂದರ್ಶನವು ಮಾಹಿತಿ ಸಂಗ್ರಹಣೆಯ ಪ್ರತ್ಯೇಕ ವಿಧಾನವಾಗಿದೆ. ಸಂದರ್ಶನವು ಇತರರ ಅಭಿಪ್ರಾಯ ಮತ್ತು ಯೋಚನೆಗಳನ್ನು ತಿಳಿಯಲು ನೆರವಾಗುವುದು.

ಸಂದರ್ಶನ ಎಂಬ ಸಂಸ್ಕೃತ ಪದವು ಎರಡು ಪದಗಳಿಂದ ಉತ್ಪತ್ತಿಯಾಗಿದೆ. ಸಂ – ಎಂದರೆ ಸರಿಯಾಗಿ ಅಥವಾ ನೈಜವಾಗಿ ಮತ್ತು ದರ್ಶನ ಎಂದರು ಮುಖಾಮುಖಿ ಭೇಟಿ ಸಂದರ್ಶನ ಎಂದರೆ ವ್ಯಕ್ತಿಗಳು ಮುಖಾಮುಖಿಯಾಗಿ ಪರಸ್ಪರ ತಿಳಿಯುವುದು ಎಂದರ್ಥ. ಸಂದರ್ಶನವು ಉದ್ದೇಶಪೂರ್ವಕವಾಗಿ ಮಾತುಕತೆಯಲ್ಲಿ ತೊಡಗುವ ಪ್ರಕ್ರಿಯೆಯಾಗಿದೆ. ಈ ಪ್ರಕ್ರಿಯೆಯಲ್ಲಿ ಮೌಖಿಕ ಅಂಶಗಳಲ್ಲದೆ ವ್ಯಕ್ತಿಗಳ ದೈಹಿಕ ಹಾವಭಾವ, ದೃಷ್ಟಿ ಅಥವಾ ನೋಟ, ಆಂಗಿಕ ಚಲನ–ವಲನಗಳೂ ಅರ್ಥಪೂರ್ಣವಾಗಿ ಅಭಿವ್ಯಕ್ತಗೊಳ್ಳುತ್ತವೆ. ಸಂದರ್ಶನವು ಜನರ ವ್ಯವಸ್ಥಿತವಾದ ಪರಸ್ಪರ ಸಂಪರ್ಕವನ್ನು ಒಳಗೊಂಡಿದೆ. ಇದೊಂದು ಅಂತಃಕ್ರಿಯೆಯ ವಿಧಾನವಾಗಿದೆ.

### ವ್ಯಾಖ್ಯೆಗಳು

**ಪಿ.ವಿ.ಯಂಗ್** ಅವರ ಪ್ರಕಾರ "ಸಂದರ್ಶನ" ಎಂಬುವುದು ಅಂತಃಕ್ರಿಯೆಯ ಕ್ರಿಯೆಯ ಪ್ರಕ್ರಿಯೆಯಾಗಿದೆ. ಈ ಪ್ರಕ್ರಿಯೆಯಲ್ಲಿ ವ್ಯಕ್ತಿಗಳು ಪರಸ್ಪರ ಸಂಭಾಷಣಾ ಕಾರ್ಯಕ್ಕೊಳಪಟ್ಟು ಪ್ರಭಾವ ಬೀರುವರು.

**ಗೂಡ್ ಮತ್ತು ಹ್ಯಾಟ್** ಅವರ ಪ್ರಕಾರ "ಸಂದರ್ಶನವೂ ಮೂಲಭೂತವಾಗಿ ಸಾಮಾಜಿಕ ಅಂತರ್‌ಕ್ರಿಯೆಯ ಪ್ರಕ್ರಿಯೆಯಾಗಿದೆ.

ಸಂದರ್ಶನವೂ ಮಾಹಿತಿ ಸಂಗ್ರಹಣೆಯ ವಿಧಾನವಾಗಿದ್ದು, ಈ ಕ್ರಿಯೆಯಲ್ಲಿ ಸಂದರ್ಶಕ ಮತ್ತು ಸಂದರ್ಶನೀಯರ ನಡುವೆ ಮೌಖಿಕ ಅಂತಃಕ್ರಿಯೆಯನ್ನು ಒಳಗೊಂಡಿದೆ".

### ಸಂದರ್ಶನದ ವಿಧಗಳು (Types of Interviews)

ಸಂದರ್ಶನವನ್ನು ಔಪಚಾರಿಕ ಅಂಶದ ಆಧಾರದಲ್ಲಿ ರಚನಾತ್ಮಕ (ಔಪಚಾರಿಕ ಸಂದರ್ಶನ) ಮತ್ತು ಸಂದರ್ಶನ ಎಂದು ವಿಂಗಡಿಸಬಹುದು. ಅರಚನಾತ್ಮಕ (ಅನೌಪಚಾರಿಕ) ಸಂದರ್ಶನ.

### ರಚನಾತ್ಮಕ ಸಂದರ್ಶನ (Structured Interview)

ಹೆಸರೇ ಸೂಚಿಸುವಂತೆ ಈ ಸಂದರ್ಶನವು ಪೂರ್ವನಿಯೋಜಿತ ಪ್ರಶ್ನೆಗಳನ್ನು ಮತ್ತು ನಿರ್ದಿಷ್ಟ ಗುಣಮಟ್ಟದ ವಿಧಾನಗಳನ್ನೊಳಗೊಂಡಿದೆ. ಪೂರ್ವ ನಿಗದಿತ ಪ್ರಶ್ನೆಗಳ, ಸ್ವರೂಪ ಸಂಖ್ಯೆ, ಆಯ್ಕೆ, ಪದಗಳ ಸ್ವರೂಪ ಕೇಳಬೇಕಾದ ರೀತಿ, ಶೈಲಿ, ಸಂದರ್ಶನ ಪ್ರಕ್ರಿಯೆಯನ್ನು ದಾಖಲಿಸುವ ವ್ಯವಸ್ಥೆಯನ್ನು ಒಳಗೊಂಡಿದೆ.

### ಅನೌಪಚಾರಿಕ ಸಂದರ್ಶನ (Informal Interview)

ಈ ವಿಧಾನವು ಕಟ್ಟುನಿಟ್ಟಿನ, ಕಠಿಣ ನಿಯಮಗಳಿಂದ ಹೊರತಾಗಿದೆ. ಈ ವಿಧಾನದಲ್ಲಿ ಸಂದರ್ಭಗಳಿಗೆ ತಕ್ಕಂತೆ ಹೊಂದಿಕೊಳ್ಳಲು ಅವಕಾಶವಿದೆ. ಸಂದರ್ಶನ ನಡೆಸುವ ವ್ಯಕ್ತಿಗೆ ಹೆಚ್ಚಿನ ಸ್ವಾತಂತ್ರ್ಯವಿದೆ. ಸಂದರ್ಶನ ಪ್ರಕ್ರಿಯೆಯಲ್ಲಿ ಸಂದರ್ಶಕನು ಸಂದರ್ಭಕ್ಕೆ ತಕ್ಕಂತೆ ನಿರ್ಣಯಗಳನ್ನು ಕೈಗೊಳ್ಳಬಹುದು. ಸಂದರ್ಶಕನು ಕೇಳುವ

ಪ್ರಶ್ನೆಗಳ ಸ್ವರೂಪ, ಆಯ್ಕೆ, ಸಂಖ್ಯೆ, ಸಂದರ್ಭ ಇತ್ಯಾದಿಗಳನ್ನು ಸಂದರ್ಶಕನೇ ನಿರ್ಣಯಿಸಬಹುದು. ಸಂದರ್ಶನದ ಸ್ವರೂಪವನ್ನು ಪ್ರಶ್ನೆಗಳಿಗೆ ಉತ್ತರಿಸುವವರ ಗುಣಮಟ್ಟಕ್ಕೆ ಅನುಗುಣ ತರಬಹುದು. ಸಂದರ್ಶನ ಪ್ರಕ್ರಿಯೆಯಲ್ಲಿ ಉತ್ತರಿಸುವವರ ಉತ್ತರಗಳನ್ನು ಮತ್ತು ಪ್ರತಿಕ್ರಿಯೆಗಳನ್ನು ಗಮನಿಸಿ ಸಂದರ್ಶನದ ಸ್ವರೂಪವನ್ನು ಬದಲಾಯಿಸಬಹುದು. ಈ ಸಂದರ್ಶನ ವಿಧಾನದಲ್ಲಿ ಸಂದರ್ಶನದ ಔಪಚಾರಿಕ ಸ್ವರೂಪಕ್ಕಿಂತಲೂ, ಸಂದರ್ಶನದ ಗುರಿ ಉದ್ದೇಶಗಳಿಗೆ ಮಹತ್ವ ನೀಡಲಾಗುತ್ತದೆ. ಅನೌಪಚಾರಿಕ ಸ್ವರೂಪದ ಸಂದರ್ಶನದಲ್ಲಿ ಗರಿಷ್ಟ ಪ್ರಮಾಣದ ಮಾಹಿತಿಯನ್ನು ಸಂಗ್ರಹಿಸಲು ಸಾಧ್ಯವಾಗುತ್ತದೆ. ಇದನ್ನು "ಅನೌಪಚಾರಿಕ ಸಂದರ್ಶನ" ಎಂದೂ ಕರೆಯುತ್ತಾರೆ.

ವೈಯಕ್ತಿಕ ಮತ್ತು ಸಮೂಹ ಸಂದರ್ಶನ, ಪ್ರತ್ಯಕ್ಷ ಮತ್ತು ಪರೋಕ್ಷ ಸಂದರ್ಶನ, ಕೇಂದ್ರೀಕೃತ ಸಂದರ್ಶನ, ಸಂಶೋಧನಾ ಸಂದರ್ಶನ ಇತ್ಯಾದಿ. ಆದರೆ ಸಮಾಜ ಸಂಶೋಧನಾ ಕ್ಷೇತ್ರದಲ್ಲಿ ಸಾಮಾನ್ಯವಾಗಿ ರಚನಾತ್ಮಕ ಮತ್ತು ಅರಚನಾತ್ಮಕ ಸಂದರ್ಶನಗಳಿಗೆ ಹೆಚ್ಚಿನ ಪ್ರಾಮುಖ್ಯತೆ ನೀಡಲಾಗಿದೆ.

### ಸಂದರ್ಶನ ವಿಧಾನದ ಅನುಕೂಲಗಳು (Advantages of Interview method)

1. ನಂಬಲರ್ಹವಾದ ಮತ್ತು ಆಳವಾದ ಜ್ಞಾನವು ಲಭಿಸುವುದು.
2. ಹಿಂದಿನ ಮಾಹಿತಿ ಮತ್ತು ಭವಿಷ್ಯತ್ತಿನಲ್ಲಿ ಮಾಡಬೇಕಾದ ಯೋಜನೆಗಳ ಕುರಿತು ವಿವರವಾಗಿ ತಿಳಿಯಬಹುದು.
3. ಹೆಚ್ಚಿನ ಪ್ರತಿಕ್ರಿಯೆಗಳನ್ನು ಸಂಗ್ರಹಿಸಬಹುದು.
4. ಎಲ್ಲಾ ವರ್ಗಗಳ ಜನರಿಂದ ಮಾಹಿತಿ ಸಂಗ್ರಹಿಸಲು ಸಾಧ್ಯವಾಗುವುದು.

### ಅನಾನುಕೂಲಗಳು (Disadvantages)

1. ಉತ್ತರಿಸುವ ಮಾಹಿತಿ ಕೆಲವು ಬಾರಿ ಅಪ್ರಸ್ತುತ, ಅಸಮರ್ಪಕವಾಗಿರುತ್ತದೆ.
2. ತಪ್ಪು ನಮೂನೆಯ ವ್ಯಕ್ತಿಯಿಂದ ಗಳಿಸಿದ ಮಾಹಿತಿ ಸರಿಯಾಗಿರುವದಿಲ್ಲ.
3. ಸಂದರ್ಶಕನ ಪೂರ್ವಾಗ್ರಹ ಪೀಡಿತ ದೃಷ್ಟಿ ಮತ್ತು ಪೂರ್ವ ನಿಗದಿತ ಚಿಂತನೆಗಳು ಮಾಹಿತಿಯಲ್ಲಿ ಒಳಗೊಳ್ಳುವುದು.
4. ವ್ಯಕ್ತಿಗಳ ಭಿನ್ನ ಜೀವನ ಶೈಲಿಯಿಂದಾಗಿ ಗೊಂದಲಗಳುಂಟಾಗಬಹುದು.
5. ಎಲ್ಲಾ ಸಂದರ್ಭಗಳಲ್ಲಿ ಈ ವಿಧಾನ ಬಳಸಲು ಸಾಧ್ಯವಿಲ್ಲ.
6. ಸಂದರ್ಶನ ಪರಿಣತಿ ಮತ್ತು ತರಬೇತಿ ಅತ್ಯಗತ್ಯವಾಗಿರುತ್ತದೆ.
7. ಸಂದರ್ಶನ ವಿಧಾನವು ಹೆಚ್ಚು ದುಬಾರಿ ಮತ್ತು ಹೆಚ್ಚು ಸಮಯವನ್ನು ಬಳಸುತ್ತದೆ.

### 7.3.3. ಪ್ರಶ್ನಾವಳಿ (Questionnaire)

ಪ್ರಶ್ನಾವಳಿ ಮಾಹಿತಿ ಸಂಗ್ರಹಣೆಯ ಒಂದು ವಿಧಾನವಾಗಿದೆ. ಮುದ್ರಿತ ಅಥವಾ ಟೈಪ್ ಮಾಡಿದ ಪ್ರಶ್ನೆಗಳ ಪಟ್ಟಿಯೇ ಪ್ರಶ್ನಾವಳಿ. ಪ್ರಶ್ನಾವಳಿಯನ್ನು ಅಂಚೆ ಮೂಲಕ ಅಥವಾ ಮುಖತಃ ಸಂದರ್ಶನೀಯ ವ್ಯಕ್ತಿಗೆ ನೀಡಲಾಗುತ್ತದೆ. ಪ್ರಶ್ನೆಗಳಿಗೆ ಯಾರದೇ ನೆರವು ಪಡೆಯದೆ ಸಂದರ್ಶನಿಯ ವ್ಯಕ್ತಿಯು ಉತ್ತರಿಸುವನು.

### ವ್ಯಾಖ್ಯೆಗಳು

1. **ಗೂಡ್ ಮತ್ತು ಹ್ಯಾಟ್** ಅವರ ಪ್ರಕಾರ – "ಪ್ರಶ್ನೆ ಪಟ್ಟಿಯಲ್ಲಿರುವ ಪ್ರಶ್ನೆಗಳಿಗೆ ಉತ್ತರಿಸುವ ವ್ಯಕ್ತಿಯು ಸ್ವತಃ

ತುಂಬಿ ಹಿಂತಿರುಗಿಸುವ ಪ್ರಶ್ನೆಗಳ ಸಂಗ್ರಹದ ಸಾಧನವೇ ಪ್ರಶ್ನಾವಳಿಯಾಗಿರುತ್ತದೆ".

2. **ವ್ಯಾಲೇಸ್ ಮತ್ತು ವ್ಯಾಲೇಸ್** ಪ್ರಕಾರ "ಪ್ರಶ್ನಾವಳಿ ಎಂದರೆ ಮುದ್ರಿತ ಪ್ರಶ್ನೆಗಳಿಗೆ ಉತ್ತರಗಳನ್ನು ತುಂಬಿ ಮಾಹಿತಿ ಸಂಗ್ರಹಿಸುವ ವಿಧಾನ.

3. **ಬೋಗಾರ್ಡಸ್‌ರವರ ಪ್ರಕಾರ** "ಉತ್ತರವನ್ನು ಪಡೆಯುವುದಕ್ಕಾಗಿ ಬೇರೆ ಬೇರೆ ಜನರಿಗೆ ಕಳಿಸಲಾಗುವ ಅನೇಕ ಪ್ರಶ್ನೆಗಳಿಂದ ಕೂಡಿದ ಒಂದು ಪಟ್ಟಿ ಮತ್ತು ಇದನ್ನು ಸರಿಯಾಗಿ ಕೋಷ್ಟಕ ರೂಪದಲ್ಲಿ ತಂದು ಸಂಖ್ಯಾಶಾಸ್ತ್ರ ಆಧಾರದಲ್ಲಿ ಉತ್ತರ ಪಡೆದರೆ ಉತ್ತಮವಾದ ಫಲಿತಾಂಶ ದೊರೆಯುತ್ತದೆ" ಎಂದಿದ್ದಾರೆ.

ಪ್ರಶ್ನಾವಳಿಯಲ್ಲಿ ಸಂಶೋಧನೆ ಸಮಸ್ಯೆಗೆ ಸಂಬಂಧಿಸಿದ ಹಲವಾರು ಪ್ರಶ್ನೆಗಳಿರುತ್ತವೆ. ಪ್ರಶ್ನಾವಳಿಯ ಪ್ರಶ್ನೆಗಳಿಗೆ ಉತ್ತರಿಸುವ ವ್ಯಕ್ತಿಗೆ ಪ್ರಶ್ನಾವಳಿಯನ್ನು ಅಂಚೆ ಮೂಲಕ ಅಥವಾ ವೈಯಕ್ತಿಕವಾಗಿ ನೀಡಲಾಗುತ್ತದೆ. ಈ ಪ್ರಶ್ನಾವಳಿಗೆ ಬೇರೊಬ್ಬರ ನೆರವು ಪಡೆಯದೆ ಸ್ವತಃ ಉತ್ತರಿಸುತ್ತಾರೆ. ವಿಶ್ವದ ವಿವಿಧ ಪ್ರದೇಶಗಳಲ್ಲಿ ಹರಡಿರುವ ವ್ಯಕ್ತಿಗಳಿಗೆ ಪ್ರಶ್ನಾವಳಿಯನ್ನು ನೀಡಲಾಗುವುದು. ಪ್ರಶ್ನಾವಳಿ ವಿಧಾನವು ಪರಿಣಾಮಕಾರಿ ಮತ್ತು ಹೆಚ್ಚು ದುಬಾರಿಯಲ್ಲದ ವಿಧಾನವಾಗಿದೆ.

### ಪ್ರಶ್ನಾವಳಿಯ ವಿಧಗಳು (Types of questionnaire)

#### 1. ರಚನಾತ್ಮಕ ಪ್ರಶ್ನಾವಳಿ (Structured questionnaire)

ಈ ಪ್ರಶ್ನಾವಳಿಯಲ್ಲಿ ಪೂರ್ವ ನಿಗದಿತ, ಸ್ಪಷ್ಟವಾದ ಮತ್ತು ಮೂರ್ತ ಸ್ವರೂಪದ ಪ್ರಶ್ನೆಗಳನ್ನು ಸಿದ್ಧಪಡಿಸಲಾಗುತ್ತದೆ. ಉತ್ತರ ನೀಡುವವರಿಗೆ ಒಂದೇ ರೀತಿಯ ಪ್ರಶ್ನಾವಳಿಯನ್ನು ಒದಗಿಸಲಾಗುತ್ತದೆ. ಇಂತಹ ಪ್ರಶ್ನಾವಳಿಗಳಲ್ಲಿ ಮುಕ್ತ ಪ್ರಶ್ನೆಗಳು ಮತ್ತು ಮುಚ್ಚಿದ ಪ್ರಶ್ನೆಗಳಿರುತ್ತವೆ. ಮುಚ್ಚಿದ ಪ್ರಶ್ನೆಗಳಿಗೆ ನಿಗದಿತ ಉತ್ತರಗಳಿರುತ್ತವೆ. ಈ ಉತ್ತರಗಳಲ್ಲಿ "ಹೌದು" "ಅಲ್ಲ" ಅಥವಾ "ಸರಿ" "ತಪ್ಪು" ಎಂಬ ಸೀಮಿತ ಪರ್ಯಾಯ ಆಯ್ಕೆಯ ಉತ್ತರಗಳಿರುತ್ತವೆ. ಮುಕ್ತ ಪ್ರಶ್ನೆಗಳಿಗೆ ಉತ್ತರಿಸುವವರು ಸ್ವತಂತ್ರವಾಗಿ ತಮ್ಮದೇ ಮಾತುಗಳಲ್ಲಿ ಉತ್ತರಿಸಬಹುದು.

#### 2. ಅರಚನಾತ್ಮಕ(ಮೌಖಿಕ) ಪ್ರಶ್ನಾವಳಿ (Unstructured questionnaire)

ಈ ವಿಧಾನದ ಪ್ರಶ್ನಾವಳಿಯಲ್ಲಿ ಪ್ರಶ್ನೆಗಳನ್ನು ಪೂರ್ವ ನಿಗಧಿಯಾಗಿ ರಚಿಸದೆ, ಪ್ರಶ್ನೆಗಳನ್ನು ಕೇಳುವ ಸಂದರ್ಭದಲ್ಲಿ ಅಗತ್ಯಕ್ಕೆ ಅನುಗುಣವಾಗಿ ಪ್ರಶ್ನೆಗಳನ್ನು ರಚಿಸಲಾಗುವುದು. ಈ ಪ್ರಶ್ನಾವಳಿ ಸ್ವರೂಪವು ಸಡಿಲವಾದ ಗುಣವನ್ನು ಹೊಂದಿರುವುದರಿಂದ ಇದನ್ನು "ಸಂದರ್ಶನ ಮಾರ್ಗದರ್ಶಿ" ಎಂದು ಕರೆಯುವರು. ಇಂತಹ ಪ್ರಶ್ನಾವಳಿಯನ್ನು ವೈಯಕ್ತಿಕ ಅನುಭವ, ಅಭಿಪ್ರಾಯ ಇತ್ಯಾದಿಗಳ ಕುರಿತು ಮಾಹಿತಿ ಸಂಗ್ರಹಿಸಲು ಬಳಸುವರು. ಈ ಸಂದರ್ಭದಲ್ಲಿ ಉತ್ತರಿಸುವವರಿಗೆ ಗರಿಷ್ಟ ಪ್ರಮಾಣದ ಅವಕಾಶವನ್ನು ಪ್ರತಿಕ್ರಿಯಿಸಲು ಒದಗಿಸಲಾಗುವುದು. ಈ ವಿಧಾನದ ಅನಾನುಕೂಲತೆಯೆಂದರೆ ಪ್ರತಿಕ್ರಿಯಿಸುವ ವ್ಯಕ್ತಿಗಳು ಅಸಂಬಂಧಿತ, ಅಪ್ರಸ್ತುತ ಮಾಹಿತಿಯನ್ನು ಒದಗಿಸುತ್ತಾರೆ.

### ಪ್ರಶ್ನಾವಳಿಯ ಅನುಕೂಲಗಳು (Advantages of questionnaire)

1. ಆರ್ಥಿಕವಾಗಿ ಸೂಕ್ತವಾಗಿದ್ದು (ಅಗ್ಗ) ಮತ್ತು ವಿವಿಧ ಪ್ರದೇಶಗಳಲ್ಲಿ ಹರಡಿರುವ ವಿವಿಧ ವ್ಯಕ್ತಿಗಳಿಗೆ ತಲುಪುತ್ತದೆ

2. ಸಮಯದ ಉಳಿತಾಯವಾಗುವುದು. ಅಲ್ಲದೆ ಅಂಚೆ ಮೂಲಕ ಪ್ರಶ್ನಾವಳಿ ಬಹುತೇಕ ವ್ಯಕ್ತಿಗಳಿಗೆ ತಲುಪುವುದು.

3. ಉತ್ತರಿಸುವ ವ್ಯಕ್ತಿಗಳಿಗೆ ಮುಕ್ತವಾಗಿ ತಮ್ಮ ಅಭಿಪ್ರಾಯ ಮತ್ತು ಅನಿಸಿಕೆಗಳನ್ನು ವ್ಯಕ್ತಪಡಿಸಲು ಅವಕಾಶವಿದೆ.

4. ಖಾಸಗಿ, ಗುಪ್ತ ವಿಚಾರ, ವಿಷಯಗಳನ್ನು ವ್ಯಕ್ತಪಡಿಸಲು ಸೂಕ್ತವಾಗಿದೆ. ಉದಾಹರಣೆಗೆ ಲೈಂಗಿಕ ಆಸಕ್ತಿ, ಅಭ್ಯಾಸ, ದಾಂಪತ್ಯ ಸಂಬಂಧಗಳು ಇತ್ಯಾದಿ.

5. ಪ್ರಶ್ನೆಗಳಿಗೆ ಉತ್ತರಿಸುವವರ ಮೇಲೆ ಭಾವನಾತ್ಮಕ ಒತ್ತಡ ಇರುವುದಿಲ್ಲ.

6. ಏಕರೂಪದ ಉತ್ತರಗಳನ್ನು ಗಳಿಸುವುದರಿಂದ ಪ್ರಶ್ನಾವಳಿಯ ನಿರ್ದಿಷ್ಟ ಗುಣ ಮಟ್ಟ ಕಾಯ್ದು ಮಾಹಿತಿಯನ್ನು ಸುಲಭವಾಗಿ ಶೀಘ್ರವಾಗಿ ವಿಶ್ಲೇಷಿಸಬಹುದು.

### ಪ್ರಶ್ನಾವಳಿಯ ಅನಾನುಕೂಲಗಳು (Disadvantages of questionnaire)

1. ಅಶಿಕ್ಷಿತರಿಗೆ ಮತ್ತು ಅವಿದ್ಯಾವಂತರಿಗೆ ಈ ವಿಧಾನವು ಸೂಕ್ತವಲ್ಲ

2. ಅಂಚೆ ಮೂಲಕ ಕಳುಹಿಸಿದ ಪ್ರಶ್ನಾವಳಿಗಳು ಕೆಲವೊಮ್ಮೆ ಉತ್ತರ ರಹಿತವಾಗಿ ಮರಳುವುದರಿಂದ ಮಾಹಿತಿ ಸಂಗ್ರಹಣೆಗೆ ತೊಮದರೆಯಾಗುತ್ತದೆ.

3. ಪ್ರಶ್ನಾವಳಿಯ ಕೊರತೆಯೆಂದರೆ ಉತ್ತರಿಸುವವರ ಉತ್ತರಗಳನ್ನು ಸರಿ, ತಪ್ಪು ಎಂದು ಪರೀಕ್ಷಿಸಲು ಯಾವುದೇ ವ್ಯವಸ್ಥೆಯಿಲ್ಲ. ಇದರಿಂದಾಗಿ ತಪ್ಪು ಮಾಹಿತಿ ಲಭ್ಯವಾಗುವುದು.

4. ಪ್ರಶ್ನಾವಳಿ ವಿಧಾನವು ಶೀಘ್ರ ಮಾಹಿತಿ ಸಂಗ್ರಹಣೆಗೆ ಉಪಯುಕ್ತವಲ್ಲ.

## 7.4 ಸಂಶೋಧನಾ ವರದಿ ತಯಾರಿಕೆ (Preparation of Research Report)

ಸಂಶೋಧನಾ ಪ್ರಕ್ರಿಯೆಯಲ್ಲಿ ಸಂಶೋಧನಾ ವರದಿಯು ಅಂತಿಮ ಹಂತವಾಗಿದೆ. ಈ ವರದಿಯು ಅಧ್ಯಯನದ ಫಲಿತಾಂಶಗಳ ಕುರಿತು ಮಾಹಿತಿ ನೀಡುತ್ತದೆ. ವರದಿಗಳಲ್ಲಿ ಹಲವಾರು ವಿಧಗಳಿವೆ. ವರದಿಯು ಸರಳ, ಸ್ಪಷ್ಟ ಮತ್ತು ಆಸಕ್ತದಾಯಕವಾಗಿರಬೇಕು. ಸಂಶೋಧನೆಯನ್ನು ಸಂಘಟಿಸಿದ ಸಂಘಟನೆಗೆ ವರದಿಯು ಸಂಪೂರ್ಣ ವಿವರಗಳನ್ನೊಳಗೊಂಡಿರಬೇಕು. ತಂತ್ರಜ್ಞರಿಗೆ ವರದಿಯು ತಾಂತ್ರಿಕ ಅಂಶಗಳನ್ನೊಳಗೊಂಡಿರಬೇಕು.

1) ಉತ್ತಮ ಸಂಶೋಧನಾ ವರದಿಯು ಸ್ಪಷ್ಟವಾಗಿರಬೇಕು. 2) ಸಂಶಯ ಗೊಂದಲಗಳಿರಬಾರದು. 3) ಯಾವ ಉದ್ದೇಶಕ್ಕಾಗಿ ಅಧ್ಯಯನ ಮಾಡಿರುತ್ತಾರೋ, ಆ ಉದ್ದೇಶದ ಈಡೇರಿಕೆಯ ವರದಿಯಲ್ಲಿರಬೇಕು. 4) ವರದಿ ಸಮಗ್ರ ಮಾಹಿತಿಯೊಳಗೊಂಡಿರಬೇಕು. 5) ಸಮರ್ಪಕ ಸಂಘಟಿತ ವರದಿಯನ್ನು ಕ್ರಮಬದ್ಧವಾಗಿ ಹಾಜರುಪಡಿಸಬೇಕು. 6) ವರದಿಯಲ್ಲಿ ಪೂರ್ವಗ್ರಹ ಪೀಡಿತ ಅಭಿಪ್ರಾಯ, ಅನಗತ್ಯ ನಿರ್ಣಯಗಳು ಹಾಗೂ ವೈಯಕ್ತಿಕ ಅಭಿಪ್ರಾಯಗಳಿರಬಾರದು.7) ಉತ್ತಮ ಶೈಲಿ ಮತ್ತು ಆಕರ್ಷಕವಾಗಿ ವರದಿ ರಚಿಸಿರಬೇಕು.

**ಸಂಶೋಧನ ವರದಿಯ ಚೌಕಟ್ಟು :** 1) ವರದಿಯಲ್ಲಿ ಅಧ್ಯಯನಕ್ಕೊಳಪಟ್ಟ ಸಮಸ್ಯೆ, 2) ಸಂಶೋಧನಾ ಫಲಿತಾಂಶಗಳ ಮಾಹಿತಿ ಮತ್ತು ನಿರ್ಣಯಗಳು ಒಳಗೊಂಡಿರಬೇಕು. 3) ವರದಿಯ ಪೀಠಿಕೆ ಭಾಗದಲ್ಲಿ ಅಧ್ಯಯನದ ಹೆಸರು, ಶಿರೋನಾಮೆ ಅಥವಾ ನಾಮಧೇಯ, ಮುನ್ನುಡಿ, ಆಧಾರಗ್ರಂಥಗಳ ಸ್ವೀಕೃತಿ, ಅಳವಡಿಸಿದ ವಿಧಾನಗಳು, ಅಧ್ಯಯನ ವಿಷಯಕ್ಕೆ ಸಂಬಂಧಿಸಿದ ನಕ್ಷೆ, ಕೋಷ್ಟಕ, ಮಾಹಿತಿ ಚಿತ್ರ ಮತ್ತು ಒಳಗೊಂಡಿರಬೇಕಾದ ವಿಷಯಗಳಿರುತ್ತವೆ.

4) ವರದಿಯಲ್ಲಿ ಅಧ್ಯಯನದ ಗುರಿ–ಉದ್ದೇಶಗಳ ಮಾಹಿತಿ, ಸಮಸ್ಯೆಯ ವ್ಯಾಖ್ಯೆ, ಸ್ವರೂಪ, ಪೂರ್ವಾನುಮಾನ, ಪರಿಕಲ್ಪನೆಗಳ ವ್ಯಾಖ್ಯೆ. 5) ಅಧ್ಯಯನ ವಿಷಯಕ್ಕೆ ಸಂಬಂಧಿತ ಸಾಹಿತ್ಯದ ವಿಮರ್ಶೆ ಮತ್ತು ಹಿಂದಿನ ಅಧ್ಯಯನಗಳ ಪ್ರಸ್ತುತ ಅಡೆತಡೆ, ಸೀಮಿತ ಅಂಶಗಳು. 6) ಅಧ್ಯಯನದ ಸಂಘಟನೆ ಮತ್ತು ನಮೂನೆ, ನಿದರ್ಶನದ ಆಯ್ಕೆ ಪ್ರಕ್ರಿಯೆ, ದತ್ತಾಂಶ ಸಂಗ್ರಹಣೆಯ ವಿಧಾನಗಳು, ಅಧ್ಯಯನಕ್ಕೆ ಬಳಸಿದ ವಿಧಾನಗಳು ಒಳಗೊಂಡಿರುತ್ತವೆ.

ವರದಿಯಲ್ಲಿ ಅಧ್ಯಯನದಿಂದ ಸಂಗ್ರಹಿಸಿದ ದತ್ತಾಂಶದ ಅಂಕಿ–ಅಂಶಗಳನ್ನು. ಸಂಖ್ಯಾಶಾಸ್ತ್ರ ವಿಧಾನಗಳಿಂದ ವಿಶ್ಲೇಷಣೆ ಪರಿಣಾಮಗಳನ್ನು ತಿಳಿಸುವುದು. ಕ್ರಮಬದ್ಧವಾಗಿ ಒಂದು ಕೋಷ್ಟಕದ ರೂಪದಲ್ಲಿ ಪ್ರಸ್ತುತ ಪಡಿಸುವುದು. ಅಧ್ಯಯನದ ಪರಿಣಾಮಗಳನ್ನು ಅರ್ಥೈಸಿ ಸತ್ಯಾಸತ್ಯತೆಯನ್ನು ತಿಳಿಸಿ, ಸಾಮಾನ್ಯ ತತ್ವವನ್ನು ನಿರೂಪಿಸಲು ಸಾಧ್ಯವಾಗುತ್ತದೆ. ಅಲ್ಲದೆ ಪ್ರಾಕ್ ಕಲ್ಪನೆಯನ್ನು ಒರೆಗೆ ಹಚ್ಚಲು ನೆರವಾಗುವುದು. ಫಲಿತಾಂಶಗಳ ಮೌಲ್ಯಮಾಪನ ಮಾಡಿ ಅಧ್ಯಯನಕ್ಕೆ ಉಪಸಂಹಾರ ನೀಡುವುದು. ಈ ಉಪಸಂಹಾರದಲ್ಲಿ ಭಾವಿ ಸಂಶೋಧಕರಿಗೆ ಸಲಹೆ ಸೂಚನೆಗಳನ್ನು ನೀಡಲಾಗುವುದು.

ಅಂತಿಮವಾಗಿ ಗ್ರಂಥಗಳ ವಿವರಣಾ ಪಟ್ಟಿ ಅಥವಾ ಗ್ರಂಥಋಣವನ್ನು ಸಂಶೋಧಕರ ವರದಿಯಲ್ಲಿ ನೀಡಬೇಕು. ಇದಲ್ಲದೆ ಅಧ್ಯಯನದಲ್ಲಿ ಬಳಸಲಾದ ಅನುಬಂಧಗಳ ಪಟ್ಟಿಯನ್ನು ಒದಗಿಸಬೇಕು. ಕ್ಲಿಷ್ಟಪದ, ಪರಿಕಲ್ಪನೆಗಳ ಪಟ್ಟಿ ಮತ್ತು ಅನುಸೂಚಕಗಳಿರಬೇಕು. ಗ್ರಂಥಋಣವನ್ನು ನೀಡುವಾಗ ನಿರ್ದಿಷ್ಟ ವಿಧಾನವನ್ನು ಅನುಸರಿಸಲಾಗುತ್ತದೆ. ಸಾಮಾನ್ಯವಾಗಿ ಗ್ರಂಥದ ಲೇಖಕರ ಹೆಸರು, ಪ್ರಕಾಶನದ ವರ್ಷ, ಗ್ರಂಥದ ಶಿರೋನಾಮೆ, ಅನುಸರಿಸಿದ ಪುಟ ಸಂಖ್ಯೆಗಳು, ಪ್ರಕಾಶಕರ ವಿಳಾಸಗಳನ್ನು ಹೊಂದಿರಬೇಕು. ಈ ಎಲ್ಲಾ ಅಂಶಗಳನ್ನು ಹೊಂದಿರುವ ವರದಿಯು ಸಂಶೋಧನಾ ಅಥವಾ ಅಧ್ಯಯನದ ರೂಪುರೇಷೆಗಳನ್ನು ಸ್ಪಷ್ಟವಾಗಿ ವಿವರಿಸುವುದು.

### 1. ಸಾಮಾಜಿಕ ಸಂಶೋಧನೆಯಲ್ಲಿ ಗಣಕಯಂತ್ರ ಮತ್ತು ಅಂತರ್‌ಜಾಲದ ಪಾತ್ರ (Role of computers and Internet in Social Research):-

ಆಧುನಿಕ ಸಮಾಜವು ಮಾಹಿತಿ ಮತ್ತು ಸಂಪರ್ಕ ತಂತ್ರಜ್ಞಾನದ ಪ್ರಾಬಲ್ಯಕ್ಕೊಳಪಟ್ಟಿದೆ. ಆಧುನಿಕ ನೂತನ ಗಣಕಯಂತ್ರಗಳು ವಿವಿಧ ಕಾರ್ಯಗಳನ್ನು ಏಕಕಾಲಕ್ಕೆ ನಿರ್ವಹಿಸುತ್ತವೆ. ವಿವಿಧ "ಸಾಫ್ಟ್‌ವೇರ್"ಗಳು ವಿವಿಧ ವಿಷಯಗಳ ಮಾಹಿತಿ ಮತ್ತು ದತ್ತಾಂಶಗಳನ್ನು ಒದಗಿಸುತ್ತದೆ. ಉದಾಹರಣೆಗೆ ಸಮಾಜವಿಜ್ಞಾನದ ಸಂಖ್ಯಾಶಾಸ್ತ್ರದ ಪ್ಯಾಕೇಜ್ ಸಾಫ್ಟ್‌ವೇರ್ (SPSS – Statistical Package for Social Sciences) ಮಾಹಿತಿ ವಿಶ್ಲೇಷಣೆ, ಮಾಹಿತಿ ಆಧಾರಿತ ವರದಿ ರಚನೆಗೆ ನೆರವಾಗುವುದು. ನಕ್ಷೆ, ಕೋಷ್ಟಕ ದತ್ತಾಂಶ ವಿಶ್ಲೇಷಣೆಯನ್ನು ಸಂಶೋಧಕನ ಬೇಡಿಕೆಯ ಅಗತ್ಯತೆಗೆ ತಕ್ಕಂತೆ ಒದಗಿಸುವುದು.

ಅಂತರ್ಜಾಲವು ಜಗತ್ತಿನ ಸಂಪೂರ್ಣ ಮಾಹಿತಿಯನ್ನು ಒದಗಿಸುವುದು. ಇತ್ತೀಚೆಗೆ ಮಾಹಿತಿ ಬೃಹತ್ ಪ್ರಮಾಣದಲ್ಲಿ ಲಭ್ಯವಿದೆ. ಸಂಪ್ರಾದಾಯಿಕ ಗ್ರಂಥಾಲಯದಲ್ಲಿ ಮುದ್ರಣದ ಪುಸ್ತಕಗಳನ್ನು ಅಷ್ಟು ಬೃಹತ್ ಪ್ರಮಾಣದಲ್ಲಿ ಸಂಗ್ರಹಿಸಿಡಲು ಸ್ಥಳಾವಕಾಶವಿಲ್ಲ. ಮಾಹಿತಿಯು ದಿವಸದ 24 ಗಂಟೆಗಳಲ್ಲೂ ಲಭ್ಯವಿದೆ. ಅಂತರ್‌ಜಾಲದಲ್ಲಿರುವ ಉಚಿತ ವೆಬ್ ತಾಣಗಳು, ಗ್ರಂಥಾಲಯ, ಪುಸ್ತಕಗಳು, ಇತ್ಯಾದಿ. ಸಂಶೋಧಕನ ಶ್ರಮ, ಸಮಯ ಮತ್ತು ಹಣವನ್ನು ಉಳಿಸಲು ನೆರವಾಗುವುದು.

ಕಂಪ್ಯೂಟರ್ ನೆರವಿನ ವೈಯುಕ್ತಿಕ ಸಂದರ್ಶನ (C A P I – Computer Assisted Personal Interviewing ) ಮತ್ತು ಕಂಪ್ಯೂಟರ್ ನೆರವಿನ ಟೆಲಿಫೋನ್ ಸಂದರ್ಶನ (Computer Assisted Telephone Interviewing). ದತ್ತಾಂಶ ಸಂಗ್ರಹ, ಅಮೇರಿಕಾದಲ್ಲಿ ಪ್ರಚಲಿತದಲ್ಲಿದೆ. ಸಂಶೋಧಕನಿಗೆ ಏಕಕಾಲದಲ್ಲಿ ಮಾಹಿತಿ ಸಂಗ್ರಹ, ವರ್ಗೀಕರಣ, ವಿಶ್ಲೇಷಣೆಗೆ ಕಂಪ್ಯೂಟರ್‌ಗಳು ನೆರವಾಗುತ್ತವೆ.

## 7.5. ಸಾಮಾಜಿಕ ಸಂಶೋಧನೆಯ ಮಹತ್ವ (Importance of Social Research)

1. **ಜ್ಞಾನದ ಬೆಳವಣಿಗೆ ಕೊಡುಗೆ ನೀಡುತ್ತದೆ (Contributer to the growth of knowledge)**
   ಸಂಶೋಧನೆಯು ಸಾಮಾನ್ಯವಾಗಿ ಜ್ಞಾನದ ಬೆಳವಣಿಗೆಗೆ ಮತ್ತು ಸಮಗ್ರ ವಿಸ್ತರಣೆಗೆ ಕೊಡುಗೆ ನೀಡುತ್ತದೆ. ಸಂಶೋಧನೆಯು ಜ್ಞಾನ ಕ್ಷೇತ್ರದಲ್ಲಿ ಅನ್ವೇಷಣೆ, ಅವಿಷ್ಕಾರ ಮತ್ತು ಹೊಸತನ ಕಂಡುಕೊಳ್ಳಲು ಅನುವು ಮಾಡುತ್ತದೆ. ಸಂಶೋಧನೆಯ ಫಲಿತಾಂಶಗಳು ನಿಯಮ, ತತ್ವ ಮತ್ತು ಸಿದ್ಧಾಂತಗಳಲ್ಲಿ ತಿದ್ದುಪಡಿ, ಮಾರ್ಪಾಡು, ಕೊಡುಗೆಗಳನ್ನು ನೀಡುವುದು. ಅಸ್ತಿತ್ವದಲ್ಲಿರುವ ಸಿದ್ಧಾಂತಗಳಲ್ಲಿನ ನ್ಯೂನ್ಯತೆ ಅಥವಾ ಹೊಸತನಗಳನ್ನು ಕಂಡುಕೊಂಡು ನೂತನ ತತ್ವ–ಸಿದ್ಧಾಂತಗಳನ್ನು ಪ್ರತಿಪಾದಿಸಲ್ಪಡುತ್ತದೆ. ವಿಜ್ಞಾನ–ತಂತ್ರಜ್ಞಾನ, ಜ್ಞಾನ–ಪರಿಣಿತಿಗಳ ಸರ್ವತೋಮುಖ ಅಭಿವೃದ್ಧಿಗೆ ಸಂಶೋಧನೆಯು ಮೂಲಭೂತ ಸಾಧನವಾಗಿದೆ. ಭೌದ್ಧಿಕ ಮತ್ತು ಕೈಗಾರಿಕಾ ಪ್ರಗತಿಯು ವೇಗವರ್ಧಕವಾಗಲು ಸಂಶೋಧನೆ ಕಾರಣವಾಗಿದೆ. ಸಂಶೋಧನೆಯು ಕೇವಲ ರಾಷ್ಟ್ರದ ಆರ್ಥಿಕ ಪ್ರಗತಿಗೆ ಕಾರಣವಾಗುವುದಲ್ಲದೆ ಸಮಾಜದಲ್ಲಿ ಪರಿವರ್ತನೆಗಳಿಗೆ ಕಾರಣವಾಗುತ್ತದೆ.

2. **ಸಮಾಜದ ಪ್ರಗತಿಗೆ ಸಹಾಯ ಹಾಗೂ ವೈಚಾರಿಕ ದೃಷ್ಟಿಕೋನ ಬೆಳೆಸುತ್ತದೆ (Leads to social progress and rationality)**
   ಸಾಮಾನ್ಯವಾಗಿ ಸಾಮಾಜಿಕ ಸಂಶೋಧನೆಯು ಸಮಾಜವಿಜ್ಞಾನಗಳಲ್ಲಿ ಪ್ರಾಮುಖ್ಯತೆ ಗಳಿಸಿರುವುದಲ್ಲದೆ ಸಮಾಜಶಾಸ್ತ್ರದಲ್ಲಿ ಇದರ ಮಹತ್ವ ವೃದ್ಧಿಸಿದೆ. ಯಾಕೆಂದರೆ ಸಮಾಜಶಾಸ್ತ್ರವು ಮಾನವ ಸಮಾಜದ ಪ್ರಗತಿಯ ಗುರಿಯನ್ನು ಹೊಂದಿದೆ. ಸಾಮಾಜಿಕ ಸಂಶೋಧನೆಯು ಜ್ಞಾನದ ವೃದ್ಧಿಗಾಗಿ ಕೊಡುಗೆ ನೀಡುವುದಲ್ಲದೆ ಜ್ಞಾನದ ವ್ಯಾಪ್ತಿಯನ್ನು ವಿಸ್ತರಿಸುವುದು. ಸಾಮಾಜಿಕ ಅನಿಷ್ಟಗಳ ಕುರಿತು ವೈಜ್ಞಾನಿಕ ಜ್ಞಾನವನ್ನು ಒದಗಿಸುವುದು. ಸಮಾಜ ಈ ಜ್ಞಾನದಿಂದ ಅನುಕೂಲತೆಯನ್ನು ಪಡೆಯುತ್ತದೆ. ಸಾಮಾಜಿಕ ಸಂಶೋಧನೆಯು ಮಾನವರು ವೈಚಾರಿಕತೆ ಮತ್ತು ಮಾನವೀಯತೆಯಿಂದ ಚಿಂತಿಸಲು ನೆರವಾಗುತ್ತದೆ. ಇದರಿಂದಾಗಿ ಇದು ಸಮಾಜ ಕಲ್ಯಾಣಕ್ಕೆ ನೆರವಾಗುತ್ತದೆ.

3. **ಇತರೆ ಎಲ್ಲಾ ಸಮಾಜವಿಜ್ಞಾನಗಳ ಬೆಳವಣಿಗೆಗೆ ಸಹಾಯ (Helps to other social sciences)**
   ಸಾಮಾಜಿಕ ಸಂಶೋಧನೆಯು ಎಲ್ಲಾ ಸಮಾಜವಿಜ್ಞಾನಗಳಿಗೆ ನೆರವಾಗುತ್ತದೆ. ಇದರ ವೈಜ್ಞಾನಿಕ ಅಧ್ಯಯನ ವಿಧಾನವು ಇತರ ವಿಜ್ಞಾನಗಳಲ್ಲಿ ಅಳವಡಿಸಲಾಗಿದೆ. ಇದರಿಂದಾಗಿ ಇತರ ವಿಜ್ಞಾನಗಳು ಬೆಳವಣಿಗೆಯನ್ನು ಸಾಧಿಸಿವೆ.

   ಸಾಮಾಜಿಕ ರಚನೆ ಮತ್ತು ಸಾಮಾಜಿಕ ಸಮೂಹಗಳ ನಂಬಲರ್ಹವಾದ ಜ್ಞಾನವನ್ನು ಸಂಶೋಧನೆಯು ಒದಗಿಸಿದೆ. ಹಲವಾರು ತಪ್ಪು ಗ್ರಹಿಕೆ, ಮೂಢನಂಬಿಕೆಗಳನ್ನು ಹೋಗಲಾಡಿಸಲು ಸಂಶೋಧನೆಯ ಫಲಿತಾಂಶಗಳು ನೆರವಾಗಿದೆ. ಇದರಿಂದಾಗಿ ಸಾಮಾಜಿಕ ಪ್ರಗತಿ ಸಾಧಿಸಲು ಸಾಧ್ಯವಾಗಿದೆ.

4. **ಸಾಮಾಜಿಕ ಪರಿವರ್ತನೆ ಅರ್ಥೈಸಲು ಸಹಾಯ (Helps to understand social change)**
   ಸಮಾಜವು ಗತಿ ಶೀಲದ್ದಾಗಿದೆ. ಸಮಾಜದ ಪರಿವರ್ತನೆಯ ಪ್ರಕ್ರಿಯೆಯನ್ನು ಸಾಮಾಜಿಕ ಸಂಶೋಧನೆಯು ಅಧ್ಯಯನ ಮಾಡುತ್ತದೆ. ಸಾಮಾಜಿಕ ನಡವಳಿಕೆಯ ಕಾರಣಗಳನ್ನು ಸಾಮಾಜಿಕ ಸಂಶೋಧನೆಯು ವಿಶ್ಲೇಷಿಸುತ್ತದೆ. ಸಾಮಾಜಿಕ ಪರಿವರ್ತನೆಯನ್ನು ಅರ್ಥೈಸಲು ಇದು ನೆರವಾಗುವುದು. ಇದರಿಂದಾಗಿ ಸಾಮಾಜಿಕ ನಿಯಂತ್ರಣ ಸಾಧಿಸಲು ಹಾಗೂ ವ್ಯಕ್ತಿಗಳ ನಡವಳಿಕೆಯನ್ನು ಹತೋಟಿಯಲ್ಲಿಡಲು ನೆರವಾಗುವುದು. ಈ ಪ್ರಕ್ರಿಯೆಯಿಂದಾಗಿ ಸಾಮಾಜಿಕ ಪ್ರಗತಿಯ ದಿಕ್ಕನ್ನು ಅರ್ಥಮಾಡಿಕೊಳ್ಳಬಹುದು.

   ಸಾಮಾಜಿಕ ಸಂಶೋಧನೆಯ ವಾಸ್ತವಿಕ ಉಪಯುಕ್ತತೆಯೇನೆಂದರೆ, ಗತಿಶೀಲವಾದ ಸಮಾಜದ ಜ್ಞಾನವನ್ನು

ಒದಗಿಸುವುದು. ಸಮಾಜದ ಅಭಿವೃದ್ಧಿ ಮತ್ತು ಕಲ್ಯಾಣ ಸಾಧಿಸಲು ಸಾಮಾಜಿಕ ಸಂಶೋಧನೆ ಸೂಕ್ತವಾದ ಕ್ರಮಗಳಿಂದ ಸಾಧ್ಯವಾಗುತ್ತದೆ. ಸಾಮಾಜಿಕ ಪ್ರಗತಿ ಮತ್ತು ಕಲ್ಯಾಣ ಸಾಧಿಸುವಲ್ಲಿ ಸಾಮಾಜಿಕ ಸಂಶೋಧನೆಯು ಗಣನೀಯವಾದ ಪಾತ್ರ ವಹಿಸುತ್ತದೆ.

❑❑❑

# ಅಧ್ಯಾಯ – 8
# ಪರಿಸರ ಮತ್ತು ಸಮಾಜ
## (ENVIRNOMENT AND SOCIETY)

ನಮ್ಮ ಸುತ್ತಮುತ್ತಲಿನ ಬಾಹ್ಯ ಜಗತ್ತನ್ನು ಪರಿಸರವೆಂದು ಕರೆಯುತ್ತೇವೆ. ಇದರಲ್ಲಿ ಗಾಳಿ–ಬೆಳಕು, ಬೆಟ್ಟ–ಗುಡ್ಡ, ಕಲ್ಲು–ಮಣ್ಣು, ಗಿಡ–ಮರ, ಕ್ರಿಮಿ–ಕೀಟ, ಪ್ರಾಣಿ–ಪಕ್ಷಿ, ನೆಲ–ಜಲ ಇತ್ಯಾದಿಗಳಿವೆ. ಸಹಜವಾಗಿಯೇ ಇವುಗಳು ಜೀವ ಸಂಕುಲದ ಬೆಳವಣಿಗೆಗೆ ಹಾಗೂ ಅಭಿವೃದ್ಧಿಗೆ ಪೂರಕವಾಗಿವೆ. ವಿಶೇಷವಾಗಿ ಜೀವ ಜಗತ್ತಿನಲ್ಲಿ ಮಹತ್ವದ ಸ್ಥಾನ ಪಡೆದಿರುವ ಮಾನವ ವಿಕಾಸದ ಹಿಂದೆ ಪರಿಸರ ನಿರ್ವಹಿಸಿರುವ ಪಾತ್ರ ಅತ್ಯಂತ ಮಹತ್ವದ್ದು. ತನ್ನೆಲ್ಲಾ ಅಗತ್ಯತೆಗಳಿಗೆ ಪರಿಸರ ಅವಕಾಶ ನೀಡಿದ್ದರಿಂದಲೇ ಮಾನವ ಇಷ್ಟೆಲ್ಲಾ ಸಾಧಿಸಲಿಕ್ಕೆ ಸಾಧ್ಯವಾಗಿರುವುದು.ನಮ್ಮ ಸಮುದಾಯದ ಹಾಗೂ ಸಂಘಟಿತ ಬದುಕುಗಳ ದಾರಿಯ ಹಿಂದೆ ಪರಿಸರದ ನೇರ ಪಾತ್ರವಿದೆ. ಅದಕ್ಕಾಗಿಯೇ ಪರಿಸರ ಮತ್ತು ಸಮಾಜವನ್ನು ಒಂದೇ ನಾಣ್ಯದ ಎರಡು ಮುಖಗಳೆಂದು ಕರೆಯುತ್ತೇವೆ. ಇವು ಒಂದಕ್ಕೊಂದು ಪೂರಕವಾಗುತ್ತಾ ಸಮಾಜದ ಪ್ರಗತಿಗೆ ಕಾರಣವಾಗಿವೆ. ಮುಖ್ಯವಾಗಿ ನಮ್ಮ ಸಾಮಾಜಿಕ, ಆರ್ಥಿಕ, ರಾಜಕೀಯ ಮತ್ತು ಸಾಂಸ್ಕೃತಿಕ ವ್ಯವಸ್ಥೆಗಳು ಸಹ ಪರಿಸರವನ್ನೇ ಅವಲಂಬಿಸಿರುವುದು ಗಮನಾರ್ಹ.

ಈ ವ್ಯವಸ್ಥೆಯು ನಾಗರಿಕ ಸಮಾಜದ ಸೂಚಕವಾಗಿದೆ. ನಾಗರಿಕತೆ ಬೆಳೆದಂತೆಲ್ಲಾ ಮಾನವನು ತನ್ನ ಸುತ್ತಮುತ್ತಲ ಪ್ರಕೃತಿಯಿಂದ ಕೆಲವೊಂದು ಪಾಠಗಳನ್ನು ಕಲಿತು, ತನ್ನ ಬುದ್ಧಿಯನ್ನು ಜೀವನ ವಿಧಾನಕ್ಕೆ ತಕ್ಕಂತೆ ಬೆಳೆಸಿಕೊಂಡಿದ್ದಾನೆ. ಒಂದರ್ಥದಲ್ಲಿ ಈ ಜೀವಸಂಕುಲಕ್ಕೆ ಪರಿಸರವೇ ಗುರುವಾಗಿದೆ ಎನ್ನಬಹುದು. ಅದಕ್ಕಾಗಿಯೇ ಪರಿಸರವನ್ನು ತನ್ನ ಅನುಕೂಲಕ್ಕೆ ಬಳಸಿಕೊಳ್ಳಲಾರದ ಜೀವಿಗಳು ಬದುಕುಳಿಯುವುದು ಅಸಾಧ್ಯ. ಇತ್ತೀಚೆಗೆ ಪರಿಸರ ಮತ್ತು ಸಮಾಜಗಳ ನಡುವಿನ ಬಾಂಧವ್ಯಗಳನ್ನು ಆಧುನಿಕ ಸಮಾಜಶಾಸ್ತ್ರವು ಒಂದು ಅನ್ವಯಿಕ ವಿಷಯವನ್ನಾಗಿಸಿಕೊಂಡು ಅಧ್ಯಯನ ಮಾಡುತ್ತಿದೆ. ಇದರ ಪ್ರತಿಫಲವಾಗಿ ಮೂಡಿಬಂದ ಸಿದ್ಧಾಂತವೇ **"ಸಾಮಾಜಿಕ ಜೀವನದ ಗುಣಮಟ್ಟವು ನೈಸರ್ಗಿಕ ಪರಿಸರದ ಗುಣಮಟ್ಟವನ್ನು ಅವಲಂಬಿಸಿದೆ"** ಎಂಬುವುದು. ದುರಾದೃಷ್ಟವಶಾತ್ ಇಂದಿನ ಮಾನವನ ಮಿತಿಮೀರಿದ ಬಾಹ್ಯ ವರ್ತನೆಗಳು, ಪರಿಸರ ವ್ಯವಸ್ಥೆಯ ಮೇಲೆ ಕೆಟ್ಟಪರಿಣಾಮವನ್ನುಂಟು ಮಾಡುತ್ತಾ ತನ್ನ ಹಾಗೂ ತನ್ನ ಸುತ್ತಮುತ್ತಲಿನ ಜೀವಸಂಕುಲಗಳಿಗೆ ಅಪಾಯವನ್ನು ತಂದೊಡ್ಡಿದ್ದಾನೆ. ಇದಕ್ಕೆ ವ್ಯತಿರಿಕ್ತವಾಗಿ ಪರಿಸರವು ಕೂಡ ಮಾನವನ ಈ ವರ್ತನೆಗಳಿಗೆ ಸವಾಲೊಡ್ಡುತ್ತಿದೆ. ಒಟ್ಟಾರೆ ಭೂಮಿಯ ಮೇಲಿನ ಎಲ್ಲಾ ಜೀವ ಸಮುದಾಯಗಳು ಪರಿಸರದೊಂದಿಗೆ ಪ್ರತ್ಯಕ್ಷವಾಗಿ ಹಾಗು ಪರೋಕ್ಷವಾಗಿ ಪರಸ್ಪರ ಸಂಬಂಧಗಳನ್ನು ಹೊಂದಿವೆ. ಆದ್ದರಿಂದಲೇ ಪ್ರತಿಯೊಂದು ಜೀವ ಸಂಕುಲಗಳು ಸಹ ತಮ್ಮ ಸುತ್ತ ಮುತ್ತಲಿನ ಪರಿಸರಕ್ಕೆ ಅನುಗುಣವಾಗಿಯೇ ತಮ್ಮನ್ನು ಹೊಂದಿಸಿಕೊಂಡು ಬೆಳೆಯುತ್ತವೆ. ಈ ಸಂಬಂಧಗಳ ಅಧ್ಯಯನವನ್ನು ಜೀವ ಪರಿಸರ ವ್ಯವಸ್ಥೆ (Eco-sysetm) ಎಂದು ಕರೆಯಲಾಗುತ್ತದೆ. ಇಂಗ್ಲೆಂಡಿನ ಖ್ಯಾತ ಪರಿಸರ ತಜ್ಞರಾದ **"ಸರ್ ಆರ್ಥರ್ ಜಾರ್ಜ್ ಟಾನ್‌ಸೆಲ್ಲಿ** (SIR ARTHUR GEORGE TANSLEY)**"** ಎಂಬುವರು ಈ ಪರಿಕಲ್ಪನೆಯನ್ನು ಮೊದಲ ಬಾರಿಗೆ ಕ್ರಿ ಶ 1935 ರಲ್ಲಿ ಪರಿಚಯಿಸಿದರು.

### 8.1 ಪರಿಸರದ ಅರ್ಥ ಮತ್ತು ವ್ಯಾಖ್ಯಾನಗಳು :

ಪರಿಸರ ಎಂಬ ಪದವು ಆಂಗ್ಲ ಭಾಷೆಯಲ್ಲಿ **Environment** ಎಂದು ಕರೆಯುತ್ತಾರೆ. **Environment**ಎಂಬ ಪದವು ಪ್ರೆಂಚ್ ಭಾಷೆಯ **'environ'** ಎಂಬ ಪದದಿಂದ ಬಂದಿದೆ. **'environ'** ಎಂದರೆ ಆಂಗ್ಲ ಭಾಷೆಯಲ್ಲಿ **'Surround'** ಎಂಬುದಾಗಿ ಅರ್ಥೈಸಲಾಗಿದೆ. ಅಂದರೆ ನಮ್ಮ ಸುತ್ತಮುತ್ತ, ಸುತ್ತುವರೆದ, ಆವರಿಸಿರುವ ಇತ್ಯಾಧಿ ಅರ್ಥಗಳಿವೆ. ಒಟ್ಟಾರೆ ಪರಿಸರ ಎಂದರೆ ನಮ್ಮ ಸುತ್ತ ಮುತ್ತಲಿನ ಜೈವಿಕ ಮತ್ತು ಅಜೈವಿಕ ವಸ್ತುಗಳು ಸೇರಿದಂತೆ, ಇಲ್ಲಿ ನಡೆದ ಘಟನೆಗಳು ಮತ್ತು ಅವುಗಳ ಪ್ರಭಾವಗಳನ್ನ ಒಳಗೊಂಡಿರುವುದೇ ಪರಿಸರವೆನ್ನಬಹುದು.

**ಪರಿಸರ ಕುರಿತು ಅನೇಕ ವಿದ್ವಾಂಸರು ತಮ್ಮದೇ ಆದ ರೀತಿಯಲ್ಲಿ ವ್ಯಾಖ್ಯಾನಗಳನ್ನು ನೀಡಿದ್ದಾರೆ.**

1) ಅಮೇರಿಕಾ ಸಮಾಜಶಾಸ್ತ್ರ ಸಂಘದ ಅಧ್ಯಕ್ಷರಾಗಿದ್ದ **ಕಿಂಬಾಲ್ ಯಂಗ್**ರವರು "ಜೀವಿಯೊಂದರ ಮೇಲೆ ಬಾಹ್ಯವಾಗಿ ಪ್ರಭಾವ ಬೀರುವ ಎಲ್ಲಾ ಬಗೆಯ ಶಕ್ತಿಗಳು, ಪ್ರಚೋದಕಗಳು ಹಾಗೂ ಪರಿಸ್ಥಿತಿಗಳನ್ನು ಪರಿಸರ" ಎಂದು ಅಭಿಪ್ರಾಯ ಪಟ್ಟಿದ್ದಾರೆ".

2) **ಸಾಹು** ರವರ ಪ್ರಕಾರ "ವಾಯು, ಜಲ, ಭೂಮಿ, ಅರಣ್ಯ, ವನ್ಯಜೀವಿಗಳು, ಮನುಷ್ಯ, ಸಮಾಜ, ಕೈಗಾರಿಕೆ ಇತ್ಯಾದಿಗಳನ್ನು ಒಳಗೊಂಡಿರುವ ಸಮಗ್ರ ಕ್ರಿಯಾತ್ಮಕ ವ್ಯವಸ್ಥೆಯೇ ಪರಿಸರ".

3) **ಬ್ರಿಟಾನಿಯಾ ವಿಶ್ವಕೋಶ** ದಲ್ಲಿ ಉಲ್ಲೇಖಿಸಿರುವಂತೆ " ಒಂದು ಜೀವಿಯನ್ನು ಸುತ್ತುವರೆದಿರುವ ನಿಸರ್ಗದ ಸ್ವಾಭಾವಿಕ ಮತ್ತು ಜೈವಿಕ ಶಕ್ತಿಗಳು ಅದರ ಮೇಲೆ ಬಾಹ್ಯವಾಗಿ ಪ್ರಭಾವ ಬೀರುವ ಒಟ್ಟು ಮೊತ್ತವೇ ಪರಿಸರವಾಗಿದೆ".

### 8.1.2 ಪರಿಸರದ ಪ್ರಕಾರಗಳು (Types of Environment):

ಮಾನವನ ಅಸ್ತಿತ್ವ ಮತ್ತು ಅಭಿವೃದ್ಧಿಗೆ ಸಹಾಯಕವಾಗಿರುವ ಒಟ್ಟು ಪರಿಸರವನ್ನು ಭೌತಿಕ ಪರಿಸರ, ಜೈವಿಕ ಪರಿಸರ ಮತ್ತು ಸಾಮಾಜಿಕ ಪರಿಸರ ಎಂಬುದಾಗಿ ವಿಭಾಗಿಸಲಾಗಿದೆ. ಮಾನವನ ಹುಟ್ಟು ಮತ್ತು ಬೆಳವಣಿಗೆಗೆ ಜೈವಿಕ ಮತ್ತು ಭೌತಿಕ ಪರಿಸರಗಳು ಕಾರಣೀಭೂತವಾದರೆ, ಅವನ ಜೀವನದ ಸರ್ವಾಂಗೀಣ ಅಭಿವೃದ್ಧಿಗೆ ಆರ್ಥಿಕ ಮತ್ತು ಸಾಮಾಜಿಕ ಪರಿಸರಗಳು ಆಧಾರವಾಗಿವೆ. ಈ ಕಾರಣದಿಂದಾಗಿಯೇ ಪರಿಸರವು ಮಾನವನ ಶಾರೀರಿಕ ಗುಣಲಕ್ಷಣ ಮತ್ತು ಬುದ್ಧಿಮಟ್ಟದ ಮೇಲೆ ತನ್ನ ಅಗಾಧವಾದ ಪ್ರಭಾವವನ್ನು ಬೀರುತ್ತಲಿರುತ್ತದೆ.

### 1. ಭೌತಿಕ ಪರಿಸರ (Physical Environment) :

ಭೌತಿಕ ಪರಿಸರವು ನೆಲ-ಜಲ, ಬೆಟ್ಟ-ಗುಡ್ಡ, ಕಾಡು, ಗ್ರಹ, ನಕ್ಷತ್ರ, ಸರೋವರ, ಖನಿಜಸಂಪನ್ಮೂಲ ಮಂತಾದವುಗಳನ್ನು ಒಳಗೊಂಡಿದೆ. ಇದನ್ನು ಭೌಗೋಳಿಕ ಅಥವಾ ನೈಸರ್ಗಿಕ ಪರಿಸರವೆಂದು ಕರೆಯಲಾಗಿದೆ. ಈ ಭೌತಿಕ ಪರಿಸರವು ಮಾನವ ನಿರ್ಮಿತವಲ್ಲದಿದ್ದರೂ ಇದರಲ್ಲಿಯ ಕೆಲವೊಂದು ಅಂಶಗಳು ಮಾನವನ ನಿಯಂತ್ರಣಕ್ಕೆ ಒಳಪಟ್ಟಿವೆ.

ಭೌಗೋಳಿಕ ಪರಿಸರವನ್ನು ಶಿಲಾಗೋಳ (Lithosphere), ಜಲಗೋಳ(Hydrosphere), ವಾಯುಗೋಳ (Biosphere), ಎಂಬುದಾಗಿ ವಿಂಗಡಿಸಲಾಗಿದೆ. ಮಾನವನ ಜೀವನದ ವಿವಿಧ ಕ್ಷೇತ್ರಗಳ ಮೇಲೆ ಭೌತಿಕ

ಪರಿಸರವು ಪ್ರಭಾವ ಬೀರುತ್ತದೆ. ಅಂದರೆ ಜನಸಂಖ್ಯೆ, ಜನಾಂಗೀಯ ಸಮಸ್ಯೆಗಳು, ಆರ್ಥಿಕ, ಧಾರ್ಮಿಕ, ರಾಜಕೀಯ, ಸಾಮಾಜಿಕ ಆರೋಗ್ಯ, ಸಾಹಿತ್ಯ, ಕಲೆ ಮತ್ತು ಉತ್ಪಾದನೆಯ ಮೇಲೆ ಭೌತಿಕ ಪರಿಸರವು ಪರಿಣಾಮ ಬೀರುವುದು.

### 2. ಜೈವಿಕ ಪರಿಸರ (Biological Environment) :

ಜೈವಿಕ ಪರಿಸರವು ಜೀವಿಗಳನ್ನು ಒಳಗೊಂಡಿರುವ ಪರಿಸರವಾಗಿದೆ. ಇದು ಕ್ರಿಮಿ ಕೀಟ, ಪ್ರಾಣಿ ಮತ್ತು ಮಾನವನ ಸಂತತಿಯ ಉತ್ಪತ್ತಿಗೆ ಪೂರಕ ಹಾಗೂ ಪೋಷಕವಾಗಿದೆ. ಜೀವಿಯು ಹುಟ್ಟಿ, ವಿಕಾಸಗೊಂಡು ಪ್ರಗತಿಯತ್ತ ಸಾಗಲು ಜೈವಿಕ ಪರಿಸರದ ಅಸ್ತಿತ್ವವು ಅತ್ಯವಶ್ಯಕವಾದುದು. ಜೈವಿಕ ಪರಿಸರವು ಕಲುಷಿತವಾದರೆ ಜೀವಿಗಳು ನಾಶವಾಗುತ್ತವೆ.

### 3. ಸಾಮಾಜಿಕ ಪರಿಸರ : (Social environment)

ಸಾಮಾಜಿಕ ಪರಿಸರವು ಮಾನವ ನಿರ್ಮಿತ ಸಾಮಾಜಿಕ ಪ್ರಪಂಚವಾಗಿದೆ. ಇದು ಮಾನವನ ಬದುಕಿಗೆ ಅತ್ಯಾವಶ್ಯಕವಾದ ಪರಿಸರವಾಗಿದೆ. "ಸಮಾಜರಹಿತ ವ್ಯಕ್ತಿಯು ಕಲ್ಪನಾತೀತ" ಎಂಬುದು ತಜ್ಞರ ಅಭಿಪ್ರಾಯವಾಗಿದೆ. ವ್ಯಕ್ತಿಯು ಸಾಮಾಜಿಕ ಪರಿಸರದೊಂದಿಗೆ ಸುಮಧುರವಾದ ಸಂಬಂಧವನ್ನು ಕಾಯ್ದುಕೊಳ್ಳಬೇಕಾಗುತ್ತದೆ.

ಸಾಮಾಜಿಕ ಪರಿಸರವು ಜೀವನಾಡಿಗಳನ್ನು ಹೊಂದಿರುವ ಜೀವಂತ ವ್ಯವಸ್ಥೆಯಾಗಿದೆ. ಸಮಾಜದಲ್ಲಿನ ಜಾತಿ ವ್ಯವಸ್ಥೆ, ಆಚಾರ–ವಿಚಾರಗಳು, ಪದ್ಧತಿಗಳು, ಸಂಪ್ರದಾಯಗಳು, ಧರ್ಮ, ಪರಂಪರೆ, ಲೋಕಾಚಾರಗಳು, ನೈತಿಕ ನಿಯಮ, ನಂಬುಗೆ, ಸಾಹಿತ್ಯ, ಕಲೆ, ಕಾನೂನು ಮುಂತಾದವುಗಳು ಸಾಮಾಜಿಕ ಪರಿಸರದ ಅಂಗ (components of Social Enviornment) ಗಳಾಗಿವೆ.

ಸಾಮಾಜಿಕ ಪರಿಸರವು ಅಸಹಾಯಕ ಸ್ಥಿತಿಯಲ್ಲಿರುವ ಮಾನವ ಶಿಶುವಿನ ಪಾಲನೆ–ಪೋಷಣೆಯನ್ನು ಮಾಡುತ್ತದೆ. ವ್ಯಕ್ತಿಯಲ್ಲಿ ಹುದುಗಿರುವ ಸುಪ್ತ ಪ್ರತಿಭೆ–ಸಾಮರ್ಥ್ಯಗಳ ವಿಕಾಸಕ್ಕೆ ಅವಕಾಶವನ್ನು ಒದಗಿಸುತ್ತದೆ. ಸಂಸ್ಕೃತಿ ಮತ್ತು ನಾಗರಿಕತೆಯ ಮುನ್ನಡೆಗೆ ಪೂರಕವಾಗಿರುವ ಸಾಮಾಜಿಕ ಪರಿಸರವು ವ್ಯಕ್ತಿಯು ನಿರ್ವಹಿಸಬೇಕಾದ ಪಾತ್ರದ ಕಲ್ಪನೆಯನ್ನು ಮೂಡಿಸುತ್ತದೆ. ಯಾವುದೇ ರಾಷ್ಟ್ರದ ಅಭಿವೃದ್ಧಿಯು ಆ ರಾಷ್ಟ್ರದ ಸಾಮಾಜಿಕ ಪರಿಸರವನ್ನು ಅವಲಂಬಿಸಿದೆ.

### ಜೀವಪರಿಸರಶಾಸ್ತ್ರವೆಂಬ ವಿಜ್ಞಾನ : (The science of Ecology) :

ಜೀವಿಗಳು ವಾಸಿಸುವ ಭೂಪ್ರದೇಶವನ್ನು ಜೀವಿಗೋಳ ಎಂದು ಕರೆಯಲಾಗಿದೆ. ಸೂಕ್ಷ್ಮ ಜೀವಿಗಳು, ಸಸ್ಯ ಹಾಗೂ ಪ್ರಾಣಿಗಳು ಮುಂತಾದವು ಜೀವಿಗೋಳದಲ್ಲಿ ವಾಸಿಸುತ್ತವೆ. ಪ್ರತಿಯೊಂದು ಜೀವಿಯು ತನ್ನದೇ ಆದ ಪರಿಸರಕ್ಕೆ ಹೊಂದಿಕೊಂಡು, ಅದರ ಎಲ್ಲಾ ಘಟನೆಗಳೊಂದಿಗೆ ಅಂತಃಕ್ರಿಯೆ ನಡೆಸುತ್ತದೆ. ಪರಿಸರದ ಅಧ್ಯಯನ ಮತ್ತು ಪರಿಸರ ಜಾಗೃತಿಯು ಸಮಾಜಶಾಸ್ತ್ರೀಯ ಅಧ್ಯಯನದ ಪ್ರಮುಖ ಭಾಗ ಮತ್ತು ತನ್ನದೇ ಆದ ಅನ್ವಯಿಕ ಪ್ರಾಮುಖ್ಯತೆಯನ್ನು ಹೊಂದಿದೆ. ಪರಿಸರ ಮತ್ತು ಜೀವಿಗಳ ನಡುವಿನ ಸಂಕೀರ್ಣ ಸಂಬಂಧಗಳು ಮತ್ತು ಪರಸ್ಪರ ಪರಿಣಾಮಗಳ ಕುರಿತಾದ ಸಮಗ್ರ ಅಧ್ಯಯನವೇ ಪರಿಸರ ಅಧ್ಯಯನವಾಗಿದೆ.

ಭೂಗ್ರಹವು ಜೀವವಾಸ ವ್ಯವಸ್ಥೆ (Ecology)ಯಾಗಿದೆ. ಗ್ರೀಕ್ ಭಾಷೆ 'eco' ಎಂಬ ಧಾತುವಿನಿಂದ Ecology ಎಂಬ ವಿಜ್ಞಾನ ಉಗಮವಾಗಿದೆ. 'eco' ಎಂದರೆ ಮನೆ (house) ಎಂದರ್ಥ. ಜೀವಿಗಳು ಮತ್ತು

ಪರಿಸರಗಳು ಪರಸ್ಪರ ಸಂಬಂಧ ಹೊಂದಿವೆ ಹಾಗೂ ಇಡೀ ಪ್ರಪಂಚವೇ ಒಂದು ಮನೆಯಂತಿದೆ ಎಂಬುದನ್ನು ಈ ಪರಿಕಲ್ಪನೆ ಸಂಕೇತಿಸುವುದು.

ಕ್ರಿ.ಶ 19ನೇ ಶತಮಾನದ ಅರ್ನೆಸ್ಟ್ ಹೇಕಲ್ (Ernest Haeckel) ಎಂಬ ಜರ್ಮನಿಯ ಪ್ರಸಿದ್ಧ ಜೀವಶಾಸ್ತ್ರಜ್ಞನು ಪ್ರಥಮ ಬಾರಿಗೆ 'Ecology' ಎಂಬ ಪರಿಕಲ್ಪನೆಯನ್ನು ಬಳಸಿದನು. ಪರಿಸರವು ಪ್ರಾಣಿ ಸಮುದಾಯದ ಮೇಲೆ ಬೀರುವ ಪ್ರಭಾವವನ್ನು ಸಂಕೇತಿಸಲು ಈ ಪದವನ್ನು ಸೂಚಿಸಿದನು. Ian Robertson ಹೇಳುವಂತೆ "ಪರಿಸರ ಮತ್ತು ಜೀವಿಗಳ ನಡುವಿನ ಅಂತರ್ ಸಂಬಂಧದ ಅಧ್ಯಯನವೇ ಜೀವಪರಿಸರಶಾಸ್ತ್ರ".

ಸೃಷ್ಟಿಯ ಎಲ್ಲ ಜೀವಿಗಳು ಮತ್ತು ಪರಿಸರದೊಂದಿಗಿನ ಸಂಬಂಧವನ್ನು ಅಧ್ಯಯನ ಮಾಡುವ ಜೀವಶಾಸ್ತ್ರದ ಶಾಖೆಯೇ ಜೀವಪರಿಸರಶಾಸ್ತ್ರ.

ಜೀವಪರಿಸರಶಾಸ್ತ್ರ ವಿಚಾರಗಳು ಪ್ರಾಣಿಶಾಸ್ತ್ರ, ಸಸ್ಯಶಾಸ್ತ್ರ ಮತ್ತು ಸಮಾಜಶಾಸ್ತ್ರದ ಕ್ಷೇತ್ರಗಳ ಮೇಲೆ ಪ್ರಭಾವ ಬೀರಿರುವುದರಿಂದ ಪ್ರಾಣಿ ಜೀವಪರಿಸರಶಾಸ್ತ್ರ (Animal ecology), ಸಸ್ಯ ಜೀವಪರಿಸರಶಾಸ್ತ್ರ(plant ecology) ಸಾಮಾಜಿಕ ಅಥವಾ ಮಾನವ ಜೀವಪರಿಸರಶಾಸ್ತ್ರ (Social or Human ecology) ಎಂಬ ಜ್ಞಾನದ ಶಾಖೆಗಳು ಆವಿಷ್ಕಾರಗೊಂಡಿವೆ. ಮರ್ರೆ ಬುಕ್‌ಚಿನ್ (Murray Boockchin) ಎಂಬ ರಾಜಕೀಯ ತತ್ವಜ್ಞಾನಿಯು "ಸಾಮಾಜಿಕ ಜೀವ ಪರಿಸರಶಾಸ್ತ್ರದ ಸಂಸ್ಥೆ"ಯನ್ನೆ ಹುಟ್ಟು ಹಾಕಿದ್ದಾನೆ.

ಸಮಾಜಶಾಸ್ತ್ರದ ಒಂದು ಶಾಖೆಯಾಗಿರುವ ಮಾನವ ಜೀವಪರಿಸರಶಾಸ್ತ್ರವು ಮಾನವನ ಜೀವಿಗಳು ತಮ್ಮ ಪರಿಸರದೊಂದಿಗೆ ಹೇಗೆ ನಿರಂತರವಾಗಿ ಹೊಂದಾಣಿಕೆಯನ್ನು ಮಾಡಿಕೊಳ್ಳುತ್ತವೆ ಎಂಬುದನ್ನು ಅಧ್ಯಯನ ಮಾಡುವುದು. ಪಾರ್ಕ್ ಮತ್ತು ಬರ್ಗೆಸ್, ಮೆಕೆಂಜಿ ಮತ್ತು ಅವರ 'ಚಿಕಾಗೋ ವಿಚಾರ ವೇದಿಕೆ'ಯು (Chicago school) ಸಾಮಾಜಿಕ ಪರಿಸರಶಾಸ್ತ್ರವನ್ನು ಸಮಾಜಶಾಸ್ತ್ರದ ಒಂದು ಶಾಖೆಯಾಗಿ ಬೆಳೆಯುವಂತೆ ಮಾಡಿತು.

## 8.2 ಪರಿಸರ ಮಾಲಿನ್ಯದ ಅರ್ಥ (Meaning of Environment pollution):

Pollution (ಮಾಲಿನ್ಯ) ಎಂಬ ಪದವು ಲ್ಯಾಟಿನ್ ಭಾಷೆಯ pollutionem (ಪಲ್ಯುಟಿಯನೆಮ್) ಎಂಬ ಧಾತುವಿನಿಂದ ವಿಕಾಸಗೊಂಡಿದೆ. Pollutionem ಎಂದರೆ ಹೊಲಸುಮಾಡು ಎಂದರ್ಥ. ಮಾಲಿನ್ಯ ಎಂಬ ಪದವನ್ನು ಪರಿಸರವು ಮಲಿನಗೊಂಡಿರುವುದನ್ನು, ಹಾಳಾಗಿರುವುದನ್ನು ಸೂಚಿಸಲು ಬಳಸಲಾಗಿದೆ. ಮಾನವನ ವಿವಿಧ ಬಗೆಯ ಕಾರ್ಯಗಳಿಂದ ಪರಿಸರದ ಸಮತೋಲನವು ಕೆಟ್ಟು, ಮಲಿನಗೊಂಡು ಜೀವಿಗಳಿಗೆ ಹಾನಿಕಾರಕವಾಗಿ ಪರಿಣಮಿಸಿರುವುದೇ ಪರಿಸರ ಮಾಲಿನ್ಯವಾಗಿದೆ. ಅಮೇರಿಕಾದ ಮಾರ್ಗರೆಟ್ ಮೀಡ್ ಎಂಬ ಖ್ಯಾತ ಮಾನವಶಾಸ್ತ್ರಜ್ಞೆ "ಪರಿಸರ ಮಾಲಿನ್ಯವು ಆಧುನಿಕ, ಔದ್ಯಮಿಕ ಹಾಗೂ ನಗರ ಪ್ರಧಾನ ನಾಗರಿಕತೆಯು ಸೃಷ್ಟಿ ಮಾಡಿದ ಅತ್ಯಂತ ದೊಡ್ಡ ಸವಾಲುಗಳಲ್ಲೊಂದು ಎಂದಿದ್ದಾರೆ.

1. ಪಿ.ಹೆಚ್ ಕಾಲ್ಲಿನ್‌ರವರ ಜೀವ ಪರಿಸರಶಾಸ್ತ್ರ ಮತ್ತು ಪರಿಸರದ ಶಬ್ದಕೋಶದ ಪ್ರಕಾರ ಮಾಲಿನ್ಯವೆಂದರೆ "ಪರಿಸರದಲ್ಲಿ ಅತ್ಯಧಿಕ ಪ್ರಮಾಣದಲ್ಲಿ ಕೆಡಕನ್ನುಂಟು ಮಾಡುವ ವಸ್ತುಗಳು ಕೇಂದ್ರೀಕರಣವಾಗಿದ್ದು, ಕೆಲವೊಮ್ಮೆ ಇವು ಜನರಿಂದ ಸೃಷ್ಟಿಯಾಗಿ ಸಂಚಯನವಾಗಿವೆ" ಎಂದಿದ್ದಾರೆ.

2. ಪರಿಸರ ಅಥವಾ ಅದರ ಯಾವುದೇ ಭಾಗವು ಮಾನವ ಚಟುವಟಿಕೆಗಳ ಮೂಲಕ ವಿರೂಪಗೊಳ್ಳುವ ಅಥವಾ ನಿಸರ್ಗದ ಹಿತಕ್ಕೆ ವಿರುದ್ಧವಾಗಿ ಮಾರ್ಪಾಡುಗೊಳಿಸುವುದನ್ನು ಪರಿಸರ ಮಾಲಿನ್ಯ ಎನ್ನಬಹುದು.

3. ಮಾಲಿನ್ಯವೆಂಬುದು ಒಂದು ರೀತಿಯ ಅನಪೇಕ್ಷಿತ ಪರಿವರ್ತನೆಯಾಗಿದ್ದು, ಗಾಳಿ, ನೀರು, ಭೂಮಿ, ಜೀವಿಗಳು ಕೈಗಾರಿಕಾ ಪ್ರಕ್ರಿಯೆಗಳು ಹಾಗೂ ಕಚ್ಚಾ ಪದಾರ್ಥಗಳ ಮೇಲೆ ಹಾನಿಕಾರಕ ಪರಿಣಾಮಗಳನ್ನು ಉಂಟು ಮಾಡುವುದು.

## ಪರಿಸರ ಮಾಲಿನ್ಯದ ಪ್ರಕಾರಗಳು (Types of environment pollution):



ಪ್ರಕೃತಿಯ ಸುಂದರ ಚಿತ್ತಾರವಾದ ಪರಿಸರವು ಮಾನವನಿಂದ ಮಲಿನಗೊಂಡಿದ್ದು, ಅವನು ಅದರ ಕೆಟ್ಟ ಪರಿಣಾಮಗಳನ್ನು ಅನುಭವಿಸುತ್ತಿದ್ದಾನೆ. ಪರಿಸರವನ್ನು ಮಾಲಿನ್ಯಗೊಳಿಸುವ ಘನ, ದ್ರವ ಹಾಗೂ ಅನಿಲ ರೂಪಗಳು ಮಾನವನ ವಾಸಸ್ಥಳವಾಗಿರುವ ಪರಿಸರದ ಸ್ವಚ್ಛತೆ, ನೈರ್ಮಲ್ಯ ಹಾಗೂ ಆರೋಗ್ಯಕರ ವಾತಾವರಣವನ್ನು ಕಲುಷಿತಗೊಳಿಸುವವು. ಮಾನವನು ವಾಸಿಸುವ ಪರಿಸರವು ಹಲವು ರೀತಿಯಲ್ಲಿ ಕಲುಷಿತಗೊಂಡಿದ್ದು, ಅಧ್ಯಯನದ ಅನುಕೂಲಕ್ಕಾಗಿ ಹಲವಾರು ಪ್ರಕಾರಗಳಾಗಿ ವಿಂಗಡಿಸಲಾಗಿದೆ. ಪರಿಸರವು ಮಲಿನಗೊಳ್ಳಲ್ಪಡುತ್ತಿರುವ ವಿವಿಧ ರೂಪಗಳು ಈ ಕೆಳಗಿನಂತಿವೆ.

**8.2.1. ವಾಯು ಮಾಲಿನ್ಯ (Air Pollution) :** ವಾಯುಮಂಡಲದಲ್ಲಿ ಮಾನವನು ಅನಪೇಕ್ಷಿತ ತ್ಯಾಜ್ಯ ವಸ್ತುಗಳಿಂದ ತುಂಬಿಸುವುದನ್ನು ವಾಯು ಮಾಲಿನ್ಯ ಎನ್ನಬಹುದು. **ಆಕ್ಸ್‌ಫರ್ಡ್ ಶಬ್ಧಕೋಶ**ದ ಪ್ರಕಾರ ವಾಯುಮಾಲಿನ್ಯ ಎಂದರೆ, "ಮಾನವನ ಚಟುವಟಿಕೆಗಳಿಂದ ಬಿಡುಗಡೆಗೊಳ್ಳುವ ಸಂಯುಕ್ತಗಳು ಭೂಮಿಯ ಮೇಲಿನ ವಾಯುಮಂಡಲಕ್ಕೆ ಸೇರಿಕೊಳ್ಳುವುದರ ಮೂಲಕ ಆಸ್ತಿ, ಮೌಲ್ಯಯುತ ಜೀವಿಗಳಾದ ಸಸ್ಯಗಳು, ಪ್ರಾಣಿಗಳು ಮತ್ತು ಮಾನವರ ಮೇಲೆ ಅಪಾಯಕಾರಿಯಾದ ಪರಿಣಾಮನ್ನುಂಟು ಮಾಡುತ್ತದೆ"

**ವಿಶ್ವ ಆರೋಗ್ಯ ಸಂಸ್ಥೆಯು** ಹೇಳಿರುವಂತೆ "ವಾಯು ಮಂಡಲದಲ್ಲಿ ಯಾವುದೇ ಘಟಕದ ಸಾರತೆ ಹೆಚ್ಚಿ, ಅದರಿಂದ ಜೀವಿಗಳಿಗೆ ಮತ್ತು ಜೀವಿಗಳ ಪರಿಸರಕ್ಕೆ ಹಾನಿಯುಂಟು ಮಾಡುವ ಪರಿಸ್ಥಿತಿಯೇ ವಾಯುಮಾಲಿನ್ಯ".

## ವಾಯುಮಾಲಿನ್ಯಕ್ಕೆ ಕಾರಣಗಳು (Causes of Air Pollution) :

ಜೀವಸಂಕುಲಕ್ಕೆ ಹಾನಿಯನ್ನುಂಟು ಮಾಡಿ ಭೂಮಿಯ ವಾತಾವರಣಕ್ಕೆ ಅನಗತ್ಯವಾದ ಮಲೀನ ಗಾಳಿ, ಹೊಗೆ, ಕಲ್ಮಶಗಳನ್ನು ಸೇರಿಸುವ ವಾಯುಮಾಲಿನ್ಯಕ್ಕೆ ಮಾನವ ಕೇಂದ್ರಿತ ಚಟುವಟಿಕೆಗಳೇ ಕಾರಣವಾಗುತ್ತವೆ. ವಾಯುಮಾಲಿನ್ಯವು ನೈಸರ್ಗಿಕ ಕಾರಣಗಳಾದ ಜ್ವಾಲಾಮುಖಿ ಸ್ಫೋಟ, ಕಾಡ್ಗಿಚ್ಚು, ಬ್ಯಾಕ್ಟೀರಿಯಾ ಮುಂತಾದವುಗಳಿಂದ ಉಂಟಾಗುವುದು. ವಾಯುಮಾಲಿನ್ಯಕ್ಕೆ ಮಾನವ ಸೃಷ್ಟಿ ಕೈಗಾರಿಕೆಗಳು, ವಾಹನಗಳು, ಅಣುವಿಕಿರಣ, ಪೆಟ್ರೋಲ್, ಕಲ್ಲಿದ್ದಲು ಮತ್ತು ಗಣಿಗಾರಿಕೆಯು ಕೂಡ ಕಾರಣವಾಗುತ್ತದೆ.

ಮಾನವನು ವಿಪರೀತವಾಗಿ ಬಳಸುವ ಶಕ್ತಿ ಮೂಲಗಳಾದ ಕಲ್ಲಿದ್ದಲು, ಪೆಟ್ರೋಲಿಯಂ ಮುಂತಾದವುಗಳಿಂದ ವಾತಾವರಣಕ್ಕೆ ಅಪಾರ ಪ್ರಮಾಣದ ರಾಸಾಯನಿಕಗಳು ಸೇರಿಕೊಳ್ಳುತ್ತವೆ. ಕಾರ್ಬನ್ ಮಿಶ್ರಣಗಳು, ಗಂಧಕ ಮಿಶ್ರಣಗಳು, ನೈಟ್ರೋಜನ್ ಆಕ್ಸೈಡ್‌ಗಳು, ಕ್ಲೋರೋ ಫ್ಲೋರೋಕಾರ್ಬನ್‌ಗಳು ಹೈಡ್ರೋಕಾರ್ಬನ್‌ಗಳು, ಲೋಹಗಳು, ಫೋಟೋ ರಾಸಾಯನಿಕ ಉತ್ಪನ್ನಗಳು, ಸೂಕ್ಷ್ಮಾಣು ವಸ್ತುಗಳು, ಜೈವಿಕ ಕಣಗಳು ಮತ್ತು ವಿಷಕಾರಕಗಳು ವಾಯುಮಾಲಿನ್ಯದ ಮೂಲಗಳಾಗಿವೆ.

### ವಾಯುಮಾಲಿನ್ಯದ ದುಷ್ಪರಿಣಾಮಗಳು (Impact of Air Pollution) :

ವಾಯುಮಾಲಿನ್ಯವು ಬಹಳ ವಿಸ್ತೃತವಾದ ಸಮಸ್ಯೆಯಾಗಿದ್ದು, ಮಾನವನ ಆರೋಗ್ಯ, ಪ್ರಾಣಿಗಳು, ಸಸ್ಯಗಳ ಮೇಲೆ ಕೆಟ್ಟ ಪರಿಣಾಮಗಳನ್ನು ಉಂಟುಮಾಡುತ್ತದೆ.

1. ಗಾಳಿಯಲ್ಲಿಯ ಗಂಧಕದ ಡೈ ಆಕ್ಸೈಡ್, ವಾಯುವಿನಲ್ಲಿಯ ಕಲ್ಲಿದ್ದಲು, ಸಿಲಿಕಾನ್, ಬೆರಿಯಂ ಮುಂತಾದವು ಶ್ವಾಸಕೋಶದ ಕ್ಯಾನ್ಸರ್, ಹೃದಯ ಮತ್ತು ರಕ್ತ ಪರಿಚಲನೆಯ ಕಾಯಿಲೆಗೆ ದಾರಿ ಮಾಡುತ್ತವೆ.
2. ಆಧುನಿಕ ತಂತ್ರಜ್ಞಾನದ ವಿಕಿರಣಗಳಿಂದ ರಕ್ತಹೀನತೆ, ಲ್ಯುಕಿಮಿಯಾ, ಕ್ಯಾನ್ಸರ್, ಶಾರೀರಿಕ ದುರ್ಬಲತೆ ಉಂಟಾಗುವುದು.
3. ವಾಯುಮಾಲಿನ್ಯದಿಂದ ಅಮೃತಶಿಲೆಯ ಭವ್ಯ ಸ್ಮಾರಕ ಜಗತ್ಪ್ರಸಿದ್ಧ ತಾಜ್‌ಮಹಲ್ ಇಂದು ಹಂತ ಹಂತವಾಗಿ ಹಾಳಾಗುತ್ತಿದ್ದು, ಅದರ ಅಪೂರ್ವ ಅತಿಸೂಕ್ಷ್ಮ ಕುಸುರಿಯ ಕೆಲಸ ನಾಶವಾಗುತ್ತಿದೆ.
4. ವಿವಿಧ ಇಂಧನಗಳ ಬಳಕೆಯಿಂದ ಬಿಡುಗಡೆಯಾಗುವ ಇಂಗಾಲದ ಡೈ ಆಕ್ಸೈಡ್‌ನಿಂದ ಭೂಮಿಯ ತಾಪಮಾನ ಹೆಚ್ಚುತ್ತಿದೆ. ಇದನ್ನು ಹಸಿರು ಮನೆ ಪರಿಣಾಮ ಎಂದು ಕರೆಯಲಾಗಿದೆ.
5. ವಾಯುಮಾಲಿನ್ಯದ ಮೂಲಗಳ ಗಿಡಮರಗಳ ಮೇಲೆ ಶೇಖರಣೆಯಾಗಿ ಎಲೆಯಲ್ಲಿನ ಪತ್ರ–ಹರಿತು ಮುಚ್ಚಿ ದ್ಯುತಿ–ಸಂಶ್ಲೇಷಣೆ ಕ್ರಿಯೆಯ ಸಾಮರ್ಥ್ಯ ಕಡಿಮೆಯಾಗುತ್ತಿದೆ. ಇದರಿಂದ ಗಾಳಿಯಲ್ಲಿನ ಆಮ್ಲಜನಕದ ಪ್ರಮಾಣ ಕಡಿಮೆಯಾಗುತ್ತಿದೆ.

### ವಾಯುಮಾಲಿನ್ಯವನ್ನು ತಡೆಗಟ್ಟುವ ವಿಧಾನಗಳು (Methods of containing Air Pollution):

ವಾಯುಮಾಲಿನ್ಯವು ಇಂದಿನ ಕೈಗಾರಿಕಾ ಯುಗದ ಮುಖ್ಯ ಸಮಸ್ಯೆಗಳಲ್ಲೊಂದಾಗಿದೆ. ಅದನ್ನು ನಿಯಂತ್ರಿಸಲು ಹಲವು ಮಾರ್ಗೋಪಾಯಗಳಿವೆ.

1. ನೈಸರ್ಗಿಕ ಸಸ್ಯ ವರ್ಗಗಳ ಸಂರಕ್ಷಣೆ ಮಾಡುವುದರಿಂದ ನೈಸರ್ಗಿಕ ಆವರ್ತಗಳು ಯಥಾ ರೀತಿಯಲ್ಲಿ ಮುಂದುವರಿದು ವಾಯುಮಂಡಲದ ಕಶ್ಮಲಗಳು ಕ್ರಮೇಣ ಪ್ರಕೃತಿಯಲ್ಲಿಯೇ ವಿಲೀನವಾಗುತ್ತವೆ.
2. ಕೈಗಾರಿಕೆಗಳನ್ನು ಜನವಸತಿಯ ಪ್ರದೇಶಗಳಿಂದ ದೂರದಲ್ಲಿ ಸ್ಥಾಪಿಸುವುದು.
3. ಪರಿಸರ ಮಾಲಿನ್ಯ ಉಂಟು ಮಾಡದಿರುವ ಕೈಗಾರಿಕೆಗಳನ್ನು ಪ್ರೋತ್ಸಾಹಿಸುವುದು.
4. ವಾಹನಗಳಲ್ಲಿ ಮಾಲಿನ್ಯ ನಿಯಂತ್ರಣ ಸಾಧನಗಳನ್ನು ಅಳವಡಿಸಿ, ಕಡಿಮೆ ಪ್ರಮಾಣದಲ್ಲಿ ಹೊಗೆ ಬಿಡುವ ವಾಹನ ಬಳಕೆಗೆ ಪ್ರೋತ್ಸಾಹಿಸುವುದು.
5. ಕೇವಲ ಸರ್ಕಾರಿ ಮತ್ತು ಶಾಸನೀಯ ಕ್ರಮಗಳಿಂದ ಮಾತ್ರವೇ ಮಾಲಿನ್ಯವನ್ನು ನಿಯಂತ್ರಿಸಲಾಗದು. ಈ ಬಗ್ಗೆ ಜನರಲ್ಲಿ ತಿಳುವಳಿಕೆ ಮೂಡಿಸುವುದು ಹೆಚ್ಚು ಪರಿಣಾಮಕಾರಿ.
6. ಪರಿಸರದ ಅಧ್ಯಯನವು ಶಿಕ್ಷಣದ ಎಲ್ಲಾ ಹಂತಗಳಲ್ಲಿ ಪಠ್ಯವಸ್ತುವಾಗಬೇಕು. ಸಾರ್ವಜನಿಕ ಸಂಘ–ಸಂಸ್ಥೆಗಳು ಜನಸಂಘಟನೆಗಳು ಈ ದಿಸೆಯಲ್ಲಿ ಕಾರ್ಯ ನಿರ್ವಹಿಸಬೇಕು.

### 8.2.2. ಜಲಮಾಲಿನ್ಯ (Water Pollution):

ನೀರು ಎಲ್ಲಾ ಬಗೆಯ ಜೀವ ಸಂಕುಲಕ್ಕೆ ಅತ್ಯಗತ್ಯ. ಭೂಮಿಯು 2/3 ರಷ್ಟು ಭಾಗ ನೀರಿನಿಂದ



ಕೂಡಿದೆ. ಭೂಮಿಯ 97.2% ರಷ್ಟು ನೀರು ಲವಣಾಂಶಗಳಿಂದ ಕೂಡಿದ್ದು ಉಳಿದ 2.8% ರಷ್ಟು ಮಾತ್ರ ಸಿಹಿ ನೀರಿನಿಂದ ಕೂಡಿದೆ. ಸಮುದ್ರದ ನೀರು ಆವಿಯಾಗಿ ಲವಣಾಂಶ ಬೇರ್ಪಟ್ಟು ಮಳೆಯ ರೂಪದಲ್ಲಿ ಸಿಹಿ ನೀರು ನಮಗೆ ತಲುಪುತ್ತದೆ. ಜನಸಂಖ್ಯಾ ಸ್ಫೋಟ, ಅನಿಯಂತ್ರಿತ ಕೈಗಾರಿಕೀಕರಣ, ನಗರೀಕರಣಗಳೇ ಜಲಮಾಲಿನ್ಯಕ್ಕೆ ಪ್ರಮುಖ ಕಾರಣಗಳು. ಮಾನವನ ಯಾವುದೇ ಚಟುವಟಿಕೆಯಿಂದ ನೀರಿನ ಗುಣಮಟ್ಟ ಏರುಪೇರಾದಲ್ಲಿ ಅದನ್ನು ಜಲಮಾಲಿನ್ಯ ಎಂದು ಕರೆಯಲಾಗಿದೆ.

ನೀರು ಕಲುಷಿತಗೊಳ್ಳವುದೇ ಜಲಮಾಲಿನ್ಯ. ನೀರು ವಿಷಕಾರಿ ಪದಾರ್ಥಗಳಿಂದ ಕಲುಷಿತಗೊಂಡು ಜೀವಿಗಳ ಆರೋಗ್ಯವನ್ನು ಹಾಳು ಮಾಡುತ್ತದೆ. ಜಲಮಾಲಿನ್ಯದ ಮೂರು ಮುಖ್ಯ ಪ್ರಕಾರಗಳೆಂದರೆ, ಒಳನಾಡಿನ ಮಾಲಿನ್ಯ, ಅಂತರ್ಜಲ ಮಾಲಿನ್ಯ ಹಾಗೂ ಸಾಗರಗಳ ಮಾಲಿನ್ಯ.

### ಜಲಮಾಲಿನ್ಯಕ್ಕೆ ಕಾರಣಗಳು (Causes of Water Pollution):

ಜಲಮಾಲಿನ್ಯವು ಮಾನವನ ಹಲವು ಬಗೆಯ ಕಾರ್ಯಗಳಿಂದ ಉಂಟಾಗುವುದು. ಕೈಗಾರಿಕಾ ತ್ಯಾಜ್ಯಗಳು, ಗೃಹ ಬಳಕೆಯ ತ್ಯಾಜ್ಯಗಳು ಮತ್ತು ಕ್ರಿಮಿನಾಶಕಯುಕ್ತ ಕೃಷಿ ಭೂಮಿಯಿಂದ ಹರಿದು ಬರುವ ನೀರು ಮುಂತಾದವುಗಳು ಜಲಮಾಲಿನ್ಯಕ್ಕೆ ಕಾರಣವಾಗಿವೆ. ಜೈವಿಕ ಮೂಲದ ವಸ್ತುಗಳಾದ ಚರಂಡಿಯ ನೀರು, ಆಹಾರ ಸಂಸ್ಕರಣೆಯ ಕೈಗಾರಿಕೆಗಳು, ಚರ್ಮ ಹದಗೊಳಿಸುವ ಕೈಗಾರಿಕೆ, ಕ್ರಿಮಿನಾಶಕಗಳು, ಔಷಧಿಗಳು, ವಿವಿಧ ರಾಸಾಯನಿಕಯುಕ್ತ ಬಣ್ಣಗಳು ಜಲಭಾಗಗಳೊಡನೆ ಬೆರೆತು ಕಲುಷಿತಗೊಳಿಸುವುದು.

ಅಜೈವಿಕ ವಸ್ತುಗಳಾದ ವಿವಿಧ ಆಮ್ಲಗಳು, ಲೋಹದ ಕಣಗಳು, ಸಯನೈಡ್, ಸಲ್ಫೇಟ್ ಮೊದಲಾದವು ನೀರಿನೊಡನೆ ಸೇರಿ ಮಲಿನಗೊಳಿಸುತ್ತವೆ. ಗಣಿಗಾರಿಕೆ ವಿಕಿರಣ ವಸ್ತುಗಳಾದ ಯುರೇನಿಯಂ ಮತ್ತು ಥೋರಿಯಂ ಹಾಗೂ ಸಮುದ್ರಕ್ಕೆ ಸೇರುವ ತೈಲ ಮುಂತಾದವುಗಳು ಜಲಮಾಲಿನ್ಯಕ್ಕೆ ಕಾರಣವಾಗಿವೆ.

### ಜಲಮಾಲಿನ್ಯದಿಂದ ಉಂಟಾಗುವ ಪರಿಣಾಮಗಳು (Impact of Water Pollution):

ಜಲಮಾಲಿನ್ಯವು ಹಲವಾರು ಅಡ್ಡ ಪರಿಣಾಮಗಳನ್ನುಂಟು ಮಾಡುತ್ತದೆ. ಅವುಗಳೆಂದರೆ :

1. ಮಾಲಿನ್ಯಗೊಂಡ ನೀರು ಹಲವಾರು ಜಲ ಆಧಾರಿತ ರೋಗಗಳು ಮತ್ತು ಸಾಂಕ್ರಾಮಿಕ ರೋಗಗಳಾದ ಕಾಲರಾ, ಟೈಫಾಯಿಡ್, ಡೈಯೆರಿಯಾ, ಬೇಧಿ, ಕಾಮಾಲೆ ಮುಂತಾದವುಗಳಿಗೆ ಕಾರಣವಾಗಿವೆ.
2. ಮಾಲಿನ್ಯಗೊಂಡ ನೀರು ದ್ಯುತಿಸಂಶ್ಲೇಷಣಾ ಪ್ರಕ್ರಿಯೆಯನ್ನು ತಡೆಗಟ್ಟಿ ಸಸ್ಯಗಳು ಮತ್ತು ಮರಗಳ ಬೆಳವಣಿಗೆಯ ಮೇಲೆ ಕೆಟ್ಟ ಪರಿಣಾಮವನ್ನುಂಟು ಮಾಡಿದೆ.
3. ಜಲಮಾಲಿನ್ಯ ಮತ್ತು ಸಮುದ್ರದಲ್ಲಿ ತೈಲ ಸೋರುವಿಕೆಯಿಂದ ಜಲಚರ ಸಸ್ಯಗಳು ಮತ್ತು ಪ್ರಾಣಿಗಳು, ಪಕ್ಷಿಗಳು ಸಾವನ್ನಪ್ಪುತ್ತವೆ. ಪ್ರತಿವರ್ಷ ತೈಲಮಾಲಿನ್ಯದಿಂದ ಸುಮಾರು 50,000 ದಿಂದ 2,50,000 ರಷ್ಟು ಪಕ್ಷಿಗಳು ಸಾವನ್ನಪ್ಪುತ್ತವೆ.

4. ಜಲಮಾಲಿನ್ಯವು ಓಜೋನ್ ಅನಿಲದ ನಾಶಕ್ಕೆ ಕಾರಣವಾಗಿದೆ.

5. ಅಧಿಕ ಪ್ರಮಾಣದಲ್ಲಿ ಮಲಿನಗೊಂಡ ನೀರನ್ನು ಕೃಷಿಯಲ್ಲಿ ಬಳಸಿದರೆ ಆಹಾರ ಉತ್ಪನ್ನಗಳಲ್ಲಿ ಅಪಾಯಕಾರಿ ಘಟಕಗಳು ಸೇರಿಕೊಳ್ಳುತ್ತವೆ. ಕಲುಷಿತ ನೀರನ್ನು ವ್ಯವಸಾಯಕ್ಕೆ ಬಳಸುವುದರಿಂದ ಬೆಳೆಯ ಇಳುವರಿ ಶೇ 17 ರಿಂದ ಶೇ 30ರ ವರೆಗೆ ಕಡಿಮೆಯಾಗುತ್ತದೆ.

**ಜಲಮಾಲಿನ್ಯದ ನಿಯಂತ್ರಣಾ ಕ್ರಮಗಳು (Measures to control Water Pollution):** ಪ್ರಪಂಚದ ಅನೇಕ ರಾಷ್ಟ್ರಗಳಲ್ಲಿ ಜಲಮಾಲಿನ್ಯವು ಈಗಾಗಲೇ ಬೃಹತ್ ಸಮಸ್ಯೆಯಾಗಿ ಪರಿಣಮಿಸಿದೆ. ಬಹುತೇಕ ನದಿಗಳು ಕಲುಷಿತಗೊಂಡಿವೆ. ಸಾಗರಗಳೂ ಮಲಿನತೆಗೀಡಾಗಿವೆ. ಜಲಮಾಲಿನ್ಯವನ್ನು ತಡೆಗಟ್ಟುವ ಮುಖ್ಯ ವಿಧಾನಗಳೆಂದರೆ :

1. **ಒಳಚರಂಡಿಯ ನೀರಿನ ಶುದ್ಧೀಕರಣ (Purification of seweage water):**

   ಬೃಹತ್ ನಗರ ಹಾಗೂ ಕೈಗಾರಿಕೆಗಳಿಂದ ಹೊರಬೀಳುವ ಕಲುಷಿತ ನೀರು ಯಾವುದೇ ನದಿ, ಸರೋವರವನ್ನು ಸೇರಿದರೂ ಅವುಗಳು ಸಹ ಮಲಿನಗೊಳ್ಳುತ್ತವೆ. ಇದರ ಇಂಗುವಿಕೆಯು ಅಂತರ್ಜಲವನ್ನು ಕಲುಷಿತಗೊಳಿಸುವುದು.ಇದರಿಂದ ಚರಂಡಿಯ ನೀರನ್ನು ಶುದ್ಧೀಕರಿಸಿ ನದಿಗೆ ಬಿಡುವುದು ಸೂಕ್ತವಾದ ವಿಧಾನವಾಗಿದೆ.

2. **ಕೈಗಾರಿಕೆ ತ್ಯಾಜ್ಯ ವಸ್ತುಗಳ ಸಂಸ್ಕರಣೆ (Treatment of Industrial discharge):** ಕೈಗಾರಿಕೆಗಳಿಂದ ಹೊರಬೀಳುವ ರಾಸಾಯನಿಕ ಮಿಶ್ರಣವನ್ನು ಒಳಗೊಂಡಿರುವ ನೀರನ್ನು ಸಂಸ್ಕರಿಸಿ, ರಾಸಾಯನಿಕಗಳನ್ನು ನೀರಿನಿಂದ ಬೇರ್ಪಡಿಸುವುದು ಅಗತ್ಯ.

3. ಜೈವಿಕವಾಗಿ ವಿಘಟನೆಗೊಳ್ಳದ ಕ್ರಿಮಿನಾಶಕಗಳನ್ನು ನಿಷೇಧಿಸುವುದು ಅಗತ್ಯ. ಇದರ ಬದಲಿಗೆ ಸಸ್ಯಗಳಿಂದ ತಯಾರಿಸಲ್ಪಟ್ಟ ಜೈವಿಕ ಕೀಟನಾಶಕಗಳನ್ನು ಉಪಯೋಗಿಸುವುದು ಸೂಕ್ತ.

4. ಶಾಖೋತ್ಪನ್ನ ಕೇಂದ್ರ ಮತ್ತು ವಿದ್ಯುತ್ ಕೇಂದ್ರಗಳಿಂದ ಹೊರ ಬರುವ ಬಿಸಿ ನೀರು ಜಲಮೂಲಗಳನ್ನು ಸೇರದಂತೆ ಹರಿಯ ಬಿಡುವುದು.

5. ನೀರಿನ ಪುನರ್ ಬಳಕೆ : ಚರಂಡಿ ನೀರನ್ನು ಸಂಸ್ಕರಿಸಿ ಅದನ್ನು ಬೇಸಾಯಕ್ಕಾಗಿ ಬಳಕೆ ಮಾಡಿಕೊಳ್ಳಬೇಕು. ಈ ಪ್ರಯತ್ನವು ಈಗಾಗಲೇ ಕೆಲವು ನಗರ ಪ್ರದೇಶಗಳಲ್ಲಿ ಯಶಸ್ವಿಯಾಗಿದೆ. ಆದರೆ ಇನ್ನೂ ವ್ಯಾಪಕಗೊಳಿಸುವ ಅವಶ್ಯಕತೆಯಿದೆ.

6. ಸತ್ತ ಜೀವಿಗಳನ್ನು ನದಿಗೆ ವಿಸರ್ಜಿಸುವುದನ್ನು ನಿರ್ಬಂಧಿಸಬೇಕು.

7. ಭಾರತ ಸರ್ಕಾರವು ಜಾರಿಗೊಳಿಸಿರುವ 1974 ಜಲ ರಕ್ಷಣೆ ಮತ್ತು ಜಲಮಾಲಿನ್ಯ ನಿಯಂತ್ರಣ ಕಾಯಿದೆ, 1986 ರ ಪರಿಸರ ಕಾಯ್ದೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಬೇಕು.

ಇವೆಲ್ಲವುಗಳಿಂತಲೂ ಜನರಲ್ಲಿ ಜಲಮಾಲಿನ್ಯದ ಬಗ್ಗೆ ತಿಳುವಳಿಕೆ ಮೂಡಿಸುವುದು. ಸಂಘ-ಸಂಸ್ಥೆಗಳು ಜಲಮಾಲಿನ್ಯದ ಬಗ್ಗೆ ಕಾಳಜಿ ವಹಿಸುವಂತೆ ಅರಿವು ಮೂಡಿಸುವುದರ ಮೂಲಕ ಜಲಮಾಲಿನ್ಯವನ್ನು ನಿಯಂತ್ರಿಸಬಹುದು.

### 8.2.3. ಶಬ್ದ ಮಾಲಿನ್ಯ (Noise pollution):



ಅಹಿತಕರ ಪ್ರಮಾಣದ ಶಬ್ದವನ್ನು ಸಹ ಮಾಲಿನ್ಯವೆಂದು ಪರಿಗಣಿಸಲಾಗಿದೆ. ಇದಕ್ಕೆ ಕಾರಣ ಶಬ್ದದ ತೀವ್ರತೆ ದೈಹಿಕ, ಮಾನಸಿಕ ಒತ್ತಡ ಹಾಗೂ ಕಿರಿಕಿರಿಯನ್ನುಂಟು ಮಾಡುವುದು. ಶಬ್ದ ಮಾಲಿನ್ಯವೂ ಸಹ ಮಾನವನ ಕ್ರಿಯೆಗಳಿಂದಲೇ ಉಂಟಾಗುತ್ತದೆ.

ಶಬ್ದದ ತೀವ್ರತೆಯನ್ನು ಡೆಸಿಬಲ್ ಮಾಪನದಿಂದ ಅಳೆಯುವರು. ಸಾಮಾನ್ಯವಾಗಿ ಮಾತನಾಡುವಾಗ ಶಬ್ದದ ತೀವ್ರತೆ 60 ಡೆಸಿಬಲ್‌ಗಳು ಇರುತ್ತದೆ. ವಿವಿಧ ಶಬ್ದದ ತೀವ್ರತೆಯು ಉಂಟು ಮಾಡುವ ಪರಿಣಾಮಗಳು ಈ ರೀತಿ ಇದೆ.

| ಶಬ್ದದ ತೀವ್ರತೆ | ಪರಿಣಾಮ |
|---|---|
| 65 ಡೆಸಿಬಲ್ | ಸಾಧಾರಣ |
| 80 ಡೆಸಿಬಲ್ | ಕಿರಿಕಿರಿ |
| 88 ಡೆಸಿಬಲ್ | ಹೆಚ್ಚು ಕಾಲ ಕೇಳಿದರೆ ಕಿವುಡುತನ |
| 110 ಡೆಸಿಬಲ್ | ಸಹಿಸಲಾಸಾಧ್ಯ |
| 135 ಡೆಸಿಬಲ್ | ನೋವು |

ನಾಗರಿಕತೆ ಹಾಗೂ ಆಧುನಿಕ ಜೀವನದೊಡನೆ ಶಬ್ಧಮಾಲಿನ್ಯವು ಹಾಸು ಹೊಕ್ಕಾಗಿದೆ. ವಿವಿಧ ಬಗೆಯ ವಾಹನ, ವಾಹನ ದಟ್ಟನೆ, ಕೈಗಾರಿಕೆ, ಧ್ವನಿವರ್ಧಕಗಳು, ಜನರೇಟರ್‌ಗಳ ಬಳಕೆ, ಮನೆಗಳಲ್ಲಿ ಯಂತ್ರೋಪಕರಣಗಳ ಬಳಕೆ, ಪಟಾಕಿ ಸಿಡಿತ, ರಸ್ತೆ, ವಾಯು ಹಾಗೂ ರೈಲು ಸಾರಿಗೆ ಮುಂತಾದವು ಶಬ್ದಮಾಲಿನ್ಯದ ಮೂಲಗಳಾಗಿವೆ.

### ಶಬ್ದಮಾಲಿನ್ಯದ ಪರಿಣಾಮಗಳು (Impact of Sound pollution):

ಶಬ್ದಮಾಲಿನ್ಯಗಳು ಹಲವು ಪರಿಣಾಮಗಳನ್ನುಂಟು ಮಾಡುತ್ತದೆ. ಅವುಗಳು ಈ ಕೆಳಗಿನಂತಿವೆ.

1. ಶಬ್ದವು 120–150 ಡೆಸೆಬಲ್ ಹಾಗೂ ಅದಕ್ಕಿಂತ ಹೆಚ್ಚಿದ್ದಲ್ಲಿ ಉಸಿರಾಟ, ದೈಹಿಕ ನಿಯಂತ್ರಣ ತಪ್ಪುತ್ತದೆ. ವಾಂತಿ ಮತ್ತು ಕಿವುಡುತನಕ್ಕೆ ಕಾರಣವಾಗುವುದು.
2. ಶಬ್ದ ಮಾಲಿನ್ಯವು ಮಾನಸಿಕ ಸಮಸ್ಯೆಗಳಿಗೆ ಕಾರಣವಾಗುವುದು. ಕೆಲಸದಲ್ಲಿ ನಿರಾಸಕ್ತಿ ಮತ್ತು ತಪ್ಪುಗಳುಂಟಾಗುವುದು. ಶಬ್ದವು ಪಕ್ಷಿ ಹಾಗೂ ಪ್ರಾಣಿಗಳ ವರ್ತನೆಯ ಮೇಲೂ ಪರಿಣಾಮವನ್ನು ಬಿರುತ್ತದೆ.
3. ಹೃದಯ ಬಡಿತದ ಪ್ರಮಾಣವನ್ನು ಹೆಚ್ಚಿಸುತ್ತದೆ. ರಕ್ತದೊತ್ತಡ ಮತ್ತು ಇತರೆ ಹೃದಯ ಸಂಬಂಧಿ ರೋಗಗಳನ್ನು ಉಂಟು ಮಾಡುತ್ತದೆ.
4. ಮಾನಸಿಕ ಏಕಾಗ್ರತೆಗೆ ಧಕ್ಕೆ ತಂದು ಜ್ಞಾಪಕ ಶಕ್ತಿಯ ಕೊರತೆ ಮತ್ತು ನಾಶಕ್ಕೆ ಕಾರಣವಾಗುತ್ತದೆ.

### ಶಬ್ದಮಾಲಿನ್ಯದ ನಿಯಂತ್ರಣ ಕ್ರಮಗಳು (Measures to control Sound pollution):

ಶಬ್ದಮಾಲಿನ್ಯವನ್ನು ನಿಯಂತ್ರಿಸಲು ಅಥವಾ ಕಡಿಮೆ ಮಾಡಲು ಈ ಕೆಳಕಂಡ ಕೆಲವು ವಿಧಾನಗಳನ್ನು ಅಳವಡಿಸಿಕೊಳ್ಳಬೇಕಾಗಿದೆ.

1. ಕೈಗಾರಿಕೆಗಳಲ್ಲಿನ ಯಂತ್ರಗಳಿಗೆ ಶಬ್ದ ನಿರೋಧಕ ಹೊದಿಕೆಯನ್ನು ನಿರ್ಮಾಣ ಮಾಡುವುದು ಹಾಗೂ ಅಂತಹ ಕೈಗಾರಿಕೆಗಳನ್ನು ವಾಸಸ್ಥಾನದಿಂದ ದೂರದಲ್ಲಿ ಸ್ಥಾಪಿಸಬೇಕು.

2. ಅಧಿಕ ಮಟ್ಟದ ಶಬ್ದವನ್ನು ಕಡಿಮೆ ಮಾಡಲು ಶಬ್ದ ನಿಯಂತ್ರಣ ಗೋಡೆಗಳನ್ನು ನಿರ್ಮಾಣ ಮಾಡುವುದು.

3. ಸ್ವಾಭಾವಿಕ ಸಸ್ಯ ವರ್ಗವು ಶಬ್ದವನ್ನು ಹೀರಿಕೊಳ್ಳುವ ಅದ್ಭುತ ಶಕ್ತಿಯನ್ನು ಹೊಂದಿವೆ. ಆದುದರಿಂದ ಹೆದ್ದಾರಿಗಳುದ್ದಕ್ಕೂ ಮತ್ತು ಕೈಗಾರಿಕಾ ಪ್ರದೇಶಗಳ ಸುತ್ತಲೂ ಹೆಚ್ಚು ಹೆಚ್ಚು ಮರಗಳನ್ನು ಬೆಳೆಸಬೇಕು.

4. ಆಸ್ಪತ್ರೆಗಳು, ಗ್ರಂಥಾಲಯ ಮತ್ತು ಶಿಕ್ಷಣ ಸಂಸ್ಥೆಗಳ ಸಮೀಪದಲ್ಲಿ ನಿಶಬ್ದ ವಲಯವನ್ನು ನಿರ್ವಹಣೆ ಮಾಡಬೇಕಾಗುತ್ತದೆ.

5. ಶಿಕ್ಷಣ ಪಠ್ಯಕ್ರಮ ಮತ್ತು ಮಾಧ್ಯಮಗಳ ಮೂಲಕ ಶಬ್ದ ನಿಯಂತ್ರಣದ ಬಗ್ಗೆ ಜನರಲ್ಲಿ ಪ್ರಜ್ಞೆಯನ್ನು ಉಂಟು ಮಾಡಬೇಕು.

### 8.2.4. ಮಣ್ಣು ಮಾಲಿನ್ಯ (Soil pollution):



ಭೂಮಿಯ ಮೇಲ್ಮೈ ಪದರದಲ್ಲಿ ಸಾವಯವ ಮತ್ತು ಅಸಾವಯವ ವಸ್ತುಗಳಿಂದ ಕೂಡಿದ ಒಂದು ಪದರವಿದೆ ಇದನ್ನು ಮಣ್ಣು ಎಂದು ಕರೆಯಲಾಗುತ್ತದೆ. ಭೂಮಿಯ ಮೇಲೆ ಮಣ್ಣಿನ ಪದರವು ನೈಸರ್ಗಿಕ ಕ್ರಿಯೆಗಳಿಂದ ಕೋಟ್ಯಾಂತರ ವರ್ಷಗಳ ಅವಧಿಯಲ್ಲಿ ನಿರ್ಮಿತವಾಗಿದೆ. ಇದು ಸಸ್ಯಗಳ ಬೆಳವಣಿಗೆಗೆ ಅಗತ್ಯವಾದ ಪೋಷಕಾಂಶಗಳನ್ನು ಪೂರೈಸುವುದು. ಸಸ್ಯಗಳನ್ನು ಪೋಷಿಸುವ ಮಣ್ಣು ಜೈವಿಕ ಮಂಡಲದ ಅಸ್ಥಿತ್ವಕ್ಕೆ ಕಾರಣವಾಗಿರುವುದು.

ಮಾನವನ ಅನೇಕ ಕಾರ್ಯಗಳಿಂದ ಮಣ್ಣಿನಲ್ಲಿ ಉಂಟಾಗುವ ಹಲವಾರು ಬದಲಾವಣೆ ಹಾಗೂ ಗುಣಮಟ್ಟದಲ್ಲಿ ಹಾಳಾಗಿರುವಿಕೆಯನ್ನು ಮಣ್ಣಿನ ಮಾಲಿನ್ಯವೆಂದು ಕರೆಯುವರು. ಮಣ್ಣಿನ ಮಾಲಿನ್ಯವು ಉತ್ಪಾದನಾ ಶಕ್ತಿಯನ್ನು ಕುಂಠಿತಗೊಳಿಸಿ, ಅದರಲ್ಲಿನ ಜೀವಿಗಳನ್ನು ನಾಶಗೊಳಿಸಿ ಅದರ ಪುನರ್‌ನಿರ್ಮಾಣ ಕ್ರಿಯೆಯನ್ನು ಹಾಳು ಮಾಡುವುದು.

#### ಮಣ್ಣು ಮಾಲಿನ್ಯಕ್ಕೆ ಕಾರಣಗಳು :

ಮಣ್ಣಿನ ಸವೆತ, ಹೆಚ್ಚುವರಿ ನೀರಿನ ಬಳಕೆ, ಜೈವಿಕ ವ್ಯವಸ್ಥೆಯ ನಾಶ, ವಾಯುಮಾಲಿನ್ಯ, ರಾಸಾಯನಿಕ ಗೊಬ್ಬರ, ಔಷಧಿ ಮತ್ತು ಕೀಟನಾಶಕಗಳ ಬಳಕೆ, ಕೈಗಾರಿಕಾ ತ್ಯಾಜ್ಯಗಳು ಮತ್ತು ಕೃಷಿಯ ತ್ಯಾಜ್ಯಗಳು ಮಣ್ಣಿನ ಮಾಲಿನ್ಯವನ್ನು ಉಂಟು ಮಾಡುತ್ತವೆ.

**ಪರಿಣಾಮಗಳು (Impact of Soil pollution):**

ಪ್ರಕೃತಿಯು ಒಳಗೊಂಡಿರುವ ಅತಿ ಮುಖ್ಯ ಸಂಪನ್ಮೂಲಗಳಲ್ಲಿ ಮಣ್ಣು ಒಂದಾಗಿದೆ. ಇದರ ಮಾಲಿನ್ಯವು ಅನೇಕ ದುಷ್ಪರಿಣಾಮಗಳನ್ನುಂಟು ಮಾಡುತ್ತದೆ.

1. ಬೆಳೆಗಳ ಉತ್ಪಾದನೆ ಕಡಿಮೆಯಾಗುತ್ತದೆ.
2. ಕಲುಷಿತವಾದ ಮಣ್ಣಿನಿಂದ ಉತ್ಪಾದಿಸಿದ ಆಹಾರವು ಮಾನವನ ಆರೋಗ್ಯವನ್ನು ಹಾಳು ಮಾಡುತ್ತದೆ.
3. ಮಣ್ಣಿನ ಮಾಲಿನ್ಯದಿಂದ ಕೆಲವು ಪ್ರದೇಶಗಳಲ್ಲಿ ನೀರಿನ ಕೊರತೆ ಉಂಟಾಗಿ ಪ್ರಾಣಿಸಂಕುಲಗಳು ಸಾವನ್ನಪ್ಪುತ್ತವೆ.
4. ಮಣ್ಣಿನ ಮಾಲಿನ್ಯವು ಜಲಮಾಲಿನ್ಯಕ್ಕೆ ಕಾರಣವಾಗಿ ಮಣ್ಣಿನ ಸವೆತದಿಂದ ಜಲಾಶಯಗಳಲ್ಲಿ ಹೂಳು ತುಂಬುವುದು.

**ತಡೆಗಟ್ಟುವ ವಿಧಾನ (Preventine methods):**

ಭೂ ಮಾಲಿನ್ಯದ ನಿಯಂತ್ರಣ ಮಾಡಲು ಕೈಗಾರಿಕೆಗಳಿಂದ ಬರಲಾದ ತ್ಯಾಜ್ಯಗಳನ್ನು ಸಂಸ್ಕರಿಸಿ ಅವು ನೆಲವನ್ನು ಸೇರದಂತೆ ಮಾಡಬೇಕು. ಹಾಗೆಯೇ ಜೈವಿಕ ಮೂಲದಿಂದ ಬಂದ ಜೈವಿಕ ಕೀಟ ನಾಶಕಗಳು, ಜೈವಿಕ ಗೊಬ್ಬರಗಳನ್ನು ಬಳಸಲು ಉತ್ತೇಜಿಸಿ, ಮಣ್ಣಿನ ಮಾಲಿನ್ಯವನ್ನು ಕಡಿಮೆ ಮಾಡಬಹುದು. ಮಲಿನಯುಕ್ತ ಮಣ್ಣಿನ ಸಂಸ್ಕರಣೆಗಾಗಿ ಜೈವಿಕ ಪರಿಹಾರ ಕಾರ್ಯವನ್ನು ಕೈಗೊಳ್ಳಬಹುದು.

1. ಅರಣ್ಯ ನಾಶವನ್ನು ತಡೆಗಟ್ಟುವುದು.
2. ರಾಸಾಯನಿಕ ಗೊಬ್ಬರಗಳಿಗೆ ಬದಲಾಗಿ ಜೈವಿಕ ಗೊಬ್ಬರಗಳ ಬಳಕೆ.
3. ದುಷ್ಪರಿಣಾಮ ಬೀರುವಂತಹ ಡಿಡಿಟಿ ಎಂಡೋಸಲ್ಫಾನ್‌ಗಳಂತಹ ಕೀಟನಾಶಕಗಳನ್ನು ಬಳಸದಿರುವುದು.
4. ಯೋಜಿತ ಪ್ರಮಾಣದಲ್ಲಿ ನೀರನ್ನು ಬಳಸುವುದು.
5. ಮಣ್ಣಿನ ಸವೆತವನ್ನು ನಿಯಂತ್ರಿಸಲು, ಅಡ್ಡಗಟ್ಟೆಗಳನ್ನು ನಿರ್ಮಿಸಿ, ಫಲವತ್ತತೆಯನ್ನು ಕಾಪಾಡಲು ಬೆಳೆಗಳ ಪರ್ಯಾಯ ಪದ್ಧತಿಯನ್ನು ಅನುಸರಿಸುವುದು.

ಭಾರತದಲ್ಲಿ ಮಣ್ಣಿನ ಮಾಲಿನ್ಯವನ್ನು ತಡೆಗಟ್ಟಲು ಮತ್ತು ಅದರ ಫಲವತ್ತತೆಯನ್ನು ಕಾಪಾಡಲು ಮಣ್ಣು ಸಂರಕ್ಷಣಾ ಮಂಡಳಿ ಮತ್ತು ಒಣ ಪ್ರದೇಶಗಳ ಅಭಿವೃದ್ಧಿ ಮಂಡಳಿಗಳನ್ನು ಸ್ಥಾಪಿಸಲಾಗಿದೆ.

### 8.2.5. ಮಾಲಿನ್ಯದ ಮೂಲಗಳು (Sources of pollution):

**ಅಣುವಿಕಿರಣ ಮಾಲಿನ್ಯ (Automic Radiation pollution):**

ಕೆಲವು ಮೂಲ ವಸ್ತುಗಳು ತಾವೇ ತಾವಾಗಿ ಚೈತನ್ಯವನ್ನು ಹೊರ ಚೆಲ್ಲುತ್ತವೆ. ಈ ಗುಣವನ್ನು ವಿಕಿರಣಶೀಲತೆ



ಎನ್ನುವರು. ಯುರೇನಿಯಂ 238, ಥೋರಿಯಂ 234, ರೇಡಿಯಂ 224, ಪೊಲೊನಿಯಂ 216 ಮೊದಲಾದ ಐಸೋಟೊಪುಗಳು ವಿಕಿರಣಶೀಲ ವಸ್ತುಗಳಾಗಿವೆ.

ಅಣುಶಕ್ತಿಯನ್ನು ಕೈಗಾರಿಕಾ ಉದ್ದೇಶಕ್ಕಾಗಿ ಹಾಗೂ ಅಣ್ವಸ್ತ್ರಗಳ ತಯಾರಿಕೆಗಾಗಿ ಬಳಸಲು ಆರಂಭಿಸಿದಂದಿನಿಂದ ಅಣುವಿಕಿರಣದ ಮೂಲಕ ಪರಿಸರ ಮಾಲಿನ್ಯವಾಗತೊಡಗಿದೆ. ಅಣುವಿಕಿರಣದ ಪ್ರಕ್ರಿಯೆಯಲ್ಲಿ ಸೂಕ್ಷ್ಮವಾದ ಅಲ್ಫಾ ಮತ್ತು ಬೀಟಾದಂತಹ ಕಣಗಳು ಮತ್ತು ಗಾಮಾ ಕಿರಣಗಳು ಹೊರಸೂಸಲ್ಪಡುತ್ತಿದ್ದು ಇವುಗಳಿಂದ ವಾತಾವರಣವು ಮಲಿನಗೊಳ್ಳುವುದು. ಅಣುವಿಕಿರಣವು ಪ್ರಾಣಿಗಳಿಗೆ ಹಾಗೂ ಸಸ್ಯ ಜಗತ್ತಿಗೆ ಅಪಾರವಾದ ಹಾನಿಯನ್ನುಂಟು ಮಾಡುತ್ತವೆ. ವಾಯುಮಂಡಲ ಮಾಲಿನ್ಯ ಹೊಂದುವುದು ಹಾಗೂ ಅಣುವಿಕಿರಣವು ದೀರ್ಘ ಕಾಲದವರೆಗೆ ಕೆಟ್ಟ ಪರಿಣಾಮಗಳನ್ನು ಬೀರುವುದು. ಶಾಶ್ವತ ಅಂಗ ವೈಕಲ್ಯ, ಕ್ಯಾನ್ಸರ್ ರೋಗ ಮುಂತಾದ ರೋಗಗಳನ್ನು ಉಂಟು ಮಾಡುವುದು. ವೈದ್ಯಕೀಯ ಕ್ಷೇತ್ರದಲ್ಲಿ ಹೆಚ್ಚಾಗಿ ಉಪಯೋಗಿಸುವುದರಿಂದ ದೇಹಕ್ಕೆ ಹಾನಿಯುಂಟಾಗುವುದು. ಅಣ್ವಸ್ತ್ರಗಳ ಪ್ರಥಮ ಪ್ರಯೋಗವನ್ನು ಮಾಡಿದಾಗ ಅಂದರೆ ಎರಡನೇ ಮಹಾಯುದ್ಧದ ಸಮಯದಲ್ಲಿ ಜಪಾನಿನ ಹಿರೋಶಿಮಾ ಮತ್ತು ನಾಗಾಸಾಕಿಗಳ ಮೇಲೆ ಅಣುಬಾಂಬನ್ನು ಹಾಕಿದ್ದರ ಪರಿಣಾಮ 2.14.000 ಮಂದಿ ಒಂದೇ ಬಾರಿಗೆ ಮರಣ ಹೊಂದಿದರು.

ವಿಕಿರಣ ಮಾಲಿನ್ಯವನ್ನು ತಡೆಗಟ್ಟುವ ಪ್ರಯತ್ನದಲ್ಲಿ ವೈಜ್ಞಾನಿಕವಾಗಿ ಮತ್ತು ತಾಂತ್ರಿಕವಾಗಿ ಮುಂದುವರೆದ ಅಣ್ವಸ್ತ್ರಗಳನ್ನು ಬಳಸುತ್ತಿರುವ ದೇಶಗಳು ಕಾರ್ಯಪ್ರವೃತ್ತರಾಗಿ, ಇದರ ದೂರಗಾಮಿ ಪರಿಣಾಮಗಳ ಬಗ್ಗೆ ಜಾಗೃತಿ ವಹಿಸಬೇಕಾಗಿದೆ. ಅಣುವಿದ್ಯುತ್ ಕೇಂದ್ರ ಅಣು ಸ್ಥಾವರಗಳಲ್ಲಿ ಆಧುನಿಕ ರಕ್ಷಣಾ ಕಾರ್ಯಗಳನ್ನು ಕೈಗೊಂಡು ವಿಕಿರಣ ಸೋರಿಕೆಯನ್ನು ತಡೆಗಟ್ಟಬೇಕು.

ಅಣುವಿದ್ಯುತ್ ಸ್ಥಾವರಗಳಿಂದ ಹೊರ ಬರುವ ತ್ಯಾಜ್ಯವನ್ನು ಸಂಪೂರ್ಣವಾಗಿ ಸಂಸ್ಕರಿಸಿ ವಿಕಿರಣ ರಹಿತವನ್ನಾಗಿಸಿದ ನಂತರ ಹೊರಬಿಡಬೇಕು. ಪರಮಾಣು ರಿಯಾಕ್ಟರ್‌ಗಳಲ್ಲಿ ವಿಕಿರಣಶೀಲ ವಸ್ತುಗಳನ್ನು ಬಳಸುವಾಗ ಬಹಳ ಎಚ್ಚರಿಕೆ ವಹಿಸಬೇಕು. ಯುದ್ಧಗಳು ಸಂಭವಿಸದಂತೆ ನೋಡಿಕೊಂಡು ದ್ವಿಪಕ್ಷೀಯ ಸಾಮರಸ್ಯದ ಮಾತುಕತೆಯ ಮೂಲಕ ವಿವಾದಗಳನ್ನು ಬಗೆಹರಿಸಿಕೊಳ್ಳಬೇಕು.

### 2. ತಾಪ ಮಾಲಿನ್ಯ (Thermal Pollution):



ತಾಪ ಮಾಲಿನ್ಯ ಜೈವಿಕ ಅಸಮತೋಲನಕ್ಕೆ ಕಾರಣವಾಗುವುದು. ಕೈಗಾರಿಕೆಗಳು, ವಾಹನಗಳು ಮತ್ತು ವಿದ್ಯುತ್ ಸ್ಥಾವರಗಳಲ್ಲಿ ಯಂತ್ರಗಳ ಉಷ್ಣತೆಯನ್ನು ಕಡಿಮೆ ಮಾಡಲು ನೀರನ್ನು ಬಳಸಲಾಗುತ್ತದೆ. ಬಿಸಿಯಾದ ನೀರು ಮತ್ತು ತ್ಯಾಜ್ಯ ವಸ್ತುಗಳನ್ನು ಯಾವುದೇ ಸಂಸ್ಕರಣೆ ಇಲ್ಲದೇ ನದಿಗಳಿಗೆ ಬಿಟ್ಟರೆ ಜಲಚರಗಳ ಉಳಿವು ಮತ್ತು ಅಸ್ಥಿತ್ವಕ್ಕೆ ಅಪಾಯ

ಉಂಟಾಗುವುದು. ಬಿಸಿ ನೀರಿನಿಂದ ಜಲಚರಗಳಿಗೆ ಉಂಟಾಗುವ ದುಷ್ಪರಿಣಾಮವನ್ನು ತಾಪ ಮಾಲಿನ್ಯ ಎಂದು ಕರೆಯಲಾಗಿದೆ. ಇಂತಹ ಮಾನವ ಸೃಷ್ಟಿಯ ಪಾಪಗಳಿಂದ ನೀರಿನಲ್ಲಿ ಆಮ್ಲಜನಕದ ಪ್ರಮಾಣ ಕಡಿಮೆಯಾಗಿ ಜಲಚರಗಳು ಉಸಿರುಗಟ್ಟಿ ಸಾಯುತ್ತವೆ.

### 3. ಕ್ರಿಮಿನಾಶಕಗಳ ಮಾಲಿನ್ಯ (Pesticide pollution):



ಕೃಷಿ ಮತ್ತು ಮನೆಗಳಲ್ಲಿನ ಬ್ಯಾಕ್ಟೀರಿಯಾ, ಕ್ರಿಮಿ ಕೀಟಗಳನ್ನು ನಿಯಂತ್ರಿಸಲು ಬಳಸುವ ಕ್ರಿಮಿ ಮತ್ತು ಕೀಟ ನಾಶಕಗಳಿಂದ ಉಂಟಾಗುವ ವ್ಯತಿರಿಕ್ತ ಪರಿಣಾಮಗಳನ್ನು ಕ್ರಿಮಿನಾಶಕಗಳ ಮಾಲಿನ್ಯ ಎಂದು ಕರೆಯಲಾಗಿದೆ. ಡಿಡಿಟಿಯಂತಹ ವಿಷಕಾರಿ ಕ್ರಿಮಿನಾಶಕದ ಬಳಕೆಯನ್ನು ಅಮೇರಿಕಾ 1972ರಲ್ಲಿಯೇ ರದ್ದು ಮಾಡಿದೆ. ಆದರೆ ಅಮೇರಿಕಾ ಹೊರತುಪಡಿಸಿ ಜಗತ್ತಿನ ಬಹುತೇಕ ರಾಷ್ಟ್ರಗಳಲ್ಲಿ ಇದನ್ನು ಬಳಸಲಾಗುತ್ತದೆ. ಕ್ರಿಮಿ ನಾಶಕಗಳ ದೂರಗಾಮಿ ಪರಿಣಾಮಗಳನ್ನು ಊಹಿಸಲಾಗದು.

### 4. ಘನತ್ಯಾಜ್ಯ ವಸ್ತುಗಳಿಂದ ಮಾಲಿನ್ಯ :



ಮಾನವ ಬಳಸಿ ಬಿಸಾಡುವ ಗೃಹೋಪಯೋಗಿ ವಸ್ತುಗಳು ಮತ್ತು ಅವುಗಳ ಸಂಸ್ಕರಣೆಯಿಂದ ಉಂಟಾಗುವ ಮಾಲಿನ್ಯವೇ ಘನತ್ಯಾಜ್ಯ ವಸ್ತುಗಳಿಂದಾಗುವ ಮಾಲಿನ್ಯವಾಗಿದೆ. ಪ್ರಪಂಚದಲ್ಲಿ ಬಳಸಿ ಬಿಸಾಡುವ, ಉಪಯೋಗಕ್ಕೆ ಬಾರದ ಘನ ಸ್ವರೂಪದ ತ್ಯಾಜ್ಯ ವಸ್ತುಗಳನ್ನು ಒಂದು ಕಿ.ಮೀ ವ್ಯಾಸವುಳ್ಳ ಪ್ರದೇಶದಲ್ಲಿ ಶಂಕುವಿನಾಕಾರದಲ್ಲಿ ರಾಶಿ ಹಾಕುತ್ತಾ ಬಂದರೆ ಒಂದೇ ವರ್ಷದಲ್ಲಿ ಮೌಂಟ್ ಎವರೆಸ್ಟ್ ಶಿಖರವನ್ನು ಮೀರಿಸಬಹುದು ಎಂದು ಅಂದಾಜು ಮಾಡಲಾಗಿದೆ. ವಿಶ್ವದಲ್ಲಿ ಪ್ರತಿ ವರ್ಷ 1000 ಟನ್ನುಗಳಷ್ಟು ಘನರೂಪದ ತ್ಯಾಜ್ಯ ವಸ್ತುಗಳನ್ನು ಎಸೆಯುತ್ತಿದ್ದೇವೆ.

ನಗರದ ರಸ್ತೆ, ಚರಂಡಿ, ಮೈದಾನ, ಉದ್ಯಾನವನ, ರೈಲ್ವೆನಿಲ್ದಾಣ, ಬಸ್ ನಿಲ್ದಾಣ, ಸಾರ್ವಜನಿಕ ಸಮಾರಂಭಗಳು ನಡೆಯುವ ಸ್ಥಳಗಳಲ್ಲಿ ಎಸೆಯುವ ಘನ ತ್ಯಾಜ್ಯಗಳನ್ನು ಅಂದಾಜು ಮಾಡಿದರೆ ಜಗತ್ತಿನಾದ್ಯಂತ ಪ್ರತಿ ವರ್ಷ 15,000 ಕೋಟಿ ಕ್ಯಾನ್‌ಗಳು, 8 ಕೋಟಿ ಟನ್ನುಗಳಷ್ಟು ಬಾಟಲ್‌ಗಳು, 15 ಕೋಟಿ ಟನ್ನುಗಳಷ್ಟು ಪೇಪರ್, ಪ್ಲಾಸ್ಟಿಕ್, ಮತ್ತಿತರ ತ್ಯಾಜ್ಯ ವಸ್ತುಗಳನ್ನು ಅವೈವಿಜ್ಞಾನಿಕವಾಗಿ ಎಸೆಯುವ ಮೂಲಕ ಘನ ತ್ಯಾಜ್ಯ ವಸ್ತುಗಳಿಂದ ಉಂಟಾಗುವ ಮಾಲಿನ್ಯಕ್ಕೆ ಮಾನವ ಕಾರಣನಾಗಿದ್ದಾನೆ.

ಗೃಹ ಬಳಕೆ, ಕೈಗಾರಿಕೆಗಳು, ಕೃಷಿ ಮತ್ತು ವಾಣಿಜ್ಯೋದ್ದೇಶಗಳ ಕಾರ್ಯಗಳಿಂದ ಹೊರಬೀಳುವ ಘನ ತ್ಯಾಜ್ಯ ವಸ್ತುಗಳು ಪರಿಸರಕ್ಕೆ ಹಾನಿಯಾಗದಂತೆ ಮರು ಬಳಕೆ ಮಾಡಿಕೊಳ್ಳಬೇಕಾದ ಹೊಣೆಗಾರಿಕೆಯು ಆಧುನಿಕ ಸಮಾಜದ ಮೇಲಿದೆ. ಯಾವುದೇ ವಸ್ತುಗಳ ಉತ್ಪಾದನಾ ಹಂತದಲಿಯೇ ಘನತ್ಯಾಜ್ಯಗಳನ್ನು ನಿಯಂತ್ರಿಸಬೇಕು. ತ್ಯಾಜ್ಯಗಳನ್ನು ವಿಂಗಡಿಸಿ ಸಂಸ್ಕರಿಸುವ ಹಾಗೂ ಕಾಂಪೋಸ್ಟ್ ತಯಾರಿಕೆಯ ಮೂಲಕ ಮರು ಬಳಕೆಗೆ

ಪೂರಕವಾಗಿಸಿಕೊಳ್ಳಬೇಕು. ಅನುಪಯುಕ್ತ ಘನ ತ್ಯಾಜ್ಯಗಳನ್ನು ಹಾನಿಕಾರಕವಾಗದ ರೀತಿಯಲ್ಲಿ ವಿಲೇವಾರಿ ಮಾಡುವಂತಹ ತಾಂತ್ರಿಕತೆಯನ್ನು ಅಭಿವೃದ್ಧಿ ಪಡಿಸಬೇಕು.

### 5. ಸಾಗರ ಮಾಲಿನ್ಯ (Ocean pollution):



ಸಾಗರಗಳ ನೀರು ಸಹ ಮಾಲಿನ್ಯತೆಯಿಂದ ಮುಕ್ತವಾಗಿಲ್ಲ. ಸಾಗರಗಳಿಗೆ ಸೇರುವ ಕೈಗಾರಿಕಾ ತ್ಯಾಜ್ಯಗಳು ರಾಸಾಯನಿಕಗಳು ಹಾಗೂ ಪೆಟ್ರೋಲಿಯಂ ಸಾಗಿಸುವ ಹಡಗುಗಳಿಂದ ಸೋರುವ ತೈಲಗಳು ಸಾಗರದ ಜೈವಿಕ ಪರಿಸರದ ವ್ಯವಸ್ಥೆಯನ್ನು ಅಸಮತೋಲನವನ್ನುಂಟು ಮಾಡುತ್ತದೆ. ಸಮುದ್ರದಲ್ಲಿರುವ ಜಲಚರ ಸಸ್ಯಗಳಿಗೆ ಮತ್ತು ಪ್ರಾಣಿಗಳಿಗೆ ಬದುಕಲು ಸಾಧ್ಯವಾಗದ ಪರಿಸರವಾಗಿ ಮಾರ್ಪಟ್ಟಿದೆ. ಮಾನವ ಕೇಂದ್ರಿತ ಚಟುವಟಿಕೆಗಳ ಮೂಲಕ ಮಾಲಿನ್ಯದ ವಸ್ತುಗಳು ಸಮುದ್ರಕ್ಕೆ ಸೇರಿ ಅದರ ಸ್ವರೂಪವನ್ನು ಬದಲಾಯಿಸಿ ಜೀವಿಗಳಿಗೆ ಬದುಕಲು ಅನುಪಯುಕ್ತವಾಗಿಸುವುದೇ ಸಾಗರ ಮಾಲಿನ್ಯ ಎಂದು ಕರೆಯಲಾಗಿದೆ.

ಕೈಗಾರಿಕೆಗಳು, ಜನವಸತಿ ಪ್ರದೇಶಗಳ ಹಾಗೂ ಚರಂಡಿಯ ಮೂಲಕ ಹರಿಯುವ ತ್ಯಾಜ್ಯಗಳು ಮತ್ತು ತೈಲ ಮಾಲಿನ್ಯವು ಸಾಗರ ಮಾಲಿನ್ಯಕ್ಕೆ ಕಾರಣವಾಗಿವೆ. ಆದ್ದರಿಂದ ಕೈಗಾರಿಕೆಗಳು ಗೃಹ ಬಳಕೆ ಮತ್ತು ಚರಂಡಿಗಳ ಮೂಲಕ ಬರುವ ತ್ಯಾಜ್ಯಗಳನ್ನು ಸಾಗರಗಳಿಗೆ ಬಿಡದಂತೆ ಎಚ್ಚರಿಕೆ ವಹಿಸುವ ಮೂಲಕ ಸಾಗರ ಮಾಲಿನ್ಯವನ್ನು ತಡೆಗಟ್ಟಬಹುದು. ತೈಲ ಸಾಗಾಣಿಕೆಯ ಹಡಗುಗಳಲ್ಲಿ ತೈಲ ಸೋರದಂತೆ ಆಧುನಿಕ ರಕ್ಷಣಾ ಕ್ರಮಗಳನ್ನು ಅಳವಡಿಸಿಕೊಳ್ಳಬೇಕು.

### ಪರಿಸರದ ಕೆಲವು ವಿದ್ಯಮಾನಗಳು

### 8.4 ಜಾಗತಿಕ ತಾಪಮಾನ (Global Warming):




ಜೀವಿಗಳ ಉಗಮ ಮತ್ತು ಪೋಷಿಸುವ ಕಾರ್ಯಕ್ಕೆ ಭೂಮಿ ಮೂಲಸೆಲೆಯಾಗಿದೆ. ವಾತವರಣದಲ್ಲಿ ಸಂಗ್ರಹವಾಗುವ ನೀರಾವಿ, ಇಂಗಾಲದ ಡೈ ಆಕ್ಸೈಡ್, ಮೀಥೇನ್ ಮುಂತಾದ ಅನಿಲಗಳು ಭೂಮಿಯ ವಾತಾವರಣದೊಳಗಿನ ಶಾಖವನ್ನು ಹೊರಹೋಗಲು ಬಿಡದೆ ಮತ್ತೆ ಭೂಮಿಗೆ ವಾಪಸ್ಸು ಹೋಗುವಂತೆ ಮಾಡಿದಾಗ ಭೂಮಿಯು ತಾಪಮಾನ ಹೆಚ್ಚಾಗುತ್ತದೆ. ಜನಸಂಖ್ಯೆಯ ಹೆಚ್ಚಳ, ಪರಿಸರದ ಅಸಮರ್ಪಕ ನಿರ್ವಹಣೆ, ಸಂಪನ್ಮೂಲಗಳ ಅತಿಯಾದ ಬಳಕೆ,

ಅರಣ್ಯ ನಾಶ, ರಾಸಾಯನಿಕ ಗೊಬ್ಬರ, ಕ್ರಿಮಿನಾಶಕ, ತ್ಯಾಜ್ಯಗಳನ್ನು ಭೂಮಿಯ ನೀರಿನಲ್ಲಿ ಎಸೆಯುವುದು, ಕೈಗಾರಿಕೆಗಳ ಮಾಲಿನ್ಯ, ಪೆಟ್ರೋಲಿಯಂ ಇಂಧನಗಳನ್ನು ಉರಿಸಿದಾಗ ಉಂಟಾಗುವ ವಾಯುಮಾಲಿನ್ಯ ಮುಂತಾದವು ಜಾಗತಿಕ ತಾಪಮಾನದ ಏರಿಕೆಗೆ ಕಾರಣವಾಗಿದೆ.

ಜಾಗತಿಕ ತಾಪಮಾನದಿಂದ ಸಮುದ್ರ ಮತ್ತು ನದಿಗಳ ನೀರು ಆವಿಯಾಗಿ ಮಣ್ಣಿನ ತೇವಾಂಶ ಕಡಿಮೆಯಾಗಿ ಸಸ್ಯ ಮತ್ತು ಜೀವಿ ಸಂಕುಲಕ್ಕೆ ನೀರು ಸಿಗದೇ ಸಾವನ್ನಪ್ಪುವ ಸಾಧ್ಯತೆ ಇದೆ. ಅನಿರೀಕ್ಷಿತ ಮಳೆ, ಪ್ರವಾಹಗಳು ಉಂಟಾಗಿ ಹೊಸ ಸಾಂಕ್ರಾಮಿಕ ರೋಗಗಳು ಸೃಷ್ಟಿಯಾಗುತ್ತವೆ. ಜಾಗತಿಕ ತಾಪಮಾನವು ವಾಯು ಚಲನೆ, ಸಮುದ್ರ ಮತ್ತು ವಾತಾವರಣದ ಉಷ್ಣ ಚಲನೆಯ ಮೇಲೆ ಪರಿಣಾಮ ಬೀರಿ ಇಡೀ ನೈಸರ್ಗಿಕ ವ್ಯವಸ್ಥೆಯನ್ನೇ ಗಂಡಾಂತರಕ್ಕೀಡು ಮಾಡುವುದು.

ಜಾಗತೀಕ ತಾಪಮಾನ ಮತ್ತು ಹಸಿರು ಮನೆ ಪರಿಣಾಮವನ್ನು ತಡೆಗಟ್ಟುವುದು ನಾಗರಿಕ ಜಗತ್ತಿನ ಜವಾಬ್ದಾರಿಯಾಗಿದೆ. ವಾತಾವರಣವನ್ನು ಸೇರುತ್ತಿರುವ ಹಸಿರುಮನೆ ಅನಿಲಗಳನ್ನು ಕಡಿಮೆ ಪ್ರಮಾಣದಲ್ಲಿ ಹೋಗುವಂತೆ ಮಾಡುವುದು. ಅರಣ್ಯೀಕರಣವನ್ನು ಅಭಿವೃದ್ಧಿ ಪಡಿಸಬೇಕು. ಇಂಧನಗಳ ಅತಿಯಾದ ಬಳಕೆಯ ಮೇಲೆ ನಿಯಂತ್ರಣ ಹೇರಬೇಕು. ಕ್ಲೋರೋಫ್ಲೋರೋ ಕಾರ್ಬನ್‌ಗಳಂತಹ ರಾಸಾಯನಿಕಗಳನ್ನು ನಿಷೇಧಿಸಬೇಕು. ಎಲ್ಲದಕ್ಕಿಂತಲೂ ಮುಖ್ಯವಾಗಿ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವುದರ ಮೂಲಕ ಜಾಗತಿಕ ತಾಪಮಾನದ ಪರಿಣಾಮವನ್ನು ನಿಯಂತ್ರಿಸುವುದು.

### 8.2.5.4. ಹಸಿರು ಮನೆ ಪರಿಣಾಮ (Green House effect)




ಹಸಿರು ಮನೆ ಪರಿಣಾಮ ಎಂಬ ವಿದ್ಯಮಾನವು ಪರಿಸರಕ್ಕೆ ಸಂಬಂಧಿಸಿದ ಗಂಭೀರ ಸವಾಲಾಗಿದೆ. ಭೂಜ್ವರ ಎಂದು ಕರೆಯಲ್ಪಡುವ ಈ ಮಾನವ ನಿರ್ಮಿತ ಸಮಸ್ಯೆ ಭವಿಷ್ಯದಲ್ಲಿ ದೊಡ್ಡ ಗಂಡಾಂತರ ತರುತ್ತದೆ. ಅರಣ್ಯನಾಶವೇ ಈ ಸಮಸ್ಯೆಗೆ ಮೂಲ ಕಾರಣವಾಗಿದೆ. ಕಾರ್ಬನ್ ಡೈ ಆಕ್ಸೈಡ್, ಮಿಥೇನ್, ಕಾರ್ಬನ್ ಮೊನಾಕ್ಸೈಡ್, ನೈಟ್ರಿಕ್ ಆಕ್ಸೈಡ್ ಮುಂತಾದವುಗಳಿಂದ ಭೂಮಿಯ ಉಷ್ಣತೆ ಹೆಚ್ಚುತ್ತದೆ. ಇದನ್ನು ಕಂಡು ಹಿಡಿದ ವಿಜ್ಞಾನಿ ಜೋಸೆಫ್ ಪ್ಯೂರಿಯರ್ ಎಂಬಾತನು ಹಸಿರು ಮನೆ ಪರಿಣಾಮ ಎಂದು ಕರೆದಿದ್ದಾನೆ. ಪರಿಸರ ತಜ್ಞರು ಹೇಳುವಂತೆ ವಾತಾವರಣದಲ್ಲಿ ಕಾರ್ಬನ್ ಡೈ ಆಕ್ಸೈಡ್ ನಿರಂತರವಾಗಿ ಸೋರಿಕೆಯಾಗುತ್ತಿರುವುದರಿಂದ ಭೂಮಿಯ ಸರಾಸರಿ ಉಷ್ಣತೆಯಲ್ಲಿ ಹೆಚ್ಚಳವಾಗುವುದು. ಜೋಸೆಫ್ ಪ್ಯೂರಿಯರ್ ಹಸಿರು ಮನೆಯ ದುಷ್ಪರಿಣಾಮಗಳ ಬಗ್ಗೆ ಜಗತ್ತಿಗೆ ಎಚ್ಚರಿಕೆ ನೀಡಿದ್ದಾನೆ.

ಸೂರ್ಯನ ಬೆಳಕು ಭೂಮಿಯನ್ನು ತಲುಪಿದಾಗ ಸಸ್ಯಗಳಲ್ಲಿ ದ್ಯುತಿ ಸಂಶ್ಲೇಷಣೆ ಆಗುವಿಕೆ, ನೀರು ಆವಿಯಾಗುವಿಕೆ, ಭೂಮೇಲ್ಮೈ ಬಿಸಿಯಾಗುವಿಕೆ ಮುಂತಾದುವುಗಳು ಘಟಿಸುತ್ತವೆ. ಇಂತಾಹ ಕ್ರಿಯೆಗಳಿಗೆ ಸೂರ್ಯನ ಬೆಳಕು ಅತ್ಯಗತ್ಯ ಸಾಮಾನ್ಯವಾಗಿ ಭೂಮಿಗೆ ತಲುಪುವ ಶಾಖವು ಆಗಸಕ್ಕೆ ವಾಪಾಸಾಗಿ ಹರಡುತ್ತದೆ. ಆದರೆ ಭೂಮಿಗೆ ಬಂದ ಅತಿನೇರಳೆ ಕಿರಣಗಳನ್ನು ವಾತಾವಾರಣದಲ್ಲಿಯ ಇಂಗಾಲದ ಡೈ ಆಕ್ಸೈಡ್ ಹೀರಿಕೊಂಡು ಹೊರಗೆ ಬಿಡುವುದಿಲ್ಲ. ಇಂತಹ ಪ್ರಕ್ರಿಯೆಯಿಂದ ಭೂಮಿಯ ತಾಪಮಾನ ಹೆಚ್ಚುತ್ತದೆ.

ಹಸಿರು ಮನೆ ಪರಿಣಾಮದಿಂದ ಭೂಮಿಯ ತಾಪಮಾನ ಹೆಚ್ಚುತ್ತಿದ್ದು ಪರಿಸರಕ್ಕೆ ಹೊಂದಿಕೊಂಡು ಜೀವಿಸುತ್ತಿರುವ ಜೀವಿಗಳ ಅಸ್ತಿತ್ವಕ್ಕೆ ಧಕ್ಕೆ ಉಂಟಾಗುತ್ತದೆ. ವಾತಾವರಣ ಮತ್ತು ಮಳೆಯ ಪ್ರಮಾಣದಲ್ಲಿ ವ್ಯತ್ಯಯಗಳು ಉಂಟಾಗಿ ರೈತರು ತೀವ್ರವಾದ ಹಾನಿಗೊಳಗಾಗುತ್ತಾರೆ. ಸಮುದ್ರದ ನೀರಿನ ಮಟ್ಟ, ನದಿ, ನೀರಿನ ಪ್ರಮಾಣ ಮತ್ತು ಕಾಡುಗಳ ಮೇಲೆ ಗಂಭೀರವಾದ ವ್ಯತ್ಯಾಸಗಳಾಗಿ ಮಾನವನ ಜೀವನ ಸಂಕಷ್ಟಕ್ಕೆ ಗುರಿಯಾಗಿದೆ.

ಹಸಿರು ಮನೆ ಪರಿಣಾಮದ ನಿಯಂತ್ರಣವು ಎಲ್ಲಾ ರಾಷ್ಟ್ರಗಳ ಕರ್ತವ್ಯವಾಗಿದೆ. ಈ ಬಗ್ಗೆ ವಿಶ್ವಸಂಸ್ಥೆಗೂ ತನ್ನದೇ ಆದ ಕಾಳಜಿಯಿದೆ.

1. ಹಸಿರು ಮನೆ ಅನಿಲಗಳನ್ನು ಹೀರಿಕೊಳ್ಳುವ ಅರಣ್ಯವನ್ನು ಅಭಿವೃದ್ಧಿಗೊಳಸಬೇಕು.
2. ಸಮುದ್ರ ಏರುವಿಕೆ, ತಾಪಮಾನ ಏರಿಕೆಯ ಆಪತ್ತುಗಳನ್ನು ಗುರುತಿಸಿ ರಾಷ್ಟ್ರ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಕ್ರಮ ಕೈಗೊಳ್ಳುವುದು.
3. ಯೋಜನಾ ಬದ್ಧ ಜಲ ಮತ್ತು ಕೃಷಿ ನಿರ್ವಹಣಾ ನೀತಿಯನ್ನು ರೂಪಿಸುವುದು

ಜಾಗತಿಕ ತಾಪಮಾನದ ಏರಿಕೆ ಮತ್ತು ಹಸಿರು ಮನೆ ಪರಿಣಾಮಕ್ಕೆ ಮುಂದುವರೆದ ಮತ್ತು ಕೈಗಾರಿಕಾ ಪ್ರಧಾನ ದೇಶಗಳೇ ಹೊಣೆಯಾಗಿವೆ. ಸಾರ್ವಜನಿಕರು ಸರ್ಕಾರ ಮತ್ತು ಜಗತ್ತಿನ ಎಲ್ಲಾ ರಾಷ್ಟ್ರಗಳು ಈ ಬಗ್ಗೆ ಕಾರ್ಯ ಪ್ರವೃತ್ತರಾದಾಗ ಮಾತ್ರ ಈ ಸಮಸ್ಯೆಯ ದೂರಗಾಮಿ ಪರಿಣಾಮಗಳನ್ನು ನಿಯಂತ್ರಸಬಹುದು.

## ಓಝೋನ್ ಪದರ ವಿನಾಶ (Ozone Depletion)

1982 ರಲ್ಲಿ 'ಫಾರ್‌ಮನ್' ಎಂಬ ವಿಜ್ಞಾನಿಯು ಅಂಟಾರ್ಟಿಕ್ ಭೂ ಖಂಡದ ಮೇಲಿರುವ ಓಝೋನ್ ಪದರದಲ್ಲಿ ರಂಧ್ರವೊಂದು ಸೃಷ್ಟಿಯಾಗಿರುವುದನ್ನು ವರದಿ ಮಾಡಿದನು. ಭೂಮಿಯ ಸ್ತರಗೋಳ ಎಂಬ ವಾತಾವರಣ ಪ್ರದೇಶದಲ್ಲಿರುವ ಓಝೋನ್ ಎಂಬ ನೈಸರ್ಗಿಕ ಅನಿಲದ ಪೊರೆ ಸೂರ್ಯನಿಂದ ಬರುವ ಹಾನಿಕಾರಕ ಅತಿ ನೇರಳೆ ಕಿರಣಗಳನ್ನು ಭೂವಾತಾವರಣ ಪ್ರವೇಶಿಸದಂತೆ ತಡೆದು ರಕ್ಷಿಸುತ್ತದೆ. ಆದರೆ ಓಝೋನ್ ಪದರಕ್ಕೆ ಹಾನಿಯಾಗುತ್ತಿರುವುದರಿಂದ ವಿಜ್ಞಾನಿಗಳು ಚಿಂತಿತರಾಗಿದ್ದಾರೆ.




ಓಝೋನ್ ಪದರಕ್ಕೆ ಆಗುತ್ತಿರುವ ಹಾನಿಗೆ ಮಾನವನೇ ಸಂಪೂರ್ಣ ಹೊಣೆಗಾರನಾಗಿದ್ದಾನೆ. ರೆಫ್ರಿಜರೇಟರ್, ಹವಾ ನಿಯಂತ್ರಕಗಳಲ್ಲಿ ಬಳಸುವ ಕ್ಲೋರೋಫ್ಲೋರೋ ಕಾರ್ಬನ್‌ಗಳು, ಲೋಹ ರಕ್ಷಕ ವರ್ಣಗಳಲ್ಲಿ ಸೇರಿರುವ ಹಾಲೋನ್ ಮತ್ತು ಮಿಥೇಲ್ ಕ್ಲೋರೋಪ್ಲೋರೋ ಫಾರ್ಮ ಸಾರಜನಕದ ಆಕ್ಸೈಡ್‌ಗಳು ಮತ್ತು ಮಿಥೇನ್ ಬ್ರೋಮೈಡ್ ಮುಂತಾದವುಗಳು ಓಝೋನ್ ಪದರಕ್ಕೆ ಹಾನಿಯನ್ನುಂಟು ಮಾಡುತ್ತಿದೆ.

ಓಝೋನ್ ಪದರಿನ ಹಾನಿಯಿಂದಾಗಿ ಜಾಗತಿಕ ತಾಪಮಾನ ಹೆಚ್ಚಾಗುತ್ತಿದೆ. ಇಡೀ ಜೀವಸಂಕುಲಕ್ಕೆ ಧಕ್ಕೆ

ಉಂಟಾಗಿದೆ. ಅತಿನೇರಳೆ ಕಿರಣಗಳು ಮಾನವನ ಚರ್ಮದ ಕ್ಯಾನ್ಸರ್‌ಗೆ ಕಾರಣವಾಗಿದೆ. ರೋಗ ನಿರೋಧಕ ಶಕ್ತಿಯನ್ನು ದುರ್ಬಲಗೊಳಿಸಿ, ಸರ್ಪಸುತ್ತು, ಕಣ್ಣಿನ ದೃಷ್ಟಿ ಮಾಂದ್ಯತೆ, ಕ್ಯಾಟರ್‍ಯಾಕ್ಟ್‌ನಂತಹ ಸಮಸ್ಯೆಗಳು ಹೆಚ್ಚಾಗುತ್ತವೆ.

ಓಝೋನ್ ಪದರ ವಿನಾಶದ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲು **ಸೆಪ್ಟೆಂಬರ್ 16 ರಂದು ವಿಶ್ವ ಓಝೋನ್ ದಿನ**ವನ್ನಾಗಿ ಆಚರಿಸಲಾಗುತ್ತಿದೆ. ಓಜೋನ್ ಪದರದ ವಿನಾಶಕ್ಕೆ ಕಾರಣವಾಗುವ ರಾಸಾಯನಿಕಗಳ ಜಾಗತಿಕ ನಿಷೇಧಕ್ಕೆ **'ಮಾಂಟ್ರಿಯಲ್ ಒಡಂಬಡಿಕೆ'** ಎಂಬ ಅಂತರಾಷ್ಟ್ರೀಯ ಒಪ್ಪಂದಕ್ಕೆ ಅನೇಕ ದೇಶಗಳು ಸಹಿ ಮಾಡಿವೆ. ಜನಸಾಮಾನ್ಯರಿಗೆ ಓಜೋನ್ ಪದರದ ಪ್ರಾಮುಖ್ಯತೆ ಮತ್ತು ಅದರ ರಕ್ಷಣೆಯ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು.

## ಆಮ್ಲ ಮಳೆ (Acid Rain)

ಕೈಗಾರಿಕೆ ಹಾಗೂ ವಾಹನಗಳಿಂದ ಗಂಧಕ ಹಾಗೂ ಸಾರಜನಕದ ಆಕ್ಸೈಡ್‌ಗಳು ವಿಸರ್ಜನೆಯಾಗುತ್ತದೆ. ಇವು ವಾತಾವರಣದಲ್ಲಿ ಬಹು ಧೀರ್ಘ ಕಾಲ ಉಳಿಯುತ್ತವೆ. ರಾಸಾಯನಿಕ ಮತ್ತು ಛಾಯಾ ರಾಸಾಯನಿಕ ಪ್ರತಿಕ್ರಿಯೆಗಳ ಮೂಲಕ ಗಂಧಕಾಮ್ಲ ಮತ್ತು ನೈಟ್ರಿಕ್ ಆಮ್ಲವಾಗಿ ಗುಂಪುಗೊಳ್ಳುತ್ತವೆ. ವಾತಾವರಣ ತೇವಾಂಶದೊಡನೆ ಕೂಡಿ ಆಮ್ಲ ಹನಿಗಳಾಗಿ ಸುರಿಯುವುದನ್ನು ಆಮ್ಲದ ಮಳೆ ಎನ್ನಲಾಗಿದೆ.

ಸಾಮಾನ್ಯವಾಗಿ ಮಳೆ ಅಥವಾ ಮಂಜು ಭೂಮಿಗೆ ಬಿದ್ದಾಗ ಅದರ ಅಮ್ಲ ಗುಣ (ಪಿಹೆಚ್) ಏನಾದರೂ 5.6 ಕ್ಕಿಂತ ಕಡಿಮೆ ಇದ್ದಲ್ಲಿ ಅಂತಹ ಮಳೆಯನ್ನು ಆಮ್ಲ ಮಳೆ ಎಂದು ಕರೆಯಲಾಗಿದೆ. ಮಲಿನಕಾರಿ ವಸ್ತುಗಳಾದ ಗಂಧಕದ ಆಕ್ಸೈಡ್‌ಗಳು ಹಾಗೂ ಸಾರಜನಕದ ಆಕ್ಸೈಡ್‌ಗಳು ಕಲ್ಲಿದ್ದಲು, ಪೆಟ್ರೋಲಿಯಂ ಆಧಾರಿತ ಇಂಧನಗಳನ್ನ ಉರಿಸಿದಾಗ ಹೊರ ಬರುವ ಹೊಗೆ ಮುಂತಾದುವುಗಳೂ ಆಮ್ಲ ಮಳೆಗೆ ಕಾರಣವಾಗಿವೆ. ಆಮ್ಲ ಮಳೆಯ ಪರಿಣಾಮವಾಗಿ ಶಿಲೆಗಳು ಕರಗುತ್ತವೆ. ಕಾಡಿನ ಮರಗಳ ಎಲೆ ಉದುರತ್ತವೆ. ಆಮ್ಲ ನೀರು ಎಲೆಯ ಮೇಲೆ ಬಿದ್ದಾಗ ಜೀವ ಕೋಶಗಳು ನಾಶವಾಗುತ್ತವೆ. ಜಲಚರಗಳ ಮೇಲೆ ಪರಿಣಾಮ ಬೀರುವ ಆಮ್ಲ ಮಳೆಯ ಭೂಮಿಯ ಫಲವತ್ತತೆಯನ್ನು ನಾಶ ಮಾಡುತ್ತದೆ. ಕೆಲವು ಲೋಹಗಳು ತುಕ್ಕು ಹಿಡಿಯುತ್ತವೆ. ತಾಜ್‌ಮಹಾಲ್‌ನ ಅಮೃತ ಶಿಲೆಯ ಬಿಳುಪು ಮಾಯವಾಗುತ್ತಿದೆ. ವರ್ಣ ಚಿತ್ರ, ಗಾಜು, ಆಭರಣಗಳು ತಮ್ಮ ಹೊಳಪಿನ ಗುಣವನ್ನು ಕಳೆದುಕೊಂಡು ಮಸುಕಾಗುತ್ತವೆ. (ಇದನ್ನು ಶಿಲಾ ಅರ್ಬುದ ಅಥವ ಶಿಲಾಕುಷ್ಠ ಎಂದು ಕರೆಯುತ್ತಾರೆ.) ಒಂದು ದೇಶದಲ್ಲಿ ವಿಸರ್ಜಿತವಾಗುವ ತ್ಯಾಜ್ಯದ ಪರಿಣಾಮಗಳು ಮತ್ತೊಂದು ರಾಷ್ಟ್ರದ ಮೇಲೆ ಆಮ್ಲ ಮಳೆಯಾಗಿ ಸುರಿಯುತ್ತವೆ. ಉದಾಹರಣೆಗೆ ಕೈಗಾರಿಕೆಗಳು ಹಾಗೂ ವಾಹನಗಳ ಉಗುಳುವಿಕೆಯಿಂದ ವಾಯು ಮಂಡಲ ಸೇರುವ ಗಂಧಕ ಹಾಗೂ ಇಂಗಾಲದ ಡೈ ಆಕ್ಸೈಡ್‌ಗಳು ನೆರೆಯ ರಾಷ್ಟ್ರದ ಮೇಲೆ ಆಮ್ಲ ಮಳೆಯಾಗಿ ಸುರಿಯಬಹುದು. ಹೀಗೆ ಆಮ್ಲ ಮಳೆಯ ದುಷ್ಪರಿಣಾಮಗಳು ರಾಷ್ಟೀಯ ಗಡಿಯನ್ನು ಮೀರುವಂಥದ್ದು.

ಆಮ್ಲ ಮಳೆಯನ್ನು ನಿಯಂತ್ರಿಸಬೇಕಾದರೆ. ಸಾರ್ವಜನಿಕರಲ್ಲಿ ಪರಿಸರ ಕಾಳಜಿ ಮತ್ತು ಜಾಗೃತಿ ಮೂಡಬೇಕು ಜಗತ್ತಿನ ಎಲ್ಲಾ ರಾಷ್ಟ್ರಗಳು ಕಾರ್ಯ ಪ್ರವೃತ್ತರಾಗಬೇಕಾಗಿದೆ. ಆಮ್ಲ ಮಳೆಗೆ ಕಾರಣವಾಗುವ ಅನಿಲಗಳು ಹೊರಸೂಸುವುದನ್ನು ನಿಯಂತ್ರಿಸಿ, ಮಾಲಿನ್ಯ ಕಡಿಮೆ ಮಾಡುವಂತಾಹ ಇಂದನಗಳನ್ನು ಬಳಸಬೇಕು ಬಹಳ ಮುಖ್ಯವಾಗಿ ಪರ್ಯಾಯ ಇಂಧನ ಮೂಲಗಳಾದ ಜೈವಿಕ, ಡೀಜಿಲ್, ಸೌರಶಕ್ತಿ ಅಣು ಶಕ್ತಿಯ ಬಳಕೆಯ ಕಡೆಗೆ ವಿಶೇಷ ಮಹತ್ವ ನೀಡಬೇಕಾಗಿದೆ.

### 8.2.5.5. ಜೀವ ವೈವಿಧ್ಯತೆ (Biodiversity)




ಮಾನವ ಸೇರಿದಂತೆ ಎಲ್ಲಾ ಬಗೆಯ ವಿವಿಧ ಜೀವ ಸಂಕುಲಗಳಿಗೂ ಅವಶ್ಯಕ ಪರಿಸರವನ್ನು ಒದಗಿಸವುದು ಭೂಮಿ ಮಾತ್ರವಾಗಿದೆ. ಈ ಭೂಮಿಯು ರಚಿತವಾಗಿ 460 ಕೋಟಿ ವರ್ಷಗಳಾಗಿದ್ದು ಇದರ ಮೇಲೆ ಜೀವ ವಿಕಸನವು ಹಂತ ಹಂತವಾಗಿ ಆಗುತ್ತಲೇ ಬಂದಿದೆ.

ಕಣ್ಣಿಗೆ ಕಾಣದಂತಹ ಸೂಕ್ಷ್ಮ ಜೀವಿಗಳಿಂದ ಹಿಡಿದು, ಗಾಳಿಯಲ್ಲಿ ಹಾರಾಡುವ ಚಿಟ್ಟೆ– ಪಕ್ಷಿಗಳು ನೀರಿನಲ್ಲಿರುವ ಮೀನು ತಿಮಿಂಗಲ, ಭೂಮಿಯ ದೊಡ್ಡ ದೊಡ್ಡ ಡೈನೋಸಾರ್‌ಗಳು ಬದುಕುವಂಥ ವಾಯು, ನೀರು, ಹಾಗೂ ಉಷ್ಣಾಂಶಗಳು ದೊರಕುವುದೇ ಭೂಮಿಯಲ್ಲಿ. ಈ ಭೂಮಿಯ ಎಲ್ಲಾ ಜೀವಿಗಳು ತಮ್ಮ ವಿಶಿಷ್ಟತೆಯನ್ನು ಮಿಲಿಯಾಂತರ ವರ್ಷಳಿಂದ ರಕ್ಷಿಸಿಕೊಂಡು ಬರಲು ಪ್ರಕೃತಿ ಸಹಾಯ ಮಾಡಿದೆ. ಹೀಗೆ ಪೃಥ್ವಿಯ ಮೇಲಿರುವ ಎಲ್ಲ ರೀತಿಯ ವೈವಿಧ್ಯಮಯ ಜೀವ ರಾಶಿಯನ್ನು ಜೀವ ವೈವಿಧ್ಯತೆ ಎನ್ನಲಾಗುತ್ತದೆ. ಜೀವಿಗಳು ಅಸ್ತಿತ್ವಕ್ಕೆ ಬರುವ ಮುನ್ನ ಪೃಥ್ವಿಯು ಮಿಥೇನ್, ಅಮೋನಿಯಾ, ಜಲಜನಕ, ಸಲ್ಫೇಟ್ ಹಾಗೂ ನೀರಾವಿಯಂಥ ಅನಿಲಗಳ ತೆಳುವಾದ ಪಟ್ಟಿಯನ್ನೊಂದಿದ ಬರಡಾದ ಶಿಲೆಗಳಿಂದ ಕೂಡಿತ್ತು. ಈ ಅಜೈವಿಕ ಭೂಮಂಡಲದ ಮೇಲ್ಮೈ ಮೇಲೆ ಸೂರ್ಯನ ಶಕ್ತಿ ಅವಿರತವಾಗಿ ಹರಿಯುತ್ತಿದ್ದರಿಂದ ಲಕ್ಷಾಂತರ ವರ್ಷಗಳ ರಾಸಾಯನಿಕ ಮತ್ತು ಭೌತಿಕ ಕ್ರಿಯೆಗಳಿಂದಾಗಿ ಜೀವಿಗಳು ಬೆಳೆಯುವ ಸೂಚನೆಗಳು ಕಾಣಿಸಿಕೊಂಡಿತು. ಕಾಲಾಂತರಗಳಲ್ಲಿ ಜೀವ ಮಂಡಲ ಬೆಳೆಯಿತು. ಈ ಬದಲಾವಣೆ ಪ್ರಕ್ರಿಯಯೇ ಜೈವಿಕ ವಿಕಾಸ ಎನ್ನಲಾಗಿದೆ.

ಆದರೆ ಮಾನವನ ಚಟುವಟಿಕೆಗಳು, ಏರುತ್ತಿರುವ ಜನಸಂಖ್ಯೆ ನಗರೀಕರಣ ಕೈಗಾರೀಕರಣ ರಾಸಾಯನಿಕ ಬಳಕೆಯಿಂದಾಗಿ ಜೀವ ವೈವಿಧ್ಯತೆಗೆ ಧಕ್ಕೆ ಉಂಟಾಗುತ್ತದೆ. ಜೈವಿಕ ವೈವಿಧ್ಯಗಳ ನಾಶವೆಂಬುದು ಬಹು ಗಂಭೀರವಾದ ಪರಿಸರದ ಸಮಸ್ಯೆಯಾಗಿದೆ. ಇದರ ಬಗ್ಗೆ ತುರ್ತು ಗಮನ ಹರಿಸಬೇಕಾದ ಅವಶ್ಯಕತೆಯಿದೆ. ವೈವಿಧ್ಯಮಯ ಆಹಾರ, ರೋಗನಿವಾರಕ ಗುಣಗಳುಳ್ಳ ಸಸ್ಯ ಮತ್ತು ಪ್ರಾಣಿಗಳ ಪೂರೈಕೆ ಹಾಗೂ ಪ್ರಕೃತಿಯ ಸೌಂದರ್ಯವನ್ನು ಕಾಪಾಡಲು ಜೀವ ವೈವಿಧ್ಯತೆಯನ್ನು ರಕ್ಷಿಸಬೇಕಾಗಿದೆ. ಜೀವಿಯ ಸಂತತಿ ನಶಿಸಿ ಹೋದರೆ ಅದರ ಪುನರ್‌ಸೃಷ್ಟಿ ಅಸಾಧ್ಯ ಎಂಬುದನ್ನು ಎಲ್ಲಾ ರಾಷ್ಟ್ರಗಳು ಅರ್ಥ ಮಾಡಿಕೊಳ್ಳಬೇಕಾಗಿದೆ.

### ಪರಿಸರ ಮಾಲಿನ್ಯಕ್ಕೆ ಪ್ರಮುಖ ಕಾರಣಗಳು (Causes of Environment Pollution):

ಪರಿಸರ ಮಾಲಿನ್ಯವು ಆಧುನಿಕ ಜಗತ್ತಿನ ಪ್ರಮುಖ ಸವಾಲಾಗಿದ್ದು, ಭವಿಷ್ಯದ ಬದುಕನ್ನು ವಿನಾಶದತ್ತ ಕೊಂಡೊಯ್ಯುವ ಅಪಾಯದ ಸ್ಥಿತಿಯಾಗಿದೆ. ಮನುಷ್ಯ ಮತ್ತು ಮಾನವ ಕೇಂದ್ರಿತ ಚಟುವಟಿಕೆಗಳೇ ಪರಿಸರವನ್ನು ಹಾಳು ಮಾಡುತ್ತವೆ. ಪರಿಸರದ ಮೇಲೆ ನಡೆಯುತ್ತಿರುವ ನಿರಂತರವಾದ ದಾಳಿ, ಆಕ್ರಮಣ ಮತ್ತು ಪಾಪಗಳ ಪರಂಪರೆಗೆ ಸಂಪೂರ್ಣವಾಗಿ ಮಾನವನೇ ಹೊಣೆಗಾರನಾಗಿದ್ದಾನೆ.

1. ಜನಸಂಖ್ಯಾ ಸ್ಫೋಟ ಮತ್ತು ಅನುಭೋಗವಾಗದ (Consumerism)

2. ನಗರ ಜನಸಾಂದ್ರತೆ ಮತ್ತು ಅವೈಜ್ಞಾನಿಕ ನಗರೀಕರಣ
3. ನಗರ ಯೋಜನೆ ಇಲ್ಲದಿರುವಿಕೆ ಮತ್ತ ಅವೈಜ್ಞಾನಿಕ ನಿರ್ವಹಣಾ ಕ್ರಮಗಳು
4. ಅಜ್ಞಾನ ಮತ್ತು ಮಾನವನ ದುರಾಸೆ.
5. ಒಳ ಚರಂಡಿಯ ಹೊಲಸು, ತ್ಯಾಜ್ಯ ಮಾರ್ಜಕಗಳು ಮತ್ತು ಮೃತ ದೇಹಗಳ ದಹನ.
6. ಔಷಧಿಗಳು, ಕ್ರಿಮಿನಾಶಕಗಳು ಮತ್ತು ರಾಸಾಯನಿಕ ಗೊಬ್ಬರಗಳ ಬಳಕೆ.
7. ಕಾರ್ಖಾನೆ ಮತ್ತು ವಾಹನಗಳಿಂದ ಹೊರಬರುವ ದಟ್ಟವಾದ ಹೊಗೆ ಹಾಗೂ ರಾಸಾಯನಿಕಗಳು.
8. ಅರಣ್ಯ ನಾಶ ಮತ್ತು ಮಣ್ಣಿನ ಸವೆತ
9. ಜೈವಿಕ ಮಾಲಿನ್ಯ
10. ವಿಕಿರಣ ಪದಾರ್ಥಗಳು
11. ವಿವೇಚನಾ ರಹಿತ ಕಾನೂನು ಮತ್ತು ಶಾಸನಗಳ ದುರ್ಬಲತೆ.
12. ಸಾರ್ವಜನಿಕರಲ್ಲಿ ಪರಿಸರ ಪ್ರಜ್ಞೆಯ ಕೊರತೆ ಮತ್ತು ಮಾಲಿನ್ಯದ ದುಷ್ಪರಿಣಾಮಗಳ ಬಗ್ಗೆ ಅರಿವಿಲ್ಲದಿರುವಿಕೆ.
13. ಪ್ರಬಲ ಇಚ್ಛಾಶಕ್ತಿ ಇಲ್ಲದ ಭ್ರಷ್ಟ–ಅಪರಾಧಿ ರಾಜಕಾರಣಿಗಳು, ಅಧಿಕಾರಿಗಳು ಮತ್ತು ದುರ್ಬಲ ಇಲಾಖೆಗಳು.

**ಪರಿಸರ ಮಾಲಿನ್ಯದ ದುಷ್ಪರಿಣಾಮಗಳು: (Evil effects of Environment pollution)**

ಪರಿಸರ ಮಾಲಿನ್ಯವು ಇಂದು ಜಾಗತಿಕ ಸಮಸ್ಯೆಯಾಗಿದೆ. ಯಾವುದೇ ಒಂದು ಪ್ರದೇಶದ ಪರಿಸರದ ಬದಲಾವಣೆಯು ವಿಶ್ವದಾದ್ಯಂತ ಪರಿಣಾಮವನ್ನು ಬೀರುವುದು.

1. ಪರಿಸರ ಮಾಲಿನ್ಯವು ಮಾನವನ ಸಮಾಜ ಮತ್ತು ಸಮಸ್ತ ಜೀವ ಜಗತ್ತಿನ ಮೇಲೆ ದುಷ್ಪರಿಣಾಮಗಳನ್ನುಂಟು ಮಾಡುವುದು. ಪರಿಸರ ಮಾಲಿನ್ಯದ ವಿವಿಧ ಕರಾಳ ಮುಖದಿಂದ ಪ್ರಾಣಿ ಜಗತ್ತು ಹಾಗೂ ಸಸ್ಯ ಜಗತ್ತುಗಳು ತಮ್ಮ ಸಹಜ ಸಮತೋಲನವನ್ನು ಕಳೆದುಕೊಳ್ಳುತ್ತವೆ.

2. ಕೈಗಾರಿಕೆಗಳು ಮತ್ತು ವಾಹನಗಳಿಂದ ಹೊರ ಬರುವ ಹೊಗೆಯು ಇಂಗಾಲದ ಡಯಾಕ್ಸೈಡ್, ಮೊನಾಕ್ಸೈಡ್, ಸಾರಜನಕದ ಆಕ್ಸೈಡ್, ಜಲಜನಕ, ಇಂಗಾಲದ ಸಂಯುಕ್ತಗಳು ಮುಂತಾದವು ಮಾನವನ ಆರೋಗ್ಯವನ್ನು ಹಾಳು ಮಾಡಿ ಕ್ಷಯ, ಅಸ್ತಮಾ, ರಕ್ತಹೀನತೆ, ಕಣ್ಣಿನ ಸಮಸ್ಯೆಗಳು, ಕ್ಯಾನ್ಸರ್, ಚರ್ಮರೋಗ ಇತ್ಯಾದಿ ಕಾಯಿಲೆಗಳ ಹೆಚ್ಚಿಸುತ್ತದೆ.

3. ವಿಶ್ವದ ಉಷ್ಣಾಂಶದ ಹೆಚ್ಚಳ ಮತ್ತು ಆಮ್ಲೀಯ ಮಳೆಯಿಂದ ಅರಣ್ಯ ಸಂಪತ್ತು, ಐತಿಹಾಸಿಕ ಸ್ಮಾರಕಗಳು, ಕಟ್ಟಡಗಳು ವಿರೂಪಗೊಳ್ಳುತ್ತವೆ. ಹವಾಮಾನ ವ್ಯತ್ಯಯದಿಂದಾಗಿ ಅನಾವೃಷ್ಟಿ ಹಾಗೂ ಶೀತಮಾರುತಗಳು ಬೀಸಬಹುದು.

4. ಪರಿಸರ ಮಾಲಿನ್ಯದ ಕೆಟ್ಟ ಪರಿಣಾಮಗಳು ಪ್ರಸ್ತುತ ಮತ್ತು ಭವಿಷ್ಯದ ತಲೆಮಾರುಗಳ ಮೇಲೆ ವ್ಯತಿರಿಕ್ತ ಪ್ರಭಾವ ಬೀರಿ ಮನೋ ದೈಹಿಕ ವಿಕಲತೆ ಹಾಗೂ ಗುಣಪಡಿಸಲಾಗದ ಕಾಯಿಲೆಗಳನ್ನು ತಂದೊಡ್ಡುವುದು.

5. ಕಸದ ರಾಶಿ, ಕೊಳಚೆ ನೀರು ಮತ್ತು ತ್ಯಾಜ್ಯ ವಸ್ತುಗಳಿಂದ ಸಾಂಕ್ರಾಮಿಕ ರೋಗಗಳು ನೀರು ಮತ್ತು ಗಾಳಿಯ ಮೂಲಕ ವೇಗವಾಗಿ ಹರಡುತ್ತವೆ.

6. ಪರಿಸರ ಮಾಲಿನ್ಯದಿಂದ ಓಜೋನ್ ಪದರು ಘಾಸಿಗೊಂಡಿದೆ. ತೀಕ್ಷ್ಣವಾದ ಅತಿ ನೇರಳೆ ಕಿರಣಗಳು ಭೂಮಿಗೆ ನೇರವಾಗಿ ತಲುಪುವುದರಿಂದ ಜೀವ ಸಂಕುಲಕ್ಕೆ ಹಾನಿಯುಂಟಾಗುತ್ತಿದೆ.
